ಡಾ. ಸಿದ್ಧಯ್ಯ ಪುರಾಣಿಕರ

('ಕಾವ್ಯಾನಂದ')

ಸಮಗ್ರ ಕಾವ್ಯ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002

ಸಮಗ್ರ ಕಾವ್ಯ : ಸಿದ್ಧಯ್ಯ ಪುರಾಣಿಕ(ಕಾವ್ಯಾನಂದ)ರ
ಎಂಟು ಕವಿತಾ ಸಂಕಲನಗಳ ಹೆಬ್ಬೊತ್ತಿಗೆ

ಪ್ರಕಾಶಕರು :

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002

ಮೊದಲ ಮುದ್ರಣ : 2008
ದ್ವಿತೀಯ ಮುದ್ರಣ : 2020

ಪುಟಗಳು : xxxii + 640 = 672
ಕಾಗದ : 80 GSM N.S. Maplitho
ಬೆಲೆ : ರೂ.

ಛಾಯಾಕ್ಷರ ಜೋಡಣೆ ಮತ್ತು
ರಕ್ಷಾಪುಟ ವಿನ್ಯಾಸ :
ಲಾವಣ್ಯ ಮುದ್ರಣ, ಬೆಂಗಳೂರು

ಮುದ್ರಕರು

ಲಾವಣ್ಯ ಮುದ್ರಣ
ನಂ.19, 15ನೇ ಕ್ರಾಸ್, ಬಿ.ಎಸ್.ಕೆ. 1ನೇ ಹಂತ,
ವಿದ್ಯಾಪೀಠ ವೃತ್ತ, ಬೆಂಗಳೂರು– 560 050
ಮೊಬೈಲ್ : 98450 63381
ಇ–ಮೇಲ್ : ctp@thelavanya.com

ಪ್ರಕಾಶಕರ ಮಾತು

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ಲಭ್ಯವಾಗಬೇಕೆನ್ನುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಪ್ರಕಟಣಾ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ.

ಡಾ. ಸಿದ್ಧಯ್ಯ ಪುರಾಣಿಕರ ಜನ್ಮ ಶತಮಾನೋತ್ಸವದ ಅಂಗವಾಗಿ ಅವರ ಸಮಗ್ರ ಕಾವ್ಯ, ಸಮಗ್ರ ವಚನ, ಸಮಗ್ರ ನಾಟಕ ಮತ್ತು ಸಮಗ್ರ ಗದ್ಯದ ಕೃತಿಗಳನ್ನು ಪ್ರಕಟಿಸ ಲಾಗುತ್ತಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಾಣೆಯಾಗುತ್ತಿದ್ದ ಕಾಲದಲ್ಲಿ ಅದಕ್ಕೆ ಆಸರೆಯಾಗಿ ನಿಂತು ಕನ್ನಡವನ್ನು ಪುನರುಜ್ಜೀವಗೊಳಿಸಿದ ಡಾ. ಸಿದ್ಧಯ್ಯ ಪುರಾಣಿಕರು ನಿರ್ಜೀವವಾಗುತ್ತಿದ್ದ ಕನ್ನಡ ಸಂಘ–ಸಂಸ್ಥೆಗಳಿಗೆ ಜೀವ ತುಂಬಿದವರು. ಸರ್ಕಾರದ ಅಧಿಕಾರಿಯಾಗಿ ದಕ್ಷ, ಸ್ವಚ್ಛ ಮತ್ತು ನಿಸ್ಪೃಹ ಆಡಳಿತಗಾರರೆಂದು ಪ್ರಖ್ಯಾತಿ ಪಡೆದಿದ್ದರು.

ಡಾ. ಸಿದ್ಧಯ್ಯ ಪುರಾಣಿಕರು "ಕಾವ್ಯಾನಂದ" ಕಾವ್ಯನಾಮದಿಂದ ಕವಿತೆ, ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ನಾಟಕ, ವಚನ ಸಾಹಿತ್ಯ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು 38 ಕೃತಿಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿ, ವಿಮರ್ಶಕ ಮತ್ತು ವಿದ್ವಾಂಸರಾಗಿದ್ದು ಡಾ. ಸಿದ್ಧಯ್ಯ ಪುರಾಣಿಕರಿಗೆ ಅನೇಕ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ, ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅನೇಕ ಕೃತಿಗಳು ಇತರ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಕುವೆಂಪುರವರು ಡಾ. ಸಿದ್ಧಯ್ಯ ಪುರಾಣಿಕರು ಒಬ್ಬ ಅಪರೂಪದ ವ್ಯಕ್ತಿ ಎಂದು ಹೀಗೆ ಹೇಳಿದ್ದಾರೆ :

"ಜ್ಞಾನ, ಅಧಿಕಾರ, ವಿನಯ, ಸೌಜನ್ಯಶೀಲತೆಗಳು ಏಕತ್ರ ಸಮಾವೇಶ ಗೊಳ್ಳುವುದು ತುಂಬಾ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ – ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು. ಮೊದಲ ಬಾರಿಗೇ ಅವರು ನನ್ನನ್ನು ತಮ್ಮ ಬರವಣಿಗೆಯಿಂದ ಹೇಗೋ ಹಾಗೆ ಸುಸಂಸ್ಕೃತ ವ್ಯಕ್ತಿತ್ವದಿಂದಲು ಆಕರ್ಷಿಸಿದರು. ಆ ಆಕರ್ಷಣೆ ದಶಕಗಳ ಕಾಲ ಮಾಸದೆ ಹಾಗೆಯೇ ಉಳಿದಿದೆ."

ಈ ಎಲ್ಲಾ ಸಮಗ್ರ ಕೃತಿಗಳನ್ನು ಹೊರತರಲು ಸಹಕರಿಸಿದ ಜಂಟಿ ನಿರ್ದೇಶಕರಾದ ಶ್ರೀ ಕೆ.ಎಚ್. ಚೆನ್ನೂರ ಅವರಿಗೆ ಮತ್ತು ಇತರ ಅಧಿಕಾರಿ ಸಿಬ್ಬಂದಿಗೆ, ಕರಡುಪ್ರತಿಯನ್ನು ತಿದ್ದಲು ನೆರವಾದ, ವಿದ್ವಾಂಸರಾದ ಶ್ರೀ ಶಾ.ಮಂ. ಕೃಷ್ಣರಾಯ ಅವರಿಗೆ, ಈ ಸಂಪುಟ ಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಲಾವಣ್ಯ ಮುದ್ರಣದ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಈ ಎಲ್ಲ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಲು ಅನುಮತಿ ನೀಡಿದ ಡಾ. ಸಿದ್ಧಯ್ಯ ಪುರಾಣಿಕರ ಪುತ್ರರಾದ ಶ್ರೀ ಪ್ರಸನ್ನಕುಮಾರ ಪುರಾಣಿಕ ಅವರಿಗೆ ನನ್ನ ಕೃತಜ್ಞತೆಗಳು.

ಕನ್ನಡದ ಧೀಮಂತ ಕವಿ, ವಿಮರ್ಶಕರಲ್ಲಿ ಒಬ್ಬರಾದ ಡಾ. ಸಿದ್ಧಯ್ಯ ಪುರಾಣಿಕರ ಸಮಗ್ರ ಕೃತಿಗಳು ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ಒದಗಿಸುವುದು ನಮ್ಮ ಆಶಯ. ಈ ಕೃತಿಗಳನ್ನು ಸಾಹಿತ್ಯಾಸಕ್ತರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇವೆ.

– ಶ್ರೀ ಎಸ್. ರಂಗಪ್ಪ
ಎಫ್.ಸಿ.ಎ., ಕ.ಆ.ಸೇ., ನಿರ್ದೇಶಕರು

'ಕಾವ್ಯಾನಂದ'ರ ಸಮಗ್ರ ಕಾವ್ಯಕ್ಕೆ ಕೆಳೆನುಡಿ

–ದೇಜಗೌ

–೧–

'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಕಥೆ, ಕಾದಂಬರಿ, ನಾಟಕ, ವಚನ, ಕಾವ್ಯಗಳನ್ನು ರಚಿಸಿ, ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಶ್ರೇಷ್ಠ ಕವಿಗಳೆಂದು ಖ್ಯಾತಿಪಡೆದ ಡಾ. ಸಿದ್ಧಯ್ಯ ಪುರಾಣಿಕರ (1918–1994) ಸಮಗ್ರ ಕಾವ್ಯ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಈ ಕಾವ್ಯಕ್ಕೆ ಮುನ್ನುಡಿಯ ರೂಪದಲ್ಲಿ ನಾಲ್ಕು ಮಾತು ಬರೆಯುವ ಅವಕಾಶವೊದಗಿದ್ದು ನನ್ನ ಸುಕೃತವೆಂದೆ ಬಗೆದಿದ್ದೇನೆ. ಈ ಸುಕೃತವನ್ನೊದಗಿಸಿಕೊಟ್ಟ ಸಿದ್ಧಯ್ಯ ಪುರಾಣಿಕರ ಗುಣವಂತ ಪುತ್ರರಾದ, ತಂದೆಯ ನಯ ವಿನಯ ಸಂಪನ್ನತೆಯನ್ನು ವಾರಸುಪಡೆದಿರುವ ಶ್ರಿ ಪಿ.ಕೆ. ಪುರಾಣಿಕರು ನನ್ನ ಆದರಪೂರ್ವಕ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಸಿದ್ಧಯ್ಯ ಪುರಾಣಿಕರು ಕನ್ನಡ ಸಾಹಿತ್ಯವ್ಯೋಮದ ರಮ್ಯೋಜ್ವಲ ತಾರೆಯಾಗಿರುವಂತೆಯೇ ಕನ್ನಡ ಜನಸಮುದಾಯದಲ್ಲಿ ಸನ್ನಡತೆಯ ಮಾರ್ಗದರ್ಶಕರಾಗಿ, ಬದುಕಿನ ಆದರ್ಶಪುರುಷರಾಗಿದ್ದಾರೆ. ಅವರ ಕಾಯಕನಿಷ್ಠೆ, ಸತ್ಯವ್ರತ, ಕರ್ತವ್ಯ ಶ್ರದ್ಧೆ, ಸಮಯಪಾಲನೆ, ವಿನಯ ಸಂಪನ್ನತೆ ಹಾಗೂ ನಾಡು–ನುಡಿ ಪ್ರೇಮಗಳು ಅನ್ಯಾದೃಶವಾದುವು. ಅವರಂಥ ಲೋಕಾನುಭವಸಂಪನ್ನ, ನೀತಿನಿಪುಣ, ದಕ್ಷ ಆಡಳಿತಾಧಿ ಕಾರಿಗಳೂ ವಿರಳ. ಅವರಂತೆ ಸಾಹಿತ್ಯಶಕ್ತಿ ಹಾಗೂ ಕಾರ್ಯದಕ್ಷತೆಗಳನ್ನು ವಶಪಡಿಸಿಕೊಂಡಿರುವ ಜ್ಞಾನತೇಜಸ್ಸಿನ ಪ್ರತಿಭಾವಂತರಂತು ವಿರಳಾತಿವಿರಳ.

ಆಡಳಿತ ವ್ಯವಹಾರ ಕೇವಲ ಬಾಹ್ಯಪ್ರಜ್ಞೆಗೆ ಸೀಮಿತವಾದದ್ದು. ಸಾಹಿತ್ಯಸೃಷ್ಟಿ ತಪಸ್ಸಾಧ್ಯವಾದ ಸೃಜನಶೀಲ ಆಂತರಿಕ ಚೈತನ್ಯಕ್ಕೆ ಸಂಬಂಧಿಸಿದ್ದು. ಬಾಹ್ಯಪ್ರಜ್ಞೆಯ ಜಟಿಲ ಸಂಕೀರ್ಣ ವ್ಯವಹಾರಗಳಿಂದ ಸಂಪೂರ್ಣ ಮುಕ್ತರಾಗಿ

ಪವಿತ್ರ ತಪೋನಂದನವನ್ನು ಪ್ರವೇಶಿಸಿದಾಗ ಮಾತ್ರ ಸರಸ್ವತಿಶಕ್ತಿಯ ಆವಿರ್ಭಾವ ಸಾಧ್ಯ. ಆಡಳಿತಗಾರ ಸಿದ್ಧಯ್ಯ ಪುರಾಣಿಕರ ಗುಣಸಮೃದ್ಧ ವಿವಿಧಮುಖೀ ಸಾಹಿತ್ಯರಾಶಿಯ ಕಡೆಗೆ ಗಮನಹರಿಸಿದಾಗ ಕನ್ನಡಿಗರ ಹೆಮ್ಮೆಯ ಕೋಡು ಮುಗಿಲನ್ನು ತಿವಿಯುವುದರಲ್ಲಿ ಸಂದೇಹವಿಲ್ಲ. ಪ್ರಕೃತದಲ್ಲಿ ಅವರ ಸಮಗ್ರ ಕಾವ್ಯನಂದನದಲ್ಲಿ ತುಸುಹೊತ್ತು ವಿಹರಿಸಬಹುದಾಗಿದೆ.

'ಭೂಮಿಗೆ ವ್ಯೋಮಕೆ ಪಾಣಿಗ್ರಹಣ'[೧]ವಾದಾಗಲೇ ಸೃಷ್ಟಿ ಹಾಗೂ ಜಗತ್ಕಲ್ಯಾಣ ಸಾಧ್ಯ. 'ಕವನ ಜನನ'[೨]ದ ಮೂಲವನ್ನು ಕವಿ ಸ್ವಾರಸ್ಯವಾಗಿ ಬಣ್ಣಿಸುವಾಗ ಅದರ ನೈಜಸ್ಥಿತಿಯನ್ನು ಗುರುತಿಸುತ್ತಾರೆ:

ಬಗೆಯ ಬಾನಲಿ ಬಣ್ಣವೇಳರ
ಬಿಲ್ಲ ದಿಬ್ಬಣ ಸಾಗಿದೆ.
ಎಲ್ಲೊ ಒಂದೆಡೆ ಭಾವ ಬುದ್ಧಿಯ
ಹಸೆಗೆ ನಿಲ್ಲುವ ಹಾಗಿದೆ.

ಎರಡು ಮೂರು ಸಾರ್ಥಕ ರೂಪಕಗಳ ಮೂಲಕ ಕವಿ ಕವನದ ಮಹತ್ವವನ್ನೂ ಸೌಂದರ್ಯವನ್ನೂ ವ್ಯಕ್ತಪಡಿಸುತ್ತಾರೆ. ಮನಸ್ಸನ್ನು ಆಕಾಶವೆಂದೂ, ಅನುಭವಗಳನ್ನು ಕಾಮನ ಬಿಲ್ಲಿನ ಬಣ್ಣಗಳೆಂದೂ, ಕರೆದಿರುವುದು ಉಚಿತವಾಗಿದೆ. ಬುದ್ಧಿ ಭಾವಗಳ ವಿದ್ಯುದಾಲಿಂಗನವೇ ಕಾವ್ಯಪ್ರತಿಭೆಯೆಂದು ಕುವೆಂಪು ಹೇಳಿದರೆ, ಭಾವ ಬುದ್ಧಿಗಳ ವಿವಾಹವೇ ಕಾವ್ಯದ ಜನನಕ್ಕೆ ಮೂಲವೆಂದು ಈ ಕವಿ ಹೃದಯಂಗಮವಾಗಿ ಸ್ಪಷ್ಟಪಡಿಸುತ್ತಾರೆ. ವಾಸ್ತವಿಕತೆ ಕಲ್ಪಕತೆಗಳ ಸಮಾಗಮದಿಂದ ಉತ್ತಮಕಾವ್ಯ ಮೂಡುತ್ತದೆಂಬುದು ಎಲ್ಲ ಕವಿಗಳ ಅಭಿಮತ. ಕಲ್ಪನಾವಿಲಾಸದ ಸಂಲಗ್ನವಿಲ್ಲದಿದ್ದರೆ ಬರಿಯ ವಾಸ್ತವಿಕತೆ ಪರಿಮಳವಿಲ್ಲದ ಕುಸುಮವಾಗುತ್ತದೆ.

ಕಲ್ಪನೆ ವಿರಾಟ್‌ಶಕ್ತಿ ಮಾನವನಿಗೆ ಕರುಣಿಸಿರುವ ಅಪೂರ್ವ ಸಂಪತ್ತು. ಬದುಕು ಬರಡಾಗದಂತೆ, ಹತಾಶವಾಗದಂತೆ, ಕುಗ್ಗದಂತೆ, ಕುಸಿಯದಂತೆ, ಕ್ಷಣಕ್ಷಣಕ್ಕೂ ನವೋನವ ಚೈತನ್ಯವನ್ನುಕ್ಕಿಸುವ ಟಾನಿಕ್ಕು, ಸಂಜೀವಿನೀಶಕ್ತಿಯದು.

ಕಲ್ಪನೆಯ ಬೆನ್ನೇರಿ ಕಲ್ಪಕಲ್ಪಾಂತಗಳ
ಒಳ್ಪನಂಗೈಯೊಳಗೆ ತೋರಿಸಿದರು
ಭಾವನೆಯ ಬಾವುಟವ ಹಾರಿಸಿದರು
ಕಲೆಯ ಹೊಂಗಳಸವನು ಏರಿಸಿದರು.

---

೧. ಕರುಣಾಶ್ರಾವಣ, ಪುಟ.೧೪೮ ೨. ಮಾನಸ ಸರೋವರ, ಪುಟ.೧೫೬

ಶೋಕವನೆ ನಗಿಸಿದರು ಮೂಕತೆಯ ನುಡಿಸಿದರು
ನಾಕವನು ನರಕದಲೆ ಮೂಡಿಸಿದರು
ಶುಷ್ಕ ನಿಜತೆಗೆ ಚೆಲುವ ಕೂಡಿಸಿದರು[3]

ನಗುವಿನ ತಣ್ಣೀರಿನಿಂದ ಶೋಕಾಗ್ನಿಯನ್ನು ಆರಿಸುವ ಶಕ್ತಿ ಅದಕ್ಕಿದೆ. ಜೀವನದಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುವ ವಿರೋಧಾಭಾಸಗಳನ್ನು ಸಮನ್ವಯಗೊಳಿಸುವ ಶಕ್ತಿ ಕಲ್ಪನೆಗಿದೆ. 'ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ' ಎಂಬ ನೇಮಿಚಂದ್ರನ ವೃತ್ತ ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

ತಮ್ಮ ಕಾವ್ಯರಾಶಿಯನ್ನು ಕವಿ ಸುಂದರವಾದ ಉದ್ಯಾನವೆಂದು ಭಾವಿಸಿ, ಆನಂದದ ಊಟ ಬೇಕಾದರೆ 'ಬಾ ನನ್ನೀ ತೋಟಕ್ಕೆ' ಎಂದು ರಸಿಕರಿಗೆ ಆಹ್ವಾನ ನೀಡುತ್ತಾರೆ.

ಎತ್ತಲು ಚೆಲುವಿಹುದು
ಬತ್ತದ ನೆಲವಿಹುದು
ಸೃಷ್ಟಿಯ ಕಲೆಯಿಹುದು
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ[4]

ಕವಿ ಸಾಮಾನ್ಯವಾಗಿ ಎಲ್ಲ ಕವಿತೆಗಳಲ್ಲಿಯೂ ಕಾಣುವ ಹಿರಿಮೆ ಗರಿಮೆಗಳನ್ನು, ಸ್ವಾರಸ್ಯವನ್ನು, ಒಟ್ಟಿನಲ್ಲಿ ಅವುಗಳ ಗುಣ ಲಕ್ಷಣಗಳನ್ನು ಈ ಕವಿತೆಯಲ್ಲಿ ನಿರೂಪಿಸುತ್ತಾರೆ.

ನಿಸರ್ಗಪ್ರೇಮ ಮಾನವನ ಹುಟ್ಟುಗುಣ. ಅದು ಮಾನವನಿಂದ ಮಾನವನಿಗೆ ಅವರವರ ಸಂಸ್ಕಾರ, ಪರಿಸರ, ಶಿಕ್ಷಣಗಳಿಗನುಗುಣವಾಗಿ ವ್ಯತ್ಯಾಸಗೊಳ್ಳುತ್ತದೆ, ನಿಜ. ಅದರ ಲೌಕಿಕ ಪ್ರಯೋಜನವನ್ನು ಪಡೆಯುವುದರಿಂದ ಹಿಡಿದು ಅದರ ಸೌಂದರ್ಯಕ್ಕೆ ಬೆರಗಾಗುವವರು ಸೇರಿದಂತೆ ಅದರಲ್ಲಿ ದಿವ್ಯಾನಂದವನ್ನು ಭಗವತ್ಸಾಕ್ಷಾತ್ಕಾರವನ್ನು ಅನುಭವಿಸುವ ಚೇತನಗಳೂ ಇವೆ. ಕೊಡಗಿನಲ್ಲಿ ಕೆಲವು ಕಾಲ ಸೇವೆ ಸಲ್ಲಿಸಿದ ಪುರಾಣಿಕರಂಥ ಕವಿ ಅಲ್ಲಿಯು ಪ್ರಕೃತಿ ಸೌಂದರ್ಯವನ್ನುಂಡು ತಣಿಯದಿರುವುದು ಸಾಧ್ಯವೆ? ಅಲ್ಲಿಯ ಹಸಿರಿನ ವೈಭವವನ್ನು ಕಣ್ಣಾರೆ ಕಂಡು, ಮನಸಾರೆ ಉಂಡು, ಹೃದಯಸರಸಿಯೊಳೆದ್ದ ಭಾವತರಂಗಗಳನ್ನು ಶಬ್ದಗಳ ಮೂಲಕ ಹರಿಸುತ್ತಾರೆ.

---

೩. ಕಲ್ಪನಾ ವಿಲಾಸ ಪುಟ.೮೯ ೪. ಬಾ ನನ್ನೀ ತೋಟಕ್ಕೆ ಪುಟ.೧೨೨

ಮರ ಮರಗಳ ನರಗಳಲ್ಲಿ
ರಕ್ತವಾಗಿ ಹರಿದು
ಲತೆಲತೆಗಳ ತ್ವಚಗಳಲ್ಲಿ
ಹಬ್ಬಿ ಚಿತ್ರ ಬರೆದು
ಚಿತ್ತ ಬಂದಹಾಗೆ ಸುತ್ತಿ
ಮತ್ತೆ ಮರಳಿ ಬಂತು
ಹಸಿರು ಹರಿದು ಬಂತು[೫]

ಮೋಡದ ಲೀಲೆಯನ್ನು ಕುರಿತ ವರ್ಣನೆ ಮನಮೋಹಕವಾಗಿದೆ. 'ಮೇಘ ಮಾಲೆಯು ಶೈಲಮಾಲೆಯ ಮೇಲೆ ಲೀಲೆಯೊಳಿಳಿಯಿತು ನೋಡನೋಡುತ ಬುವಿಯ ಬಾನಿನ ಭೇದವೆಂಬುದೆ ಅಳಿಯಿತು.' ಹೀಗೆಯೇ ಕೆಮ್ಮಣ್ಣುಗುಂಡಿ, ಅಬ್ಬರದ ತಡಸಲು, ಬಾನಬಿಲ್ಲು, ಸೂರ್ಯೋದಯ ಇತ್ಯಾದಿ ಪ್ರಕೃತಿ ಗೀತೆಗಳು ಕವಿಯ ಪ್ರಕೃತಿ ತನ್ಮಯತೆಯನ್ನು ಸಾರುತ್ತ, ಸಹೃದಯರ ಸೌಂದರ್ಯಪ್ರಜ್ಞೆಯನ್ನು ಅರಳಿಸುತ್ತವೆ.

ಜಗಜ್ಜೀವಜಾಲದ ಅಸ್ತಿತ್ವಕ್ಕೆ, ಉಳಿವಿಗೆ, ಹರಿವಿಗೆ, ವಿಕಾಸಕ್ಕೆ ಪ್ರೇಮವೇ ಮೂಲ ಕಾರಣ. ಪ್ರೇಮಾರ್ಪಣೆಯ ಫಲವಾಗಿ ಖಗೋಳದ ನಕ್ಷತ್ರಗಳು ಮತ್ತು ಭೂಗೋಳದ ಜೀವಜಂತುಗಳು ನಿಯಮಬದ್ಧವಾಗಿ ತಂತಮ್ಮ ಧರ್ಮಾನುಗುಣವಾಗಿ ಜೀವನಯಾತ್ರೆ ಸಾಗಿಸುತ್ತಿವೆ. ಚೈತನ್ಯೋತ್ಸಾಹಗಳ ತವನಿಧಿಯಾಗಿರುವಂತೆ ಮಹತ್ಸಾಧನೆ, ಮಹತ್ವಾಕಾಂಕ್ಷೆಗಳು ಪ್ರೇರಕಶಕ್ತಿಯೂ ಹೌದು, ಅದು ಇಡೀ ಜೀವಜಾಲವನ್ನು ಬೆಸೆಯುವ ಕಾಂತಶಕ್ತಿಯೂ ಹೌದು. ಪ್ರಪಂಚದಲ್ಲಿ ಅದಕ್ಕಿಂತ ಪ್ರಬಲವಾದ ಶಕ್ತಿ ಮತ್ತೊಂದಿಲ್ಲ. ಮಾನವ ಜೀವನದಲ್ಲಂತೂ ಅದರದ್ದೇ ದರ್ಬಾರು. ಅದು ಯಾರೊಬ್ಬರ ಸ್ವತ್ತೂ ಅಲ್ಲ. ಒಂದಲ್ಲ ಒಂದು ಪ್ರಮಾಣದಲ್ಲಿ, ಒಂದಲ್ಲ ಒಂದು ರೀತಿಯಲ್ಲಿ ಅದು ಎಲ್ಲ ಜೀವಿಗಳಲ್ಲಿಯೂ ದರ್ಬಾರು ನಡೆಸುತ್ತದೆ. ಕಾಮಕ್ಕೂ ಪ್ರೇಮಕ್ಕೂ ಹತ್ತಿರದ ನಂಟು. ಅದು ಯಾವಾಗಲೂ ಜತೆಜತೆಯಾಗಿರುತ್ತವೆ. ಕಾಮ ಪ್ರೇಮದ ಅಂಕೆಯಲ್ಲಿದ್ದಾಗ ಸಾತ್ವಿಕಕ್ಕೆ ಜಯ; ಅಂಕೆ ತಪ್ಪಿದಾಗ ತಮಸ್ಸಿಗೆ ಜಯ.

ಸೌಂದರ್ಯ ಪ್ರೇಮದ ತವರೆಂದರೂ ತಪ್ಪಲ್ಲ. ಪ್ರೇಮದಲ್ಲಿಯೂ ಅನೇಕ ಸ್ತರಗಳಿವೆ. ಕುಟಿಲ ಪ್ರೇಮ, ಚಂಚಲ ಪ್ರೇಮ, ಮಾನಸಿಕ ಪ್ರೇಮ, ಹಾರ್ದಿಕ ಪ್ರೇಮ, ಆಧ್ಯಾತ್ಮಿಕ ಪ್ರೇಮ ಇತ್ಯಾದಿ. ಪ್ರೇಮದ ಕೆಲವು ಮುಖಗಳನ್ನು ಮಾತ್ರ ಕಾವ್ಯಾನಂದರ ಕಾವ್ಯರಾಶಿಯಲ್ಲಿ ಗುರುತಿಸಬಹುದು. ರೂಪವತಿಯಾದ

---

೫. ಹಸಿರು ಹರಿದು ಬಂತು, ಪುಟ.೨೯೯

ಹುಡುಗಿಯನ್ನು ನೋಡಿದಾಗ, ಸನ್ಯಾಸಿಯ ಚಿತ್ತದಲ್ಲಿಯೂ ನಿರ್ವ್ಯಾಮೋಹದ ಸೌಂದರ್ಯಪ್ರಜ್ಞೆಯ ತೆರೆಗಳೇಳಬಹುದು. 'ಬೆಂಗಳೂರು ಹುಡಿಗಿ'[೬] ಇಂಥವಳು:

ಮುಗಿಲ ಬಿಲ್ಲು ಉಟ್ಟ ಉಡಿಗೆ
ಮಯೂರ ಪಂಖ ತೊಟ್ಟ ತೊಡಿಗೆ
ಮುದುಕರೆದೆಯು ಸಹಿತ ನಡುಗೆ
ಹೊರಟೆ ಬೆಂಗಳೂರ ಹುಡಿಗಿ
ಯಾವ ಕಡೆಗೆ?

ಹೆಜ್ಜೆಗೊಮ್ಮೆ ಲಜ್ಜೆ ತುಳುಕೆ
ಮಧ್ಯ ಬಳಲಿ ಬಾಗಿ ಬಳುಕೆ
ನವಿರು ಮೂಡೆ ನಡೆವ ನೆಲಕೆ
ಹೊರಟೆ ನೋಟ ಬೀರಿ ಕೆಲಕೆ
ಯಾವ ಸ್ಥಲಕೆ?

ಅವಳ ಉಡುಗೆ ತೊಡುಗೆ ನಡಿಗೆಗಳೇ ಸೌಂದರ್ಯಾರಾಧಕರ ಮನಸ್ಸಿನಲ್ಲಿ ಅಲ್ಲೋಲಕಲ್ಲೋಲವುಂಟುಮಾಡುತ್ತವೆ. ಜಾನಪದದ ಶೈಲಿಯಲ್ಲಿ ರಚನೆಗೊಂಡಿರುವ 'ಹೊಸ ಗಂಡನಿಗೆ'[೭] ಮತ್ತು 'ಹೊಸ ಹೆಂಡತಿಗೆ'[೮] ಕವಿತೆಗಳಲ್ಲಿ ಸರಸ ಮುಗ್ಧ ಗ್ರಾಮೀಣ ಪ್ರೇಮ ಮಡುಗೊಂಡಿದೆ.

ಸಕಲರುಜೆಗಳ ದಿವ್ಯೌಷಧಿ ಸಾತ್ವಿಕ ಪ್ರೇಮದಲ್ಲಿದೆ ಎಂಬ ಸತ್ಯಸಂಗತಿ 'ನನ್ನ ನಲ್ಮೆಯ ಲಕ್ಷ್ಮಿ'[೯] ಎಂಬ ಕವಿತೆಯಲ್ಲಿ ಅಭಿವ್ಯಕ್ತಗೊಂಡಿದೆ.

ನೂರು ತಾಪಕೆ ಒಂದೆ ಓರೆನೋಟವು ಸಾಕು
ಬಗೆ ಬಗೆಯ ಬೇಗೆಗೆ ನಿನ್ನ ನಗೆಯೇ ಸಾಕು.
ಬಾಳಿಗರ್ಥವನೀಯೆ ನಿನ್ನ ನಲುಮೆಯೆ ಸಾಕು.
ಆನಂದ ಕೇಳಿಗಿದೊ ಸೌಂದರ್ಯ ಸಾಕು.

ಅರ್ಥಪೂರ್ಣ ವಿಶುದ್ಧ ಸಾತ್ವಿಕ ಪ್ರೇಮವಿದು, ಇದು ಬದುಕಿನ ಸಂಜೀವಿನೀ ಮಂತ್ರ. ಗಂಡಸಿನ ಎಲ್ಲ ಸಂಕಟಗಳಿಗೆ ಪರಿಹಾರ ಕೈ ಹಿಡಿದ ಹೆಂಗಸಿನಲ್ಲಿವೆ. ಅವಳು Shock obsorber ಇದ್ದ ಹಾಗೆ, ಗಂಡಸಿನ ಎಲ್ಲ ಆಘಾತಗಳಿಗೆ ಅವಳ ಸ್ಪರ್ಶವೇ ಶಮನಕಾರಿಯಾಗಬಹುದು.

---

೬. ಪುಟ.೧೬೬ ೭. ಪುಟ.೭೧ ೮. ಪುಟ.೬೮ ೯. ಪುಟ.೭೪

ಈ ಜಗದ ಜಂಜಡಕೆ ಈ ಜನರ ಕೋಟಲೆಗೆ
ನಿನ್ನ ಅವಲೋಕನವೆ ದಿವ್ಯೌಷಧ

ಎಂದು ಕುವೆಂಪು ಸಹ ಹೇಳುತ್ತಾರೆ. 'ಏಕೆ ನಕ್ಕೆ?[೧೦] ಏಕೆ ಅತ್ತೆ?[೧೧] 'ಭಾಗ್ಯದ ಬೆಳ್ಳಿಚುಕ್ಕೆ'[೧೨] ಇಂಥ ಹಲವಾರು ಕವಿತೆಗಳು ಈ ಸಂಪುಟದಲ್ಲಿವೆ.

ಸಿದ್ಧಯ್ಯ ಪುರಾಣಿಕರ ರಾಷ್ಟ್ರಪ್ರೇಮ ಅನನ್ಯವಾದದ್ದು. ದೇಶಕ್ಕೆ ಸ್ವಾತಂತ್ರ್ಯ ಸಮರದ ಕಾಲದಲ್ಲಿ 'ಯುದ್ಧಸ್ವ, ಯುದ್ಧಸ್ವ, ಬಾ ಅರ್ಪಿಸು ಸರ್ವಸ್ವ'[೧೩] ಎಂದು ಭಾರತೀಯರನ್ನು ಹುರಿದುಂಬಿಸುತ್ತಾರೆ. ಸ್ವಾತಂತ್ರ್ಯವೊದಗಿ, ಪ್ರಜಾರಾಜ್ಯ ಪ್ರಾಪ್ತವಾದಾಗ ಅವರು ಹರ್ಷೋದ್ರಿಕ್ತರಾಗುತ್ತಾರೆ. ಆ ಹರ್ಷ ಧಾರೆಧಾರೆಯಾಗಿ ಕವನಗಳ ಮೂಲಕ ಹರಿಯುತ್ತದೆ. ಸ್ವಾತಂತ್ರ್ಯದೊಡನೆ ಪ್ರಾಪ್ತವಾದ ದೇಶ ವಿಭಜನೆಯ ನೋವು ಅವರ ಮನಸ್ಸನ್ನು ಹಿಂಡುತ್ತದೆ. ಮುಂದೆ ಅಂಥ ವಿಭಜನೆ ನಡೆಯಬಾರದೆಂದು ದೇಶಬಾಂಧವರಿಗೆ ಕರೆಕೊಡುತ್ತಾರೆ :

ಅವಿಭಕ್ತಂ ವಿಭಕ್ತೇಷು
ಇದರಲ್ಲಿಯೆ ನಮಗೆ ಲೇಸು
ಎಲ್ಲೆ ಇರು ಏನೆ ಮಾಡು
ಇದೇ ಮಂತ್ರವನು ಜಪಿಸು
ಇದೇ ಸೂತ್ರವನ್ನು ಪಠಿಸು[೧೪]

ರಾಜ್ಯಗಳು ಭೌಗೋಳೀಕವಾಗಿ ಬೇರೆ ಬೇರೆಯಾದರೂ ರಾಷ್ಟ್ರೀಯತೆ, ರಾಷ್ಟ್ರಪ್ರೇಮ ಎಲ್ಲ ಭರತೀಯರ ನರನಾಡಿಗಳಲ್ಲಿ ಸದಾ ಅನುರಣಿಸುತ್ತಿರಬೇಕೆಂಬುದು ಕವಿಯ ಸದಾಶಯ. 'ರಾಜ್ಯ ರಾಜ್ಯದಲಿ ವ್ಯಾಜ್ಯ ಸಹಜವಾದರೂ ಅವಿಭಾಜ್ಯವಿರಲಿ ದೇಶ'[೧೫] ಎಂಬುದಾಗಿ ಅವರು ಹಂಬಲಿಸುತ್ತಾರೆ.

ಮಹಾತ್ಮ ಗಾಂಧೀಜಿಯ ನೇತೃತ್ವದಲ್ಲಿ ಲಕ್ಷಾಂತರ ಭಾರತೀಯರ ತ್ಯಾಗದ ಫಲವಾಗಿ ಗಳಿಸಿದ ಸ್ವಾತಂತ್ರ್ಯ ಹೇಗೆ ದುರುಪಯೋಗವಾಗುತ್ತಿದೆಯೆಂಬ ನಗ್ನ ಸತ್ಯವನ್ನು 'ಜಮಾ–ಖರ್ಚು' (ಪುಟ 201) ಎಂಬ ಕವಿತೆಯಲ್ಲಿ ವಿಷಾದಪೂರ್ಣ ಕ್ರೋಧದಿಂದ ನಿರೂಪಿಸಲಾಗಿದೆ :

---

೧೦. ಪುಟ.೧೬೦ ೧೧. ಪುಟ.೧೬೧ ೧೨. ಪುಟ.೪೬೦ ೧೩.ಪುಟ.೨೬೯
೧೪. ಪುಟ.೨೬೭ ೧೫. ಅವಿಭಾಜ್ಯವಿರಲಿ ದೇಶ, ಪುಟ.೩೩೫

ಸ್ವಾತಂತ್ರ್ಯವೇನೊ ಬಂತು
ಸೌಜನ್ಯ ಮಾತ್ರ ಹೋಯ್ತು
ಗಣರಾಜ್ಯವೇನೊ ಬಂತು
ಗುಣರಾಜ್ಯ ಕರಗಿ ಹೋಯ್ತು
ಕಲ್ಯಾಣರಾಜ್ಯ ಬಂತು
ಕಲ್ಯಾಣಬುದ್ಧಿ ಹೋಯ್ತು
ಎಲ್ಲರಿಗೂ ಓಟು ಬಂತು
ಒಳ್ಳೆಯವರ ಕಾಲ ಹೋಯ್ತು

ಹೀಗೆಯೇ ಸ್ವಾತಂತ್ರ್ಯದ ಫಲಶ್ರುತಿ ಮುಂದುವರಿಯುತ್ತದೆ. ನಿರ್ಮತ್ಸರದಿಂದ ನಿಸ್ಸಂಗತ್ವದಿಂದ ಸಾಕ್ಷೀಪ್ರಜ್ಞೆಯಿಂದ ರಾಷ್ಟ್ರದ ಆಗುಹೋಗುಗಳ ಬಗೆಗೆ ಸದಾ ಜಾಗೃತನಾಗಿದ್ದು ಚಿಂತನೆ ನಡೆಸಬೇಕಾದ್ದು, ಹಾಗೆಯೇ ತಾನು ಕಂಡ ವಾಸ್ತವ ಸಂಗತಿಗಳನ್ನು ಬಹಿರಂಗಗೊಳಿಸಬೇಕಾದ್ದು ಸಾಹಿತಿಯ ಕರ್ತವ್ಯ. ಸಾಹಿತಿ ಸಮಾಜದ ವೈದ್ಯನಾಗಿರುವುದರ ಜತೆಗೆ, ನೈತಿಕ ಕೋಟೆಯ ರಕ್ಷಣೆಯ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಆಡಳಿತದ ಲೋಪದೋಷಗಳನ್ನು ಪ್ರಜಾವರ್ಗದ ಗಮನಕ್ಕೆ ತಂದಾಗ ಭ್ರಷ್ಟರಿಗೆ ಹಾಗೂ ದುಷ್ಟರಿಗೆ ಶಾಸ್ತಿಯಾಗುವುದರಲ್ಲಿ ಸಂದೇಹವಿಲ್ಲ. ಸಾಮಾಜಿಕ ಬದ್ಧತೆಯಿಲ್ಲದ ಅಂಜುಕುಳಿ ಸಾಹಿತಿಗಳು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ. ಸಮಾಜೋನ್ನತಿಯ ಬಗ್ಗೆ ಕಾಳಜಿಯಿರುವ ಸಿದ್ಧಯ್ಯ ಪುರಾಣಿಕರು ನಿರ್ದಾಕ್ಷಿಣ್ಯವಾಗಿ ಸಮಾಜದ ಹುಳುಕುಗಳನ್ನು ಬಯಲಿಗೆಳೆಯುತ್ತಾರೆ.

ಆಡಳಿತ ಯಂತ್ರದ ಭಾಗವಾಗಿದ್ದರೂ ಆಡಳಿತಗಾರರ ದೋಷ ದೌರ್ಬಲ್ಯಗಳನ್ನು ಬೆತ್ತಲೆಗೊಳಿಸುವ ನೈತಿಕ ಧೈರ್ಯ ಪುರಾಣಿಕರಿಗಿದೆ. ಆಡಳಿತಗಾರರ ದುಶ್ಚಾಳಿ ದುಶ್ಚಟಗಳು ಅವರಿಗೆ ಗೊತ್ತಾಗುವಂತೆ ಬೇರೆಯವರ ಕಣ್ಣಿಗೆ ಬೀಳುವುದಿಲ್ಲ. 'ಮಂತ್ರಿಯ ಮನವಿ'[೧೬] ಎಂಬ ವಿಡಂಬನ ಕವಿತೆ ಕನ್ನಡ ಸಾಹಿತ್ಯದಲ್ಲಿಯೇ ಅಪೂರ್ವವಾದದ್ದು. ಅದರಲ್ಲಿ ಬಳಸಿರುವ ಗ್ರಾಮೀಣ ಭಾಷೆಯಂತು ವಿಡಂಬನೆಯ ಸ್ವಾರಸ್ಯವನ್ನು ಅಧಿಕಗೊಳಿಸುತ್ತದೆ. ಮಂತ್ರಿಯ ಅಜ್ಞತೆಯನ್ನು ಹಳ್ಳಿಗಮಾರತೆಯನ್ನು ಎತ್ತಿತೋರಿಸುತ್ತದೆ. ಕವಿಯ ಸಾಮಾಜಿಕ ಅಭ್ಯುದಯದ ತೀವ್ರಾಸಕ್ತಿಗೆ ಹಾಗೂ ಔಚಿತ್ಯಪ್ರಜ್ಞೆಗೆ ಇದೊಂದು ಉತ್ತಮ ನಿದರ್ಶನವಾಗಿದೆ :

ಸುಮ್ ಸುಮ್ನೆ ನಮ್ಮನ್ನ ಬೈ ಬ್ಯಾಡ್ರಿ
ನಾವು ಹೇಳೋದ್ನೂ ಸ್ವಲ್ಪ ಕೇಳ್ರಿ !
ದೂರುಗಳೇನೋ ನೂರಾರು;
ಆದ್ರ ನಮ್ಮ ಮ್ಯಾಗ ನೀವು ಮಸೆಯೋ ಕತ್ತಿ
ಮೂರೇ ಮೂರು!
ಮಂತ್ರಿಯಾದೊರು ನುಡಿದಾಂಗ ನಡೆಯೋದಿಲ್ಲ ಅನ್ನೋದು
ಮೊದಲನೇ ಕತ್ತಿ;
ನಾವೇನ ಮಾಡೋಣ್ರೀ?
ನಮ್ಮ ಹೊತ್ತೆಲ್ಲಾ ನುಡಿಯೋದರೊಳಗ ಹೋಗೈತೆ
ನುಡಿದಂತೆ ನಡೆಯಾಕ
ಹೊತ್ತೆಲ್ಲಿಂದ ತರೋಣ್ರಿ?
ನೀವೇಹೇಳ್ರಿ!

ಹೀಗೆಯೇ ಮತ್ತೆರಡು ಮಸೆಯೋ ಕತ್ತಿಗಳ ಪ್ರಸಂಗಗಳನ್ನು ದಾಖಲಿಸಲಾಗುತ್ತದೆ. ಮಂತ್ರಿಗಳು ಸುಳ್ಳು ಹೇಳ್ತಾರೆ ಎಂಬ ಪ್ರಶ್ನೆಗೆ ಅವನೇ ಉತ್ತರ ಕೊಡುತ್ತಾನೆ: 'ಇದ್ದದ್ದು ಇದ್ದಾಂಗ ಹೇಳಿದ್ರ ನಮ್ಮ ಜನ ಮತಾನ್ನ ಕೊಡೋದಿಲ್ಲಲ್ರಿ?' ಎಂದು, 'ಮಂತ್ರಿಗಳು ಭಾಳಾ ದುಡ್ಡು ಹೊಡೀತಾರಂತೀರಾ?' ಎಂಬ ಪ್ರಶ್ನೆಗೆ 'ದುಡ್ಡಿದ್ದೆ ಹ್ಯಾಗೆ ಆರಿಸಿ ಬರೋದ್ರಿ?' ಎಂಬ ಉತ್ತರ ಸಿದ್ಧವಾಗಿದೆ. ರಾಜಕಾರಣಿಗಳು ಮಾತ್ರವಲ್ಲ, ಮತದಾರರು ಎಷ್ಟರಮಟ್ಟಿಗೆ ಹಾಳಾಗಿದ್ದಾರೆನ್ನುವ ಸತ್ಯವೂ ಈ ಕವಿತೆಯಲ್ಲಿ ಅಡಕಗೊಂಡಿದೆ. ಇದು ಇಂದಿನ ಭರತಖಂಡದಲ್ಲಿ ಎಲ್ಲೆಲ್ಲೂ ಎದ್ದುಕಾಣುವ ದೃಶ್ಯ.

'ಆಜಿಯನ್ ಲಾಯ'[೧೭] ಎಂಬುದು ಮತ್ತೊಂದು ಇಂಥದೇ ಕವಿತೆ. ಸ್ವಾರ್ಥ ರಾಜಕಾರಣಿಗಳ ತಪ್ಪುಗಳಿಂದಾಗಿ ದೇಶದ ಭವಿಷ್ಯ ರಸಾತಲಸ್ಪರ್ಶಿಯಾಗುತ್ತದೆಂಬ ಶಂಕೆ ಕವಿಯದು.

ಅವರ ತಪ್ಪು ಇವರು ಎತ್ತಿ ತೋರಿಸುತ್ತ
ಇವರ ತಪ್ಪು ಅವರು ಎತ್ತಿ ತೋರಿಸುತ್ತ
ಇಬ್ಬರೂ ಒಂದೇ ತಪ್ಪು ಮಾಡಿದಾಗ
ಇಬ್ಬರೂ ತೆಪ್ಪಗಿರುತ್ತ
ತಪ್ಪಿನಿಂದಲೇ
ತಪ್ಪನ್ನು ಸಮರ್ಥಿಸಿಕೊಳ್ಳುತ್ತಾ

---

೧೬. ಪುಟ.೩೬೦ ೧೭. ಪುಟ.೪೦೭

ಎಲ್ಲಿಗೊಯ್ಯುವರೋ ದೇಶವಿದನು
ನಮ್ಮ ನಾಯಕರು
ಸ್ವಾರ್ಥಕಾಯಕರು !

ಇದು ದೇಶದಲ್ಲೆಲ್ಲಿಯೂ ಕಾಣುತ್ತಿರುವ ಸತ್ಯ; ಈ ಸತ್ಯ ರಾಜಕಾರಣಿಗಳಿಗೆ ಕಾಣಿಸುವುದಿಲ್ಲವೆ? ಅವರು ಇಂಥ ಪದ್ಯಗಳನ್ನು ಓದುವುದುಂಟೆ? ಅವರು ಸರ್ವಜ್ಞರಾದ್ದರಿಂದ ಓದು ಅವರಿಗೆ ಬೇಕಿಲ್ಲ, ಅಕಸ್ಮಾತ್ ಓದಿದ್ದಾದರೆ ಅವರು ಕವಿಯನ್ನು ನಿಂದಿಸಬಹುದೇ ಹೊರತು, ತಮ್ಮ ತಪ್ಪನ್ನು ತಿದ್ದಿಕೊಳ್ಳುವುದಿಲ್ಲ. ಅಂದಮೇಲೆ ಇಂಥ ಕವಿತೆಗಳಿಂದಾಗುವ ಪ್ರಯೋಜನವೇನು? ಸಾಮಾನ್ಯರು ಓದಿಯೇ ಓದುತ್ತಾರೆ; ಅವರಲ್ಲಿ ಜಾಗೃತಿ ಮೂಡುತ್ತದೆ. ಇಂದಿನ ಪರಿಸ್ಥಿತಿ ಇಂಥ ಕವಿತೆಗಳ ಮೂಲಕ ಮುಂದಣವರಿಗೆ ಮನದಟ್ಟಾಗುತ್ತದೆ, ಚರಿತ್ರೆಗೆ ಆಕರವಾಗುತ್ತದೆ. ರಾಜಕೀಯ ಸ್ಥಿತಿಗತಿಗಳನ್ನು ವಿಶ್ಲೇಷಿಸುವ ಕವಿತೆಗಳು ಇನ್ನೂ ಕೆಲವಿವೆ. ಸೂಳೆಯರ ಆಣೆಗಳ ಚುನಾವಣೆಯ ಆಶ್ವಾಸನೆಗಳ ನಂಬಬಹುದೆ?'[೧೮] ರಾಜಕಾರಣಿಗಳಿಗೆ ತಮ್ಮ ಎಸಕಗಳು ತಪ್ಪೆಂದು ತಿಳಿಯದಿರಬಹುದು. ಪುರಾಣಿಕರ ಇಂಥ ಕವಿತೆಗಳು ಅವರಿಗೆ ಕನ್ನಡಿಗಳಾಗುವುದರಲ್ಲಿ ಸಂದೇಹವಿಲ್ಲ.

ಬಡತನದ ನಾನಾ ಮುಖಗಳನ್ನು ಕಂಡಿರುವ ಕಾವ್ಯಾನಂದರ ನೋವು ಕರುಣೆ ಅನುಕಂಪೆಗಳು ಅವರ ಕವಿತೆಗಳಲ್ಲಿ ಸಾಕಾರಗೊಂಡಿವೆ. ಶ್ರೀಮಂತರ ಆಳುವವರ ಸಿಹಿ ಎಂದೇ ಹೇಳಬೇಕು. ಪುರಾಣಿಕರ ಸಂಪರ್ಕವಿದ್ದವರಿಗೆ ಅವರ ಜೀವನ ಸಮಸ್ತವೂ ಸಿಹಿಯ ಆಗರವೆಂಬುದು ಎಲ್ಲರ ಅನುಭವದ ಸಂಗತಿ. ಕಹಿಯನ್ನು ಸಹ ಸಿಹಿಯಾಗಿ ಪರಿವರ್ತಿಸಬಲ್ಲ ಮಂತ್ರವಿದರವರು.

ಹುಟ್ಟಿನ ಮೇಲೆ ಜನರ ಗುಣವನ್ನು ನಿರ್ಣಯಿಸುವುದು ಸರಿಯಲ್ಲ, ಅದು ಪುರಾಣಗಳು ಮಾಡಿರುವ ತಪ್ಪು ಎಂಬ ಕವಿಯ ನಿರ್ಣಯ ನ್ಯಾಯಬದ್ಧವಾಗಿದೆ. ಈಗಲೂ ಕುಲಜಾತಿಗಳ ಆಧಾರದ ಮೇಲೆ ಕಾವ್ಯಗುಣವನ್ನು, ಸಾಧನೆಯ ಮಹತ್ವವನ್ನು ನಿರ್ಣಯಿಸುವ ಜಾತ್ಯಂಧರಿದ್ದಾರೆ.

ಕಬ್ಬಿಗನ ಕುಲನೆನೆದು ಕಬ್ಬವನು ತೆಗಳುವುದೆ
ಬರ್ಬರತೆ ತರವಲ್ಲ–ಮರುಳಸಿದ್ಧ

ಇಂದಿನ ಕಾಲದಲ್ಲಿಯೂ ಬಿರುದು ಬಹುಮಾನ ಪ್ರಶಸ್ತಿಗಳನ್ನು ಹಂಚುವಾಗ ಮೂರ್ಖರು ಜಾತಿಕುಲಗಳನ್ನು ಆಧಾರವಾಗಿಟ್ಟುಕೊಳ್ಳುವುದುಂಟು. 'ಶ್ರೇಷ್ಠತೆಯನಳೆಯದಿರು ಹುಟ್ಟಿನಾಧಾರದಲ್ಲಿ? (೭೬) ಎಂದು ಕವಿ ಮೂರ್ಖರಿಗೆ ವಿವೇಕ ಹೇಳುತ್ತಾರೆ.

---

೧೮. ಸೂಳೆಯರ ಆಣೆಗಳು ರೂಪಕ, ಪುಟ.೪೩೩

ಜಗತ್ತು ಮಾಯೆಯೆಂಬ ವಾದವನ್ನು ಪ್ರಭುವಿನಂತೆ ಪುರಾಣಿಕರೂ ಒಪ್ಪುವುದಿಲ್ಲ.

ಮೈಯಿತ್ತ ಜಗವ
ಮಾಯೆಯೆಂದೆನಬಹುದೆ–ಜಡವು ನಶ್ವರವೆಂದು?
ತಾಯೆಯೆಂದರಿ ಜಗವ– ಮರುಳಸಿದ್ಧ

ಎಂದು ಎಚ್ಚರಿಸುತ್ತಾರೆ.

ಸಚರಾಚರಗಳನ್ನೊಳಗೊಂಡ ಜಗತ್ತೆಲ್ಲವೂ ಪರಮಾತ್ಮನ ಸೃಷ್ಟಿಯಾದ್ದರಿಂದ, ಅದರಿಂದ ದೊರಕುವ ಎಲ್ಲ ದ್ರವ್ಯಗಳನ್ನು ಪ್ರಸಾದವೆಂದೇ ತಿಳಿಯಬೇಕು. ಪರಮಾತ್ಮನ ಸಾಕಾರರೂಪಿಯಾದ ಪ್ರಕೃತಿಯನ್ನು ವಿಕೃತಗೊಳಿಸುವುದು ಪಾಪ!

ಪ್ರಕೃತಿ ಸೃಜಿಸುವುದೆಲ್ಲ ಚೆಂದ, ಬಂಧುರ, ಸುಭಗ–
ವಿಕೃತಗೊಳಿಸುವೆವದನು ಅವಿವೇಕತನದಿ!
ಪ್ರಕೃತಿಯಿಂ ಪಡೆದನಿತ ಪ್ರಕೃತಿಗೀಯುತ್ತಿಹುದೆ
ಸುಕೃತವೆಂದರಿಯೆಂದ– ಮರುಳಸಿದ್ಧ (೬೮)

ಈ ಚಿಂತನೆಯ ಹಿನ್ನೆಲೆಯಲ್ಲಿ ಪರಿಸರ ಪ್ರೇಮ, ಪರಿಸರ ರಕ್ಷಣೆಯ ಅಗತ್ಯಗಳಿವೆಯೆಂಬುದನ್ನು ಮರೆಯಲಾಗದು.

ಕಾವಿ ಖಾದಿ ಖಾಕಿಗಳು ಮಂಗಳದ ಸಂಕೇತಗಳೂ ಹೌದು, ವಂಚನೆಯ ಚಿಹ್ನೆಗಳೂ ಹೌದು. ಮಂಗಳ ಯಾವುದು, ವಂಚನೆ ಯಾವುದು ಎಂಬ ಸತ್ಯವನ್ನು ಕಂಡುಹಿಡಿಯುವುದೇ ಕಷ್ಟವೆಂಬುದು ಕವಿಯ ಮಾತ್ರವಲ್ಲ, ಎಲ್ಲ ಸಜ್ಜನರ ಆತಂಕ:

ತೋಳ ಕಾವಿಯ ಧರಿಸೆ ವರವೆ ಅದು ಕುರಿಗಳಿಗೆ?
ಖೂಳ ಖಾದಿಯನುಡಲು ಹಿತವೆ ಜನಕೆ?
ಮೂಳ ಖಾಕಿಯ ತೊಡಲು ರಕ್ಷಣೆಯೆ? ವಿಧವಿಧದ
ವ್ಯಾಳಗಳು, ವಿಷವೊಂದೆ–ಮರುಳಸಿದ್ಧ (೧೫೦)

ಇಂಥವರ ಉಸಿರಿನಲ್ಲಿರುವ ವಿಷವೊಂದೇ. 'ಮನವು ಮಡಿಯಾದಾಗ ತನುವೆ ಪಂಪಾಕ್ಷೇತ್ರ' (೨೧೪) ವಾಗುತ್ತದೆ. ಕಾವಿ ಖಾದಿ ಖಾಕಿ ಹೊದ್ದವರ ಮನಸ್ಸು ಮಡಿಯಾದರೆ ಮಾತ್ರ ಸಮಾಜದ ಗೌರವಕ್ಕೆ ಭಾಜನರಾಗುತ್ತಾರೆ; ದೇಶದಲ್ಲಿ ಶಾಂತಿ ಕ್ಷೇಮಗಳನ್ನು ಕಾಪಾಡಲರ್ಹರಾಗುತ್ತಾರೆ. 'ರುಚಿಯ ಶುಚಿಗೊಳಿಸುವುದೆ ಸಂಸ್ಕೃತಿಯ ಸಾರ (೪೪೬), ಎಲ್ಲ ಕರ್ಮಗಳ ಮರ್ಮ. ಮನಶ್ಶುದ್ಧಿಯೇ ಶುಚಿಯೆಂಬುದನ್ನು ಮರೆಯಲಾಗದು.

ಮತಿ ಮಾನವನ ಸರ್ವೋತ್ಕೃಷ್ಟವಾದ ವರ. ಸಂಪ್ರದಾಯಕ್ಕೆ ಬಂಧಿಯಾಗದ, ನಿರಂಕುಶತ್ವದಿಂದ ಕೂಡಿರುವ ಯತಿಯಿಂದ ಮಾತ್ರ ಮಾನವನ ಹಾಗೂ ಜಗದ ಉದ್ಧಾರ ಸಾಧ್ಯ.

ಬುದ್ಧಿ ಮತಿಯನು ಬೆಳಗಿ, ಹೃದಯ ಮತವನು ಬೆಳಗೆ
ಉದ್ಧಾರ ತಡವಿಲ್ಲ–ಮರುಳಸಿದ್ಧ (೫೧೬)

ಮತಿ ಸ್ವತಂತ್ರವಾಗಿ, ಹೃದಯದಲ್ಲಿ ಮಾನವೀಯತೆ ತುಂಬಿಕೊಂಡಾಗ ನಿಜವಾದ ಧರ್ಮ ಪಲ್ಲವಿಸುತ್ತದೆ, ಆಗ–

ಯಾವ ಮತವೂ ಕೊನೆಯ ಮತವಲ್ಲ, ಅಂತೆಯೇ
ಯಾವ ಗ್ರಂಥವು ಕೊನೆಯ ಗ್ರಂಥವಲ್ಲ! (೫೦೮)

ಸಂಪ್ರದಾಯಬದ್ಧವಾದ ಯಾವುದೇ ಒಂದು ಮತಕ್ಕೆ ಗಂಟು ಬಿದ್ದದ್ದಾದರೆ ಮತಿಯ ಬೆಳೆವಣಿಗೆ ಕುಂಟುತ್ತದೆ. ಮತಿಗೆ ಸ್ವಾತಂತ್ರ್ಯವಿದ್ದಾಗ, ಹೊಸ ಹೊಸ ತತ್ತ್ವ ದರ್ಶನಗಳು ಮೊಳೆತು, ಹೊಸ ಮತವೊಂದು ಉದಯಿಸಬಹುದು. ಜ್ಞಾನ ವಿಜ್ಞಾನ ಸುಜ್ಞಾನಗಳು ನಿಂತ ನೀರಲ್ಲ, ಅವು ನಿರಂತರವಾಗಿ ಹರಿಯುವ ಪ್ರವಾಹಗಳು. ಅವುಗಳಿಗೆ ಅಡ್ಡಗಟ್ಟೆ ಹಾಕಿದಾಗ ನಿಂತ ನೀರಿನಲ್ಲಿ ಮಡಿತನ ಉಳಿಯುವುದಿಲ್ಲ ವೆಂಬುದು ಸರ್ವವೇದ್ಯ. ಆದ್ದರಿಂದ ಯಾವುದೋ ಒಂದು ಕಾಲಘಟ್ಟದಲ್ಲಿ, ಅಥವಾ ಸಂಪತ್ತಿನಲ್ಲಿ ಸರ್ಕಾರ ಸಂಚಯಿಸುವ ಶಸ್ತ್ರಾಸ್ತ್ರಗಳಲ್ಲಿ, ರಾಜಕಾರಣಿಗಳು ಸಂಗ್ರಹಿಸುವ ಐಶ್ವರ್ಯದಲ್ಲಿ, ಬಡವರ ಬೆವರು ನೆತ್ತರುಗಳೇ ಹೆಪ್ಪುಗಟ್ಟಿವೆಯೆಂಬ ಕವಿವಾಣಿ ಎಂದಿಗೂ ಸುಳ್ಳಾಗದು.

ಸಾಮ್ರಾಜ್ಯದಾಹದಲಿ ಸಂಹಾರ ಯಾತ್ರೆಯನು
ಹೂಡಿಹರ ಕತ್ತಿಯೂ ನಿನ್ನ ಕತ್ತಿನಮೇಲೆ[೧೯]

ದುಡಿಯದೆ ಉಣ್ಣುವವರಿಗೂ ಬಡವರ ನೆತ್ತರೇ ಉಣಿಸು. ನರಕ ಅಗೋಚರ ಲೋಕವಲ್ಲ ; ಎಲ್ಲರ ಕಣ್ಮುಂದಿರುವ ಬಡತನವೇ ನರಕ. ಎಂದಿದ್ದರೂ ಬಡಜನರ ದುಃಖವೇ ಧನಿಕರಿಗೆ ಬರಸಿಡಿಲಾಗುತ್ತದೆ.[೨೦]

ಸ್ವಾತಂತ್ರ್ಯವೇನೊ ಬಂತು ಸರಿ. ಹುತಾತ್ಮರ ತ್ಯಾಗದಿಂದಾಗಿ ಭಾರತಿಯು ಧನ್ಯೆ. ಆದರೆ ಅದು ಬಡವನ ಸಂಕಟವನ್ನು ನಿವಾರಿಸುವುದಾದರೆ ಮಾತ್ರ ಸ್ವಾಗತಾರ್ಹವಾಗುತ್ತದೆ.

ಬಿಡುಗಡೆಗೆ ಬೆಲೆಯೆಲ್ಲಿ ಬಡವಗೆ ರೊಟ್ಟಿ ಬಟ್ಟೆಯು ಸಿಗದಿರೆ
ಕೃಷಿಕ ಶ್ರಮಿಕರ ಮುಖವು ಒಮ್ಮೆಯು ಹಿಗ್ಗಿ ಸೊಗದಲಿ ನಗದಿರೆ
ಜೀರ್ಣ ಶೀರ್ಣ ಶರೀರಗಳು ಮೊದಲಂತೆ ಬತ್ತಿರೆ ಸುಗಿದಿರೆ[೨೧]

ಎಂದು ಬಿಡುಗಡೆಯ ಜರೆಯದಿರೆಂದು ನುಡಿಯುವಲ್ಲಿಯೇ ಸ್ವಾತಂತ್ರ್ಯ ಬಡವರಿಗೆ ವರವಾಗಲೆಂದು ಕವಿ ಆಶಿಸುವ ಧ್ವನಿಯಿದೆ. 'ಮನೆಮಾಡಲಿ ವಿಜ್ಞಾನವು ಗುಡಿಸಲ ಬದಿಯಲ್ಲಿ' ಎಂದವರು ಹಾರೈಸುತ್ತಾರೆ. ಬಡತನದ ನಿವಾರಣೆ

---

೧೯. ನಿನ್ನಿರವೆ ನೆರಳ ಬಡವ ಪುಟ.೯ ೨೦. ಬಡಜನರ ದುಃಖವೇ ಬರಸಿಡಿಲು ಧನಿಕ, ಪುಟ.೧೪ ೨೧. ಸ್ವಾಗತವು ಸ್ವಾತಂತ್ರ್ಯದಿನವೇ! ಪುಟ.೪೧

ವಿಜ್ಞಾನದ ಗುರಿಯಾಗಿರಬೇಕೆಂಬುದು ಅವರ ಹಾರೈಕೆಯ ನಿರೀಕ್ಷೆ. 'ದುಡಿವ ಕೈಗಳಿಗೆ ನಮೋ ನಮೋ'[೨೨] ಎಂಬ ಕವಿಯ ಪ್ರಾರ್ಥನೆಗೆ ನಾಡಿನ ಜನರೆಲ್ಲರೂ ದನಿಗೂಡಿಸುವುದಾದರೆ ದೇಶದಲ್ಲಿ ಸುಭಿಕ್ಷ ತಾಂಡವವಾಡುತ್ತದೆ. ರಾಯ್ ಬರೇಲಿ ರೈತರಂತು ತಮ್ಮ ಸುಲಿಗೆಯಲ್ಲಿ ಅನಂದಿಸುವ ಆನುವಂಶಿಕ ಆಡಳಿತವನ್ನು ಕೊನೆಗಾಣಿಸಬೇಕೆನ್ನುತ್ತಾರೆ.[೨೩] ರೈತರೆಲ್ಲ ಒಂದಾದರೆ ತಮ್ಮನ್ನು ವಂಚಿಸಿ, ಸುಲಿಗೆ ಮಾಡುವ ಹಿಂಸಕರನ್ನು ತೊಲಗಿಸಬಹುದೆಂಬುದರಲ್ಲಿ ಅನುಮಾನವೇ ಇಲ್ಲ.

ಕುವೆಂಪು ಅವರ 'ಕಲ್ಕಿ'ಯನ್ನು ನೆನಪಿಗೆ ತರುವ 'ಬರುತಿದೆ ಬಡವರ ಯುಗ!' (ಪು.೮–೯) ಎಂಬ ಕವಿತೆಯಲ್ಲಿ ಮುಂಬರುವ ಬಡವರ ಯುಗದ ನೀತಿ ನಿಯಮ ಲಕ್ಷಣಗಳ ವಿವರಣೆಯಿದೆ; ಧನಿಕರಿಗೆ ಜಾಗೃತಿ ನೀಡುವ ದನಿಯೂ ಇದೆ.

ಬರುತಿದೆ ಬಡವರ ಯುಗ ನೆನಪಿಡು ಓ ಧನಿಕ !
ತರುತಿದೆ ನಿನಗೇ ಕ್ಷಯ ನಿನ್ನಯ ಧನಕನಕ !!

ಕವಿವಾಣಿ ಎಂದಿಗೂ ಸುಳ್ಳಾಗುವುದಿಲ್ಲವೆಂಬುದನ್ನು ಸುಲಿಗೆಗಾರ ಧನಿಕ ನಂಬುವುದುಂಟೆ? ಅವನಿಗೆ ರಷ್ಯಾಕ್ರಾಂತಿ ನೆನಪಿದೆಯೆ?

ದುಡಿವಾಸೆಯ ಬಡ ಜನತೆಗೆ ದುಡಿತವು ಸಿಗಬೇಕು
ದುಡಿದದರೊಳು ದುಡಿವವರಿಗೆ ಸಮಪಾಲದು ಬೇಕು.
ಹೆಚ್ಚಿದ ಧನ ಹೆಚ್ಚಿನ ಹಣ ರಾಷ್ಟ್ರದ ಆಸ್ತಿ
ಹೀಗಾಗದೆ ಸುಖಶಾಂತಿಯು ಸ್ವಾತಂತ್ರ್ಯವು ನಾಸ್ತಿ!

ದುಡಿಯುವವನಿಗೆ ದುಡಿತ, ದುಡಿದವನಿಗೆ ಸಮಪಾಲು, ದೊರೆತಾಗ, ಹೆಚ್ಚಿನಹಣ ರಾಷ್ಟ್ರದ ಆಸ್ತಿಯಾದಾಗ ಮಾತ್ರ ದೇಶದಲ್ಲಿ, ಜಗತ್ತಿನಲ್ಲಿ ಸುಖ ಶಾಂತಿ ನೆಲಸಿಯಾವು. ಇಷ್ಟಾದರೂ ಕನಿಷ್ಠಲಾಭ ದೊರೆಯದಿದ್ದರೆ ಸ್ವಾತಂತ್ರ್ಯವೇ ಇಲ್ಲದಂತಾಗುತ್ತದೆ.

ಹೊಸ ಲೋಕವ ಕಟ್ಟುವ ಹೊಣೆ ಇಂದಿನ ಬಡವನದು
ಹೊಸಬಾಳನು ರಚಿಸುವ ಹೊಣೆ ನಾಳಿನ ದುಡಿವನದು

ಕವಿಯ ಆಶೆ ಮತ್ತು ಭವಿಷ್ಯ ವಾಣಿ ಕೈಗೂಡಿದಾಗ ಜಗತ್ತು ಬಗವವಂತನ ಸಾಮ್ರಾಜ್ಯವಾಗುತ್ತದೆ. ದೀನರ ಬಗ್ಗೆ ಕವಿಗಿರುವ ಆತಂಕ ಅನುಕಂಪೆ ಅನುಪಮವಾದುವು. ಕನಸು ನನಸಿನಲ್ಲಿಯೂ ಅವರ ಉದ್ಧಾರವನ್ನೆ ನೆನೆಯುತ್ತಾರೆ.

---

೨೨. ಪು.೩೪೮ ೨೩. ರಾಯ್ ಬರೇಲಿ ರೈತನ ಹಾಡು. ಪು.೩೫೨

ದೀನರನು ಅರಿತು, ಅವರನೆ ಕುರಿತು ಬರೆವ ಸಾ-
ಮಾನ್ಯ ಕವಿಯಾಗಿಸೈ ಮರುಳಸಿದ್ಧ (೧೩)

ಎಂದವರು ಪ್ರಾರ್ಥಿಸುತ್ತಾರೆ.

–೨–

ಮಂಕುತಿಮ್ಮನ ತಮ್ಮ ಮರುಳಸಿದ್ಧ ಎಂಬ ಪುರಾಣಿಕರ ಮಾತಿನಲ್ಲಿ ಅವರ ವಿನಯವೂ ಕೃತಜ್ಞತಾಭಾವವೂ ಪ್ರಕಟವಾಗುತ್ತವೆ. ೮೦೮ ಪದ್ಯಗಳುಳ್ಳ ಈ ಕಂತೆಯಲ್ಲಿ ಕವಿಯ ವೈವಿಧ್ಯಮಯ ಲೋಕಾನುಭವ ಸಂಪತ್ತು, ಜೀವನಕ್ಕಾಧಾರವಾದ ದರ್ಶನ ತತ್ತ್ವ ನೀತಿ ಧರ್ಮಗಳ ಐಶ್ವರ್ಯಗಳು ಸಂಗ್ರಹಗೊಂಡಿವೆ. ಇದರಲ್ಲಿ ನಮನ, ಕವನ, ಭುವನ, ಜನನ, ಜೀವನ, ಮರಣ, ಸ್ವದೇಶ ಚಿಂತನ, ತಾಯ್ನಾಡಸ್ತವನ, ಆತ್ಮನಿವೇದನೆ ಮತ್ತು ಸ್ವಸ್ತಿವಾಚನವೆಂದು ಹತ್ತು ವರ್ಗಗಳಿವೆ. ಅವು ಅಧರಕ್ಕೂ ಸಿಹಿ, ಉದರಕ್ಕೂ

ಪರಿಸರದಲ್ಲಿ ಹುಟ್ಟಿದ ಮತ ಎಲ್ಲ ಕಾಲಕ್ಕೂ ಸರಿಯೆಂದು ಹೇಳಲಾಗದು. ಆದ್ದರಿಂದ ಯಾವ ಗ್ರಂಥವೂ ಕೊನೆಯ ಗ್ರಂಥವಾಗಬಾರದು. ಅಂತೆಯೇ ಈಗ ಚಾಲ್ತಿಯಲ್ಲಿರುವ ಮತಗಳಿಗೆ ಬದಲಾಗಿ ಮನುಜಮತಕ್ಕೆ (೫೭೦) ಇಂಬು ಕೊಡಬೇಕು.[೨೪]

ಮಾನವನ ಆದ್ಯ ಕರ್ತವ್ಯ ಸ್ವದೇಶ ಕ್ಷೇಮಚಿಂತನೆಯಾಗಿರಬೇಕು. ದೇಶಕ್ಕೂ ದೇಹವಿದೆ, ಪ್ರಾಣವಿದೆ, ಆತ್ಮವಿದೆ (೬೦೪). ಅನ್ನ, ಚಿಂತನ, ಮತ್ತು ಮೌಲ್ಯಗಳ ಮೂಲಕ ದೇಶವನ್ನು ಬೆಳೆಸಬೇಕು (೬೬೫). ಮಾನವರ ಅಭ್ಯುದಯಕ್ಕೆ ಆಯಾಯ ದೇಶಗಳೇ ಆಧಾರ. 'ಅನ್ಯರಿಂ ದೇಶಕ್ಕೆ ಧಕ್ಕೆ ಬಾ ಎದುರಿಸುವ ಧನ್ಯತೆಯು ನನಗಿರಲಿ' (೬೬೭) ಎಂಬುದು ಪ್ರತಿಯೊಬ್ಬ ವ್ಯಕ್ತಿಯ ಜೀವನಮಂತ್ರವಾಗಬೇಕು.

ಚುನಾವಣೆ ಸನ್ನಿಹಿತವಾದಾಗ ಶಾಸಕರಿಗೆ ಜನ ದಣಿಗಳಂತೆ ಕಾಣುತ್ತಾರೆ; ಅದು ಮುಗಿಯುತ್ತಿದ್ದಂತೆಯೇ ಅವರು ದನಗಳಾಗುತ್ತಾರೆ. ಆಡಳಿತಾವಧಿಯಲ್ಲಿ ಶಾಸಕರನ್ನು ಹತ್ತಿರದಿಂದ ನೋಡಿದ್ದ ಪುರಾಣಿಕರು ಅವರ ನಡಾವಳಿಯನ್ನು ವಾಸ್ತವಿಕ ದೃಷ್ಟಿಯಿಂದ ನೋಡಿದಾಗ ಅವರ ಮನಸ್ಸಿನಲ್ಲಿ ಮೂಡಿದ ಸಂಗತಿಗಳನ್ನು ಲೋಕದ ಮುಂದೆ ತೆರೆದಿಡುತ್ತಾರೆ :

ಆಯ್ಕೆಗೊಂಡಿಳಿಯುವರು ಬಸ್ಸು ನಿಲ್ದಾಣದಲಿ
ನಾಲ್ಕೆ ತಿಂಗಳುಗಳಲಿ ಆಕಾಶಯಾನ!
ಬಯ್ಕೆಗಳು ತೀರುವುವು ಒಂದೆ ವರ್ಷದಿ; ಉಳಿದ
ನಾಲ್ಕು ವರ್ಷವು ಲೂಟಿ, ಮರುಳಸಿದ್ಧ. (೬೯೦)

---

೨೪. ಇದೇ ಲೇಖಕನು ರಚಿಸಿರುವ ಕುವೆಂಪು ಅದರ ವಿಶ್ವಮಾನವ ಸಂದೇಶವನ್ನು ಓದಬಹುದು.

ಲೂಟಿಯಿಲ್ಲವೆಂದರೆ, ಕೇವಲ ಐದಾರೆಕರೆ ಜಮೀನುಳ್ಳ ತಂದೆಯ ಮಗ ಶಾಸಕನಾದನಂತರ ಸಾವಿರಾರು ಕೋಟಿ ರೂಪಾಯಿಯ ಸರದಾರನಾಗುತ್ತಿದ್ದುದು ಸಾಧ್ಯವೆ? ಸತ್ಯ ನಿಷ್ಠೆ, ಧರ್ಮಶ್ರದ್ಧೆ, ಮಾನವೀಯತೆಯೆಂಬ ಗುಣಗಳು ಅವರಿಗೆ ವಿದೇಶೀಯವಾಗುತ್ತವೆ.

ಮರುಳುಸಿದ್ಧನ ಕಂತೆಯೊಂದು ನೀತಿಕೋಶವೂ ಹೌದು. ಸ್ವಾನುಭವದಿಂದ ಮೂಡಿದ ನೀತಿಗಳ ಜತೆಗೆ, ಗೀತೆ ನೀತಿಶತಕಗಳು ಮತ್ತು ಸುಭಾಷಿತ ಭಂಡಾಗಾರಗಳನ್ನೋದಿ ಪಡೆದ ಅನುಭವ ಸಾರಸಂಗ್ರಹಗಳೂ ಇಲ್ಲಿ ಮೈವೆತ್ತಿವೆ.

ನಿನಗಾಗಿ ಬಯಸುವುದ ಬಯಸು ಸರ್ವರಿಗೆ
ನಿನಗೆ ಬೇಡಾದುದನು ಬಯಸದಿರು ಅನ್ಯರಿಗೆ;
ನಿನಗಿದುವೆ ಬಾಳಿರವು – ಮರುಳಸಿದ್ಧ. (೫೨೩)
ಸುಳ್ಳು ಸಖ್ಯವ ನಟಿಸಿ ಕೊಳ್ಳೆ ಹೊಡೆದವರುಂಟು
ಜೊಳ್ಳು ನಂಟನು ನಟಿಸಿ ಸುಲಿವರುಂಟು.
ಇಲ್ಲದಿಹ ಯೋಗ್ಯತೆಯ ನಟಿಸಿ ಮೆರೆಯುವರುಂಟು
ಖುಲ್ಲರೇಗೈವರೋ– ಮರುಳಸಿದ್ಧ (೫೪೩)
ಅರ್ಥವೂ ಕಾಮವೂ ವ್ಯರ್ಥ ಧರ್ಮವನುಳಿದು (೧೩೫)
ಪಲ್ಲಕ್ಕಿಯೇರಿದರು ಖುಲ್ಲರೆಲ್ಲರ ಚಿತ್ತ
ಪೊಲ್ಲಮೆಯ ಮೇಲೆಯೇ (೧೪೬)
ಒಳಿತೆಂದು ಎದೆಯ ದನಿ ಸಾರಿದರು ಹುಡುಕುವರೆ
ಗಳಿತ ಶಾಸ್ತ್ರಾಧಾರ (೧೯೮)

ವಿಸ್ತಾರವಾದ ನೀತಿಕೋಶದಿಂದ ನಿದರ್ಶನಾರ್ಥವಾಗಿ ಮಾತ್ರ ಕೆಲವನ್ನಿಲ್ಲಿ ಉದ್ಧರಿಸಲಾಗಿದೆ.

ಪುರಾಣಿಕರ ಕನ್ನಡ ಪ್ರೇಮವೊಂದು ಅಕ್ಷಯನಿಧಿ; ದಿನ ಕಳೆದಂತೆ ಅದು ವೃದ್ಧಿಯಾಗುತ್ತದೆ. ನಾಡು ನುಡಿಗಳ ಇತಿಹಾಸವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡದವರು ನಾಡನ್ನು ಕಟ್ಟಲಾರರೆಂಬ ಸತ್ಯವನ್ನು ಎಲ್ಲ ಆಡಳಿತಾಧಿಕಾರಿಗಳೂ ಪುರಾಣಿಕರಿಂದ ಕಲಿಯಬೇಕಾಗಿದೆ.

ನಂಬು ಕನ್ನಡವನ್ನು ನಂಬು ಕನ್ನಡ ಜನವ
ನಂಬು ಕನ್ನಡ ನಾಡ ಭವಿಷ್ಯವನ್ನು
ಕನ್ನಡದ ಮೂಲಕವೆ ಕನ್ನಡಿಗನುದ್ಧಾರ
ಕನ್ನಡದಿ ನಂಬಿಕೆಯನುಳಿಸಿ ಬೆಳೆಸು[೨೫]

---

೨೫. ಕನ್ನಡ ಕುಲ. ಪುಟ.೨೭೬

ಈ ಸತ್ಯವನ್ನರಿಯದ ಕನ್ನಡಿಗರು ಕನ್ನಡನಾಡಿನಲ್ಲಿರಲು ಯೋಗ್ಯರಲ್ಲ. 'ತಾಯ ಬರವು' ಕವಿತೆಯಲ್ಲಿ ವಿವಿಧ ರಾಗಭಾವಗಳ ಉಕ್ಕಂದವನ್ನೆ ಕಾಣಬಹುದು.

ಕಾವ್ಯಾನಂದರ ಕಲ್ಪನಾವಿಲಾಸದ ಗಾರುಡಿಗತನಕ್ಕೆ ಸೋಲದವರಿಲ್ಲ. 'ಜಗವೆ ಕೂಡಲ ಸಂಗಮ'[೨೬]ವೆಂಬ ಕಲ್ಪನೆಯೆ ಅಸದೃಶವಾದುದು:

ಪ್ರಕೃತಿಯೇ ಗುರು ಗಗನ ಲಿಂಗವು
ಜಗವೆ ಕೂಡಲ ಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ
ಇಲ್ಲಿಯ ಜಗತ್ತು ಕನ್ನಡ ನಾಡೆಂದರೂ ಸಲ್ಲುತ್ತದೆ.
ಸರ್ವವೂ ಶಿವನಂಶವೆನ್ನುವ
ಧರ್ಮವೊಂದೇ ಧರ್ಮವು
ಎಲ್ಲರೆಲ್ಲರಿಗಾಗಿಯೆನ್ನುವ
ಜ್ಞಾನವೊಂದೇ ಜ್ಞಾನವು

ಜಗತ್ತಿನ ಎಲ್ಲ ಧರ್ಮಗಳ ಜನರೂ ಅರಿಯಬೇಕಾದ ದರ್ಶನ ದೀಪ್ತಿಯಿದು.

'ಮೊದಲು ಮಾನವನಾಗು' ಎಂಬ ಕವಿತೆಯಂತು ಎಲ್ಲ ಕನ್ನಡಿಗರ ನಾಲಗೆಯ ತುದಿಯಲ್ಲಿರುವ ಮಾಯಾಮಂತ್ರ. ಬ್ರಾಹ್ಮಣನಾಗು, ಕ್ಷತ್ರಿಯನಾಗು, ವೈಶ್ಯನಾಗು, ಹಿಂದೂ ಮುಸ್ಲಿಮನಾಗು, ಚಾರ್ವಾಕನೇ ಆಗು, ಏನಾದರೂ ಆಗು, ಮೊದಲು ಮಾನವನಾಗು ಎಂದವರು ಜಗತ್ತಿನ ಎಲ್ಲ ದೇಶಗಳ ಎಲ್ಲ ಜನರಿಗೆ ಸವಾಲೆಸೆಯುತ್ತಾರೆ. ಮಾನವನಾಗದಿದ್ದರೆ ಪ್ರಧಾನಿಯಾದರೇನು, ಶ್ರೀಮಂತನಾದರೇನು, ತತ್ತ್ವವೇತ್ತನಾದರೇನು? ವೇದ ವೇದಾಂತಗಳನ್ನು ನಾಲಗೆಯ ತುದಿಯಲ್ಲಿಟ್ಟುಕೊಂಡರೇನು? ಮನುಷ್ಯನ ಯಶಸ್ಸು ಆ ಎರಡು ಪದಗಳಲ್ಲಿದೆ; ಪುರಾಣಿಕರೂ ಆ ಎರಡು ಪದಗಳಿಂದಾಗಿ ಅಮರರಾಗಿದ್ದಾರೆ.

ಸಿದ್ಧಯ್ಯ ಪುರಾಣಿಕರ ಸಮಸ್ತ ಕಾವ್ಯವನ್ನು ಅಧ್ಯಯನ ಮಾಡಿದನಂತರ 'ಕಾವ್ಯಾನಂದ' 'ಸಿದ್ಧಯ್ಯ, ಎಂಬ ಕಾವ್ಯನಾಮ ಹಾಗೂ ಜನ್ಮನಾಮಗಳು ಅನ್ವರ್ಥವೆಂದೇ ಹೇಳಬೇಕಾಗಿದೆ. ಸಂಕೇತ, ರೂಪಕ, ಉಪಮೆಗಳಿಂದ ದೇದೀಪ್ಯಮಾನವಾದ, ರವೀಂದ್ರರ ಸ್ಟೇ ಬರ್ಡ್ಸ್ ಸಂಕಲನವನ್ನು ನೆನಪಿಗೆ ತರುವ 'ಕಲ್ಲೋಲ ಮಾಲೆ'ಯ ಪುಟ್ಟ ಪುಟ್ಟ ಪದ್ಯಗಳನ್ನೋದುವಾಗ ಜಗತ್ತನ್ನೇ ಮರೆಯವಂತಾಗುತ್ತದೆ. ಮಾನವಾಂತಃಕರಣಯುಕ್ತವಾದ ರಸವಂತಿಕೆ ಅವರ ಹಲವು ಕವನಗಳಲ್ಲಿ ಕಾಣುವ ಗುಣ. ಮಾನವನ ಹೃದಯದಲ್ಲಿ ಪ್ರೇಮವನ್ನು, ಸ್ವರ್ಗವನ್ನು, ತಾರಾಕ್ಷಿಗಳನ್ನು ಪ್ರತಿಷ್ಠಾಪಿಸುವ ಸಾಮರ್ಥ್ಯ ಅವರ ಕವಿತೆಗಳಿಗಿದೆ.

---

೨೬. ಪುಟ.೧೭೨

ಭವಲೋಕವನ್ನು ಮರೆಯಿಸಿ ಭಾವಲೋಕಕ್ಕೊಯ್ಯುವ ಉಪಮಾರೂಪಕಗಳ ವೈಭವಕ್ಕೆ ಯಾರಾದರೂ ಬೆರಗಾಗಲೇಬೇಕು. ಅವರನ್ನು ಉಪಮಾಲೋಲ ಎಂದು ಕರೆದರೂ ತಪ್ಪಾಗದು. 'ನೆನಪು ಅಲೆಯುತಿತ್ತು ಅತ್ತ ಇತ್ತ' 'ಬೆಳಗಬನ್ನಿ ತೊಳಗುತ್ತಿರುವ ಕಣ್ಗಳಿಂದ ಆರತಿ', 'ಅನಂದದ ಅರವಟ್ಟಿಗೆ ಸೌಂದರ್ಯದ ಸೆಲೆಯ', 'ಮೋಡದ ಚಪ್ಪರ ಮಿಂಚನ ತೋರಣ'; 'ಹುಬ್ಬು ಹಾರಿಸುತಿಹುದು ಮಿಂಚಿನಲಿ ಮೋಡ' 'ಚಿತ್ತವೊಂದು ಚಾವಡಿ, ಅಲ್ಲಿ ಗಲಭೆ ಗಡಿಬಿಡಿ', 'ಮನದ ಮಸಣ'; 'ಮಾನ ರೋದಿಸುತಿಹುದು ವಿಧವೆಯಂತೆ' ನಿದರ್ಶನಾರ್ಥವಾಗಿ ಇವು ಕೆಲವು ಮಾತ್ರ.

ಸತ್ಯ ಸೌಂದರ್ಯೋಪಾಸನೆ, ಪ್ರೇಮಪ್ರಸರಣ, ಧರ್ಮಜಿಜ್ಞಾಸೆ, ಜನಕಲ್ಯಾಣ – ಇವು ಸಾಹಿತ್ಯದ ಗುರಿ. ರಾಷ್ಟ್ರಧರ್ಮ, ನಾಡಧರ್ಮ, ಭಾಷಾಧರ್ಮಗಳನ್ನು ನಡೆನುಡಿಗಳಲ್ಲಿ ಆಚರಿಸಬೇಕಾದ್ದು ಕವಿಯ ಕರ್ತವ್ಯ. ಕೇವಲ ಸೌಂದರ್ಯವರ್ಣನೆ, ವಿನೋದ ಚಾಲನೆಗಳಲ್ಲಿ ಕಾವ್ಯ ತೃಪ್ತಿಗೊಳ್ಳಬಾರದು. 'ದೇಶದ ದೇಶವಾಸಿಗಳ ಸಮಸ್ಯೆಗಳು, ಪ್ರಶ್ನೆಗಳು, ಕಷ್ಟಕ್ಲೇಶಗಳು, ನಗೆ ಹೊಗೆ ಧಗೆಗಳು ಸಂವೇದನಾಶೀಲ ಕವಿಹೃದಯವನ್ನೇ ಕಲಕದಿದ್ದರೆ ಇನ್ನಾರ ಹೃದಯವನ್ನು ಕಲಕಿಯಾವು?' ಎಂಬ ಪುರಾಣಿಕರ ಅಭಿಪ್ರಾಯ ಮೆಚ್ಚಬೇಕಾದ್ದೇ. ತಾವು ರೂಪಿಸಿದ ಕಾವ್ಯನೀತಿಯನ್ನವರು ತಮ್ಮ ಕೃತಿಗಳಲ್ಲಿ ಜಾರಿಗೊಳಿಸಿದ್ದಾರೆ. ಹೊಸ ಹೊಸ ಕಲ್ಪನೆಗಳು, ಹೊಸ ಹೊಸ ಉಪಮಾನ ರೂಪಕಗಳು, ಹೊಸ ಹೊಸ ಛಂದಸ್ಸಿನ ಲಾಸ್ಯತಾಂಡವಗಳು, ವಿನೂತನ ಶಬ್ದ ಮಾಧುರ್ಯ ಲಾಲಿತ್ಯಗಳಿಂದೊಡಗೂಡಿದ ಮೋಹಕ ಶೈಲಿ, ನೂತನ ಭಾವಾನುಭಾವ ಚಿಂತನಗಳು, ಸಾಮಾಜಿಕ ಪ್ರಜ್ಞೆ – ಇವು ಪುರಾಣಿಕರ ಕಾವ್ಯಗಳಲ್ಲಿ ಕಾಣುವ ವೈಶಿಷ್ಯಗಳು.

ಕಾವ್ಯಾನಂದರ ಸಾಹಿತ್ಯದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಮಹಾ ಪ್ರಬಂಧಕಾರರ ಪೂರ್ಣಾಧ್ಯಯನದಿಂದ ಮಾತ್ರವೇ ಅವರ ಕೃತಿಗಳಿಗೆ ನ್ಯಾಯ ಸಲ್ಲಿಸಲು ಸಾಧ್ಯ. ತಮ್ಮ ಸಮಗ್ರ ಕಾವ್ಯವನ್ನು ಪ್ರಕಟಿಸುವಲ್ಲಿ ಅಪಾರ ಶ್ರಮವನ್ನು ವಹಿಸಿರುವ ಶ್ರೀ ಪಿ.ಕೆ. ಪುರಾಣಿಕರಂಥ ಪುತ್ರರತ್ನವನ್ನು ಪಡೆದ ಸ್ವರ್ಗವಾಸಿ ತಂದೆಯೇ ಧನ್ಯ !

ಹೊಗಳಿಕೆಯ ಹೂಹಾರ ಉರುಲಾಗದಿರಲೆನಗೆ;
ತೆಗಳಿಕೆಯ ಮುಳ್ಳುಗಳೆ ಕವಚವಾಗಿರಲಿ!
ಸೊಗ ದುಗುಡ ನಗೆ ಧಗೆಯ ಲಾಭ ಹಾನಿಗಳನ್ನು
ಬಗೆಯದಿಹ ಬಗೆಯಿರಲಿ – ಮರುಳಸಿದ್ಧ (೮೦೦)

ನಡೆನುಡಿಗಳಲ್ಲಿ ಎಂದೂ ಬಿರುಕಿಲ್ಲದ ಅವರ ಈ ಜೀವನಧ್ಯೇಯ ಎಲ್ಲ ಭಾರತೀಯರ ಜೀವನಧ್ಯೇಯವಾಗಿರಲೆಂದು ಕನಸುತ್ತು, ಆ ಮಹಾನುಭಾವರ ಹಾರೈಕೆಯ ಉದ್ಧರಣೆಯೊಂದಿಗೆ ಈ ನನ್ನ ಕೆಳನುಡಿಯನ್ನು ಮುಗಿಸುತ್ತೇನೆ.

ಬರಲಿ ಬಡವರ ಯುಗವು, ಬರಲಿ ದುಡಿವಗೆ ಸೊಗವು
ಮುರಿದು ಬೀಳಲಿ ಅವರ ಹೆಗಲ ನೊಗವು !
ಕರಿಕಾಗಿ ಹೋಗಲಿ ಮೇಲು ಕೀಳುಗಳೆಲ್ಲ !
ಹರಡಲಿ ಸಮಾನತೆಯು – ಮರುಳಸಿದ್ಧ (೮೦೩)

ಯುಗಯುಗಗಳ ಹಗೆಯು ಹೋಗಿ ಸೊಗದಿ ಬರಲಿ ಸಖ್ಯವು
ದೇಶ ದೇಶದಲ್ಲಿ ದುಃಖ ಹಿಂಗಿ ಬರಲಿ ಸೌಖ್ಯವು
ದ್ವೇಷ ರೋಷವಳಿದು ಬರಲಿ ಮನುಜಕುಲದ ಐಕ್ಯವು
ಸತ್ಯ ಪ್ರೀತಿ ಶಾಂತಿಯಕ್ಕೆ ನಮ್ಮ ಭರತ ವಾಕ್ಯವು (ಪುಟ ೧೩೯)

ಪರಿವಿಡಿ

ಪ್ರಕಾಶಕರ ಮಾತು III - IV

ಮುನ್ನುಡಿ V - XX1

೧ ಜಲಪಾತ

ಜಲಪಾತ / ೪

ಅಬ್ಬರದ ತಡಸಲು / ೪

ಮಾನವ ಸಮಾಜ / ೫

ಬರುತಿದೆ ಬಡವರ ಯುಗ / ೮

ನಿನ್ನಿರವೆ ನರಕ ಬಡವ / ೯

ಬೆಟ್ಟದುರಿ / ೧೧

ಬಡಜನರ ದುಃಖವೇ ಬರಸಿಡಿಲು

ಧನಿಕ / ೧೪

ನವಯುಗ ಲಕ್ಷ್ಮಿ / ೧೬

ಏಷ್ಯಾ / ೧೯

ಸಲಾಮ್ ಸಾಬ್ / ೨೦

ಏಳ್ಕೋಟಿಗೇಳ್ಕೋಟಿ
ಗೇಳ್ಕೋಟಿಗೋ ! / ೨೩

ಬಾ ದುಃಖವೆ / ೨೫

ಬಾಣದ ತಡಸಲು / ೨೬

ಬಿಂದು ಸಿಂಧು / ೨೭

ದೇಹ–ಆತ್ಮ / ೩೦

ಕಾಯಕ (ಪ್ರೇಮ–ಕರ್ಮ) / ೩೩

ಜ್ಞಾನ–ಪ್ರೇಮ / ೩೪

ಸೌಂದರ್ಯ–ಪ್ರೇಮ / ೩೬

ಜ್ಞಾನ–ಕರ್ಮ / ೩೭

ಧನ್ಯ ಭಾರತ / ೩೯

ಸ್ವಾಗತವು ಸ್ವಾತಂತ್ರ್ಯ ದಿನವೆ ! / ೪೧

ಧನ್ಯಮೀ ದೀಪೋತ್ಸವಂ / ೪೩

ಕನ್ನಡದ ದೀಪವದು
ಕಾಣದಿಹುದು / ೪೪

ಕನ್ನಡದ ಬೆಳೆ / ೪೬

ತಾಯ ಬರವು / ೪೭

ಜನಜೀವನ ಜಾಹ್ನವಿಗೆ / ೪೯

ಆತ್ಮ ಪಕ್ಷಿ / ೫೦

ಮುಸುಕು ತೆರೆ / ೫೨
ರಾಜಾರಾಣಿ / ೫೫
ಆಗತಾನೆ / ೫೬
ನಿನ್ನ ನೋಡಿ ಬಂದ ಮೇಲೆ / ೫೭
ಏನಿದ್ದೆ ಏನಾದೆ ನಿನ್ನ ನೋಡಿ / ೫೯
ಇಜ್ಜೋಡು / ೬೧
ಆಸೆ / ೬೨
ಬಾಳು ಕಹಿಯಾದರೂ ನೆನಹು ಕಹಿಯಲ್ಲ / ೬೪
ಶಂಕಾ ಸಮಾಧಾನ / ೬೫
ಹೊಸ ಹೆಂಡತಿಗೆ / ೬೮
ಹೊಸ ಗಂಡನಿಗೆ / ೭೨
ನನ್ನ ನಲ್ಮೆಯ ಲಕ್ಷ್ಮಿ / ೭೪
ಎರಡು ಚಿತ್ರಗಳು / ೭೫
ಕಿವಿ ಮಾತು / ೭೭
ಮನೆಯಿಂದ ಹೊರಡುವಾಗ / ೭೮
ಸಮರಸ / ೭೯

೨ ಕರುಣಾ ಶ್ರಾವಣ

ಸಾರುತಿದೆ ಸೃಷ್ಟಿ / ೮೩
ಮಂದಾನಿಲ ಉವಾಚ / ೮೪
ಬಾಳಹೊತ್ತಗೆ / ೮೪
ಕಲ್ಪನಾ ವಿಲಾಸ / ೮೬
ಭಾವಸುಂದರಿ / ೮೮
ರಸ / ೮೯
ಕವಿತೆಗೆ / ೯೦
ಬಾರೆ ಮಧುರ ಗಾನದೇವಿ / ೯೨
ಬಳ್ಳಿಯ ಬಿನ್ನಪ / ೯೩
ನೀಲ ಕಮಲ / ೯೪
ಯಾರಿವಳು? / ೯೫
ಕಲೆಗಾರ / ೯೬
ಸವಿನೋವು / ೯೭
ಆತ್ಮನಿಗೆ ಆಹ್ವಾನ / ೯೮
ಬೆಳಗು / ೯೯
ಹೂ / ೧೦೧
ಸರಸಿಯ ಮೇಲೆ ಸೂರ್ಯೋದಯ / ೧೦೧
ಕವಿಕುಸುಮ / ೧೦೩
ಪ್ರಾಣಪುಷ್ಪ / ೧೦೫
ಮೋಡ / ೧೦೬
ಬಾನಬಿಲ್ಲು / ೧೦೭
ಮಳೆ / ೧೦೭
ಮೀನ / ೧೦೮
ಕಾಶ್ಮೀರದಲ್ಲಿ ಕಾರ್ಗಾಲ / ೧೧೦
ಎಲೆಯುದುರಿ ನಿಂತರೂ ಒಣಗಿಲ್ಲ ವನವು ! / ೧೧೨
ಸ್ಮರಸಖನ ಬರವು / ೧೧೪
ಯುಗಾದಿ / ೧೧೬
ಬಂದಿದೆ ಬಾ ಹೊಸದಿನ ! / ೧೧೮

ಕಂಡೊಲಿವ ಕಣ್ಮನಕೆ / ೧೨೦
ಭೂಗೋಲ–ಖಗೋಲ / ೧೨೧
ಬಾ ನನ್ನೀ ತೋಟಕ್ಕೆ ! / ೧೨೨
ಕೋಲಾಟ / ೧೨೪
ತೆರೆ ತೆರೆ / ೧೨೫
ವೈತಾಳಿ ಗಾಳಿ / ೧೨೭
ಕಾಡಿನ ಹಾಡುಗಾರರು / ೧೨೮
ತಾಜಮಹಲು / ೧೩೦
ಕಲೆಯ ಕೈಲಾಸ / ೧೩೨
ಪೂರ್ವಾಂಗನೆ
ಪಶ್ಚಿಮಾಂಗನೆಗೆ / ೧೩೫
ಸೇತುವೆಯ ಮೇಲೆ
ಸೂರ್ಯಾಸ್ತ / ೧೩೬
ಸಂಧ್ಯಾಚಿತ್ರ / ೧೩೮
ಚಿಕ್ಕೆ / ೧೩೯
ಕಾಲಭೈರವ / ೧೪೦
ಆರಿಲ್ಲ ಈವರೆಗೆ
ಆಶಾಪ್ರದೀಪ ! / ೧೪೧
ಜನುಮಜನುಮದ ಜಾತ್ರೆ / ೧೪೩
ಪಥಿಕ / ೧೪೪
ಕರುಣಾಶ್ರಾವಣ / ೧೪೫

೩. ಮಾನಸ ಸರೋವರ

ವಿಂಧ್ಯಾದ್ರಿಯ ಮೇಲೆ
ಚಂದ್ರೋದಯ / ೧೫೫
ಕವನ ಜನನ / ೧೫೬
ಎದೆಯ ತೋಟ / ೧೫೭
ಸಿವ–ಸುಗ್ಗಿ / ೧೫೮
ಏಕೆ ನಕ್ಕೆ ? / ೧೬೦
ಏಕೆ ಅತ್ತೆ / ೧೬೧
ಬಯಲಾಟ / ೧೬೨
ಅಂತರಂಗದ ಅಂತರಿಕ್ಷದಿ / ೧೬೪
ಬೆಂಗಳೂರ ಹುಡಿಗೆ / ೧೬೬
ಕಣ್ಣು ಮುಚ್ಚಾಲೆ / ೧೬೭
ರೂಪ / ೧೬೮
ಮಾನಸಕೆ ಮೊರೆ / ೧೬೯
ಜಗವೆ ಕೂಡಲ ಸಂಗಮ / ೧೭೨
ಮೈಮುರಿದು ಮೇಲೇಳು / ೧೭೩
ಚರಣ ಚಿಹ್ನ / ೧೭೪
ಉತ್ತರ / ೧೭೫
ಹೃದಯದ ಹುಲ್ಲೆ / ೧೭೭
ಬರಲಿಲ್ಲ / ೧೭೮
ದೂರವಿಲ್ಲ / ೧೭೮
ಜೀವ–ಜಡ / ೧೭೯
ನೌಕೆ–ನಾವಿಕ / ೧೮೧
ನಾನಾರು ? / ೧೮೨
ಶಂಕೆಯ ಬೆಂಕಿ / ೧೮೩
ಬಾ ಪ್ರೇಮ ಪೂಜಾರಿ / ೧೮೪
ವೃಂದಾವನ / ೧೮೬

ಒಂದು ಚಿತ್ರ / ೧೮೭
ಇನ್ನೊಂದು ಚಿತ್ರ / ೧೮೮
ಚಿತ್ತವೊಂದು ಚಾವಡಿ / ೧೮೯
ಕೋವಿಯ ಕೋರಿಕೆ / ೧೯೦
ಸರದಾರಗೆ ಶ್ರದ್ಧಾಂಜಲಿ / ೧೯೩
ನಮನ / ೧೯೫
ಕನ್ನಡದ ದೀಪ / ೧೯೬
ಸೂರ್ಯ ಮುಳುಗಿದ ಸ್ಥಳ / ೧೯೮
ಏತಕಿಲ್ಲ ? / ೧೯೯
ಜಮಾ ಖರ್ಚು / ೨೦೧
ದೊಡ್ಡ ಬೆಟ್ಟ / ೨೦೨
ಒಮ್ಮೆ ಕೋಗಿಲೆ ಕೂಗಲು / ೨೦೪
ನೀನಿಲ್ಲದಾಗ / ೨೦೫
ಹೊತ್ತಿಸು / ೨೦೭
ಮನದ ಮಸಣ / ೨೦೮
ವೃಕ್ಷರಾಜ / ೨೧೩
ಕುರುಡು ದೈವಕ್ಕೆ / ೨೧೫
ರಾಷ್ಟ್ರ ರಾಜೇಶ್ವರಿ / ೨೧೬
ಸ್ವಾತಂತ್ರ್ಯದ ಸಪ್ತ ವರ್ಷಗಳು / ೨೧೮
ಮಾನಸ ಸರೋವರ / ೨೨೨

೪ ಕಲ್ಲೋಲ ಮಾಲೆ

೨೨೫–೨೬೦

೫ ಮೊದಲು ಮಾನವನಾಗು

ಅಸಹಜವೇನಲ್ಲ ! / ೨೬೩
ಬಿಡುಗಡೆಯ ಬದುಕಿನಲ್ಲಿ ನಚ್ಚಿರಲಿ ! / ೨೬೩
ಒತ್ತು ಗುಂಡಿಯ ಮೇಲೆ ಬೆರಳು ! / ೨೬೪
ಅವಿಭಕ್ತಂ ವಿಭಕ್ತೇಷು ! / ೨೬೭
ಯುದ್ಧಸ್ಯ ! / ೨೬೯
ಕೈಗೆ ಬರಲಿ ಕೋವಿ ! / ೨೭೨
ಮರಗೂಳುಣಿ ! / ೨೭೪
ಕನ್ನಡ ಕುಲ ! / ೨೭೬
ತುಂಗಭದ್ರಾ ಜಲಾಶಯ / ೨೭೭
ನಮ್ಮ ಮನೆಯಲ್ಲಿಯೇ ಹೆರವರಾದೆವು ನಾವು ! / ೨೭೯
ಹೃದಯ ನಿಕ್ಷೇಪ / ೨೮೦
ನೋಟ / ೨೮೦
ತಾಜ ಮಹಲು / ೨೮೨
ಒಂಟಿ ನಕ್ಷತ್ರ ! / ೨೮೨
ಕಾಲದ ಕರೆ / ೨೮೪
ಬೇಡುವೆನಿದನೆ..... / ೨೮೪
ಕೊಟ್ಟು ಬಿಡು ಕಾಲ ! / ೨೮೬
ಕೆಸರಾಟ / ೨೮೮
ಋಣ–ಸ್ಮರಣ / ೨೯೦
ರಾಜಘಾಟ / ೨೯೦
ಕಂಡೆ ಅನ್ಯದಿ ನನ್ನನು ! / ೨೯೨

ಒಂದು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ ! / ೨೯೨
ಎಣ್ಣೆ ಮಜ್ಜನ / ೨೯೪
ಪೀತಾಂಬರ / ೨೯೫
ನೆನಪಿನ ಒನಪು / ೨೯೭
ಹೇಗೆ ಸಾಗುವುದು ಹೇಳುವಿಯಾ? / ೨೯೮
ಹಸಿರು ಹರಿದು ಬಂತು / ೨೯೯
ಮೊರೆ / ೩೦೧
ಬದುಕಗೊಡಿ, ನನ್ನನೂ ಬದುಕಗೊಡಿರಿ ! / ೩೦೨
ನಿಂತು ಮುಂದೆ ಸಾಗು / ೩೦೩
ಸಹೃದಯನಿಗೆ / ೩೦೭
ಕೆಮ್ಮಣ್ಣಗುಂಡಿ / ೩೦೮
ಕವಿ ರವಿ / ೩೦೯
ಕುರುಡಿ / ೩೧೦
ಯಾರೋ ಹೇಳಿದರು? / ೩೧೧
ಇದೂ ಒಂದು ಸುದ್ದಿ ! / ೩೧೫
ಬಾಗಿಲನು ತೆರೆಯೊ ! / ೩೧೭
ಮಾಡಿಸು ಶಕ್ತಿ ಸ್ನಾನ ! / ೩೧೮
ಭಾವದ ಲಕ್ಷ್ಮಿಯೆ ಬಾರಮ್ಮ ! / ೩೧೯
ಪಾಲುಂಡು ಮೇಲುಂಬರೆ ?/ ೩೨೦
ಬಸವನ ಬೆಳಕೆ / ೩೨೨
ಮೊದಲು ಮಾನವನಾಗು ! / ೩೨೪

೬ ಚರಗ

ಆಯ್ತು ಜಗವೆ ಪವಿತ್ರವು ! / ೩೨೯
ಎಡೆಯೂರ ಆತ್ಮಶ್ರೀ / ೩೩೦
ಅಜೇಯವಾಗು ಭಾರತ ! / ೩೩೧
ಏಕೆ ಮನೆಯೇ ಬೇಗ ಬಿರುಕು ಬಿಟ್ಟೆ ? / ೩೩೩
ಅವಿಭಾಜ್ಯವಿರಲಿ ದೇಶ : / ೩೩೫
ಸೈಪಿನ ಸೊಮ್ಮನಿತ್ತು ಗೆಲಿಸು ! / ೩೩೬
ಎರಡು ರಾಜ್ಯಗಳಿಗೆ ಒಂದೇ ರಾಜಧಾನಿ / ೩೩೮
ನಾವು ನಿರಾಶ್ರಿತರು ! / ೩೩೯
ಏ ಬಡತನವೇ, ಹೊರಟುಹೋಗು ! / ೩೪೩
ಹಣ ಹಣತೆಗಳ ಹಬ್ಬವೆ / ೩೪೭
ದುಡಿವ ಕೈಗಳಿಗೆ ನಮೋ ನಮೋ / ೩೪೯
ಇದೇ ಶುಭ ಗಳಿಗೆ / ೩೫೦
ಜೀರ್ಣೋದ್ಧಾರ / ೩೫೧
ರಾಯ್‌ಬರೇಲಿ ರೈತರ ಹಾಡು / ೩೫೨
ಹೆಗಲು / ೩೫೫
ಹೊಕ್ಕು ತುಂಬುವ ಬಾವಿ / ೩೫೭
ಮಂತ್ರಿಯ ಮನವಿ / ೩೬೦
ಬೆಲೆ ಪಟ್ಟಿ / ೩೬೨
ಉಗ್ರಾಣ / ೩೬೪

ನಾಯ ಜಗಳ / ೩೬೫
ನಾಯಿಗಳು / ೩೬೬
ದಲಿತ ಡಮರು / ೩೬೭
ಕತ್ತರಿ / ೩೬೯
ಪತ್ರಿಯ ಮರದ ಕೆಳಗೆ / ೩೭೧
ಕೋಟೆ ಬಿದ್ದು ಕಂದಕ
ಉಳಿದಿದೆ / ೩೭೩
ಏನಾರ ಕಲೀಬೇಕೆಂತೀಯಾ / ೩೭೬
ಹಾಡುತಿರಲಿ ಹಳ್ಳಿ / ೩೭೮
ಹೊಸ ವರುಷದ ಹೊಸ ದಿನವೆ
ಬೇಕೆ? / ೩೭೯
ಆಸೆಯ ಹೆಣ / ೩೮೦
ಒಂದು ಸೆರೆಮನೆಯಿಂದ ಇನ್ನೊಂದು
ಸೆರೆಮನೆಗೆ / ೩೮೨
ಪುಷ್ಪ ಪ್ರಶ್ನೆ / ೩೮೩
ಕನ್ನಡಿಯ ಬಿನ್ನಪ / ೩೮೩
ವಾಹನಗಳೆ ನಿಲ್ಲಬಹುದು / ೩೮೪
ನಾಚು ಪ್ರಿಯೆ / ೩೮೫
ಇನ್ನುಳಿದ ದಿನಗಳನು / ೩೮೭
ಕರುಳ ಬಳ್ಳಿ / ೩೮೮
ತಂಗಳಾನೇ ತಿನಿಸು / ೩೮೯
ಮೈತ್ರಿ–ಚೈತ್ರ / ೩೯೦
ನಾನೀಗೇನ ಮಾಡ್ಲಿ? / ೩೯೧
ಕಾವ್ಯಾನಂದ
ಕಾಣೆಯಾಗಿದ್ದಾನೆ / ೩೯೩
ಚರಗ / ೩೯೫

೭ ಹಾಲ್ದೆನೆ

ಎನಿತೀ ನೋಟದ ಸವಿ: / ೩೯೯
ನಭದ ನೀಲಿಯ–ರೂಪಕ / ೩೯೯
ದಾಸ್ಯ ಪಂಕದಿಂದೆದ್ದ ಪದ್ಮ / ೪೦೦
ಕಂದರದೀ ಬಟ್ಟಲದಲಿ
–ರೂಪಕ / ೪೦೧
ಇದೇನಿದು? ಇದೆಂತಾದುದು?–
ರೂಪಕ / ೪೦೨
ಕಣಕಣವು ನವಿಲು ! / ೪೦೩
ಬಾ ಸುಗ್ಗಿ, ನಾನು ಬಿಟ್ಟು –
ರೂಪಕ / ೪೦೪
ಸಿಕ್ಕದೇ ಇವರಿಗೆ
ಶಾಂತಿಜಲ? / ೪೦೪
ಮನೆಯ ಮೋರಿಯಲ್ಲಿರುವ
–ರೂಪಕ / ೪೦೫
ಹಳ್ಳೀಯ ಹಾಡೆಂದು ಹಾಸ್ಯ
ಮಾಡಲು ಬೇಡಿ / ೪೦೬
ಸಾಗರದ ಸಿಂಪುಗಳೆಂದುವು
–ರೂಪಕ / ೪೦೭
ಆಜಿಯನ್ ಲಾಯ / ೪೦೭
ನೆಲದ ಮಣೆಯ ಮೇಲೆ
–ರೂಪಕ / ೪೦೮
ಗುಲಗಂಜಿ ಸಂಜೆಯಿದು
–ರೂಪಕ / ೪೦೯
ಇಲ್ಲೆ ದುಡಿ, ಇಲ್ಲೆ ಮಡಿ ! / ೪೧೦
ಕವಿಯೆ, ನಿನ್ನ ಹಾಡಿಗೆ
– ರೂಪಕ / ೪೧೦

ಕೇಳಿಕೋ ನೀನೆ ನಿನ್ನನ್ನೆ ! / ೪೧೧
ಅಲ್ಲೊಂದು ಇಲ್ಲೊಂದು
– ರೂಪಕ / ೪೧೨
ನೀವೆ ಬೆಳಗಿರಿ ಇಹವ ಮಹದಿ
ನಿಂದು / ೪೧೨
ಕಡಲ ತಡಿಯ ಮಳಲ ಮೇಲೆ
– ರೂಪಕ / ೪೧೩
ಮೌನದರ್ಥ / ೪೧೪
ಕ್ಲೇಶಗಳು ಕೊರೆ ಕೊರೆದು
– ರೂಪಕ / ೪೧೫
ಹಸಿರೆಲೆಗಳೆ – ರೂಪಕ / ೪೧೬
ಇದು ಬೆಂಗಳೂರು ! / ೪೧೭
ಹಾರೈಕೆ ಮಿಡಿಗಾಯಿ
– ರೂಪಕ / ೪೧೮
ಔತಣ / ೪೧೮
ಕ್ಷಿತಿಜ ಕಾರಂಜಿಯಲಿ
– ರೂಪಕ / ೪೧೯
ಬಂದೇ ಬಿಟ್ಟಿತು ದೀಪಾವಳಿ / ೪೧೯
ನೀನ್ಯಾಕೋ ನಿನ್ನ – ರೂಪಕ / ೪೨೦
ನನ್ನಲ್ಲಿ ಹಾಲಿದೆ – ರೂಪಕ / ೪೨೧
ಚಾ ಚೂ ಚೇ ! / ೪೨೨
ಎಂಥ ದೊಡ್ಡ – ರೂಪಕ / ೪೨೩
ತುಳಿದಷ್ಟು ಬೆಳೆಯುತಿದೆ
– ರೂಪಕ / ೪೨೪
ಇಪ್ಪತ್ತೊಂದನೆಯ
ಶತಮಾನಕ್ಕೆ / ೪೨೪
ಎಲ್ಲರಿಗೆ ಇಲ್ಲದುದು
– ರೂಪಕ / ೪೨೫
ತಟದ ತಟಸ್ಥನಿಗೆ
– ರೂಪಕ / ೪೨೬
ಇನ್ನೂವರೆಗೂ / ೪೨೭
ಆಪತ್ತೆ ಅವಕಾಶ
– ರೂಪಕ / ೪೨೮
ತೇಲಾಡತಾವ
– ರೂಪಕ / ೪೨೯
ಸಾಲದ ಜಾಲ / ೪೩೦
ಈ ಮನೆಯ ಇಂಗು
– ರೂಪಕ / ೪೩೧
ಕೆಚ್ಚಲಿನಿಂದ ಕೆನ್ನೀರು
– ರೂಪಕ / ೪೩೧
ಬಿತ್ತು ! / ೪೩೨
ಸೂಳೆಯರ ಆಣೆಗಳ
– ರೂಪಕ / ೪೩೩
ನಾನು ನಿನ್ನ ಪಕ್ಕದಲ್ಲಿಯೇ
– ರೂಪಕ / ೪೩೪
ಇನ್ನೂ ಆಟ ಮುಗಿದಿಲ್ಲ / ೪೩೫
ಯಾರ ಅಪ್ಪಣೆಯೇಕೆ
– ರೂಪಕ / ೪೩೬
ಬುದ್ಧಿ ಕುರುಡಾಗಿಹುದು
– ರೂಪಕ / ೪೩೭
ಬರೇ ಹೆಚ್ಚ ಮಾಡೀವಾ ಕಡಿಮೆ
ಮಾಡಿಲ್ವಾ ? / ೪೩೭

ಈ ಸೃಷ್ಟಿ ಕಮಲ
– ರೂಪಕ / ೪೩೮

ಅಣ್ಣನಲ್ಲಿ ಅರಿಕೆ / ೪೩೯

ತಾರೆಗಳು ಕಣ್ಣು
– ರೂಪಕ / ೪೪೦

ನಿನ್ನ ನಕ್ಷತ್ರ
– ರೂಪಕ / ೪೪೧

ಅಕ್ಕರತೆಯನು ತೊರೆದ
ಅಕ್ಕರಿಗತೆ / ೪೪೨

ನೋವಿನ ಬಳ್ಳಿಯ
– ರೂಪಕ /೪೪೨

ಬುದ್ಧಿಯ ಬರ ! / ೪೪೩

ಇನ್ನಾವ ಆಟವನು
– ರೂಪಕ / ೪೪೪

ಬೆಳಗಲೀ ಭಾರತವು
ಸಗ್ಗವಾಗಿ ! / ೪೪೪

ಎದ್ದೊಡನೆ ಶೂದ್ರಕರ್ಮ
– ರೂಪಕ / ೪೪೫

ಪ್ರಾಣ – ವೀಣೆ / ೪೪೬

ರೇಷ್ಮೆ ಸೀರೆಯನ್ನುಟ್ಟು
– ರೂಪಕ / ೪೪೭

ಕರುನಾಡ ಕಾರಣಿಕ / ೪೪೭

ತಲೆಯಲ್ಲಿ ಜ್ಞಾನವು
– ರೂಪಕ / ೪೪೮

ಗಂಟು ಬಿಚ್ಚು
– ರೂಪಕ / ೪೪೯

ಎಂಥ ಭಾರತವ ಬಿಟ್ಟು
ಹೋಗುವಿರಿ? / ೪೫೦

ತಳಿಯಂತೆ ದನ
– ರೂಪಕ / ೪೫೧

ಒಂದು ಗಂಡಿಗೊಂದು
– ರೂಪಕ / ೪೫೨

ಒಂದಾಗುವ ಎಲ್ಲರೂ ! / ೪೫೩

ಜಳ್ಳನ್ನು ಒಕ್ಕಿ ಒಕ್ಕಿ
– ರೂಪಕ / ೪೫೪

ಯಾವುದೋ ಮೋಹ
– ರೂಪಕ / ೪೫೫

ಸುದ್ದಿ ಬಂದಿದೆ ! / ೪೫೬

ಎಲ್ಲವೂ ರಹಸ್ಯವಿಲ್ಲಿ / ೪೫೭

ಬುದ್ಧಿ / ೪೫೭

ಅಸ್ತಿತ್ವದ ಏಕತ್ವದಿ
– ರೂಪಕ / ೪೫೮

ಏನಿದು ಕವಿತೆಗಳೆ
– ರೂಪಕ / ೪೬೦

ಭಾಗ್ಯದ ಬೆಳ್ಳಿಚುಕ್ಕೆ / ೪೬೦

ಕಮ್ಮರಿಯ ತುದಿಗೆ ! / ೪೬೨

ಪೊಡಮಡುವೆನು ನಿನ್ನ
ಅಡಿಗೆ / ೪೬೪

೮ ಮರುಳಸಿದ್ಧನ ಕಂತೆ

ನಮನ / ೪೬೯

ಕವನ / ೪೭೦

ಭುವನ / ೪೭೨

ಜನನ / ೪೭೯

ಜೀವನ / ೪೮೦
ಮರಣ / ೫೬೧
ಸ್ವದೇಶ ಚಿಂತನ / ೫೬೩
ತಾಯ್ನಾಡ ಸ್ತವನೆ / ೫೭೪
ಆತ್ಮನಿವೇದನೆ / ೫೭೬
ಸ್ವಸ್ತಿ ವಾಚನ / ೫೮೪

೯ ಟಿಪ್ಪಣಿಗಳು / ೫೮೫

ಮರುಳಸಿದ್ಧನ ಕಂತೆ / ೫೮೭
ಕರುಣಾ ಶ್ರಾವಣ / ೫೯೩

೧೦ ಅನುಬಂಧಗಳು / ೫೯೫

ಅನುಬಂಧ ೧ – ಪ್ರಕಾಶಕರ
ಮಾತು / ೫೯೭

ಅನುಬಂಧ ೨ –
ಮುನ್ನುಡಿ / ೫೯೯

ಅನುಬಂಧ ೩ –
ನಿವೇದನೆಗಳು / ೬೧೯

ಅನುಬಂಧ ೪ –
ಡಾ. ಸಿದ್ಧಯ್ಯ ಪುರಾಣಿಕರ ಜೀವನ
ವಿವರ / ೬೨೯

ಅನುಬಂಧ ೫ – ಡಾ. ಸಿದ್ಧಯ್ಯ
ಪುರಾಣಿಕರ ಸಾಹಿತ್ಯಸೂಚಿ / ೬೩೧

ಜಲಪಾತ

ಜಲಪಾತ

ಜಲದಿಂದ ಶಾಂತಿ,
ಜಲದಿಂದ ಶುದ್ಧಿ,
ಜಲದಿಂದ ಶಕ್ತಿ,
ಜಲದಿಂದ ಜೀವ.

* * *

ಸಲಿಲಾಂಶಂ ನಭಕೆಯ್ದಲ್ ಶಬ್ದಂ
ಸಲಿಲಾಂಶಂ ಹರಿಗೆಯ್ದಲ್ ಸ್ಪರ್ಶಂ
ಸಲಿಲಾಂಶಂ ಶಿಖಿಗೆಯ್ದಲ್ ರೂಪಂ
ಸಲಿಲಂ ತಾನೆ ರಸಂ
ಸಲಿಲಾಂಶಂ ಧರೆಗೆಯ್ದಲ್ ಗಂಧಂ
ಸಲಿಲದ ದೆಸೆಯಿಂ ಸಂಧಿಸಲ್ಕೈದುಂ
ಸಲುವುವು ಬುದ್ಧೀಂದ್ರಿಯಗಳ ವಿಷಯಗಳಾಗಿ ವಿಚಾರಿಪೊಡೆ.

ಜಲಪಾತ

ಯಾವ ಕಡಲಿನ ಉಗಿಯೊ ಯಾವ ಸರಸಿಯ ಉಸಿರೊ
ಮೋಡವಾಗಿಹುದೆಲ್ಲಿ ತಂಪುವಡೆದು
ಭಾರವಾಯಿತು ಎಲ್ಲಿ ತೂರಿತಂದಿದು ಯಾವ
ಗಾಳಿಯಿಲ್ಲಿಗೆ ಇದನು ಅರಿವುದರಿದು !
ಸಾರಿಬಂದೆನ್ನ ಮನಶೈಲಶಿಖರಕೆ ಎರಗಿ
ಬಾಳ ರುಚಿ ನಾಲ್ಕರಲಿ ನಾಲ್ಕು ಮುಖವಾಗಿ
ಹಾರಿ ಹರಿಯುತಲಿಹುದು ಹಾಡಿ ಮೊರೆಯುತಲಿಹುದು
ಹಾಡಾಗಿ ಹರಿಯುವುದೆ ಬಾಳ ಸುಖವಾಗಿ!
ಯಾರಿಂದ ಬಂದುದೀ ನೀರೆಂದು ವಿಂಗಡಿಸಿ
ಬೇರೆ ಬೇರಾಗಿದನು ತೋರಿಸಲು ಬಹುದೆ?
ಯಾರ ನೀರಾದರೂ ತನಗಾಗಿ ಆರಿಸಿಹ
ದಾರಿಯೇ ಬೇರೆಯಿರೆ ಎರವಲೆನಬಹುದೆ?

* * *

ಅಬ್ಬರದ ತಡಸಲು

ಧುಮ್ಮಿಕ್ಕಿ ಹಾರುವೆನು ಧೀಂಕಿಡುತ ಓಡುವೆನು
ಎದುರಾದುದನು ಕೊಚ್ಚಿ ಹುಚ್ಚು ಹೊನಲಾಗಿ
ನಿಂತು ಜಾನಿಸೆ ನನಗೆ ಶಾಂತಿಯೆಲ್ಲಿದೆ? ಕ್ರುದ್ಧ–
ರಭಸದಲಿ ಗರ್ಜಿಸುವೆ ನಿಚ್ಚಕನಲಾಗಿ!
ನನ್ನ ಸ್ವಾತಂತ್ರ್ಯವೇ ನನ್ನ ರಾಗದ ಗುಟ್ಟು
ನನಗಿಲ್ಲ ಅವರಿವರ ಕಟ್ಟು ನಿಟ್ಟು
ಎಡರು ಕಂಟಕಗಳನು ತೊಡೆದು ದಾರಿಯ ಕೊರೆವ
ಕಾರ್ಯ ನನ್ನದು, ನಾನು ಆರದಿಹ ಸಿಟ್ಟು
ನಾ ನಿಸರ್ಗದ ಭೇರಿ ಕಾನನದ ತುತೂರಿ
ನಾನು ನಡೆದುದೆ ದಾರಿ, ನಡೆವೆ ಮದವೇರಿ!

ನಾನಿಹೆನೊ ಉಪಕಾರಿ ಇಲ್ಲವೆ ಅಪಕಾರಿ
ನನಗೆ ಸಹ ಗೊತ್ತಿಲ್ಲ, ನಾನು ಮಾರಿ !
ನಾಗೈದ ನಾಶದಲೆ ಮುಂದಿನ ವಿಕಾಸವಿದೆ
ನಾನಿಹೆನು ಗತಯುಗದ ಜನ್ಮವೈರಿ
ನನ್ನ ಬರಿ ಜರೆಯದಲೆ ನನ್ನ ವಶಪಡಿಸಿಕೊಳಿ
ಮಾಡಿನೋಡಿರಿ ನನ್ನ ಶಕ್ತಿ ಫಲಕಾರಿ !

* * *

ಮಾನವ ಸಮಾಜ

ರಂಗುರಂಗಿನ ಬೆಡಗ ತೊಟ್ಟು ಜಗದಂಗಳದ
ರಂಗದಲಿ ವಿವಿಧ ಭಂಗಿಯಲಿ ಜನಜಂಗುಳಿಯ
ಅಂಗಗಳ ತುಳಿತುಳಿದು ರಿಂಗಣಗುಣಿಯುತಿಹ
ಓ ಮನೋಹರೆ ಹೇ ಭಯಂಕರೆ
ಓ ರೂಪವತಿ ಎಲೆ ಪಾಪಮತಿ
ನಿಷ್ಕರುಣೆ ನಿರ್ಲಕ್ಷ್ಯ ಮಾನವ ಸಮಾಜ!
ಜನನ ಮರಣದ ತಾಳ ಜೀವನದ ರಾಗಕ್ಕೆ
ಮೃತ್ಯುವಿನ ಮದ್ದಳೆಗೆ ಕಾಲಪುರುಷನ ಗತಿಗೆ
ಸಿಡಿವ ಮಕುಟದ ಸದ್ದು ಯುದ್ಧಗಳ ಗದ್ದರಿಕೆ
ಇತಿಹಾಸಗಳ ಸುಯ್ಲು ಸಂಸ್ಕೃತಿಯ ಶೋಕಕ್ಕೆ
ಕುಣಿವ ಮನೋಹರೆ ಎಲೆ ಭಯಂಕರೆ
ಓ ರೂಪವತಿ ಎಲೆ ಪಾಪಮತಿ
ನಿಷ್ಕರುಣೆ ನಿರ್ಲಕ್ಷ್ಯ ಮಾನವ ಸಮಾಜ!
ಆದರ್ಶವಾದಿಗಳ ಶಿಲುಬೆಗೇರಿಸಿ ಅವರ
ಕನಸುಗಳ ಕುಚ್ಚಿ ಸ್ವಾರ್ಥಿಗಳಿಗುಣಿಪೆ
ಜ್ಞಾನಯೋಗಿಯ ಕೈಗೆ ವಿಷದ ಬಟ್ಟಲ ಕೊಟ್ಟು
ನೀಚ ನರನಾಯಕರ ಮನವ ತಣಿಪೆ
ಧರ್ಮ ಗುರುಗಳ ತತ್ತ್ವಗಳ ರಕ್ತವನೆ ಹಿಂಡಿ
ಸ್ವಾರ್ಥಿ ಸನ್ಯಾಸಿಗಳ ಕಾವಿ ಬಟ್ಟೆಗೆ ತೊಡೆವೆ

ದೇವ ದೇವಿಯರನ್ನು ದನಗಳಂದದಿ ಮಾರಿ
ಪುಂಡ ಪೂಜಾರಿಗಳ ಹೊಟ್ಟೆಗಿಡುವೆ
ಪಾಪಭೀರುಗಳಾದ ಮೂಕ ಜನತೆಯ ಕೊಂದು
ಪಂಚ ಪಾತಕಿಗಳಿಗೆ ಪಕ್ವಾನ್ನ ಗೈವೆ
ದುಡಿವವರ ಹುಡಿಗುಟ್ಟಿ ಹಿಡಿ ಭಂಡವಾಳಿಗರ
ಕೊರಳಮಾಲೆಗೆ ಜನರ ಕರುಳ ಕೊಯ್ವೆ
ಸೂಳೆಗಳ ತೆರದಲ್ಲಿ ಸಿರಿವಂತರನು ತಣಿಸಿ
ಬಡವರಸುಗಳ ರಸವ ಕುಡಿದು ನಲಿವೆ
ರಾಕ್ಷಸೀಲಾಲಸರ ಕ್ರೂರ ತೃಪ್ತಿಯ ನೆವದಿ
ಕೋಟಿ ಜೀವಿಗಳನ್ನು ಕಡಿದು ಕುಣಿವೆ
ಹೊಟ್ಟೆಯುರಿ ಹಿಂಗಿಸಲು ಮೈಯಮಾರುವಳನ್ನು
ನೀತಿಬಾಹಿರಳೆಂದು ನರಕಕ್ಕೆ ನೂಕಿ
ವೇಶ್ಯೆಗಿಂತಲು ಹೇಸಿ ಕೆಲಸ ಮಾಡುವ ಕುಲಜೆ
ನಾಗರಿಕಳೆಂದವಳ ಮುದ್ದಿಸುವೆ ಸಾಕಿ
ನಿನ್ನ ಅನ್ಯಾಯಗಳೆ ದೇವ ನಿಯಮಗಳೆಂದು
ನೀ ಸಮರ್ಥಿಸಿ ಜನವ ಮೋಸಗೊಳಿಪೆ
ಮನುಜಕೃತ ವಿಷಮತೆಗೆ ಪ್ರಕೃತಿ ನಿಯಮದ ಬಣ್ಣ
ಬಳಿದು ಕರ್ಮದ ಕಂತೆ ಸಿದ್ಧಗೊಳಿಪೆ
ಭೂಮಿ ಹವೆಗನುಸರಿಸಿ ಬಣ್ಣ ಬೇರಾಗಿರಲು
ವರ್ಣದ್ವೇಷವ ಬೆಳೆಸಿ ಕೇಕೆ ಹಾಕುತಲಿರುವೆ
ಒಂದೆ ಮಣ್ಣಿನ ಸುತರ ಅಣ್ಣ ತಮ್ಮರ ತೆರದಿ
ಕಾಣದೆಯೆ ನಾಡುಗಳ ಗಡಿ ಹಾಕುತಿರುವೆ
ದೇಶ ಭಾಷೆಯ ಜಗಳ ಧರ್ಮ ಪಂಥದ ಜಗಳ
ವರ್ಣ ವಂಶದ ಜಗಳ ಪುಟಗೊಳಿಸುತಿರುವೆ
ಪ್ರಕೃತಿ ಶಕ್ತಿಯ ಜಯಿಸಿ ಹುಸಿ ಪ್ರಚಾರವ ಬೆಳೆಸಿ
ದಿಟವನ್ನು ಸಟೆ, ಸಟೆಯ ದಿಟಗೊಳಿಸುತಿರುವೆ
ಆತ್ಮಗಳ ಮಾರುತಿಹೆ ಪ್ರೀತಿಗಳ ತೂರುತಿಹೆ
ಬುದ್ಧಿಗಳ ದಲ್ಲಾಲಿ ಹಿಡಿವೆ ಧನಕಾಗಿ

ಕಲೆ ನೀತಿ ಮತ ಶಾಸ್ತ್ರ ವಿಜ್ಞಾನ ವ್ಯಾಪಾರ
ಒಂದಾದರೂ ಬಾಳುತಿಹುದೆ ಜನಕಾಗಿ?
ಕೋಣಗಳ ಮುಂದೆಯೇ ಕಿನ್ನರಿಯ ಬಾರಿಸುತ
ಗಾಯಕನು ಹುಲು ಬಾಳು ಹೊರೆಯಬೇಕು
ಕಾಗೆಗಳ ಬಳಗದಲ್ಲಿ ಕೋಗಿಲೆಯ ತೆರದಲ್ಲಿ
ದಾತ ಹೇಳಿದ ಗೀತ ಕವಿ ಬರೆಯಬೇಕು!
ಮತಶಾಸ್ತ್ರನೀತಿಗಳ ಸ್ಥಿತಿಯ ಬಣ್ಣಿಸಬೇಕೆ?
ಕೊಳೆತು ನಾರುತಲಿಹುವು ಹೆಣಗಳಂತೆ
ವಿಜ್ಞಾನ ದಳಪತಿಯ ದಾಸ್ಯದಲಿ ತಿಣುಕುತಿದೆ
ವ್ಯಾಪಾರಿ ಲಾಭಗುಳಿ, ಹಸಿದ ದನಗಳಂತೆ!
ಮಾನವರು ಹೆಚ್ಚಿದರು ಮಾನವತೆ ಉಳಿದಿಲ್ಲ
ಹೀನತನ ದೀನತನ ದಾರಿದ್ರ್ಯವಳಿದಿಲ್ಲ
ಸ್ವಾತಂತ್ರ್ಯ ಮೊಳೆದಿಲ್ಲ ಸುಖಶಾಂತಿ ಬೆಳೆದಿಲ್ಲ
ಮಾನವ ಪ್ರೇಮವೇ ನಮಗೆ ಹೊಳೆದಿಲ್ಲ!
ಶಾಸ್ತ್ರಗಳ ಮಾರ್ಪಡಿಸಿ ಸ್ವಾರ್ಥಕ್ಕೆ ತಕ್ಕಂತೆ
ಆರ್ತರನು ಸುಲಿಯುತಿಹ ಚಾಂಡಾಲಿಯೆ
ಕಟುಕರಿಗೆ ಸ್ವಾತಂತ್ರ್ಯ ಕೊಟ್ಟು ಸದಯರನೆಲ್ಲ
ಬಂಧನದಿ ಬಿಗಿದಿರುವೆ ಎಲೆ ಕಾಳಿಯೆ
ಇದಕಾರು ಹೊಣೆ ಹೇಳು ಮಾನವ ಸಮಾಜವೆ
ಲಕ್ಷ ವರುಷದವರೆಗೆ ಸಹಿಸಿದೆವು ನಿನ್ನ
ಶತಮಾನ ಕಳೆದರೂ ಸ್ಥಿತಿ ಸುಧಾರಿಸಲಿಲ್ಲ
ಇನ್ನು ಸಹಿಸೆವು ನಾವು ಇಂಥ ಬನ್ನ !
ನೆನಪಿಡು ಸಮಾಜವೆ ನಿನ್ನ ನಿರ್ಲಕ್ಷ್ಯತನ
ಕೊನೆಗಾಣಲೇ ಬೇಕು–ಸಾಗದಿನ್ನು !
ಇದ್ದುದನು ಎಂತೆಂತೊ ಉಳಿಸಿ ಬಾಳುವ ಹೊಂಚು
ನಡೆಯಲಾರದು ಇದಕೆ ಬೇಗ ಶರಣೆನ್ನು !
ಬಂಡಾಯ ಗುಡುಗುತಿದೆ ಮೂಕತೆಯ ಮೋಡದಲಿ
ಪ್ರತಿಭಟನೆ ಪುಟಿಯುತಿದೆ ಅಸ್ಥಿಪಂಜರದಿ

ಸೇಡು ಸಿಡಿದೇಳುತಿದೆ ಸಾಯುತಿಹ ಜನಮನದಿ
ಕ್ರಾಂತಿ ಕಿಡಿಗೆದರುತಿದೆ ನಿನ್ನ ಮಂದಿರದಿ!
ದುಂಖಿತರ ಸುಯ್ಲಿನಲಿ ಸಿಡಿಮದ್ದು ಹಾರುತಿದೆ
ದಾರಿದ್ರ್ಯದುಮ್ಮಳದಿ ಪ್ರಳಯ ಕಾದಿಹುದು
ಅಬಲೆಯರ ಕಣ್ಣೀರು ಕರೆಯುತಿದೆ ಬೆಂಕಿಮಳೆ
ಹಸಿದ ಹೊಟ್ಟೆಯ ಬಿಸಿಗೆ ಭೂಮಿ ಕಾದಿಹುದು!
ಕುರಿಗಳನ್ನು ಕಾಯ್ವುದಕೆ ತೋಳಗಳ ನಿಯಮಿಸಿದೆ
ಕುರಿ ತೋಳಗಳ ಕೊಲ್ವ ಕಾಲ ಬಂತು!
ದೀನತನ ಕಡೆಗೊಮ್ಮೆ ದಾನವತ್ವವ ಮೆಟ್ಟಿ
ಮಾನವತ್ವವ ತರುವ ಕಾಲ ಬಂತು
ನಿನ್ನ ಸರಿಪಡಿಸಿಕೊ ಅನ್ಯಾಯಗಳ ಹೂಳು
ಎಲ್ಲರನು ಸಮನಾಗಿ ಕಾಣು ಬೇಗ
ಇಲ್ಲದಿರೆ ನಿನ್ನನ್ನೆ ಮುರಿದು ಕರಗಿಸಿ ಮತ್ತೆ
ನಮಗೆ ಬೇಕಾದಂತೆ ರೂಪಿಸುವೆವಾಗ!

–೧೯೪೫

* * *

ಬರುತಿದೆ ಬಡವರ ಯುಗ !

ಬರುತಿದೆ ಬಡವರ ಯುಗ ನೆನಪಿಡು ಓ ಧನಿಕ !
ತರುತಿದೆ ನಿನಗೇ ಕ್ಷಯ ನಿನ್ನಯ ಧನಕನಕ !!
ಮಾನವ್ಯದ ನೆಲೆಬೆಲೆಗಳ ಬಾಳಿನ ಸವಿ ಹುರುಳ
ಆತ್ಮದ ಔನ್ನತ್ಯವ ದಯೆ ಕರುಣೆಯೆ ಕರುಳ
ಸಂಸ್ಕೃತಿ ಸುಜ್ಞಾನವ ಕಲೆ ವಿದ್ಯೆಯ ತಿರುಳ
ಮಾರಿದೆ ಧನಲಾಭಕೆ ಏನೆನ್ನಲಿ ಮರುಳ?
ನಿರ್ಜೀವಕೆ ಜೀವದ ಬಲಿ! ಇದು ಎಲ್ಲಿಯ ನ್ಯಾಯ?
ಮಾನವ್ಯವೆ ಮೃತವಾದರೆ ಯಾರಿಗೆ ಈ ಆಯ?
ಧನ ಧಾನ್ಯವು ಸಿರಿಸೌಖ್ಯವು ಜನಜೀವನಕ್ಕಾಗಿ
ಜನತೆಗೆ ಬೇಡಾದುದ ಹುಟ್ಟಿಸುವವನಾಗಿ

ಬಾಳಿಗೆ ಬೇಕಾದುದ ಹುಟ್ಟಿಸದೇ ಹೋಗಿ
ದಹಿಸುತಲಿದೆ ದಾರಿದ್ರ್ಯವು ದಾವಾನಲವಾಗಿ
ಬಾಳಿಗೆ ಬೇಕಾಗದ ಸಂಪತ್ತು ವಿಪತ್ತು
ಅದು ಮಾರಿಯು, ಅದು ಮೃತ್ಯುವು, ಅದುವೇ ಕುತ್ತು!
ಸಿರಿವಂತರ ಸಿರಿ ಹೆಚ್ಚಲಿ ದಿನಗಳೆದಂತೆ
ಬಡ ಹೊಟ್ಟೆಯ ಉರಿ ಹೆಚ್ಚಲಿ ದುಡಿದುಡಿದಂತೆ
ಜಡವಸ್ತುಗಳನೆ ನೀ ಸಂಗ್ರಹಿಸುತ ನಿಂತೆ
ಬಡಬಾಯಿಗೆ ಕೊಡೆ ಕಲ್ಲನು ಏನಾಯಿತು ಸಂತೆ?
ಪ್ರಳಯಾಗ್ನಿಯು ಜಡೆ ಬಿಚ್ಚಿದೆ, ಯಾರದು ಈ ತಪ್ಪು?'
ನಿನ್ನಾಶೆಯು, ಲಾಭದ ಲೋಭವು, ಇನ್ನಾದರು ಒಪ್ಪು!
ದುಡಿವಾಸೆಯ ಬಡ ಜನತೆಗೆ ದುಡಿತವು ಸಿಗಬೇಕು
ದುಡಿದುದರೊಳು ದುಡಿದವರಿಗೆ ಸಮಪಾಲದು ಬೇಕು
ಕೃಷಿ, ಯಂತ್ರವು ವಾಣಿಜ್ಯವು, ಬಾಳಿಗೆ ಬಾಗಲೆಬೇಕು
ಜನತೆಗೆ ಬೇಕಾದುದೆ ಹುಟ್ಟುತಲಿರಬೇಕು
ಹೆಚ್ಚಿನ ಧನ ಹೆಚ್ಚಿನ ಹಣ ರಾಷ್ಟ್ರದ ಆಸ್ತಿ
ಹೀಗಾಗದೆ ಸುಖಶಾಂತಿಯು ಸ್ವಾತಂತ್ರ್ಯವು ನಾಸ್ತಿ!
ಇಂದಿನತನ ಬಂಧನದಲಿ ಕೊಳೆತಿದೆ ಜನಜೀವ
ಮುಂದಿನ ಹೋರಾಟದಿ ತಡೆಯವನದನಾವ ?
ಇನ್ನಾದರೂ ಎಚ್ಚರ, ಬಹು ಎಚ್ಚರ ಓ ಧನಿಕ
ತರುತಿದೆ ನಿನಗೇ ಕ್ಷಯ ನಿನ್ನಯ ಧನಕನಕ!
ಹೊಸ ಲೋಕವ ಕಟ್ಟುವ ಹೊಣೆ ಇಂದಿನ ಬಡವನದು
ಹೊಸಬಾಳನು ರಚಿಸುವ ಹೊಣೆ ನಾಳಿನ ದುಡಿವನದು ॥

–೧೯೪೪

* * *

ನಿನ್ನಿರವೆ ನರಕ ಬಡವ!

ಸಾಮ್ರಾಜ್ಯದಾಹದಲಿ ಸಂಹಾರಯಾತ್ರೆಯನು
ಹೂಡಿಹರ ಕತ್ತಿಯೂ ನಿನ್ನ ಕತ್ತಿನಮೇಲೆ

ನೆತ್ತರಿನ ನೀರಡಿಕೆ ಹಿಂಗಿಸಲು ಕಾಳಗವ
ಮಾಡಿಹರ ಸಾಲವೂ ನಿನ್ನ ನೆತ್ತಿಯಮೇಲೆ
ಸ್ವಾತಂತ್ರ್ಯ ಪಡೆಯಲಿಕೆ ಸೆರೆಮನೆಯ ಸೇರೆಂದು
ಬೋಧಿಪರ ಮುಷ್ಟಿಯೂ ನಿನ್ನ ಹೊಟ್ಟೆಯ ಮೇಲೆ
ಸ್ವಾತಂತ್ರ್ಯ ರಕ್ಷಣಕೆ ಶಸ್ತ್ರಾಸ್ತ್ರ ಕೊಡಿರೆಂದು
ಬೇಡುವರ ದೃಷ್ಟಿಯೂ ನಿನ್ನ ರಟ್ಟೆಯ ಮೇಲೆ
ಲೋಕ ಕಲ್ಯಾಣಕ್ಕೆ ತಪವ ಗೈಯುವೆವೆಂದು
ಬಕಧ್ಯಾನ ಗೈವವರ ಗುರಿಯು ನಿನ್ನಯ ಸುಲಿಗೆ
ನಿನ್ನನುಳಿಸುವೆವೆಂದು ನಿನ್ನನೇ ಸುಲಿಯುತಿಹ
ಅಣ್ಣಗಳ ಸವಿಮಾತು ಕೊನೆಗೆ ನಿನ್ನಯ ಬಲೆಗೆ
ನಿನಗಾಗಿ ಕೊಡನೀರು ಸುರಿವ ಕರುಣದ ಕಣ್ಣು
ನಿನ್ನ ಏಳಿಗೆ ಕಾಣೆ ಕೆಂಡವಹುದು
ನೀ ನೆಲಕೆ ಬಿದ್ದಾಗ ಕುದಿವ ನಂಟಿನ ಕರುಳು
ನೀನೇಳೆ ಕುದಿಯುತಿಹ ಸುಣ್ಣವಹುದು
ಭುಂಜಿಸದೆ ಉಳಿಯುತಿಹ ಎಂಜಲಿನ ಕೂಳನ್ನು
ತಿಪ್ಪೆಯೊಳಗಾದರೂ ಚೆಲ್ಲಬೇಕು
ಗಂಜಿಯೂ ದೊರೆಯದಿರೆ ಎಂಜಲಕೆ ಬಾಯ್ಬಿಡುವ
ದುರ್ದೈವಿ ಮಾನವರನಾಚೆ ನೂಕು
ಹುರುಳಿಲ್ಲದಿಹ ಸಭೆಗೆ ಹೊರೆ ಹೊರೆ ಹಾರಗಳ
ಕ್ಷಣಮಾತ್ರದಲ್ಲಿ ತೊಟ್ಟು ಕೆಡಿಸಬೇಕು
ಗುಡಿಸಲಿಗು ಗತಿಯಿರದ ಬಡ ಹೆಣ್ಣುಗಂಡುಗಳ
ಅರೆಹೊಟ್ಟೆಯುಣಿಸಿಯೇ ದುಡಿಸಬೇಕು!
ತುಣುಕು ಮಿದುಳಿಲ್ಲದಿಹ ಶ್ರೀಮಂತ ಮಕ್ಕಳಿರೆ
ಶಿಕ್ಷಣಕೆ ಲಕ್ಷಗಳ ಸುರಿಯಬೇಕು
ಚೊಕ್ಕಮತಿಯಿದ್ದರೂ ರೊಕ್ಕಕ್ಕೆ ಗತಿಯಿರದ
ಬಡ ಮಕ್ಕಳೆಲ್ಲರೂ ತಿರಿಯಬೇಕು !
ಸಾಯಲಾಗಿಹ ಧನಿಕ ಬಡಕು ದೇಹಕೆ ಜರದ
ಎಣಿಕೆಯಿಲ್ಲದ ಬಟ್ಟೆ ಧರಿಸಬೇಕು.

ಮಿರುಗು ಮೈಯಿದ್ದರೂ ಸಿರಿಯಿರದ ಬಡಜನರು
ಬಿಸಿಲಿನಲಿ ಬೆವರುಮಳೆ ಸುರಿಸಬೇಕು!
ಪಾತಕಿಯು ಇದ್ದರೂ ಸಿರಿವಂತ ನೆಲಹಿಡಿಯೆ
ನೂರಾರು ತಂತಿಗಳು ಓಡಬೇಕು
ದುಡಿದುಡಿದು ಸತ್ತರೂ ಮಡದಿಸುತರತ್ತರೂ
ಬಡವನಳಲದು ಕೊಳ್ಳಕೂಡಬೇಕು!
ಕರುಳಕೊಯ್ಯುವನಿರಲಿ ಸುರಿಯೆ ದಕ್ಷಿಣೆಯನ್ನು
ಶ್ರೀಗಳೂ ಕೈಯೆತ್ತಿ ಹರಸಬೇಕು
ನಡೆನುಡಿಯೊಳೆಚ್ಚೆತ್ತ ಬಡಬ ಹಣ ಕೊಡದಿರಲು
ಬರಿದಲೆಯ ಮೇಲ್ಕಲ್ಲ ಹೊರಿಸಬೇಕು!
ದೇವ ಧರ್ಮಗಳೆಲ್ಲ ದೈವುಳ್ಳವರ ಪಾಲು
ಅಳಲೊಂದೆ ನಿನಗುಳಿದ ಸಿರಿಯು ಬಡವ
ಹೆಚ್ಚು ಹೇಳುವುದೇನು? ನಿನಗೆ ನೀನೇ ಗತಿಯು
ಇಲ್ಲದಿರೆ ನಿನ್ನಿರವೆ ನರಕ ಬಡವ!

–೧೯೪೨

* * *

ಬೆಟ್ಟದುರಿ

(ಒಂದು ರೂಪಕ)

ಹಾ–ಬೆಂಕಿ ! ಬೆಟ್ಟದುರಿ ! ಬಿದಿರು ಬಿದಿರನೆ ಹೊಸೆಯೆ
ಛಿಟ್–ಛಿಟಿಲ್ಲೆನುತೆದ್ದು ದಹಿಸುತಿದೆ ಕಾನನವ !
ನಿರ್ದೋಷಿ ಜೀವಿಗಳು ದಳ್ಳುರಿಯ ನಾಲಗೆಗೆ
ತುತ್ತು ತುತ್ತಾಗುತಿವೆ ! ಚೀತ್ಕಾರ ಧ್ವನಿಯೆದ್ದು
ರೋದನ ಸ್ವರದಿಂದ ಕುಹರ–ಕಂದನ–ಕಣಿವೆ ಮಾರ್ದನಿಯ
ಕುಡುತಲಿವೆ!
ಮುಗಿಲುದ್ದ ಹೊಗೆಯೆದ್ದು ಸುಡುವುದೇನೆಂಬುದದೆ
ಗೋಚರಿಸದಿಹುದು!

ಸಿಕ್ಕಿದುದ ಸುಡುವುದೇ ಗುರಿಯೆಂದು ಸಾಗಿಹುದು!
ವಂಶ ಮಾಡಿದ ಪಾಪ ಧ್ವಂಸಗೊಳಿಸುತಲಿಹುದು ವಿಪಿನವನ್ನೆ!
ಹೂ ಬಿಡುವ ಬಳ್ಳಿಗಳು, ಫಲವೀವ ವೃಕ್ಷಗಳು, ಹಸಿರು ಹುಲ್ಲು,
ಗಿಳಿವಿಂಡು, ಅಳಿದಂಡು, ಕೋಗಿಲೆಯ ಬಳಗಗಳು, ಚೆಲುವ ನವಿಲು–
ಖಗಗಳೂ, ಮೃಗಗಳೂ, ನಗರಾಜನನೆ ನಂಬಿ
ಬಾಳಸಾಗಿಸುತಿದ್ದ ಜೀವಕುಲವೆಲ್ಲವೂ,
ಕಿಡಿಗೆದರಿ ಸುಡುತಿರುವ ಬೆಟ್ಟದುರಿ ಬಾಯ್ಗೆ ಬಲಿಯು !
ಒಂದನೊಂದಾಶ್ರಯಿಸಿ ಮಿತ್ರತ್ವದಲಿಯಿರ್ದ
ಬಿದಿರ ಬಾಂಧವರೇಕೆ ಕೆದರಿದರು ಕದನವನು?
ನೆರೆಹೊರೆಯ ಗಿಡಬಳ್ಳಿ ತಂತಮ್ಮ ಕಡೆಯವಕೆ
ನೆರವನೀಯುತಲಿಹುವು ಉರಿಯ ಹೆಚ್ಚಿಸಲು!
ತಾರುಣ್ಯದಲೆ ಬೀಗಿ ಬೆಳೆದಿದ್ದ ಪೊದೆ–ಕಂಟಿ
ಸೌದೆಯಾಗುತಲಿಹುದು ಸಂಹಾರ–ಜ್ವಾಲೆಯಲಿ !
ಕಾರಣವು ಬಲವಲ್ಲ ! ಒಡಲ ಕಿಚ್ಚೆ ಹೆಚ್ಚಿ
ಕಿಡಿಗೆದರಿ ಸಿಡಿದೆದ್ದು ಅನ್ಯರನು ತನ್ನವರ–
ನೆಲ್ಲ ನೆಕ್ಕುತಲಿಹುದು! ಸುತ್ತು ನಾಲಗೆ ಚಾಚಿ
ನುಂಗುವುದೆ ಇದರ ಗುರಿ! ನಾಶವೇ ನಿಜ ಧ್ಯೇಯ !
ಸೌಖ್ಯವನು ತುಳಿದೊರಸಿ, ಸೌಂದರ್ಯವನು ಕೊಂದು
ಮಸಣವನು ಕಟ್ಟುವುದೆ ಇದರ ಕಜ್ಜ!
ನಿರ್ದೋಷಿ ಪ್ರಾಣಿಗಳ ಪ್ರಾಣಗಳ ಕುಡಿಕುಡಿದು
ಶೂನ್ಯವನು ಬಿತ್ತುವುದೆ ಇದರ ಆದರ್ಶ !
ಬೆಂಕಿ ಹೆಚ್ಚಾಯ್ತು....! ಕಾಡಿದಕೆ ಸಾಲದು...! ಸೌದೆ ಸಾಕಾಗದು!
ಬೆಟ್ಟದೆದೆ ಬಿರಿಯುತಿದೆ ಬಿದಿರ ಬಸಿರಿನೊಳೆದ್ದ ಬಲ್
ಬೇಗೆಯಿಂದ !

"ಓ ಗಾಳಿ–
ಬಿರುಗಾಳಿ–ಮಾಯಾವಿ! ಮೃದು ಸಮೀರಣನಾಗಿ
ಬೀಜದಿಂದಂಕುರವ, ಅಂಕುರದಿ ಸಸಿಯನ್ನು,

ಸಸಿಯಿಂದ ಪೆರ್ಮರವ ಬೆಳೆಸಿ ಫಲಗಳ ತರಿಸಿ
ಬಳ್ಳಿಗಳ ತಳ್ಕೈಸಿ ಹೂದಂಡೆಗಳ ಮುಡಿಸಿ
ಲೀಲೆಗೈಯುತಲಿದ್ದ ನೀನಿಂದು ರೋಷದಲಿ
ಬಿದಿರ ಬಳಗದಿ ಕಲಹಕಾಳಕೂಟವನುಗುಳಿ
ಬೆಂಕಿಯೋಕುಳಿಯಾಡಿ ಮರಣಗೀತೆಯ ಹಾಡಿ
ಸಂಹಾರ ನೃತ್ಯವನು ಗೈಯುತಿಹೆಯೇಕೆ?
ಓ, ನಿಷ್ಕರುಣಿ, ನಿರ್ದಯೀ, ಪಾಶವೀ ಪವನವೆ !
ಬೆಟ್ಟದಲಿ ಬನ ಬೆಳೆಸಿ, ಬನದಲ್ಲಿ ತರತರದ
ಪಶುಪಕ್ಷಿಗಳ ಸಾಕಿ, ಗುಡಿಸಲುಗಳನು ಹಾಕಿ
ಕಾಡು ಜನರನು ಪೊರೆದು ಇಂದವರ ಮುರಿಮುರಿದು
ಕಲ್ಲೆದೆಯ ಕಟುಕನೊಲು ಬೇಟೆಯಾಡುವಿಯೇಕೆ?"

"ಕವಿಯೆ–

ಒಮ್ಮೆ ಕಟ್ಟಿದ ಮನೆಯು ಮುರಿದು ಬೀಳುವ ಮೊದಲೆ
ನಾವೆ ಕೆಡಹುವುದೊಳಿತು ! ಒಮ್ಮೆ ನೆಟ್ಟಿಹ ಮರವು
ಬಿರಿದು ಬೀಳುವ ಮೊದಲೆ ನಾವೆ ಕಡಿಯುವುದೊಳಿತು!
ಜೀವನಕ್ಕೆ ಉಪಯೋಗಿಯಾಗಿ ಬಾಳುವವರೆಗೆ
ಬಿದಿರ ಮೆಳೆಯನ್ನು ಹೊರೆದೆ ತಂಗಾಳಿಯಲಿ ತೂಗಿ !
ಇಂದದಕೆ ಬಂದಿಹುದು ಅಳಿಗಾಲ! ಮೇಲು ಮೇಲಕೆ ಬೆಳೆದು,
ಸಸಿಗಳನು ಕೆಳಗೊತ್ತಿ, ಭೂಮಿಯೊಳಸತ್ವವನು
ಹೊಟ್ಟೆ ಬಿರಿಯುವವರೆಗೆ ಹೀರಿ, ತಣಿವಾಗದೇ,
ಅನ್ಯರುತ್ಕರ್ಷವನು ಸೈರಿಸದೆ, ಸಾಯುತಿವೆ ಬಲಿತ ಬಿದಿರು !
ಮೇಣೆ ಮಾಡಲು ಇಲ್ಲ–ಕೋಣೆ ಕಟ್ಟಲು ಇಲ್ಲ,
ಏತಕೂ ಉಪಯೋಗವಿಲ್ಲವಷ್ಟೇ ಅಲ್ಲ–
ಅಳಿಲು ನವಿಲುಗಳುಳಿದು ಸರ್ಪ–ಸಿಂಹಗಳನ್ನು
ಸಾಕಿ ಬೆಳೆಸುತಲಿಹವು ! ಎದೆಯ ನಡುಗಿಸುವಂತೆ
ಭೀಷಣತೆಯಲಿ ಬೆಳೆದು ಅನ್ಯರಿಗೆ ಭಯಕಾರಿ–
ಯಾಗಿ ಗರ್ವದಿನಿಂತು ಕೊಬ್ಬಿದೀ ಮೆಳೆಯನ್ನು

ಕಲಹಾಗ್ನಿಯೊಳು ಸುಟ್ಟು ಹೊಸ ಬೆಳೆಯು ಚಿಗಿಯಲ್ಕೆ
ಹಾದಿಯನು ಮಾಡಿಹೆನು! ಈ ಕಜ್ಜದೊಳು ದೋಷ
ವಿನಿತಿಲ್ಲದಿಹ ಜೀವರಾಶಿಗಳು ಸುಡಬಹುದು!
ಆದರದು ಅನಿವಾರ್ಯ! ಮುಂಬರುವ ಹಿರಿದುಃಖ
ತಡೆಯಲಿಕೆ ಈ ದುಃಖ ಅನುಭವಿಸಲೇಬೇಕು!"
"ಓ ಗಾಳಿ, ಬಿರುಗಾಳಿ, ದೆವ್ವಗಾಳಿ!
ಸುಟ್ಟು ಸಗ್ಗವ ಕಟ್ಟಿ ಬೆಟ್ಟದುರಿ ಹೊತ್ತಿಸಿದೆ–
ನೆಂಬ ನುಡಿ ನಿಜವಿರಲು ಸುಡು ಸಿಕ್ಕುದನೆ ಕೈಗೆ !
ನಿರ್ದೋಷಿ ಯಾರು ನಿಜ ಪಂಚಪಾತಕಿ ಯಾರು
ಎಂಬ ಪ್ರಶ್ನೆಗೆ ಸಮಯವಿಲ್ಲದಿರೆ ಸುಡು–ಸಾಗು!
ಆದರೊಂದೆಚ್ಚರಿಕೆ: ಈ ಬೆಟ್ಟದಲಿ ಈ ಪ್ರಳಯ–
ಜ್ವಾಲೆಯೇ ಕೊನೆಯ ಕಾಲನ ಲೀಲೆಯಾಗಲಿ!
ಹೀಗಾಗುವಂತೆಸಗು! ಬಲು ಜೋಕೆ, ಈ ಬೆಂಕಿ
ಇನ್ನೊಂದು ದಳ್ಳುರಿಗೆ ದಾರಿ ಮಾಡದ ತೆರದಿ
ಹೊಟ್ಟೆಯುರಿ–ಹಗೆತನವ ಸುಟ್ಟು ಬೂದಿಯ ಮಾಡು!
ಶಾಂತಿ–ಸೌಖ್ಯಕೆ ದಾಳಿ ತರುವ ಬೇರಾವುದೂ
ತಪ್ಪಿಯೂ ಉಳಿಯದೊಲು ಹುಡುಹುಡುಕಿ ಹುರಿದುಬಿಡು!
ಬಲು ಜೋಕೆ ಗಾಳಿಯೆ–ಬಾಯಿಂದ ಆಡಿದುದು
ಕೃತಿಯಲ್ಲಿ ಮಾಡಿದುದು ಬೇರಾಗದಿರಲಿ!
ನಿನ್ನ ಗುರಿ ಚೆನ್ನವಿರೆ ಆಹ್ವಾನ ನಿನಗೆ,
ಸ್ವಾಗತವು ಬೆಟ್ಟದುರಿಗೆ !

(ದ್ವಿತೀಯ ಮಹಾಯುದ್ಧದ ಪ್ರಾರಂಭ ಕಾಲ)

* * *

ಬಡಜನರ ದುಃಖವೇ ಬರಸಿಡಿಲು ಧನಿಕ!

ಬಡವರನು ಬಳಲಿಸುತ ದುಡಿವವರ ವಂಚಿಸುತ
ಕೂಡಿಟ್ಟ ಸಿರಿಯೆಲ್ಲ ಕಡಲ ಸೇರುತಲಿಹುದು!
ಕಾಣದೆ ಧನಿಕ?

ವ್ಯರ್ಥ ಹಾಳಾಗಲಿ ಆರ್ತಜನಕಾಗದಿರ–
ಲೆಂಬ ಕ್ಷುಲ್ಲಕ ಬುದ್ಧಿ ಮಾಣದೆ ಧನಿಕ?
ವಾಯುಪಡೆಯುರುಳುವುದು ಹಡಗುಪಡೆ ಮುಳುಗುವುದು
ನಿನ್ನಿದ್ದ ಗಿರಣಿಗಳು ಇಂದು ಬೂದಿ!
ಎತ್ತರದ ಸೌಧಗಳು ಬಿತ್ತರದ ಭವನಗಳು
ಮುನ್ನುಗ್ಗುತಿಹ ಟ್ಯಾಂಕುಗಳಿಗೆ ಹಾದಿ!
ಎಲ್ಲರೊಡನಿದ್ದರೆ ತನ್ನ ಗೌರವ ಕಡಮೆ–
ಯೆಂದು ಮೇಲಕೆ ಬೆಳೆದ ನಿನ್ನ ಉಪ್ಪರಿಗೆ
ಸಿಡಿಮದ್ದಿಗಾಹುತಿಯು! ಗುಡಿಸಲಿಗೆ ಭಯವಿಲ್ಲ!
ಏನಾಯ್ತು ನಿನ್ನ ಆ ಹೊನ್ನ ಕೊಪ್ಪರಿಗೆ?
ಹಿಂದೆ ಸಾಯುವ ಬಡವನಿಂದುವೂ ಸಾಯುತಿಹ
ಬಂದಿಹುದು ಕುತ್ತೆಲ್ಲ ನಿನ್ನ ಸುತ್ತು !
ಹೊತ್ತು ಮಿಕ್ಕಿರದಾಗ ಚಿತ್ತ ಬದಲಿಸಲಿಲ್ಲ
ಏನು ಫಲ ಓ ಧನಿಕ ಕೆಟ್ಟ ಮೇಲತ್ತು?
ಬಡವರೆಲುವುಗಳಿಂದ ಹುಡೆಯ ಕಟ್ಟಿಸಿಕೊಂಡು
ತಡೆವರಾರೆನ್ನನೆಂದುರಿದೆ ಬಹು ಧನಿಕ
ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾಯಬಲ್ಲುದೆ?
ಬಡ ಜನರ ದುಃಖವೇ ಬರಸಿಡಿಲು ಧನಿಕ !
ಎತ್ತರಕೆ ಏರುವವ ಎತ್ತುವರ ವಂಚಿಸಲು
ತತ್ತರಿಸಿ ಬೀಳುವನು ನೆಲಕೆ ಧನಿಕ !
ಎಲ್ಲರೂ ಸುಖಿಯಿರಲು ನಿನ್ನ ಸಿರಿ ಶಾಶ್ವತವು
ಪಾಪದಿಂ ಬಂದ ಧನವೆಲ್ಲ ಕ್ಷಣಿಕ !
ಇನ್ನಾದರೂ ನೀನು ಕಣ್ಣು ತೆರೆಯುವೆಯಾ?
ಬಡವರಿಗೆ ಸಲ್ಲತಕ್ಕುದನೆರೆವಿಯಾ?
(ದ್ವಿತೀಯ ಮಹಾಯುದ್ಧಕ್ಕೆ ಮಹಾಪೂರ ಬಂದ ಕಾಲ)

* * *

ನವಯುಗಲಕ್ಷ್ಮಿ

(ಯುದ್ಧಾನಂತರದ ನವವಿಶ್ವರಚನೆಯನ್ನು ಕುರಿತು)

ನಿಜವನೆ ನುಡಿ ಮರೆಮಾಜದೆ ಓ ನವಯುಗ ಲಕ್ಷ್ಮಿ
ವರವಾವುದ ದಯೆಗೈಯುವೆ ಒರೆ ಸರ್ವರ ಸಾಕ್ಷಿ!
ಗತಯುಗವನು ಚಿತೆಗೇರಿಸಿ ಹೊಸ ಆಸೆಯ ತೋರಿ
ಮಾನವತೆಯ ಮಹಯುದ್ಧದ ಜ್ವಾಲೆಗಳಲಿ ತೂರಿ
ಯುದ್ಧಾಂತ್ಯದಿ ಸರ್ವೋದಯ ನಿಜವೆನ್ನುತ ಸಾರಿ
ಪ್ರಳಯಕ್ಕಿದೊ ಕರೆಯುತಲಿದೆ ಕಾಲನ ರಣಭೇರಿ !
ಈ ಮಾರಣ ಮಂತ್ರಕೆ ಮರುಳಾಗದ ನಾಡಿಲ್ಲ
ಈ ಸಾವಿ ಚೆಲ್ಲಾಟಕೆ ಬಲಿಬೀಳದ ಬೀಡಿಲ್ಲ
ಈ ಜ್ವಾಲೆಗೆ ಸುಟ್ಟುರುಳದ ಕಾಡಿಲ್ಲ
ಎಲ್ಲೂ ಹಿಗ್ಗಿನ ಹಾಡಿಲ್ಲ
ಸೊಗ ಮೂಡಿಲ್ಲ !
ಮಾನವಸುಖಸಾಧನಗಳ ನೆಕ್ಕಿತು ಈ ಜ್ವಾಲೆ
ಯುಗಯುಗಗಳ ನಾಗರಿಕತೆ ಮುಕ್ಕಿತು ಈ ಜ್ವಾಲೆ
ಮನೆ ಮನೆಗೂ ತಾಪತ್ರಯ ತಂದಿಕ್ಕಿತು ಈ ಜ್ವಾಲೆ
ಉನ್ಮತ್ತತೆ ಕುಣಿಯುತಲಿದೆ ಸೆಕ್ಕಿಸಿ ರುಂಡದ ಮಾಲೆ!
ಈ ಕ್ರೌರ್ಯವ ಹಿಂದಿನ ಯುಗವಾವುದು ನೋಡಿಲ್ಲ
ಈ ನಾಶದ ನಾಟ್ಯವ ಜನ ಎಂದೂ ಆಡಿಲ್ಲ
ಈ ವಿಧ ನರಬಲಿಯನು ಹೂಡಿಲ್ಲ
ನೆತ್ತರು ಚೆಲ್ಲಾಡಿಲ್ಲ
ಶಿರ ಚೆಂಡಾಡಿಲ್ಲ !
ಈ ನರಬಲಿ ಈ ನಾಶವು ಹುಸಿ ಹೋಗುವುದಿಲ್ಲ
ರಣ ಮುಗಿಯಲಿ ಜಯ ದೊರೆಯಲಿ ಸರಿಹೋಗುವುದೆಲ್ಲ
ಸ್ವಾತಂತ್ರ್ಯದ ಚಿರಶಾಂತಿಯು ಸಂರಕ್ಷಣಕಿದು ಎಲ್ಲ
ರಣನಾಯಕರಿದೊ ವಚಿಸುತಲಿಹರೀ ಆಸೆಯ ಸೊಲ್ಲ

ಜಯದೇವಿಯು ಬಳಿಸುಳಿದಳು ವಶವಾಗುವಳಿನ್ನು
ನೆರೆ ಬಳಲಿದ ನರಲೋಕಕ್ಕೆ ತರುವಳು ಏನನ್ನು?
ನಿನ್ನನ್ನೇ ನಿರುಕಿಸುತಿವೆ ಎಲ್ಲರ ಕಣ್ಣು
ಏನೆನ್ನುವೆ ಅನ್ನು
ಓ ಗೆಲವಿನ ಹೆಣ್ಣು !
ನಿನಗಾಗಿಯೆ ಸಹಿಸಿದೆವಿದ ಓ ನವಯುಗಲಕ್ಷ್ಮಿ
ನಿನಗೋಸುಗ ನಿರುಕಿಸುತಿವೆ ಕಳೆಗುಂದಿದ ಅಕ್ಷಿ
ಸುಟ್ಟಳಿಯಿತೆ ಸ್ವಾರ್ಥದ ಕುಲ? ಇನ್ನಾದರು ಮುಕ್ತಿ
ದೊರೆವುದೆ? ನಿಜವನೆ ನುಡಿ, ಓರೆ ಸರ್ವರ ಸಾಕ್ಷಿ!
ಇನ್ನಾದರು ವೈರತ್ವವು ಕೊನೆಗಂಡಿತೆ ಹೇಳು
ಇನ್ನಾದರು ಶುಚಿಯಪ್ಪುದೆ ಮನಮಕ್ಕಳ ಬಾಳು?
ಬಡ ಜನತೆಗೆ ದೊರೆಯುವುದೇ ಕೂಳು?
ಮುಗಿವುದೆ ಗೋಳು?
ನಿಲ್ವುದೆ ಹಾಳು?
ಸವಿನುಡಿಯಲಿ ಮತ್ತೆಮ್ಮನು ವಂಚಿಸದಿರು ಮಾಯೆ
ಎಲ್ಲರ ಸುಖಸ್ವಪ್ನವ ಹುಡಿಗೂಡಿಸದಿರು ತಾಯೆ
ಕೊನೆಯುಸಿರನು ಹಾಕುತಲಿದೆ ಜನ ಮಂಗಲದಾಯೆ
ಈ ಸಲ ಕಾಯದೊಡಿನ್ನೆಂದಿಗು ಅವರನು ಕಾಯೆ
ನಡೆನುಡಿಗಳು ಒಂದಾಗಲಿ, ಮರೆ ಮೋಸವು ಬೇಡ !
ಒಳಸಂಚಿನ ಚದುರಂಗವ ಹೂಡುವೆಯಾ? ಬೇಡ !
ನಿರುಕಿಸು ತುಸು ಮನುಮಕ್ಕಳ ಪಾಡ
ಆಲಿಸು ಅಳಲಿನ ಹಾಡ
ಕೈ ಬಿಡಬೇಡ !
ದಿನದಿನವೂ ಬೆಳೆಯುತಲಿದೆ ದುರ್ಬಲರ ನಿರಾಶೆ
ಜಯಮದದಲಿ ನೀ ಮರೆವೆಯ ನೀನಿತ್ತಿಹ ಭಾಷೆ?
ಜನಲಕ್ಷ್ಮಿಯೆ ಆಗುವೆಯಾ ಹಿರಿನಾಲ್ವರ ವೇಶ್ಯೆ ?
ಜನವಂಚಿಸಿ ತಣಿಸುವೆಯಾ ನೀನವರ ಪಿಪಾಸೆ?
ಜಯದೂರಿದೆ, ಈಗಲೆ ಈ ಕುಹಕ ಕುತಂತ್ರ !

ಹಿರಿನಾಲ್ವರು ಬೇಕಾದುದ ಬಲಿಕೊಳ್ಳುವ ಮಂತ್ರ
ಹೀಗೆಯೆ ಸಾಗುವುದೀ ಸೃಷ್ಟಿಯ ಯಂತ್ರ
ಎಲ್ಲಿದೆ ಸ್ವಾತಂತ್ರ್ಯ
ಅನ್ಯಾಯಕೆ ಅಂತ?
ರಣ ಮುಗಿವುದು ವೈರತ್ವದ ಬೇರುಗಳನು ಬಿಟ್ಟು
ಅನ್ಯಾಯದ ಅತಿದ್ವೇಷದ ವಿಷಬೀಜವ ನೆಟ್ಟು
ಪರತಂತ್ರರ ಬಲಹೀನರ ಆಶೆಗಳನ್ನು ಸುಟ್ಟು
ಬಡಜನತೆಗೆ ಮತದಾನದ ಅಧಿಕಾರವ ಕೊಟ್ಟು !
ನಾಯಕರೇ ಹಿಂದಿನ ಹಗೆಯಿನ್ನೂ ತೆಗೆದಿಲ್ಲ
ಹಿರಿಯರೊಳೇ ಔದಾರ್ಯವು ಇನ್ನೂ ಚಿಗಿದಿಲ್ಲ
ಇನ್ನೂ ಯುದ್ಧವೆ ಮುಗಿದಿಲ್ಲ
ಆಯುಧ ಒಗೆದಿಲ್ಲ
ಹೆಣಗಳ ಹುಗಿದಿಲ್ಲ–
ಈಗಲೆ ದಲಿತರ ಹಿತಗಳ ಚರ್ಚೆಗೆ ಸೈರಣೆ ಉಳಿದಿಲ್ಲ
ಮಾನವರೆಲ್ಲಾ ಒಂದೇ ಎನ್ನುವ ಭಾವನೆ ಮೊಳೆದಿಲ್ಲ
ಸಕಲರ ಹಿತವೇ ಶಾಶ್ವತ ಶಾಂತಿಯು ಎಂಬುದೆ ಹೊಳೆದಿಲ್ಲ
ನಿಷ್ಠುರವಾದೊಡು ನ್ಯಾಯವ ಸಾರುವ ಕೆಚ್ಚೇ ಬೆಳೆದಿಲ್ಲ.
ಕೀಳು ಮೇಲುಗಳ ಕಾಳಕೂಟ ವಿಷ ಕಳೆದಿಲ್ಲ
ಸ್ವಾರ್ಥ ಪಿಶಾಚಿಯನಿನ್ನೂ ನ್ಯಾಯದ ಕಿಚ್ಚಿಗೆ ಎಳೆದಿಲ್ಲ
ವರ್ಣದ್ವೇಷದ ಮೂಲವೆ ಅಳಿದಿಲ್ಲ
ಮೈತ್ರಿಯು ಬೆಳೆದಿಲ್ಲ
ಕಿಲ್ಮಿಷ ತೊಳೆದಿಲ್ಲ !
ಹಿರಿಮಾತಾಡುವೆಯಾದೊಡು ನವಯುಗ ನಿನ್ನಿರವಿದು ವಲಂ
ಮಧುತಿಷ್ಠತಿ ಜಿಹ್ವಾಗ್ರೇ ಹೃದಯೇಷು ಹಾಲಾಹಲಂ
ದುರ್ಬಲತೆಯೆ ಅನ್ಯಾಯವು ನ್ಯಾಯವು ಜಗದಲಿ ಬಲಂ
ಬಲವಾರದೊ ಗೆಲವವರದು ಅವರದೆ ಈ ನೆಲ ಜಲಂ
ಇನ್ನೂ ಹೃದಯವಿಶುದ್ಧಿಗೆ ಸಮಯವು ಬಹಳಿದೆ, ಜಾರಿಲ್ಲ;
ನಿನ್ನಯ ನೀತಿಯ ಸರಿಪಡಿಸುವಳೂ ನೀನೇ, ಬೇರಿಲ್ಲ;

ನೀ ಮನದಂದರೆ ಸಕಲರ ಸದ್ಗತಿ ದೂರಿಲ್ಲ
ಕಾಲವು ಮೀರಿಲ್ಲ
ಯೋಚಿಸು ಇದನೆಲ್ಲ !
ನಿಜವನೆ ನುಡಿ ಮರೆಮಾಚದೆ ಓ ನವಯುಗಲಕ್ಷ್ಮಿ
ವರವಾವುದ ದಯಗೈಯುವೆ, ಒರೆ ಸರ್ವರ ಸಾಕ್ಷಿ!

* * *

ಏಷ್ಯಾ

ಜಗಕೆ ಧರ್ಮದ ದಾನ ಕೊಟ್ಟ ಬೆಳಕಿನ ಬಿತ್ತೆ
ಜಗದ ಸಂಸ್ಕೃತಿಗಸುವನಿತ್ತ ಪಾವನ ಚಿತ್ತೆ
ಜಗದರ್ಧ ಜೀವಿಗಳ ಪೊರೆವ ಪುಣ್ಯದ ಗೊತ್ತೆ
ನಿನ್ನ ಗತವೈಭವವು ಮರುಳುವುದೆ ಮತ್ತೆ?
ಏನಿದ್ದೆ ಏನಾದೆ ಏಷ್ಯಾ !
ನಿನ್ನನಾವರಿಸಿಹುದು ದಾಸ್ಯ !
ಸೂರ್ಯ ಹುಟ್ಟುವ ಸ್ಥಳದಿ ಕಾರಿರುಳು ಮುಸುಕಿಹುದು
ಎಲ್ಲ ಬೆಳೆಯುವ ನೆಲದಿ ದಾರಿದ್ರ್ಯ ಮಸಗಿಹುದು
ತತ್ತ್ವಗಳ ತವರಿನಲೆ ಅಜ್ಞಾನ ಹರಡಿಹುದು
ಸಾಹಸದ ಶಿಬಿರದಲೆ ಹೇಡಿತನ ಹಬ್ಬಿಹುದು
ಅಂತವಿಲ್ಲದ ಅಧಃಪಾತ
ಮಾಡಿಹುದು ನಿನ್ನ ಬರಿಪ್ರೇತ !
ಶ್ವೇತವರ್ಣದ ಶಿಲುಬೆ ಗಾಯಗೊಳಿಸಿದೆ ನಿನ್ನ
ಪೀತವರ್ಣದ ಪಾಪಿ ಕೊನೆಗೆ ಹಾಕಿದ ಕನ್ನ
ಕೆಂಪುವರ್ಣವು ಸಹಿತ ನಾಶಗೊಳಿಸಿದೆ ನಿನ್ನ
ಯಾರು ಹೊಕ್ಕರು ಸುಲಿದು ನಿನಗೆ ಕೊಟ್ಟರು ಬನ್ನ
ನಿನ್ನ ಮೇಲಿದೆ ಜಗದ ವಕ್ರದೃಷ್ಟಿ
ಸುಲಿಗೆಗಾಗಿಯೆ ಆಯ್ತೆ ನಿನ್ನ ಸೃಷ್ಟಿ?
ರಾಕ್ಷಸೀ ಲಾಲಸೆಯ ನೀಚ ಶಿಶು ಜಾಪಾನ

ನರಕಯಾತನೆಯಿಂದ ಸಾಯುತಿದೆ ಚೀನ
ದಾಸ್ಯ ದಾರಿದ್ರ್ಯಮಯ ನಮ್ಮ ಹಿಂದುಸ್ಥಾನ
ತನ್ನ ಹಿತದಲಿ ಜಾಣ ತರುಣ ತುರ್ಕಸ್ಥಾನ
ಇನ್ನುಳಿದ ನಾಡುಗಳ ಕೇಳ್ವರಾರು?
ಹೆಸರಿಗಿದೆ ಸರಕಾರ ಆಳ್ವರಾರು?
ಇಡಿಯ ಏಷ್ಯಾಖಂಡ ಹಿರಿಯ ಬಂದೀಖಾನೆ
ಪರರ ಬಲೆಯಲಿ ಸಿಕ್ಕಿಬಿದ್ದ ಮದ್ದಾನೆ
ಇಲ್ಲಿ ಬಡತನ ದಾಸ್ಯ ಅಜ್ಞಾನ ಬಹುಬೇನೆ
ಮೇಲೆ ತುಳಿಯುತಲಿಹುದು ಪರರಾಷ್ಟ್ರಗಳ ಸೇನೆ
ಇದುಕುಂಟೆ ಈ ನರಕದಿಂದ ಮುಕ್ತಿ?
ಎಂದು ಸಿಡಿದೇಳುವುದು ಇದರ ಶಕ್ತಿ?

–೧೯೪೨

* * *

ಸಲಾಮ್ ಸಾಬ್!

ನಡು ಹಗಲು ! ಕಡುಬೇಸಿಗೆಯ ಸೂರ್ಯ ನಡುನೆತ್ತಿಗೇರಿರಲು
ಪೊಡವಿ ತಲ್ಲಣಿಸುತಿದೆ! ತಿರೆಗೆ ಜ್ವರ ಬಂದಂತೆ
ಬಿರು ಬಿಸಿಲ ಉರಿಹೆಚ್ಚಿ ಉಗಿ ಕಾರುತಿದೆ ನೆಲವು !
ತನಗೆ ತಂಪನು ನೀಡೆ ಗಾಳಿಯೂ ಗೋಳಿಟ್ಟು
ತರುಗಳನು ಬೇಡುತಿದೆ ಆಗಾಗ ಕೆಣಕೆಣಕಿ !
ಬಿಸಿಲುಗುದುರೆಗಳೇರಿ ವಸುಧೆಯೊಡಲಿಂದೊಗೆದ
ಬಿಸಿಯುಸಿರು ಓಡುತಿದೆ ಮೋಡಗಳ ಮೊರೆ ಹೊಗಲು !
ಹೊಗೆಬಂಡಿಯೋಡುತಿದೆ ದಿಗಿಲುಗೊಂಡವರಂತೆ
ಉಗಿಯ ಬಿಸುಪಿಮ್ಮಡಿಸೆ ಹಗಲುಗುಳ್ವ ಕಿಚ್ಚಿನಲಿ !

ನಾನಿಳಿದ ನಿಲ್ದಾಣವೊಂದು ಹಂಚಿನ ಕೋಣೆ
ನಾಲ್ಕು ಜನರೊಮ್ಮೆಗೇ ನಿಂತುಕೊಳ್ಳಲು ಬರದು
ಮಗ್ಗಲಿನ ತಗಡುಮನೆಯರೆಗಾವುನೆರಳಿನಲಿ
ಉಸ್ಸೆಂದು ಹೊರಳುತಿವೆ ಜೀವಿಗಳು ನಾಲ್ಕಾರು !

ಸನಿಹದಲಿ ಮರವಿಲ್ಲ ನಿಲ್ಲೆ ನೆರಳಿನಿಸಿಲ್ಲ
ಊರಿಹುದು ದೂರದಲಿ ದಾರಿ ತಿಳಿಯದು ನನಗೆ
ಏನು ಮಾಡುವುದೆಂದು ಜಾನಿಸುತ ನಿಂತಿರಲು
ಕಿವಿಯ ಕೊರೆಯುತ ಹೊಕ್ಕು ಎದೆಯ ನಡುಗಿಸಿತೊಂದು
ಕರುಣ ಕ್ರಂದನ– "ಸಲಾಮ್ ಸಾಬ್!"

ಹಿಂದುರುಗಿ ನೋಡಿದೆನು, ಹೆದರಿ ಹೌಹಾರಿದೆನು !
ದೈನ್ಯತೆಯ ನಿಟ್ಟುಸಿರೆ ನರನಾಗಿ ನಿಂತಂತೆ
ದಾರಿದ್ರ್ಯದುಮ್ಮಳವೆ ಮೈದಾಳಿತೆಂಬಂತೆ
ಅಳಲ ಚೀತ್ಕಾರವೇ ಚರ್ಮ ತೊಟ್ಟಿರುವಂತೆ
ಕನಿಕರದ ಕಣ್ಣೀರೆ ಕೈಕಾಲು ತಳೆದಂತೆ
ಕರುಳುಗಳ ಕಲಮಲವೆ ಕಾಯವನು ಪಡೆದಂತೆ
ಎಲುವು ತೊಗಲುಗಳಲ್ಲಿ ಎಂತೆಂತೊ ಜೀವವನು
ಬಲುಮೆಯಿಂದಲಿ ಹಿಡಿದು ಉಸಿರಬಲೆಯಲಿ ಬಿಗಿದು
ಬಾಯ್ಬಿಡುತ ಇಂತಿತ್ತು ನರನ ಆಕೃತಿಯೊಂದು !
ನರನೆನಲೊ ನೆರಳೆನಲೊ ಅರೆಜೀವ ಹಾರಿರುವ
ಬರಿಕಳೇಬರವೆನಲೊ ನಿಟ್ಟುಸಿರ ತಿದಿಯೆನಲೊ?
ತಳದಿಂದ ತಲೆವರೆಗೆ ಕಣ್ಣಿಟ್ಟು ನೋಡಿದರೆ
ಮಧ್ಯದಲಿ ಕಾಣುವುದು ಛಿದ್ರವಸ್ತ್ರದ ತುಂಡು!
ತಲೆಯ ಕಾಯುವರಾರು? ಕರುಣೆ ಬಂದಿತೊ ಏನೊ
ನರೆಗೂದಲೆಂಬುವಕೆ–ಮುಚ್ಚಿಹವು ತಲೆ ಕೆನ್ನೆ !
ಹೆಗಲಿನಲಿ ಹರುಕೊಲ್ಲಿ ಬಗಲಿನಲಿ ಆನುಗೋಲ್
ಎಡಗೈಯೊಳಿದೆ ಪಾತ್ರೆ ಬಲಗೈಗೆ ಹಣೆಯು–
"ಸಲಾಮ್ ಸಾಬ್, ಸಲಾಮ್ ಸಾಬ್!"

ಬೆವರು ಬತ್ತಿಹ ಕಾಯ ಹೊಲಸು ಮೆತ್ತಿಹ ಮೈಯು
ಹಿಂಡಿದಂತಿಹ ಚರ್ಮ ಖಂಡವಂಟದ ಎಲುವು
ಕಾಂತಿಯಿಂಗಿದ ಕಣ್ಣು ಚಿಂತೆಯಡಸಿದ ಹಣೆಯು
ಹಸಿದು ಕುಸಿದಿಹ ಹೊಟ್ಟೆ ಮುರಿದು ಬಾಗಿದಬೆನ್ನು

ನರೆತು ನಡುಗುವ ತಲೆಯು ಬರತು ಅಂಟಿಹ ಜಿಹ್ವೆ
ಬಿಸಿಲನಣಕಿಸಿನಿಂತು ನಿರುಕಿಸುತಲಿಹ ಜೀವಿ
ಭಾರತದ ಬಡತನದ ಬಾವುಟದ ಚಿತ್ರದೊಲು !
ಅಳಲು ಕರುಣೆಗೆ ಬರೆದ ಜೀವಂತ ಪತ್ರದೊಲು !
ಸಲಾಮ್ ಸಾಬ್ ! ಸಲಾಮ್ ಸಾಬ್ !

ಕಂಡೊಡನೆ ಕಲ್ಲೆದೆಯ ಕರಗಿಸುವ ಕನಿಕರವು
ಕಲಕಿದರು ಎದೆಯನ್ನು ಕನಲಿ ನುಡಿಯಿತು ಬುದ್ಧಿ:
"ಇವ ತುರುಕ–ಭಾರತದ ಅರಮನೆಯ ಮುರುಕ !
ಇವ ಮ್ಲೇಂಛ–ಭಾರತವ ಹಂಚೆ ಹೂಡಿಹ ಸಂಚ !
ಹಾವ್ಗೆ ಹಾಲೆರೆಯದಿರು–ಸಾಯಲಿವರೀ ರೀತಿ !"
ಎಂದು ಗುಡುಗಿದ ದನಿಗೆ, "ಕನಲದಿರು ಬುದ್ಧಿಯೇ,
ಭಾರತದ ವೈರಿಗಳು ಬಡ ತುರುಕರಲ್ಲ, ಸಿರಿ
ತಲೆಗೇರಿ ಕುಣಿಯುತಿಹ ಸ್ವಾರ್ಥಿಗಳು ಕೆಲವು ಜನ !
ಕೆಡುಕರವರೀ ಪಾಪ ಬಡ ಜನಕೆ ಮೃತ್ಯುವೆ?"
ಬೆಚ್ಚಿದೆನು ಮನದಲ್ಲಿ ! ನಿಶ್ಚಯವು ಈ ಮಾತು–
ಬಡ ತುರುಕ ಬೇಡುವುದು ಅನ್ನ–ಅಲ್ಲ ಪಾಕಿಸ್ತಾನ !
ಇವರೊಡನೆ ದ್ವೇಷವೆ? ನಾಲ್ಕಾಣೆಯನ್ನಿತ್ತೆ.
"ಸಲಾಮ್ ಸಾಬ್!" ಅವನ ಹಿಗ್ಗನು ಕಂಡು
ಹಿಗ್ಗಿತೆನ್ನೆದೆ ! ಹೊಟ್ಟೆ ತುಂಬುಣ್ಣುವನು ಹಸಿದ ಜೀವಿ !
ಹುಟ್ಟಿನೊಳಗಿರಬಹುದು ಹಸಿದ ಹೊಟ್ಟೆಯಲಿ ಕುಲವುಂಟೆ?
ವೇಷದೊಳಗಿರಬಹುದು ಹೃದಯಭಾಷೆಯಲಿ ಕುಲವುಂಟೆ?
ಜಡ ತನುವಿಗಿರಬಹುದು ಬಡತನಕೆ ಕುಲವುಂಟೆ?
ಕರಿಬಿಳಿಯ ವರ್ಣವಿರೆ ಕರುಣಕ್ಕೆ ಕುಲವುಂಟೆ?
ಸಲಾಮ್ ಸಾಬ್ ! ಸಲಾಮ್ ಸಾಬ್ !

–೧೯೪೩

* * *

ಏಳ್ಕೋಟಿಗೇಳ್ಕೋಟಿಗೇಳ್ಕೋಟಿಗೋ

(ಆದಿಜನಗಳ ವೇದನೆಯ ಹಾಡು)

ಆದಿಜನಗಳ ಆಕ್ರೋಶ
ಜ್ಞಾನವೇಕೆ ವಿದ್ಯೆಯಮೃತ
ಪಾನವೇಕೆ ಎಲ್ಲರಂತೆ
ಮಾನವರು ನಾವು ಎಂಬ
ಮಾನವೂ ನಮಗೆ ಬೇಕೆ?
ಏಳ್ಕೋಟಿಗೇಳ್ಕೋಟಿಗೇಳ್ಕೋಟಿಗೋ !

ಎಲ್ಲರೊಡನೆ ಕೂಡಿ ಬಾಳ್ವ
ದಿಲ್ಲವೆಮಗೆ–ಅಲ್ಲ–ಸಲ್ಲದೆಮಗೆ !
ಬಲ್ಲವರ ಸೊಲ್ಲು ಇದು
"ಕ್ಷುಲ್ಲಕರಿಗು ಸಮತೆಬೇಕೆ?"
ಏಳ್ಕೋಟಿಗೆ.....

ಆಳು ಬಾಳು ಕೀಳು ಬಾಳು
ಹೊಟ್ಟೆತುಂಬ ಸಿಗದು ಕೂಳು
ನಮಗೆ ಸಿಗದು ನಮ್ಮ ಪಾಲು
ಬಾಳೆ ಮುಗಿಯದಿರುವ ಗೋಳು !
ಏಳ್ಕೋಟಿಗೆ.....

ಬಾಳುವೆವು ಗುಲಾಮರಾಗಿ
ಮೇಲಿನವರ ಹಮಾಲರಾಗಿ
ಹೇಳುವರು ವೇದವಿದರು–
"ಆಳಿಗೂ ಆಳ್ವಿಕೆಯು ಬೇಕೆ?"
ಏಳ್ಕೋಟಿಗೆ.....

ಸಂಸ್ಕೃತಿಯ ಸುಗಂಧವೇಕೆ?
ಸ್ವಾತಂತ್ರ್ಯವು ನಿರ್ಬಂಧವೇಕೆ?
ನವಜೀವನ ಸ್ಪಂದನೇಕೆ?

ಮೌಢ್ಯ–ದಾಸ್ಯ–ತಮಂಧ ಸಾಕೆ?
ಏಳ್ಕೋಟಿಗೆ.....

ಸವರ್ಣಿಗಳ ಸ್ವಾಮ್ಯದಲ್ಲಿ
ವರ್ಣಸಾರ್ವಭೌಮ್ಯದಲ್ಲಿ
ಯುಗ ಯುಗದಿಂ ನರಳುತಿರುವ
ನಮಗೆ ನ್ಯಾಯ–ಸಾಮ್ಯವೆಲ್ಲಿ?
ಏಳ್ಕೋಟಿಗೆ.....

ಸನಾತನಿಗಳ ಸಮಾಧಾನ

ಪಟ್ಟ ಪಾಡು ಕೆಟ್ಟ ಕೇಡು
ಹೊಟ್ಟೆಗಾಗಿ ! ನಮ್ಮ ಮೇಲೆ
ಸಿಟ್ಟಿದೇಕೆ? ಇದಕಾಗಿಯೆ
ಹುಟ್ಟಿಹಿರಿ ! ಮರುಕವೇಕೆ?
ಏಳ್ಕೋಟಿಗೆ.....

ಹೊಯ್ಯುನೀರು ಕುಡಿಯುವವಗೆ
ಮೈಯುನಾರದೇನು? ತೊವಲು
ಕೊಯ್ಯುವವಗೆ ಹೊಲಸೆ ಲೇಸು !
ಬೈಯ್ವರೆಂದು ಸುಯ್ಯಲೇಕೆ?
ಏಳ್ಕೋಟಿಗೆ.....

ಯಾವ ಪಾಪ ಫಲವೊ ನೀವು
ನೋವಿಗಾಗಿ ಜೀವಿಸಿಹಿರಿ !
ಪಾವನರು ನಾವು, ನಮ್ಮ
ಸೇವೆಯಿರಲು ದುಃಖವೇಕೆ?
ಏಳ್ಕೋಟಿಗೆ.....

ದೇವನಾಜ್ಞೆಯಿದನು ದುಷ್ಟ
ಭಾವದಿಂದ ಮುರಿಯೆ ನೀವು
ಸಾವನಪ್ಪಿ ನಶಿಸುವಿರಿ !
ಸೇವೆಗೈಯೆ ಹೇವವೇಕೆ?
ಏಳ್ಕೋಟಿಗೆ.....

ರವೀಂದ್ರವಾಣಿ (ಮೂಲ ಬಂಗಾಲಿ)
ಹೇ ಮೋರ ದುರ್ಭಾಗ್ಯ ದೇಶ ಜಾಧೇರ ಕರೇಛ ಅಪಮಾನ,
ಅಪಮಾನೇ ಹೋತೇ ಹಬೇ ತಾಹಾದೇರ ಸಭಾರ ಸಮಾನ
ಮಾನುಷೇರ ಅಧಿಕಾರೇ ವಂಚಿತ ಕರೇಛ ಜಾರೇ
ಸಮ್ಮುಖೇ ದಾಂಡಾಯೇ ರೇಖೇ
ತಬೂಕೋಲೇ ದಾನು ನಾಯಿ ಸ್ಥಾನ
ಅಪಮಾನೇ ಹೋತೇ ಹಬೇ ತಾಹಾದೇಶ ಸಬಾರ ಸಮಾನ!

* * *

ಬಾ ದುಃಖವೆ !

ಬಾ ದುಃಖವೇ ನನ್ನ ಬಗೆವಳ್ಳಿಯನು ಕೊರೆವ ಕೀಟವಾಗಿ
ಬಾ ದುಗುಡವೇ ನನ್ನ ಬಾಳಿನಮೃತಕೆ ಕಾಳಕೂಟವಾಗಿ
ಬಾ ವ್ಯಸನವೇ ನನ್ನ ಮನದ ಮಂದಿರಕೆ ಅಗ್ನಿ–ಸ್ಫೋಟವಾಗಿ
ಬಾರೆ ಬೆಂಕಿಯ ಮಗಳೆ ಬಾ ಘೋರ ಮೃತ್ಯುವಿನ ಬೇಟವಾಗಿ !

ದಯಬೇಡ ದುಃಖವೇ, ದಹಿಸು ನನ್ನವಗುಣದ ಖಾಂಡವವನು
ನನ್ನ ಕ್ಲೈಬ್ಯವ ಸುಟ್ಟು ಎದೆಯ ರಂಗದೊಳಾಡು ತಾಂಡವವನು
ನನ್ನ ಹೃದಯವ ಮಾಡು ಬೇಗುದಿಯ ಬ್ರಹ್ಮಾಂಡವನ್ನು
ಭಸ್ಮವಾಗಿಸು ನನ್ನ ಬಹು ದುರಿತದುಷ್ಕರ್ಮಕಾಂಡವನ್ನು !

ಸೋಲಾಗಿ, ಬೇನೆ ಬಡತನವಾಗಿ, ನನ್ನವರ ಸಾವಾಗಿ,
ಚಿಂತೆಗಳ ಚಿತೆಯಾಗಿ, ಸಂತಸದ ಶಿಶುವಿಗೇ ಹಾವಾಗಿ,
ದೈನ್ಯ ಕಳವಳ ಕೊರಗು ಅವಮಾನ ನಿಂದೆಗಳ ಠಾವಾಗಿ,
ನನ್ನ ವಂಶದ ಮರಕೆ ಕೊಡಲಿ, ಕೊಡಲಿಗೆ ತಕ್ಕ ಕಾವಾಗಿ

ಬಾ ದುಃಖವೇ ನಿನ್ನ ನೂರಾರು ರೂಪದಲಿ
ಪೂರ್ಣ ಬಲ ತಳೆದು ಬಾ ಪೂರ್ಣಪ್ರತಾಪದಲಿ
ನೂಕೆನ್ನ ಉರಿಯುತಿಹ ನಂಜುಗಳ ಕೂಪದಲಿ
ಪಾಪಗಳ ಸುಟ್ಟು ಪೂತನಾಗುವೆನಿಂದು ತಾಪದಲಿ !

ನನ್ನ ಬಾಳಡವಿಯಲಿ ಬೆಳೆದ ಮುಳ್ಳಿನ ಮೆಳೆಯ
ವಿಷಜಂತುಗಳ ದುಷ್ಟ ವನ್ಯಮೃಗಗಳ ನೆಲೆಯ
ಆಶೆ ರೋಷ ದ್ವೇಷ ಗರ್ವ ಕಲುಷದ ಕೊಳೆಯ
ಸುಟ್ಟುಳಿಸು ಸದ್ಗುಣದ ಸತ್ಯ ಪ್ರೇಮದ ಬೆಳೆಯ !

ಕೊಡು ದೈವವೇ ನನ್ನ ಪಾಲಿಗಿಂತಲು ಹೆಚ್ಚು ದುಃಖ ನನಗೆ
ನನಗಿಂತ ದುಃಖಿಗಳು ಕೋಟಿ ಜನ, ನೀಡವರ ದುಃಖ ನನಗೆ
ಇಂದೆನ್ನ ಬಾಳಿನಲಿ ಅನ್ನ ನೀರುಗಳೆಲ್ಲ ದುಃಖ ನನಗೆ
ಹಾಸಲೂ ಹೊದೆಯಲೂ ಉಸಿರಾಡಿಸಲೂ ದುಃಖ ನನಗೆ!

ಅಗಲೈ ತಂದೆ ! ನನ್ನನಿಂತಳಿಸಿದಕೆ ನಗಿಸು ಬಡವರ ಮೊಗವ
ಇರಿಸೆನ್ನ ಹೆಗಲಮೇಲವರ ದುಃಖದ ನೊಗವ
ನನ್ನ ಬನ್ನವ ಬೆಳೆಸಿ ಕರುಣಿಸವರಿಗೆ ಸೊಗವ
ದುಃಖಪಂಜರದಲ್ಲೆ ಇರಿಸಬಹುದು ನಿನ್ನೀ ಖಗವ !

[ಅಬ್ಬರದ ತಡಸಲು ಮುಗಿದುದು]

* * *

ಬಾಣದ ತಡಸಲು

ಸಾಂಪ್ರದಾಯ ಶೈಲದಲ್ಲಿ
ಪರಂಪರಾ ಶೃಂಗವಲ್ಲಿ
ಅಂಧಶ್ರದ್ಧೆ ಅಡ್ಡಶಿಲೆ
ಬುದ್ಧಿದಾಸ್ಯ ಕಲ್ಲಬಲೆ
ಸನಾತನತ್ವ
ಇದಿರು ಮಲೆ
ಕುರುಡು ಧರ್ಮ
ಬಿದಿರ ಮೆಳೆ
ಗ್ರಂಥ ಪಂಥ
ಮಲೆಯ ಮಾಲೆ

ವಿಚಾರ ಧಾರೆ–
ಯಲ್ಲಿ ಬಿದ್ದು
ಎಡರು ತೊಡರೆ
ಕೊಡಹಿ ಕೊಸರಿ
ಪುಟಿದು ಮುಂದೆ
ನಡೆದಿದೆ
ತನ್ನ ದಾರಿ
ಹಿಡಿದಿದೆ !

* * *

ಬಿಂದು–ಸಿಂಧು

ಸಿಂಧು

ಬಾ ಬಿಂದು, ನನ್ನೊಳಗೆ ಬೆರೆತು ನನ್ನಂತಾಗು–
ನಿನ್ನ ಅಲ್ಪತೆ ನಿನ್ನ ಕ್ಷಣಿಕತೆಯ ನೀಗು !
ಹುಲ್ಲಹನಿ, ಕ್ಷುಲ್ಲಕತೆಯರಿವನ್ನು ಮರೆದೊಮ್ಮೆ
ನನ್ನನ್ನು ಸೇರಿ ನೀನೂ ಸಮುದ್ರವಾಗು !
ನನ್ನೊಡನೆ ನೀನು ಸಹ ನಿತ್ಯತ್ವವನು ಹೊಂದು
ನನ್ನಾಳ ನನ್ನಗಲ ನಿನ್ನದಾಗುವುದು !
ನನ್ನತುಲ ವ್ಯಾಪ್ತಿಯಲಿ ಸಮಾಪ್ತವಾಗಲು ನಿನ್ನ
ಇರುವು ಕಿರಿತನ ತೊರೆದು ಅಮರವಾಗುವುದು !

ಬಿಂದು

ಬೇಡೆನಗೆ, ಓ ಸಿಂಧು ವ್ಯಕ್ತಿತ್ವಹೀನ ಘನ–
ಬೃಹದ್ರೂಪ, ನಿತ್ಯತ್ವ, ಚಿರಜೀವನ !
ವ್ಯಕ್ತಿತ್ವವಿಲ್ಲದಿಹ ವಿರಾಟತೆಯು ನಿಷ್ಫಲವು
ಅರಿವಿರದ ಅಮರತ್ವದಿಂ ಲೇಸು ಕ್ಷಣ !
ವ್ಯಕ್ತಿತ್ವಲಯವಾಗಿ ನಿತ್ಯತ್ವ ನಾ ಪಡೆವೆ–
ನೆಂಬ ಯುಕ್ತಿಯನೆಂತು ನಂಬಬಹುದು?

ನನ್ನತನವಳಿದೊಡನೆ ನನ್ನಿರವೆ ಮುಗಿದಂತೆ,
ನಂತರದ ನಿತ್ಯತ್ವ ನನ್ನದೆಂತಹುದು?
ಅಳಿದಮೇಲನಂತತೆಯ, ಅಳಿದಮೇಲಮೃತತೆಯ
ಪಡೆದಾವ ಫಲ ಹೇಳು ನೀನೆ ಸಿಂಧು?
ಗಾತ್ರ ಹೆಚ್ಚಿದೊಡೇನು ಪಾತ್ರತೆಯು ಹೆಚ್ಚುವುದೆ?
ನಿನಗಿಂತ ನಾ ಕಡಮೆಯೆಂತು ಸಿಂಧು?
ನನ್ನ ಕಿರಿಮೈಯೊಳಗೆ ಧರಿಸುವೆನು ರವಿಶಶಿಯ
ಪ್ರತಿಬಿಂಬವನು ಕುಂದು ಬಾರದಂತೆ !
ಇನಿತಗಲವಿದ್ದರೂ ನೀ ಧರಿಸಬಲ್ಲೆಯಾ?
ತೆರೆಗಳವು ಚೇಷ್ಟಿಪವು ತೋರದಂತೆ !
ಕ್ಷಣಿಕತ್ವವಿರಲೇನು? ದಿನದಿನವು ಹುಟ್ಟುವೆನು
ದಿನಕೊಂದು ಹೊಸಜನ್ಮ–ಹೊಸ ಜೀವನ !
ನಿನಗಿಹುದು ಅಮರತೆಯ ಬಂಧನವು, ಭಾರವು–
ಬೇಡವಾದಾಗಲೂ ಮಾಡಬೇಕು ಸಹನ !
ಕನ್ನಡಿಯ ತೆರದಲ್ಲಿ ನನ್ನ ಮೈ ಹೊಳೆಯುತಿದೆ
ಕಲಕಿಲ್ಲ ನಿನ್ನಂತೆ ನನ್ನಾತ್ಮಶುದ್ಧಿ
ಕ್ಷಣಕಾಲ ಬದುಕಿದರು ತಿಳಿ–ಬಾಳು ಬಾಳುವೆನು
ನನ್ನ ಪಾವಿತ್ರ್ಯವೇ ನನ್ನ ಬಾಳ ಸಿದ್ಧಿ !
ಒಂದೆ ಹನಿ, ನಿಜ, ನಾನು ಮನಸು ಮಾಡಿದೊಡಪ್ಪೆ
ಕಂಬನಿಯು, ಹಿಮಮಣಿಯು, ಹೊಳೆವ ಮುತ್ತು !
ಏನಾದರೂ ನಾನು ಪ್ರಾಣ ಘಾತಕನಲ್ಲ.
ಎನಿತು ಜೀವಿಗಳಾವುವು ನಿನಗೆ ತುತ್ತು?
ಒಂದೆ ಹನಿಯಾದರೂ ಒಂದಿಲ್ಲ ಒಂದು ವಿಧ–
ದಿಂದ ತಣಿಸುವೆ ನನ್ನ ಆಶ್ರಿತರ ನಾನು
ಕುಸುಮಗಳ ಮೊಗ ತೊಳೆವೆ, ಹಸಿರ ಹಸಿವನು ಕಳೆವೆ,
ಉಪ್ಪು ನೀರಿನ ದೊರೆಯೆ ನಿನ್ನ ಮೇಲ್ಮೆಯೇನು?

* * *

ಸಿಂಧು

ವ್ಯಕ್ತಿ–ಜೀವನ–ಪ್ರಿಯಾ, ವ್ಯಕ್ತಿತ್ವ–ವಾದಿಯೆ,
ಮರೆವೆ ನಿನ್ನುಗಮವೇ ನಾನು ಎಂದು
ನಿತ್ಯನವಜೀವನವ ಪಡೆವೆ, ನಿಜ, ಆಜನ್ಮ
ನನ್ನದೇ ಒಂದು ಕಣ ನೆನಪಿರಲಿ ಬಿಂದು !
ನಿನ್ನೊಳಿವೆ ನೂರಾರು ಜಲ–ಕಣಗಳವು ಕೂಡ
ವ್ಯಕ್ತಿತ್ವ ಬೇಡಿದರೆ ಉಳಿವೆಯಾ ಬಿಂದು?
ವ್ಯಷ್ಟಿಯೆಂದೆಂದಿಗೂ ಸಮಷ್ಟಿಗಿಹುದಂಕಿತವು !
ಪ್ರತ್ಯೇಕತೆಯೆ ಇಲ್ಲ ಪ್ರಕೃತಿಯೊಳು ಬಿಂದು !
ಪರಸ್ಪರಾಕರ್ಷಣೆಯೆ ಬೆಸೆದಿಹುದು ಅಣುಗಳನು
ಭೂ ಜಲದ ಕಣಗಳನು ಅಗಲದಂತೆ !
ಒಂದೆ ಅಣು ಸರಿದರೆ ಸರಿಯುವುವು ಸಮಸ್ತ ಅಣು
ಶಶಿತಾರೆರವಿಗಳೂ ನಿಂತಿಹವು ಇಂತೆ !
ಇಂತಿರಲು ಎಂತುಳಿವೆ ನೀ ಮೀರಿ ಈ ನಿಯಮ?
ಇಂದಿಲ್ಲ ನಾಳೆ ನೀನೆನ್ನಲ್ಲೆ ಬರಬೇಕು !
ನನ್ನ ಜಲವೇ ಬಿಂದು ನದಿ ನದ ತಟಾಕ ಕೊಳ
ನೂರಾರು ರೂಪಾಗಿ ನನ್ನನೇ ಸೇರಬೇಕು !
ಒಂದೊಡೆದು ಹಲವಾಗಿ ಹಲವು ಮತ್ತೊಂದಾಗಿ
ಆದಿರೂಪದ ಲೀಲೆ ಸಾಗಿಹುದು ಹೀಗೆ
ಆವುದೆಲ್ಲಿದ್ದರೂ ಈ ನಿಯಮಕಂಕಿತವು–
ಒಂದೆ ಉಳಿವುದು ಕೊನೆಗೆ ನಾಮರೂಪವು ಹೋಗೆ !

* * *

ದೇಹ–ಆತ್ಮ

ಆತ್ಮ

ಬಾಡಿಗೆಯ ಮನೆ ನನಗೆ, ಬೇಡಿ ಪಂಜರ ನನಗೆ,
ಜಡದ ಜಂಜಡ ನನಗೆ ದೇಹ ನೀನೆನಗೆ !
ನನ್ನ ಕಾಂತಿಯ ಕಳೆವ ಕಪ್ಪುರಜ ಕಾಡಿಗೆಯು
ನನ್ನ ನಿರ್ಮುಕ್ತತೆಗೆ ತೊಡಕು ನೀನೆನಗೆ !
ನೀ ಮಿಥ್ಯ ನಾ ಸತ್ಯ ನೀ ಕ್ಷಣಿಕ ನಾ ನಿತ್ಯ
ನೀ ರೂಪ ನನಗೆಲ್ಲಿ ನಾಮ ರೂಪ?
ಜರೆಮರಣ ನಿನಗಿಹುದು ನಾನಜನು ನಾನಮರ
ರೋಗ ರುಜಿನವು ನಿನಗೆ ನಾನು ನಿರ್ಲೇಪ !
ನೀನಳಿಮೆ ನಾನುಳುಮೆ ನೀ ಮರೆಹು ನಾ ತಿಳಿಮೆ
ನೀನಿಹವು ನಾ ಪರವು ಪರಮಾನುಭಾವ
ನಾ ವಸ್ತು ನೀ ಛಾಯೆ ನಾ ತತ್ತ್ವ ನೀ ಮಾಯೆ
ನೀ ಜೀವಭಾವವೈ ನಾ ದೇವ ದೇವ !
ನಿನ್ನ ಗುರಿ ಬರಿ ಸತ್ತು ನನ್ನ ಗುರಿ ಸಂವಿತ್ತು
ನೀನು ತತ್ಕಾಲವೈ ನಾನನಂತ ಕಾಲ !
ನೀನಿಹೆ ಬಹಿರ್ಮುಖಿಯು ನಾನು ಅಂತರ್ಮುಖಿಯು
ನೀನು ಭೋಗದ ಮೂಲ ನಾ ಯೋಗಮೂಲ
ಒಂದೆ ಆತ್ಮಾಂಬೋಧಿ ಬುದ್ಬುದಗಳೀ ಜಗವು
ಗ್ರಹ ತಾರೆ ಶಶಿ ಸೂರ್ಯ ಸಚರಾಚರಗಳು !
ಕುಂಭ ಸಹಸ್ರೋದಕದಿ ಬಿಂಬಿಸುವ ಸೂರ್ಯನೊಲು
ಒಂದೆ ಆತ್ಮದ ವ್ಯಕ್ತ ರೂಪರಾಶಿಗಳು
ಮರೆ ನಿನ್ನ ದೇಹಭಾವವ ಕಾಯ–ಸಖಿ ಬೇಗ
ಎಲ್ಲವೂ ಆತ್ಮವೆಂದರಿಯುತೀಗ
ಇಲ್ಲದಿರೆ ನಮ್ಮಿಬ್ಬರಲಿ ಸಖ್ಯ ಶಕ್ಯವೆ?
ಬೆಳಕು ಕತ್ತಲೆಯಲ್ಲಿ ಎಲ್ಲಿ ಅನುರಾಗ?

ದೇಹ

ಬಿರಿಮುಗುಳ ಜರೆಯುತಿಹ ಪರಿಮಳವೆ ನೀ ಮರೆವೆ
ದೇಹವೇ ಆತ್ಮಕ್ಕೆ ಗೇಹವೆಂದು
ಮೂರುತಿಯು ದೇಗುಲವ ಬೀಗಳೆಯುವಂದದಲಿ
ಕರೆವೆ ನಿನ್ನುಗಮವನೆ ಮೋಹವೆಂದು !
ಹಾರಾಟದುಬ್ಬಿನಲಿ ಪಕ್ಕಗಳ ಮರೆತಿರುವ
ಹಕ್ಕಿಯೇ ನೆನೆ ನಿನ್ನ ಧಾರಣದ ಶಕ್ತಿ
ಕಾಯಕುಸುಮದಿ ನಿಂತು ಕೈಚಾಚು ಅನಂತತೆಗೆ
ನನ್ನ ಶಕ್ತಿಯೊಳಲ್ತೆ ನಿನ್ನ ಮುಕ್ತಿ?
ಅದೃಷ್ಟದುಬ್ಬಿಗಕಾಗಿ ಈ ಸೃಷ್ಟಿ ಮರೆಯುವೆಯ?
ಅಜ್ಞಾತಕಾಗಿಯೀ ಜ್ಞಾತತೊರೆಯುವಿಯಾ?
ಆತ್ಯಂತದಾಸೆಯಲಿ ತತ್ಕಾಲ ತ್ಯಾಜ್ಯವೆ?
ಇದ್ದುದನು ಜಯಿಸದಿಲ್ಲದುದ ತಹೆಯಾ?
ನಿಷ್ಪಂದ ಪುರುಷನವ ಪ್ರಾಣಸ್ಪಂದನ ಪಡೆದ
ಪ್ರಕೃತಿಗಿಹ ಚಂಚಲತೆ ಸಂಚಲತೆಯಿಂದ !
ನನಗೆ ಜಡವೆನ್ನುವಿಯ ಚೇತನದ ಚಿಲುಮೆಗೆ?
ನಿನ್ನ ಚಲನೆಯೆ ನನ್ನ ಮಿಂಚು–ಲತೆಯಿಂದ !
ನನಗಿಹುದು ನಶ್ವರತೆ ಆದರದು ಶಾಶ್ವತತೆ
ರೂಪಪರಿವರ್ತನದ ನಾವೀನ್ಯಪರತೆ !
ನಿನಗಿಹುದು ನಿಶ್ಚಲತೆ ನೀರವತೆ ನಿಃಸ್ಪೃರತೆ
ನನಗಿಹುದು ಜೀವನದ ಸಂಸ್ಫುರಣಸರಿತೆ !
ಇದ್ದಂತೆ ಇರು ನೀನು ! ನಾ ಬೆಳೆವೆ ನಾನಳಿವೆ
ಮತ್ತೆ ಹೊಸ ಹೊಗರಿನಲ್ಲಿ ಹೊಮ್ಮಿ ಹೊಳೆವೆ !
ಈ ಜಗದ ಸುಂದರತೆ ಬಾಳ ಸಮ್ಮೋಹಕತೆ
ಸಾಕಾದ ಬಳಿಕ ನಿನ್ನೆಡೆಗೆ ಸುಳಿವೆ !

ಕವಿ

ಚಿನ್ನ ಬಣ್ಣದ ನಡುವೆ ಭಿನ್ನತ್ವ ಸಾಧ್ಯವೆ?
ಏಕೆ ಜಗಳಾಡುವಿರಿ ಆತ್ಮ ದೇಹಗಳೆ?

ಹೇಗೆ ಬಾಳ್ವಿರಿ ಉಭಯ ಸಂಯೋಗವಿಲ್ಲದಿರೆ?
ನಿಮಗೆ ಸಹ ಶ್ರೇಷ್ಠತೆಯ ದಾಹ ಮೋಹಗಳೆ?
ಜಡವು ಚೇತನವೆಂಬ ಬಿಡಿಮೆ ಭ್ರಮೆಯಲ್ಲವೆ?
ಚೇತನಾಚೇತನದ ಗೆರೆಯೆಲ್ಲಿ ಕೊರೆವೆ?
ಈ ಎರಡು ಪರಸ್ಪರ–ಪರಿವರ್ತನೀಯಗಳು
ಆವುದಾವುದರಿಂದೊ–ಹೇಗೆ ಒರೆವೆ?
ಇಪ್ಪುದೊಂದೇ ಅದುವೆ ಅಪ್ಪುದು ಅನೇಕವನು
ಪ್ರತಿ ಕಣದಿ ಜಡ ಚೇತನಗಳ ತಾಳಿ !
ಎರಡೆಂಬುವುದೆ ಹುಸಿಯು, ಎರಡು ಒಂದೇ ಸಸಿಯು,
ಆದಿ ಬೀಜದೊಂದೆ ಎರಡು ಬ್ಯಾಳಿ !
ನೀವು ಸಹ ಆ ದಿವ್ಯ ಯೋಜನೆಯ ಅಂಶಗಳು
ನಿಮಗೆಲ್ಲಿ ಭಿನ್ನತ್ವ ಬೇರೆ ಅಸ್ತಿತ್ವ?
ನಿಮ್ಮಲ್ಲಿ ಸಹಕಾರ ಈ ತತ್ವಕನುಸಾರ
ಉಭಯರಿರವಿನ ಸಾರ–ನಿಸ್ಸಾರ ದ್ವಿತ್ವ !
ನೀವಿಬ್ಬರೊಡವೆರೆಯೆ ರಜನಿ ಚಂದ್ರಿಕೆಯಂತೆ
ಇರವೆ ಪೌರ್ಣಿಮೆ ! ಇಲ್ಲದಿರೆ ಎಲ್ಲ ಕಾಳ !
ಇಬ್ಬರಿಗು ಪೂರಕವು ಒಬ್ಬರೊಬ್ಬರ ಎರಕ
ಬೇಕು ನಿಮ್ಮಿಬ್ಬರೊಳು ತಾಳಮೇಳ !
ಒಳ ಹೊರಗು ಒಂದಾಗೆ ತಳತಳಿಸಿ ಬೆಳಗೀತು
ಜೀವನದ ದೇವತೆಯ ದಿವ್ಯ ದೇಗುಲವು !
ಒಳ ಹೊರಗಿನಿಬ್ಬಣವೆ ಕಳವಳದ ಕಾರಂಜಿ !
*ಸೃಜಕ ಸಮ್ಮಿಳನವೇ ಸುಖದ ಬಾಗಿಲವು !

–೧೯೪೩

* * *

ಕಾಯಕ

(ಪ್ರೇಮ–ಕರ್ಮ)

ಆವ ಬರುವನೆಂದೊಡನೆ ತವಕಿಸುವ ಎದೆಯೊಡನೆ
ಅವಸರವಸರವಾಗಿ ನಿರಿಸೆರಗು ಸಾವರಿಸಿ
ಅವರೆಲ್ಲರೋಡಿದರು ಸವಿಬರವ ಕೋರಲ್ಕೆ
ಕಡೆಗಣ್ಣ ಸೊಡರಿನಲಿ ನಿಡು–ಹುಬ್ಬು ಬತ್ತಿ
ಕುಡಿನೋಟಗಳ ಮಿಂಚಿನಾರತಿಯನೆತ್ತಿ !
ವೀಣೆಯನು ಬದಿಗಿಟ್ಟು ಗಾನವನು ನಿಲ್ಲಿಸುತ
ಜಾಣ ಕುಸುರಿನ ಕೆಲಸ ನಾಗನೃತ್ಯಗಳುಳಿದು
ಮಾನಿನಿಯರೋಡಿದರು ನಾಮುಂದೆ ನೀಮುಂದೆ–
ಎಂದು ಗಾಳಿಯ ತೆರದಿ ನಲ್ಲನೆಡೆಗೆ
ಅಂದುಗೆಯ ದನಿಯೇರೆ ಅಡಿಗೆ ಅಡಿಗೆ
"ನಲ್ಲೆಯರೆ ನಿಮ್ಮೊಲವಿದೆಲ್ಲ ನನ್ನೆದೆಗಿಂಪು
ವಲ್ಲಭೆಯರಂಗರೂಪವೆ ಮನಕೆ ತಂಪು
ಸಲ್ಲಿಸಲು ನನಗಿಂದು ಮತ್ತೇನ ತಂದಿಹಿರಿ?
ಹಸಿದು ಬಂದಿಹೆನಿಂದು ಅಸಿನಡುವಿನರಸಿಯರೆ
ತುಸುನೀಡಿ ನನ್ನೊಡಲ ತಣಿಸಿ ಸರಸಿಯರೆ"
ಒಲವಿನೆದೆ ಬೆಚ್ಚಿತ್ತು ! ಚೆಲುವು ಮೊಗ ಮುಚ್ಚಿತ್ತು !
ತಲೆಕೆಳಗೆ ಮಾಡಿತ್ತು ಲಲನೆಯರ ಜವ್ವನವು !
ನಿಲದಾಯ್ತು ಸಿಂಗಾರ ! ಉಲುಹಡಗಿ ಮೌನತೆಯ
ನಾಚಿಕೆಯ ತೆರೆಯಲ್ಲಿ ರಂಗಿನಾಶ್ರಯವನ್ನು
ಯಾಚಿಸಿತು ! ನಲ್ಲನಿಗೆ ಉಣಿಸಬೇಕೇನನ್ನು?
ಒಲೆಯ ಮೇಲದೆ ಹಿಂಡಿ ತಂದ ಹಾಲನು ಕಾಸಿ
ನೆಲಗುಡಿಸಿ ಮಣೆಹಾಕಿ ಸುಲಿಯುತಿರೆ ಕದಳಿ ಫಲ

---

* ಸೃಜಕ ಸಮ್ಮಿಳನ – Creative harmony

ಒಲವಿನವ ಬಂದವನೆ ಹಾಲು ಹಣ್ಣನು ಸವಿದು
ಚೆಲುವೆಯರನುಳಿದೆನ್ನ ಸೆಳೆದಪ್ಪಿ ಮುದ್ದಿಸಿದ !
ಬಲುಚೋದ್ಯವಿದು ಗೆಳತಿ, ನನ್ನೊಡನೆ ನಿದ್ರಿಸಿದ !
ಪ್ರೇಮವಿಲ್ಲದ ರೂಪ ವಿಷಯಭೋಗಿಗಾಗಿ
ಸೇವೆಯಿಲ್ಲದ ಪ್ರೇಮ ಬರಿಯ ಸೋಗಿಗಾಗಿ
ಪರಿಶುದ್ಧ ಕಾಯಕವು ಪ್ರೇಮಯೋಗಿಗಾಗಿ !

* * *

ಜ್ಞಾನ–ಪ್ರೇಮ

ಜ್ಞಾನ

ಛಲವೇಕೆ ಪ್ರೇಮವೆ, ನಿನಗಿಂತ ನಾ ಹೆಚ್ಚು
ಇಹಪರದ ಯಾತ್ರೆಯಲಿ ನಾ ಮಾರ್ಗದರ್ಶಿ !
ಬಾಳ ಪರಮಾಗಮದ ಭಾಷ್ಯಕಾರನು ನಾನು
ನೆಲದ ಮೇಲಿದ್ದರೂ ನಾ ಗಗನಸ್ಪರ್ಶಿ !
ಅರಿಯೆಯಾ ನೀನರಿವೆ ಪರಬ್ರಹ್ಮಮೆಂಬುದನು
ಅರಿವೆ ಗುರು, ಅರಿವೆ ನಿಜದಿರವು ಎಂಬುದನು?
ಜ್ಞಾನದಿವ್ಯಾನಂದ, 'ವಿದ್ಯಯಾಮೃತಮಶ್ನುತೆ'
ಜ್ಞಾನಕಿಂ ಮಿಗಿಲಿಲ್ಲ, ಪ್ರೇಮ ನಂಬಿದನು !
ಸರ್ವಂ ಜ್ಞಾನ ಪ್ಲವೇನೈವ ವೃಜಿನಂ ಸಂತರಿಷ್ಯಸಿ
ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ
ಪ್ರಜ್ಞಾ ನೇತ್ರೇ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥

ಪ್ರೇಮ

ತುಸು ನಿಲ್ಲು ಜ್ಞಾನವೇ, ತಿಳಿ ನನ್ನ ಶಕ್ತಿ
ವಿಶ್ವ ವ್ಯಾಪಿಯು ನಾನು, ನಾ ಪ್ರೇಮ ಭಕ್ತಿ
ಜೀವನ ರಹಸ್ಯವನು ತಿಳಿವೆ ನೀನು
ನನ್ನ ಎದೆಯಲ್ಲಿಯೇ ತಳೆವೆ ನಾನು

ಬರಿ ತೋರ್ಕೆಯೊಡನಿಹುದು ನಿನ್ನ ಸಂಗ
ನಾನು ತಿಳಿಯುವೆನದರ ಅಂತರಂಗ
ನೀನೀವೆ ಹರಿಯದಿಹ ಸಂಶಯವ ಕೊನೆಗೆ
ಅದನಳಿಸಿ ನಂಬಿಕೆಯನೀವ ಜಸ ನನಗೆ
ನಿನಗಿಹುದು ಕಾಲಸ್ಥಲಗಳ ಬಿಗಿದ ಬಂಧ
ನೂರು ದಾರಿಯ ಬಲ್ಲೆ ನಾನು ಸ್ವಚ್ಛಂದ
ನಿನ್ನಿಂದ ಅನುಭವ, ನನ್ನಿಂದ ಅನುಭಾವ
ನೀ ದೇವನಾದೊಡಾನವನ ಪ್ರಾದುರ್ಭಾವ !
ವೇದಗಳು ವೇಧಿಸದ ಶಾಸ್ತ್ರಗಳು ಸಾಧಿಸದ
ತರ್ಕವೂ ಶೋಧಿಸದ ಆ ಪರಾತ್ಪರಪದ
ನನಗೆ ನಿಲುಕುವ ಹಾಗೆ ನಿನಗೆ ನಿಲುಕದು ಜ್ಞಾನ
ನಾನಿಹೆನು ಪರಶಿವನ ಸಿಂಹಾಸನ !
"ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾಶ್ರುತೇನ
ಯಮೇವೈಷ ವೃಣುತೇ ತೇನಲಭ್ಯ
ಸ್ತಸ್ಯೈಷ ವಿವೃಣುತೇ ತನೂಂ ಸ್ವಾಮ್"

ಕವಿ

ಒಂದೆ ತಾಯಿಯ ಎರಡು ಸ್ತನಗಳೇ ಲಾಲಿಸಿರಿ
ನಿಮ್ಮ ನಿಜವನು ಮರೆದು ಹೋರಾಡ ಬೇಡಿ !
ಇಬ್ಬರೂ ಪೂರಕರು ಒಬ್ಬರೊಬ್ಬರ ಬಾಳ–
ಪೂರ್ಣತೆಗೆ; ಇದ ಮರೆದು ಮೇಲಾಡಬೇಡಿ !
ತಿಳಿಯುವುದೆ ಒಲಿಯುವುದು ಒಲಿಯುವುದೆ ತಿಳಿಯುವುದು
ಒಂದು ಹಿಡಿದರೆ ಸಾಕು ಇನ್ನೊಂದು ದೊರೆಯುವುದು
ತಿಳಿಯದಲೆ ಒಲವಿಲ್ಲ ಒಲಿಯದಲೆ ತಿಳಿವಿಲ್ಲ
ಒಂದು ಬಿಟ್ಟರೆ ಇನ್ನೊಂದು ಅರೆಯಲಹುದು ॥
ಸತ್ಯಮಂದಿರದಲ್ಲಿ ಉರಿವ ಜ್ಯೋತಿಯು ಜ್ಞಾನ
ಸೌಂದರ್ಯ ಮಂದಿರದ ಪ್ರಣತಿ ಪ್ರೇಮ

ಸೌಂದರ್ಯ ಸತ್ಯಗಳು ಜನನಿ ಜನಕರು ಜಗಕೆ
ಜ್ಞಾನ ಪುರುಷನು ಪ್ರಕೃತಿಮಾತೆ ಪ್ರೇಮ ॥
ಜ್ಞಾನ ತಂದೆಯ ಹಾಗೆ ಪ್ರೇಮ ತಾಯಿಯ ಹಾಗೆ
ಇಬ್ಬರೂ ಬೇರಾಗೆ ಎಲ್ಲಿ ಶಿವಸೃಷ್ಟಿ?
ಜ್ಞಾನಜ್ಯೋತಿಯು ಬೆಳಗೆ ಪ್ರೇಮತೈಲವೆ ಬೇಕು
ಎರಡು ಕಣ್ಣಾದೊಡೇಂ? ಒಂದೆ ದೃಷ್ಟಿ !
"ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ
ದದಾಮಿ ಬುದ್ಧಿಯೋಗಂ ತಂ ಏನ ಮಾಮುಪಯಾಂತಿ ತೇ
ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ."

* * *

ಸೌಂದರ್ಯ–ಪ್ರೇಮ

ಏಕೆ ಮೋಹಿಸದಾದಿರೇಕೆ ಶೋಭಿಸದಾದಿ–
ರೇಕೆ ಮುನ್ನಿನ ಮೋಡಿಯಿಲ್ಲದಾಯ್ತು?
ಏಕೆ ನಿಮ್ಮಯ ರೂಪವೆನಗೆ ರುಚಿಸದೆ ಹೋಯ್ತು
ಜಗದ ಸುಂದರ ವಸ್ತುಗಳೆ ಏನಿದಾಯ್ತು?
ಓ ಕಾಡ ಹಕ್ಕಿಗಳೆ ಓ ಬಾನ ಚಿಕ್ಕೆಗಳೆ
ತೆಕ್ಕೆಯೊಳು ಮೈಮರೆತ ಜಕ್ಕವಕ್ಕಿಗಳೆ
ಓ ಚಂದ್ರ ರಜನಿಯರೆ ಓ ಇಂದ್ರಚಾಪವೆ
ಕೊಕ್ಕಿನೊಳು ಕೊಕ್ಕಿಟ್ಟು ಕುಣಿವ ಕೇಕಿಗಳೆ
ತೆಂಬೆಲರೆ ಅಂಬುಜವೆ ತುಂಬಿಗಳೆ ಹೊಂಬಿಸಿಲೆ
ಅಂಬರದಿ ಲೀಲೆಯಲಿ ನಲಿವ ಮೋಡಗಳೆ
ಮುಂಬೆಳಗೆ ಮುಚ್ಚಂಜೆ ಹುಲ್ನೆಲವೆ ಬೆಳ್ಮಂಜೆ
ಅಂಬುಧಿಯ ಅಲೆಗಳೆ, ಅಲೆಯ ಹಾಡುಗಳೆ
ಏಕೆ ಮೋಹಿಸದಾದಿರೇಕೆ ಶೋಭಿಸದಾದಿ–
ರೇಕೆ ಮುನ್ನಿನ ಮೋಡಿ ಇಲ್ಲವಾಯ್ತು?

ಏಕೆ ನಿಮ್ಮಯ ರೂಪವೆನಗೆ ರುಚಿಸದೆ ಹೋಯ್ತು
ಜಗದ ಸುಂದರ ವಸ್ತುಗಳೆ ಏನಿದಾಯ್ತು?

* * * *

ಒಲವು ಕಣ್ದೆರೆದಾಗ ಚೆಲುವಿಗಿಹ ಬೆಲೆಯಲ್ಪ
ಹಣ್ಣಿಗಿಹ ಬಣ್ಣದಲಿ ಹೂವಡಗುವಂತೆ
ಒಲವ ಕೆರಳಿಸಿ ಚೆಲುವು ಒಲವಿನಲೆ ಬೆರೆಯುವುದು
ಬೇರಾಗಿ ಬಾಳದದು ಮುನ್ನಿನಂತೆ
ಒಲವು ಬಾಳುವುದಾಗ ಚೆಲುವು ಕೈಬಿಟ್ಟರೂ
ಚೆಲುವು ಬಾಳ್ವುದು ಒಲವಿನುಪಕಾರದಲ್ಲಿ !
ಓ ಜಗದ ಚೆಲುವುಗಳೆ ನನ್ನೆದೆಯ ಮೋಹಿಸಲು
ಬನ್ನಿ ನನ್ನೊಲವಿನಾ ಸಹಕಾರದಲ್ಲಿ
ಎಲೆಗಾಳಿ ತಳೆದು ಬಾ ಅವಳ ಸುಯ್ಗಂಪನ್ನು
ಕುಸುಮಗಳೆ ಬಳಿದು ಕೊಳಿ ಅವಳ ಬಣ್ಣ
ಕಲಿಯಿರೈ ಭೃಂಗಗಳೆ ಅವಳ ಕೊರಳಿನ ರಾಗ
ಕೋಗಿಲೆಯ ಹಾಡವಳ ರೂಪ–ಗುಣ–ಗಾನ
ಕೊಳವೆ ತಳೆಯಿನ್ನವಳ ಪ್ರತಿಬಿಂಬವನೆ ನೀನು
ನಳಿನವೇ ಕದಿಯವಳ ಮೊಗದ ಅಂದ
ಇಲ್ಲದಿರೆ ನೀವೆನ್ನ ಮನವ ಮೋಹಿಸಲಾರಿ
ರೆನ್ನ ಪ್ರೇಮದಿ ಬಾಳ್ಗೆ ನಿಮ್ಮ ಚೆಂದ !

* * *

ಜ್ಞಾನ–ಕರ್ಮ

ಜ್ಞಾನ

ಅರುಹಿಲ್ಲವಾದರೂ ತೆರಹಿಲ್ಲ ನಿನಗಿನಿತು
ತಿರುತಿರುಗಿ ಸುತ್ತುತಿಹೆ ನಿಂತಲ್ಲೆ ನೀನು
ನೋಡೆನ್ನ, ವಿಧಿನಿಯಮಶ್ರುತಿತತಿಗಳನು ಮೀರಿ
ಸಂಚರಿಪೆ ಸರ್ವತ್ರ ಸ್ವೇಚ್ಛೆಯಲಿ ನಾನು !

ನೀನಿರುವೆ ರಜತಮವು, ನಾನು ಸತ್ವದ ಸುಮವು
ನೀನಿರುವೆ ಆಸಕ್ತಿ, ಮುಕ್ತಾತ್ಮ ನಾನು !
ನೀನಿರುವೆ ಬಂಧನವು, ನಾನಿರುವೆ ಸ್ವಾತಂತ್ರ್ಯ
ನೀನಿರುವೆ ಅಂಧಕನು, ಜಗಶ್ಚಕ್ಷು ನಾನು !
ನೀನಿರುವೆ ಕತ್ತಲೆಯು, ನಾನು ಬೆಳಕಿನ ನೆಲೆಯು
ನೀನಿರುವೆ ಜಡವಾದಿ, ಅಧ್ಯಾತ್ಮ ನಾನು !
ಪ್ರಕೃತಿ ಪ್ರೇರಿತ ನೀನು, ದೋಷಪೂರಿತ ನೀನು
ಪಾವನಾತ್ಮಕ ನಾನು ಪರಮಾತ್ಮ ನಾನು !

ಕರ್ಮ

ನಿಲ್ಲು ನಿಲ್ಲೆಲೆ ಜ್ಞಾನ ಸಾಕು ಈ ಅಭಿಮಾನ
ಯಾರನುದ್ಧರಿಸಿಹುದು ಬರಿಯ ಜ್ಞಾನ?
ಕರ್ಮವಿಲ್ಲದ ಜ್ಞಾನ ಶೂನ್ಯ ಸೃಷ್ಟಿಯ ಗಾನ
ವಿಫಲರೋದನ ! ಸಾಕು ಧರಿಸು ಮೌನ !
ಮೇಲೆ ಮೂರ್ತಿ ನೋಡಿ ಹಿಗ್ಗಿ ತಲೆಯ ತೂಗಬೇಕು
ಅರ್ಚಕರು ಚವರಿ ಬೀಸಿ ದಾರಿ ತೋರಬೇಕು
ಬೆಲ್ಲದಚ್ಚು ತೂರಬೇಕು ಹಿಡಿಯೆ ಹಾರಬೇಕು
ನಕ್ಕು ಕುಣಿದು ನಮ್ಮ ಬಾಳ ಗೆಲುವ ಸಾರಬೇಕು
ನೂರು ದುಃಖಗಳನು ನುಂಗಿ ನಗೆಯ ತೋರಬೇಕು
ಎಲ್ಲರೊಡನೆ ಬೆರೆತು ಒಂದೆ ಸೊಗವ ಬೀರಬೇಕು
ಒತ್ತಿ ಬರುವ ಕಣ್ಣನೀರ ಹತ್ತಿ ಹಿಡಿಯ ಬೇಕು
ಕತ್ತಲಲ್ಲಿ ಅತ್ತು ಬೆಳಗೆ ಮತ್ತೆ ದುಡಿಯಬೇಕು
ಕಬ್ಬು ಕಡಿದು ರಸವ ಹೀರಿ ಉಬ್ಬಿ ಜಿಗಿಯಬೇಕು
ತೂಗುತೊಟ್ಟಿಲೇರಿ ಸುತ್ತ ಜಗವ ನೋಡಬೇಕು
ಮೇಲಕೊಮ್ಮೆ ಕೆಳಗೆ ಒಮ್ಮೆ ಜೀಕವಾಡಬೇಕು
ಮೇಲೆ ಹೋಗೆ ಒಂದು ಷೋಕು ಕೆಳಗೆ ಒಂದು ಝೋಕು
ಬಣ್ಣ ಬಣ್ಣದುಡಿಗೆ ಉಟ್ಟು ಕಣ್ಣ ತಣಿಸಬೇಕು
ನೀಗಿದಷ್ಟು ತೇರನೆಳೆದು ಮೈಯ ದಣಿಸಬೇಕು
ತುಸುವು ತೇರನೆಳೆಯದಿರಲು ಹುಟ್ಟಿ ಫಲವದೇನು?
ನಾಲ್ಕು ಬೆರಳು ನೂಕೆ ಮುಂದೆ ಸಾಕು ಬದುಕು ಜೇನು !
ಮುಂದೆ ಮುಂದೆ ತೇರನೆಳೆದು ಗುರಿಯ ಮುಟ್ಟಬೇಕು
ಅಲ್ಲಿ ಎಲ್ಲರೊಳ್ಳಿನೊಂದು ಗುಡಿಯ ಕಟ್ಟಬೇಕು !

–೧೯೪೧

* * *

ಧನ್ಯ–ಭಾರತ

ಕೋಟಿ ಹೃದಯ ಮೀಟಿ ಬಂತು ಇಂದು ಒಂದೆ ಶುಭ ಶ್ರುತಿ–
"ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !"
ವಚನದಲ್ಲಿ ನಾಮರುಚಿಯು ನಯನದಲ್ಲಿ ಮೂರುತಿ
ಶಿರದೊಳವಳ ವರದಹಸ್ತ ಕವಿಯೊಳವಳ ಕೀರುತಿ
ಬೆಳಗ ಬನ್ನಿ ತೊಳಗುತಿರುವ ಕಣ್ಗಳಿಂದೆ ಆರತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ದಾಸ್ಯ ಹೋಯ್ತು ಬೆಳಗಲಿನ್ನು ನಾಡ ಜೀವದೀಧಿತಿ
ಬೆಳೆಯಲೆಲ್ಲ ವಿದ್ಯೆಕಲೆಯು ಶಾಸ್ತ್ರ–ಯುಕ್ತಿ–ಸಂಸ್ಕೃತಿ
ಚೆಲ್ಲವರಿಯಲೆಲ್ಲೆಯಿರದ ಭಾವ–ಸ್ಫುರಣ–ಸತ್ಕೃತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ಗಾನ ತಾನ ಚಿತ್ರ ಶಿಲ್ಪ ಕಾವ್ಯ ನಾಟ್ಯ ಝಂಕೃತಿ
ನೀತಿ ಪ್ರೀತಿ ಶಾಂತಿ ದಾಂತಿ ಸತ್ಯ ಸಹನೆ ಸನ್ಮತಿ
ಮೊಳೆಯಲಿನ್ನು, ಸಾಕು ವೈರ ದ್ವೇಷ ರೋಷ ದುಷ್ಕೃತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ಸಮತೆ ಮಮತೆ ಕಾರ್ಯಕ್ಷಮತೆ ತತ್ಪನಿಷ್ಠೆ ಶಿವರತಿ
ಬಂಧುಭಾವ ಭದ್ರವಾದ ಸ್ಮರಣ ಮನನ ಆಕೃತಿ
ಚಿಗಿಯಲಿನ್ನು ಸಾಕು ಸಾಕು ಮನುಜ ಮನದ ವೈಕೃತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ಜ್ಯೋತಿಯಂತೆ ತಾರೆಯಂತೆ ತೊಳಗುತಿರುವ ಸಂತತಿ
ಚಿನ್ನರನ್ನ ದವಸ ಧಾನ್ಯ ಸಸ್ಯ ವೃಕ್ಷ ಫಲತತಿ
ತೋಟ ಪಟ್ಟಿ ಗದ್ದೆ ಕಾಡು ಹೆಚ್ಚಲಿನ್ನು ದಿನಂಪ್ರತಿ–
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ಜ್ಞಾನ ಶೀಲ ಚರಿತೆ ಒಲವು ಧರ್ಮಬುದ್ಧಿ ಉಪರತಿ
ಗೈಯ್ಮೆ ಸಾಸ ಶೌರ್ಯ ಸ್ಥೈರ್ಯ ಕ್ಷಮೆಯು ಶಮೆಯು ಚಿರಧೃತಿ
ಭಾರತೇಯರೆಲ್ಲರಲ್ಲಿ ಮೂಡಲೀ ಮಹೋನ್ನತಿ

ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ಪ್ರಜಾರಾಜ್ಯ ರಥದಿ ಗಾಂಧಿಯಿತ್ತ ತತ್ತ್ವ ಮೂರುತಿ
ವೀರ ನೆಹರು ಮಹಾರಥಿಯು ಸರ್ದಾರರಿದರ ಸಾರಥಿ
ಆಗಲಿನ್ನು ಕೊರತೆ ಹಸಿವೆ ಮೌಢ್ಯ ಜಾಡ್ಯ ಸಂಹೃತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ಯೋಧ ಕೃಷಿಕ ಕೂಲಿ ವಣಿಕ ರಾಜದೂತ ಸಾಹಿತಿ
ಅರ್ಥವೇತ್ತ ತತ್ತ್ವದರ್ಶಿ ದಲಿತ ಧನಿಕ ದಳಪತಿ
ಎಲ್ಲರೊಂದೆಯಾಗಿ ದುಡಿದು ತರಲಿ ಸಕಲ ಸದ್ಗತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ವೈರದ್ವೇಷ ಬೇರುಬಿಟ್ಟು ಒರಲುತಿಹಳು ವಸುಮತಿ
ಲೋಕದೆಲ್ಲ ಮೂಕ ಜನತೆಗೊಂದೆ ದುಃಖ ದುರ್ಗತಿ
ಅವರ ಆಸೆಯಂಕುರಾಗಿ ಸತ್ಯಪ್ರೇಮಸ್ಥಿರವ್ರತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ಹಿಂಸೆ ಹುಸಿಯು ಲೋಭ ತೃಷೆಯು ಹಿಸುಣತನವಹಂಕೃತಿ
ರಾಜ್ಯದಾಹ: ಯುದ್ಧಮೋಹ ಕಪಟ ಕುಟಿಲ ಚಮತ್ಕೃತಿ
ಸ್ವಪ್ನದಲ್ಲು ಸೋಂಕದಮಳ ರತ್ನಗರ್ಭೆ ಗುಣವತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !
ಧನ್ಯೆ ಓ ಸನಾತನೆ, ಗೌರಿ–ಲಕ್ಷ್ಮಿ–ಭಾರತಿ
ಧನ್ಯೆ ಚಿರವಿನೂತನೆ, ಧನ್ಯೆ ಧನ್ಯೆ ಭಗವತಿ
ಧರ್ಮಚಕ್ರನಿಕೇತನೆ ಅಮರ ಚೇತನಾವತಿ
ಪ್ರಜಾರಾಜ್ಯ ಪಟ್ಟವೇರುತಿರುವ ತಾಯಿ ಭಾರತಿ !

[ಪ್ರಜಾರಾಜ್ಯೋದಯದ ದಿವಸ ಪ್ರಸಾರಿತವಾದುದು]

* * *

ಸ್ವಾಗತವು ಸ್ವಾತಂತ್ರ್ಯ ದಿನವೆ !

ಸ್ವಾಗತವು ಸ್ವಾತಂತ್ರ್ಯದಿನವೆ ನಾಡ ಪುಣ್ಯಪ್ರಸೂನವೆ
ಓ ಹುತಾತ್ಮರ ಹೃದಯಗಾನವೆ ತಂದೆ ಗಾಂಧಿಯ ದಾನವೆ

ವ್ಯೋಮಕೇಶಿನಿ ಚಿರಸುಹಾಸಿನಿ ಸಕಲ ಸಂಪದಶಾಲಿನಿ
ಹಿಮಕಿರೀಟಿನಿ ಪ್ರಣತಪಾಲಿನಿ ವೈರಿಮಸ್ತಕಮಾಲಿನಿ
ಹೇಮಗರ್ಭಿಣಿ ಸಿಂಹವಾಹಿನಿ ಶೇಷಫಣಿಸಿಂಹಾಸಿನಿ
ಭದ್ರಭಾವೋದ್ಭಾವಿನೀ ಭಾರತಿಯ ತೂರ್ಯಧ್ವಾನವೆ
ಸ್ವಾಗತವು ಸ್ವಾತಂತ್ರ್ಯ ದಿನವೆ ತಂದೆ ಗಾಂಧಿಯ ದಾನವೆ !

ಧರ್ಮದಾಯಿನಿ ಅಭಯಕಾರಿಣಿ ಆತ್ಮತತ್ತ್ವಪ್ರಕಾಶಿನಿ
ದುಷ್ಟಮರ್ದಿನಿ ದುರಿತನಾಶಿನಿ ಆದಿಶಕ್ತಿ–ವಿಲಾಸಿನಿ
ಜ್ಞಾನದರ್ಶಿನಿ ಅಮೃತವರ್ಷಿಣಿ ಜೀವ–ಸಸ್ಯ–ವಿಕಾಸಿನಿ
ವೀರಪುತ್ರಪ್ರಸೂತಿನೀ ಭಾರತಿಯ ವಿಜಯವಿತಾನವೆ–
ಸ್ವಾಗತವು ಸ್ವಾತಂತ್ರ್ಯದಿನವೆ ತಂದೆ ಗಾಂಧಿಯ ದಾನವೆ

ಬಿಡುಗಡೆಗೆ ಬೆಲೆಯೆಲ್ಲಿ ಬಡವಗೆ ರೊಟ್ಟಿ ಬಟ್ಟೆಯು ಸಿಗದಿರೆ
ಕೃಷಿಕ ಶ್ರಮಿಕರ ಮುಖವು ಒಮ್ಮೆಯು ಹಿಗ್ಗಿ ಸೊಗದಲಿ ನಗದಿರೆ
ಜೀರ್ಣ ಶೀರ್ಣ ಶರೀರಗಳು ಮೊದಲಂತೆ ಬತ್ತಿರೆ ಸುಗಿದಿರೆ
ಎಂದು ಬಿಡುಗಡೆ ಜರೆಯದಿರು ಓ ವಿಕ್ರಮನ ಸಂತಾನವೆ
ಸ್ವಾಗತವು ಸ್ವಾತಂತ್ರ್ಯದಿನವೆ ತಂದೆ ಗಾಂಧಿಯ ದಾನವೆ

ಭೂಮಿ ಕಂಪಿಸಿ ಮೇಘ ವಂಚಿಸಿ ವೈರಿ ಮರ್ಮವ ಘಾತಿಸಿ
ಯುದ್ಧಭೀತಿಯ ಭೂತ ಚೇಷ್ಟಿಸಿ ನಮ್ಮ ಮೌಢ್ಯವೆ ನರ್ತಿಸಿ
ಅರ್ಥಸಂಕಟ ದಹಿಸುತಿದೆ ಭಾರತವನೆಲ್ಲವ ವ್ಯಾಪಿಸಿ !
ಆದರೂ ಸ್ವಾತಂತ್ರ್ಯ ರಕ್ಷಿಸು, ಇರಲಿ ಹೋಗಲಿ ಪ್ರಾಣವೆ
ಸ್ವಾಗತವು ಸ್ವಾತಂತ್ರ್ಯದಿನವೆ ತಂದೆ ಗಾಂಧಿಯ ದಾನವೆ

ಶತಕ ಶತಕವು ದಾಸ್ಯ ಸೋಸಿದೆ ಈಗ ಪಡೆದಿಹೆ ಬಿಡುಗಡೆ
ಬಿಡುಗಡೆಯ ಬೆಲೆ ಕಟ್ಟಬಲ್ಲೆಯ? ಹೇಡಿಬಲ್ಲನೆ ಬಿಡುಗಡೆತರುವ
ಸಂಕಟ ದಾಸ್ಯಸಂಪದಕಿಂತ ಶ್ಲಾಘ್ಯವು ಎಂಬುದ?
ಸುಡು ಪರಾಜಯಮತಿಯ ! ಗರ್ಜಿಸು ಗುಡುಗು ಸಿಂಹದ ಸೂನುವೆ !
ಸ್ವಾಗತವು ಸ್ವಾತಂತ್ರ್ಯದಿನವೆ ತಂದೆ ಗಾಂಧಿಯ ದಾನವೆ !

ಇಂದಿಗೂ ನರನರದಿ ಹರಿವುದು ಪುಣ್ಯರಕ್ತಪ್ರವಾಹವು
ರಾಮಕೃಷ್ಣರ ಹನುಮಭೀಮರ ಅತುಲ ಧೈರ್ಯೋತ್ಸಾಹವು
ಸಿಂಹಗಢ ಕಿತ್ತೂರು ಝಾಂಸಿಯ ವೀರಮರಣದ ಮೋಹವು
ರಕ್ಷಿಪೆವು ಸ್ವಾತಂತ್ರ್ಯ ಜ್ಯೋತಿಯ, ಬರಲಿ ರುಧಿರದ ಸ್ನಾನವೆ
ಸ್ವಾಗತವು ಸ್ವಾತಂತ್ರ್ಯದಿನವೆ ತಂದೆ ಗಾಂಧಿಯ ದಾನವೆ

ಸಾವಿನೊಡನೆಯೆ ಸೆಣಸಿ ರಕ್ಷಿಪೆ ಭಾರತದ ಸ್ವಾತಂತ್ರ್ಯವ
ಪ್ರಳಯದೊಡನೆಯೆ ಕಾದಿ ಕಾಯುವೆ ಭಾರತದ ಸ್ವಾತಂತ್ರ್ಯವ
ಸಹಿಸೆನೆಂದಿಗು ಸ್ವಪ್ನದಲ್ಲಿಯು ಇನ್ನು ನಾ ಪರತಂತ್ರವ
ಪೃಥ್ವಿಯಿಹ ಪರ್ಯಂತ ಕೇಳಲಿ ಭಾರತದ ವಿಜಯಧ್ವಾನವೆ
ಸ್ವಾಗತವು ಸ್ವಾತಂತ್ರ್ಯದಿನವೆ ತಂದೆ ಗಾಂಧಿಯ ದಾನವೆ

ನವ್ಯ ಪ್ರತಿಭೆಯ ಸೃಜನಚೇತನ ಸಹಿಸು ಇಂದಿನ ಯಾತನಾ
ಯುಗಯುಗದ ಸಂಸ್ಕೃತಿಯ ಜನನಿಯ ಪ್ರಾಣಧಾರೆ ಚಿರಂತನ
ಯಾತನೆಯ ಬಸಿರಲ್ಲೆ ಬೆಳೆಯಲಿ ನೂತ್ನ ಜೀವನ ದರ್ಶನ
ಆಗ ಗಂಗಾಸ್ನಾನಕೊಲಿವುದು ರುಧಿರರಂಜಿತ ವಿಶ್ವವೆ
ಸ್ವಾಗತವು ಸ್ವಾತಂತ್ರ್ಯದಿನವೆ ತಂದೆ ಗಾಂಧಿಯ ದಾನವೆ

ಋಷಿದಧೀಚಿಯ ಅಸ್ಥಿ–ಪುಟದಲ್ಲಿ ಬರೆದ ಭಾರತ–ಸಂಸ್ಕೃತಿ
ಬಾಪುವಿನ ಬಲಿದಾನವೇದಿಕೆಯಿಂದ ಬೇಡಿದೆ ಆಹುತಿ
ಬಾಷ್ಪ ಸ್ವೇದದ ಕ್ಷುಧೆಯ ರುಧಿರದ ಕಠಿನ ಶ್ರಮಗಳ ಆಹುತಿ
ಬಾ ಸಮರ್ಪಿಸು ನಿನ್ನ ಎಲ್ಲವ ಭವ್ಯ ಭಾರತ ಕಾಣುವೆ
ಸ್ವಾಗತವು ಸ್ವಾತಂತ್ರ್ಯ ದಿನವೆ ತಂದೆ ಗಾಂಧಿಯ ದಾನವೆ

ಭಾರತದ ಸ್ವಾತಂತ್ರ್ಯ ಕಾಯಲು ಇಂದು ಶಪಥವ ತಾಳುವೆ
ನಾಡ ಬಿಡುಗಡೆ ಕಸಿಯ ಬಯಸುವ ಹಗೆಯ ಗಂಟಲು ಸೀಳುವೆ
ಭೋಗಲಾಲಸೆ ಭೀರುತನ ಕ್ಲೈಬ್ಯಗಳನಿಂದೇ ಬೇಳುವೆ
ತಾಯೆ ನಮ್ಮಯ ತ್ಯಾಗದಲಿ ಜೀವಂತವಿರು ಅಭಿಮಾನವೆ
ಸ್ವಾಗತವು ಸ್ವಾತಂತ್ರ್ಯ ದಿನವೆ ತಂದೆ ಗಾಂಧಿಯ ದಾನವೆ ॥
[ಸ್ವಾತಂತ್ರ್ಯ ದಿನೋತ್ಸವದಲ್ಲಿ ಪ್ರಸಾರಿತವಾದುದು]

* * *

ಧನ್ಯಮೀ ದೀಪೋತ್ಸವಂ

ಅಶುಭ ಶುಭಗಳ ನಡುವೆ ಜ್ಯೋತಿ ಧ್ವಾಂತದ ನಡುವೆ
ಒಳಿತು ಕೆಡುಕಿನ ನಡುವೆ ನಡೆದಿಹುದು ಯುದ್ಧ
ಜಗದಾದಿಯಿಂ ಬಂದ ಈ ನಿತ್ಯ ಬವರದಲಿ
ಭಾರತವದೆಂದಿಗೂ ಒಳ್ವಿನದೆ ಯೋದ್ಧ ॥

ಸಾಮ್ರಾಜ್ಯದಾಸೆಯಲಿ ಸಂಪತ್ತಿನಾಸೆಯಲಿ
ಸಂಹಾರಪಿಪಾಸೆಯಲಿ ಒಮ್ಮೆಯೂ ಯುದ್ಧ
ಹೂಡದಿಹ ನಾಡೊಂದೆ ಸಕಲ ಭೂತಲದಲ್ಲಿ
ಅದುವೆ ಭಾರತ ವರ್ಷ–ಸರ್ವಾಂಗ ಶುದ್ಧ !

ಸಾಮ್ರಾಜ್ಯ ಶೂರ್ಪನಖಿ ಮರ್ಯಾದೆಯಂ ಮೀರಿ
ಚೇಷ್ಟೆಗೈದರು ಸತ್ಯ ಪ್ರೇಮದಿಂದವಳ
ಮೈತ್ರಿಯಿಂದಲೆ ಕಳಿಸಿ ಸ್ವಾತಂತ್ರ್ಯ ಸಾಧಿಸಿದ
ರಾಷ್ಟ್ರವಾವುದು ರಾಷ್ಟ್ರ ಸಂಘವೇ ಹೇಳ !

ಇಂಥ ಸಹನೆಯ ದೇಶ ಶಾಂತಿ ಸ್ನೇಹದ ದೇಶ
ಆತ್ಮಶಕ್ತಿಯ ಬಲದಿ ಸ್ವಾತಂತ್ರ್ಯಗಳಿಸಿ
ತನ್ನಿಚ್ಛೆಯಂದದಲಿ ತನ್ನ ತಾನಾಳುತಿರೆ
ಒಳ ಹೊರಗೆ ವೈರಿಗಳು ಸಂಚು ನಡೆಸಿ–

ದುಷ್ಟ ಹೇತುವಿನಿಂದ ಕುಟಿಲ ನೀತಿಗಳಿಂದ
ಮರ್ಮಘಾತವ ಗೈದರೆನಿತೊ ಪಶುವೃತ್ತಿ !
ಆದರೇಂ? ನಮ್ಮ ಹಿರಿ ನಾಯಕರ ತಪದಿಂದ
ಭಾರತವು ಇಂದೊಂದು ಜಾಗತಿಕ ಶಕ್ತಿ !

ಪಾಶ್ಚಾತ್ಯರಂದದಲಿ ಪಾಶವಿಕ ಶಕ್ತಿಯೆ?
ಶಿವದ ತಪದೊಳಗಿರುವ ಶುಭದ ಶಕ್ತಿ !
ಸತ್ಯ ಪ್ರೇಮದ ಶಕ್ತಿ ಶಾಂತಿ ಸ್ನೇಹದ ಶಕ್ತಿ–
ಕೊನೆಗೆ ಇದರಿಂದಲೇ ಜಗಕೆ ಮುಕ್ತಿ !

ದಿನ ದಿನಕೆ ಬೆಳೆಯಲೀ ಭಾರತದ ಶುಭ ಭಕ್ತಿ
ಪಡೆದು ನಮ್ಮೆಲ್ಲರಲಿ ತನ್ನ ಅಭಿವ್ಯಕ್ತಿ !
ದೀಪಾಳಿಯಿದು ನಿಜದಿ ಜೀವ–ದೀಪಾವಳಿಯು
ದೀಪವಾಗಲಿ ನಾಡ ಪ್ರತಿಯೊಂದು ವ್ಯಕ್ತಿ !

ಇನ್ನು ಈ ನಾಡಿನಲ್ಲಿ ನಡೆದಿರಲಿ ಎಂದೆಂದು
ಮುಕ್ತಾತ್ಮ ಜೀವಿಗಳ ನಿತ್ಯೋತ್ಸವಂ
ಒಳಬೆಳಕು ತುಳುಕಲೀ ಜೀವ–ದೀಪಾಳಿಯಲಿ
ಹಾಗಾಗೆ ಧನ್ಯಮೀ ದೀಪೋತ್ಸವಂ !

* * *

ಕನ್ನಡದ ದೀಪವದು ಕಾಣದಿಹುದು

ಭಾರತಿಯ ಮನೆಯಲ್ಲಿ ಲಕ್ಷ ದೀಪಗಳಿಂದು
ನಕ್ಷತ್ರಗಳ ತೆರದಿ ಹೊಳೆಯುತಿಹುವು
ಪ್ರತಿ ದೀಪವೂ ತನ್ನ ಸ್ವಾತ್ಮ–ತೇಜವ ಹರಡಿ
ಹಚ್ಚಿದರ ಬೆಳ್ಜಸವ ಹರಡುತಿಹುವು

ಮೂಲೆ ಮೂಲೆಗಳಿಂದ ಕೋಣೆ ಕೋಣೆಗಳಿಂದ
ಚೈತನ್ಯ–ಜ್ಯೋತಿಯಾ ಬೆಳಕು ಹರಿದು
ಝಗಝಗಿಸಿ ಹೊಳೆಯುತಿದೆ ಭಾರತಾಂಬೆಯ ಮನೆಯು
ಮುಸುಕಿರ್ದ ಕತ್ತಲೆಯ ತೆರೆಯು ಸರಿದು

ಮನೆಯೆಲ್ಲ ಥಳಥಳಿಪ ದೀಪಗಳ ದೀಪ್ತಿಯಲಿ
ಮಿಂಚುಗಳು ಮೂಡುವಾ ತಾಣವಾಗಿಹುದು
ಮೂಲೆಗಳು ಬೆಳಗಿದರು ನಡುಮನೆಯು ಕತ್ತಲೆಯು
ಕನ್ನಡದ ದೀಪವದು ಕಾಣದಿಹುದು !

ಹಿಂದುಗಳ ನಾಡಿನಲಿ ಗೂಡಾರಗಟ್ಟಿರ್ದ
ಗಾಢ ಕತ್ತಲೆಯೆಲ್ಲ ಸರಿದು ಹರಿದು
ಒಂದೆ ತಾಣದಿ ನೆಲೆಸಿತೆಂಬಂತೆ ಕಾಣುತಿದೆ
ಕನ್ನಡದ ಸಿರಿಮನೆಯು ಕಪ್ಪುಕರಿದು !

ಮಿಂಚು ಹುಟ್ಟುವನಾಡು ಮನಸು ಮಾಡಿದೊಡೊಮ್ಮೆ
ಬ್ರಹ್ಮಾಂಡವನ್ನೆಲ್ಲ ಬೆಳಗಬಹುದು !
ಕನ್ನಡದ ಸಿರಿವೆಳಕು ಮುನ್ನೀರುಗಳ ದಾಟಿ
ನಿಟ್ಟು ನಿಟ್ಟಿನ ನಾಡ ತೊಳಗಬಹುದು !

ಮಂಗಳೂರಿನ ಮಣ್ಣು ಹಣತೆಯನು ಹದಗೊಳಿಸಿ
ಮೈಸೂರ ಸಿರಿಗಂಧದೆಣ್ಣೆಯೆರೆದು
ರಾಯಚೂರಿನ ಹತ್ತಿಯಲಿ ಬತ್ತಿಯಣಿಗೊಳಿಸಿ
ಧಾರವಾಡದ ಕೆಚ್ಚು– ಕಡ್ಡಿ ಕೊರೆದು

ಕನ್ನಡದ ಹೊಂದೀವಿಗೆಯ ಹಚ್ಚಲಿನ್ನೊಮ್ಮೆ
ಬಸವ ವಿದ್ಯಾರಣ್ಯ ಹುಟ್ಟಿ ಬರಲಿ !
ಕನ್ನಡದ ವೈರಿಗಳ ಮೆಟ್ಟಿ ಕನ್ನಡ ನಾಡ
ಚಿನ್ನರನ್ನದ ಗುಡಿಯ ಕಟ್ಟಿ ಬರಲಿ !

ಕನ್ನಡದ ಬತ್ತಿಯೆಳೆಗಿಡಿದ ಮಂಕನು ತೆಗೆಯೆ
ನನ್ನ ಕಾಯವು ಚಾಚು–ಕಡ್ಡಿಯಾಗಿರಲಿ !
ಭಾರತದ ದೀವಳಿಗೆಯಲ್ಲಿ ಶಿವಗನ್ನಡದ
ಜ್ಯೋತಿಯಿದು ತೇಜಸ್ಸಿನೊಡ್ಡಿಯಾಗಿರಲಿ !

–೧೯೩೯

* * *

ಕನ್ನಡದ ಬೆಳೆ

ಹೊನ್ನ ಬೆಳೆ ಬರುತಿದ್ದ ಕನ್ನಡದ ಹುಲುಸು ಹೊಲ
ಬೀಳುಬಿದ್ದಿಹುದಿಂದು ಬಂಜೆಬಯಲಾಗಿ
ಉತ್ತುವುದು ಬಹಳಾಯ್ತು ಬಿತ್ತುವರೆ ಬರಲಿಲ್ಲ
ಮುನ್ನ ಬಿತ್ತಿದ ಬೆಳೆಯೆ ಇದುವರೆಗೆ ಕೊಯಲಾಗಿ

ಬರಗಾಲ ಬಂದಿಹುದು ಸಿರಿಯ ತವರೂರಿಗೆ
ಹೆರರ ಹಾವಳಿ ಬಂತು ನಮ್ಮ ನಡುಕೇರಿಗೆ
ಕೊಟ್ಟುಬಿಟ್ಟೆವು ಹೊಲವ ಪರಜನಕೆ ಕೋರಿಗೆ
ನಮ್ಮ ಹಾಳನು ಕಾಂಬ ಕಣ್ಣಿಹುದು ಯಾರಿಗೆ ?

ಕೆಲರು ಬಿತ್ತುತಲಿಹರು ಫಲಬರದ ಪಯಿರನ್ನು
ನಮಗೆ ಬೇಡಾದುದನೆ ಬಿತ್ತುವರು ಕೆಲರು
ಹಸಿವೆ ಸುಡುತಿರುವಾಗ ಹೂದೋಟಗಳ ಬೆಳೆಸಿ
ಹಿಗ್ಗಿನಲಿ ಉಬ್ಬಿನಲಿ ಕುಣಿಯುವವರು ಕೆಲರು !

ಹಸನ ಮಾಡಿದ ಹೊಲದಿ ಕಸವ ಬೆಳೆಸುವರಿಲ್ಲಿ
ಹೆರರ ದನಗಳಿಗೆಂದು ಹುಲ್ಲು ಬೆಳೆಸುವರಲ್ಲಿ
ಕನ್ನಡದ ಜನಪದಕೆ ಅನ್ನ ಸಿಗದಿರುವಾಗ
ಅನ್ಯ ನಾಡಿನ ಜನಕೆ ಹಣ್ಣು ಕಳಿಸುವರಿಲ್ಲಿ

ನಮ್ಮ ಕನ್ನಡ ಹೊಲವು ನಮ್ಮವರ ಸೊತ್ತಾಗಿ
ಇದರಲ್ಲಿ ನಮ್ಮ ಉಳುಮೆ ಬಿತ್ತಿಗೆ ಸಾಗಿ
ನಮಗೆ ಬೇಕಾದುದನೆ ನಾವು ಬೆಳೆಯುವರಾಗಿ
ಕನ್ನಡದ ಬೆಳೆ ಬರುವುದೆಂದು ನಮಗಾಗಿ?

ಅಲ್ಲಲ್ಲಿ ಇಷ್ಟಿಷ್ಟು ಒಳ್ಳೆ ಬೆಳೆ ಬಂದರೂ
ಕಳ್ಳಿ ಕರಿಕೆಯೆ ತುಂಬ ಬೆಳೆದಿಹುದು ಬರಿದೆ
ಬಲ್ಲವರ ಗುತ್ತಿಗೆಯು ಎಲ್ಲರೊಕ್ಕಲವಾಗಿ
ಎಲ್ಲ ಮನೆಯೊಳು ಕಣಜ ತುಂಬಿ ಬರದೆ?

ನಮ್ಮ ಹೊಲದೊಳು ಮತ್ತೆ ಪಂಪ ಹರಿಹರ ಬುಕ್ಕ
ಬಸವ ಮಾಧವರ ಬೆಳೆ ತಳತಳಿಸಿ ಬೆಳೆದು

ಶರಣದಾಸರ ಪಯಿರು ಮಹಾದೇವಿ ಮಲ್ಲಮ್ಮ
ಚೆನ್ನಮ್ಮ ಹೊನ್ನಿಯರ ರನ್ನದೋಟವು ಮೊಳೆದು

ನಮಗಾಗಿ ಹೊಸ ಸುಗ್ಗಿ ಕನ್ನಡದ ಜನ ಹಿಗ್ಗಿ
ನೆರೆ ನಾಡಿಗೂ ನಾವು ಎರವಲನು ಕೊಟ್ಟು
ಭಾರತಿಗೆ ಬಲವಾಗಿ ವಸುಮತಿಗೆ ಚೆಲುವಾಗಿ
ಸಕಲರಿಗೆ ಗೆಲುವಾಗಿ ನಮ್ಮ ಹೊಸಹುಟ್ಟು

ನಾವೆಂದು ಬಾಳುವೆವೊ ನಮ್ಮ ನೆಲನಾಳುವೆವೊ
ದಾಸ್ಯವನು ಹೂಳುವೆವೊ ಅಂದು ನಿಜವಾಗಿ
ಕನ್ನಡ ಬೆಳೆ ಹೆಚ್ಚಿ ಮುನ್ನೀರುಗಳ ದಾಟಿ
ಮನುಕುಲವ ತಣಿಸುವುದು ಕಲ್ಪಕುಜವಾಗಿ

ಇದಕಾಗಿ ಒಂದಾಗಿ ದುಡಿಯುವೆವೆ ನಾವು?
ಈ ಗುರಿಯ ಕಡೆ ಕೂಡಿ ನಡೆಯುವೆವೆ ನಾವು?
ಇದಕಡ್ಡ ಬಂದುದನು ತೊಡೆಯುವೆವೆ ನಾವು?
ಇದರ ಸಾಧನೆಯಲ್ಲೆ ಮಡಿಯುವೆವೆ ನಾವು?

ಕಿರಿಯರಿದನೇ ಕೇಳಲಿ
ಹಿರಿಯರುತ್ತರ ಹೇಳಲಿ!

–೧೯೪೦

* * *

ತಾಯ ಬರವು

ಸೂರ್ಯ ಚಂದ್ರರೆ ಸಾಕ್ಷಿ ಸಪ್ತ ಸಾಗರ ಸಾಕ್ಷಿ
ಗಿರಿ ಸರೋವರ ಸಾಕ್ಷಿ ವನದೇವಿ ಸಾಕ್ಷಿ
ಗೋಮಟೇಶ್ವರ ಉಗ್ರನರಸಿಂಹರೇ ಸಾಕ್ಷಿ
ಶ್ರೀ ವಿರೂಪಾಕ್ಷನೀ ಗೋಪುರವೆ ಸಾಕ್ಷಿ

ಕೈಲಾಸವೇ ಸಾಕ್ಷಿ ಕಲ್ಯಾಣವೇ ಸಾಕ್ಷಿ
ಶೃಂಗೇರಿಯೇ ಸಾಕ್ಷಿ ಚಾಮುಂಡಿ ಸಾಕ್ಷಿ

ಬಾದಾಮಿ ಬೇಲೂರು ಉಡುಪಿ ಉಡುತಡಿ ಸಾಕ್ಷಿ
ಹೇಳುವೆನು ನಿಜವನ್ನೆ ಕನ್ನಡದ ಸಾಕ್ಷಿ !

ಯೋಗನಿದ್ರೆಯ ತೊರೆದು ಪೂರ್ಣರೂಪವ ತಳೆದು
ಮತ್ತೆ ಮೈದೋರುವಳು ಕನ್ನಡದ ತಾಯಿ
ಬನ್ನಿ ತಾಯ್ನಾಡಿಗರೆ ತಾಯಡಿಯ ಪೂಜೆಗೆ
ತನ್ನಿ ತನಿವಗೆಯೆಂಬ ಹೂವು ಕಾಯಿ

ಕಾಲು ತೊಳೆಯಲು ಬನ್ನಿ ಕಾವೇರಿ ಕೃಷ್ಣೆಯರೆ
ಮೈದೊಳೆಯ ಬನ್ನಿ ಓ ಭೀಮೆಗೋದೆಯರೆ
ತಾಯ ನೈವೇದ್ಯಕ್ಕೆ ನಿಮ್ಮೆದೆಯ ಸೊದೆ ತನ್ನಿ
ಕನ್ನಡದ ಗೋಕುಲದ ಕೃಷ್ಣರಾಧೆಯರೆ

ಮಲೆನಾಡೆ ತಾ ನಿನ್ನ ಪಚ್ಚ ಪಸುರಿನ ಸೀರೆ
ಕೊಡುಗೆ ಕೊಡು ರಂಜಿಸುವ ಮಂಜು ರವಿಕೆ
ಕಾರವಾರವೆ ತಾರ ತೋರುಮುತ್ತಿನ ಹಾರ
ಮಂಗಳೂರಿಡು ನಿನ್ನ ವಜ್ರದಂಗುಲಿಕೆ

ಮುಡಿಗೆ ತಾ ಮೈಸೂರೆ ಮನ ಸೆಳೆವ ಮಲ್ಲಿಗೆಯ
ಕೋಲಾರ ಕೊಡು ನಿನ್ನ ಚಿನ್ನದೋಲೆ
ಬೆಳವಲದ ಒಕ್ಕಲತಿ ಉಡಿಯಕ್ಕಿಯನು ತುಂಬು
ಹಾವೇರಿ ತಾ ನಿನ್ನ ಯಾಲಕ್ಕಿಮಾಲೆ

ತಿಪಟೂರೆ ತೆಂಗು ಒಡೆ ಶಿವಮೊಗ್ಗೆ ಅಡಕೆ ಕೊಡು
ಸಹ್ಯಾದ್ರಿ ಮದಗಜವೆ ಚವರಿ ಬೀಸು
ನೀಲಗಿರಿ ತೊಡೆ ನಿನ್ನ ಶ್ರೀಗಂಧಲೇಪವನು
ಬಳ್ಳಾರಿ ಹರಳುಗಳ ಹಾಸಿಗೆಯ ಹಾಸು

ಮೈಸೂರು ಧಾರವಾಡದ ಬಾನಿನುಲಿ ಸಾರು
ಬಸವೇಶ ಮಾಧವಗೆ ತಾಯ ಬರವ
ಪುಲಕೇಶಿ ವಿಕ್ರಮರು ನೃಪತುಂಗ ಬುಕ್ಕರು
ಸ್ವರ್ಗದಲೆ ನಿಂತಾರು ಮುಗಿದು ಕರವ !

ಓ ಶರಾವತಿ ಸಾರು ಶಿವಸಮುದ್ರವೆ ಸಾರು
ತುಂಗಭದ್ರೆಯೆ ಸಾರು ತಾಯ ಬರವ
ಇನ್ನು ಫಲವೀಯುವುವು ಈ ನಾಡ ಗಣಿ ಕಣಿವೆ
ಜಲಪಾತ ಹೊನಲುಗಳು ಕಳೆದು ಬರವ

ಪಂಪಹರಿಹರರಾಣೆ ನಾರಣಪ್ಪನ ಆಣೆ
ಮಹಾದೇವಿ ಚೆನ್ನಮ್ಮ ಓಬವ್ವರಾಣೆ !
ಈಗ ಬಂದಿದೆ ಕಾಲ ತಾಯ ಬರಿಸುವ ಕಾಲ
ಇದನು ಕಳಕೊಳ್ಳದಿರಿ ಕನ್ನಡದ ಆಣೆ !

೨೮–೧೨–೧೯೫೨

* * *

ಜನಜೀವನ ಜಾಹ್ನವಿಗೆ !

ಜಯವೆನ್ನಿರಿ ನವಭಾರತ ಜನಜೀವನ–ಜಾಹ್ನವಿಗೆ
ಬನಶಂಕರಿ ಆಭಯಂಕರಿ ವರದಾಯಿನಿ ಭುವಿಗೆ
ಮೇಳ: – ವರದಾಯಿನಿ ಭುವಿಗೆ–ಶಿವೆಗೆ !

ಪುರಜೀವನ–ಮರುಭೂಮಿಯ ಉರಿದಾಹವು ಸಾಕು
ಈ ಥಳುಕಿನ ನಾಗರಿಕತೆ ಈ ಮೋಹವು ಸಾಕು
ಈ ಬೆಳಕಿನ ಉಪ್ಪರಿಗೆಯು ಸಿರಿಗೇಹವು ಸಾಕು
ಬಡಬಾಳಿನ ಭಾಗೀರಥಿಯವಗಾಹನ ಬೇಕು
ಹೊಡೆ ಬೇಗ ಪರಾಕು ! ಜಯವೆನ್ನಿರಿ.....

ಪಟ್ಟಣದಲೆ ಹುಟ್ಟಿರುವೀ ಕಲಹಾಗ್ನಿಯು ಬೇಡ
ಈ ಸ್ವಾರ್ಥದ ದುಷ್ಕೃತ್ಯದ ವಿಲಯಾಗ್ನಿಯು ಬೇಡ
ಈ ಸುಳ್ಳಿನ ಈ ಮೋಸದ ದ್ವೇಷಾಗ್ನಿಯು ಬೇಡ
ಹೊಸ ಹಳ್ಳಿಯ ಹೊಸ ಹುಟ್ಟಿನ ಹೊಸ ಸುಗ್ಗಿಯ ಹಾಡ
ಹಾಡಿರಿ ಏಕೆ ತಡ? ಜಯವೆನ್ನಿರಿ.....

ಮಾರೀಚನ ಮಾಯಾಮೃಗ ಪುರನಗರದ ಬಾಳು
ಹೊಗೆಸುತ್ತಿದ ಮನೆಮಾಳಿಗೆ ವಾಹನಗಳ ಧೂಳು
ಔಷಧಗಳೆ ಆಹಾರವು ಚಿರರೋಗಿಯ ಗೋಳು
ಇದೋ ಕೂಲಿಯ ಗುಡಿಸಲುಗಳು ಬೆಲೆವೆಣ್ಗಳ ಸಾಲು
ಬೇಕೇ ಇದು–ಹೇಳು ! ಜಯವೆನ್ನಿರಿ.....

ಬೆಳೆಯುತ್ತಿಹ ಕೊಲೆ ಸುಲಿಗೆಯು ಹುಸಿ ಹಾದರ ಕಳವು
ದುರ್ನೀತಿಯ ದುರ್ಮಾರ್ಗದ ಆಕರ್ಷಣೆ, ಸೆಳೆವು
ನಿಷ್ಕರುಣೆಯ ನಿರ್ಭಾವದ ಕಂಟಕಮಯ ಹಳುವು
ಎಲ್ಲಿದೆ ಮಾನವತೆಯ ಮೃದುಹೃದಯದ ಸುಳಿವು
ಸೋದರತೆಯ ತಿಳಿವು? ಜಯವೆನ್ನಿರಿ.....

ಸಂತೃಪ್ತಿಯ ಸಂತೋಷದ ಸೌಭಾಗ್ಯದ ಹಳ್ಳಿ
ಈ ನಾಡಿನ ಐಶ್ವರ್ಯವು ಅದೆ ಕಾಂಚನ ಬೆಳ್ಳಿ
ಅಲ್ಲಿಂದಲೆ ಕುಡಿಯೊಡೆಯಲಿ ಹೊಸ ಬಾಳಿನ ಬಳ್ಳಿ
ಹಾಳಾಗಿಹ ಈ ಹಳ್ಳಿಯ ಕಾಲಡಿಯಲಿ ತಳ್ಳಿ
ಬಾಳ್ವುದೆ ಆ ಡಿಳ್ಳಿ? ಜಯವೆನ್ನಿರಿ.....

ಧುಮ್ಮಿಕ್ಕಲಿ ಧೀಗಂಗೆಯು ಹಳ್ಳಿಗರೆದೆಯಲ್ಲಿ
ಮನೆ ಮಾಡಲಿ ವಿಜ್ಞಾನವು ಗುಡಿಸಲ ಬದಿಯಲ್ಲಿ
ಸುಧೆ ಹೊಮ್ಮಲಿ ಅವರಿಂದಿನ ಚಿರತೃಷೆಯಲಿ, ಕ್ಷುಧೆಯಲ್ಲಿ
ನವಭಾರತ ನಿರ್ಮಾಣಕೆ ಬೇರೆಯ ವಿಧಿಯೆಲ್ಲಿ?
ಭಾರತವೇ ಹಳ್ಳಿ ! ಜಯವೆನ್ನಿರಿ.....

* * *

ಆತ್ಮ ಪಕ್ಷಿ

ಯಾರ ದಾರಿ ಕಾಯುತಿರುವೆ
ಯಾರ ನೆನೆದು ನೋಯುತಿರುವೆ
ಯಾಕೆ ಬಳಲಿ ಬೇಯುತಿರುವೆ
ಆತ್ಮ ಪಕ್ಷಿಯೆ?

ದೆಸೆ ದೆಸೆಗಳ ನಿಟ್ಟಿಸುವೆ
ಭೂಗಗನವ ದಿಟ್ಟಿಸುವೆ
ಅನುಕಂಪವ ಹುಟ್ಟಿಸುವೆ
ಯಾಕೆ ಹಕ್ಕಿಯೆ?
ಹೆಸರಿಲ್ಲದ ಯಾವ ವ್ಯಸನ
ಉತ್ತರವೇ ಇರದ ಬೆಸನ
ತೃಪ್ತಿಯರಿಯದಿರುವ ತೃಷ್ಣ
ನಿನ್ನ ಕಾಡಿದೆ?
ಹಗಲು ಇರುಳು ಬೈಗು ಬೆಳಗು
ಜಾಗೃತ್ ಸುಷುಪ್ತಿ ಹೊರಗು ಒಳಗು
ಯಾವ ದಿವ್ಯಧ್ವನಿಯ ಮೊಳಗು
ಏನು ಬೇಡಿದೆ?
ಬೃಹಜ್ಜಲಧಿಯನ್ನು ಈಸಿ
ಮುಗಿಲು ಗಾಳಿಗಳನು ಜೈಸಿ
ಅನಂತದಾಚೆ ರೆಕ್ಕೆ ಬೀಸಿ
ಹಾರಲಾಸೆಯೆ?
ಮುಗಿಲನಂತದಲ್ಲಿ ತೇಲಿ
ನಗುವ ತಾರೆಯನ್ನು ಹೋಲಿ
ವಿರಾಡ್ವಿಶ್ವ–ರೂಪಮಾಲೆ
ನೋಡಲಾಸೆಯೆ?
ಯಾರು ನಿನ್ನ ಕರೆಯುತಿಹರು?
ಯಾಕೆ ನಿನ್ನ ಕರೆಯುತಿಹರು?
ಯಾವ ಗುರಿಯನೊರೆಯುತಿಹರು?
ಹೇಳು ಹಕ್ಕಿಯೆ!
ಇಲ್ಲ, ಸ್ವಯಂಪ್ರೇರಣೆ
ಜೀವನ ಸಂವೇದನೆ
ಪೂರ್ಣತೆಯಾರಾಧನೆ
ತಾನೆ ಉಕ್ಕಿದೆ !

ಮೇರೆಯೆಲ್ಲಿ ನಿನ್ನ ಗುರಿಗೆ?
ದಣಿವದೆಲ್ಲಿ ನಿನ್ನ ಗರಿಗೆ?
ಶಾಂತಿಯೆಲ್ಲಿ ನಿನ್ನ ಬಗೆಗೆ?
ಹಾರು ಹಾರು ಹಕ್ಕಿ !
ದಿಗ್ ದಿಗಂತಗಳನು ಸುತ್ತಿ
ಭೂವ್ಯೋಮಗಳಾಚೆ ಹತ್ತಿ
ಅನಂತದೊಡನೆ ಜೂಜು ಕಟ್ಟಿ
ಹಾರು ಆತ್ಮ ಪಕ್ಷಿ !
ಅಪಾರ ಕಾಲನಂಚಿನಲ್ಲಿ
ಅದೃಷ್ಟ ದೃಷ್ಟ ಪ್ರಪಂಚಿನಲ್ಲಿ
ಶಕ್ಯಾಶಕ್ಯದಾಚೆಯಲ್ಲಿ
ಹಾರು ಹಾರು ಹಕ್ಕಿ !
ಆಗು–ಹೋಗುಗಳನು ಮೀರಿ
ಮೇಗು ಕೆಳಗುಗಳನ್ನು ಸಾರಿ
ಭವಿಷ್ಯನ ನೆತ್ತಿಗೇರಿ
ಹಾರು ಆತ್ಮ ಪಕ್ಷಿ !

* * *

ಮುಸುಕು ತೆರೆ

ಮುಸುಕು ತೆರೆ ಮಾನಿನಿಯೆ
ಸಾಹಿತ್ಯಕಾಮಿನಿಯೆ
ಸೌಂದರ್ಯಜೀವಿನಿಯೆ
ಭುವನಮೋಹಿನಿಯೆ!
ನಸುಲಜ್ಜೆ ಸಾಕಿನ್ನು
ಸುಸಿಲಾಟ ಬೇಕಿನ್ನು
ಮುಸುಕು–ಮರೆ ಏಕಿನ್ನು
ಹೇ ರಸದ ಹೆಣ್ಣು?

ನಾಚಿಕೆಯ ತೆರೆ ಸರಿಯೆ
ತುಟಿಗೆ ತುಟಿ ಸವಿ ಸುರಿಯೆ
ಮನವು ಮನದೊಳು ಬೆರೆಯೆ
ಒಳಹೊರಗು ಮರೆಯೆ
ಅಪ್ಪು ಬಾ ಸುಂದರಿಯೆ
ಆನಂದಮಂದಿರೆಯೆ
ಹೇ ಭಾವಬಂಧುರೆಯೆ
ಕಂಬು–ಕಂಧರೆಯೆ!
ನಿನ್ನ ನಲ್ನೋಟದಲಿ
ನಿನ್ನ ಒಡನಾಟದಲಿ
ನಿನ್ನ ಸವಿಕೂಟದಲಿ
ನಿನ್ನ ಬೇಟದಲಿ
ಕಳೆಯಲೆನ್ನಯ ಬಾಳು
ಅಳಿಯಲೆನ್ನಯ ಗೋಳು
ಉಳಿದುದೆಲ್ಲವು ಬೀಳು
ಹಾಳು ಹಾಳು !
ಒಳಿತು ಕೆಡುಕನು ಮೀರಿ
ಪುಣ್ಯ ಪಾಪವ ಮೀರಿ
ಸ್ವರ್ಗ ನರಕವ ಮೀರಿ
ನಮ್ಮೆದೆಯ ದಾರಿ !
ಬೇಕು ಬೇಡವ ಮೀರಿ
ದುಃಖ ಸುಖಗಳ ಮೀರಿ
ವೈರ ಸಖ್ಯವ ಮೀರಿ
ನಮ್ಮೊಲವು ನಾರಿ !
ದೇಶ ಭಾಷೆಯ ಸೀಮೆ
ಕಾಲ ಸ್ಥಲಗಳ ಸೀಮೆ
ವರ್ಣ–ವಂಶದ ಸೀಮೆ
ನಮಗೆಲ್ಲಿ ಭಾಮೆ?

ಇಲ್ಲಿ ದಾಸ್ಯವದಿಲ್ಲ
ಮೇಲು ಕೀಳುಗಳಿಲ್ಲ
ದ್ವೇಷ ಮೋಸಗಳಿಲ್ಲ
ರೋಷವಿಲ್ಲ
ಪಕ್ಷ ಪಂಥಗಳಿಲ್ಲ
ಧರ್ಮ ಗ್ರಂಥಗಳಿಲ್ಲ
ತರ್ಕ ತಂತ್ರಗಳಿಲ್ಲ
ಮಂಥನಿಲ್ಲ
ಇರುವುದೊಂದೇ ಒಲವು
ಮೆರೆವುದೊಂದೇ ಚೆಲುವು
ದೊರೆವುದೊಂದೇ ನಲವು
ಇದೆ ಬಾಳ ಗೆಲುವು !
ಇದನೆ ಉಕ್ಕಿಸಿ ಹಾಡು
ಇದನೆ ಸುತ್ತಲು ನೋಡು
ಇದನೆ ಎಲ್ಲೆಡೆ ಬೇಡು
ಇದನೆ ಕೂಡು !
ಇದನೆ ಎಲ್ಲೆಡೆ ಹುಡುಕಿ
ಸಿಗದೆ ಮನದಲಿ ಮಿಡುಕಿ
ಕಡೆಗೆ ನಿನ್ನನ್ನೆ ಹುಡುಕಿ
ಬಂದೆ ದುಡುಕಿ !
ಮುಸುಕು ತೆರೆ ಮುತ್ತು ಕೊಡು
ಸುಧೆಯ ಸವಿ ತುತ್ತು ಕೊಡು
ಪ್ರೇಮ ಸಂಪತ್ತು ಕೊಡು
ಅಪ್ಪಿಬಿಡು !
ಕಣ್ಣ ಬೆಳಕನು ನೀಡು
ತುಟಿಯ ತುಳುಕನು ನೀಡು
ಎದೆಯ ತಳುಕನು ನೀಡು
ಬೆರೆತು ಕೂಡು !

ಇಷ್ಟುದಿನ ಸಹಿಸಿದೆನು
ಇಷ್ಟು ದಿನ ದಹಿಸಿದೆನು
ಎಷ್ಟು ಶ್ರಮ ವಹಿಸಿದೆನು
ಪ್ರೇಮ ಭಾಮಿನಿಯೆ !
ಮುಸುಕು ತೆರೆ ಮಾನಿನಿಯೆ
ಸಾಹಿತ್ಯ ಕಾಮಿನಿಯೆ
ಸೌಂದರ್ಯಜೀವಿನಿಯೆ
ಭುವನಮೋಹಿನಿಯೆ !

* * *

ರಾಜಾ–ರಾಣಿ

ಸುತ್ತಿರುವ ಸದ್ದಿನಲಿ ಸುತ್ತಲಿನ ಗದ್ದಲಲಿ
ನಮ್ಮ ಪಿಸುಮಾತುಗಳನಾಡಿ ನೋಡೋಡಿ !

ಎತ್ತಲೂ ಭೋರ್ಗರೆವ ಕರ್ಕಶ–ಸ್ವನದಲ್ಲೆ
ಕಳ್ಳದನಿಯಲಿ ಗೀತೆ ಹಾಡಿ ನೋಡೋಣ !

ಕೇಳಲಿ ಕೇಳದಿರಲೆಮ್ಮ ಬಾಳಿನ ಬೀಣೆ
ಈ ಸಂತೆಯಲ್ಲಿಯೇ ಬಾಜಿಸೋಣ !

ಬೆರೆಯಲಿ ಬೆರೆಯದಿರಲೆಮ್ಮ ಜೀವನ–ಸ್ವರವ
ಈ ಹುಚ್ಚು ಮೇಳದಲೆ ಸೇರಿಸೋಣ !

ಬಾಳ ಸುಡುಗಾಡಿನಲಿ ಸುಡುವ ಹೆಣಗಳ ಸದ್ದು
ಗೂಬೆ ಹದ್ದಿನ ಕಿರಚು ಕೇಳಲೇನು?

ಬಾಳ ಹೂದೋಟದಲಿ ಜತೆಯಾಗಿ ಪುಟಿಯುತಿಹ
ಜೋಡು ಕಾರಂಜಿಯೊಲು ನರ್ತಿಸೋಣ !

ಬಾಳ ಹೋರಾಟದೀ ಗೋಳಿನ ಪುರಾಣದಲಿ
ಕಾಳಗದ ಕೇಕೆಗಳೆ ಕೇಳಲೇನು !

ಏಳು ಲೋಕಗಳನ್ನೆ ತೋಳಿನಲಿ ತಬ್ಬಿರುವ
ಪ್ರೇಮವೊಂದನೆ ನಾವು ಕೀರ್ತಿಸೋಣ !

* * *

ಆಗ ತಾನೆ

ಆಗ ತಾನೆ ರಾಗ ಮೂಡುತಲಿತ್ತು ಕೆನ್ನೆಯ ಮೇಲೆ
ಆಗ ತಾನೆ ಹಣೆಗೆ ಹಬ್ಬುತಲಿತ್ತು ಕುರುಳಿನ ಮಾಲೆ
ಆಗ ತಾನೆ ಕಣ್ಣು ಕಲಿಯುತಲಿತ್ತು ಸಂಜ್ಞೆಯ ಸಾಲೆ
ಆಗ ತಾನೆ ಲಾಸ್ಯವಾಡುತಲಿತ್ತು ಯೌವನ ಲೀಲೆ

ಬೆನ್ನ ದಾಟುತಲಿತ್ತು ಭರದಲಿ ಕೃಷ್ಣವೇಣಿಯ ಜಡೆಯು
ಗಳಿಗೆ ಗಳಿಗೆಗೆ ಮಂದವಾಗುತಲಿತ್ತು ಹಂಸೆಯ ನಡೆಯು
ಹೆಜ್ಜೆ ಹೆಜ್ಜೆಗೆ ಲಜ್ಜೆ ತುಳುಕಲು ಮಾಯವಾಯಿತು ನುಡಿಯು
ಕುರುಳ ಮೋಡದ ಮಿಂಚಿನಂದದಿ ಕುಣಿದುದಾಲಿಯ ಕುಡಿಯು

ಸರಳ ಬಾಲೆಯು ಪ್ರಮದೆಯಾಗುತಲಿದ್ದಳಿನ್ನೂ ಆಗ
ಹೋಗ ಹೋಗುತ ಗಕ್ಕನೆ ನಿಲ್ಲುವಳು ಏತಕೆ ಈಗ?
ಕಿವಿಯ ನೆಟ್ಟಗೆ ಮಾಡಿ ಕೇಳ್ವಳು ಯಾರ ಕರೆಯದ ಕೂಗ?
ಹಗಲು ಸ್ವಪ್ನವು ಇರುಳು ಎಚ್ಚರ ಯಾವುದಿದು ಹೊಸ ರೋಗ?

ಮೈಯ ಹೊಲದಲಿ ನವಿರ ಪಯರಿದು ಏಸು ಸಲ ಪ್ರತಿದಿನದಲಿ?
ಬಯಕೆ–ಬಳ್ಳಿಗೆ ಕನಸು–ಹೂಗಳು ಎನಿತು ಯೌವನ–ವನದಲಿ?
ಎನಿತು ವಾಗ್ವೈಖರಿಯು ಈ ನಾಚಿಕೆಯ ಮೌನದ ಸ್ವನದಲಿ?
ಏನಿದೇಕಾಂತದಲಿ ಸಂಗವು–ಏಕಾಕಿತನ ಬಹು ಜನದಲಿ?

ಮೊದಲು ಮಲ್ಲಿಗೆಯೆಂದೊಡಾಗುತ್ತಲಿತ್ತು ಮುಗುದೆಗೆ ಪೊಂಪುಳಿ
ಗಾಳಿ ತೀಡಲು ಮೈಯ ಬಳ್ಳಿಗೆ ನಲಿಸಿ ಕುಣಿಸುವ ಕಚಕುಳಿ
ಸಂಜೆ ಮುಂಜಾವಿನಲಿ ಕಾಣುತಲಿತ್ತು ಚಿನ್ನದ ಓಕುಳಿ
ಈಗಲೂ ಸೊಬಗಿಹುದು ಜಗದಲಿ–ಇವಳು ಏತಕೆ ವ್ಯಾಕುಲಿ?

ಬೇಗ ಮುಗುದೆಯ ಬಗೆಯ ಬೇಗೆಯ ಧಗೆಯ ದಿನಗಳು ಮುಗಿಯಲಿ!
ಅವಳ ಎದೆಯಲಿ ಅವಳೆ ಅರಿಯದೆ ಇರುವ ಒಲ್ಮೆಯು ಚಿಗಿಯಲಿ!
ಪ್ರೇಮ–ಪಾವನ ಕ್ಷೀರ–ಪಾನದಿ ಹರೆಯ ಹರಿಣವು ಜಿಗಿಯಲಿ!
ಬಾಳ ಸಿಂಪಲಿ ಪ್ರೀತಿ ಸ್ವಾತಿಯು ಸೇರಿ ಮುತ್ತುಗಳೊಗೆಯಲಿ !

* * *

ನಿನ್ನ ನೋಡಿ ಬಂದ ಮೇಲೆ

ನಿನ್ನ ನೋಡದ ಮುನ್ನ ನನ್ನ ಜೀವನವೊಂದು
ಉಸಿರೆಳೆಯುತಿಹ ಯಂತ್ರದಂತೆ ನೀರೆ
ಕಣ್ಮುಚ್ಚಿ ಸಾಗಿತ್ತು ಸುಮ್ಮನೇ ದುಡಿಯುತ್ತ
ಇರಲಿಲ್ಲ ನಾನೆಂಬ ಅಸ್ತಿತ್ವ ಬೇರೆ !

ನನ್ನವೆಂಬುವ ಬೇರೆ ಬಯಕೆಗಳೆ ಇರಲಿಲ್ಲ
ಎಲ್ಲರೊಳು ನಾನೊಬ್ಬನೆಂದು ತಿಳಿದು
ನಾಲ್ಕು ಜನ ಮೆಚ್ಚುವಂತಿದ್ದರಾಯಿತು, ಜನ್ಮ–
ಸಾರ್ಥಕತೆಯದರಲ್ಲೆ ಎಂದು ಬೆಳೆದು–

ಸರಸತಿಯ ಸಿರಿಮುಡಿಯ ಪುಷ್ಪವೊಂದನು ಪಡೆದು
ಹತ್ತು ಹಿರಿಯರು ಹಿಗ್ಗಿ ಹರಸುವಂತೆ
ಬಳಿಗೆ ಬಂದವರೆಲ್ಲ ಗೆಳೆತನ ಬಯಸುವಂ–
ತಿದ್ದೆನಿಲ್ಲಿಯವರೆಗೆ ಇಲ್ಲದಂತೆ.

ನಿನ್ನ ಕಂಡಾಕ್ಷಣವೆ ಕೆರಳಿದುವು ಆಸೆಗಳು
ನನ್ನ ಬಾಳೆಲ್ಲರಿಂ ಬೇರೆಯಾಯ್ತು !
ನನ್ನ ಹೃನ್ಮಂದಿರದಿ ನನ್ನವಳೆ ಇರಬೇಕು !
ನನ್ನದೆನ್ನುವ ಮನೆಯೆ ಬೇರೆಯಾಯ್ತು !

ನನ್ನ ಮನಸಿನ ರಾಜ್ಯವೆನ್ನ ಕನಸಿನ ಲೋಕ
ಹೃದಯ–ಸಿಂಹಾಸನವು ನಿನ್ನದಾಯ್ತು !
ತನುಮನಪ್ರಾಣಗಳು ಪುಳಕಗೊಂಡುವು, ಬಾಳ–
ಬೀಣೆ ನುಡಿಸುವ ರಾಗ ನಿನ್ನದಾಯ್ತು !

ಎಷ್ಟು ಕುಡಿನೋಟಗಳು ಕೆಣಕಿದರು ಕದಲದಿಹ
ನಿಶ್ಚಿಂತ, ಸ್ವತಂತ್ರ, ಶಾಂತಮನವು
ಮೊದಲ ನೋಟಕೆ ಬೇಟೆಯಾಯ್ತು ಬಯಕೆಯ ಹೆಣ್ಣೆ
ತಿರುಗಿಬಿದ್ದಿತು ನನಗೆ ನನ್ನ ಮನವು !

ನಲುಮೆ ಬೆರೆತಾ ನಿನ್ನ ಮುಗುಳುನಗೆಯೊಂದರಲಿ
ಜಗವೆ ಪಲ್ಲಟವಾಯ್ತು ಮನದ ಪ್ರೇಮದಲಿ !
ನಿನ್ನ ಸ್ವರ–ಮಂತ್ರದಿಂದೆಚ್ಚತ್ತ ಭಾವಗಳು
ನರ್ತಿಸುತಲಿವೆ ನನ್ನ ರೋಮ ರೋಮದಲಿ !

ಯಾವ ನೋವೋ ಬಂದು ಸೇರಿಕೊಂಡಿತು ಮನದಿ
ಯಾವುದೋ ವೇದನೆಯು ಹೃದಯವನ್ನು
ಹಿಂಡುತಿದೆ ! ಬುದ್ಧಿಗೂ ಬೇರೆ ಯೋಚನೆಯಿಲ್ಲ !
ನಿದ್ದೆ–ತೊರೆಯಿತು ತನ್ನ ನಚ್ಚಿನವನನ್ನು !

ಮುನ್ನ ಕಂಡುದುದುಂಟು ಚೆನ್ನಯರನೇಕರನು
ರೂಪ ವಿದ್ಯೆಗಳಲ್ಲಿ ಮೀರಿದವರ
ಆಗ ಹೊತ್ತದ ಬೆಂಕಿ ಹೇಗೆ ಕೆದರಿದೆ ಕೆಳದಿ?
ಯಾವ ಮಾಟವು ಯಾವ ಮೋಡಿಯಿದರ?

ಕೊಂಕುಗುರುಳಿನ ತರಳೆ ಸಂಕುಗೊರಳಿನ ಸರಳೆ
ಜಿಂಕೆಗಣ್ಣಿನ ಚಪಲೆ ಮೋಹ ಬೀರಿ
ಬಿಂಕದಲಿ ಮರೆಯಾಗೆ ಬೆಂಕಿ ಹೊತ್ತಿತು ಮನದಿ
ಶಂಕೆ ಬಾಧಿಸುತಿಹುದು ಮುದವ ಹೀರಿ !

ಇಲ್ಲಿ ಕೊರೆಯುವ ನೋವು ಅಲ್ಲಿಯೂ ಇರಬಹುದೆ?
ಎನ್ನ ಕಾತರ ವಿಕಳ ಅವಳವೂ ಅಹುದೆ?
ಎನ್ನ ಬುದ್ಧಿಯ ಗೆಲಿದ ಎನ್ನ ನಿದ್ರೆಯ ಕಳೆದ
ಉನ್ಮಾದ ಅಲ್ಲಿಯೂ ಉಕ್ಕುತಿರಬಹುದೆ?

ಇಲ್ಲದಿರೆ ನೀನೇಕೆ ಸವಿನೋಟಗಳ ತೂರಿ
ಸುಮ್ಮನೆ ನನ್ನಲ್ಲಿ ಕಿಡಿಗೆದರಿಹೆ?

ಹೋಗುವಾಗೊಮ್ಮೆಗೆ ಹೊರಳಿ ನಸುನಗೆ ಬೀರಿ
ನನ್ನ ಸೊಗನಗೆಯರಳ ನೀ ಹುರಿದಿಹೆ?

ಅಲ್ಲಿ ಕಿಟಿಕಿಯ ಮರೆಗೆ ಕದ್ದು ನೋಡುತ ನಿಂತು
ನಿನ್ನ ಚಿತ್ರವ ನೀನೆ ಆಯ್ದು ಕಳಿಸಿ
ಅಣ್ಣನ ವಿಳಾಸವನ್ನು ನೀನೇಕೆ ಬರೆದಿತ್ತೆ?
ಏಕೆ ಕಳಿಸಿದೆಯೆನ್ನ ಮರುಳುಗೊಳಿಸಿ?

ನೀನು ಕುಂಕುಮ ಧರಿಸಿ, ಉಡಿಯೊಳೆಲೆ ಉತ್ತತ್ತಿ
ಹಣ್ಣು ಹೂಗಳ ತುಂಬೆ, ಮೆಲ್ಲನೆದ್ದು
ನಿನ್ನ ಬಂದಿಗೆ ನೀನೆ ವಂದಿಸುತ ಮರೆಯಾದೆ
ಮಂದಹಾಸವ ಬೀರಿ ಕೊನೆಗೊಮ್ಮೆ ಕದ್ದು

ನಿನ್ನ ನಗೆನೋಟಗಳ ಆತುರತೆ ಕಾತರಗ–
ಳೀ ಭಾವಗಳ ಗ್ರಹಿಸಿ ತೋರಿದಂತೆ
ನಿನ್ನ ನನ್ನವಳೆಂದರನ್ಯಾಯವೇ ಕಾಂತೆ?
ನೀನೆ ನಿರ್ಣಯ ಮಾಡು ನಿನ್ನಿಚ್ಛೆಯಂತೆ !

* * *

ಏನಿದ್ದೆ ಏನಾದೆ ನಿನ್ನ ನೋಡಿ

ಏನೆಂದು ಬಣ್ಣಿಸಲಿ ನೀನು ಮಾಡಿದ ಮೋಡಿ
ಏನಿದ್ದೆ ಏನಾದೆ ನಿನ್ನ ನೋಡಿ?

ನೀನು ನಕ್ಕಾಗೆನ್ನ ಹೊಸಬಾಳು ಹುಣ್ಣಿಮೆಯ
ಪೂರ್ಣಚಂದ್ರನು ಉದಯವಾದ ಚೆನ್ನೆ !

ನೀನು ನುಡಿದಾಕ್ಷಣವೆ ಬಗೆಯ ಬೀಣೆಯ ಮೂಕ
ತಂತಿಗಳು ಚೆಲ್ಲಿದುವು ಸುನಾದವನ್ನೆ !

ನೀ ನೋಡೆ ನನ್ನದೆಯ ಕದವು ತೆರೆಯಿತು, ಸುಪ್ತ
ಪ್ರೇಮ ಜಾಗೃತವಾಗಿ ಮೈಮುರಿಯಿತು !

ನೀ ಹಾಡೆ ಕಲ್ಪನೆಯ ಬಿಗಿದ ಕುತ್ತಿಗೆ ಸಡಲಿ
ಹೊಸ ಕವಿತೆ ಕಾವೇರಿಯೊಲು ಹರಿಯಿತು !

ನೀ ನಾಚೆ ಬಯಕೆಗಳ ಮೋಡಗಳು ಮೂಡಿದುವು
ಬಗೆಯ ಬಾನಲಿ ನೂರು ಬಣ್ಣ ತಳೆದು !

ನೀ ಮೌನ ಧರಿಸಿದರು ತಾನತಾನವದಾಗಿ
ಗಾನ ಹೊಮ್ಮಿತು ಮನದಿ, ಸುಧೆಯ ಹಳಿದು !

ಜೀವನನಿರಾಶೆಯಲ್ಲಿ ನೂತನೋತ್ಸಾಹವನು
ಮನದ ಮುಪ್ಪನು ಕಳೆದು ನವಸ್ಫೂರ್ತಿಯ

ಬೇಸರಾಗುತಲಿದ್ದ ಜಗದಿ ಹೊಸ ಸೊಗಗಳನು
ಎದೆಯ ಗುಡಿಯಲಿ ನಿನ್ನ ಶುಭ ಮೂರ್ತಿಯ

ಬಾಳಗೇಯದ ಏಕಾತಾನತೆಯ ಕಳೆದುದಕೆ
ಸಪ್ತಸ್ವರಮಿಶ್ರಣದಿ ಹೊಸ ರಾಗಮಾಲೆ

ಎನ್ನ ಬದುಕಿನ ಏಕರೂಪತೆಯ ತೊಡೆದವಕೆ
ಕ್ಷಣ ಕ್ಷಣಕೆ ಹೊಸತಪ್ಪ ರೂಪಲೀಲೆ

ಎನ್ನ ಹಾಡಿನ ಹೊಲದಿ ಹೊಸ ಭಾವಗಳ ಬೆಳೆಯ
ಎನ್ನ ಬುದ್ಧಿಯ ಜಲದಿ ಹೊಸ ತಾವರೆ

ಎನ್ನ ಕಂಗಳಿಗೊಂದು ಹೊಸನೋಟ–ಇನಿತೆಲ್ಲ
ಒಂದೆ ನೋಟದೊಳಿತ್ತೆ ಓ ಬಾಳ ಮದಿರೆ !

ಇಂದೆನ್ನ ಭಾವಸ್ವರ ರೂಪವಾಗಿವೆ ಶುಷ್ಕ–
ಜೀವನವೆ ಝುಂಕಾರವಾಗಿರುವುದು !

ರಕ್ತ ಮಾಂಸವು ಸಹಿತ ನೃತ್ಯ ಗೀತಗಳಾಗಿ
ಇರವೆ ಕಲ್ಪನೆಯಾಗಿ ಸಾಗಿರುವುದು !

ಇದಕಾಗಿ ನಾ ನಿನಗೆ ಚಿರಋಣಿಯು ಓ ಚೆಲುವೆ
ನಿನ್ನ ನಾ ಪಡೆಯಲಿ, ಪಡೆಯದಿರಲಿ !

ಈ ನನ್ನ ಪ್ರೇಮಕ್ಕೆ ಫಲವು ದೊರೆತರೆ ದೊರೆಯ–
ಲಿಲ್ಲದಿರೆ ನೀನಿತ್ತ ನೋವೆ ಬರಲಿ !

* * *

ಇಜ್ಜೋಡು

ಚಂದ್ರ ಕಣ್ ಚಿವುಟುತಿರೆ
ತಾರೆಗಳು ಕರೆಯುತಿರೆ
ಕಮಲಿನಿಯು ಕೊರಗುವಳು
ದಿನಪಗಾಗಿ !
ದಿನಪ ಘನತಾಪವನು
ಕೊಡುತಿದ್ದರೂ ಕುಮುದ
ತಪವಗೈವಳು ಚಾರು–
ಚಂದ್ರಗಾಗಿ!
ಹಿಮಗಿರಿಯ ತೆಕ್ಕೆಯನು
ತೊರೆದು ಬರುವಳು ಗಂಗೆ
ಕಡಲರಾಜನ ಕೂಡಿ
ಸುಖಿಸಲೆಂದು !
ಗಂಗೆಗಿಂಗೆಯ ತೊರೆದು
ಚಂದ್ರಿಕಾ ಮೋಹದಲಿ
ನೆನೆನೆನೆದು ಉಕ್ಕೇರಿ
ಕುದಿವನವನು !
ಸಂಪಿಗೆಯು ಕರೆಯುತಿರೆ
ಚೆಂಗುಲಾಬಿಯ ಬೇಡಿ
ಮುಳ್ಳು ತಾಗಲು ನರಳ್ವ
ಭೃಂಗ ನೋಡು !
ಮಾಗಿ ಕೈ ಮುಗಿದರೂ
ಸುಗ್ಗಿಗಾಗಿಯೆ ತಪವ
ನಾಚರಿಪ ಕೋಗಿಲೆಯ
ಛಲವನೋಡು !

ಮರ ಮರಕೆ ಸ್ವರವೆತ್ತಿ
ಕರೆಯುತಿರೆ ಪಕ್ಷಿಕುಲ
ಮೇಘ ಗರ್ಜನೆಗಾಗಿ
ಸೋಗೆ ಕಾದಿಹುದು !
ಉಳಿದ ಮಳೆಗಳು ತಾವೆ
ಒಲಿದು ಬಂದರು ಸಹಿತ
ಸ್ವಾತಿಯಾ ಹನಿಗಾಗಿ
ಸಿಂಪು ಕಾದಿಹುದು !
ಒಂದೊಲಿದು ಬೇಡಿದರೆ
ಆ ಒಂದು ಇನ್ನೊಂದ
ಬೇಡಿ ಬಾಯ್ಬಿಡುತಿಹುದು
ಜಗದೊಳಿಂತು
ಒಲಿದವರ ಬಿಟ್ಟು, ತನ–
ಗೊಲಿಯದವರನೆ ಬಯಸಿ
ಕಳವಳಿಸಿ ಕಂಗೆಟ್ಟ
ಜನವೆಸುತ್ತು !
ಇಂತೆ ಸಾಗಿದೆ ಜಗದ
ಸಂತೆ ಇಜ್ಜೋಡಿಯಲಿ
ಒಂದನೊಂದೊಲಿದಿರುವ
ಜೋಡಿಗಳೆ ವಿರಲ
ಹೀಗೊಲಿದ ಜೋಡಿಗೂ
ಜಗಸಿದ್ಧಗೊಳಿಸಿಹುದು
ಶಾಸ್ತ್ರಕುಲ ಜಾತಿಗಳ
ನೇಣು ಉರುಲ !

* * *

ಆಸೆ

ಬಂದಾನು ಬಂದಾನು ಎಂದಾದರೊಂದುದಿನ
ಬಂದಾನು ಮನದನ್ನ ಬಂದಾನು
ಬೆಂದೆದೆಗೆ ಮುದವನು ತಂದಾನು
ಎಂದೆಣಿಸಿ ಕಾಯುತಿಹೆ

ಬೆಂದು ಬಲು ನೋಯುತಿಹೆ
ಚಣಕೊಮ್ಮೆ ಸಾಯುತಿಹೆ
ಮಿಡುಮಿಡುಕಿ
ಕಾಣದ ನಲ್ಲನ ಹುಡುಹುಡುಕಿ ॥

ಇಂದಿನತನಕ ಬರದ ನಲ್ಲನು ಇನ್ನು
ಮುಂದೆಂದು ಬರುವನು ಛೀ ಹುಚ್ಚಿ
ಪರರಿಗೆ ಎದೆಯ ಕದ ಮುಚ್ಚಿ
ಬಳಲುತಿಹೆ ಬಾರದಕೆ ಮನಮೆಚ್ಚಿ
ಅವನ ಮೇಲಿನ ಆಸೆ ಸಾಕಿನ್ನು
ಬೇರೊಬ್ಬನನು ಹುಡುಕಬೇಕೆನ್ನು !

ಎಂದ ಗೆಳತಿಯ ಮಾತು ಮನಕೆ ಕರಗಸವಾಯ್ತು
ಆಸೆಯ ಬಳ್ಳಿಯು ಮೈಸೋತು
ನಂಬಿಕೆಯ ಮಾಮರಕೆ ತಾ ಜೋತು
ನಲುಮೆಯೆಂಬುದು ಸುಳ್ಳೊ
ನೇಹವೆಂಬುದು ಮಳ್ಳೊ
ವಿಶ್ವಾಸ ಬರಿ ಜೊಳ್ಳೊ
ಎಂದಿತು
ಸುತ್ತಿದ ಸಂಶಯದಿ ನೊಂದಿತು !

ಆದರು ಆಸೆಯ ಅಂಕುರವು ಬೆಳೆಯುವುದು
ದಿನ ಮಾಸ ವರುಷಗಳು ಕಳೆದಂತೆ
ಕಾಲನು ಜವ್ವನವ ತುಳಿದಂತೆ
ಗೆಳತಿಯರು ಹುಚ್ಚುತನ ಹಳಿದಂತೆ
ಆಗಾಗ ಸಂಶಯವು ಸುಳಿದಂತೆ !

ಬರದಿದ್ದರೇನಾಯ್ತು ಬರುವನೆಂಬುವ ಆಸೆ
ಉರಿವ ಜೀವಕೆ ಮಧುರ ಮಲಯಮಾರುತ ಬೀಸೆ
ಬರಿಯ ಬಾಳಲಿ ಮಧುವ, ಸೋಮರಸವನು ಸೂಸೆ ಸಾಕಲ್ಲೆ?
ಇದನೊಂದೆ ನಂಬಿರಬೇಕಿಲ್ಲೆ !

ಆಸೆಯ ಆಸರೆ ತಪ್ಪಿದರೆ ಸಂಸಾರ
ಹೊರಲಾರದಂಥ ತಲೆಭಾರ
ನಲುಮೆಯ ತನಿವಣ್ಣು ನಿಸ್ಸಾರ
ಬಾಳುವೆಯೆ ವಿಷಒಗರು ಕಹಿ ಖಾರ
ಹೊತ್ತಹುದು ಕುತ್ತು ಬಲು ಘೋರ !

* * *

ಬಾಳು ಕಹಿಯಾದರೂ ನೆನಹು ಕಹಿಯಲ್ಲ !

ಏಕೆ ಸುಳಿಯುವಿ ಮತ್ತೆ ಸ್ಮೃತಿ–ಪಥದಿ ಸುಂದರಿಯೆ
ಶೋಕಕಾವ್ಯದ ಮುಚ್ಚಿದೋಲೆಗಳ ತೆರೆವೆ? ॥

ವಿಧಿಯಣಕ ಎದೆಯೊಲುಮೆಗಳ ದ್ವಂದ್ವ ಹೋರಾಟ
ಸುಖ ದುಃಖಗಳ ಮುಗಿಯದಿಹ ಇಳಿತ ಏರಾಟ
ಸೋಲುಗಳ ಸಮ್ಮುಖದಿ ಆಸೆಗಳ ಹಾರಾಟ
ಸಾಕಾಯ್ತು ಹುಸಿ ಬಯಕೆಗಳ ಹುಚ್ಚು ಮೇಲಾಟ!
ಮತ್ತೇಕೆ ಈ ನಿನ್ನ ಕಿಡಿಗೇಡಿ ನೋಟ? ॥

ಮೈ ಮನವ ಜುಮ್ಮೆನಿಪ ಮುನ್ನಿನಾ ಕನಸುಗಳು
ಆ ಪ್ರೇಮ ಶಪಥಗಳು ಆ ಮುಗ್ಧ ಮನಸುಗಳು
ಸುಖಕೆ ಕಚಕುಳಿಯಿಡುವ ಆ ಸುಳ್ಳು ಮುನಿಸುಗಳು
ಆಗಿಹವು ಕಾಲನಿಗೆ ಮೃದುಮಧುರ ಊಣಿಸುಗಳು !
ಮತ್ತೇಕೆ ನಿನ್ನ ಈ ವಿಫಲ ಕಣಸುಗಳು? ॥

ಹೂದಂಡೆಯನು ಮುಡಿದ ಬನದಬಳ್ಳಿಯ ಕೇಳು
ಹಗಲಿರುಳು ಹಾಡುತ್ತಲೆ ಹರಿವ ಹಳ್ಳವ ಕೇಳು
ಬೆಳೆಗಳಲಿ ನುಸುಳಿ ಬಹ ಎಲ್ಲರ ಸಿಳ್ಳನು ಕೇಳು
ಮರ್ಮರ ಸ್ವರಗೈವ ತಳಿರ ತಿಳ್ಳಿಯ ಕೇಳು
ಎಲ್ಲಿ ಹೋಯಿತು ನಮ್ಮ ನಲ್–ಬಾಳು ಹೇಳು !

ಇಂದಿಗೂ ತೋರುವಳು ಅದೆ ನಿಶೆಯು ಅದೆ ಉಷೆಯು
ಅದೆ ಸೂರ್ಯ ಅದೆ ತಾರೆ ಅದೆ ಭಾನು ಅದೆ ಶಶಿಯು
ಅದೆ ಮಳೆಯು ಅದೆ ಬೆಳೆಯು ಅದೆ ಬೀಜ ಅದೆ ಸಸಿಯು
ಅದೆ ಗಾಳಿ ಅದೆ ಗಂಧ ಅದೆ ತಂಪು ಅದೆ ಬಿಸಿಯು
ನಮಗಷ್ಟೆ ಇರದಾಯ್ತು ಅದೆ ಮೊದಲ ದೆಸೆಯು !

ಯಾವ ಜನುಮದ ಆಸೆ ಏಸು ದಿನ ಹಾರೈಸಿ
ಪಡೆಯಿತ್ತೊ ತುಸು ತೃಪ್ತಿ ಬಯಕೆ ಭಾರೈಸಿ
ಅದರಾಸೆ ಪೂರೈಸಿ ಹೋದುದೈ ತೇರೈಸಿ !
ಅದಕಾಗಿ ಕೊರಗೇಕೆ ಓ ಎನ್ನ ಮನದರಸಿ?
ಒಲಿದುದಕೆ ಒಲಿದುದೇ ಫಲ ನನ್ನ ಸರಸಿ !

ಆ ಸುಖದ ಸವಿ ನೆನೆಸಿ ಏಕೆ ಕಂಬನಿ ಸುರಿಸಿ
ಶೋಕಗೈಯ್ಯುವೆ ಕರುಣ ಕಥೆಯನ್ನು ಸ್ಮರಿಸಿ?
ದುಃಖದಲಿ ಸಿರಿ ಸುಖದ ನೆನಹುಗಳು, ಸುಖವೆರಸಿ
ಇರುವಾಗ ಸಿಹಿ ದುಃಖಗಳ ನೆನಹು ಸರಸಿ !
ಬಾಳ ಕಹಿಯಾದರೂ ನೆನಹು ಕಹಿಯಲ್ಲರಸಿ !

ನಾಲ್ಕು ದಿನಗಳ ನಂಟೆ ಈ ಬಾಳ ಇಡುಗಂಟು
ಆದನುಳಿದರೀ ಬದುಕು ಬರಿ ಕುರುಡು ಕುಂಟು
ಅದರ ಮಧುರ–ಸ್ಮೃತಿಗೆ ನೀನು ಕಡೆತನಕಂಟು
ತೋರಿಕೆಗೆ ಮಾತ್ರವೇ ಮುಗುದೆ ಮದುವೆಯ ಗಂಟು
ಬಿಗಿದಿಹುದು ಹೃದಯಗಳ ಬ್ರಹ್ಮಗಂಟು !

* * *

ಶಂಕಾ–ಸಮಾಧಾನ

ನಾ ಬಲ್ಲೆ, ಓ ಚೆಲುವೆ, ನಿನ್ನೆದೆಯ ಬಯಲಿನಲಿ
ಹರಿವ ಪ್ರೇಮದ ತೊರೆಯ ಆಳವನ್ನು

ನನ್ನ ಬರಿ ಬಾಳಿನಲಿ ಹೃದಯಾಂತರಾಳದಲಿ
ಮುಸುಕಿರುವ ಕತ್ತಲೆಯ ಕಾಳವನ್ನು

ಪ್ರೇಮವೇ ಪ್ರೇಮದಿಂ ಕುಸುರಿಸಿಹ ಲತೆ ನೀನು
ಕಾಮನಾ ಕಾಮನೆಯ ಕೊನರು ನಾನು

ಚೆಲುವು–ಪಕಳೆಗಳಲ್ಲಿ ಒಲವು–ಗಂಪನು ತುಂಬಿ
ನಲವೇರಿ ಅರಳಿರುವ ಹೊಸ ಮಲರು ನೀನು !

ಮಾಡದಿರು, ಓ ಚೆಲುವೆ, ನನ್ನ ನಿನ್ನಯ ಹೃದಯ–
ಪ್ರೇಮರಾಜ್ಯದ ಸಾರ್ವಭೌಮನನ್ನು

ಕಾಡದಿರು, ಬೇಡದಿರು, ನನ್ನಲ್ಲಿ ನೀನಿಂತು
ಅಮರರೂ ಅರಿಯದಿಹ ಪ್ರೇಮವನ್ನು !

ನೀ ಚೆಲುವೆ ನಾನೊರಟು, ನೀ ರಸವು ನಾ ಗೊರಟು
ನೀ ಪ್ರೇಮಿ ನಾ ಕಾಮಿ ಶೀಲೆ !

ನೀನಹುದು ಸುಕುಮಾರಿ–ನಾ ವಿಕಾರಿ, ತಿಳಿ
ಬೇಡೆನ್ನ ಪಡೆವಾಸೆ ಬಾಲೆ !

ಮಲ್ಲಿಗೆಯ ಬಳ್ಳಿಯನು ಮುಳ್ಳಬೇಲಿಯ ಮೇಲೆ
ಹಬ್ಬಿಸುವುದುಚಿತವೇ ಹೇಳೆ?

ಕೊಳೆನೀರ ಮಡುವಿನೊಳು ಕಳಹಂಸ ಬಿಡುವರೆ?
ಬೇಡೆನ್ನ ಪಡೆವಾಸೆ ಬಾಲೆ !
ನರುಗುಂಪು ಸೂಸುತಿಹ ಬಿರಿಮುಗುಳು ಮಾಲೆಯನು
ಕರಿಯ ಕೊರಳಿಗೆ ಹಾಕಬಹುದೆ ಹೇಳೆ?

ಸುರೆಯ ಬಟ್ಟಲದಲ್ಲಿ ಎರೆಯಬಹುದೇ ಸುಧೆಯ ?
ಬೇಡೆನ್ನ ಪಡೆವಾಸೆ ಬಾಲೆ !

ಈ ರೂಪು ಈ ಚೆಲುವು ಈ ಸೊಬಗು–ಸಿಂಗರವು
ನನಗಾಗಿ ಹುಟ್ಟಿರವು ಲೀಲೆ

ತಿರುಕನನ್ನು ಅರಮನೆಯೊಳಿಟ್ಟು ಭ್ರಮೆಗೊಳಿಸದಿರು
ಬೇಡೆನ್ನ ಪಡೆವಾಸೆ ಬಾಲೆ !

ತಡೆದು ನಿಲ್ಲಿಸಬಹುದೆ ಕಿರಿಯ ಕೆರೆಯೊಂದರಲಿ
ಸೂಸಿ ಹರಿಯುವ ಗಂಗೆಯನ್ನು ಲೋಲೆ?

ನನ್ನಲ್ಪ ಹೃದಯದಲಿ ನಿನ್ನೊಲುಮೆಗಿಲ್ಲೆಡೆಯು
ಬೇಡೆನ್ನ ಪಡೆವಾಸೆ ಬಾಲೆ !

ಗುಣ ರೂಪ ಸಿರಿಯಲ್ಲಿ ನಿನಗೆ ಸರಿಯಾದವನ
ಕೊರಳಲ್ಲಿ ಹಾಕುವುದು ಪ್ರೇಮಮಾಲೆ !

ನಿಮ್ಮಿಬ್ಬರುದರದಲಿ ಮನ್ಮಥನು ಹುಟ್ಟಲಿ
ಬೇಡೆನ್ನ ಪಡೆವಾಸೆ ಬಾಲೆ !

*　　*　　*　　*　　*

(ಒಲಿದವರ ಕೊಲ್ಲುವೊಡೆ ಮಸೆದ ಕೂರಲಗೇಕೆ?
ಒಲ್ಲೆನೆಂದೊಡೆ ಸಾಕು ನಲ್ಲ !)

ತಲೆಬಾಗಿ ನಿಂತಿಹುದು ಪ್ರೇಮ ಪೌರುಷದಿದಿರು
ಸಲ್ಲಬೇಕಿಲ್ಲದೊಡೆ ಸಾವು ನಲ್ಲ !

ನಾನೊಲಿದು ಬಂದಿರುವೆ ನೀನೊಲಿದರದೆ ಸಾಕು
ನಾ ಹೆಚ್ಚು ನೀ ಹೆಚ್ಚು ಎಂಬುದೇನು?

ಮನಕೆ ಮನ ಸರಿತೂಕ ಎದೆಗೆ ಎದೆ ಸುರಲೋಕ
ಪ್ರೇಮದಲಿ ಸಹ ಮೇಲು ಕೀಳ್ಗಳೇನು?

ನಾ ಚೆಲುವು ನೀ ಬಲವು, ನಾನೊಲವು ನೀ ಗೆಲವು
ನಾ ಬಳ್ಳಿ ನೀ ಬೇಲಿ ಗಾಡಿಕಾರ !

ನೀ ಮೋಡ ನಾ ಮಿಂಚು ನೀ ಫಲವು ನಾ ರಸವು
ನಮ್ಮಿರವು ಸಮರಸವು ನೀರ !

ಒಲವಿನಲಿ ಕುಲವಿಲ್ಲ ಮೇಲು ಕೀಳುಗಳಿಲ್ಲ
ಪ್ರೇಮಕಾಗಿಯೆ ಪ್ರೇಮ ನಲ್ಲ !

ಒಲವಿನಲಿ ಸಂಶಯವು ಸುಳಿಯಬಹುದೇ ನೀರ?
ಛಲವೇಕೆ ಪಡೆ ಪ್ರೇಮದೆಡೆಯ ನಲ್ಲ !

* * *

ಹೊಸ ಹೆಂಡತಿಗೆ

ಹೊನ್ನಿ, ಏ ಹೊನ್ನಿ, ಬಾ ಇಲ್ಲಿ, ಕೆಲಸವಿದೆ
ಏನಿಲ್ಲ ನಿನಗೊಂದು ಕಿವಿಮಾತು ಹೇಳ್ಬೇಕು
ಹೆದರಬ್ಯಾಡ, ನಾನೇನೂ ಮಾಡೋಲ್ಲ
ನೀ ಕೇಳ್ಬೇಕಾ ಮಾತು, ನಾಚಬ್ಯಾಡ ಬಾರೇ.....
.....
ಹೀಂಗಿರಬೇಕ್ ಹುಡಿಗೆಂದ್ರ ಪರವಿಲ್ಲ, ಒಳ್ಳೆವಳು.
ಇಲ್ಲಿ ನೋಡು, ನಾಲ್ಕು ದಿವಸಾತು ನೋಡ್ತೀದಿ ಈ ಮನೆ
ಮುರಕಮನೆ, ಬೀಳ್ಮನೆ, ಆದರೂನು ನಮ್ಮನೆ !

ಈ ಮನ್ಯಾಗ ಒಮ್ಯಾದರೂ ಹಮ್ಮಿಣಿ ಕಂಡಿಲ್ಲ
ಒಂದು ಚೀಲಾ ಕಾಳು ಸುದ್ಧಾ ಒಮ್ಯಾದರೂ ನೋಡಿಲ್ಲ
ಹೊಸ ಅರಿವೆ ಎಂದೊಂಮ್ಯೆ ಹೊಲಸೋದು ತರೋದು
ಹೈನಕ್ಕೂ ಈ ಮನೆಗೂ ಹಗೆಯೆಂದೇ ಹೇಳ್ಬೇಕು
ಹಬ್ಬಾ ಹುಣಿವೀ ಕೂಡಾ ಬಹಳಿಲ್ಲ ವರಸದಾಗ
ಕಾಯಿಪಲ್ಯ ಅಂತೀಯಾ? ಮಳೆಗಾಲ್ದಾಗ ಮಾತ್ರಾವೆ
ಕಳೆಗಳೇಕ ಹೋದಾಗ ಗೊಳವಿ ಹರವಿಯ ಪಲ್ಯೆ
ಎರೆ ಹೊಲಕೆ ಹೋದರೆ ಹಕ್ಕರಕಿ ಕಿರಕಸಾಲಿ.

ಹಣ್ಣ ಕಾಯಿ ಎನಬ್ಯಾಡ, ಅಡವ್ಯಾಗ ಸಿಕ್ಕಷ್ಟೆ
ಬಾರಿ ನೀರಲ ಉಂಟು ಕಾರಿ ಕವಳಿಯು ಉಂಟು
ಹತ್ತಿ ಮಾವುಗಳುಂಟು, ಬಾಳೆ ಪೇರಲ ಕೂಡ
ಒಮ್ಮೊಮ್ಮೆಸಿಗಬಹುದು; ಸೌತೆ ಮೆಕ್ಕಿಗಳುಂಟು.
ವಡವಿ ವಸ್ತಾ ಮಾತ್ರ ಕಡೆತನಕ ಕೇಳ್ಬ್ಯಾಡ

ನಮ್ಮವ್ವ ಬಡವಿ, ನನಿಗೊಡವಿ, ಬಿಡು ವಸ್ತದ ಗೊಡವಿ !
ದಿನದಿನಕೆ ಬೇಕಾಗೋ ಜೋಳಾನೇ ಹೆಚ್ಚಿಲ್ಲ
ಗೋದಿ ಕಡಲೆಯ ಮಾತು ತೆಗಿಬ್ಯಾಡ ! ಹೆಚ್ಚೇನು !
ಜೋಳ ಬೀಸಿದರುಂಟು ಕಜ್ಜಾಯ, ಒಡೆದರೆ ನುಚ್ಚು !
ಬೆಳ್ಳುಳ್ಳಿ ಚಟ್ನಿಗೂ ಬರ ಉಂಟು ಒಮ್ಮೊಮ್ಮೆ. ಈರುಳ್ಳಿ
ಇರಬಹುದು.

ನೆರಮನ್ಯಾಗ ಹೈನಿದ್ರ ಮಜ್ಜಿಗೂನೂ ಸಿಗಬಹುದು.

ಇಷ್ಟೆಲ್ಲ ಅಡಚಣಿದ್ರ ಸುಖ ಹ್ಯಾಗ ಅನಬ್ಯಾಡ
ಇದು ಇಲ್ಲ ಅದು ಇಲ್ಲ ಏನಿಲ್ಲದಿದ್ದರೂ
ಸಂತೋಷವೊಂದುಂಟು ಈ ಚಿಕ್ಕ ಮನಿಯೊಳಗ
ಎಲ್ಲ 'ಇಲ್ಲ' ದ ಜೊತೆಗೆ ಚಿಂತೀನೂ ಇಲ್ಲಿಲ್ಲ,
ದುಃಖವೆಂಬುದು ಇಲ್ಲ ದುಗುಡವೆಂಬುವುದಿಲ್ಲ
ಹೊಟ್ಟೆಗೆ ಹ್ಯಾಗೆಂದು ನಿಟ್ಟುಸಿರು ಹಾಕಿಲ್ಲ
ನಾಳಿಗೆ ಹ್ಯಾಗೆಂದು ಗೋಳಾಡಿ ಅತ್ತಿಲ್ಲ
ಅದು ಇಲ್ಲ ಇದು ಇಲ್ಲ ಎಂದು ಎದೆಯೊಡೆದಿಲ್ಲ
ಏನಿಲ್ಲದಿದ್ದರೂ ಇದ್ದರೊಳೆ ಸುಖಬಟ್ಟು
ಎಂಥ ಬಿರಿ ಬಂದರೂ ಕಷ್ಟದಲೆ ನಗೆ ತೊಟ್ಟು
ನಮ್ಮ ಮನೆತನದವರು ಬದುಕಿದರು ಇಲ್ಲಿಯೇ !

ಯಾವ ಕಾಲದ ಮನೆಯೊ ಗೊತ್ತಿಲ್ಲ ನನಗೆ
ಯಾರು ಹಾಕಿಸಿದವರೊ ಹೆಸರರಿಯೆ ಹೊನ್ನಿ
ಹಾಕಿಸಿದ ಮೇಲಿದಕೆ ಸುಣ್ಣ ಸಾರಣೆಯಿಲ್ಲ
ಬಣ್ಣ ಬ್ಯಾಗಡಿಯಿಲ್ಲ ಸಿಂಗಾರವಿಲ್ಲ !
ಈ ಮುರುಕು ಮನೆ ನೆರಳು ಏಸು ಕೂಸುಗಳನ್ನು
ರಕ್ಷಿಸಿತೊ ನಾ ಕಾಣೆ ! ಏಸು ಜೀವಿಗಳಿಲ್ಲಿ
ಬೆಳೆದು ಅಳಿದರೊ ತಿಳಿಯೆ ! ಇಂಥ ಪುಣ್ಯದ ಮನೆಗೆ
ಹಾಳೆಂದು ಜರೆಯದಿರು ಮೂಗು ನೀ ಮುರಿಯದಿರು
ಬೀಳ್ಮಾಡಿ ಕರೆಯದಿರು ಕೀಳೆಂದು ಒರೆಯದಿರು !
ನನ್ನ ಕಣ್ಮುಂದೆಯೇ ನನ್ನಪ್ಪ ನನ್ನವ್ವ
ನಕ್ಕು ನಲಿದಾಡಿದರು ಈ ಹಾಳು ಮನೆಯಲ್ಲಿ

ದುಃಖ ಬಂದಾಗೊಮ್ಮೆ ಕಳವಿನಲಿ ಕಣ್ಣೊರಸಿ
ಮರುಚಣದಿ ಮರೆತರಾ ಕಷ್ಟ ಸಂಕಟಗಳನು !

ಒಮ್ಮೊಮ್ಮೆ ಉಪವಾಸ ಒಮ್ಮೊಮ್ಮೆ ಅರೆಹೊಟ್ಟೆ
ಒಮ್ಮೊಮ್ಮೆ ಬರಿ ಮೈಯು ಒಮ್ಮೊಮ್ಮೆ ಅರೆಮೈಯು
ಒಮ್ಮೊಮ್ಮೆ ಇದ್ದುದನು ನನಗು ತಂಗಿಗು ಉಣಿಸಿ
ನಮ್ಮ ಮುಖವನು ನೋಡಿ ಹಿಗ್ಗಿ ಮಲಗಿದರು !
ಬಡತನವು ಬಲುಕೆಟ್ಟ ! ಅವರ ಪ್ರೀತಿಯ ಸಹಿತ
ಕಲಕಿ ಕೆಣಕುತ್ತಿತ್ತು ಬರಿ ಹೊಟ್ಟೆಯಾ ಭೂತ !
ಆಗ ಜಗಳಾಡುವರು ಬೇಗ ಒಂದಾಗುವರು
ಮತ್ತೆ ಮೈದುಡಿಸುವರು ಮತ್ತೆ ಒಲೆ ಹೊತ್ತುವುದು
ಅಂಬಲಿಯೊ ರೊಟ್ಟಿಯೋ ಹೊಟ್ಟಿಯುರಿ ಹಿಂಗಿಸಲು
ಮತ್ತೆ ಮೊಗವರಳುವುದು ಮುತ್ತುಗಳು ಉರುಳುವುವು
ಅವ್ವ ನಕ್ಕರೆ ಹಿಗ್ಗಿ ! ಆಗ ಅಪ್ಪಗೆ ಸುಗ್ಗಿ !
ಹಗಲಿರುಳ ದುಃಖವನು ನಗೆಯಲ್ಲೆ ತೇಲಿಸುತ
ಏಸೊ ದಿನಗಳ ಕಷ್ಟ ಈಸು ಸುಖದಲ್ಲಿ ಮರೆತು
ದುಡಿ ದುಡಿದೆ ಹಣ್ಣಾಗಿ ಹೆಣವಾದರಿಬ್ಬರೂ !

ನಾನಾದೆ ಪರದೇಶಿ ! ದಿಕ್ಕುಗಾಣದೆ ಹೋಗಿ
ತೆಕ್ಕೆ ಬಿದ್ದೆನು ಜೀವ ಬಿಡುತಿದ್ದ ತಂದೆಗೆ !
ನನ್ನ ಕಣ್ಣೀರೊರೆಸಿ ಸಣ್ಣ ಹಮ್ಮಿಣಿ ತರಿಸಿ
ಕೈಗಿತ್ತ ಕೊನೆಗೆರಡು ಮರೆಯಲಾಗದ ಮಾತ ಹೇಳಿ
"ಇದು ಮಗನೆ ಈಸು ದಿನ ನಾ ದುಡಿದು ಗಳಿಸಿದ್ದು
ಎಷ್ಟು ಹೋರಾಡಿದರು ಹೆಚ್ಚುಳಿಸಲಾರದೇ
ಇದನೆ ನಿನಗಿತ್ತು ನಾ ತೆರಳುವೆನು ಶಿವನೂರ್ಗೆ !
ಬಲು ಸ್ವಲ್ಪ ಇದೆಯೆಂದು ಸಿಟ್ಟಾಗದಿರು ಕಂದ !
ನಿನ್ನಜ್ಜ ನನಕೈಗೆ ಇಷ್ಟು ಸಹ ಕೊಡಲಿಲ್ಲ
ಇದನು ನೀ ಕಳೆಯದಲೆ ಇದರಿಂದಲೇ ಗಳಿಸಿ–
ದಷ್ಟರೊಳೆ ಬಾಳುವೆಯ ಸಾಗಿಸೈ ಮಗನೆ !
ಹೊನ್ನಿ ನೆರೆಯುವಳಿನ್ನು ಅವಳನೀ ಕರೆತಂದು
ಹೊಸಬಾಳು ಹೂಡು ನೀ. ನಾ ನಿನಗೆ ಕೊಟ್ಟುದರ
ನಾಲ್ಕು ಪಟ್ಟಾದರೂ ನಿನ್ನ ಮಕ್ಕಳಿಗುಳಿಸಿ ಸಾಯಿ !

ನೂರು ಕಷ್ಟವ ನುಂಗಿ ನಿನಗೆ ನಾ ಕಲಿಸಿದೆನು
ನಾಲ್ಕು ಅಕ್ಷರಗಳ ಗುರುಗಳಿಂದ
ನಾನು ಕಟ್ಟಿದ ಬುತ್ತಿ ಎಷ್ಟು ದಿನ ಇರಬಹುದು?
ನಿನ್ನ ಅಂಬಲಿ ನೀನೆ ಗಳಿಸಿಕೋ ಕಂದ !"

ತಾಯಿ ಮೊದಲೇ ತೀರಿ ವರುಷವಾಗಿತ್ತು
ತಂದೆಯೂ ಕೈಬಿಟ್ಟು ಆರು ತಿಂಗಳವಾಯ್ತು
ನಾನು ಅಂಗಡಿ ತೆರೆದು ಮೂರು ತಿಂಗಳವಾಯ್ತು
ಎರಡರಷ್ಟಾಗಿಹುದು ಅಪ್ಪ ಕೊಟ್ಟಿಹ ಗಂಟು !
ಹೆದರದಿರು ಹೊನ್ನಿ ! ಬರಿಗೈಲೆ ಬಾಳುವೆಯ
ಹೂಡಿ ನಮಗಾಗಿಯೇ ಹಿಡಿತುಂಬ ಹಣವುಳಿಸಿ
ಹೋದ ತಾಯ್ತಂದೆಗಳ ಹರಕೆ ನಮಗುಂಟು !
ಅವರ ಬಾಳಿನ ಜಾಡು ಹಿಡಿದು ಅವರಿಬ್ಬರಾ
ಹೆಜ್ಜೆಯಲಿ ಹೆಜ್ಜೆಯನ್ನಿಟ್ಟು ಸಾಗೋಣ
ಶಿವನ ದಯೆಯಿದ್ದರೆ ಒಂದಿಲ್ಲ ಒಂದು ದಿನ
ಉಪ್ಪರಿಗೆಯಾದೀತು ಅವರ ಈ ಮರುಕು ಮನೆ !
ನೀ ಮಾತ್ರ ತುಸು ತುಸುಕೆ ಸಿಡಿಮಿಡಿಯ ತೋರದಲೆ
ಕಹಿಸಿಹಿಯ ಸಮನೆಂದು ತಿಳಿದು ಬಾಳುವೆ ಮಾಡು
ನಿನ್ನ ನಗೆಯಿಂದಲೇ ಬೆಳಗಲೆನ್ನೀ ಮನೆಯು
ನಿನ್ನ ಪ್ರೀತಿಯೆ ನನಗೆ ಗೆಲವ ತರಲಿ !
ನಿನ್ನಡಿಗೆ ದುಡಿಮೆಗಳು ನಿನ್ನ ಕಾಳಜಿ ಸಿಸ್ತು
ನನ್ನ ದುಡಿಯುವ ಮೈಗೆ ಬಲವ ತರಲಿ !
ನಿನ್ನ ಸವಿ ಮಾತುಗಳು ನಿನ್ನ ಸವಿ ನೋಟಗಳು
ನನ್ನ ಬಾಳಿಗೆ ಹೊಸತು ಚೆಲುವ ತರಲಿ !
ನಮ್ಮಿಬ್ಬರೊಂದಾದ ಬಾಳುವೆಯ ನೋಡಿ ಶಿವ–
ನೂರಲ್ಲಿ ತಾಯ್ತಂದೆ ಹಿಗ್ಗುತಿರಲಿ !
ನಮ್ಮ ಪ್ರೀತಿಯಬಳ್ಳಿ ಬೆಳೆದು ಮನೆಯೆಲ್ಲವನು
ಮಗಮಗಿಸುವಂತಿರುವ ಮೊಗ್ಗೆ ಬರಲಿ !

* * *

ಹೊಸ ಗಂಡನಿಗೆ

ಅರ್ಪಿಸಿಕೋ ಓ ಪ್ರಿಯತಮ
ಈ ತನು–ಯೌವನ–ಜೀವನ
ಕರವಿಡಿದಾಗಲೆ ಎರೆದಿರುವೆನು
ನಿನಗೆನ್ನಯ ಮನ ಪ್ರಾಣ !
ಪ್ರತ್ಯೇಕತೆ ಇಲ್ಲೆನಗಿ–
ನ್ನೆಲ್ಲಿ ಬೇರೆ ಅಸ್ತಿತ್ವ?
ಆತ್ಮೈಕ್ಯದಿ ಸಮರಸದಲಿ
ಅಳಿಯಲಿ ನಮ್ಮಯ ದ್ವಿತ್ವ !
ಇನ್ನೆನಗಿದೆ ನಿನ್ನಯ ಎದೆ
ಅದೆ ನನ್ನಯ ಕೈಲಾಸ
ನಿನ್ನಯ ಮನವೆನ್ನಯ ಮನೆ
ಹೆಸರು ಪ್ರೇಮ ನಿವಾಸ
ನಾ ಚೆಲುವು ನೀ ಬಲವು
ನೀ ವೇಣುವು ನಾ ಗಾನ
ನಿಶಿ ದಿನ ನಡೆಯಲಿ ನಮ್ಮಿಬ್ಬರ
ಪ್ರೇಮಾಮೃತಪಾನ !
ನೀ ಹಿಮಗಿರಿ ನಾ ಸುರನದಿ
ನಾ ಭಾವನೆ ನೀ ಭಾಷೆ
ನೀ ಬುದ್ಧಿಯ ರಕ್ಷಯ ನಿಧಿ
ನಾ ಹೃದಯದ ಅಭಿಲಾಷೆ
ನೀ ಕಲ್ಪನೆ ನಾ ಕವಿತೆ
ನೀ ವೀಣೆಯು ನಾ ರಾಗ
ನೀ ಪುರುಷನು ನಾ ಪ್ರಕೃತಿಯು
ನೀ ಯೋಗವು ನಾ ಭೋಗ
ನೀ ಶಿವನು ನಾ ಶಕ್ತಿಯು
ನೀ ಧೀರತೆ ನಾ ಒಲವು

ನೀ ಮುಕ್ತಿಯು ನಾ ಭಕ್ತಿಯು
ನೀ ವಿರಹವು ನಾ ನೆನಪು
ನೀ ಜ್ಞಾನವು ನಾ ಪ್ರೇಮವು
ನೀ ನಭ ನಾ ನೀಲಿಮಾ
ನೀ ನೃತ್ಯವು ನಾ ನೂಪುರ ಧ್ವನಿ
ನೀ ಪೂರ್ಣಚಂದ್ರ ನಾ ಪೂರ್ಣಿಮಾ
ನೀ ಸ್ನಿಗ್ಧದೃಷ್ಟಿ ನಾ ಮುಗ್ಧಹೃದಯ
ನೀ ಪ್ರಯತ್ನ ನಾ ಪ್ರಾಪ್ತಿ
ನೀ ಸಮೀರ ನಾ ಪರಾಗ
ನೀ ಪ್ರಕಾಶ ನಾ ವ್ಯಾಪ್ತಿ
ನೀ ಜ್ಯೋತಿಯು ನಾ ಕಿರಣವು
ನೀ ವೀರವು ನಾ ಕರಣ
ನೀ ಬಿಡುಗಡೆ ನಾ ಬಂಧನ
ನಾ ಕಾಯವು ನೀ ಹರಣ
ನಿನ್ನ ಪ್ರೇಮ ಕಟಾಕ್ಷ
ನನಗದುವೆ ಮೋಕ್ಷ
ನಿನ್ನೆದೆಯ ಸಂಸರ್ಗ
ನನಗದೇ ಸ್ವರ್ಗ !
ಬಾ ! ಬಾಳ ಜೋಕಾಲಿಯೊಳು ಕುಳಿತು ತೂಗೋಣ
ದೈವ ನೂಕಿದ ಕಡೆಗೆ ಕೈಯ ಬಿಡದೆ
ಜೀವನದ ಗಂಗೆಯಲಿ ಜೊತೆಯಾಗಿ ಈಸೋಣ
ವಾಹಿನಿಯು ಸೆಳೆದತ್ತ ಧೈರ್ಯಗೆಡದೆ
ಇನ್ನು ನಾ ಜೊತೆ ನಿನಗೆ ಸಹಕರ್ಮಿ, ಸಹಧರ್ಮಿ!
ನನ್ನೆದೆಯ ಲೋಹಕ್ಕೆ ನಿನ್ನುಸಿರೆ ಪರುಷ ॥
ಗಂಡು ಹೆಣ್ಣಿನ ಬಾಳು ಗಂಡಭೇರುಂಡದೊಲು
ಎರಡು ಮುಖ, ಒಂದಾತ್ಮ ದುಃಖ ಹರುಷ ॥

* * *

ನನ್ನ ನಲ್ಮೆಯ ಲಕ್ಷ್ಮಿ

ಎದೆಯ ಪದುಮದಿ ನಿಂತು ನಗುವ ನಲ್ಮೆಯ ಲಕ್ಷ್ಮಿ
ಮನದ ವನದಲ್ಲಿ ಗಾನಗೈವ ಪಕ್ಷಿ
ನನ್ನ ಕನಸುಗಳಲ್ಲಿ ಕುಣಿವ ಕಮಲದಳಾಕ್ಷಿ
ನನ್ನ ಪ್ರಿಯತಮೆ ನನ್ನ ಪ್ರೇಮ ಸಾಕ್ಷಿ !

ನನ್ನದೆಯ ಬಾನಿನಲ್ಲಿ ನಿನ್ನ ಮುಖವೇ ಚಂದ್ರ
ಸೋರ್ಮುಡಿಯ ಕುಸುಮಗಳೆ ತಾರಕಾಳಿ
ನಿನ್ನ ಕಬರೀಭರವೆ ಕರಿಮೋಡ, ಕಡೆಗಣ್ಣ
ಕುಡಿನೋಟಗಳೆ ಮಿಂಚು, ಸುಯ್ಲೆ ಗಾಳಿ
ರಂಗುರಂಗಿನ ಸೆರಗು ಸುರಚಾಪ, ನಲ್ವಾತು
ದೇವಕನ್ನಿಕೆ ಮಿಡಿವ ದಿವ್ಯರಾಗ
ನಿನ್ನ ನಗೆಯೇ ಜೋತ್ಸ್ನೆ ನಿನ್ನ ಕೆನ್ನೆಯ ಕೆಂಪು
ಸಂಜೆ ಮುಂಜಾವುಗಳ ರಕ್ತ ರಾಗ !

ಬಗೆಯ ಬಾನಿನ ತುಂಬ ನಗುನಗುತ ನಿಂತಿರುವೆ
ಒಲವಿನಮೃತದ ಕಲಶ ಕರದಿ ಧರಿಸಿ
ಬಾಳಬನ ಬಾಡದೊಲು ಭಾವಝರಿ ಬತ್ತದೊಲು
ಚೈತನ್ಯಪ್ರದ ಚೆಲುವಿನಮೃತ ಸುರಿಸಿ

ನೂರು ತಾಪಕೆ ಒಂದೆ ಓರೆನೋಟವು ಸಾಕು
ಬಗೆಯ ಬೇಗೆಗೆ ನಿನ್ನ ನಗೆಯೆ ಸಾಕು
ಬಾಳಿಗರ್ಥವನೀಯೆ ನಿನ್ನ ನಲುಮೆಯೆ ಸಾಕು
ಆನಂದಕೇಳಿಗಿದೊ ಸೌಂದರ್ಯ ಸಾಕು !

ನಮ್ಮ ಮುತ್ತಿನೊಳಿಹುದು ನಮ್ಮ ಜೀವನ್ಮುಕ್ತಿ
ನಮ್ಮ ಕಿವಿಮಾತೆಮಗೆ ಸ್ವರ್ಗ ಸಂಗೀತ
ನಾವು ಸುಸಿಲಾಡುತಿರೆ ಶಿವನು ಸಹ ನಸುನಗುವ
ಒಲವೆ ಸೃಷ್ಟಿಯ ಆತ್ಮ ಶಿವನ ಸಂಕೇತ

ಬಾ, ಬಾಳ ದೇಗುಲದಿ ಪ್ರೇಮ ಕಾರ್ತಿಕ ಹಚ್ಚಿ
ಸತ್ಯ ಶಿವ ಸುಂದರನ ಪೂಜಿಸೋಣ !
ವಿಶ್ವಸ್ವರಮೇಳದಲಿ ನಮ್ಮ ಸ್ವರವನು ಬೆರೆಸಿ
ನಮ್ಮ ಬಾಳಿನ ಬೀಣೆ ಬಾಜಿಸೋಣ !"

* * *

ಎರಡು ಚಿತ್ರಗಳು

ಸಾಕೇಳು ನಲ್ಲ
ಮರೆತು ಪ್ರೇಮದ ಸೊಲ್ಲ
ಗಂಡುತನಕಿದು ಹೊಲ್ಲ
ಓನಲ್ಲ, ಏನಲ್ಲ, ನಲ್ಲ !

ಕರ್ತವ್ಯ ಕರೆಯುತಿರೆ ಜಗವು ಬರಲೊರೆಯುತಿರೆ
ಆಹ್ವಾನವನು ತೂರಿ ಬದುಕು ಬೊಬ್ಬಿರಿಯುತಿರೆ
ನಾಡಿನೊಳಿದನಿಯೊಂದು ಬಲಿಗಾಗಿ ಮೊರೆಯುತಿರೆ
ರಣವಾರ್ತೆಯನು ಸಾರಿ ಭೇರಿ ಭೋರ್ಗರೆಯುತಿರೆ

ತೋಳ ಸಂಕೋಲೆಯಲಿ ತೊಳಲದಿರು ನಲ್ಲ
ಬಾಳ ಬರಿಗೈಯದಿರು ಏಳು ನಲ್ಲ
ಸಾಕೇಳು ನಲ್ಲ,
ಮರೆತು ಪ್ರೇಮದ ಸೊಲ್ಲ.
ಗಂಡುತನಕಿದು ಹೊಲ್ಲ,
ಓನಲ್ಲ, ಏನಲ್ಲ, ನಲ್ಲ !

ಮೊದಲ ಮುತ್ತಿನ ಮಧುವು ಹದವ ಮೀರಲು ಜೊಲ್ಲು
ಮಿತಿಯ ಮೀರಿದ ರತಿಯು ಹಿತವೆ? ಕಾಮನ ಕೊಲ್ಲು !
ಪ್ರೇಮದಾಲಿಂಗನದಿ ಪರಿಮಳವ ಸುರಿವಂಗ
ಕಾಮದಪ್ಪುಗೆಯಲ್ಲಿ ಅಂಗಜನಿಗೇ ಭಂಗ !
ಇಂತೆನ್ನ ಮನ ಕದಡಿ ಬಗೆಯು ಬೇಸತ್ತಾಗ
ಬಂತು ನಿನ್ನಯ ಹಟಕೆ ಕೆಟ್ಟ ಸಿಟ್ಟು !
ಮನ್ನಿಸೆನ್ನನು ಚೆನ್ನೆ.....

ಹಿಡಿ ಬೆಳ್ಳಿ ಚೂರುಗಳಿಗೊಡಲೊತ್ತೆ ಬಿದ್ದಿಹುದು
ತಡಿಯಬೇಕಧಿಕಾರಿ ನುಡಿದೆಲ್ಲ ನಿಷ್ಠುರವ
ಪಡೆವಲ್ಪ ಸಂಬಳಕೆ ಕಡಿತವಿದೆ ಆಗಾಗ
ಹಿಡಿತದಲಿ ಬಳಸಿದರು ಕಡೆಗಾಣದಿದೆ ಮಾಸ
ಮಿಡುಕಿನಿತು ಹಿಂಡುತಿರೆ ಮನವನ್ನು ನೀನಿಂತು

ಸಿಡಿಮಿಡಿಯ ತೋರಲ್ಕೆ ತಡೆಯದಾಯಿತು ಸಿಟ್ಟು–
ಮನ್ನಿಸೆನ್ನನು ಚೆನ್ನೆ.....

ನಿನ್ನ ಕೈ ಹಿಡಿದಾಗ ನನ್ನ ಕಣ್ಣೆದುರಿತ್ತು
ಬಣ್ಣ ಬಣ್ಣದ ಬಯಕೆ ಕನಸುಗಳ ಬಾಳು
ನಿನ್ನ ಚೆಲುವಿಕೆಗಿಂದು ನಾನು ಕೊಡುತಿಹುದೇನು?
ಬನ್ನ, ಬಡತನ, ದುಃಖ, ಕಣ್ಣೀರು, ಗೋಳು !

ಇದನು ನೆನೆದಾಗೆನ್ನ ಹೃದಯ ಹೋಳಾಗುವುದು
ಇದಿರಾಡೆ ನೀನಿಂದು ನೋವಾಯ್ತು ಸಿಟ್ಟು !
ಮನ್ನಿಸೆನ್ನನು ಚೆನ್ನೆ ಇನ್ನು ಬಡಿಯೆನು ರನ್ನೆ
ಎಷ್ಟುನೋಯಿತೊ ಅಯ್ಯೊ, ನಿನ್ನ ಕೋಮಲ ಕೆನ್ನೆ !

ಕಹಿಬಾಳ ಸವಿದು ನಾ ಬಹು ಬಳಲಿ ಮನೆಗೆ ಬರೆ
ಸಿಹಿ ಮಾತುಗಳನಾಡಿ ಸ್ವಾಗತಿಸು ನಲ್ಲೆ
ಸಹಿಸೆನ್ನ ಕೈಹಿಡಿದು ಸಹಿಸಲೇ ಬೇಕಿರುವ
ಬಹು ದುಕ್ಕ ಬಿಕ್ಕಗಳ ಹೇಗಾದರೂ ನಲ್ಲೆ
ನೀನಲ್ಲದಿನ್ನಾರ ಮೇಲಾನು ಕೋಪಿಸಲಿ?
ಏನುಕಾರಣ ತಿಳಿಯೆ ಬಂತಿಂದು ಸಿಟ್ಟು !
ಮನ್ನಿಸೆನ್ನನು ಚೆನ್ನೆ ಇನ್ನು ಬಡಿಯೆನು ರನ್ನೆ
ಎಷ್ಟು ನೋಯಿತೊ ಕಾಣೆ ನಿನ್ನ ಹೂವಿನ ಕೆನ್ನೆ !

ಇನ್ನೇನ ಬೇಡೆ ನಾ ನಮ್ಮ ಈ ಮನೆಯಲ್ಲಿ
ಕಣ್ಣೀರ ಹನಿ ಮಾತ್ರ ಬೀಳದಿರಲಿ !
ಬನ್ನವೇ ಬಾಳಿನಲಿ ಅನ್ನವಾದರು ಸರಿಯೆ
ನಿನ್ನ ಮುಖವಿನ್ನತ್ತು ಸಣ್ಣಾಗದಿರಲಿ !

ಹೇಗೆ ದುಡಿಯಲಿ ಸತಿಯೆ ನೀನು ಸಹ ಬೇಸರಿಯೆ?
ಹೋಗಲಿಕೆ ಕಡೆತನಕ ಬಂತಿಂದು ಸಿಟ್ಟು !
ಮನ್ನಿಸೆನ್ನನು ಚೆನ್ನೆ ಇನ್ನು ಬಡಿಯೆನು ರನ್ನೆ
ಎಷ್ಟು ನೋಯಿತೊ ನಿನ್ನ ಚೆಲುವ ಕೇದಗೆ ಕೆನ್ನೆ !

* * *

ಕಿವಿಮಾತು

ದುಡದುಡದು ಬ್ಯಾಸತ್ತು ಬಂದಾಗ
ಕೈತುಂಬ ಕೂಲಿಯ ತಂದಾಗ
ಮನದಾಗ ತನನನ ಅಂದಾಗ
ಜೀವಾ ಕೇಳಬೇಕನತ ಕಿವಿಮಾತ
ಜೇನಿನ ಹನಿಗಿಂತ ಸವಿಮಾತ !

ಹೊಲದೊಳಗ ಹಸಿರು ಮುರಿವಾಗ
ಎದಿಮಟ ಬೆಳೆಯು ಮೆರೆವಾಗ
ಗಿಡದಾಗ ಕೋಗಿಲೆ ಕರೆವಾಗ
ಜೀವಾ ಕೇಳಬೇಕನತ ಕಿವಿಮಾತ
ಎಳೆಬೆಳಸಿಗಿಂತಾ ಸಿಹಿಮಾತ !

ತೋಟದಿ ಬೀಜದ ಹೊಯ್ವಾವ
ಬಾಳೆಯ ಗೊನೆಯನು ಕೊಯ್ವಾಗ
ಒಬ್ಬನೆ ಇರಲಾರ್ದ ಸುಮ್ಮಾಗ
ಜೀವ ಕೇಳಬೇಕನತ ಕಿವಿಮಾತ
ಎಲೆಅಡಿಕೆಗಿಂತಾ ಸವಿಮಾತ !

ಹೂಗಿಡಕ ನೀರನು ಸುರಿವಾಗ
ಹಂದರದಿ ಮಲ್ಲಿಗಿ ಬಿರಿವಾಗ
ಪಾಡಾದ ಹಣ್ಣುಗಳ ಹರಿವಾಗ
ಜೀವ ಕೇಳಬೇಕನತ ಕಿವಿಮಾತ
ದ್ರಾಕ್ಷಿಯ ರಸಕಿಂತ ಸವಿಮಾತ !

ಬೆಳಗಿನ ಊಟಕ್ಕೆ ಕುಂತಾಗ
ಎತ್ತುಗಳ ಬಿಟಗೊಂಡು ನಿಂತಾಗ
ಜೊತೆಯಿಲ್ಲದಿರುವಾ ಚಿಂತ್ಯಾಗ
ಜೀವಾ ಕೇಳಬೇಕನತ ಕಿವಿಮಾತ
ಕೆನೆಮೊಸರಿಗಿಂತಾ ಸವಿಮಾತ !

ಕಣದಾಗ ಒಬ್ಬವನೆ ಕುಳಿತಾಗ
ಮನದಾಗ ಮೋಹವು ಮೊಳೆತಾಗ
ಜೋಡಿನ ಆಸೆಯು ಕಳಿತಾಗ
ಜೀವಾ ಕೇಳಬೇಕನತ ಕಿವಿಮಾತ
ಹಂತಿಯ ಪದಕಿಂತ ಸವಿಮಾತ !

ಸಿಹಿನೀರ ದಾರ್ಯಾಗ ಬರುವಾಗ
ಕಲ್ಲಾಗ ಹಿಟ್ಟನು ತಿರುವಾಗ
ಕಂಬಳಿಯು ಮಲಗಲು ಕರೆವಾಗ
ಜೀವ ಕೇಳಬೇಕನತ ಕಿವಿಮಾತ
ಸಕ್ಕರಿನಿದ್ದಿಗಿಂತ ಸವಿಮಾತ !

* * *

ಮನೆಯಿಂದ ಹೊರಡುವಾಗ

ಹೊರಡುವೆನು ನಾನಿನ್ನು ದಿನದ ದುಡಿತಕ್ಕಾಗಿ
ನಲುಮೆಯಲಿ ನಗೆಬೀರಿ ಕಳಿಸು ನನ್ನ
ಲೋಕ ವ್ಯಾಪಾರಗಳ ಕುಟಿಲ ಕಾಠಿನ್ಯಗಳ
ಮರೆಯುವೆನು ನಗೆಮೊಗವ ನೆನೆದು ನಿನ್ನ !
ನಿರ್ದಯೆಯ ನಿಷ್ಠುರವ ಕಾಯ ಕರ್ಮದ ದಣಿವ
ನೈರಾಶ್ಯ ನೀರಸತೆ ಬೇಸರಗಳ
ಮರೆಸಿ ಬಿಡುವಂತೊಮ್ಮೆ ಮಂದಹಾಸವ ಬೀರು
ಬರಿಸು ನನ್ನೊಳು ಹುರುಪು ಹುಮ್ಮಸುಗಳ
ಜಗದ ವಕ್ರತೆ ವಿಕೃತ ರೂಪತೆಯೆ ಕಾಣದೊಲು
ನಿಲಿಸು ಕಣ್ಣಲಿ ನಿನ್ನ ರೂಪವನ್ನೆ !
ಜನದ ಬಿರುಮಾತುಗಳು ಕೇಳದೊಲು ಕಿವಿಯಲ್ಲಿ
ತುಂಬು ನಿನ್ನಯ ಪ್ರೇಮ–ಸಲ್ಲಾಪವನ್ನೆ !
ಎಲ್ಲೆಡೆಯೊಳೂ ಶುದ್ಧ ಪ್ರೇಮನೆ ಕಾಣವಂ–
ತೆನ್ನ ನಯನಕೆ ಬರಲಿ ಪ್ರೇಮ ದೃಷ್ಟಿ !
ನಿನ್ನ ನಗೆಯಂತೆಯೇ ನಗುನಗುತ ಕಾಣಿಸಲಿ
ನನ್ನ ಕಣ್ಣಿಗೆ ಸಕಲ ಮನುಜ ಸೃಷ್ಟಿ !

* * *

ಸಮರಸ

ಹೇಗೆ ಹೇಳಲಿ ಸಖಿಯೆ ಭೋಗಿ ನಲ್ಲನ ಸುದ್ದಿ?
ಮೂಗೆಯಾಗಿರುವುದೇ ಮೇಲು ಗೆಳತಿ !
ಅವನು ತಮ್ಮನು ನೋಡಿ ನೋಟ ಬೀರಿದನೆಂದು
ಅವನೊಮ್ಮೆ ತಮ್ಮೆಡೆಗೆ ಹೂವ ತೂರಿದನೆಂದು
ಅವನೊಂದು ದಿನ ಮುಗುಳುನಗೆಯ ತೋರಿದನಂದು
ನಮ್ಮ ಚೆಲುವಿಕೆ ನೋಡಿ ಬಳಿಗೆ ಸಾರಿದನೆಂದು
  ಹಿಗ್ಗಿ ಎಲ್ಲರ ಮುಂದೆ ಬಣ್ಣಿಸುವರೌ ಸಖಿಯೆ
  ಭಾಗ್ಯವಂತಿಯರವರು ಇಂದುಮುಖಿಯೆ !
ಬಂದವರ ಮುಂದೆಲ್ಲ ಅಂದದಲಿ ಕತೆಕಟ್ಟಿ
ಸುಂದರಾಂಗನು ಕೊಟ್ಟ ಸವಿಮುತ್ತುಗಳ ಸುದ್ದಿ
ಬಂದು ನೀರನು ಕಳೆದ ತಂಪೊತ್ತುಗಳ ಸೊಗಸ
ಅಂದು ತೋರಿದ ಒಲವ ಇಂದು ಬೀರಿದ ನಲವ
  ತಣಿವಿರದೆ ಹೇಳುವರು ತಿರುತಿರುಗಿ ಸಖಿಯೆ
  ಪುಣ್ಯವಂತಿಯರವರು ಚಂದ್ರಮುಖಿಯೆ !
ಅನುದಿನವು ಬಂದರೂ ತನು ಸೂರೆಗೊಂಡರೂ
ಮನವಿಂಬುಗೊಂಡರೂ ಸುಖವಪ್ಪುಗೊಂಡರೂ
ಕೊನೆಯಿರದೆ ರಮಿಸಿದರು ತಣಿವಿರದೆ ಕ್ರೀಡಿಸಿದ–
ರನುನಯದಿ ಬಿಗಿದಪ್ಪಿ ಮುದ್ದಾಡಿ ಮಲಗಿದರು
  ನಾಚುವೆನು ನಾನಿವನು ಹೇಳಲಿಕೆ ಸಖಿಯೆ !
  ಬೈಚಿಟ್ಟುಕೊಳ್ವೆನಿವ ಕೇಳಿಂದುಮುಖಿಯೆ !
ಉಸಿರಿನಲಿ ಉಸಿರಾಗಿ ಅಸು ಅಸುವಿನಲಿ ಕೂಡಿ
ಬೆಸುಗೆ ಬಿಡದಪ್ಪುಗೆಯು ರಸೆಗೆ ನಿಲುಕದ ನುಡಿಯು
ಬಿಸುಪಾರದಿಹ ಮುತ್ತು ನಸುವು ತಿಳಿಯದ ಹೊತ್ತು
ವಿಷಯವಿಲ್ಲದ ರತಿಯು ಹುಸಿಯಲ್ಲ ಶಿವರತಿಯು

ಇಂತಿವನು ಎಂತೊರೆವೆ ಹೇಳು ಸಖಿಯೆ?
ಅಂತರಂಗದಿ ಬೆರೆವನವನಿಂದು ಮುಖಿಯೆ!
ಕೂಡಿದಾಗಿನ ಸುದ್ದಿ ಆಡಲೂ ಬರುತಿರಲು
ಕೂಡಿಕೆಯ ಪರವಶಕೆ ಅದುವೆ ಕೊರತೆ !
ಗಾಡಿಕಾರನು ಬರಿದೆ ನೋಡಲೆನ್ನನೆ ಮರೆತೆ
ಮೋಡಿಯಿಂತಹುದವನ ಕೂಡಿ ಏನರಿಯೆ !
ಹೇಗೆ ಹೇಳಲಿ ಸಖಿಯೆ ಭೋಗಿನಲ್ಲನ ಸುದ್ದಿ
ಮೂಗೆಯಾಗಿರುವುದೇ ಮೇಲು ಗೆಳತಿ !

* * *

ಕರುಣಾ ಶ್ರಾವಣ

ಸಾರುತಿದೆ ಸೃಷ್ಟಿ

ಹಣ್ಣಿನಲಿ ಬೆಣ್ಣೆಯಲಿ ಕೆನೆಮೊಸರು ಹಾಲಿನಲಿ
ಕಂದದಲಿ ಜೇನಿನಲಿ ರಸಗಬ್ಬು ಬಾಳೆಯಲಿ
ಎಳನೀರು ಹೊಳೆನೀರು ಹಾಲ್ದೆನೆಯ ಕಾಳಿನಲಿ
ಸಾರುತಿದೆ ಸೃಷ್ಟಿಯಿದು ಸವಿಯಾಗಿ ನಿಂದು–
"ಸವಿಯಾಗು, ಸವಿಯಾಗು, ಸವಿಯಾಗು!" ಎಂದು.

ತಾರೆಯಲಿ ಚಂದ್ರನಲಿ ಸೂರ್ಯನಲಿ ರನ್ನದಲಿ
ಕಂಚಿನಲಿ ಮಿಂಚಿನಲಿ ಮುತ್ತಿನಲಿ ಚಿನ್ನದಲಿ
ಜ್ಯೋತಿಯಲಿ ನಯನದಲಿ ಉಷೆಯ ಹೊಂಬಣ್ಣದಲಿ
ಸಾರುತಿದೆ ಸೃಷ್ಟಿಯದೆ ಭವಿಯಾಗಿ ನಿಂದು–
"ಭವಿಯಾಗು, ಭವಿಯಾಗು, ಭವಿಯಾಗು!" ಎಂದು.

ಶಬ್ದದಲಿ ಸವಿಯಾಗಿ ಅರ್ಥದಲಿ ಬೆಳಕಾಗಿ
ಬಾಳ ಭವ್ಯತೆಗಿಲ್ಲಿ ಬೆಳಕು ಸವಿ ಸಾಕಾಗಿ
ಬಾಳುವೆಯ ಸವಿಬೆಳಕ ಬರೆಯುವವ ಬೇಕಾಗಿ
ಸಾರುತಿದೆ ಸೃಷ್ಟಿ ಸವಿಭವಿಯಾಗಿ ನಿಂದು–
"ಕವಿಯಾಗು, ಕವಿಯಾಗು, ಕವಿಯಾಗು!" ಎಂದು.

* * *

ಮಂದಾನಿಲ ಉವಾಚ

ಸೋತು ಬಂದೆಯಾ ಮಂದಾನಿಲ?
ಹೌದಣ್ಣ, ಹೂವುಗಳ ಬಾಯ್ದೆರೆಸಿ ಬಂದೆ
ಸೆರೆ ಸಿಕ್ಕ ಪರಿಮಳದ ಸೆರೆ ಬಿಡಿಸಿ ಬಂದೆ
ಬಳ್ಳಿಗಳ ಮಕ್ಕಳಿಗೆ ಆನಿಮಾಡಿಸಿ ಬಂದೆ
ತರುಮರದ ಎಲೆಯೆಲೆಯ ಹುಡಿಯ ಜಾಡಿಸಿ ಬಂದೆ
ಕೇತಕಿಯ ಸಿಕ್ಕುಗಳ ಬಿಡಿಸುತ್ತ ಬರುವಾಗ
ಮೈಗೆಲ್ಲ ಮುಳ್ಳುಗಳ ಬರೆಕೊಂಡು ಬಂದೆ
ಬಹು ನೊಂದು ಬಂದೆ!

ಓತು ಬಂದೆಯಾ ಮಂದಾನಿಲ?
ಹೌದಣ್ಣ, ಇನಿತೊಳ್ಪುಗೈದರೂ ಕೇಳುವವರಿಲ್ಲದೆಯೆ
'ಒಳ್ಳೆಯವ'ನೆಂದೊಮ್ಮೆ ಹೇಳುವವರಿಲ್ಲದೆಯೆ
ಎಲ್ಲೆಲ್ಲೊ ಸುಳಿದಾಡಿ ಸುಯ್ದಾಡಿ ಬಂದೆ
ಮೈಕಾಯ್ದು ಮನವೆಲ್ಲ ಹೊಯ್ದಾಡಿ ಬಂದೆ
ಎಲ್ಲರನು ಸ್ವಾಗತಿಸಿ ಕುಶಲ ಕೇಳುವ ಕವಿಯ
ಸಂಗವೇ ಸಾಕೆಂಬ ಅರಿವಾಯ್ತು ಬಂದೆ
ನಾನೋತು ಬಂದೆ!

* * *

ಬಾಳ ಹೊತ್ತಗೆ

ಬಾಳ ಹೊತ್ತಗೆಯಲ್ಲಿ ಪ್ರತಿದಿನವು ಪುಟವೊಂದು
ಬರೆ ನಿತ್ಯ ಪ್ರತಿಪುಟದಿ ನವ್ಯ ಕೃತಿಯ
ಬರಿಹಾಳೆಗಳನುಳಿಸಿ ಪಾಳ್ಗೆಯದಿರು ಅದನು
ತುಂಬ ಬರೆ ನಿನ್ನ ಸ್ಮೃತಿ ಶ್ರುತಿಯ ಕೃತಿಯ
ಬೆವರ ಹನಿ ಕಂಬನಿಯ, ನಿಟ್ಟುಸಿರ ಉಗಿಯಿಂದ–
ಲೊಗೆವ ಮಳೆವನಿಯನ್ನು ಮಸಿಯ ಮಾಡಿ

ನೂರು ನೋವಿನ ಮುಳ್ಳ ಲೆಕ್ಕಣಿಕೆಯಿಂದಲೇ
ಬರೆಯಬಹುದೊಮ್ಮೊಮ್ಮೆ ಅಳಲ ಹಾಡಿ!

ರೋಮಾಂಚಗಳ ಕುಂಚ ಯೌವನದ ಚಂಚಲದ
ಮಿಂಚಿನಲ್ಲದ್ದಿ ಮೈಯುಬ್ಬಿ ಕೊಬ್ಬಿ
ಚಿತ್ರ ಚಿತ್ರಾಕ್ಷರದಿ ಬರೆಯಬಹುದಿನ್ನೊಮ್ಮೆ
ಚೆಲುವೆ ಬರೆಹದ ಬಳ್ಳಿಯಾಗಿ ಹಬ್ಬಿ
ವಿರಹಾಗ್ನಿಜ್ವಾಲೆಯೆನೆ ವಿಫಲ ಪ್ರೇಮಾಗ್ನಿಯಲಿ

ಕತಕತನೆ ಕುದಿಯುತಿಹ ಜೀವರಸದಿ
ಅದ್ದಿ ಬರೆಯಲು ಬಹುದು ಮಗುದೊಮ್ಮೆ ನೇಹಿಗನೆ
ಒಮ್ಮೆ ಅಮೃತದಿ ಗಲಗು ಒಮ್ಮೆ ವಿಷದಿ

ಆನಂದ ಮಕರಂದ ಸೌಂದರ್ಯ ಮಧುಬಿಂದು
ಬೆರೆಸಿ ಒಲವಿನ ಗಲಗು ಬರೆಯಬಹುದೊಮ್ಮೆ
ರೋಗ ಜರೆ ನರಳಿಕೆಯ ನೀರಸದ ನಂಜಿನಲೆ
ಸೋಲ ಶೂಲವನದ್ದಿ ಬರೆಯಬಹುದೊಮ್ಮೆ

ಬಾಳ ಹೊತ್ತಗೆಯಲ್ಲಿ ಬರಿಯ ಗೆಲವಿನ ಗಲಗೆ
ಬರೆಯ ಬೇಕೆಂದಾರು ಕಟ್ಟುಹಾಕಿಲ್ಲ
ಆಸೆಯಾಗಸಬುಟ್ಟಿ ಒಡೆದಿಳೆಗೆ ಇಳಿವುದನು
ಬಣ್ಣಿಸಲು ಅದರಲ್ಲಿ ತಾಣವೇಕಿಲ್ಲ?
ಮುಡಿವವರ ಮುಖ ನೋಡಿ ಅರಳುವವೆ ಪುಷ್ಪಗಳು?
ಓದುವರ ಆಸೆಯಲಿ ನೀ ಬರೆಯಬೇಡ!
ನಿನ್ನ ರುಚಿಯೆತ್ತರಕೆ ಓದುಗರೆ ಬರಬೇಕು–
ಅವರನೊಲಿಸಲು ನಿನ್ನ ಗುರಿ ತೊರೆಯಬೇಡ!

ಸ್ನೇಹವೋ ಕರುಣೆಯೋ ದಾರುಣವೊ ದೈನ್ಯವೋ
ಶ್ರೀಕರವೊ ಭೀಕರವೊ ಚೀತ್ಕಾರವೊ
ನಿನ್ನ ಪಾಲಿಗೆ ಬಂದುದನೆ ನೀನು ಬರೆ ಸಖನೆ
ಧಿಕ್ಕಾರವೇ ಸಿಗಲಿ ಸತ್ಕಾರವೊ!

* * *

ಕಲ್ಪನಾ ವಿಲಾಸ

ತಾರೆಗಳ ನೆರಳನುಲಿ ಹಿಡಿದು ಮೇಲೇರಿದರು
ರೆಕ್ಕೆಯಿಲ್ಲದೆ ಅಂತರಿಕ್ಷಕ್ಕೆ ಹಾರಿದರು
ಬೆಟ್ಟಗಳ ಹೊಟ್ಟೆಯೊಳಗುಟ್ಟುಗಳ ಸಾರಿದರು

ಕಲ್ಪನೆಯ ಬೆನ್ನೇರಿ ಕಲ್ಪಕಲ್ಪಾಂತಗಳ
ಒಳ್ಪನಂಗೈಯೊಳಗೆ ತೋರಿಸಿದರು
ಭಾವನೆಯ ಬಾವುಟವ ಹಾರಿಸಿದರು
ಕಲೆಯ ಹೊಂಗಳಸವನು ಏರಿಸಿದರು

ಶೋಕವನೆ ನಗಿಸಿದರು ಮೂಕತೆಯ ನುಡಿಸಿದರು
ನಾಕವನು ನರಕದಲೆ ಮೂಡಿಸಿದರು
ಶುಷ್ಕ ನಿಜತೆಗೆ ಚೆಲುವ ಕೂಡಿಸಿದರು
ಕಲ್ಪನೆಯ ಕುಂಚದಿಂ ಕಲ್ಪಕಲ್ಪಾಂತಗಳ
ಚಿತ್ರಕ್ಕೆ ಬಣ್ಣಗಳ ಜೋಡಿಸಿದರು
ಮೌನದಿಂದಲೆ ಗಾನ ಹಾಡಿಸಿದರು

ನಿಷ್ಕ್ರಿಯತೆಯಿಂ ಕ್ರಿಯೆಯ ಮಾಡಿಸಿದರು
ಮಳೆವನಿಯ ಬಳಿವಿಡಿದು ಇಳೆಯ ತಳಕ್ಕೈದಿದರು
ಕೂಸು ಕಂಡಿಹ ಕನಸು– ಹೂಗಳನೆ ಅಯ್ದಿಹರು
ಯೌವನದ ರೋಮಾಂಚಗಳ ಬೆಳೆಯ ಕೊಯ್ದಿಹರು
ಗಂಧ ಗಾಳಿಯು ಬೇಕು ಬಣ್ಣ ಬಯಲೊಂದರೊಳೆ
ಬೆರೆವಂತೆ ಬಾಳ ಹದ ಕುಸುರಿಸಿದರು
ಹೆಸರರಿಯದಿಹ ಭಾವ ಹೆಸರಿಸಿದರು
ರುಕ್ಷದಲೆ ರಸವನ್ನು ಒಸರಿಸಿದರು

ಏನೇನನೆಸಗಿದರು ನಮ್ಮ ರಸಋಷಿವರರು
ಕಲ್ಪನೆಯ ಮೃದುಗತಿಗೆ ಕುಣಿದ ನರ್ತಕರು
ಎಂದೆಂದಿಗೂ ಇವರೆ ಯುಗಪ್ರವರ್ತಕರು

ಕಮಲದಲೆ ಹುಟ್ಟಿರಲಿ ಹುತ್ತದಲೆ ಹುಟ್ಟಿರಲಿ
ಇವರೆ ಹೊಸ ರೂಪಗಳ ಸೃಷ್ಟಾರರು
ಇವರೆ ಹೊಸ ದರ್ಶನದ ದೃಷ್ಟಾರರು
ಹೊಸ ರಚನೆ ಹೊಸ ರುಚಿಯ ಕರ್ತಾರರು

ಕಲ್ಪನಾಲಾಸ್ಯವಿದು ಸೃಷ್ಟಿಯಧರದ ಹಾಸ
ಇದರ ನಿಶ್ವಾಸವೇ ಜೀವನ ವಿಕಾಸ
ಇದನುಳಿದ ಜೀವನವು ಜೀವನದ ಆಭಾಸ
ಕಲ್ಪನೆಯ ವರದಾನ ಜೀವಸೃಷ್ಟಿಯಗಾನ
ಇಲ್ಲದಿರೆ ಎಲ್ಲವೂ ವಿರಸ ವಿರಸ
ಇದ್ದಲ್ಲಿ ಎಲ್ಲವೂ ಸರಸ ಸರಸ
ನಾವೀನ್ಯ ಲಾವಣ್ಯ ಹಿಗ್ಗು ಹರುಷ

ಇದ್ದಂತೆ ಇರುವಿಪ್ಪುದಪ್ಪುದಾಯಿತು ಮಲರಿ
ಕಲ್ಪನೆಯ ಕಚಕುಳಿಗೆ ಅಂಕುರಿಸಿ ಅಲರಿ
ನಿಶ್ಚಲತೆ ಚಂಚಲತೆಯಾಗಿ ಕೊನರಿ
ಕಲ್ಪನೆಯ ಕತದಿಂದ ವಿಕವಾಯಿತನೇಕ
ಎಲೆಮೊಗ್ಗೆಯಾದಂತೆ ಬೀಜ ಬಿತ್ತಿ
ಮಣ್ಣು ಮೈಯಾದಂತೆ ಜನ್ಮವೆತ್ತಿ
ದಧಿಘೃತಗಳಾದಂತೆ ಹಾಲು ಹೆತ್ತು

ಕಲ್ಪನೆಯು ಕೂಡಿದರೆ ಮಾತೆ ಜ್ಯೋತಿರ್ಲಿಂಗ
ಪ್ರತಿಭಾಗ್ನಿಯಿಂ ಸಿಡಿವ ವಿಸ್ಫುಲಿಂಗ
ಪ್ರಣವ ನಾದದ ಮಧುರ ಮಂಗಲ ತರಂಗ
ಜಾಗರದಿ ಸ್ವಪ್ನದಲಿ ಸುಪ್ತಿಯಲಿ ಸರ್ವದಾ
ಈ ಸೃಷ್ಟಿಕಲ್ಪನೆಯ ಕಾರ್ಯರಂಗ
ಈ ಬದುಕು ಕಮಲಿನಿಯು ಕಲ್ಪನೆಯು ಭೃಂಗ
ಗುರಿಗಳಲಿ ಗುರಿ ನಿಜದ ಕಲ್ಪನೆಯ ಸಂಗ

ಹೃದಯ ಮರುಭೂಮಿಯಲಿ ಉದಯವಪ್ಪುದು ವನವು
ಸದಯತೆಯ ಮಧುರತೆಯ ರಸಿಕತೆಯ ವನವು
ಅನುರಾಗ ಅನುಕಂಪ ಒಗೆತನದ ವನವು
ಕಲ್ಪನೆಯು ಹೆಜ್ಜೆಯಿಡೆ ಕಲ್ಪಲತೆ ಹುಟ್ಟುವುದು
ಇದರಿಂದಲೇ ಮನುಜಕುಲವಾಯ್ತು ಜನವು
ಇದರಿಂದಲೇ ತಂದೆ ತಾಯಿತನವು
ಸ್ನೇಹ ಕರುಣೆಯ ಸತ್ಯದುದ್ಯಾನವು

* * *

ಭಾವ ಸುಂದರಿ

ಕೇದಗೆಯ ರಸದಲ್ಲಿ ಕೇಸರದ ಹುಡಿಗಲಸಿ
ಮಾಡಿರುವ ಮುದ್ದಾದ ಕನ್ನೆ
ಅರುಣ ರಾಗವ ಕುಸುಮರಸಗೆಂಪಿನೊಳು ತೆಯ್ದು
ಆಗಿವೆಯೆ ನಿನ್ನ ಕೆನ್ನೆ?
ಮರಿದುಂಬಿಗಳ ಮಾಲೆ ಹಣೆಯ ಹಂದರಕಿಳಿಯ-
ಬಿಟ್ಟಂತೆ ಬಳ್ಳಿಗುರುಳು
ಕರಿಮೋಡಗಳ ಚಾಚಿ ಚಿಕ್ಕೆ-ಹೂಗಳನಿಟ್ಟು
ಹೆಣೆದಂತೆ ಇವಳ ಹೆರಳು
ಹಾಲಿನಾ ಹೊಳೆಯಲ್ಲಿ ಚಂದಿರನ ಪಡಿನೆಳಲು
ಮೂಡಿರುವ ತೆರದಿವಳ ಮೊಗವು
ಹೂವು ಬಾಯ್ದೆರೆದಂತೆ ಹಸು ಹಾಲ ಕರೆದಂತೆ
ಮುತ್ತುಗಳು ಸುರಿದಂತೆ ನಗೆಯು
ಬೆಳ್ದಿಂಗಳನು ಕಾಸಿ ಮಿಂಚು ಹೆಪ್ಪನು ಹಾಕಿ
ಕಪ್ಪಿನೊಪ್ಪವನಿಟ್ಟ ಕಣ್ಣು
ಬೆಳಕ ಭಟ್ಟಿಯಲಿಳಿಸಿ ಚೆಲುವಿನೆರಕವ ಹೊಯ್ದ-
ಮೈಯವಳು ಈ ಬಯಕೆ ಹೆಣ್ಣು
ಶತಕೋಟಿ ಜನಮನವನೊಮ್ಮೆಗೇ ಸೆರೆಗೈವ
ವಿಶ್ವಮೋಹಿನಿಯಿವಳು ರನ್ನೆ

ಯಾರೆದೆಯ ಹೊಕ್ಕರೂ, ಯಾರೊಡನೆ ನಕ್ಕರೂ
ನಾನಿವಳ ಜಾರೆಯೆನ್ನೆ
ಹದಿನಾರು ಸಾಸಿರದ ಸತಿಯರೊಡನೊಮ್ಮೆಗೇ
ಕ್ರೀಡಿಸಿದ ಶ್ರೀಕೃಷ್ಣನಂತೆ
ಕಣ್ಮುಚ್ಚಿ ಕಣ್ತೆರೆಯುವನಿತರಲಿ ಎಲ್ಲರೆದೆ
ತಣಿಸುವುದೆ ಇವಳ ಚಿಂತೆ
ಮುಖ ನೋಡಿ ಮಣೆಹಾಕುವಂಥ ವಂಚಕವೃತ್ತಿ–
ಇವಳಲ್ಲಿಯೂ ಭೇದ ನೀತಿ
ಪ್ರತಿನರನ ಮತಿಯಷ್ಟೆ ಗುಣರೂಪ ಸಿಂಗರದಿ
ತೋರುವುದೆ ಇವಳ ರೀತಿ
ಹೋಗೆನಲು ಹೋಗುವಳು ಬೇಡೆನಲು ಬಿಡುವವಳು
ಬಾರೆನಲು ಬರುವಳಲ್ಲ
ಸರ್ವತಂತ್ರ ಸ್ವತಂತ್ರಳಿವಳಾಗಿಹಳು
ಯಾರ ದಾಕ್ಷಿಣ್ಯವೂ ಇವಳಿಗಿಲ್ಲ
ವಿಶ್ವಗೇಹಿನಿಯಿವಳು ವಿಶ್ವಮೋಹಿನಿಯಿವಳು
ಸ್ಥಾಯಿ ಸಂಚಾರಿ ವಿಶ್ವವಿಹಾರಿ
ಭಾವಾನುಭಾವೆಯು ವಿಭಾವೆಯು ವ್ಯಭಿಚಾರಿ
ರಸಫಲದ ಬಳ್ಳಿಯೀ ನಾರಿ!
ಮಿತಭಾಷಿಯಾದರೂ ಹಿತಭಾಷಿಯೀ ಚೆಲುವೆ
ವೃತ್ತಿಯಲಿ ಬಹಳ ಕೃಪಣೆ
ಆದರೂ ತನ್ನ ತಪಗೈದವಗೆ ತನ್ನನೇ
ಕೊಟ್ಟು ಬಿಡುವವಳು ನಿಪುಣೆ

* * *

ರಸ

ಕಬ್ಬಗಳ ಕಬ್ಬಿನಲಿ ಕಲ್ಪನೆಯೆ ರಸವು
ಹುಬ್ಬುಗಳ ಗೆರೆಯಲ್ಲಿ ಹಾವ ಭಾವವೆ ರಸವು
ಕೆನ್ನೆಗಳ ಕಿತ್ತಿಳೆಗೆ ನಸುಲಜ್ಜೆ ರಸವು

ಪ್ರಣಯ ಜೀವನದಲ್ಲಿ ಹುಸಿಕಲಹ ರಸವು
ಪ್ರೇಮಕ್ಕೆ ತುಸು ಅಗಲಿ ಕೂಡುವುದೆ ರಸವು
ರೂಪಕ್ಕೆ ಏರಿಕೆಯ ಯೌವನವೆ ರಸವು
ತೆಂಬೆಲರ ಚುಂಬನವೆ ಹೂಗಳಿಗೆ ರಸವು
ನನ್ನ ರಸನೆಗೆ ನಿನ್ನ ಹೆಸರೆ ರಸವು!

ಕೋಗಿಲೆಯ ನಾಲಗೆಗೆ ಚಿಗುರೆಲೆಯ ರಸವು
ಹಂಸೆಗಳ ನಾಲಗೆಗೆ ಕಮಲದಳಗಳ ರಸವು
ಅರಗಿಳಿಯ ಬಳಗಕ್ಕೆ ಮಧುರ ಫಲಗಳ ರಸವು
ಮರಿದುಂಬಿಗಳ ಕುಲಕೆ ಕುಸುಮ-ಮಧು ರಸವು
ಅರಸರಿಗೆ ಧನಿಕರಿಗೆ ಮೊಗತುತಿಯೆ ರಸವು
ಬಡವರಿಗೆ ಹಿಡಿಬೋನ ಮಜ್ಜಿಗೆಯೆ ರಸವು
ತತ್ತ್ವವಿದರಿಗೆ ಸಚ್ಚಿದಾನಂದವೇ ರಸವು
ನನ್ನ ರಸನೆಗೆ ನಿನ್ನ ಹೆಸರೆ ರಸವು!

ಜೀವನದ ಜೇಂಗೊಡದಿ ಕಲೆಯ ಪ್ರೇಮವೆ ರಸವು
ಕಲೆಯ ಫಲದಲಿ ಚೆಲುವೆ ಬಲು ಮಧುರ ರಸವು
ಚೆಲುವು-ಪಕಳೆಗಳಲ್ಲಿ ಒಲವಿನಮೃತವೆ ರಸವು
ಒಲವಿನೆದೆಯೊಳು ನಲವಿನಮರ್ದೆ ರಸವು
ಇರುಹು-ಹಣತೆಗೆ ಅರುಹು ಗಂಧ ತೈಲವು ರಸವು
ತಿಳಿವಿನೀ ತೆನೆಯಲ್ಲಿ ಒಲವೆ ತನಿರಸವು
ರಸೋವೈಸಃ, ರಸಾನಾಂ ರಸತಮಃ, ಶಿವನೆ ರಸವು-
ನನ್ನ ರಸನೆಗೆ ನಿನ್ನ ಹೆಸರೆ ರಸವು!

* * *

ಕವಿತೆಗೆ

ಕೆರೆತೊರೆಯ ತೆರೆಯಾಗಿ ಮುತ್ತಿಟ್ಟು ಓಡದಿರು
ತಾರೆಗಳ ಹಿಂದಡಗಿ ನೀ ಕದ್ದು ನೋಡದಿರು
ಮರಮರಕೆ ಸ್ವರವಾಗಿ ಕರೆಕರೆದು ಹಾಡದಿರು
ಎಂದಾದರೊಂದು ದಿನ ಬಂದೆನ್ನ ಕಾಡದಿರು

ಇದು ನಿರಂತರವಾಗಿ ನನ್ನ ಮನದಿ–
ಮೊರೆ ಚಿಂತನವಾಗಿ ಹೃದಯವನದಿ!

ಕೋಗಿಲೆಯ ಕುಕಿಲಿನಲಿ ಕೆಣಕದಿರು ಸ್ಮೃತಿಗಳನು
ಮರೆತುಹೋಗುತಲಿರುವ ಮಧುರ ಆಕೃತಿಗಳನು
ಹೊಸ ಹರೆಯ ಹೊಸ ಸುಸಿಲ ಹುಚ್ಚು ಸಂಗತಿಗಳನು
ಬರಿಸು ನನ್ನೊಳು ನಿಂತು ಹೊಚ್ಚ ಹೊಸ ಕೃತಿಗಳನು
ಇದು ನಿರಂತರವಾಗಿ ನನ್ನ ಮನದಿ–
ಮೊರೆ ಚಿರಂತನವಾಗಿ ಹೃದಯವನದಿ!

ಮುಂಗಾರ ಸಿಡಿಲಿನಲಿ ಮುಳಿದೊಮ್ಮೆ ಗದರದಿರು
ಹಿಂಗಾರ ಮೋಡದಲಿ ಬಿಡುಮುಡಿಯ ಕೆದರದಿರು
ಚಿಗರಿಗಂಗಳೊಳವಿತು ಚಣಕೊಮ್ಮೆ ಬೆದರಿದರು
ಬಿಸಿಲುಗುದುರೆಯನೇರಿ ಬಳಿಸಾರಿ ಚೆದುರದಿರು
ಇದು ನಿರಂತರವಾಗಿ ನನ್ನ ಮನದಿ–
ಮೊರೆ ಚಿರಂತನವಾಗಿ ಹೃದಯವನದಿ!

ಹೊನ್ನಿಯಾ ಹುಳುವಿನಲಿ ಕುಡಿನೋಟ ತೂರದಿರು
ಸುಗ್ಗಿಯೈಸಿರಿಯಲ್ಲಿ ಮೈಸಿರಿಯ ತೋರದಿರು
ಮಾಗಿಯಲಿ ಮೈಮನದ ಬಡತನವ ಬೀರದಿರು
ಸುಳಿಗಾಳಿಯಲಿ ಬಂದು ಮೈದಡವಿ ಜಾರದಿರು
ಇರು ನಿರಂತರವಾಗಿ ನನ್ನ ಮನದಿ–
ಮೊರೆ ಚಿರಂತನವಾಗಿ ಹೃದಯವನದಿ!

ಹಸುಗೂಸುಗಳ ಮೊಗದಿ ಪಿಸುಮಾತನಾಡದಿರು
ನೋವುಗಳ ನಾವೆಯಲಿ ನರ್ತನವ ಮಾಡದಿರು
ಈ ಕಣ್ಣುಮುಚ್ಚಾಲೆ ನನ್ನೊಡನೆ ಆಡದಿರು
ಇದುವರೆಗೆ ಹಾಡಿದ್ದೆ ಮತ್ತಿನ್ನು ಹಾಡದಿರು
ಇದು ನಿರಂತರವಾಗಿ ನನ್ನ ಮನದಿ–
ಮೊರೆ ಚಿರಂತನವಾಗಿ ಹೃದಯವನದಿ!

ಬಾ, ಬಾಳದೇಗುಲಕೆ ಭಾವ ನರ್ತಕಿಯಾಗಿ
ಹೊಸ ಭಾವ-ದೀಪಗಳ ದಿವ್ಯ ಕಾರ್ತಿಕವಾಗಿ
ಮೃಣ್ಮಯಕೆ ಋತ-ಸತ್ಯ-ಪ್ರೇಮ ಮಾತೃಕೆಯಾಗಿ
ನೀರಸಕೆ ರಸ-ರೂಪ-ರುಚಿಯ ನಾಯಿಕೆಯಾಗಿ
ಬಾ ಚಿದಾನಂದ ಕನ್ಯೆ ಮನಕೆ-
ತಾ ವಸಂತವನು ಹೃದಯವನಕೆ!

ಹೊಸಬಾಳ ನರ್ತನದ ನೂಪುರಧ್ವನಿಯಾಗಿ
ನವಜೀವದಿಂದುಗುವ ತುಂತುರಿನ ಹನಿಯಾಗಿ
ಹೊಸ ಜಗದ ಹೊಸ ಯುಗದ ಚಿಂತನೆಯ ಗಣಿಯಾಗಿ
ಬಾ, ಬಾಳ ಪೂರ್ಣತೆಯ ಹೋರಾಟಕಣಿಯಾಗಿ
ಬಾ ಚಿದಾನಂದ ಕನ್ಯೆ ಮನಕೆ-
ತಾ ವಸಂತವನು ಹೃದಯವನಕೆ!

* * *

ಬಾರೆ ಮಧುರ ಗಾನದೇವಿ!

ಬಾರೆ ಮಧುರ ಗಾನದೇವಿ-
ಬಾರೆ ತಾಯಿ ವಿಶ್ವಜೀವಿ!
ಮನುಜ-ನಾಭಿ- ಚಕ್ರತೀರ್ಥ-
ದಲ್ಲಿ ತಿರುಗಿ ತಿಗರಿಯಂತೆ
ಎದೆಯ ಹೂವ ತೊಟ್ಟಿಲಲ್ಲಿ
ತೂಗಿ ತೂಗಿ ಜೀಕವಾಡಿ
ಕೊರಳ ಕೊಳಲನೂದಿ ಬಾರೆ
ನಿನ್ನ ಗಾಡಿ ಮೋಡಿ ತೋರೆ!
ಹಕ್ಕಿ ಪಕ್ಕಿ ಹಳ್ಳ ಕೊಳ್ಳ
ಜಲದಿ ಘೋಷ ಜಲತರಂಗ
ವೀಣೆ ಕೊಳಲು ಮೃದುಮೃದಂಗ
ಶುಕದ ಪಿಕದ ಮತ್ತ ಭೃಂಗ-
ನಾದದಲ್ಲಿ ಬಂದು ನಿಲ್ಲೆ

ನಿನ್ನ ವ್ಯಾಪ್ತಿಗುಂಟೆ ಎಲ್ಲೆ?
ಮೊಗ್ಗೆ ತುಂಬಿ ಒಡೆಯುವಾಗ
ಕುಸುಮ ಬಿಂದು ಸಿಡಿಯುವಾಗ
ತೊಟ್ಟಿಲೊಲಿದು ತೂಗುವಾಗ
ತಾಯಿ ಲಾಲಿ ಹಾಡುವಾಗ
ಬೀಸುಕಲ್ಲು ತಿರುಗುವಾಗ
ಕರ್ಮಯೋಗಿ ಹರಗುವಾಗ
ಹಬ್ಬ ಮದುವೆ ಜರುಗುವಾಗ
ಕೊರಗುವಾಗ ಮರುಗುವಾಗ
ಜನ್ಮವೆತ್ತಿ ಬಾರೆ ತಾಯೆ–
ಬಾರೆ ತಾಯೆ ಸೃಷ್ಟಿಮಾಯೆ!
ಸುರರ ಸಿರಿಯ ನಾಡರಾಣಿ
ದೇವಋಷಿಯ ಪ್ರೇಮವಾಣಿ
ರಾವಣಂಗೆ ಒಲಿದ ಜಾಣಿ
ಬ್ರಹ್ಮನರಸಿ ವರದ–ಪಾಣಿ
ತಾನಸೇನ ಮೂರ ಬಾಯಿ
ಶರಣದಾಸರಮಲತಾಯಿ
ಬಾರೆ ಮಧುರ ಗಾನದೇವಿ–
ಬಾರೆ ಮಾತೆ ವಿಶ್ವಜೀವಿ!

* * *

ಬಳ್ಳಿಯ ಬಿನ್ನಪ

ಅಲ್ಲೊಂದು ಇಲ್ಲೊಂದು ಉಳಿದ ಅಲರನು ನೋಡಿ
'ಇಷ್ಟೆಯೋ ಇವಳ ಸಿರಿ?' ಎನ್ನದಿರು ಅಣ್ಣ!

ನೀನರಿಯೆ ನನ್ನಲ್ಲಿ ಅರಳಿದಲರಿನ ಲೆಕ್ಕ
ಇಂದು ಸೇರಿಹವೆಲ್ಲ ಕಾಲಡಿಯ ಮಣ್ಣ!

ಬಿರಿವ ಮುನ್ನವೆ ಉದುರಿ ಹೋದ ಮೊಗ್ಗುಗಳೆನಿತೊ
ಬಿರಿದು ಮಾಲಿಯ ಕೈಗೆ ತುತ್ತಾದುವೆನಿತೊ!

ಕೀಟಗಳ ಕೊರೆತಕ್ಕೆ ಸಿಕ್ಕಿ ಮಂಜಿನ ನಂಜು
ನೆಕ್ಕಿ ಸುಕ್ಕಿದ, ಅಳಿದ ಸುಮಗಳೆನಿತೊ!

ಹೋದ ಹೂಗಳ ಮಾತು ಹಾಗಿರಲಿ ನನ್ನಲ್ಲಿ
ಈಗ ಮೊಗದೋರಲಿಹ ಮೊಗ್ಗುಗಳ ಗತಿಯು

ಏನಾಗುವುದೊ ಅಣ್ಣ ತೋಟಗಾರನ ಕಣ್ಣ
ಕೀಟ ಮಂಜಿನ ಹೊಂಚ ತಪ್ಪಿಸುವ ಮತಿಯು

ನನಗಿಲ್ಲ! ನಾನೊಬ್ಬ ಕಪಟವರಿಯದ ಸರಳೆ
ನೂರು ಬಲೆಗಳ ನಡುವೆ ನಿಂತ ಎರಳೆ!

ನನ್ನ ಪಾಡಿಗೆ ನಾನು ಹೂ ಹಡೆದರೇಕಿವರು
ಮುಗಿ ಬೀಳುವರೊ ಮೇಲೆ! ಇಲ್ಲವೆ ಕರುಳೆ?

ಇನ್ನೇನ ಬೇಡೆನಾ, ಒಂದು ದಿನವಾದರೂ
ನಾ ಬಿಟ್ಟ ಹೂವೆಲ್ಲ ನನ್ನ ಮೈಮೇಲೆ

ಉಳಿದಿದ್ದು ಚೆಲುವಾಗಿ ಒಪ್ಪಿರಲಿ, ಮದುವಳಿಗೆ
ಯಂತೆ ಮೆರೆಯುವೆ ಮುಪ್ಪು ಬರುವ ಮೊದಲೆ!

* * *

ನೀಲ ಕಮಲ

ಒಮ್ಮೆ,
ನೀಲ ಕಮಲದಿ ಬಿಳಿಯ ಹೊಳೆಯುವ
ದುಂಬಿ-ದಂಡನು ಕಂಡೆನು!
ಹಿಂದೆ ಅರಿಯದ ಮುಂದೆ ದುರೆಯದ
ನಲವಿನಮೃತವನುಂಡೆನು!

ಇನ್ನೊಮ್ಮೆ,
ಮೋಡಗಳ ಮೊರದಲ್ಲಿ ತಾರೆಗಳ ತಂಡುಲವ
ಒನೆವ ವನಿತೆಯ ಹಾಗೆ ತೊನೆಯೆ ಗಾಳಿ
ಅತ್ತಿತ್ತ ಸಿಡಿದಿರುವ ಅಕ್ಕಿಗಳ ತೆರದಲ್ಲಿ
ತಳತಳಿಸಿ ಬೆಳಗಿದುವು ತಾರಕಾಳಿ!

ಮತ್ತೊಮ್ಮೆ,
ಒಬ್ಬ ಕೃಷ್ಣನ ಮೇಲೆ ಮುಗಿಬಿದ್ದ ಮಲ್ಲರೊಲು
ಕಾರ್ಮೋಡಗಳು ಕಾಣೆ ಕಾರ್ಗಾಲದಲ್ಲಿ
ಅಟ್ಟಹಾಸದಿ ಕಂಸ ಖಡ್ಗ ಝಳಪಿಸಿದಂತೆ
ಚೆಲ್ಲವರಿದಡಗಿತ್ತು ಮಿಂಚು-ಬಳ್ಳಿ!
ಮಗುದೊಮ್ಮೆ,
ಕಾರ ಹುಣ್ಣಿಮೆಯಲ್ಲಿ ಕರಿಯ ಹರಿಯಲು ಹೊರಟ
ಹೋರಿಗಳ ತೆರೆದಲ್ಲಿ ಮುನ್ನುಗ್ಗೆ ಮೋಡ
ಬಾನ ಕಾಣದ ಕೈಯ ಬಾರುಕೋಲಿನ ಹಾಗೆ
ಚುನ್ನವಾಡಿತು ಮಿಂಚು ಹಿಣಿಲ ಕೂಡ!
ಕೊನೆಗೊಮ್ಮೆ,
ನೀಲ ಕಮಲದಿ ಬಿಳಿಯ ಹೊಳೆಯುವ
ದುಂಬಿ-ದಂಡನು ಕಂಡೆನು!
ಹಿಂದೆ ಅರಿಯದ ಮುಂದೆ ಮರೆಯದ
ನಲವಿನಮೃತವನುಂಡೆನು!

* * *

ಯಾರಿವಳು?

"ಮೇಘದ ಮೆಂಚಿಗೆಯನ್ನೇರಿ
ಮಿಂಚಿನ ಕವಣೆಯೊಳಾಲಿಯ ಕಲ್ಲನು
ತೂರುವಳು-ನಲ
ವೇರುವಳು-ಮುದ
ಬೀರುವಳು
ಯಾರಿವಳು?"
ತೆರೆಗಳ ಹೆರಳಿಗೆ ನೊರೆಮಲ್ಲಿಗೆಗಳ
ದಂಡೆಯ ಹೆಣೆಯುತ ಮುಡಿಸುತ ಕೆಡಿಸುತ
ಸುಳಿಯುವಳು-ಮುದ
ತಳೆಯುವಳು-ಅದೊ
ನಲಿಯುವಳು
ಯಾರಿವಳು?

ಮಲೆಮೊಲೆಗಳಿಗೆ ಮಂಜಿನ ಮೇಲುದ
ಕಟ್ಟುತ ಬಿಚ್ಚುತ ತೊಡಿಸುತ ಕೆಡಿಸುತ
ಕಾಡುವಳು-ನಗೆ
ಯಾಡುವಳು-ನೆಗೆ
ದೋಡುವಳು
ಯಾರಿವಳು?

* * *

ಕಲೆಗಾರ

ಭೂಗಗನದ ವಿಸ್ತಾರದ ಹಿರಿರಂಗವ ಮಾಡಿ
ನಾಗಗಳನು ಭೂಷಣಗಳ ಅಂಗಾಂಗಕೆ ಮಾಡಿ
ಆ ಗುರುವದ ಇನಶಶಿಗಳ ತಾಳಗಳನು ಮಾಡಿ
ಸಾಗರಗಳ ರಾಗಗಳನೆ ಸಂಗೀತವ ಮಾಡಿ
ಯೋಗದ ಡಮರುಗವನು ನುಡಿನುಡಿಸುತಲಾಡಿ
ಓಂಕಾರದ ಝೇಂಕಾರಕೆ ಕುಣಿವನು ಕಲೆಗಾರ!

ನೆಲ ಬೆಳೆ ವನ ಜನ ನಗ ಖಗ ಮೃಗಕುಲ
ಜಲಜಕೆ ಜಲಧಿಗೆ ಜಲದಕೆ ಹೊಳೆಕೊಳ
ಮಲರಿಗೆ ಅಳಿಕುಲ ತಳಿರಿಗೆ ನವಿಲಿಗೆ
ಬೆಳಗಿಗೆ ಸಂಜೆಗೆ ದಿವರಾತ್ರಿಗಳಿಗೆ
ಮಳೆವಿಲ್ ಬುವಿಬಾನ್ ಸಚರಾಚರಕೇ-
ಬಗೆಬಗೆ ಬಣ್ಣದ ಸೊಬಗನು ಕೊಡುತಿಹ ಕಲೆಗಾರ!

ಕಾಲಕಂಬದ ಮೇಲೆ ಉಡಿಯ ಬೋದುಗೆಯಿರಿಸಿ
ಮೇಲೆ ಮುಂಡದ ಭವ್ಯ ಗೋಪುರವ ನಿಲಿಸಿ
ಇಕ್ಕೆಲದಿ ಬಾಹುಗಳ ಬೊಂಬೆಗಳ ಸಿಂಗರಿಸಿ
ಮೇಲೆ ರುಂಡದ ರತ್ನಕಲಶವನು ಮೆರೆಸಿ
ಲೀಲೆಯಲಿ ಪ್ರಾಣದೇವನ ದಿವ್ಯ ದೇಗುಲವ
ದಿನದಿನವು ಕಟ್ಟುವನು ಕುಶಲ ಕಲೆಗಾರ!

ನೆಲವ ಕಾಗದ ಮಾಡಿ, ಜಲವ ಮಸಿಯನು ಮಾಡಿ
ಸುಳಿದು ಬೀಸುವ ಗಾಳಿಯನೆ ಭಾವ ಮಾಡಿ

ನೆಲವನಪ್ಪಿಹ ಮುಗಿಲ ನಾದಲೀಲೆಯ ಮಾಡಿ
ಹೊಳೆವ ಬೆಂಕಿಯಲಲಂಕಾರಗಳ ಮಾಡಿ
ಕೊಲುವ ಬಿದಿಯತಿ ಕಾಲತಾಲಗಳ ಜೋಡಿ
ಸಲೆ ಸೃಷ್ಟಿ ಕಾವ್ಯವನು ಬರೆಯುತಿಹ ಕಲೆಗಾರ!

* * *

ಸವಿನೋವು

ಗರ್ಭಸ್ಥ ಶಿಶುವಿನೊಲು ಮಿಸುಕುತಿಹುದೆನ್ನಮನ
ಬಂಧನದ ಬಲೆದಾಟಿ ಬಿಡುಗಡೆಯ ಪಡೆಯೆ!

ಭೂಗರ್ಭದೊಳಗಿರುವ ಬೀಜಗಳ ತೆರದಲ್ಲಿ
ಚಡಪಡಿಸುತಿದೆ ನಾಟಿ ಮೇಲೆ ಸಿಡಿಯೆ!

ಮೊಗ್ಗೆಯೊಳಗಣ ಕಂಪಿನಂತೆ ಕಳವಳಿಸುವುದು
ಸಾಂತದಿಂದಲಿ ಜಾರಿ ಅನಂತತೆಯ ಪಡೆಯೆ!

ಗೂಡಿನೊಳಗಿನ ಹಕ್ಕಿ ಮರಿಯಂತೆ ಮರುಗುವುದು
ಸ್ವಾವಲಂಬನದ ಸ್ವತಂತ್ರತೆಯ ಪಡೆಯೆ!

ಕವಿಮನದ ಕವನದೊಲು ಕುದಿದು ಕಳಕಳಿಸುವುದು
ತನುವಿನೀ ಮನೆದಾಟಿ ಜನಮನವ ಸೇರೆ!

ನಾಸಿಕದಿ ಸೇರಿರುವ ಉಸಿರಿನೊಲು ಸುಯ್ಯುವುದು
ಕ್ಷಣದೊಳಲ್ಲಿಂ ಜಾರಿ ಬುವಿ ಬಯಲ ಸಾರೆ!

ಎಲೆಗೆ ಸವಿನೋವೆ, ಓ ಮಧುರ ಮರುಗೆ, ಮಿಡುಕೆ, ಕಳವಳವೆ
ಸ್ಥಿರವಾಗಿ ಮನೆಮಾಡು ಮನ್ಮನದ ಮನೆಯಲ್ಲಿ!

ನೀನಿರದ ಬದುಕೆ ಬಂಧ, ನೀನೆ ಬಾಳಿನ ಅಂದ,
ನಿನ್ನ ಸವಿಯನು ಕಾಂಬೆ ನೀ ಬಿಟ್ಟ ತೆನೆಯಲ್ಲಿ!

ನೀ ಸತತ ಪೀಡಿಸಲು ನನಗದುವೆ ಬಾಳ ಬಲ
ನಿನ್ನ ಕೊಂಡಿಯೆ ನನ್ನ ಲೇಖನಿಯ ಮೊನೆಯು!

ನಿನ್ನಿಂದಲೇ ನನಗೆ ನಿರ್ಮಾಣ ಶಕ್ತಿ ನವ
ಇರದಿರಲಿ ನಿನ್ನ ಬಲಕೆಂದಿಗೂ ಕೊನೆಯು!

ನನ್ನ ಮನಕಂಟಿಹುದು ಪೂರ್ಣತೆಯ ಪಿಪಾಸೆ
ಎಂದಿಗಾದರು ಒಮ್ಮೆ ಅದನು ಪಡೆವಾಸೆ

ಅದನು ಪಡೆಯುವ ತನಕ ನೀನಿಂತೆ ಕೊರೆಯುತಿರು–
ಅದುವರೆಗೆ ಜೊತೆಯಾಗು, ಕೊಡು ನನಗೆ ಭಾಷೆ!

* * *

ಆತ್ಮನಿಗೆ ಆಹ್ವಾನ

ಓ ಉತ್ತಮೋತ್ತಮ!
ಒಳಗಿನ ಪುರುಷೋತ್ತಮ!
ಪ್ರಖರವಾಗಿ ಪ್ರಕಟವಾಗು
ನರನ ಮರೆಯ ನರೋತ್ತಮ–
ಓ ಅಂತರಾತುಮ!

ನೀನು ಪ್ರಕಟವಾಗಲೆಂದೆ
ಮರಳಿ ಮರಳಿ ಹುಟ್ಟಿದೆ;
ಕೀಟದಿಂದ ನರನವರೆಗೆ
ಮೆಟ್ಟಲುಗಳ ಮೆಟ್ಟಿದೆ;
ಬರೆದೆ ಚಿತ್ರ ಕೊರೆದೆ ಮೂರ್ತಿ
ಕವಿತೆಗಳನು ಕಟ್ಟಿದೆ;
ಹಾಡಿ ಕುಣಿದೆ ತಂತಿ ಮೀಟಿ
ತಾಳಗಳನು ತಟ್ಟಿದೆ;
ಕನಸ ಕಂಡೆ ನೆನೆಸಿ ದಣಿದೆ
ಮನದಿ ಮುಗಿಲ ಮುಟ್ಟಿದೆ!
ಇನ್ನಾದರು ಪ್ರಕಟವಾಗೊ
ಓ ಸರ್ವೋತ್ತಮ,
ನರನ ಮರೆಯ ನರೋತ್ತಮ,
ಓ ಅಂತರಾತುಮ!
ನನ್ನ ಮನದಿ ನಿಲ್ಲು, ನಿನ್ನ
ಇಷ್ಟಪೂರ್ತಿಯಪ್ಪುದು!
ಇಲ್ಲವಾಗೆ ನಿನ್ನ ಸೃಷ್ಟಿ
ವ್ಯರ್ಥ ವಿಫಲವಪ್ಪುದು!

ನನ್ನ ಬಿಟ್ಟು ನೀನು ಸಾಗೆ
ಸೋಲು ನಿನಗೆ ತಪ್ಪದು!
ಕ್ರೀಡೆಗೆಂದು ಕಟ್ಟಿ ಕೆಡಿಪೆ–
ನೆಂದೊಡೇನು? ಒಪ್ಪದು!
ಬಾರ ನೀನು ನನ್ನ ಬಗೆಗೆ–
ನಿನಗೆ ಬೆಲೆಯು ಬಪ್ಪದು!
ಏಕೆ ತಡೆದೆ? ಸಾಕು ಬಾರೊ–
ಓ ಪ್ರಾಣ ಪ್ರಿಯತಮ
ನರನ ಮರೆಯ ನರೋತ್ತಮ
ಓ ಅಂತರಾತುಮ!
ಏಸು ಸಲ ಬರಿದೆ ಸತ್ತು
ಹುಟ್ಟಿ ಮತ್ತೆ ಸಾಯಲಿ?
ಹಿಂದೆ ನೊಂದ ನೋವಿನಲ್ಲೆ
ಇಂದು ಮತ್ತೆ ನೋಯಲಿ?
ಎಷ್ಟು ಜನ್ಮ ಹೀಗೆ ನಿನ್ನ
ಬರವಿಗಾಗಿ ಕಾಯಲಿ?
ಬರದ ನಿನ್ನ ಬರುವ ಹಾಗೆ–
ಕರೆವೆ ಯಾವ ಬಾಯಲಿ?
ಬೆಳಕೆ ಬಾರ, ತುಳುಕು ಬಾರ
ನನ್ನ ಮನದಿ ಮೈಯಲಿ!
ಪ್ರಖರವಾಗಿ ಪ್ರಕಟವಾಗೊ
ಓ ಉತ್ತಮೋತ್ತಮ!
ನರನ ಮರೆಯ ನರೋತ್ತಮ
ಓ ಅಂತರಾತುಮ!

* * *

ಬೆಳಗು

ಚಣಚಣವು ಹೊಸತನವ ತಳೆವ ಚೆಲುವನೆ ತೊಟ್ಟು
ಮತ್ತೊಮ್ಮೆ ಕರೆಯುತಿದೆ ಪ್ರಕೃತಿಯಿಂದು

ಈ ರೂಪವನು ನೋಡಿ ಈ ರಾಗವನು ಕೇಳಿ
ಶತಮಾನಗಳ ಕೊಳೆಯ ತೊಳೆಯಿರೆಂದು!

ಆಹ್ವಾನ-ರವ ಲಕ್ಷ ಪಕ್ಷಿಗಳ ಕೂಜನದಿ
ಬರುತಲಿದೆ ಹಾಡುಗಳ ಹೊನಲಾಗಿ ಹರಿದು

ವಿಶ್ವಾತ್ಮನಾನಂದ ಚೆಲುವಾಗಿ ಚಿಮ್ಮುತಿದೆ
ವಿಶ್ವ-ಜೀವಿಗಳನ್ನು ಕಣ್- ಚಿವುಟಿ ಕರೆದು!

ಉಷೆಯ ಗಾನವನೊಮ್ಮೆನಿಶೆಯ ಮೌನವನೊಮ್ಮೆ
ಹಗಲು ಜಾನವನೊಮ್ಮೆ ಮುಂದೆ ಮಾಡಿ

ಆನಂದ ಪಾನಕ್ಕೆ, ಅಮೃತಮಯ ಜೀವನಕೆ
ಕರೆಯುತಿರುವಳು ಪ್ರಕೃತಿ ಹಾಡಿ ಹಾಡಿ!

ರಕ್ತ- ಪಾನೋನ್ಮತ್ತ ವ್ಯಾಘ್ರವೊಂದರ ಮುಂದೆ
ಮೃಷ್ಟಾನ್ನದೆಡೆಯನ್ನು ಚಾಚಿದಂತೆ

ಮರಣಕ್ಕೆ ಮನಸೋತ ಮಾನವನ ಮೆಚ್ಚಿಸದೆ
ಕೆಂಪಾಯ್ತು ಉಷೆಯ ಮುಖ ನಾಚಿದಂತೆ!

ಬೈಗು ಬೆಳಗಾಗುವುದು ಬೆಳಗು ಬೈಗಾಗುವುದು
ವರುಷಗಳು ಉರುಳುವುವು ಬರಿದೆ ಬಳಲಿ!

ಪ್ರಕೃತಿಗೋ ಹವ್ಯಾಸ, ಅದಕೆಮ್ಮ ಪರಿಹಾಸ,
ಇದು ವಿಧಿಯ ಕಟುಲಾಸ್ಯವೆಂದೆ ಅಳಲಿ!

ನೈರಾಶ್ಯವಿನಿಸಿಲ್ಲ, ನಿತ್ಯ ನೂತನ ರೂಪ-
ರಾಣಿ, ಖಗಕುಲವಾಣಿ, ಪ್ರಕೃತಿ ಮಾತೆ;

ಮಾನವನ ಜೀವನವ ಪಾವನವ ಗೈವವರೆ-
ಗನುದಿನವು ಹಾಡುವಳಿದೊಂದೆ ಗೀತೆ:

"ಇಂದಿನುಷೆ ತಂದಿಹಳು ಸೌಂದರ್ಯ ಸಂದೇಶ
ಜಗದ ಜೀವಿಗಳದರ ವಿವಿಧ ವೇಷ

ವಿಶ್ವಗರ್ಭವದೆಲ್ಲ ಒಂದೆ ಜೀವದ ಕೋಶ
ವಿಶ್ವಮಾನವ ಮೈತ್ರಿ ಪ್ರಕೃತಿಯಾದೇಶ!"

* * *

ಹೂ

ಜನನ ಮರಣಗಳೆರಡು ಜೀವನಾದ್ರಿಯ ಜಗ್ಗೆ
ಪ್ರತಿನಿತ್ಯ ನಡೆದಿಹುದು ಸೃಷ್ಟಿ -ಮಥನ

ಅದರೊಳುದಿಸುವ ಅಮೃತ ಹೂವಾಗಿ ಹರಡುವುದು,
ಅದರ ಗುರಿ ಈ ಜಗದ ಸೌಂದರ್ಯ-ಕಥನ

ಆರೆಸಳ, ನೂರೆಸಳ, ನೂರಾರು ಬಣ್ಣಗಳ
ಹೂಗಳಿವು ಈಶ್ವರನ ಮೂಲಾಕ್ಷರ!

ಈ ಸೊಬಗಿನಕ್ಕರದಿ ಬರೆವನವ ಅನುದಿನವು,
ಸೌಂದರ್ಯ-ಸಂಹಿತೆಯನಾದಿ ಕಲೆಗಾರ!

ಆ ಕಮಲ ಓಂಕಾರ, ಮಲ್ಲಿಗೆಯು ಶ್ರೀಕಾರ,
ಸಂಪಿಗೆಯೆ ಭಾವಿಸಲು ಉದ್ಗಾರವು!

ಜಾಜಿ ಪ್ರಶ್ನಾರ್ಥಕವು, ವಿಷ್ಣು ಕ್ರಾಂತಿ ವಿಸರ್ಗ,
ಪಾರಿಜಾತವೆ ಪೂಜಿ, ಅನುಸ್ವಾರವು!

ದೊಡ್ಡ ಹೂ ವ್ಯಂಜನವು, ಸಣ್ಣ ಹೂವೇ ಸ್ವರವು,
ಇಲ್ಲಿಯೂ ಕಾಣಿಸವೆ ಬಳ್ಳಿ ಮೊಗ್ಗೆ?

ಎಸಳ ಮೇಲೆಸಳಿರಲು ಅದುವೆ ಒತ್ತಕ್ಷರವು.
ಉಳಿದಿಹುದೆ ಸಂಶಯವು ಇದರ ಬಗ್ಗೆ?

ಏನ ಬರೆವನೊ ನಿತ್ಯ ಈ ವರ್ಣಮಾಲೆಯಲಿ
ಓದುವರು ಎಷ್ಟಿಹರು ಈ ಸೃಷ್ಟಿಯಲ್ಲಿ?

ಈ ಪ್ರಶ್ನೆ ಪೆಚ್ಚಾಗಿ ತೋರಿದರೆ ಇರಬಹುದು
ಏನಾದರೂ ದೋಷ ಕವಿ ದೃಷ್ಟಿಯಲ್ಲಿ!

* * *

ಸರಸಿಯ ಮೇಲೆ ಸೂರ್ಯೋದಯ*

ಏನು ಎತ್ತರ ಏನು ಬಿತ್ತರ ಏನು ಚಿತ್ತರವೀಪುರ
ಅತ್ತ ನಗರಿಯು ಇತ್ತ ನಗರಿಯು ನಡುವೆ ರಮ್ಯ ಸರೋವರ

ಉಭಯ ನಗರಿಯ ವಿಮಲ ಸರಸಿಯನೊಂದುಗೂಡಿಪ ಸೇತುವೆ
ಸುತ್ತು ಮರಗಳು ಚಿಗಿತು ನಿಂತಿವೆ ವಿವಿಧ ಲತೆಗಳು ಹೂತಿವೆ

ಕುಜನ-ಮಧ್ಯದೊಳಿದ್ದರೂ ಸಜ್ಜನರು ಮೇಲಿರುವಂದದಿ-
ಕಂಟಿಗಳ ಕೆಳಗುಳಿಸಿ ಬೆಳೆದಿವೆ ನಲ್-ಮರಂಗಳು ಅಂದದಿ

ಎಳೆಯರಿನ್ನೂ ಮಲಗಿರಲು ಮನೆಯೊಡೆಯನೇಳುವ ತೆರದಲಿ,
ಬಳ್ಳಿ-ಕೂಸುಗಳನ್ನು ಮಲಗಿಸಿ ತರುಗಳೆದ್ದಿವೆ ಭರದಲಿ!

ಕಂದನಂದದ ಕೈಗಳಿಂದಾಟಿಕೆಯು ಕಳಚುವ ತೆರದಲಿ,
ತಂಬೆಲರ ಚುಂಬನಕೆ ತುಂಬನು ಕಳಚುವರಳಿದೊ ಮರದಲಿ!

ಮೊಲೆಯ ಹಾಲಿನ ಹನಿಯು ಕೂಸಿನ ತುಟಿಗಳಿಂ ಜರಿವಂದದಿ,
ಪುಷ್ಪವೃಂದದ ಅಮೃತ ಬಿಂದುಗಳೊಗೆದುವತಿ ಆನಂದದಿ!

ಅತ್ತ ಗಗನದಿ ಅರುಣನೋಕುಳಿ ಇತ್ತ ಬಳ್ಳಿಗೆ ಕಚಕುಳಿ,
ಬಣ್ಣ ಗಾಳಿಯ ಗಂಧ ಬೆಳಕಿನ ರಾಸಲೀಲೆಯು ಬಯಲಲಿ!

ಬರುವನೋ, ಬಂದಿಹನೊ, ಬಾರನೊ ಬಾಲರವಿ ಮೂಡಣದಲಿ?
ಕಾದು ನಿಂತಿವೆ ಬಾನು ಬುವಿಗಳು ತಳೆಯಲವನನು ಶಿರದಲಿ!

ಹಕ್ಕಿ ಕೋರುತಲಿಹುವು ಸ್ವಾಗತ ಬೆರೆಸಿ ಸ್ವರವನು ಸ್ವರದಲಿ,
ಸರಸಿ ಪುಷ್ಪಾಂಜಲಿಯನೆತ್ತಿದೆ ನಲಿದ ತೆರೆಗಳ ಕರದಲಿ!

ತಳಿರು ತೋರಣ ತೊಡವು ಸಿಂಗರ ತೂಗಿ ಬಾಗುವ ಮರದಲಿ
ಮುದವ ತರುವನು ಉದಯರವಿ ಎಂಬಾಶೆ ಸರ್ವರ ಉರದಲಿ

ಬಾರ ಬಾಲ ದಿನೇಶ, ಬೀರು ಪ್ರಕಾಶವೆಲ್ಲೆಡೆ ಭರದಲಿ
ಬಾರ ಶಕ್ತಿ-ವಿಲಾಸ, ಜೀವ-ವಿಕಾಸ ಭಾಗ್ಯದ ವುರದಲಿ!

ಬಂದನದೊ ಆನಂದ-ಮಂದಿರ, ತಳೆದು ತೊಳಗುವ ಸಿಂಧುರ,
ಏನು ಹಿಗ್ಗಿತೊ ಹರುಷದಲಿ ಹುಸೇನಸಾಗರ ಸರೋವರ!

ತೆರೆಗೆ ತೆರೆ ಮುತ್ತಿಟ್ಟು ಕುಣಿದುವು, ಕೆರೆಗೆ ಕೆರೆಯೇ ಕುಣಿಯಿತು;
ತರುಲತಾವಳಿ ಹೂವ ಸುರಿದುವು, ವನಕೆ ವನವೇ ಮಣಿಯಿತು!

---

* ಹೈದರಾಬಾದು ಸಿಕಂದರಾಬಾದುಗಳ ನಡುವಿರುವ ಹುಸೇನಸಾಗರ ಸರೋವರ.

ಉಗಿಯ ಕಾರುವ ಗಿರಣಿ ಸಹ ನಯಭಯದಿ ನಿಂತಿತು ಮೌನದಿ;
ಗಾಳಿ ತೊನೆಯಿತು, ಗಂಧ ಹರಡಿತು, ಹಕ್ಕಿ ನಮಿಸಿತು ಗಾನದಿ!

ಸರಸಿ ತಳೆದುದೊ ತರುಣ ತರಣಿಯ, ಅರುಣನೇ ಒಳಹೊಕ್ಕನೊ?
ಕಿರಣ-ರಜ್ಜುರಚಿತ ಜೋಕಾಲಿಯಲಿ ತೂಗುತಲಿರುವನೊ?

ಸರಸಿ ಸೂರ್ಯನ ಮುಕುರವೋ, ರವಿಬಿಂಬ ಸರಸಿಗೆ ಮುಕುರವೊ?
ಯಾರು ಯಾರಿಗೆ ಮರುಳುಗೊಂಡರೊ, ಯಾರು ಯಾರಿಗೆ ಸುಕರವೊ!

ಇಲ್ಲದಿರೆ, ಕವಿದೃಷ್ಟಿಯಲ್ಲಿಯೆ ಸೃಷ್ಟಿಗರ್ಥವು ದೊರೆವುದೊ?
ರವಿಗೆ ಸರಸಿಗೆ ಕಾಣದುದನೇ ಕವಿಯ ಕಣ್ ಕಂಡೊರೆವುದೊ?

ಅತ್ತ ಕಮ್ಮಟವಿತ್ತ ಸರಸಿಯು ನಡುವೆ ಸಚಿವಾಲಯಗಳು;
ಒಣಗುತಿವೆ ವೈರುಗಳು, ಏರುತಲಿಹುವು ಸರಕಿನ ಕ್ರಯಗಳು!

ಸಾರುತಿದೆ ಕಮ್ಮಟವು ಸಚಿವಾಲಯಕೆ, "ನೋಟಿನ ಬಲದಲಿ
ನಾಡು ಬದುಕದು, ನಾಡಿನೈಸಿರಿ ಗದ್ದೆ ತೋಟದಿ ಹೊಲದಲಿ!

ನಾನು ನೀಡುವ ನಾಣ್ಯಗಳ ಕೆರೆಗಳಿಗೆ ಕಾಲುವೆಗಿಕ್ಕಿರಿ;
ಬೀಳು ನೆಲದೊಳೆ ಬಂಜೆ ನೆಲದೊಳೆ ಚಿನ್ನರನ್ನವ ಒಕ್ಕಿರಿ!

ಕ್ರಯಗಳಿಳಿವುವು, ಕೊರತೆಯುಳಿವುದು, ಶಾಂತಿಸೌಖ್ಯವು ಬೆಳೆವುದು;
ಹಳ್ಳಿಗರ ಹಗೆ ಕಣಜ ತುಂಬಲು ಜಗದ ಸಂಕಟವಳಿವುದು!

ನೀರು ಕೊಡಿ ನೇಗಿಲದ ಯೋಗಿಗೆ, ಧನವ ಗ್ರಾಮೋದ್ಯೋಗಕೆ
ಆಗ ಭಾರತ ಭೂಮಿಯೇ ಆಹ್ವಾನವೀವುದು ಸ್ವರ್ಗಕೆ!"

ಇಂಥ ಬುದ್ಧಿಯ ಬೆಳಸು ದಿನಕರ ನಮ್ಮ ಸಚಿವಾಲಯದಲಿ
ಸರಸಿ ಕಮ್ಮಟದಂತರಾರ್ಥವ ತಿಳಿಸು ನೀನೇ ಜವದಲಿ!

* * *

ಕವಿ-ಕುಸುಮ

ಕವಿ:

ಚೆಲುವಿನ ನೆಲೆ ನಲವಿನ ಸೆಲೆ ಗಂಧದ ಬಲೆ ಕುಸುಮಗಳೆ
ಬಣ್ಣದ ಬೆಳೆ ಬಂಡಿನ ಹೊಳೆ ಪ್ರಕೃತಿಯ ಕಳೆ ಕುಸುಮಗಳೆ
ಸೃಷ್ಟಿಯ ಕಲೆ ಪಡೆಯಿತು ನಿಮ್ಮೊಳೆ ಪೂರ್ಣತೆಯೆಲೆ ಕುಸುಮಾಳಿ

ಸೊಂಪಿನ ಮಳೆ ಮಧುರತೆಯಲೆ ಬದುಕಿನ ಬೆಲೆ ಕುಸುಮಾಳಿ!
ನಿಮ್ಮಿರವಿನ ಒಂದೇ ಕ್ಷಣ ಶತವರ್ಷದ ನರಜೀವನ
ಸರಿಯಾಗವು ನೀವ್ ಧನ್ಯರು ನಿಮ್ಮಿರವೇ ಪಾವನ!
ನರನಾಗದೆ ನರುಗಂಪಿನ ಅರಳಾಗಿರೆ ನಾನು
ಲೇಸಿದ್ದಿತು ಬೇಸತ್ತಿಹೆ ಈ ಬದುಕಿಗೆ ಫಲವೇನು?

ಕುಸುಮ:

ಒಂದೆದಿನ ಬಾಳಿದರು ಚಂದದಿಂ ಬಾಳಬೇ–
ಕೆಂಬ ನಿನ್ನಯ ಮಾತು ಸರಿಯು ಕವಿಯೆ;
ಅಂದಚೆಂದಗಳಿದ್ದು ಬಂಧನವು ಇದ್ದರೆ
ಅಂಥ ಜೀವನ ಮರಣ ಸರಿಯು ಕವಿಯೆ!
ನಮ್ಮ ಚೆಲುವಿಕೆ ನೋಡಿ ಅನ್ಯ ಜನ ಹಿಗ್ಗಿದರೆ
ನಮ್ಮ ಜೀವನ ಸುಖದ ಸದನ ಹೇಗೆ?
ಒಂದು ಚಣವಾದರೂ ನಿಂದ ತಾಣವ ಬಿಟ್ಟು
ಚಲಿಸಬಹುದೇ ನಾವು ನಿಮ್ಮ ಹಾಗೆ?
ಆಡಬಲ್ಲೆವೆ ಕೂಡಿ ಮಾತಾಡಬಲ್ಲೆವೆ
ಹಾಡಬಲ್ಲೆವೆ ನಿಮ್ಮ ಹಾಗೆ ನಾವು?
ಹಾರಾಡಬಲ್ಲೆವೆ ಹಕ್ಕಿಗಳ ತೆರದಲ್ಲಿ
ಕೂಡಬಲ್ಲೆವೆ ನಮ್ಮ ಪ್ರಿಯರ ನಾವು?
ಮುಗಿದ ಬಾಯ್ ತೆರೆಯುವೆವು ಮಾತನಾಡಲು ಬಯಸಿ
  ಮಾತು ಹೊರಡದೆ ಬರುವುದಶ್ರುಬಿಂದು!
ತುಟಿತನಕ ಬಂದಂಥ ಭಾವಗಳ ಬಣ್ಣಿಸುವ
  ಸ್ವಾತಂತ್ರ್ಯವಿಲ್ಲದಿರೆ ಏನು ಫಲ ಬಂದು?
ಆತ್ಮ ಸಂರಕ್ಷಣೆಗೆ ಸಾಮರ್ಥ್ಯವಿಲ್ಲೆಮಗೆ
  ಗಳಿಸಬಲ್ಲೆವೆ ನಾವು ರಾಜ್ಯಗಳನು?
ನ್ಯಾಯಮಂದಿರಗಳಲಿ ನಿಮ್ಮಂತೆ ನಾವು ಸಹ
  ನಡೆಸಬಲ್ಲೆವೆ ನಮ್ಮ ವ್ಯಾಜ್ಯಗಳನು?
ಕಾಯ್ದಿರಿಸಬಲ್ಲೆವೆ ನಮ್ಮವರ ನೆನಪನ್ನು
  ನಮ್ಮ ಸಭ್ಯತೆ ನಮ್ಮ ಸಂಸ್ಕೃತಿಗಳನ್ನು?
ಬುದ್ಧಿಯೋಗದ ಸಿದ್ಧಿ ಯೋಚನೆಯ ವೃದ್ಧಿಯನು
  ಅರುಹಬಲ್ಲೆವೆ ನಮ್ಮ ಸತ್ಕೃತಿಗಳನ್ನು?

ಉಚ್ಚಾರ ಸ್ವಾತಂತ್ರ್ಯ ಸಂಚಾರ ಸ್ವಾತಂತ್ರ್ಯ
ಪೂಜನ ಸ್ವಾತಂತ್ರ್ಯ ಸಂಘ ಸ್ವಾತಂತ್ರ್ಯ
ನಾಗರಿಕ ಸ್ವಾತಂತ್ರ್ಯ ಉದ್ಯೋಗ ಸ್ವಾತಂತ್ರ್ಯ
ನಮಗಾವ ಸ್ವಾತಂತ್ರ್ಯ? ಬರಿ ಪಾರತಂತ್ರ್ಯ!
ಒಂದೆ ದಿನದಿರುವಿಕೆಗೆ ಏಕಿನಿತು ಚಿಂತೆಗಳು?
ನಕ್ಕು ನಲಿದಾಡುತಲೆ ತೆರಳ್ವುದೆಂಬೆ!
ಎಲ್ಲ ಹೋಗಲಿ ಒಮ್ಮೆ ಪ್ರೇಮದನುಭವ ಕೂಡ
ದೊರೆಯದಿರೆ ಈ ಬದುಕು ಯಾತಕೆಂಬೆ!
ಒಂದೆ ಪಾತರಗಿತ್ತಿ ಮುತ್ತಿಗೆ ಪ್ರತಿಯಾಗಿ
ಸಹಿಸುವೆವು ನಾಲ್ಕಾರು ಜೋನ್ನೊಣದ ಮುಳ್ಳು!
ಮಂದಮಾರುತ ಬಂದು ಹಿಂದಿರುಗುವನು ಕೆಣಕಿ
ತಲೆಬಾಗಿ ಕರೆದರೂ ಅವಗೆಲ್ಲಿ ಕರುಳು!
ಇಬ್ಬನಿಯು ತಬ್ಬಿದರು ಸ್ಪರ್ಶಸುಖವಂಚಿತರು,
ಮಧು ಹೃದಯದೊಳಗಿಹುದು ನಮಗೆ ಸವಿಯಿಲ್ಲ!
ಭೃಂಗಗಳು ಹೊಂಗೇರಿ ಸಂಗೀತ ಸುರಿಯುವುವು,
ಕೋಗಿಲೆಯು ಕರೆಯುವುದು, ಕೇಳೆ ಕಿವಿಯಿಲ್ಲ!
ನೋಡಲಿಕೆ ಬಲು ಚೆಂದ ನಮ್ಮಿರವು ಓ ಕವಿಯೆ
ನಾವೆ ಬಲ್ಲೆವು ನಮ್ಮ ಹೃದಯ ವ್ಯಥೆಯ!
ನೀವೆ ಧನ್ಯರು ಕಡಿದು ಮುಡಿದುಕೊಳ್ವಿರಿ ನಮ್ಮ,
ಬಾಯಿಲ್ಲ ಹೇಳಲಿಕೆ ಕರುಣ ಕಥೆಯ!

* * *

ಪ್ರಾಣ–ಪುಷ್ಪ

ಭಾರತ ನವೋದಯದಿ ಅರಳಿರುವ ಹೂ ನಾನು
ಹಣ್ಣಾಗಿ ಹೊಳೆಯುವೆನು ಹಸಿವು–ಬಿಸಿಲಲ್ಲಿ!
ಬಾಡುವೆನೆ ಬತ್ತುವೆನೆ ಪ್ರಾಣ–ಪುಷ್ಪವು ನಾನು?
ಬರಲಿ ಬರ ಹಸಿವೆಗಳ ಸುಡುವ ಉಸಿರಿಲ್ಲಿ!
ಋಷಿವರರ ಉಸಿರೆನಗೆ ಮಲಯಜವು, ಬಾಪುವಿನ
ಆತ್ಮಸಂಪದ ನೆರಳು, ವಲ್ಲಭನ ಕೆಚ್ಚು
ಕವಚ ಕುಂಡಲವೆನಗೆ! ಭಯವೇಕೆ? ಬಾ ಬಾರ,

ಹೊಟ್ಟೆ ಬಟ್ಟೆಯ ಕೊರತೆ ಬಡತನದ ಕಿಚ್ಚು!
ಉರಿ ಬರಲಿ ಸಿರಿ ಬರಲಿ ಪರಿಮಳವ ಬೀರುವೆನು!
ಕ್ಲೇಶಗಳ ಜ್ವಾಲೆಯಲೆ ಹಣ್ಣಾಗಿ ತೋರುವೆನು!
ಸಾವಿನ ಸಮಕ್ಷಮದಿ ಜೀವಿಸಿಯೇ ತೀರುವೆನು!
'ಜಯವು ಭಾರತ ನಿನಗೆ!' ಎಂದು ಕೋರುವೆನು!
ಸ್ವಸ್ಥಾನದಲಿ ನಿಂತು, ಸ್ವೀಯ ಧರ್ಮಾದಿ ನಡೆದು,
ಸರ್ವರಿಗೆ ಹಿತಕಾರಿಯಾಗಿ ಬಾಳುವೆನು!
ಸಾವು ಬಂದರು ಸಹಿತ ಭರತ ಭೂಮಿಯ ಕೂಡಿ
ಮತ್ತೊಂದು ಸಸಿಗಾಗಿ ಗೊಬ್ಬರಾಗುವೆನು!

* * *

ಮೋಡ

ಹುಬ್ಬು ಹಾರಿಸುತಿಹುದು ಮಿಂಚಿನಲಿ ಮೋಡ–
ಶೃಂಗಾರ ಚೇಷ್ಟೆಯಿದು ಯಾರ ಕೂಡ?

ಬಿಳುಪಾಯ್ತು, ಕಪ್ಪಾಯ್ತು, ಕೆಂಪಾಯ್ತು ಮೋಡ!
ಕ್ಷಣಕೊಂದು ರೂಪಾಯ್ತು –ಯಾರ ಕೈವಾಡ?

ಮುಳುಗುತಿವೆ, ಮೂಡುತಿವೆ, ಓಡುತಿವೆ ಮೋಡ!
ಸೇರಲಿಕೆ ಹೊರಟಿಹವು ಯಾವ ನಾಡ?

ಗುಡುಗುತಿದೆ, ಗದರುತಿದೆ, ಕಂಪಿಸುತ ಮೋಡ–
ಈ ಸಿಂಹ ಕೆರಳಿಸಿದನದಾವ ಬೇಡ?

ಬಯಲ ಕಡಲಿನ ಹಡಗೊ ಮೀನವೋ ಮೋಡ?
ಕಟ್ಟಿಹವೊ ತಾರೆಗಳು ಗೊಂಬೆಯಾಟಕೆ ಗೂಡ?

ಶಶಿ ತಾರೆಯರ ಕಣ್ಣು ಮುಚ್ಚಾಲೆ ನೋಡ–
ಆಗಿಹುದು ಅಡಗಲಿಕೆ ಕರುಮಾಡ ಮೋಡ!

ಕರಗಿತದೊ, ಕರಗಿತದೊ, ಸುರಿಯುತಿದೆ ಮೋಡ!
ಕಂಡು ಕನಿಕರ ಬಂತೆ ಈ ಜಗದ ಪಾಡ?

* * *

ಬಾನಬಿಲ್ಲು

ಬಾನ ನೀರೆಯ ಸೆರಗು ಜಾರಿತೊ?
ಹಸ್ತವಸ್ತ್ರವು ಹಾರಿತು!
ಇಲ್ಲ, ಭಾರತಧ್ವಜವು ಏರಿತು–
ಮೇಘಮಂಡಲ ಮೀರಿತು!

ಯಾವ ಕಿನ್ನರ ಸೇನೆ ರಚಿಸಿತೊ
ಸೇತುಬಂಧನ ಸ್ವರ್ಗಕೆ!
ಯಾವ ಕೋಮಲ ಚರಣ ಬರುವುವೊ
ಈ ಮನೋಹರ ಮಾರ್ಗಕೆ!

ವರ್ಣರಾಜ್ಯದ ರಾಯಭಾರಿಯ
ಸ್ವರ್ಣರಥಕಿದು ಪಥವೆಲ!
ಇಂದ್ರಲೋಕದ ಕನಸುಗಳು ಕುಣಿ
ದಾಡೆ ಮೂಡಿದ ಪಥವಲ!

ಕರಗದಿರು ಓ ನಿಜದ ನೆರಳೆ,
ಸೃಷ್ಟಿಗೊಂಡಿಹ ಸ್ವಪ್ನವೆ!
ಭಾವ ಬಸುರಿಗೆ ಬಂದ ಬಯಕೆಯೆ,
ನಭದ ನಾಗದ ರತ್ನವೆ!

* * *

ಮಳೆ

ಮೋಡಗಳ ಜಡೆ ಬಿಚ್ಚಿ ಮೈದೊಳೆದುಕೊಳುತಿಹಳು
ಬಯಲ ಭಾಮಿನಿ ಜಗದ ಮಣೆಯ ಮೇಲೆ;
ಕೇಶರಾಶಿಯ ನೀರು ತೊಟ್ಟಿಕ್ಕಿ ಸುರಿಯುತಿದೆ,
ಇದಕೆ ಜನವೆನ್ನುವುದು ಮಳೆಯ ಲೀಲೆ!

ಮಳೆಯ ಹನಿ ಮಧು ನೆಲಕೆ, ಈ ಜಗದ ಮೃತ್ತಿಕೆಯ
ಕಣಕಣವು ಮಧುವ್ರತವು; ಸೃಷ್ಟಿಯೆಂಬ
ಹುಟ್ಟಿನಲಿ ಶೇಖರಿತವಾಗುತಿದೆ ಮಧು–ಕೋಶ,
ಮಾಧುರ್ಯ ಪಸರಿಸಿದೆ ತಿರೆಯ ತುಂಬ!

ಹುಲ್ಲಹಾಸಿನ ಮೇಲೆ ಮಳೆವನಿಯ ಸೇಸೆಯಿದು
ಯಾರ ಪರಿಣಯಕಾಗಿ? ಹೇಳು ಕವಿಯೆ!
ಆಗಸದ ಹಂದರಕೆ ಮಳೆಯ ಮುತ್ತಿನ ಸರವು–
ಆಗಿಹುದು ಮದುವೆ–ಮನೆ ಬುವಿಗೆ ಬುವಿಯೆ!

ನೆಲಮುಗಿಲನಪ್ಪಿದುದೊ, ಮುಗಿಲೆ ನೆಲನಪ್ಪಿದುದೊ
ಮಳೆಯಲ್ಲಿ ಬಯಲಾಯ್ತು ಬಯಲಿನಂತರವು!
ಎಲ್ಲ ನೆಲ, ಎಲ್ಲ ಜಲವೆಲ್ಲ ಅಂಬರ–ತಲವು,
ನೆಲ ಮುಗಿಲು ಬಯಲೆಂಬ ಭೇದ ಅವಾಂತರವು!

ಜಗದ ಪೀಠದ, ಬಯಲ ಗೋಲಕದ, ಮಿಂಚುಗಳ
ಪಂಚಸೂತ್ರದ ಲಿಂಗ–ಮಳೆಯೆ ಅಭಿಷೇಕ!
ನೀರಲ್ಲವಿದು ತೀರ್ಥ, ವಿಶ್ವಲಿಂಗೋದಕವು,
ಆಗಲಿನ್ನಾದರೂ ಈ ಲೋಕ ನಾಕ!

* * *

ಮೀನ

ಮೀನವಿದೆ ಆ ಕಡೆಗೆ
ಮೀನಾಕ್ಷಿ ಈ ಕಡೆಗೆ
ನೋಡುತ್ತ ನಿಂತೆ ನಾ
ಆ ಕಡೆಗೆ ಈ ಕಡೆಗೆ!

ಚಲಿಸುತಿದೆ ಆ ಕಡೆಗೆ
ನೀರಿನಲಿ ಮೀನ;
ಚಲಿಸುತಿದೆ ಅದರೊಡನೆ
ಮೀನಿನೊಲು ನಯನ!

ಬೆಳ್ದಿಂಗಳಲಿ ನೀಲ–
ದಂತೆ ಸುಳಿದುದು ಮೀನ;
ಕಮಲದೊಳು ಭ್ರಮರದೊಲು
ಕುಣಿದುದಾ ನಯನ!

ಕವಿಮನದ ಕಲ್ಪನೆಯ–
ಹಾಗೆ ಚಲಿಸಿತು ಮೀನ;

ಪ್ರಿಯತಮನ ಕನಸಿನೊಲು
ನಲಿದುದಾ ನಯನ!

ಮೀನವೂ ತಲ್ಲೀನ,
ಮೀನಾಕ್ಷಿ ತಲ್ಲೀನ,
ರಸಿಕನಿವ ತಲ್ಲೀನ,
ಮೂವರೂ ಮೌನ!

ಬಂದ ಭಾವುಕನೊಬ್ಬ
ಬಾಳ ಸಂಜೆಯ ಹೋಲಿ;
ಕೈಲಿ ಕೋಲಿದ್ದರೂ
ಅಡಿಗಡಿಗೆ ಜೋಲಿ!

ಮೀನಿನಲಿ ಮತ್ಸ್ಯಾವ-
ತಾರ ಕಂಡಿರಬಹುದು;
ಭಾವುಕನು ಭಕ್ತಿಯಲಿ
ಹೊರಟ ಕೈಮುಗಿದು!

ಬಂದರಿದೊ ಬಿಂಕದಲಿ
ನವಯುಗದ ತರುಣರು;
ಕ್ರಾಪು ಬೈತಲೆಯವರು
ಸಿಗರೇಟಿನವರು.

"ಮೀನ ರುಚಿಕರ ಅಡುಗೆ",
ಎಂದನೊಬ್ಬ;
"ಮೀನ ಫಾಸ್ಫೋರಸ್ಸು",
ಎಂದ ಮಗುದೊಬ್ಬ;

"ಮೀನಿನೆಣ್ಣೆಯು ಮದ್ದು",
ಎಂದನಿನ್ನೊಬ್ಬ;
ಹೆಚ್ಚು ತಿನ್ನಿರಿ ಮೀನ"
ಎಂದ ಕೊನೆಗೊಬ್ಬ!

ಎಲ್ಲರೂ ಕಿಲಕಿಲನೆ
ನಕ್ಕು ಸಾಗಿದರು;

ನಗುನಗುತ ಹೊಗೆಬಿಟ್ಟು
ಮುಂದೆ ಸಾಗಿದರು.

ನಿಂತಲ್ಲಿಯೇ ನಡುಕ–
ನನಗಾಯ್ತು ನೋಡಿ–
ಕಣ್ಣೆದುರಿಗೇ ಮೀನ–
ಕೊಯ್ದ ಹಾಗಾಗಿ!

ಸೌಂದರ್ಯ ಸಂಹಾರ
ಮನುಜನಾಹಾರ!
ಮೇಲೆ ಮನರಂಜನೆಗೆ
ಮೃಗಯಾವಿಹಾರ!

ಊಟಕ್ಕೆ ಸಂಹಾರ,
ಆಟಕ್ಕೆ ಸಂಹಾರ,
ದೇಶಕ್ಕೆ ಸಂಹಾರ,
ಧರ್ಮಕೂ ಸಂಹಾರ.

ಕ್ರಾಂತಿಗೂ ಸಂಹಾರ,
ಶಾಂತಿಗೂ ಸಂಹಾರ,
ಮಾತುಮಾತಿಗೆ ಬೇಕು
ಮನುಜ ಸಂಹಾರ!

ಎಲ್ಲಿಗೊಯ್ವುದೊ ನಮ್ಮ
ಸಂಹಾರ ಸಂಸ್ಕೃತಿಯು
ಇದು ಯಾವ ಸಂಸ್ಕೃತಿಯು?
ಮರಣ ಚೀತ್ಕೃತಿಯು!

* * *

ಕಾಶ್ಮೀರದಲ್ಲಿ ಕಾರ್ಗಾಲ

ಘನಘೋರ ಮೇಘ–ಮದದಂತಿ –ಸೇನೆ ಹಿಮಗಿರಿಗೆ ಢಿಕ್ಕಿ ಹೊಡೆಯೆ
ಮದಕುಂಭ– ಕುಂಭ ನಗರಾಜ ಹತಿಗೆ ಕ್ಷತಿಗೊಂಡು ಸೀಳಿ ಒಡೆಯೆ
ಉದುರುತ್ತಲಿಹವು ಅಣಿಮುತ್ತು ನೋಡು ಕುಂಭಿನಿಯು ಕಾಂತಿವಡೆಯೆ
ಶ್ರೀನಗರ ಸರಸಿಯಲಿ ನೌಕೆ ನೂರು ತೇಂಕಾಡಿ ಜೋಲಿ ಹೊಡೆಯೆ ॥ ೧॥

ಶಲಿಮಾರಿನಲ್ಲಿ ಕಾರಂಜಿ ಸಾಲು ನೆಗೆದಾಡೆ ಉಬ್ಬಿ ಕೊಬ್ಬಿ
ಹರವನದಿ ಬಳ್ಳಿ ತಳ್ಳಂಕಗೊಳ್ಳೆ ಫಲವೃಕ್ಷಗಳನು ತಬ್ಬಿ
ಜಹಲಮಿನ ಜಲವು ನೊರೆ ಚೆಲ್ಲಿ ಮೊರೆಯೆ ಇಕ್ಕೆಲಕೆ ಏರಿ ಹೋಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೨ ॥

ಕೇಶರದ ಹೊಲವು ಓಕುಳಿಯನಾಡೆ ಕೆಂಪುಗುಳ್ವ ಎಸಳ ತೂರಿ
ಕಸ್ತೂರಿ ಮೃಗವು ಚಿನ್ನಾಟವಾಡೆ ಮೃಗನಾಭಿ ಮದವ ಬೀರಿ
ಲೆಕ್ಕಕ್ಕೆ ಸಿಗದ ಸರಸಿಜಗರಳೆ ಬರುವಂತೆ ಸೊಬಗೆ ಸಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೩ ॥

ಕಾಲಿಡಲು ಕೂಡ ಸ್ಥಳವಿಲ್ಲದಂತೆ ನೆಲವೆಲ್ಲ ಹೂಗಳಾಗಿ
ಕೈಯಿಡಲು ಕೂಡ ಸ್ಥಳವಿಲ್ಲದಂತೆ ಎಲೆಯೆಲ್ಲ ಹಣ್ಗಳಾಗಿ
ಆಕಾಶ ಕೂಡ ಕೈಯಾಸೆ ಮಾಡೆ ಮೇಲಿಂದ ಕೆಳಗೆ ಬಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೪ ॥

ಈ ಮಣ್ಣಿನಲ್ಲಿ ಇನ್ನೆನಿತು ಬಣ್ಣದರಳಿಹವು ನೋಡಲೆಂದು
ಇನ್ನೆನಿತು ಹಣ್ಣು, ಕಣ್‌ಸೆಳೆವ ಹೆಣ್ಣು ಹುದುಗಿಹವು ನೋಡಲೆಂದು
ಅಪ್ಸರೆಯರಿಳಿದು ಬರುತಿಹರು ನೋಡು ಸುರಿಮಳೆಯ ಹನಿಗಳಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೫ ॥

ಹಿಮಗಡ್ಡೆಯೊಡೆಯೆ ಹಿಮಮಣಿಗಳುರುಳೆ ಹರಮುಖದ ಶಿಖರದಿಂದ
ದಾಡಿಮಗಳೊಡೆಯೆ ಮುತ್ತುಗಳು ಸುರಿಯೆ ದಾಡಿಮದ ನಿಕರದಿಂದ
ಮಳೆ ಬಂತು ಬಂತು ಆಗಸದ ನಯನದಾನಂದ ಬಾಷ್ಪಮಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೬ ॥

ನೆರೆ ಬಂತು ತೊರೆಗೆ, ನೊರೆ ಬಂತು ತೆರೆಗೆ, ಹರೆ ಬಂತು ದರಿಯ ಝರಿಗೆ;
ಮದ ಬಂತು ವನಕೆ, ಮುದ ಬಂತು ಜನಕೆ, ನಿಧಿ ಬಂತು ಗದ್ದೆ ಕೆರೆಗೆ,
ಸಂಭ್ರಮದ ಪಯಿರು ಸಂತಸದ ಸುಗ್ಗಿಗೌತಣದ ಓಲೆಯಾಗಿ–
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೭ ॥

ಜಲಪಾತ ಜಿಗಿಯೆ ಕಲ್ಲುಗಳು ಚಿಗಿಯೆ ಚೆಲುವುಗಳು ಮುಸುಕು ತೆಗೆಯೆ
ಹೆಸರರಿಯದಿರುವ ಪಶುಪಕ್ಷಿವೃಕ್ಷವಲ್ಲರಿಗಳೆದೆಯು ನೆಗೆಯೆ
ಕಾಲ್ಗಳಿಗೆ ತೆರೆಗೆ ಕೊಳಗಳಿಗೆ ತೊರೆಗೆ ಜವ್ವನದ ಜೀಕವಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೮ ॥

ಇದೊ ಖಿಲನಮಾರ್ಗ, ಇದು ಹಿಮದ ದುರ್ಗ, ಇನ್ನಿಹುದೆ ಬೇರೆ ಸ್ವರ್ಗ?
ಅಪವರ್ಗಲಕ್ಷ್ಮಿಗಿದೆ ಪದ್ಮಪೀಠ, ಪರ್ಣಗಳು ವೃಕ್ಷವರ್ಗ.
ಈ ಮೇಘಪುಷ್ಪ ಮುಕ್ತಾಕಲಾಪಮಾಗಿಹುದು ಲಕ್ಷ್ಮಿಗಾಗಿ–
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೯ ॥

ಬನಿಹಾಲ ಶಿಖರ ನಿಂತಿಹುದು ಹರನ ಸಿರಿಜಡೆಯ ಗಂಟಿನಂತೆ
ಸುತ್ತುತ್ತ ಮೇಲಕೇರಿರುವ ದಾರಿ ಸುತ್ತಿರುವ ಸರ್ಪದಂತೆ
ಮಳೆ ನೀರು ಇಳಿಯೆ ಗಿರಿಶಿಖರದಿಂದ ಗಂಗಾವತರಣಮಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನಮಾಗಿ ॥ ೧೦ ॥

ಶಶಿಧರನ ಭಸಿತ ಉದುರುತ್ತಲಿಹುದೊ, ದರಹಸಿತ ರಶ್ಮಿಚಯಮೊ,
ಗಿರಿಸುತೆಯ ಚರಣ–ನಖ–ಕಾಂತಿಧಾರೆ, ನಯನಾಂಶು–ವೀಚಿ–ಕುಲಮೊ,
ದರಿಗುಹೆಯ ಉರದಿ ಪಡಿನುಡಿದ ಸಿಡಿಲು ಡಮರುಗದ ಶಬ್ದಮಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶೃಂಗಾರ ಸ್ನಾನಮಾಗಿ ॥ ೧೧ ॥

ಗಜಚರ್ಮ ಮೇಘ, ಭಸಿತಾಂಗ ಹಿಮವು, ಗಂಗೋತ್ತಮಾಂಗ ಶೃಂಗ;
ಈ ಬೆಟ್ಟ ರುದ್ರ, ಶ್ರೀನಗರ ಗೌರಿ, ರಮಣೀಯ ಉಭಯ ಸಂಗ!
ಮಳೆ ಉದಕ, ಆಲಿ ಸುಮ, ಮಿಂಚು ದೀಪ ಶಿವಶಿವೆಯ ಪೂಜೆಗಾಗಿ–
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಸೌಂದರ್ಯ ಸ್ನಾನಮಾಗಿ ॥ ೧೨ ॥

* * *

ಎಲೆಯುದುರಿ ನಿಂತರೂ ಒಣಗಿಲ್ಲ ವನವು!

ಕುಳಿರ ಓಕುಳಿಯಾಡಿ ಶಿಶಿರನೈತರಲು
ಬಿಮ್ಮನೇ ಬಿಗಿಯಿತಿದೊ ಕೋಗಿಲೆಯ ಕೊರಲು!
ನವಿಲ ನರ್ತನ ಹೋಯ್ತು! ಇನ್ನೆಲ್ಲಿ ಅರಲು?
ಬುವಿಯೆ ಬೆತ್ತಲೆಯಾಯ್ತು ಹೇಮಂತ ಬರಲು!

ಆದರೂ ನಿಂತಿಲ್ಲ ವಿಹಗ ಗೀತಧ್ವನಿಯು
ಎಲೆಯುದುರಿ ನಿಂತರೂ ಒಣಗಿಲ್ಲ ವನವು!

ಬರಡು ಲತೆ, ಕೊರಡು ತರು, ಶೂನ್ಯ ಶೃಂಗಾರ!
ಎಂಥ ಚೆಲುವಾಯಿತೋ ಮಾಗಿಯಂಗಾರ!
ಎಲ್ಲಿ ಅಡಗಿತೊ ಅಳಿಯ ಮಧುರ ಝೇಂಕಾರ!

ಕೇಳುತಿದೆ ಎಲ್ಲೆಡೆಗೆ ಹಿಮದ ಹೂಂಕಾರ!

ಆದರೂ ಆಗಿಲ್ಲ ವಿಕಸನಕೆ ಕೊನೆಯು–
ಎಲೆಯುದುರಿ ನಿಂತರೂ ಒಣಗಿಲ್ಲ ವನವು!

ಮಂಚೆ ನಂಜಾಗಿಹುದು ಉದ್ಭಿಜಕೆ ಈಗ
ಅಂಡಲೆವುದೇ ವೈರ ಅಂಡಜಕೆ ಈಗ
ಅನ್ನವೇ ಬನ್ನಸರಿ ಪಿಂಡಜಕೆ ಈಗ
ಎಲ್ಲೆಲ್ಲಿಯೂ ಸೊನ್ನೆ ಬೆಳವಣಿಗೆಗೀಗ!
ಆದರೂ ಶಾಶ್ವತವೆ ಈ ಬಂಜೆತನವು?
ಎಲೆಯುದುರಿ ನಿಂತರೂ ಒಣಗಿಲ್ಲ ವನವು!

ಗಿಡಗಿಡದ ಬುಡದಲ್ಲಿ ತರಗೆಲೆಯ ಹಸರ
ಹುಡುಕಿದರು ಕಾಣೆ ನೀ ಎಳ್ಕನಿತು ಹಸಿರ
ಎಲೆಹಸಿರ ಗಿಳಿಹಸಿರ ಕುಸುಮಗಳ ಕುಸುರ
ಚೆಲುವು ನಶ್ವರವೆಂದು ಬಿಡಬೇಡ ನಿಟ್ಟುಸಿರ!
ಇಂದೊ ನಾಳೆಯೊ ಮತ್ತೆ ಮೈಯೆಲ್ಲ ನನೆಕೊನೆಯು–
ಎಲೆಯುದುರಿ ನಿಂತರೂ ಒಣಗಿಲ್ಲ ವನವು!

ಮೈಮುದುರಿಕೊಂಡಿಹುದು ಅಣುರೇಣು ತೃಣವು
ಮುರುಟಿಹುದು ಸುರುಟಿಹುದು ಈ ಜಗದ ವನವು
ಮುಪ್ಪನಪ್ಪಿದೆಯಿಂದು ಈ ವನದ ತನುವು
ಆದರೂ ಚೇತನಾಮಯವದರ ಮನವು
ಮತ್ತೆ ಬರಲಿದೆ ವನಕೆ ಇನ್ನೊಂದು ಯೌವನವು–
ಎಲೆಯುದುರಿ ನಿಂತರೂ ಒಣಗಿಲ್ಲ ವನವು!

ಕೂಡಿಟ್ಟ ಗಳಿಕೆಯದು ತಂಗುಳವು ಎಂದು
ಭೂಮಿತಾಯಿಯ ದಾನ ಅಕ್ಷಯವು ಎಂದು
ತಾಯ ಸೊಮ್ಮನು ತಾಯ್ಗೆ ಸಲ್ಲಿಸಿಹವಿಂದು
ಗಿಡಬಳ್ಳಿಗಳು ತಾವು ಬರಿಮೈಯ್ಲೆ ನಿಂದು
ಕೊಡುವವರಿಗಿರಬಹುದೆ ಕಡೆತನಕ ಬಡತನವು?
ಎಲೆಯುದುರಿ ನಿಂತರೂ ಒಣಗಿಲ್ಲ ವನವು!

ಬನಸಿರಿಯು ಸೂರೆಯಾಗಿದ್ದಾಗ ಇಲ್ಲಿ
ನೆಲೆಸಿ ನಲಿದುಲಿದ ಅಳಿಪಿಕಶುಕಗಳೆಲ್ಲಿ?
ಜೇನ್ನೊಣಗಳೆಲ್ಲಿ? ಪಾತರಗಿತ್ತಿಯೆಲ್ಲಿ?
ಪ್ರಣಯಿಗಳ ಸುಳಿದಾಟ ಹೂವಡಿಗನೆಲ್ಲಿ?
ಮತ್ತೆ ಕರೆಯದೆ ಬಹರು ಚಿಗುರೆ ಈ ಬನವು
ಎಲೆಯುದುರಿ ನಿಂತರೂ ಒಣಗಿಲ್ಲ ವನವು!

ಈಗ ಬನದಲಿ ಬೊಡ್ಡೆಗಳ ಬರಡು ಬಿಳಿಪು
ನಾಳೆ ಚಿಗುರಿನ ನಾಲ್ಕು ದಿವಸಗಳ ಕೆಂಪು
ನಾಡಿದ್ದು ಹಸಿರು ಸೊಕ್ಕಿನ ಕಂದು ಕಪ್ಪು
ಆಮೇಲೆ ಮತ್ತೊಮ್ಮೆ ಎಲ್ಲವೂ ಸೊಪ್ಪು!
ಹೀಗೆಯೇ ಸಾಗುವುದು ಈ ವನದ ಜೀವನವು–
ಎಲೆಯುದುರಿ ನಿಂತರೂ ಒಣಗಿಲ್ಲ ವನವು!

* * *

ಸ್ಮರಸಖನ ಬರವು

ಮತ್ತೆ ಮಾಮರದಲ್ಲಿ ಮತ್ತ ಕೀರ ಸ್ವರವು
ಮತ್ತೆ ಚೇತೋಹಾರಿ ಸ್ಮರಸಖನ ಬರವು!
ಸುತ್ತು ಕಂಪನು ಬೀರಿ ಪುಷ್ಪರಾಗವ ತೂರಿ
ಎತ್ತಲೂ ಹೊಸ ತಳಿರು ಚಿಗುರುಗಳ ಹೇರಿ
ಮೃತ್ತಿಕೆಯ ಮೈಮಲರಿ ಕಸಕಡ್ಡಿಯೂ ಅಲರಿ
ಹತ್ತೆಸಾರುತಲಿಹುದು ಹೊಸ ಸುಗ್ಗಿ ಶ್ರೀಕರವು–
ತಾರುಣ್ಯ ಪರವು! ॥ ಮತ್ತೆ.....

ಮೈಕೊಡಹಿ ಮೇಲೇಳುತಿದೆ ರೂಪ ಅವ್ಯಕ್ತ
ಹರಿಯುತಿದೆ ತೃಣಕಾಷ್ಠದಲ್ಲದರ ರಕ್ತ
ಇಂದು ಸಕಲವು ತನ್ನ ಸರ್ವ ಬಂಧನ ಮುಕ್ತ
ದೊರೆತಿಹುದು ಸರುವಕ್ಕೆ ಬಿಡುಗಡೆಯ ವರವು–
ವಿಕಸನದ ವರವು! ॥ ಮತ್ತೆ.....

ಲಟಲಟನೆ ಲಟಿಗೆ ಹೊಡೆಯುತಲಿಹವು ಮೊಗ್ಗೆಗಳು
ಪುಟಿಯುತಿವೆ ಎಲ್ಲೆಡೆಗೆ ಹಿಗ್ಗುಗಳ ಬುಗ್ಗೆಗಳು

ಈ ಒಂದು ನೋಟಕ್ಕೆ ಸರಿ ನೂರು ಸಗ್ಗಗಳು!
ಇಲ್ಲೆ ಓಲೈಸುತಿವೆ ಇದೊ ಇಹವು ಪರವು–
ನೆಲಮುಗಿಲು ಹರವು! ॥ ಮತ್ತೆ.....

ಹೂವುಗಳ ಹೇರನ್ನು ಹೊರಲಾರದಿದೆ ಮಾವು
ತನ್ನ ಕಂಪಿಗೆ ತಾನೆ ಮರುಳಾಗುತಿದೆ ಬೇವು!
ಎತ್ತ ನೋಡಿದೊಡತ್ತ ಹೂವು ಹೂವೋ ಹೂವು!
ಎತ್ತ ಹೋಯಿತೊ ಮೊದಲ ಚೆಲ್ವಿಕೆಯ ಬರವು–
ತರಗೆಲೆಯ ಸರವು! ॥ ಮತ್ತೆ....

ಆಕ್ಕಪಕ್ಕದ ಮರದಿ ಹಕ್ಕಿಗಳ ಉಕ್ಕಂದ
ಎತ್ತೆತ್ತಲೂ ಮಂದ ಪವನನಲಿ ಮಕರಂದ,
ಆನಂದ ಆನಂದ ಎಲ್ಲೆಡೆಗೆ ಆನಂದ!
ಇಂದು ನಂದನ ಸೃಷ್ಟಿ, ಸೌಂದರ್ಯದಿರವು–
ಸಿಂಗರದ ಬರವು! ॥ ಮತ್ತೆ.....

ತನುಮತ್ತ ಮನಮತ್ತ ಜನಮತ್ತ ವನಮತ್ತ
ಪ್ರಣಯ ಮಧುವನು ಕುಡಿದು ತೇಂಕಾಡುತಿದೆ ಚಿತ್ತ
ಕಣಕಣವು ಬೇಡುತಿದೆ ಇಂದು ಒಲವಿನ ಮುತ್ತ!
ಇಂದು ಸೃಷ್ಟಿಯೆ ಒಂದು ಸುಂದರ ಸ್ವಯಂವರವು–
ಆನಂದಕರವು! ॥ ಮತ್ತೆ.....

ಕಣ್ಗೆ ರೂಪವು ಬೇಕೆ? ಕಿವಿಗೆ ರಾಗವು ಬೇಕೆ?
ಮೈಗೆ ಮದ ಮಾರುತನ ಸುಖ ಸ್ಪರ್ಶ ಬೇಕೆ?
ನಾಸಿಕಕೆ ಮಕರಂದ ಬಾಯ್ಗೆ ಮಧು ರುಚಿ ಬೇಕೆ?
ಬಂತು ಸರ್ವೇಂದ್ರಿಯಕೆ ಸಂತೃಪ್ತಿಕರವು–
ಮಧುಶ್ರೀಯ ಬರವು! ॥ ಮತ್ತೆ...

ಈ ಸೊಬಗು ಹಿಗ್ಗುಗಳ ಹರಿವ ಸುರನದಿಯಲ್ಲಿ
ನಿನ್ನ ನಾನಾ ದುಃಖ ಕ್ಲೇಶ ಚಿಂತೆಯ ಚೆಲ್ಲಿ
ಹಿಗ್ಗು ಹಿಗ್ಗೆಲೆ ಜೀವ ಹಿಗ್ಗಲಿಕೆ ತಡೆಯೆಲ್ಲಿ?
ನೀನೆ ಕಟ್ಟಿದುದಲ್ತೆ ನಿನ್ನ ದುಃಖದ ಪುರವು?
ನಿನ್ನದೇ ಸೊಗದಿರವು! ॥ ಮತ್ತೆ.....

* * *

ಯುಗಾದಿ

ಗಜಲಿಂಬೆ ಮಾಂಗಾಯ ಪಾನಕವ ಕುಡಿಯಿರಿ
ಬೇವ ಸವಿಯಿರಿ ಬಂತು ಬಂತು ಯುಗಾದಿ!

ಪರಿಮಳೋದಕಸ್ನಾನ ಮನೆಮನೆಗೆ ನಡೆದಿರಲು
ಮಗಮಗಿಸುತಿವೆ ಊರ ಬೀದಿ ಬೀದಿ!

ಹೊಸ ಬಟ್ಟೆಗಳ ತೊಟ್ಟು ಹಣೆಗೆ ಕತ್ತುರಿಯಿಟ್ಟು
ಹೊಸವರುಷ ಸ್ವಾಗತಿಸು ಹರುಷದಿಂದ;

ಬಂಗಾರವಾಗಲಿ ಬಾಳ ಮುಸುಕಿಹ ಕಲುಷ
ಇಂದೆಮ್ಮ ನಿಜಪ್ರೇಮ ಪರುಷದಿಂದ!

ಮಾನವನ ಕಹಿಬಾಳ ಬೇವು ನಿಂತಿದೆ ಬಯಸಿ
ಸ್ನೇಹಶರ್ಕರೆಯನ್ನು ಆದಿಯಿಂದ;

ಹುಡುಕುತಿದೆ ಮಿಡುಕುತಿಹ ಮಾನವತೆಯಿದನೊಂದೆ
ಯುಗಕೊಂದು ಹೊಸ ರೀತಿ ಹಾದಿಯಿಂದ!

ಆತ್ತ ಮಾಮರದಲ್ಲಿ ಮಿಡಿಗಾಯಿ ಕಾದಿಹುದು
ಹುಳಿ ಹಿಳಿದು ತನಿರಸವ ತಾಳಲೆಂದು;

ಇತ್ತ ಮಾನವಕೋಟಿ ಕಾದಿಹುದು ತನ್ನೆದೆಯ
ಹುಳಿ ಕಳೆದು ಸವಿಬಾಳ ಬಾಳಲೆಂದು.

ಹೊಸ ಹಸಿರ ವಸನದೊಳು ಬಸಿರೆಯೊಲು ತೋರುತಿವೆ
ಗಿಡಬಳ್ಳಿಗಳು ಇಂದು ಅಂದವಾಗಿ;

ಏಸು ಹೆರಿಗೆಗಳಾಗುವುವೊ ಇಂದು ನಾಳೆಯೊ
ಫಲಪುಷ್ಪಕಿಸಲಯವೆ ಕಂದವಾಗಿ

ವಿಶ್ವವಿದು ಯೌವನದ ಔತಣವು ಎಂಬಂತೆ
ಎಂದಿನೊಲು ಅರಳಿಹುವು ತರತರದ ಹೂವು

ಈ ಗಳಿಗೆಯಲ್ಲಿಯೇ ನಿಮ್ಮ ನೆಲಗೂಡಿಸುವೆ–
ನೆಂದು ಅಣಕಿಸುತಿಹುದು ಆ ಕಡೆಗೆ ಸಾವು!

ಸಾವು- ಸೂಜಿಯ ಬುಡದ ನೂಲಿನೊಲು ಮೊಗದೋರಿ
ಮುಗುಳುನಗೆ ನಗುತಿಹವು ಮುಗುಳು ಇತ್ತ!

ಮುಪ್ಪು ಬಂದರು ಸಹಿತ ಸೊಪ್ಪು ಹಾಕೆವು ನಿಮಗೆ-
ಎಂದು ಹಣ್ಣೆಲೆಗೈವ ಜಗಳವತ್ತ:

ಗಾಳಿ ಬೆಂಕಿಯ ಕಾಲ ಹೋಯ್ತು ಬಂದಿದೆಯೀಗ
ತರಣಿ ವರುಣರ ಕಾಲ-ಎಂದು ಬಿಸಿಲು

ಮೆಲ್ಲಮೆಲ್ಲನೆ ತನ್ನ ಎಲ್ಲೆ ಸೊಕ್ಕನು ಬೆಳೆಸಿ
ಆಡುತಿದೆ ಸೃಷ್ಟಿ ಸಖಿಯೊಡನೆ ಸುಸಿಲು.

ಬಂತು ಬಾಳದ ಬೇರ ಪರದೆ ಮನೆಬಾಗಿಲಿಗೆ
ಬಾಳು ಬಾಳದುದನ್ನು ಬಲಿ ಕೊಳ್ವುದೆನುತ;

ಹೆಸರು ಬಾಳದ ಬೇರು, ಉಸಿರು ಕಂಪಿನ ತವರು,
ಬಾಳದಿದ್ದರು ಬಾಳ್ಗೆ ಸೊಗವೀವೆನೆನುತ!

ರೆಂಬೆ ಕೊಂಬೆಗೆ ಜೇನು ಮಧುವನದಿ, ಜೀವನದ
ಉಪವನದಿ ಅರಳವೆ ಪ್ರೇಮ-ಪುಷ್ಪ?

ಉಲ್ಲಾಸವನು ಬೀರಿ ಚೆಲುವ ತೂರುವ ತಿರೆಯೆ
ತಿಳಿಸಲಾರದೆ ನಮ್ಮ ಬಾಳಿನೊಳ್ಪ?

ವನದ ಕೋಕಿಲ ಸ್ವರಕೆ ನಿನ್ನ ಹೃದಯದ ಸ್ವರವು
ಓಗೊಡದೆ ಆಲಿಸಲು ಕಿವಿಯ ತೆರೆದು?

ಜಗದ ಚೆಲುವಿನ ಕಮಲ ಅರಳಿರಲು ಕಣ್ಣೆದುರು
ಮನದಳಿಯು ಉಲಿಯದೇ ಗೇಯ ಸುರಿದು?

ನೋಟವೆಂತೋ ಅಂತೆ ಆಟ ತೋರ್ವುದು ಜಗದ
ನೋಡು ವಿಶ್ವವ ಮನದ ಕಣ್ಣ ತೆರೆದು

ಇಂದಾದರೂ ವಿಶ್ವ ಪ್ರಕೃತಿ ಮಾನವ ಪ್ರಕೃತಿ
ಸಾಧಿಸಲಿ ಸಮರಸವ ಸೊಗದಿ ಬೆರೆದು

ಈ ಯುಗಾದಿಯು ಬರವು ಸೊಗದ ಬರವಾಗಲಿ
ಪ್ರೇಮವೇ ಜೀವನದ ಸ್ವರವಾಗಲಿ!

ಮನೆಮನೆಗೆ ಸಾಹಿತ್ಯ ಸತ್ರ ಕಲಾಕ್ಷೇತ್ರ-
ತರುವಂಥ ಪರಶಿವನ ವರವಾಗಲಿ!

* * *

ಬಂದಿದೆ ಬಾ ಹೊಸದಿನ!

ಬಂದಿದೆ ಬಾ ಹೊಸದಿನ
ಮೈವೆತ್ತಿಹ ಹೊಸತನ!
ತಿಳಿಯಾದವು ಬಾನು ಬಯಲು
ತಿಳಿಯಾದವು ಕಾನು ಹೊನಲು
ನೀವು ತಿಳಿಯಾಗಿರೆನುತ
ಸಾರ ಬಂದ ಚಾರಣ–
ಬಂದಿದೆ ಬಾ ಹೊಸದಿನ!

ವನವು ಕೊನರಿ ಬಳ್ಳಿ ಮಲರಿ
ಅಣುರೇಣುವಿನೆದೆಯು ಅಲರಿ
ಸೊಬಗು ಸೈಪು ಸೂರೆಯಾಯ್ತು
ಅರಳಲೆಮ್ಮ ನಿಮ್ಮ ಮನ
ಬಂದಿದೆ ಬಾ ಹೊಸದಿನ!

ಪ್ರಾಕ್ತನವೇ ಹೂತಹಾಗೆ
ನೂತನವಿದು ರಯ್ಯಮಾಗೆ
ಹಳಸಿದುದನು ಹೋಳಿಮಾಡಿ
ಹೊಮ್ಮಿ ಬಂದ ಚೇತನ–
ಬಂದಿದೆ ಬಾ ಹೊಸದಿನ!

ಅದೇ ಇನ ಅದೇ ದಿನ
ಅದೇ ವನ ಅದೇ ಜನ
ಅದೇ ಕಾಲಲೀಲೆಯಿರಲು
ಯಾತರಲ್ಲಿ ಹೊಸತನ?
ಬಂದಿಹುದೇ ಹೊಸದಿನ?

ಜಗ ಪ್ರಾಕ್ತನ ಜಡ ಪ್ರಾಕ್ತನ
ಜೀವಸೃಷ್ಟಿ ಚಿರ ನವೀನ
ನೂತನತೆಯು ನೋಟದಲ್ಲಿ
ನೋಡು ತೆರೆದು ಲೋಚನ
ಬಂದಿದೆ ಬಾ ಹೊಸದಿನ!

ಕುಹೂ ಕುಹೂ- ಒಹೋ ಒಹೋ
ಕುಹೂ ಕುಹೂ-ಅಹಾ ಅಹಾ
ಕುಹೂಕುಹೂ ಕೋಗಿಲೆ
ಕೋಗಿಲೆ
ಕೂಗೆಲೆ
ಮೌನವ್ರತವ ನೀಗೆಲೆ
ರಾಗಯೋಗಿಯಾಗೆಲೆ
ನಮ್ಮ ಬನದ ಕೋಗಿಲೆ!
ಮೌನ ಮುಗಿದು ಚಿಗುರ ಮೊಗೆದು
ಮೋದ ಹೆಚ್ಚಿ ಹಾಡುವೆ
ನಿಮ್ಮ ಮನಸುಗಳನು ಕೆಣಕಿ
ಕನಸಿನಲ್ಲಿ ಕಾಡುವೆ! ಕುಹೂ, ಕುಹೂ.....
ಮೈಗೆ ನವಿರ ಮನಕೆ ನವುರ
ನೀಡಿ ನಲಿದು ಹಾಡುವೆ
ಮಲಗಿದೊಲವನೆಬ್ಬಿಸುವೆನು
ಒಲವಿನೊಸಗೆ ನೀಡುವೆ! ಕುಹೂ, ಕುಹೂ....
ವಿರಹಿಯೆದೆಯು ಉರಿದು ಹೋಯ್ತು
ಮೊಗ್ಗೆಯೆದೆಯು ಬಿರಿದು ಹೋಯ್ತು
ಸಾಕುಮಾಡು ಕೂಜನ!
ರವಿಯ ಮೈಯು ಕಾಯ್ದು ಹೋಯ್ತು
ಸರಸಿಯೆದೆಯು ಬೆಯ್ದುಹೋಯ್ತು
ಸಾಕು ನಿನ್ನ ಗಾಯನ!
ಬಿಸುಪೇರಿತೆ? ಬೇವಸವಿ!
ಮಾಂಗಾಯಿಯ ಪೇಯ ಸವಿ-
ಕೋಕಿಲವನು ದೂರದೆ!
ತಣ್ಣೆಳಲಿದೆ, ತಣ್ಣೀರಿದೆ
ಚಂದನವಿದೆ ತೆಂಬೆಲರಿದೆ
ಇನಿತು ತಾಪವಾರದೆ?

ಬೇವು ಮಾವು ನಗುತಿರೆ
ನಾವು ಹಿಗ್ಗಿ ನಗದಿರೆ
ದೇವ ಮೆಚ್ಚ ಬನ್ನಿರೆ
ಸ್ವಾಗತಿಸಲು ಹೊಸದಿನ
'ಶಾರ್ವರಿ'ಯ ಜನ್ಮದಿನ

* * *

ಕಂಡೊಲಿವ ಕಣ್ಮನಕೆ

ತಂಗಾಳಿ ಸುಳಿಯಿಲ್ಲಿ ತಿಂಗಳಿನ ಕಳೆಯಲ್ಲಿ
ಬಂಗಾರ ಬೆಳೆಯಿಲ್ಲಿ ತುಂಗ ಶೃಂಗಗಳಲ್ಲಿ
ಶೃಂಗಾರವಿಹುದಿಲ್ಲಿ ಶೃಂಗಾರವಿಹುದಲ್ಲಿ
ಕಂಡೊಲಿ ಕಣ್ಮನಕೆ ಈ ಸೃಷ್ಟಿಯಲ್ಲಿ.
ಹೊಂದಾವರೆಯು ಇಲ್ಲಿ ಮಂದಾರವಿಹುದಲ್ಲಿ
ಕುಂದಾರವಿಂದದಲಿ ಸಂಧ್ಯಾ ಪ್ರಭಾತದಲಿ
ಸೌಂದರ್ಯವಿಹುದಿಲ್ಲಿ ಸೌಂದರ್ಯವಿಹುದಲ್ಲಿ
ಕಂಡೊಲಿವ ಕಣ್ಮನಕೆ ಈ ಪೃಥ್ವಿಯಲ್ಲಿ.
ಅರಗಿಳಿಯ ಸಾಲಿಲ್ಲಿ ಮಳೆಬಿಲ್ಲ ಸಾಲಲ್ಲಿ
ಅರಸಂಚೆ ಬೆಂಚೆಯಲಿ ಮುಗಿಲೋಳಿ ಮಿಂಚಲ್ಲಿ
ಆನಂದವಿಹುದಿಲ್ಲಿ ಆನಂದವಿಹುದಲ್ಲಿ
ಕಂಡೊಲಿವ ಕಣ್ಮನಕೆ ಈ ವಿಶ್ವದಲ್ಲಿ.
ಝೇಂಕಾರ ಸ್ವನವಿಲ್ಲಿ ಓಂಕಾರ ಧ್ವನಿಯಲ್ಲಿ
ಮಂಗಳದ ರವವಿಲ್ಲಿ ಮಂಗಳದ ರವವಲ್ಲಿ
ಸರ್ವವೂ ಶಿವವಿಲ್ಲಿ ಸರ್ವವೂ ಶಿವವಲ್ಲಿ
ಅರಿದೊಲಿವ ಹೃದಯಕ್ಕೆ ಈ ಧಾತ್ರಿಯಲ್ಲಿ.

* * *

ಭೂಗೋಲ-ಖಗೋಲ

ಇದೋ ಭೂಗೋಲ, ಅದೋ ಖಗೋಲ,
ಎರಡರೊಳು ಅನಾದ್ಯಂತ ಪ್ರೇಮಲೀಲಾ!

ಎರಡರಪ್ಪುಗೆಯಲ್ಲಿ ಸಕಲ ಜೀವನಜಾಲ,
ಎರಡರಾಶ್ರಯ ಬಯಲು, ಅನಂತಕಾಲ!

ಇಬ್ಬರಲಿ ಹಗಲಿರುಳು ಮುಗಿಯದಿಹ ಒಗೆತನವು,
ಅಲ್ಲಿ ತಾರಾವಳಿಯು ಇಲ್ಲಿ ದೀಪಾಳಿ!

ಇಬ್ಬರೀ ನಲ್ವಗೆಯೊಳೆಲ್ಲಿಹುದು ಹಗೆತನವು?
ಅಲ್ಲಿ ಶಶಿಯಿಲ್ಲಿ ಶರಧಿಯ ಪ್ರಣಯಕೇಳಿ!

ಬಿಸಿಲಿನಿಂ ಬಾಯಾರಿ ಬಸವಳಿಯೆ ಭೂಮಾತೆ
ಕಂಬನಿಯ ಸರಿ ಸುರಿಸಿ ತಣಿಸುವಳು ಗಗನ!

ಕತ್ತಲೆಯ ರಾಹುವೀ ಪೃಥ್ವಿಯನು ಆವರಿಸೆ
ಶಶಿ ತಾರೆಗಳ ಬೆಳಕ ಕಳಿಸುವಳು ಗಗನ!

ಚಂಡ ಕಿರಣನ ಚಂಡ ಮುತ್ತಿಗೆಗೆ ಆ ಮುಗಿಲು
ತತ್ತರಿಸುತಿರೆ ನೋಡಿ ನೊಂದು ಭುವನ

ಹಗಲಿನೋಲಗಕಿಹದ ಉಗಿಯ ದೂತನನಟ್ಟಿ
ಮೇಘಗಳ ಪಡೆ ಕಳಿಸಿ ಉಳಿಸುವಳು ಗಗನ!

ನಕ್ಷತ್ರಮಣಿಖಚಿತ ನೀಲಿಮಾಂಬರ ಧರಿಸಿ
ಚಿತ್ತ ಮೋಹಕಳಾಗೆ ಮುಗಿಲರಾಣಿ

ಕುಸುಮಗಳ ಕೆಚ್ಚಿರುವ ಹಸಿರು ಸೀರೆಯನುಟ್ಟು
ಮೆರೆಯುವಳು ಧಾರುಣಿಯು ವಿಹಗವಾಣಿ.

ರಾತ್ರಿಯಲಿ ಈ ಧಾತ್ರಿ ಕೋಟಿ ನೇತ್ರವ ಧರಿಸಿ
ಆಕಾಶದದ್ಭುತವ ನೋಡುವಳು ಇತ್ತ;

ಇದಕೆ ಉತ್ತರವಾಗಿ ನಕ್ಷತ್ರ ನೇತ್ರದಲಿ
ಧಾರುಣಿಯ ಕರೆಯುವಳು ಗಗನ ಸಖಿಯತ್ತ

ಇವರ ಈ ಸೌಹಾರ್ದ ಸಹಕಾರ ಸುಮನಸವು
ಜಗದ ಜೀವಿಗಳಲ್ಲಿ ತೋರದೇಕೊ!

ತಾಯ ತಳಿಯಂತೆಯೇ ಪೀಳಿಗೆಯು ನಿಜವಿರಲು
ಇವರ ಸಮರಸ ನಮಗೆ ಬಾರದೇಕೊ!

* * *

ಬಾ ನನ್ನೀ ತೋಟಕ್ಕೆ

ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ!
ಎತ್ತರದಲಿ ಗರಿಗೆದರಿಹ ತೆಂಗಿನ ಕೌಂಗಿನ ಮರಗಳ ಸೊಂಪಿಹುದು
ಸುತ್ತಲು ಬಳಸಿಹ ಮಾವಿನ ಬೇವಿನ ಹಲಸಿನ ತರುಗಳ ತಂಪಿಹುದು
ಎತ್ತಲು ಮಲ್ಲಿಗೆ ಸಂಪಿಗೆ ಜಾಜಿಯ ಮನವನು ತಣಿಸುವ ಕಂಪಿಹುದು
ಬಿತ್ತರದಲಿ ಬೆಳೆದೀಳೆಯ ಬಾಳೆಯ ವೀಳ್ಯದ ಎಲೆಗಳ ಪೆಂಪಿಹುದು
ಹೂಗಳ ಜೊಂಪಿಹುದು,
ಫಲಗಳ ಬಿಣ್ಪಿಹುದು.
ಬಾ ನನ್ನೀ ತೋಟಕ್ಕೆ.
ಆನಂದದ ಊಟಕ್ಕೆ!
ನಿರ್ಮಲ ಶೀತಲ ರುಚಿಕರ ಶುಚಿಕರ ಧವಳಸುನೀಲಿಮ ಜಲವಿಹುದು
ತಾರೆಯ ಕೋರೆಯ ನೇರಿಲ ಪೇರಿಲ ಬೋರೆಯ ಬೆಳವಲ ಫಲವಿಹುದು
ಗಡ್ಡೆಯ ಗೆಣಸಿನ ಮೆಣಸಿನ ಅರಶಿಣ ಅಲ್ಲದ ನೆಲ್ಲಿನ ಹೊಲವಿಹುದು
ನಿಂಬಿಯ ಬಿಲ್ವದ ಚಂದನದತ್ತಿಯ ಮತ್ತಿಯ ಕದಳಿಯ ಕುಲವಿಹುದು
ಎತ್ತಲು ಚೆಲುವಿಹುದು
ಬತ್ತದ ನಲವಿಹುದು
ಸೃಷ್ಟಿಯ ಕಲೆಯಿಹುದು
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ!
ಅಲ್ಲಿಗೆ ಅಲ್ಲಿಗೆ ಬಳ್ಳಿಯ ಮನೆಗಳು ಪಲ್ಲವಿಸಿರುವುವು ನಲವೇರಿ
ಸೊಲ್ಲಿಗೆ ಸೊಲ್ಲಿಗೆ ಮೈನವಿರೆಬ್ಬಿಸಿ ಕರೆವುದು ಕೋಗಿಲೆ ಮುದವೇರಿ
ಹೊಂಗೇದಗೆಯಲಿ ಮರ್ಮರಸ್ವರದಲಿ ತೊನೆವುದು ಗಾಳಿಯು ಹೊರೆಯೇರಿ
ಭೃಂಗದ ಸಂಗೀತದ ಭಂಗಂಗಳು ಸುಳಿವುವು ಸುಳಿಗಾಳಿಯನೇರಿ
ಮೋದದ ಸೊನೆಯಿಹುದು
ನಾದದ ಕೆನೆಯಿಹುದು

ಮಧುರದ ತೆನೆಯಿಹುದು
ಬಾ ನನ್ನೀ ತೋಟಕ್ಕೆ–
ಆನಂದದ ಊಟಕ್ಕೆ!
ನಾನಾ ವರ್ಣದ ನಾನಾಪುಷ್ಪದ ನಾನಾಗಂಧದ ತೋಟವಿದು
ಸೃಷ್ಟಿಯ ಕರ್ತನ ಚಿತ್ರಕಶಕ್ತಿಯ ನಿತ್ಯವಿನೂತನ ಆಟವಿದು
ಸ್ಫುರಿಸುವ ರೂಪದ ಪ್ರಕೃತಿಯ ಪ್ರಮದೆಯ ನಿತ್ಯಮನೋಹರ ನೋಟವಿದು
ಭೂಮಿಯ ತಾಯಿಯ ಚಿರಸಿರಿವಂತಿಕೆ ಫಲವದ್ರೂಪದ ಬೇಟವಿದು
ಚೆಲುವಿನ ಚಿನ್ನಾಟವಿದು
ಸೊಬಗಿನ ಸುಳಿದಾಟವಿದು
ಸೊಗಸಿನ ಸವಿಕೂಟವಿದು
ಬಾ ನನ್ನೀ ತೋಟಕ್ಕೆ–
ಆನಂದದ ಊಟಕ್ಕೆ!
ವಿಶ್ವವೈಣಿಕನ ವಿಚಿತ್ರವೀಣೆಗಿಹ ವಿವಿಧ ವಿನೂತನ ಶ್ರುತಿಯಂತೆ
ನೆರೆದಿದೆ ಪರಮೆಯ ಶುಕಪಿಕನಿಕರದ ಸಾವಿರ ಸಾವಿರ ಸ್ವರಸಂತೆ
ನವಿಲಿನ ನಟನೆಯೊ, ಲತೆಗಳ ಕುಣಿತವೊ ಹೂಗಳ ನಗೆಯೋ ಸುರಕಾಂತೆ
ಹಾಕಿದ ಕುಸುರು ಕಸೂತಿಯ ತೆರದೀ ಹಸುರಿನ ಪಟ್ಟಿಯೊ–ಏನಂತೆ
ಎಲ್ಲ ಕಲಾತ್ಮಕವಿಹುದಿಲ್ಲಿ
ನವರಚನಾತ್ಮಕವಿಹುದಿಲ್ಲಿ
ಸರ್ವವು ಜೀವನ ಪೋಷಕವಿಲ್ಲಿ
ಬಾ ನನ್ನೀ ತೋಟಕ್ಕೆ
ಆನಂದದ ಊಟಕ್ಕೆ!
ಬಾ ಬಾ ಬೀಜವು ಮಣ್ಣೊಳು ನಶಿಸುತ ವಿಕಸನ ಪಡೆವುದ ನೋಡಿಲ್ಲಿ
ಮೊಳೆತಂಕುರಿಸಿಯೆ ಲತೆಯಲಿ ಕುಸುಮಿಸಿ ಧನ್ಯತೆ ಪಡೆವುದ ಕಾಣಿಲ್ಲಿ
ಹೂವೊಳು ಹಣ್ಣಲಿ ಸೃಷ್ಟಿಯ ಮರ್ಮವು ಪಸರಿಸುತಿರುವುದನರಿಯಿಲ್ಲಿ
ಶಾಂತಿಯನೊಂದಿದ ಪೂರ್ಣ ವಿಕಾಸವೆ ಜೀವನ ಸಫಲತೆ ತಿಳಿಯಿಲ್ಲಿ
ವಿನಾಶದಿ ಮೊಳೆವ ವಿಕಾಸವಿದು
ನವಜೀವನ ವಿನ್ಯಾಸವಿದು
ಸೌಂದರ್ಯ ವಿಲಾಸವಿದು
ಬಾ ನನ್ನೀ ತೋಟಕ್ಕೆ–
ಆನಂದದ ಊಟಕ್ಕೆ!

ಜಗವಿದು ತೋಟವು ತೋಟಿಗನಿದರೊಳು ಹೊಯ್ಯುವ ದಿನ ಹೊಸ ಬೀಜಗಳ

ಮೃಗಖಿಗ ನರನಗ ಲತೆ ಗುಲ್ಮಗಳ ಕ್ರಿಮಿ ಸಸಿ ಕೀಟಕ ಭೂಜಗಳ
ಎಲ್ಲಾ ಬೀಜವು ತಮ್ಮಯ ತಾಣದಿ ತೋರಲಿ ನಿಜ ರುಚಿ ತೇಜಗಳ
ಎಲ್ಲರ ಬೆಳವಿಗೆಗಿಲ್ಲಿಯೆ ಎಡೆಯಿದೆ ಎಲ್ಲಿಯದಿದು ಬದುಕಿನ ಜಗಳ?
ಇಲ್ಲಿದೆ ಸುಮಧುರ ಸಹಕಾರ
ಶಾಂತಿಯ ತುಷ್ಟಿಯ ಪರಿವಾರ
ಪ್ರೀತಿಯ ಮೈತ್ರಿಯ ಅಧಿಕಾರ
ಬಾ ನನ್ನೀ ತೋಟಕ್ಕೆ–
ಆನಂದದ ಊಟಕ್ಕೆ!

* * *

ಕೋಲಾಟ

ಕೋಲು ಸಖಿ ಶಾಂತಮುಖಿ
ಕೋಲು ಕೋಲು ತಾರೆ!
ಸುಗ್ಗಿಯೊಳು ಹಿಗ್ಗಿನೊಳು
ತೇಲು ತೇಲು ಬಾರೆ! ॥ ಪ ॥

ಬರಡು ಬನವು ಚಿಗಿತು ಬಳ್ಳಿ ಮೊಗ್ಗೆ ಮೊಗ್ಗೆ ಹೇರೆ
ಮಾಗಿ ಹೋಗಿ ಸುಗ್ಗಿ ಬಂತು ಹಿಗ್ಗಿ ಹೊರಗೆ ಬಾರೆ
ಈಸು ದಿನವು ಒಳಗೆ ಕುಳಿತೆ ಇನ್ನು ಮೊಗವ ತೋರೆ
ಕೋಲು ಸಖಿ.....

ವಸುಧೆಯೆಲ್ಲ ಮತ್ತೆ ಮೊಳೆದು ಹಸಿರು ಹಸಿರು ಮುರಿಯೆ
ಅನಿಲನಲೆಗಳೆಲ್ಲ ಕಂಪ ತಂದು ತಂದು ಸುರಿಯೆ
ಬೀಜಕೋಟಿಯೆಲ್ಲ ತನ್ನ ಒಳಗು ಚೆಲುವ ತೆರೆಯೆ
ಕೋಲು ಸಖಿ....

ಲಕ್ಷ ಲಕ್ಷ ಪಕ್ಷಿ ಕುಲವು ಪಕ್ಷ ಬೀಸಿ ಹಾರೆ
ಸಾನು ಕುಹರ ಕಣಿವೆಯಿಂದ ಗಾನತಾನವೇರೆ
ಚಂದ್ರ ತರಣಿ ತಾರೆಗಳಿಗೆ ಇಳೆಯ ಹಿಗ್ಗ ಸಾರೆ
ಕೋಲು ಸಖಿ.....

ಅಪ್ಪು ಪೃಥ್ವಿ ತೇಜ ವಾಯು ಸೃಷ್ಟಿ ನಾಟ್ಯವಾಡೆ
ಜಡವು ಅಜಡ ಜೀವತುಂಬಿ ಜನನ ಗೀತೆ ಹಾಡೆ
ನೀನು ಹೊಸತು ಹರಣ ಪಡೆದು ನೆಗೆದು ಮುಂದೆ ಮೂಡೆ
ಕೋಲು ಸಖಿ.....

ಎಲ್ಲ ಕಡೆಗೆ ಜೀವ ಸೃಷ್ಟಿ ಚೆಲ್ಲವರಿದು ಮೆರೆಯೆ
ಜಡದ ನಾಡಿಯಲ್ಲಿ ಸಹಿತ ಶಿವದ ಸೆಲೆಯು ಹರಿಯೆ
ಶಕ್ತಿ ಮತ್ತೆ ಶಿವದ ಶುಭದ ಪಥದಿ ಮುಂದುವರಿಯೆ
ಕೋಲು ಸಖಿ...

ಆತ್ಮ ರವಿಯ ಗುಪ್ತವಾಸ ಮುಗಿದುದೇಳೆ ಏಳೆ
ನವ್ಯ ಜಗದ ಭವ್ಯ ಕಾವ್ಯ ದಿವ್ಯವಾಗಿ ಹೇಳೆ
ತಡವು ಬೇಡ ಒಡನೆ ಮೂಡು ಸ್ವಲ್ಪವಿಹುದು ವೇಳೆ
ಕೋಲು ಸಖಿ....

ಹೊಸತು ಬಾಳು ಹೊಸತು ಕುಣಿತ ಕುಣಿದು ಕುಣಿದು ಬಾರೆ
ಜೀವರೆದೆಯ ದೇವನಡಿಗೆ ಮಣಿದು ಮಣಿದು ಬಾರೆ
ಬಾಳ ರಸದ ಕೋಶದಿಂದ ಜೇನ ಹನಿಯ ತಾರೆ
ಕೋಲು ಸಖಿ.....

ಮೊದಲ ಚೆಲುವೆ ಮತ್ತೆ ಹೊಸತು ಸೊಬಗ ಬೀರಿ ಬಾರೆ
ಹೃದಯದೊಲವೆ ಮತ್ತೆ ಹೊಸತು ಸೊಗವ ತೋರಿ ಬಾರೆ
ಇಳೆಯ ಎದೆಯ ನಲವೆ ಮತ್ತೆ ಚಿಮ್ಮಿ ತೂರಿ ಬಾರೆ
ಕೋಲು ಸಖಿ.....

* * *

ತೆರೆ ತೆರೆ

ಮೇಲೆ ಮುಗಿಲ
ತೆರೆ ತೆರೆ
ನೆಲದಿ ಜಲದ
ತೆರೆ ತೆರೆ
ಬಗೆಯ ಬೆಳಕು
ತೆರೆ ತೆರೆ

ಗಾಳಿ ಗಂಧ
ತೆರೆ ತೆರೆ
ಧ್ವನಿಯು ಕೂಡ
ತೆರೆ ತೆರೆ
ಸಕಲ ಸೃಷ್ಟಿ
ತೆರೆ ತರೆ
ಮೇಲೆ ಮುಗಿಲ ತೆರೆ ತೆರೆ
ಹೊರಗೆ ಚೆಲುವ
ತೆರೆ ತೆರೆ
ಎದೆಯ ಕದವ
ತೆರೆ ತೆರೆ
ಮನದ ಮುಸುಕ
ತೆರೆ ತೆರೆ
ಒಳಗೆ ಚೆಲುವ
ಕರೆ ಕರೆ
ಮನದ ಚೆಲುವ
ಮೆರೆ ಮೆರೆ
ಸಮಯ ಸ್ವಲ್ಪ
ತ್ವರೆ ತ್ವರೆ
ಮೇಲೆ ಮುಗಿಲ ತೆರೆ ತೆರೆ
ವನದ ಗಾನ
ತೆರೆ ತೆರೆ
ಮನದ ಗೇಯ
ತೆರೆ ತೆರೆ
ತೆರೆಗೆ ತೆರೆ
ಕೂಡೆ ತಿರೆ
ಸೊಗದ ತೊರೆ
ದುಗುಡ ತೊರೆ
ಖತಿಯ ಮರೆ
ಬಗೆಯ ತೆರೆ

ಚೆಲುವ ಕರೆ
ಒಲವ ಮೆರೆ
ಮೇಲೆ ಮುಗಿಲ ತೆರೆ ತೆರೆ
ಬೆಲುವೆ ಮುಸುಕ
ತೆರೆ ತೆರೆ
ಒಲವೆ ಕಣ್ಣ
ತೆರೆ ತೆರೆ
ತಿಳಿವೆ ನಿಜವ
ಒರೆ ಒರೆ
ನಲವೆ ಹರಿಸು
ತೆರೆ ತೆರೆ
ಬಲವೆ ಖಲತೆ
ತೊರೆ ತೊರೆ
ಶಿವನ ಶುಭವ
ಬೆರೆ ಬೆರೆ!
ಮೇಲೆ ಮುಗಿಲ ತೆರೆ ತೆರೆ

* * *

ವೈತಾಳಿ ಗಾಳಿ

ನೀ ಪ್ರಾಣ ಗಾಳಿ
ಸಕಲ ಜೀವಿಗಳುರದಿ ಉಸಿರಾಗಿ ಅಸುವಾಗಿ
ಸುಖದಿ ಸುಯ್ಗುಂಪಾಗಿ ದುಃಖ ದುಗುಡಗಳಲ್ಲಿ
ನಿಟ್ಟುಸಿರ ಸೆಕೆಯಾಗಿ ಹಠಯೋಗ ಸಾಧನೆಯ
ಸರ್ವಸ್ವ ನೀನಾಗಿ ಮೆರೆಯುತಿಹೆ ಗಾಳಿ–
ನೀ ಪ್ರಾಣ ಗಾಳಿ!

ನೀ ಮೃತ್ಯು ಗಾಳಿ!
ಬಿರುಗಾಳಿ ನೀನಾಗಿ ತೆರೆಯ ಹೊಡೆತದಿ ನೂರು
ಹಡಗಗಳ ಮುಳುಗಿಸುವೆ! ವೃಕ್ಷಗಳ ಕಿತ್ತೆಸೆವೆ!
ಪೈರುಗಳ ತುಳಿದೊರೆಸಿ ಮನೆ ಮಠಗಳನು ಕೆಡಹಿ
ನಾಶನಾಟ್ಯವನಾಡಿ ಭೋರ್ಗರೆವೆ ಗಾಳಿ–
ನೀ ಮೃತ್ಯು ಗಾಳಿ!

ನೀ ನಾದ ಗಾಳಿ!
ಬಿದಿರ ಕೊಳಲನು ಸೇರಿ ಮಧುರ ಸ್ವರ ನೀನಾಗಿ
ತಣಿಪೆ ಶ್ರೋತೃಗಳನ್ನು! ಜಲತರಂಗವ ನುಡಿಪೆ
ಕೆರೆತೊರೆಯ ತೆರೆಯಿಂದ! ಜೀವರೆದೆಯಿಂದೊಗೆದು
ಗಾನಸುಧೆ ನೀನಾಗಿ ಹರಿಯುತಿಹೆ ಗಾಳಿ–
ನೀ ನಾದ ಗಾಳಿ!

ನೀ ಮೋದ ಗಾಳಿ!
ಬಳ್ಳಿಗಳ ಕುಣಿಸುತ್ತ ಸಿಳ್ಳು ಹಾಕುವ ಬರುವೆ
ಮುಂಗುರುಳ ಹಾರಿಸುತ ಮುಂದಲೆಗೆ ಮುತ್ತಿಟ್ಟು
ಮೋಡಗಳನೋಡಿಸುತ ಮಂಜು–ಮುಸುಕನ್ನೆತ್ತಿ
ಹೋದಲ್ಲಿ ಹಿಗ್ಗನೇ ಹರಡಿಸುವೆ ಗಾಳಿ–
ನೀ ಮೋದ ಗಾಳಿ!

ನೀ ಗೂಳಿ ಗಾಳಿ!
ಢಿಕ್ಕಿ ಹೊಡೆಯುವೆ ಬೆಟ್ಟ ಘಟ್ಟ ಗಿರಿ ಶಿಖರಕ್ಕೆ
ಜಗಳ ತೆಗೆಯುವೆ ವನದಿ ಕಾಲು ಕೆದರಿ
ನೀರಾಟದಲ್ಲಿಯೂ ಹೋರಾಟ ತೋರಿಸುವೆ
ಯಾರ ದರಕಾರವೂ ನಿನಗಿಲ್ಲ ಗಾಳಿ–
ನೀ ಗೂಳ ಗಾಳಿ!

ವೈತಾಳಿ ಗಾಳಿ!
ಆಬಲೆಯರ ಮೈಸೇರಿ ಮನಬಂದ ತೆರದಲ್ಲಿ
ಚೇಷ್ಟೆಗೈಸುವೆ! ಮರಕೆ ಮರವನು ಮಸೆದು
ಬೆಂಕಿಯನು ಹುಟ್ಟಿಸುವೆ! ಮುಗಿದ ಮೊಗ್ಗೆಯ ಬಾಯ
ಮುತ್ತಿಟ್ಟು ತೆರೆಯಿಸುವೆ! ನೀ ಮೋಡಿ ಗಾಳಿ–
ವೈತಾಳಿ ಗಾಳಿ!

* * *

ಕಾಡಿನ ಹಾಡುಗಾರರು

ಕಾಡಿನ ಕವಿಗಳೆ ಓ ಕಲೆಗಾರರೆ
ಆಡಿರಿ ಹಾಡಿರಿ ನರ್ತಿಸಿರಿ!

ಕಲರವ ಮಂಜುಳ ಅಲೆಯಲೆಯಾಗಿರೆ
ಬನಶಂಕರಿಯನು ಕೀರ್ತಿಸಿರಿ!

ಗಿಳಿಗಳೆ ಅಳಿಗಳೆ ಕೋಕಿಲ ಕುಲಗಳೆ
ನಡೆಯಲಿ ನಿಮ್ಮಯ ವನಗಾನ!

ಆಗಲಿ ಸ್ಥಾವರ ಜಂಗಮಕೆಲ್ಲಾ
ಸಂತತ ಸಂಗೀತದ ಸ್ನಾನ!

ಮುಗಿಲನು ಮುಟ್ಟಲಿ ಮಂಗಳ ಧ್ವಾನವು
ಪಡೆಯಲಿ ಜಡ ಚೇತನ, ಪ್ರಾಣ!

ನುಡಿಸಲಿ ಜಲದಲೆ ಜಲತರಂಗವನು
ನಡೆಯಲಿ ಗಾಯನರಸ ಪಾನ!

ತೆಂಗಿನ ಗರಿ ತಲೆದೂಗಲಿ ಬಾಗಲಿ
ಗಿಡಮರಗಳು ಸಹ ನಲವೇರಿ!

ತಂಗಾಳಿಯು ಕೊಳಲೂದಲಿ ಸಾಗಲಿ
ಸ್ವರ ಸಮ್ಮೇಳನ ಹೊರೆಯೇರಿ!

ಬಳ್ಳಿಗಳುಬ್ಬಿನ ಹಬ್ಬದಿ ತಬ್ಬಲಿ
ಬಳಿಯಲಿ ನಿಂತಹ ತರುಗಳನು!

ಮುಚ್ಚಿದ ಮೊಗ್ಗೆಯು ಬಿಚ್ಚಲಿ ಬಾಯನು
ಹಸುಗಳು ಮರೆಯಲಿ ಕರುಗಳನು!

ಗಿರಿ ದರಿ ಗುಹೆಗಳು ಮಾರ್ದನಿಗುಡುತಿರೆ
ಹರಿವುದ ಮರೆಯಲಿ ಹೊಳೆಹಳ್ಳ!

ಜೇನಿನ ಹುಳುಗಳು ಜೋಲಿಯ ಹೊಡೆಯಲಿ
ಕುಡಿಯುತ ಹೂವಿನ ಸವಿಗಳ್ಳ!

ತುಂಬಿಗಳುಲಿಯಲಿ ಕುಸುಮದ ಬಳಿಯಲಿ
ಚುಂಬನ ಭಿಕ್ಷೆಯ ಬೇಡುತಲಿ!

ತೆಂಬೆಲರಲೆಯಲಿ ಹುಂಬನ ತೆರದಲಿ
ಕೂರ್ಪರ ಕೆಣಕುತ ಕಾಡುತಲಿ!

ರಾಗ ರಭಸದಲಿ ಸೋಗೆಯು ಕುಣಿಯಲಿ
ಬಣ್ಣ ಬಣ್ಣಗಳ ಗರಿಗೆದರಿ!

ಹರಿಣಿ ಹರಿಣಗಳು ಚುನ್ನವಾಡಲಿ
ತಮ್ಮ ನೆರಳ್ಗೆ ತಾವೇ ಬೆದರಿ!

ಸುಂಟರಗಾಳಿಯ ಕುದುರೆಯ ಕುಣಿಸುತ
ತರಗೆಲೆಯಾಡಲಿ ಚಿನ್ನಾಟ!

ದೊರೆಯಲಿ ತಿರೆಯಲಿ ಅಣುವಿಗು ಮಹತಿಗು
ಒಲವಿನ ಸಂಗವು ಒಡನಾಟ!

* * *

ತಾಜಮಹಲು

ಒಲವು ಕಲೆಗಳು ಕಲೆತರೆಂಥ ಚೆಲುವಿನ ಸೃಷ್ಟಿ
ಸಾಧ್ಯವೆಂಬುದ ನೋಡು ಇಲ್ಲಿ ಬಂದು
ಮೂಕ, ವಿಸ್ಮಿತ, ಭ್ರಮಿತ, ಭಾವನಾವಿಷ್ಟ, ಬಹು
ದಿಗ್ಭ್ರಾಂತ ದಿಙ್ಮೂಢನಾಗಿ ನಿಂದು!

ಲಾಲಿತ್ಯ ಔನ್ನತ್ಯ ಸೌಮ್ಯತ್ವ ಭೂಮತ್ವ
ಶೃಂಗಾರ ಗಾಂಭೀರ್ಯ ಸೌಂದರ್ಯವು
ನಾಮುಂದೆ ನೀಮುಂದೆ ಎಂದರಳುತಿದೆಯಿಲ್ಲಿ
ಹಿಗ್ಗಿನಲಿ ಹರಡುತಿದೆ ಮಾಧುರ್ಯವು?

ಕಣ್ಣ ಹನಿಯೇ ಹಾಲುಗಲ್ಲಾಗಿ ಕಟ್ಟಿದರು
ತೋರದೆಲ್ಲಿಯು ಶೋಕ ಭಾವವಿಲ್ಲಿ
ಪ್ರೇಮಬಲದಿಂ ಮರಣ ಗೆದ್ದ ಪ್ರೇಮಿಗಳಮಲ
ಧನ್ಯತೆಯೆ ಪಸರಿಸಿವೆ ಎಲ್ಲೆಡೆಗಳಲ್ಲಿ
ಏನು ಸೊಬಗಿನ ಸೃಷ್ಟಿ, ನಂಬಲೊಲ್ಲದು ದೃಷ್ಟಿ,
ನೋಡಿದಷ್ಟೂ ಬೆರಗು ಬೆಗಡು ಭ್ರಾಂತಿ!
ಇಲ್ಲಿಂದಲೇ ಚಂದ್ರ ಪಡೆವನೇನೋ ತನಗೆ
ಕೊರತೆಯಾದಾಗೊಮ್ಮೆ ಸಹಜ ಶಾಂತಿ!

ಮುಂದುವರಿಯಲು ಮನಸೆ ಇಲ್ಲವೆಂಬುವ ಹಾಗೆ
ಹರಿವಳಿದೊ ಮೆಲ್ಲನೆ ಯಮುನೆಯಲ್ಲಿ;
ಪರವಶತೆ, ನೀರವತೆ, ನಿಬ್ಬೆರಗು, ತನ್ಮಯತೆ,
ಮಂತ್ರಮುಗ್ಧತೆ ಮೋಡಿ ಮಾಯೆಯಿಲ್ಲಿ!

ಸುಕುಮಾರ ಸೌಧವಿದ ಸೂರ್ಯನೂ ನಯಭಯದಿ
ಮುತ್ತಿಡುವ ಮೋಡಗಳ ಮರೆಯಲ್ಲಿ ಬಂದು!
ಚಂದ್ರ ಗೋಳಾಡುವನು ಬೆಳಗಾಗೆ, ಬಿಟ್ಟಿದನು
ಹೋಗಬೇಕಾಯಿತೇ ಎಂದು ನೊಂದು!

ಕಳಚಿ ಬೀಳುವ ಬಯಕೆಯಿಂದ ಕಳಕಳಿಸುವುವು
ತಾರೆಗಳು ಇಲ್ಲಿಗೇ ಹೂಗಳಾಗಿ!
ಮೋಡಗಳು ಬಾಗುತಿವೆ ಹನಿಯ ಹಾರವ ಹಾಕೆ
ಗಾಳಿ ಸುಳಿದಾಡುತಿದೆ ಕಾಮಿಯಾಗಿ!

ಜಗದ ಸುಂದರ ಶಿಲೆಗಳೆಲ್ಲ ಸೇರಿವೆಯಿಲ್ಲಿ
ಇದುವೆ ಸಂಗಮ ಸಕಲ ಸೌಂದರ್ಯಕೆಂದು

ಸಸಿಗಲ್ಲ ಜಾಳಿಗೆಗಳೊಂದರೊಳು ಒಂದಿಲ್ಲ
ಕಲೆಗೆ ವೈವಿಧ್ಯವಿದು ಅನಿವಾರ್ಯವೆಂದು
ಯುಮುನೆಯಾ ಕಡೆ ನೋಡು ಅರಮನೆಯ ಗುಮ್ಮಟದಿ

ಬೆರಳಗಲ ಮಣಿಗಳಲಿ ತಾಜಮಹಲ-
ಸಂಪೂರ್ಣ ಚಿತ್ರವನು ಷಾಜಹಾನನು ಮಲಗಿ

ನೋಡುತ್ತಲೇ ಮಡಿದ ಸ್ಥಾನ ವಿಮಲ!
ಷಾಜಹಾನನಿಗಿಂತ ದೊಡ್ಡ ಸಾಮ್ರಾಟರೂ
ಮಮತಾಜಳಿಂದಲೂ ಸುಂದರಿಯರು
ಎನಿತು ಜನರಾಗಿಲ್ಲ ಈ ವಿಪುಲ ಪೃಥ್ವಿಯಲಿ?

ಯಾರಿವರ ಸೌಭಾಗ್ಯ ಪಡೆದಿರುವರು?
ಚೆಲುವು ನೆಟ್ಟಿಹ ಗೆಲುವುಗಂಬದಂತಿಹ ತಾಜ-
ಮಹಲಲ್ಲಿ ಮಲಗಿಹರು ಇವರಿಬ್ಬರು!
ಎಂದೆಂದಿಗೂ ಪ್ರೇಮಜೀವಿಗಳಿಗೆಲ್ಲರಿಗೆ
ಅಭಿಮಾನಧನರಲ್ತೆ ಇವರಿಬ್ಬರು?

ಎಲ್ಲ ಪ್ರಿಯ ಪ್ರಿಯೆಯರೂ ಇವರಂತೆ ಪ್ರತ್ಯಕ್ಷ
ತಾಜಮಹಲಲಿ ಮಲಗಿ ಮೆರೆಯಬಹುದೆ?

ಆದರೇನಾಯ್ತೆದೆಯ ಪ್ರೇಮದಿಂದಲೆ ತಾಜ-
ಮಹಲ ಕಟ್ಟಲಿಕಾರ ಅಡ್ಡಿಯಿಹುದೆ?

ಪ್ರೇಮವಿರೆ ಗುಡಿಸಲೇ ತಾಜಮಹಲಾಗುವುದು
ಇಲ್ಲದಿರೆ ಅರಮನೆಯೆ ಸೆರೆಮನೆಗೆ ಸರಿಯು!

ತಾಜಮಹಲನು ನೋಡಿ ರಾಜವೈಭವ ಬಯಸ
ಬೇಡ, ಪ್ರೇಮವೆ ತಾಜಮಹಲ ಗುರಿಯು!

* * *

ಕಲೆಯ ಕೈಲಾಸ

ವೇರೂಳಿನ ಕೈಲಾಸವ ಕಂಡಿಹೆಯಾ ಗೆಳೆಯ
ಕಂಡಿಹೆಯಾ ಕರುನಾಡಿನ ಪರಮೋನ್ನತ ಕಲೆಯ
ರಮಣೀಯತೆ ಪರಿಪೂರ್ಣತೆ ಪಡೆದಿರುವೀ ನೆಲೆಯ
ಆನಂದದ ಅರವಟ್ಟಿಗೆ ಸೌಂದರ್ಯದ ಸೆಲೆಯ
ಎಡೆಯೆಡೆಯಲಿ ಎಡೆಯಾಡುವ ಕಡುಚೆಲ್ವಿನ ಹೊಳೆಯ.
ಬಹು ಪುಣ್ಯದ ಬೆಳೆಯ
ಕ್ರತು ಶಕ್ತಿಯ ಕಳೆಯ!

ಕಡಿಯುತ್ತಲೆ ಕೆಳಗಿಳಿದರು ಕಗ್ಗಲ್ಲಿನ ಗಿರಿಯ
ಕಂಡರಿಸುತ ಒಳಹೊಕ್ಕರು ಕೈಲಾಸದ ಸಿರಿಯ
ಕಲೆಗಾರನ ಕರಸ್ಪರ್ಶವು ಗಿರಿವಸನದ ನಿರಿಯ
ಕಳಚುತ್ತಿರೆ ಸೊಬಗರಳಿತು ಗುಹೆಗಳಲೀ ಪರಿಯ
ಸಚರಾಚರ ಚಿರವಿಸ್ಮಿತವಿಲ್ಲಿಯ ನೆರೆಹೊರೆಯ-
ಇದು ಸೋಜಿಗ ತಿರೆಯ
ಇದು ಕಾಣದು ಜರೆಯ!

ಏನದ್ಭುತ ಕಲ್ಪನೆಯಿದು ವಿಸ್ಮಯಕರ ಶಿಲ್ಪ
ಕಂಡಿಹೆಯಾ ಈ ಸೂಕ್ಷ್ಮವ ಈ ಭವ್ಯತೆ ಬಿಣ್ಪ
ಇದು ಪಾವನ ಪ್ರತಿಭಾಂಗನೆ ವಿಶ್ರಮಿಸುವ ತಲ್ಪ

ಸಾರುತ್ತಿದೆ ಈ ನಾಡಿನ ನಯನುಣ್ಪನು ಒಳ್ಪ
ಉರುಳಿದರೂ ತೆರಳಿದರೂ ಕಲ್ಪದ ಮೇಲ್‌ಕಲ್ಪ
ಕುಂದಿಸದೀ ಸೈಪ
ಈ ಗೆಯ್ಮೆಯ ಬಲ್ಪ!
ಪುಟಿಯುತ್ತಿದೆ ಪಾಷಾಣದಿ ಪ್ರಾಗ್ವೈಭವ ಜೀವ
ವಿಗ್ರಹಗಳ ಮುದ್ರೆಗಳಲಿ ನಾನಾರ್ಥದ ಭಾವ
ಪುರುಷಾರ್ಥಕೆ ಮಣಿಯುತ್ತಿದೆ ಇದೊ ನಾಡಿನ ದೈವ
ಅಣಕಿಸುತಿದೆ ತಾರುಣ್ಯವು ವಾರ್ಧಕ್ಯವ ಸಾವ
ಕಂಡಿಹೆಯಾ ಬ್ರಹ್ಮಾಂಡದಿ ನೀನಿಂತಹ ಠಾವ–
ಈ ಶಕ್ತಿಯ ಶುಭವ
ಈ ಸುಂದರ ಶಿವವ?
ಇದೊ ವೀರವು ಶೃಂಗಾರವು ಕಾರುಣ್ಯವು ಹಾಸ್ಯ
ಸಾಹಿತ್ಯದ ಪರಮಾಗಮಕಿದೊ ಶಿಲ್ಪದ ಭಾಷ್ಯ
ಇದೊ ಗೇಯವು ಅದೊ ವಾದನ ಆಹ್ಲಾದಕ ಲಾಸ್ಯ
ಕಲೆ ಶಾಸ್ತ್ರವು ಸಾಹಿತ್ಯವು ಸಂಗಮಿಸಿಹ ದೃಶ್ಯ
ಚಣಚಣವೂ ಕಣಕಣದಲಿ ಕುಣಿಯುತ್ತಿದೆ ಪಶ್ಯ–
ಸೌಂದರ್ಯ ರಹಸ್ಯ
ಜೀವನ ಸ್ವಾರಸ್ಯ!
ಇದೊ ಬುದ್ಧನ ನಿರ್ವಾಣವು ಅದೊ ಇಂದ್ರನ ಶಾಲೆ
ಗಜಲಕ್ಷ್ಮಿಯ ಅಭಿಷೇಕವು ಭಿಕ್ಷಾಟನ ಲೀಲೆ
ಕುಕ್ಕುರಿಸಿಹ ದಶಕಂಠನು ಶಿತಿಕಂಠನು ಮೇಲೆ
ಹೂಬಳ್ಳಿಗೆ ಕೋಮಲತೆಯ ಕಲಿಸುತ್ತಿಹ ಬಾಲೆ
ನಿಶ್ಚಲತೆಯೆ ಚಂಚಲತೆಗೆ ಕಲಿಸುತ್ತಿದೆ ಸಾಲೆ!
ಇದು ಪೃಥ್ವಿಯ ಮೇಲೆ
ಕೃತಿಜ್ಯೋತಿರ್ಮಾಲೆ!
ಆರುಹಂತನ ಚೈತ್ಯಾಲಯ ಅಪ್ಸರೆಯರ ಕುಣಿತ
ಎನಿತೆನಿತೋ ಮಣಿತಗಳಿವು ಭಂಗಿಗಳಿವು ಭಣಿತ
ಪಾಷಾಣದ ನೂಪುರಗಳೆ ಭಾವಿಸೆ ಝಣಝಣಿತ

ಕಗ್ಗಲ್ಲಿನ ವೀಣೆಯು ಸಹ ಓ ಭಾವುಕ ಕ್ಷಣಿತ
ಬರಿ ನೋಟಕೆ ಬರಿ ಶಿಲ್ಪವು ಪರಿಭಾವಿಸೆ ಧ್ವನಿತ–
ಇದರಲ್ಲಿಯೆ ವಿನುತ
ಆತ್ಮಶ್ರೀ, ಘನಿತ!
ಉಳಿ ಮುಟ್ಟಿದ ಶಿಲೆಯೆಲ್ಲವು ಕಲೆಯಾಯಿತು ಇಲ್ಲಿ
ಮಲೆಯೆಲ್ಲವು ಚೆಲುವೊಲವಿಗೆ ಬಲೆಯಾಯಿತು ಇಲ್ಲಿ
ಚೆಂಗಲ್ಲೇ ಮಾಂಗಲ್ಯಕೆ ಸೆಲೆಯಾಯಿತು ಇಲ್ಲಿ
ಕಲೆಯೊಲುಮೆಯೆ ಇಹಜನ್ಮದ ಬೆಲೆಯಾಯಿತು ಇಲ್ಲಿ
ಹಿರಿಗೆಯ್ಮೆಯ ಸಾಹಸಗಳ ನರವೂಗಳ ಚೆಲ್ಲಿ–
ವರಶಿಲ್ಪದ ಬಳ್ಳಿ
ಮೆರೆಯುತ್ತಿಹುದಿಲ್ಲಿ!
ಇದು ಕಲ್ಲಿನ ಕೈಲಾಸವೆ ಕಲೆಗಳ ಕೈಲಾಸ
ಹಿರಿ ಧ್ಯೇಯದ ಗುರುಸಾಧನೆ ವರ ಸಿದ್ಧಿಯ ವಾಸ
ನಾವೀನ್ಯದ ತಾರುಣ್ಯದ ಆರುಣ್ಯದ ಹಾಸ
ಪುರುಷಾರ್ಥದ ಪರಮಾರ್ಥದ ಸಂಯೋಗ ವಿಲಾಸ
ನಶ್ವರದಲಿ ಶಾಶ್ವತವನು ಸೆರೆಹಿಡಿದಿಹ ಪಾಶ!
ಇಲ್ಲೆಲ್ಲಿಯ ಕ್ಲೇಶ.
ಇದಕೆಲ್ಲಿದೆ ಹ್ರಾಸ?
ಈ ಪುಣ್ಯಕೆ ಲಾವಣ್ಯಕೆ ಪ್ರಾವೀಣ್ಯಕೆ ಬಾಗು
ಈ ಚಿತ್ರಕೆ ಚಾರಿತ್ರ್ಯಕೆ ಪಾವಿತ್ರ್ಯಕೆ ಬಾಗು
ಈ ನೃತ್ಯಕೆ ಸಾಂಗತ್ಯಕೆ ಸಾಹಿತ್ಯಕೆ ಬಾಗು
ಲಾಲಿತ್ಯಕೆ ಔನ್ನತ್ಯಕೆ ಭೂಮತ್ವಕೆ ಬಾಗು
ಅಲ್ಪತ್ವವ ಕ್ಷುದ್ರತ್ವವ ಕ್ಷಣಿಕತ್ವವ ನೀಗು–
ನರಪುಂಗವನಾಗು,
ಶಿವಪಥದಲಿ ಸಾಗು!

* * *

ಪೂರ್ವಾಂಗನೆ ಪಶ್ಚಿಮಾಂಗನೆಗೆ

ನಾ ಕರಿಯಳೆಂದು ನೀ ಜರೆಯಬೇಡ ಬಿಳಿಗೆಳತಿ ಗರ್ವದಿಂದ
ಕಪ್ಪಿಗಿಂತ ಬಿಳಿಬಣ್ಣ ಹೆಚ್ಚು ಹೇಳಾವ ಹಿರಿಮೆಯಿಂದ
ಬಿಳಿಯ ಮೋಡ ನೀಡುವುದು ಇಳೆಗೆ ಬರಿ ಬೆಡಗು ಅಂದಚೆಂದ
ಇಳೆಯ ಜೀವ ಮಳೆ ಬರುವುದಕ್ಕ ಕರಿ ಮೋಡ ಮಾತ್ರದಿಂದ

ಕಣ್ಗೆ ನೋಟ ಕರಿಯಾಲಿಯಿಂದಲೇ ಕುರುಡು ಬರಿಯ ಬಿಳಿಪು
ಬಿಳಿಯ ಕೇಶಗಳೆ ಮುಪ್ಪು ಯೌವನದ ವಿಜಯಧ್ವಜವು ಕಪ್ಪು
ಕಪ್ಪು ಭೂಮಿಯಲೆ ಬೆಳೆಯಬೇಕು ನೀ ತೊಟ್ಟ ನೂಲ ಬಿಳಿಪು
ಬಿಳಿಯ ಮಂಜಿನಲಿ ಬೆಳೆಯಬಹುದೆ? ಬೆಳೆಯುವುದು ಎಲ್ಲ ಕಪ್ಪು!

ಕರಿಯಳಾದರೂ ಉದಯ ನಾನು ನೀನಿರುವೆ ಅಸ್ತಮಾನ
ನೀನೆ ತಾವರೆಯು ನಾನೆ ನೈದಿಲೆಯು ಒಂದೆ ಜಲ ನಿಧಾನ
ನೀ ಬಿಳಿಯ ಹಾಳೆ ನಾ ಕಪ್ಪು ಮಸಿಯು ಆಗೋಣ ಪ್ರೇಮ ಕವನ
ದೇಹಕ್ಕೆ ಬಣ್ಣ ದೇಶಕ್ಕೆ ಬಣ್ಣ ಆತ್ಮಕ್ಕೆ ಯಾವ ಬಣ್ಣ?

ನೀ ಹೆಮ್ಮೆಪಡುವ ಯಾಂತ್ರಿಕತೆಯೆಲ್ಲ ಭಾವಿಸಲು ಕಪ್ಪು ಕಪ್ಪು
ಕಬ್ಬಿಣವು ಕಪ್ಪು ಯಂತ್ರಗಳು ಕಪ್ಪು ಕಲ್ಲಿದ್ದಲೂ ಕಪ್ಪು
ವಾಹನದ ಗಾಲಿ ಅದರುಸಿರು ಕಪ್ಪು ದಾಂಬರಿನ ಬೀದಿ ಕಪ್ಪು
ಈ ಕಪ್ಪು ಪ್ರಿಯವು, ಅಪ್ರಿಯವದೇಕೆ ಹೇಳೆನ್ನ ಮೈಯ ಕಪ್ಪು?

ಓ ಶ್ವೇತಕನ್ಯೆ ಕಲಿಸುವೆನು ಬಾರೆ ಶೃಂಗಾರ ಸಾರವನ್ನು
ಕುಂಕುಮವನಿಡುವೆ ಬಿಡು ಕೆಂಪು ಕೇಡು ಎಂಬೀ ವಿಚಾರವನ್ನು
ಅರಿಸಿನವ ತೊಡೆವೆ ತೊಡೆ ಹಳದಿ ತ್ಯಾಜ್ಯವೆಂದೆಂಬ ವಾದವನ್ನು
ಹಚ್ಚುವೆನು ಕಣ್ಗೆ ಕಾಡಿಗೆಯ ನೋಡು ದರ್ಪಣದಿ ರೂಪನ್ನು!

ನಾ ಕಪಿಲೆ ನನ್ನ ಕೆಚ್ಚಲಲಿ ಬಿಳಿಯ ಹಾಲಾಗಿ ಬಾಳು ಬಾರೆ
ನೀ ಮೃಗವು ನಿನ್ನ ನಾಭಿಯೊಳು ನಾನು ಕಸ್ತೂರಿಯಪ್ಪೆ ಬಾರೆ
ನಾ ನೀಲಮೇಘ ನನ್ನುದರದಲ್ಲಿ ಸೆಳೆಮಿಂಚಿನಂತೆ ತೋರೆ
ನೀ ಶ್ವೇತಪದ್ಮ ನಾ ನೀಲಭೃಂಗ ನಿನ್ನೆದೆಯ ಮಧುವ ಹೀರೆ!

ಈ ವರ್ಣಮೈತ್ರಿ ಅನಿವಾರ್ಯ ಗೆಳತಿ ಸರ್ವತ್ರ ವಿಶ್ವ ಪ್ರಕೃತಿ
ತೋರುವುದು ಇದನೆ ಸಾರುವುದು ಇದನೆ ಇದೆ ಅದರ ನೀತಿ
ಹೊತ್ತಾರೆ ಕೆಂಪು ಮತ್ತಷ್ಟು ಹಳದಿ ಹೊತ್ತೇರೆ ಬಿಳಿಪು ಗೆಳತಿ
ನಿನ್ನಂಗ ಬಿಳಿದು ಇದೊ ನೆರಳು ಕಪ್ಪು ಎಲ್ಲಿಹುದು ವೈರ ಗೆಳತಿ?

* * *

ಸೇತುವೆಯ ಮೇಲೆ ಸೂರ್ಯಾಸ್ತ

ಹಳೆಯ ಹೊಸ ಹೈದರಾಬಾದುಗಳ ಸಂಧಿಸುವ
ಸೇತುವೆಯ ಮೇಲೊಮ್ಮೆ ನಿಂತು ನೋಡು

ರಂಜಿಸುವ ಹೊಂಬಿಸಿಲ ಚುಂಬನವನೀಯುತ್ತ
ಸಂಜೆ-ವೆಣ್ ಬರುವಾಗ ಸ್ವಾಗತವ ನೀಡು

ಸುತ್ತಲೂ ಹಬ್ಬಿರುವ ಬಿತ್ತರದ ಸೌಧಗಳ
ಸುತ್ತಾಡಿ ನಿಲ್ಲುವುದು ಮೂಸಿಯಲಿ ದೃಷ್ಟಿ

ತುಂಬು ಚಿತ್ರಗಳನ್ನು ಬಿಂಬಿಸಲು ಅಂಬುವಿನ
ಕೊರತೆಯಿದ್ದರು ಎಂಥ ಚಿತ್ರ -ಸೃಷ್ಟಿ!

ಬೇಗೆ ಹೊತ್ತಿರುವಂಥ ಹೊಂಬೆಟ್ಟದೊಲು ಹೊಳೆವ
ಪಶ್ಚಿಮ ದಿಗಂತದೀ ಪಡಿನೆಳಲು ಬೇಕೆ?

ಭಾಗ್ಯನಗರಿಯ ಸ್ವರ್ಣಮುಕುಟದೊಲು ಮೂಡಿರುವ
ಹೊಂಗದಿರನೀ ರಮ್ಯ ಪ್ರತಿಬಿಂಬ ಬೇಕೆ?

ಜಲದಿ ಪಡಿಮೂಡಿರುವ ಮೋಡಗಳು ತೋರುವುವು
ನೈಜ ನೌಕೆಗಳಂತೆ ಸೊಗದ ಸೆಲೆಯಾಗಿ;

ಇಕ್ಕೆಲದ ಉಪವನದ ಸೌಂದರ್ಯ ಸಾರವೇ
ಹರಿದಹಾಗಿದೆ ಕೆಳೆಗೆ ತೆರೆಯು ತೆರೆಯಾಗಿ!

ಇನಿತೆಲ್ಲ ಚಿತ್ರಗಳ ಇದ್ದಂತೆ ತಳೆಯುವುದು
ವಾರಿ ದಾರಿದ್ರ್ಯದಿಂ ಸಾಧ್ಯವಾಗದ ವ್ಯಥೆಯೊ-

ತಳೆದು ರೂಪದ ರಾಶಿ ವಿಕೃತವಾಗುವ ಭಯವೊ-
ಹಿಂದೆ ನೆರೆಹಾವಳಿಯ ಶೋಕ ಕಥೆಯೊ?

ಏನು ಕಾರಣ ಅರಿಯೆ, ಮೂಸಿ ಮೈಮರೆದಂತೆ
ಹರಿವುದನೆ ಮರೆತಿಹಳು ನಿಬ್ಬೆರಗಿನಲ್ಲಿ!

ಸೇತುವೆಯ ಮೇಲೆಯೋ ಸಾವಿರ ಶರೀರಗಳು
ಓಡಾಡುತಿವೆ ವಿವಿಧ ವಾಹನಗಳಲ್ಲಿ!

ಹೈದರಾಬಾದಿನ 'ನಯಾಪುಲ್' ಎಂಬ ಸೇತುವೆ

ರಾಷ್ಟ್ರ ಸಂಘದ ಮೇಲೆ ಸರ್ವದೇಶದ ವಿವಿಧ-
ವರ್ಣರಂಜಿತ ಧ್ವಜಗಳೆಸೆಯುವಂತೆ-

ಸೇತುವೆಯ ಮೇಲೆಯೂ ಬಣ್ಣ ಬಣ್ಣದ ವಸನ-
ವಾಂತ ಜನ ಶೋಭಿಪರು ಸುರಚಾಪದಂತೆ!

ಅತ್ತ ನ್ಯಾಯಾಲಯವು ಇತ್ತ ಸ್ವಾಸ್ಥ್ಯದ ನಿಲಯ
ಮಧ್ಯದಲಿ ನವೆಂಬರ ನಿಸರ್ಗ ರಮಣಿ;

ನೋಡುತ್ತ ನಿಂತಿರಲು, ಮೈನವಿರನಾಂತಿರಲು,
ಮುಂದುವರಿಯಿತು ಕವಿಯ ವಿಚಾರಸರಣಿ:

ಹೊಳಲ ಹೊಳಹನು ಹಾಕುವವರಿಗಿದು ತಿಳಿದಿತ್ತೋ
ಇಲ್ಲವೋ ನಾನರಿಯೆ, ಕವಿ ಕಂಡನಿಂತು-

ಸಂಧ್ಯಾ ಸಮೀರಣನ ಅಸ್ತಗಿರಿ-ಶಿರ-ರವಿಯ
ತೆರೆ- ಕಿರಣ ಮಿಡಿಯುತಿರೆ ಹೃದಯ ತಂತು:

ಆರೋಗ್ಯಧಾಮವಿದು ಆರೈಯೆ ಬೋಧಿಪುದು
ಸ್ವಾಸ್ಥ್ಯವನು ಶಕ್ತಿಯನು ಗಳಿಸಿರೆಂದು;

ನ್ಯಾಯಮಂದಿರವಿತ್ತ ಸಾರುತಿದೆ ಶಕ್ತಿಯನು
ನ್ಯಾಯರಕ್ಷಣೆಗಾಗಿ ಬಳಸಿರೆಂದು!

ಆರೋಗ್ಯವೀವ ಬಲ-ಜ್ಞಾನ ಕ್ರಿಯೆಗಳನೆಲ್ಲ
ನ್ಯಾಯಮಾರ್ಗದಿ ನ್ಯಾಯಕಾಗಿ ವ್ಯಯಿಸಿ

ನ್ಯಾಯವನು ಶಕ್ತಿಮಯ ಶಕ್ತಿಯನು ನ್ಯಾಯಪರ
ಮಾಡಿರೈ ಅನ್ಯಾಯವನ್ನು ಜಯಿಸಿ!

ಬಲವಂತರಾಗಿ ಬಹು ನ್ಯಾಯ ಸಮ್ಮತ ಕರ್ಮ
ಗೈಯುತ್ತ ನೂರ್ಗಾಲ ಬಾಳಿರಿಲ್ಲಿ!

ದೌರ್ಬಲ್ಯ ದೌರಾತ್ಮ್ಯ ದೌರ್ಜನ್ಯ ದೌಷ್ಟ್ಯಗಳ
ದ್ವೇಷ ತ್ವೇಷಗಳನ್ನು ಹೂಳಿರಿಲ್ಲಿ!

ನ್ಯಾಯಮಂದಿರ ಸ್ವಾಸ್ಥ್ಯಮಂದಿರದ ಮಧ್ಯದಲಿ
ಸೂರೆಯಾಗಿಹ ಸೃಷ್ಟಿ ಸೌಂದರ್ಯವಿಂತು

ನೀಡುತಿದೆ ಸಂದೇಶ – "ತಾಳಿರೈ ಪರಿತೋಷ
ಈ ರೂಪ ಮಂದಿರದಿ ಬಂದು ನಿಂತು!

ಸೌಂದರ್ಯ ಸ್ನಾನದಿಂ ಶುದ್ಧಾತ್ಮರಾಗುತಲಿ
ಶಕ್ತಿ ಸಂಪಾದಿಸಿರಿ ನ್ಯಾಯಕಾಗಿ;

ನ್ಯಾಯ–ಬಲ–ರೂಪ–ತ್ರಿವೇಣಿಯಾಗಲಿ ನಿಮ್ಮ
ಜೀವನವು ಪ್ರೇಯ ಮೇಣ್ ಶ್ರೇಯಕಾಗಿ!"

* * *

ಸಂಧ್ಯಾಚಿತ್ರ

ಬಯಲ ಭಿತ್ತಿಯ ಮೇಲೆ ಮುಗಿಲೋಳಿ ಚಿತ್ರಿಸಿದೆ
ಹೊಂಬಿಸಿಲ ಬಣ್ಣದಲಿ ರಮಣೀಯ ಚಿತ್ರ

ಅದನು ಸರಿಪಡಿಸುತಿದೆ ನಯ ಭಯದಿ ಎಲರುಗುರು
ಬರೆವಂತೆ ಕಣ್ವಸುತೆ ಪ್ರಣಯಪತ್ರ!

ಅದರ ಸೊಬಗನು ಸವಿಯೆ ಮನೆಮನೆಗೆ ತೆರೆಯುತಿವೆ
ಸೊಡರುಗಳ ಹಣತೆಗಳ ಹೊಳೆಹೊಳೆವ ನೇತ್ರ

ಇಂಥ ಸೊಬಗಿನ್ನೊಮ್ಮೆ ಸಿಗದೆಂದು ಇಣುಕುತಿವೆ
ನಿಯತ ಕಾಲಕೆ ಮೊದಲೆ ಮುಗಿಲ ನಕ್ಷತ್ರ

ಮುಳುಗುತಿಹ ದಿನಕರನು ಮೂಡುತಿಹ ಉಡುಗಣಕೆ
ಹೇಳುತಿಹ, "ಮುಗಿದುದೈ ನನ್ನ ಪಾತ್ರ!

ನೀವಿನ್ನು ಬೆಳಗಿರಿ, ನಿಮ್ಮಲ್ಲೆ ಜನಿಸಲಿ,
ರಾತ್ರಿಯನೆ ಬೆಳಗುವಾ ಶಿವನಮೃತ ನೇತ್ರ!"

ಈ ದಿವ್ಯ ಸಂದೇಶ ಕೇಳಿ ಕಳೆಯೇರಿದುವು
ತಾರೆಗಳ ಮ್ಲಾನಮುಖ–ಮೋಡ ಮಾತ್ರ–

'ಸೂರ್ಯನೂ ಮುಳುಗಿದನು, ಚಂದ್ರನೂ ಬರಲಿಲ್ಲ!'
ಎಂದು ಕಪ್ಪೇರಿದುವು ಕುದಿದು ವಕ್ತ್ರ!

'ಸೂರ್ಯಾಸ್ತವೂ ಲೇಸು, ಚಂದ್ರ ಬರದಿರೆ ಲೇಸು!'
ಎಂದುದಾ ಕಡೆ ರಾತ್ರಿ, ವಹಿಸಿ ಸೂತ್ರ–

‘ಶಶಿಯುದಿಸದಿದ್ದರೂ ರವಿ ಮತ್ತೆ ಬಂದಾನು–
ತಂದಾನು ಮತ್ತೊಮ್ಮೆ ಪ್ರಕಾಶಸತ್ರ!’

ಎಂಬಾಸೆಯಿಂದಲೇ ಕವಿದ ನಿಶೆಯಲ್ಲಿಯೇ
ಕಾದಿಹುದು ತಾಳ್ಮೆಯಲಿ ಹತಾಶ ಧಾತ್ರಿ;

‘ದಿವರಾತ್ರಿಯೆಂಬುದಿದು ಭ್ರಮೆಯಲ್ತೆ?’ –ಎಂಬ ಕವಿ.
‘ಆಶೆಯೇ ಹಗಲು, ನಿರಾಶೆ ರಾತ್ರಿ!’

* * *

ಚಿಕ್ಕೆ

ಬಾಂಗೆರೆಯ ಮೀಂಗಳಿವು
ಕತ್ತಲೆಯ ಕಂಗಳಿವು
ಗಗನ ವಿಹಗಂಗಳಿವು
ದೇವದೀಪಂಗಳಿವು
  ಭಗಣ ಸಂಕುಲವು!

ಚಿಕ್ಕೆ ಬಾನಿನ ಹಕ್ಕಿ
ಹಕ್ಕಿ ಭೂಮಿಯ ಚಿಕ್ಕಿ
ಆಗಸದ ಹೊಲಗದ್ದೆ
ಬೆಳೆದ ಜೋಳವು ಅಕ್ಕಿ
  ನಕ್ಷತ್ರ ಕುಲವು!

ಆಗಸದ ತವೆಯಲ್ಲಿ
ಅರಳ ಹುರಿವವಳೆಲ್ಲಿ?
ಅರಳೆ ಸಿಡಿಯುತ ಚೆಲ್ಲಿ
ಅರಳ್ಗಳಾಗುವುವಿಲ್ಲಿ.
  ನೆಲವಿದಕೆ ಹೊಲವು!

ಆಗಸವೆ ಹಿರಿಕೆರೆಯು
ಚಿಕ್ಕೆಗಳೆ ತಾವರೆಯು
ಇಹಳೆ ತಾವರೆಗೊಬ್ಬ
ಶ್ರೀಕರೆಯು ಇಂದಿರೆಯು!
  ನೀಲಿಮೆಯೆ ಜಲವು!

* * *

ಕಾಲಭೈರವ

ಏಕೆ ಕುಣಿವೆ ತೂಕ ತಪ್ಪಿ ಸಾಕು ಕಾಲಭೈರವ
ನಾಕ ಹೋಗಿ ನರಕವಾಯ್ತು ಸಾಕುಮಾಡು ಸ್ವೈರವ
ಯಾವ ಪಾಪ ಗೈದುದಿಳೆಯು? ಸಾಕುಮಾಡು ವೈರವ
ಅಡಿಗೆ ಸಿಕ್ಕು ಮುದುಡಿಹೋಯ್ತು ಮನುಜಲೋಕ ಕೈರವ!

ಏಕೆ ಕುಣಿವೆ....

ಎಲ್ಲಿ ಹೆಜ್ಜೆ ತಪ್ಪುತಿಹೆಯೊ ಎಲ್ಲಿ ಗೆಜ್ಜೆ ಹರಿದುದೊ
ಎಲ್ಲಿ ಒಜ್ಜೆ ಅಸಮವಾಯ್ತೊ ಎಲ್ಲಿ ಪಜ್ಜೆ ಸರಿದುದೊ
ಏನು ತಾಳ ತಪ್ಪುತಿಹುದೊ ಕುಣಿವ ಬಿಜ್ಜೆ ಮರೆದುದೊ?
ಕುಣಿವುದನ್ನೆ ನಿಲ್ಲಿಸಿಹೆಯೊ ಬೇರೆ ಕಜ್ಜ ಕರೆದುದೊ?

ಏಕೆ ಕುಣಿವೆ....

ಪಕ್ಕವಾದ್ಯ ತಪ್ಪುತಿಹುದೊ ನೀನೆ ತಪ್ಪುತಿರುವೆಯೊ?
ತಾಳ ಕಟೆವ ಕೈಯ ತಪ್ಪ ನೀನು ಒಪ್ಪುತಿರುವೆಯೊ?
ಏನು ನಿನ್ನ ಹರೆಯು ಹಿಂಗಿ ಮುಪ್ಪನಪ್ಪುತಿರುವೆಯೊ?
ನೀನು ತಪ್ಪಿ ನಾಟ್ಯಕಲೆಯ ಮುಖಕೆ ಕಪ್ಪ ತರುವಿಯೊ!

ಏಕೆ ಕುಣಿವೆ....

ಎಲ್ಲೊ ಏನೊ ದೋಷ ಉಳಿದು ಘಾಸಿಯಾಯ್ತು ಜಗವಿದು!
ಯಾಕೊ ಏನೊ ದ್ವೇಷ ಬೆಳೆದು ನಾಶವಾಯ್ತು ಜಗವಿದು!
ರೋಷ ಹೆಚ್ಚಿ ತೋಷವಳಿದು ಮೋಸಹೋಯ್ತು ಜಗವಿದು!
ನಿನ್ನ ಕುಣಿತವಿದಕೆ ಹೊಣೆಯು! ಕುಣಿತದಾವ ಬಗೆಯಿದು?

ಏಕೆ ಕುಣಿವೆ....

ವಂಶ ಬಂದು ವಂಶ ಹೋಯ್ತು ಒಂದೆ ಮೂಲವೃತ್ತಿಯು
ಮತ್ತೆ ಮತ್ತೆ ಬೆಳೆದು ಅಳಿದುದಾಯ್ತು ಆಧಿಪತ್ಯವು
ನಾಗರಿಕತೆ ಬೆಳೆದೊಡೇನು? ಒಂದೆ ನರಪ್ರವೃತ್ತಿಯು!
ಏನು ಗಾನ? ಏಕತಾನ! ಏನು ನಿನ್ನ ನೃತ್ಯವು!

ಏಕೆ ಕುಣಿವೆ....

ನೀನು ಹೆಜ್ಜೆ ಚೆಲ್ಲೆ ಹುಲ್ಲು ಹೂವು ಹಣ್ಣು ಬೆಳೆಯಲಿ
ನಿನ್ನ ಪಾದಸ್ಪರ್ಶದಿಂದ ಭೂಮಿ ಪುಳಕ ತಳೆಯಲಿ
ಸುತ್ತು ಸಸ್ಯವೃದ್ಧಿಯಾಗಿ ಕೊರತೆ ಹಸಿವೆಯಳಿಯಲಿ
ಹೊಟ್ಟೆಯ ಹೋರಾಟವಡಗಿ ಸತ್ಯ ಪ್ರೀತಿ ಉಳಿಯಲಿ!

ಏಕೆ ಕುಣಿವೆ....

ಯುಗಯುಗಗಳ ಹಗೆಯು ಹೋಗಿ ಸೊಗದಿ ಬರಲಿ ಸಖ್ಯವು
ದೇಶ ದೇಶದಲ್ಲಿ ದುಃಖ ಹಿಂಗಿ ಬರಲಿ ಸೌಖ್ಯವು
ದ್ವೇಷರೋಷವಳಿದು ಬರಲಿ ಮನುಜ ಕುಲದ ಐಕ್ಯವು
ಸತ್ಯ ಪ್ರೀತಿ ಶಾಂತಿಯಕ್ಕೆ ನಮ್ಮ ಭರತ ವಾಕ್ಯವು!

ಏಕೆ ಕುಣಿವೆ....

* * *

ಆರಿಲ್ಲ ಈವರೆಗೆ ಆಶಾ ಪ್ರದೀಪ!

ಸೆಣಸಿ ಸೋತಿತು ಕೊನೆಗೆ ಕಾಲ-ಪ್ರಕೋಪ,
ಆರಿಲ್ಲ ಈ ವರೆಗೆ ಆಶಾ ಪ್ರದೀಪ!

ಕೌಶಿಕನ ಶಪಥವೋ ದೂರ್ವಾಸ ಶಾಪ
ತಾರಕನ ಹಾವಳಿಯೊ ಭಾರ್ಗವನ ಕೋಪ
ರಾವಣನ ರೋಷವೋ ಕೌರವನ ಪಾಪ
ಚೆಂಗೀಜನಾರ್ಭಟವೊ ಸೀಜರನ ದರ್ಪ
ಎಲ್ಲವೂ ತೋರಿದುವು ಪೂರ್ಣಪ್ರತಾಪ –
ಆದರೂ ಆರಿಲ್ಲ ಪುಣ್ಯ ಪ್ರದೀಪ !

ಗೊಲ್ಗೋಥ ಕರ್ಬಲಾ ಇದೊ ಕುರುಕ್ಷೇತ್ರ
ಒಂದೆ ನಾಶದ ನಾಟ್ಯ ಸಂಹಾರಸತ್ರ
ಕೊಲುವ ಬಗೆ ಬೇರಾದೊಡೊಂದೆ ಸಾವಿನ ಚಿತ್ರ
ಇಂದಿಗೂ ಜೀವನವು ಬರಿ ಮೃತ್ಯುಪತ್ರ!
ಕೊಲುವಾಸೆಯೆನಿತು ಘನ, ಎನಿತದರ ರೂಪ-
ಆದರೂ ಆರಿಲ್ಲ ಜೀವ-ಪ್ರದೀಪ !

ಏಸುವಿನ ಶಿಲುಬೆಯೋ ಕಾಲ್ವಿನನ ಕೌಟಿಲ್ಯ
ಜೀನ ಡ ಆರ್ಕ ಗತಿ ವಿವಿಧ ಮತ ವೈಫಲ್ಯ

ಎಲ್ಲೆಲ್ಲಿಯೂ ಒಂದೆ ಆಸುರೀ ಪ್ರಾಬಲ್ಯ
ಕನಸಿಲೆ ಉಳಿದಿಹುದು ಪರಮ ಕೈವಲ್ಯ
ಉರುಳಿದರು ಅರ್ಚಕರು ಮನೆ ಹಿಡಿದ ಪೋಪ–
ಆದರೂ ಆರಿಲ್ಲ ಧರ್ಮ ಪ್ರದೀಪ!

ಸಾಕ್ರೆಟೀಸನ ಹನನ ಬ್ರೂನೋನ ದಹನ
ಗ್ಯಾಲಿಲಿಯೋ ಪೀಡನವು ಡಾರ್ವಿನನ ದಮನ
ಪೆಯಿನನ ಪಾಲಾಯನವು ಐನಸ್ಟಾಯ್ನ ನಿರ್ಗಮನ
ಎಲ್ಲೆಡೆಯೊಳು ಜ್ಞಾನ– ನಂದಿಗೇ ಮುಗದಾಣ!
ಜ್ಞಾನಕ್ಕೆ ಎದುರಾಗಿ ಅಧಿಕಾರ ದರ್ಪ–
ಆದರೂ ಆರಿಲ್ಲ ಜ್ಞಾನ ಪ್ರದೀಪ!

ಮಿಲ್ಟನನ ಅಂಧತ್ವ ಹೋಮರನ ಭಿಕ್ಷೆ
ಫಿರದೋಸಿಯಪಮಾನ ರೂಸೋನ ಶಿಕ್ಷೆ
ಡ್ಯಾಂಟೇಯ ಗಡಿಪಾರು ಮಾರ್ಲೋ ಪರೀಕ್ಷೆ
ಮಾಯ್ಕಲೆಂಜೆಲ ವ್ಯಥೆಯು ಫಾನಿಯ ವಿವಕ್ಷೆ
ಕವಿಯ ಜೀವನವೊಂದು ಸಂತಾಪ ಸ್ತೂಪ–
ಆದರೂ ಆರಿಲ್ಲ ಕಾವ್ಯ ಪ್ರದೀಪ!

ಸೀತಾ ಪರಿತ್ಯಾಗ ದ್ರೌಪದಿಯ ವ್ಯಥೆಯು
ಪದ್ಮಿನಿಯ ಜೋಹಾರ ಒಫೀಲಿಯಾ ಗತಿಯು
ಷೀರೀಂ, ಲೈಲಾ, ಜೇಬುನ್ನಿಸಾ ಕಥೆಯು
ಎನಿತು ಸಲ ಉರಿದಿಲ್ಲ ಸಹಗಮನಗಳ ಚಿತೆಯು?
ಎಷ್ಟು ಸಲ ಕೇಳಿಲ್ಲ ಪ್ರೇಮ ಪ್ರಲಾಪ–
ಆದರೂ ಆರಿಲ್ಲ ಪ್ರೇಮ ಪ್ರದೀಪ!

ಬೀಸುತಲೆ ಬಂದಿಹುದು ಬಿದಿಯ ಬಿರುಗಾಳಿ
ಎನಿತು ಸಲ ಆಗಿಹುದೊ ಕತ್ತಲೆಯ ದಾಳಿ
ಎಷ್ಟು ಸಲ ಸರಿಯಾಯ್ತೊ ಈ ಪ್ರಣತಿ ಸೀಳಿ
ಎಣಿಸಬಲ್ಲವರಾರು ಆಶೆಗಳ ಹೋಳಿ
ಪ್ರತಿಕೂಲಗಳ ಪಡೆಯು ಕೊಡುತಲಿದೆ ತಾಪ,
ಆರಿಲ್ಲ ಈವರೆಗು ಆಶಾ ಪ್ರದೀಪ!

ಎಣ್ಣೆ ಎರೆಯುವರಾರೊ ಬತ್ತಿ ಎಳೆಯುವರಾರೊ
ಗಾಳಿ ತಡೆಯುವರಾರೊ ಮಂಕ ಕಳೆಯುವರಾರೊ

ಶಲಭ ಸೋವುವರಾರೊ ದೀಪ ಬೆಳಗುವರಾರೊ
ದೀಪ ಬೆಳಗಿಸಿಕೊಳ್ವ ದಿವ್ಯ ಸಾಕ್ಷಿಯು ಯಾರೊ
ಹೊತ್ತುತಲೆ ಬಂದಿಹುದು ದೀಪದಿಂ ದೀಪ
ಆರಿಲ್ಲ ಈವರೆಗು ಆಶಾ ಪ್ರದೀಪ!

ಆರದಿರಲೀ ದೀಪ, ಬರಲಿ ಬಿರುಗಾಳಿ
ನಡೆದಿರಲಿ ನಿಂತಿರಲಿ ಸಂಹಾರ ಕೇಳಿ
ಬರಗಾಲ ಭೂಕಂಪ ಬೇನೆಗಳ ದಾಳಿ
ಯುಗಯುಗದಿ ವಿಧವಿಧದ ರೂಪಗಳ ತಾಳಿ
ಮಕುಟಗಳು ಹಾರಲಿ, ಭಿಕ್ಷೆ ಬೇಡಲಿ ಭೂಪ,
ಆರದಿರಲೆಂದಿಗೂ ಆಶಾ ಪ್ರದೀಪ!

* * *

ಜನುಮಜನುಮದ ಜಾತ್ರೆ

ನಿನ್ನ ಚರ್ಮವೆ ತಾಡಪತ್ರವು
ನಿನ್ನ ಅಸ್ಥಿಯೆ ಕಂಠಪತ್ರವು
ನಿನ್ನ ಹೃದಯವೆ ಮಸಿಯ ಪಾತ್ರೆಯು
ಬರೆದುದೆಲ್ಲ ಪವಿತ್ರವು–
ದಿವ್ಯ ಜೀವನ ಚಿತ್ರವು!

ಕಣ್ಣು ಮುಚ್ಚಲು ಜ್ಞಾನನೇತ್ರವು
ಕಣ್ಣು ತೆರೆಯಲು ವಿಶ್ವಚಿತ್ರವು
ಕೋಟಿ ಮಣಿಗಳು ಒಂದೆ ಸೂತ್ರವು!
ಎಲ್ಲ ಚಿತ್ರ ವಿಚಿತ್ರವು–
ಚೆಲುವು ನನ್ನಿಯ ಸತ್ರವು!

ಒಮ್ಮೆ ಶಿಶಿರವು ಒಮ್ಮೆ ಚೈತ್ರವು
ವಿಶ್ವರಂಗದಿ ನರನ ಪಾತ್ರವು
ಅರೆ ಅತಂತ್ರವು ಅರೆ ಸ್ವತಂತ್ರವು
ಸುಖವು ತ್ಯಾಗದಿ ಮಾತ್ರವು–
ಇದು ಇಹದ ಚರಿತ್ರವು!

ಬಾಳು ಬಗೆಯಲು ಬಿಲ್ವಪತ್ರೆಯು
ದಳವು ನನ್ನಿಯು ಚೆಲುವು ಮೈತ್ರಿಯು
ಕರ್ಮಪೂಜೆಯು ಹಗಲು ರಾತ್ರಿಯು
ಜೀವನವೆ ಗಾಯತ್ರಿಯು–
ಅದಕೆ ಶ್ರೋತ್ರಿ ಧರಿತ್ರಿಯು!
ಮನಸು ಮಾಡಲು ಮಣ್ಣ ಗಾತ್ರವು
ಆಗಲಾರದೆ ಪ್ರೇಮ ಪಾತ್ರೆಯು?
ಬಾಳ ಕಡಲಲಿ ಇದೆ ವಹಿತ್ರವು
ಸಾಗಲಿರುಹಿನ ಯಾತ್ರೆಯು–
ಜನುಮ ಜನುಮದ ಜಾತ್ರೆಯು!

* * *

ಪಥಿಕ

ಮಾನವತೆಯವಿರಾಮ ಚರಣಕೋಟಿಗಳೆನಿತು
ಪಥಗಳನು ತುಳಿದುವೋ ಲೆಕ್ಕವೆಲ್ಲಿ?

ಕಾಲಪಥದಲಿ ಮೂಡಿ ಮರೆಯಾದ ಪದಚಿಹ್ನ–
ಪ್ರಾರ್ಥಾನುಪ್ರಾರ್ಥಕ್ಕೆ ದುಕ್ಕವೆಲ್ಲಿ?

ಬಹುದೇವತಾ ಪೂಜೆ ಪಥವಾಯ್ತು ಹಿಂದೊಮ್ಮೆ
ಪಶುಬಲಿಯೆ ಪಥವಾಯ್ತು ಪೃಥ್ವಿಯಲಿ ಒಮ್ಮೆ

ಧರ್ಮಾಭಿಮಾನವೋ ದೇಶಭಕ್ತಿಯೊ ಭೋಗ
ಲಾಲಸೆಯೊ ಪಥವಾಯ್ತು ಇಲ್ಲೆ ಮಗುದೊಮ್ಮೆ

ಪಥಗಳೋ ಪಂಥಗಳೊ ತಂತ್ರಗಳೊ ಗ್ರಂಥಗಳೊ
ತರ್ಕವೋ ನ್ಯಾಯವೋ ಸಿದ್ಧಾಂತವೊ

ಜಾತಿಗಳೊ ನೀತಿಗಳೊ ನೇತಿಗಳೊ ರೀತಿಗಳೊ
ಅನುಮಾನ ಪ್ರಾಮಾಣ್ಯ ದೃಷ್ಟಾಂತವೊ

ಊಹೆಯೋ ಭಾವನೆಯೊ ಪ್ರೇರಣೆಯೊ ಕಲ್ಪನೆಯೊ
ದರ್ಶನವೊ ಘರ್ಷಣವೊ ಶಾಸ್ತ್ರಾರ್ಥವೊ

ವೇದಗಳೊ ವಾದಗಳೊ ವಿಜ್ಞಾನ ಪ್ರಜ್ಞಾನ
ಚರಿತಾರ್ಥ ಪುರುಷಾರ್ಥ ಪರಮಾರ್ಥವೊ

ಎನಿತು ಪಥಗಳು ಒಬ್ಬ ಪಥಿಕನೆದುರಿಗೆ ಅಬ್ಬ!
ಯಾವ ಪಥ ಸುಕರವೆಂದಾದರೊರೆಯಬೇಕು?

ಯಾವ ಪಥವಿಡಿದರೂ ಗತಿಯೊಂದೆ ಎಂಬ ನುಡಿ
ಯಾವ ಧೈರ್ಯದಿ ನಾವು ನಂಬಬೇಕು?

ದಾರಿಯೊಂದನೆ ನಂಬಿ ನಡೆದರೂ ಬಹುಬೇಗ
ಕವಲೊಡೆದು ಕವಿಯುವುದು ಮತಿಗೆ ಮಂಕೆ

ಮಾರ್ಗದರ್ಶನಗೈವ ಮೈಲುಗಲ್ಲಿನ ಮೇಲೆ
ಎದ್ದು ನಿಲ್ವುದು 'ಏನೊ' ಎಂಬ ಶಂಕೆ!

ಸೀಳು ದಾರಿಗಳೆನಿತೊ ಕಾಲುದಾರಿಗಳೆನಿತೊ
ಹೇಳಹೆಸರಿಲ್ಲದಿಹ ದಾರಿಯೆನಿತೊ

ಬಾಳ ಬಟ್ಟೆಗಳೆನಿತೊ ಬಿದಿಯ ಬೀದಿಗಳೆನಿತೊ
ಬಗೆಯ ಬಾನಿನ ಗಾಳಿದಾರಿಯೆನಿತೊ

ವಾಹನಕೆ ತಕ್ಕಂತೆ ವೀಥಿಗಳೊ, ಮಾರ್ಗಕ್ಕೆ
ತಕ್ಕಂತೆ ವಾಹನವೊ? ತಿಳಿಯದಿಹುದು!

ನೆಲ ಜಲದ ಬಾಂಬೊಲದ ಹಲವಾರು ದಾರಿಯಲಿ
ನಿನ್ನ ದಾರಿಯೆ ನಿನಗೆ ಹೊಳೆಯದಿಹುದು!

ನಡೆದಿಹವು ಕಾಲುಗಳು ನೋಡುತಿವೆ ಕಣ್ಣುಗಳು
ಮಿಡುಕುತಿದೆ ಹುಡುಕುತಿದೆ ಒಳಗೊಳಗೆ ಬುದ್ಧಿ

ಗುರಿಯಿದೆಯೆ ಪಯಣಕ್ಕೆ ಕೊನೆಯಿಹುದೆ ಪಥವಿದಕೆ?
ಹೋಗಿ ತಂದವರಾರು ಇದರ ಸುದ್ದಿ ?

ಎನಿಬರೋ ಹೋಗಿಹರು ಎನಿಬರೋ ಹೊರಟಿಹರು
ಎನಿಬರೋ ಹೊರಟಾರು ಇನ್ನು ಮುಂದೆ

ಹೋದ ಹಾದಿಯು ತಪ್ಪೊ ಯಾವ ಹಾದಿಯು ಒಪ್ಪೊ
ಎಂಬ ಶಂಕೆಗೆ ಎಲ್ಲಿ ಶಮನವೆಂದೆ!

ನಿನ್ನ ಗಮನದ ಗುರಿಯ ನೀನರಿಯೆ ದಾರಿಗನೆ
ನಿನ್ನ ದಾರಿಯ ಕೊನೆಯ ಕಾಣೆ ಪಥಿಕ!

ಹೀಗಿದ್ದರೂ ನೀನು ನಿಂತಲ್ಲಿ ನಿಲಲಾರೆ
ನಡೆ ನೇತ್ರ ಒಯ್ದಲ್ಲಿ ಓ ಯಾತ್ರಿಕ!

ತಾರೆಗಳು ತಿರುಗುತಿವೆ ಸಾಗರಗಳಲ್ಲಿ
ಮತ್ಸ್ಯಗಳು ತಿರುಗುತಿವೆ ಸಾಗರಗಳಲ್ಲಿ

ಮಾನವರು ನಡೆದಿಹರು ಈ ಮಧ್ಯದಲ್ಲಿ
ಯಾರ ಗುರಿ ಯಾವುದೋ ಈ ವಿಶ್ವದಲ್ಲಿ!

ಆದರೂ ನಡೆ ಮುಂದೆ ಮೈ ತಡೆವ ತನಕ
ಒಳಗಿರುವ ಚೈತನ್ಯ ಕೈಹಿಡಿವ ತನಕ

ಯಾವ ಬೆಳಕೋ ದಾರಿ ತೋರಿಹುದು ಈವರೆಗೆ
ತೋರೀತು ಬೇರೊಂದು ಬೆಳಕಿನ್ನು ಪಥಿಕ!

ನಿನಗೆ ನೀನೇ ಬೆಳಕು–ನಿನಗೆ ನೀನೇ ಬೆಳಕು
ನಿನ್ನ ದಾರಿಯ ನೀನೆ ಹುಡುಕಿಕೋ ಪಥಿಕ!

ಉಳಿದವರು ಹೋದುದೇ ಹಾದಿಯೆಂದರಿಯದಿರು
ಇದ್ದಾವು ದಾರಿಗಳು ಬೇರೆ ಪಥಿಕ

ಮನೆಗೆ ಮರಳುವ ಎತ್ತು ಇರುಳ ಕಾಳದಿ ಕೂಡ
ದಾರಿ ತಪ್ಪದು ಪಥಿಕ–ನೀನು ಕೂಡ

ಮನೆಗೆ ಮರಳುವ ಪಯಣದಲ್ಲಿರುವೆ! ಕಾಳದಲಿ
ದಾರಿ ತೋರದು ನನಗೆ ಎನ್ನಬೇಡ!

ಬರುವಾಗ ಒಬ್ಬನೇ ಹೋಗುವಾಗೊಬ್ಬನೇ
ತರಲಿಲ್ಲ ಒಯ್ಯಲಿಲ್ಲೇನನೂ ಪಥಿಕ

ನಿನ್ನೊಡನೆ ಹೊರಡುವುದು ನಿನ್ನತನವೊಂದೆ ತಿಳಿ
ಬರಲಿಲ್ಲ ಜತೆಗಾರು ಎನ್ನದಿರು ಪಥಿಕ

ಹೊರಟ ದಾರಿಯ ಕಡೆಗೆ ಕಣ್ಣಿರಲಿ, ಅದನಿದನು
ನೆನೆದು ನೋಟವು ಹೊರಳದಿರಲತ್ತ ಇತ್ತ

ಈ ದೂರ ದಾರಿಯಲಿ ಬೆಳಕು ಬುತ್ತಿಗಳೊಂದೆ–
ಅದೆ ತದೇಕ ಧ್ಯಾನ–ತಲ್ಲೀನ ಚಿತ್ತ

ನಡೆ ನಿಲ್ಲದಿರು ನೆನೆದು ಹಿಂದು ಮುಂದಿನ ಬೆಸನ
ತಡೆ ಶಂಕೆ ಬಂದಲ್ಲಿ ನಾಲ್ಕು ನಿಮಿಷ

ಒಳಗಿರುವ ಬೆಳಕನ್ನೆ ಕೇಳಿ ಮುಂದಕೆ ಸಾಗು
ಪಯಣ ಘನ–ಅವಧಿಯೋ ಬಡ ನೂರು ವರುಷ!

ಯಾರು ಬಲ್ಲರು–ಗಣಪನಂದದಲಿ ಕುಳಿತಲ್ಲೆ
ಪಯಣ ಪೈಜೆಯ ಗೆದ್ದ ಗರುವರಿರಬಹುದು

ವೀರೇಶನಂದದಲಿ ಪೃಥ್ವಿಯನೆ ಸುತ್ತಿದರು
ಸೋಲನಪ್ಪುವ ದೈವಹೀನರಿರಬಹುದು

ಏನು ದೈವವೊ– ನಿನಗೆ ದೈವ ನೀನೇ ಪಥಿಕ
ಆಯ್ದುಕೋ ಆರಯ್ದು ನಿನ್ನ ದಾರಿ

ನಿನ್ನಾಯ್ಕೆಯಂತೆಯೇ ನಿನ್ನ ದೈವವು ಪಥಿಕ
ಆಯ್ವ ಮುನ್ನವೆ ಅರಸು ಹಲವು ಬಾರಿ

ನಿನ್ನಾಯ್ಕೆ ತರ್ಪೆಲ್ಲ ಕಹಿಸಿಹಿಯ ಸಹಿಸುತಲೆ
ತುಳಿ ನಿನ್ನ ದಾರಿಯನು ದಣಿಯದೇ ಪಥಿಕ

ಈ ಜನ್ಮದಲಿ ಪಯಣ ಮುಗಿಯದಿದ್ದರು ಮತ್ತೆ
ಹೊಸ ಜನ್ಮ ಸಿಕ್ಕಾವು ಓ ಯಾತ್ರಿಕ!

ಪಯಣ ಪೂರಣಕಾಗಿ ನೀನೆ ದಾರಿಗನಾಗಿ
ಮತ್ತೆ ಬರದಿದ್ದರೂ ಬೇರೆ ಪಥಿಕ

ನೀ ಮುಟ್ಟಿದೆಡೆಯಿಂದ ಮುಂದೆ ಸಾಗಲುಬಹುದು
ಸರಿದೋರೆ ಈ ದಾರಿ ಓ ಯಾತ್ರಿಕ!

ಪಯಣ ಮುಗಿಯಲಿ ಮುಗಿಯದಿರಲಿ ಮತ್ತೊಬ್ಬರು
ಮುಂದುವರಿಸಲಿ ಪಯಣ ಬಿಡಲಿ ಪಥಿಕ

ನೀನು ನಡೆದಷ್ಟರೊಳೆ ನಿನ್ನ ಸಫಲತೆ ಮುಕ್ತಿ
ಬಿಡಬೇಡ ಯಾತ್ರೆಯನು ಓ ಯಾತ್ರಿಕ!

* * *

ಕರುಣಾ ಶ್ರಾವಣ

ತರುಗಿರಿ ಸೃಷ್ಟಿಯ ಸ್ವರ್ಗಾರೋಹಣ
ವೃಷ್ಟಿಯು ಸೃಷ್ಟಿಗೆ ಶಿವನವರೋಹಣ
ಧರೆಯುತ್ಥಾನವು ಹರನವತರಣ
ಎಲ್ಲೋ ಒಂದೆಡೆ ಎರಡರ ಮಿಲನ
ತೋರುವುದಾಕ್ಷಣ ಕರುಣಾ ಶ್ರಾವಣ
ಕಾಣ್ಬುದು ದಿವ್ಯೋದ್ದೇಶದ ಪೂರಣ
ನವ ಸೃಷ್ಟಿಯ ಜನನ
ನವ ಶೋಭೆಯ ಸೃಜನ

ಭೂಮಿಗೆ ವ್ಯೋಮಕೆ ಪಾಣಿಗ್ರಹಣ
ಮೋಡದ ಚಪ್ಪರ ಮಿಂಚಿನ ತೋರಣ
ಆಲಿಯ ಅಕ್ಷತೆ ಗಿರಿದರಿಗಾಯನ
ಸಿಡಿಲ ಪಟಾಕ್ಷಿಯು ದಿಶೆಗಳ ನರ್ತನ
ಕರುಣಾ ಶ್ರಾವಣ ಶುಭ ಸಂತಾನ
ಶಾಂತಿಯ ಪ್ರೀತಿಯ ಪರಮ ನಿಕೇತನ
ಶಿವಚಂದ್ರನ ಕಿರಣ
ಈ ಸೃಷ್ಟಿಯ ಹರಣ

ಏರೆಲೆ ಏರೆಲೆ ಓ ಮರುಭೂಮಿ
ಉನ್ನತವಾಗೈ ಓ ಶಿವಕಾಮಿ
ಹಿಗ್ಗೆಲೆ ಹಿಗ್ಗೆಲೆ ವಿಕಸನ ಪ್ರೇಮಿ
ಓಗೊಡದಿರುವನೆ ಇದಕಾ ಸ್ವಾಮಿ?
ಧರೆಗವತರಿಸದೆ ಕರುಣಾ ಶ್ರಾವಣ
ರುಕ್ಷದಿ ಜನಿಸದೆ ರಸಸಂತಾನ
ಜಡದಲಿ ಪ್ರಾಣ
ನುಡಿಯಲಿ ಗಾನ

ಕರುಣಾ ಶ್ರಾವಣ ಬರದಿರೆ ಕಣಕಣ
ಛಿನ್ನವು ಭಿನ್ನವು ಸೃಷ್ಟಿಯೆ ರಣರಣ
ಒಳಗೂ ಹೊರಗೂ ಬದುಕೇ ಭಣಭಣ
ಎಲ್ಲಿಯ ಜೀವನ? ಚರ್ವಿತ ಚರ್ವಣ!

ಪುಡಿ ಪುಡಿ ರೂಪದ ಹರಿವಾಣ
ಜೀರ್ಣವಿಶೀರ್ಣವು ಸೊಗದಾವರಣ
ಜೀವನವೇ ಮರಣ
ಜೀವನವೆನೆ ಕರುಣ

ಹೊರಗಿಗೆ ಬರಿಮಳೆ ಸಂಜೀವಿನಿಯು
ಒಳಗಾ ಕರುಣೆಯೆ ಮರುಜೇವಣಿಯು
ಮಿಡಿವುದು ರಕ್ತದ ಧಮನಿ ಧಮನಿಯು
ನುಡಿವುದು ನಿಶಿದಿನ ಪ್ರಾಣದ ವೀಣೆಯು
ಬಾಬಾ ಕರುಣಾ ಶ್ರಾವಣ ಪಾವನ
ನೀ ಬರದಿರೆ ಹುಸಿಯುಸಿರಿದು ಜೀವನ
ಮಾನವತೆಯೆ ಮಸಣ
ಜೀವಿತವೇ ವ್ಯಸನ!

ಬಿಮ್ಮನೆ ಬಿರಿದಿವೆ ದಿಗಿಭದ ಕುಂಭ
ನಿಂತೇ ಬಿಟ್ಟಿದೆ ಧರೆಯಾರಂಭ
ಹಾಹಾರವವೇ ಸೃಷ್ಟಿಯ ತುಂಬ
ಏತಕೆ ಊದುವೆ ಕದನದ ಕೊಂಬ?
ಬೀಸುತ ಬಾರೋ ಮಧುರ ಸಮೀರಣ
ನುಡಿಸುತ ಬಾರೋ ಕರುಣಾ ವೀಣಾ
ಬಾ ನಿನ್ನದೆ ಸ್ಮರಣ
ಬಾ ನಿನ್ನದೆ ಧ್ಯಾನ!

ಬಿಸಿಲಿನ ಬೇಗೆಯು ಎನಿತೋ ತೀಕ್ಷಣ
ಇನ್ನೂ ಮುಗಿಯದೆ ನರನ ಪರೀಕ್ಷಣ?
ತೋರದೆ ನಿನ್ನಯ ಅಮೃತದ ವೀಕ್ಷಣ?
ನಡೆದಿದೆ ಕ್ಷಣಕ್ಷಣ ನಿನ್ನ ನಿರೀಕ್ಷಣ!
ಕೋಡಿಯ ಹರಿಸೊ ಕರುಣೆಯ ವರುಣ
ಮೂಡಿಯೆ ಬಾರೋ ಕರುಣೆಯ ಅರುಣ
ಈ ಜೀವನ ಹವನ
ನೀನಧಿದೈವಕಣಾ!

ಬರಿಮೈಯಲಿ ನಿಂತಿವೆ ತರುಲತೆಯು
ಕಡಲಿನ ಒಡಲಲಿ ತುಂಬಿದೆ ಖತಿಯು
ನಿಶ್ಚಲವಾಗಿದೆ ನದಿಗಳ ಗತಿಯು
ಮಂಕನೆ ಬೀರಿದೆ ಮನುಜನ ಮತಿಯು
ಭೂಮಿಯಹಲ್ಯೆಗೆ ರಾಮನ ಚರಣ
ಬಾರಾ ಕರುಣಾ ಶ್ರಾವಣ ಸಾಂತ್ವನ
ನಿನಗಾಗಿಯೆ ಭುವನ
ಕಾದಿದೆ ಬಾ ಕರುಣ!

ಬಂಧನವಾಗಿದೆ ಬುದ್ಧಿಯ ಪ್ರಗತಿ
ದುಃಖದವಾಗಿದೆ ಭೌತಿಕ ಉನ್ನತಿ
ಧರ್ಮವೆ ತಂದಿದೆ ನೈತಿಕ ಅವನತಿ
ತಪ್ಪಿಹವೆಲ್ಲವು ತಮ್ಮಯ ಪರಿಮಿತಿ
ಹೊಯ್ಯೋ ಹೊಯ್ಯೋ ಪಾವನ ವರುಣ
ಕೊಚ್ಚಿಯೆ ಹೋಗಲಿ ಕೊಚ್ಚೆಯ ಅಂಗಣ
ಮಾಡುವೆ ಶರಣ
ಕರುಣಾ ಶ್ರಾವಣ!

ನೀ ಬರೆ ಉಸುಬಿನ ಅರಬಸ್ತಾನ
ಸಹರಾಭೂಮಿಯೊ ರಾಜಸ್ಥಾನ
ಹೃದಯಾರಾಮವೊ ಬುದ್ಧಿಯ ವಿಪಿನ
ಎಲ್ಲವು ಪಡೆವುವು ನೂತನ ಜನನ
ಒಳಗೂ ಹೊರಗೂ ಚಿಗುವುದು ಉಪವನ
ನಡೆವುದು ಮಂಗಳ ಮಂಜುಳಗಾನ
ಚೆಲುವಿನ ಸ್ನಾನ
ನಲವಿನ ಪಾನ!

ನೀನವತರಿಸಲು ಜನವನ ಗಗನದಿ
ಹರಿವುದು ಸುಮನಸ ಸುಜಲದ ನದನದಿ
ಚಿಗಿವುದು ಕಿಸಲಯ ಕೊರಡಿನ ಹೃದಯದಿ
ಹರಿವುದು ನೊರೆವಾಲ್ ಬರಡಿನ ಹಯವದಿ

ಜೀವನಪ್ಪುದು ತಂ ತೋಂ ತನನ
ಹೆಜ್ಜೆಗೆ ಹೆಜ್ಜೆಗೆ ಗೆಜ್ಜೆಯ ಝನನ
ಚೈತನ್ಯದ ಚಲನ
ಚಿಚ್ಛೋ್ಯತಿಯ ಜ್ವಲನ!

ನಡೆದವು ಎತ್ತಲು ಚಿತ್ರಣ ನರ್ತನ
ವರ್ಣನ ಚಿಂತನ ಪೂಜನ ಪ್ರಾರ್ಥನ
ವಾದನ ಗಾಯನ ಶೋಭನ ಕೀರ್ತನ
ಶಿವದಾರಾಧನ ಸತ್ಯಾನ್ವೇಷಣ
ನೀ ಬರದಿರೆ ಈ ಜಗವೇ ನಿರ್ಜನ
ನೀರವ ನಿಶ್ಚಲ ನಿಷ್ಕ್ರಿಯ ನಿರ್ಮನ
ಸಂಸಾರವೆ ಶೂನ್ಯ
ಜೀವನವೇ ದೈನ್ಯ!

ನೀ ಬರೆ ಭೂಮಿಯ ಬಿಸರುಹ ವಿಕಸನ
ಒಳಗಿನ ಹೊರಗಿನ ಅಘಸಮ್ಮರ್ಷಣ
ಮನಸಿನ ಪಸದನ ಮೃದುತೆಯ ಪಸರಣ
ವರ್ಣದ ವಿಸರಣ ರೂಪಸ್ಫುರಣ
ಗಂಧ ಪ್ರವಹನ ಕೂಜನ ಶ್ರವಣ
ಬಾ ಜಗಜೀವನ ಕರುಣಾ ಶ್ರಾವಣ
ಋತಚಿತ್ ಸ್ಯಂದನ
ನಿನಗೆ ವಂದನ!

ನೀನಿರೆ ಬಿಡುಗಡೆ ಪ್ರೇಮದ ಪಾಶದಿ
ಮುಕ್ತಿಯು ಸೃಜನದ ಬಂದಿಯ ವಾಸದಿ
ವಿಜಯವು ವಿಫಲದ ಅಧರದ ಹಾಸದಿ
ಭವ್ಯತೆ ಭೂತದ ಭ್ರೂವಿನ ಲಾಸ್ಯದಿ
ಲಯದಲಿ ನೆಗೆವುದು ರಸಸಂತಾನ
ಮೌನದಿ ಗಾನದ ತಾನ ವಿತಾನ
ಮೌಢ್ಯದಿ ಜ್ಞಾನ
ಜಾಡ್ಯದಿ ಪ್ರಾಣ!

ತೃಪ್ತಿಯು ತೊನೆವುದು ಜಗದತೃಪ್ತಿಯಲಿ
ಜಾಗೃತಿ ಸ್ವಪ್ನದಿ ಜೀವಸುಪ್ತಿಯಲಿ
ಶಲಭಗೆ ಶಾಂತಿಯು ಜ್ಯೋತಿದೀಪ್ತಿಯಲ್ಲಿ
ಪ್ರಾಪ್ತಿಯು ಚಿಗಿವುದು ಚಿರವಿಲುಪ್ತಿಯಲಿ
ದುಃಖದ ಉರದಿಂ ಸುಖದ ಸಮೀರಣ
ಪಡೆವುದು ಪುಳಕವ ಪೃಥ್ವಿಯ ಪ್ರಾಣ
ತೊಡುವುದು ಭುವನ
ಚೆಲುವಿನ ವಸನ!

ಮಾಡು ಪದಾರ್ಪಣ ಕರುಣಾ ಶ್ರಾವಣ
ನಡೆಯಲಿ ಮಹಿಯ ಮಯೂರದ ನರ್ತನ
ಕಡಲಲೆ ತಾಳವು ತಡಸಲ ಗಾಯನ
ಮಧುಮಯವಾಗಲಿ ಒಳಹೊರಗಿನ ವನ
ಎಲ್ಲೆಡೆ ಹರಿಯಲಿ ಹರುಷರಸಾಯನ
ವಿಶ್ವವಿದಾಗಲಿ ಪ್ರೇಮಾಯತನ
ನಿಜದ ನಿಕೇತನ
ಪುಣ್ಯ ಸ್ಥಾನ!

ದಿಶೆದಿಶೆಯಲಿ ಜೀವನ ಜಯಘೋಷ
ಹೆಜ್ಜೆ ಹೆಜ್ಜೆಗೆ ಹಾಸವಿಲಾಸ
ಕಣಕಣದಲಿ ಕಣ್ದೆರೆಯುವ ಆಶಾ
ಶೂನ್ಯಾಶೂನ್ಯದಿ ಪೂರ್ಣ ವಿಕಾಸ
ತೋರಲಿ ಸಚರಾಚರದಲಿ ಸ್ಪಂದನ
ಯೌವನ ಪ್ರೇರಿತ ಮೃದು ರೋಮಾಂಚನ
ಸಕಲ ಸುಮೋದನ
ಸರ್ವ ಸುಮಾನ!

* * *

ಮಾನಸ ಸರೋವರ

ವಿಂಧ್ಯಾದ್ರಿಯಲ್ಲಿ ಚಂದ್ರೋದಯ

ಶ್ರೀಗುರುವಿನ ಹಸ್ತದಂತೆ
ವಿಂಧ್ಯಾದ್ರಿಯ ಮಸ್ತಕದಲಿ
ಚಂದ್ರೋದಯವಾಯಿತು
ಗುರುಬೋಧೆಯ ಸುಧೆಯ ತೆರದಿ
ಬೆಳುದಿಂಗಳು ಹರಡೆ ಭರದಿ
ಜಗತನ್ಮಯವಾಯಿತು

ತಾನು ಅನುಲ್ಲಂಘ್ಯನೆಂಬ
ಹೆಮ್ಮೆ ಇಲ್ಲದಾಯಿತೆಂಬ
ವಿಂಧ್ಯಾದ್ರಿಯ ಶೋಕವು
ತಪದಿ ಮಾಗಿ ಮಧುರವಾಗಿ
ಹರುಷದ ಬೆಳುದಿಂಗಳಾಗಿ
ಆಯ್ತು ಇಹವೆ ನಾಕವು

ಮುಳುಗುವ ರವಿ ಸಂಜೆವೆಣ್ಗೆ
ಪೀತಾಂಬರವೀಯೆ ನಿಶೆಗೆ
ಕಸಿವಿಸಿ ಬಹಳಾಗಲು
ಅವಳ ಶಾಂತಗೊಳಿಸಲೆಂದು
ಚೀನಾಂಬರ ತಂದು ಇಂದು
ಉಡಿಸಿದಂತೆ ಆಗಲು–

---

* ವಿಂಧ್ಯಪರ್ವತದಲ್ಲಿ ಕುಂತೀ ನಂದನರು ಬರಬರಲು ರಾತ್ರಿಯೊಳಿಂದ ಮೂಡಿದ ಪೂರ್ವಭಾಗದೊಳರ್ಧರಾತ್ರಿಯಲಿ. (ಕುಮಾರವ್ಯಾಸ ಭಾರತ ಸಂ. ೨೪)

ಚೆಲುವಾಯಿತು ಬೆಳುದಿಂಗಳು
ವಿಂಧ್ಯಾದ್ರಿಯ ಕರಣಂಗಳು
ಕಳೆಯೇರುವ ಹಾಗೆ
ಕಂದರದಲಿ ಸುಸ್ವರದಲಿ
ಹರಿಯುವ ಗಿರಿ ನಿರ್ಝರದಲಿ
ಜಲವೇರುವ ಹಾಗೆ

ಹೊಗೆಬಂಡಿಯೆ ಕರುಣೆದೋರು
ಇಲ್ಲಿ ಮೆಲ್ಲಮೆಲ್ಲನೇರು
ಕಣ್ಣ ತುಂಬಲೀ ಸಿರಿ
ಸದ್ದು ಮಾಡಬೇಡ ನೀನು
ನಿದ್ದೆ ಮಾಡುತಿಹುದು ಕಾನು
ಧ್ಯಾನದೊಳಿಹುದೀ ಗಿರಿ!

* * *

ಕವನ ಜನನ

ಬಗೆಯ ಬಾನಲಿ ಬಣ್ಣವೇಳರ
ಬಿಲ್ಲ ದಿಬ್ಬಣ ಸಾಗಿದೆ
ಎಲ್ಲೊ ಒಂದೆಡೆ ಭಾವ ಬುದ್ಧಿಯು
ಹಸೆಗೆ ನಿಲ್ಲುವ ಹಾಗಿದೆ
ನೀಲಮೇಘದ ಮೇಣೆ ನೂರಿವೆ
ಹೊತ್ತು ಮಿಂಚಿನ ಹೆಂಗಳ
ಎನಿತೊ ದಿನಗಳು ಕಳೆದ ಮೇಲಿದೊ

ಮತ್ತೆ ಮಸಗಿದೆ ಮಂಗಳ
ಹಿಂದೆ ಮುಂದೆಡಬಲದಿ ನಡೆದಿದೆ
ರಜತ ರಶ್ಮಿಯ ಲಾಸ್ಯವು
ಮೇಣೆ ಮೇಣೆಗೆ ಇಣುಕಿ ನೋಡುವ
ಮಿಂಚಿನಂಗನೆಯಾಸ್ಯವು

ಬಣ್ಣಬಣ್ಣದ ಹಕ್ಕಿಗಳ ಬಾ–
ವುಟಗಳೇಸೋ ನಭದಲಿ
ಚೆಂದವೆಲ್ಲೆಡೆ ಚೆಲ್ಲವರಿದಿದೆ
ಶೋಭೆ ಸೇರಿದೆ ಶುಭದಲಿ

ಹೊಳೆವ ತುಂತುರ್ವನಿಯೆ ಅಕ್ಷತೆ
ಸಾಂಧ್ಯಸ್ವರ್ಣಿಮೆ ಅರಿಶಿನ
ಹೊಂಗದಿರ ಮಾಂಗಲ್ಯ, ಸಂಜೆಯ
ಕೆಂಪು ಕುಂಕುಮ ಚಂದನ
ಬಗೆಯ ಬಾನಲಿ ಬಣ್ಣವೇಳರ
ಬಿಲ್ಲ ದಿಬ್ಬಣ ಸಾಗಿದೆ
ಎಲ್ಲೊ ಒಂದೆಡೆ ಭಾವ ಬುದ್ಧಿಯು
ಹಸೆಗೆ ನಿಲ್ಲುವ ಹಾಗಿದೆ

* * *

ಎದೆಯ ತೋಟ

ಎದೆಯ ತೋಟದೊಳೆನಿತೊ ನಲ್ ಬಯಕೆ ಸಸಿ ನೆಟ್ಟೆ
ಅಳಿದುವೆನಿತೋ ಉಳಿದು ಬೆಳೆದುವೆನಿತೊ!
ಹೃದಯದೀ ಹೊಲದಲ್ಲಿ ಬಿತ್ತಿದಾಸೆಯ ಬೀಜ
ಮೊಳೆದುವೆನಿತೋ ಮೊಳೆಯದುಳಿದುವೆನಿತೊ!
ಈಶ ಕರುಣೆಯ ಸರಿಯು ಸುರಿಯದಿರೆ ಹುರುಪಳಿಸಿ
ನಾಶವಾದುವು ಕೆಲವು ಮೌನವಾಗಿ!
ದಾಸಬುದ್ಧಿಯ ಸೆಕೆಗೆ ನಷ್ಟವಾದುವು ಕೆಲವು
ಆಸರಿಲ್ಲದೆ ಹಲವು ಮುದುಡಿ ಹೋಗಿ!
ಕ್ಲೇಶ– ಕಂಟಕ–ವಲ್ಲಿ ಗಾಸಿಗೊಳಿಸಲು ಕೊನೆಗೆ
ಬೇಸತ್ತು ಬಾಡಿದುವು ಬಳ್ಳಿ ಹಲವು!
ದೋಷ–ಕೀಟಕ ಕೊರೆದು ಒಣಗಿದುವು ಹಲಕೆಲವು
ಮೋಸ–ಮೂಷಕ ಕಡಿದು ಮತ್ತೆ ಕೆಲವು!

ದ್ವೇಷ ದುರಿತದ ಮಂಜು ಆವರಿಸೆ ಹಲಕೆಲವು
ಐಶ್ವರ್ಯವಿಲ್ಲದಕೆ ಇನ್ನು ಕೆಲವು!
ಈಸು ಸಂಧಿಯು ಬರದೆ ಲೋಪವಾದುವು ಕೆಲವು
ಶೋಷಣೆಗೆ ತುತ್ತಾದುವಿನ್ನು ಹಲವು!
ಪ್ರತಿಕೂಲ ಆವರಣ, ಕಾಲ, ಬಿದಿ, ಕುಲವೆಂಬ
ಮಿಡಿತೆಗಳ ಪಾಲಾಗಿ ನಶಿಸಿದುವು ಕೆಲವು
ಮತಿಹೀನ ಜನಮತಕೆ ಸತಿಸುತರ ಛಲಹಟಕೆ
ಹಿತವೈರಿ ಪದಹತಿಗೆ ಮತ್ತೆ ಹಲವು!
ನೂರು ಆಸೆಯ ಬಳ್ಳಿ ನಾಶಹೊಂದಿದೊಡೇಂ? ನಿ-
ರಾಶೆಗೆಡೆಯೆಲ್ಲಿಹುದು ಎದೆಯ ತೋಟ?
ತೂರಿ ತರುವುದು ಮತ್ತೆ ಆಸೆಗಳ ಬೀಜಗಳ
ಮಾರಾರಿ ಕೃಪೆಯೆಂಬ ಪವನ ಸತತ!
ಚಿತ್ತಭೂಮಿಯನುತ್ತು ಹದಗೊಳಿಸಿ ಅಣಿಯಾಗು
ಬಿತ್ತುವನು ಬೇರಿಹನು ಮತ್ತೆ ಬಿತ್ತುವನು
ಬಿತ್ತಿದಾಸೆಗಳೆಲ್ಲ ಫಲಿಸಲೇ ಬೇಕಿಲ್ಲ
ಬಿತ್ತಗಳ ಬರವಿಲ್ಲ, ಮತ್ತೆ ಬಿತ್ತುವನು!
ನಿತ್ಯವೂ ಹೊಸ ಆಸೆ ಅಂಕುರಿಸಬಹುದಿಲ್ಲಿ
ನಿತ್ಯವೂ ಅಂಕುರವು ಕಮರಬಹುದು!
ಚಿತ್ತಭೂಮಿಯು ಮಾತ್ರ ಫಲವತ್ತವಾಗಿರಲಿ
ಮತ್ತೆ ಹೃದಯಾರಾಮ ಕೊನರಬಹುದು!

* * *

ಸಿವ-ಸುಗ್ಗಿ

ಚಿಗುರೆಲೆಗಳ ಚಿತೆಯೇರಲು
ಹಣ್ಣೆಲೆಗಳ ಪಾಂಡು
ಇದೊ ಮಾಗಿಯ ಮಾದ್ರಿಯು ಸಹ
ಸಹಗಮಿಸಿದಳಿಂದು !

ತರುಲತೆಗಳ ಸುಕ್ಕಿದನರ
ಸೊಕ್ಕಿದ ನರವಾಗೆ
ಹೊಸ ನೆತ್ತರು ಹರಿದಾಡಲು
ಜರೆ ಯೌವನವಾಗೆ

ಸಚರಾಚರ ಸ್ನೇಹೋತ್ಸುಕ
ಪ್ರೇಮೋನ್ಮುಖವಾಗೆ
ಕಲ್ಲೆದೆಗೂ ನಲ್ಲಳ ಮುಖ
ಜೀವನ ಸುಖವಾಗೆ

ತರುತರುಗಳ ಭುಜಬಂಧನ
ಎಲೆ ಎಲೆಗಳ ರಿಂಗಣ
ಲತೆ ಲತೆಗಳ ಆಲಿಂಗನ
ಹೂ ಹೂಗಳ ಚುಂಬನ

ನೋಡುತ್ತಲೆ ಕಾಡಾಯಿತು
ನವ ನರ್ತನಶಾಲೆ
ಅದೊ ಚಿತ್ರದಶಾಲೆಯು ಇದೊ
ಹೊಸ ಗಾಯನಶಾಲೆ

ಒಣಬಿದಿರಿನ ಕೊರಳಿಂದಲೆ
ಸುರ-ಕಿನ್ನರ-ಗಾನ
ಬಡ ಕಬ್ಬಿಗನೆದೆಯಿಂದಲೆ
ನವಭಾವವಿತಾನ

ಭೃಂಗವೆ ಹೊಡಿ ಡಂಗುರವನು
ಹಿಂದಿರುಗಿತು ಸುಗ್ಗಿ!
ಹೂಮುಡಿದಿಹ ತರುಲತೆಗಳು
ವಂದಿಸುತಿವೆ ಬಗ್ಗಿ!

ಹೊಸ ಚಿಗುರಿನ ಹೊಗರೆತ್ತಿದೆ
ಆರತಿಯನು ಒಲಿದು
ಚೆಂದೆಂಗಿನ ಗರಿ ಬೀಸಿದೆ
ಚಾಮರವನು ನಲಿದು

ಸುಸ್ವಾಗತ ಸಿವ-ಸುಗ್ಗಿಗೆ
ಮೊಗ್ಗುಗಳೀ ಲಗ್ಗೆಗೆ
ನುಗ್ಗುತಲಿಹ ಹೊಸಹಿಗ್ಗಿಗೆ
ಆನಂದದ ಬುಗ್ಗೆಗೆ!

* * *

ಏಕೆ ನಕ್ಕೆ?

ಏಕೆ ನಕ್ಕೆ ಹೇಳು ಚೆನ್ನೆ
ಶೋಕ ನಗುವ ತೆರದಲಿ
ಮೂಕ ಮುಕುರ ಸಹಿತ ನಕ್ಕು
ಪ್ರಾಣ ಪಡೆದ ತೆರದಲಿ
ಇಷ್ಟು ಹೊತ್ತು ಮಾಡಿಕೊಂಡೆ
ಷೋಡಶ ಶೃಂಗಾರವ
ಆಗ ನಗದೆ ಈಗ ನಗಲು
ನೆನೆದೆ ಯಾವ ವಿಷಯವ?

ನಿನ್ನ ಚೆಲುವ ನೀನೆ ಮೆಚ್ಚಿ
ಹಿಗ್ಗು ಹೆಚ್ಚಿ ನಕ್ಕೆಯಾ?
ನಕ್ಕರೆಷ್ಟು ಚೆಂದ ಕಾಣ್ವೆ-
ನೆಂದು ನೋಡೆ ನಕ್ಕೆಯಾ?
ಅಲಂಕಾರವಾಯ್ತು, ಅವರೆ
ಇಲ್ಲವೆಂದು ನಕ್ಕೆಯಾ?
ಎಂಥ ಚೆಲುವು ಎಂಥ ಮನೆಗೆ
ಬಂತು ಎಂದು ನಕ್ಕೆಯಾ?

ಚೆಲುವು ಕೊನೆಗೆ ಒಲವಿನೆದುರು
ದಾಸಿಯೆಂದು ನಕ್ಕೆಯಾ?
ಬರಲಿ ಮನೆಗೆ-ದಾಸರಾರು
ತೋರ್ವೆನೆಂದು ನಕ್ಕೆಯಾ?
ಹಿಂದೆ ರೇಗಿ ಮತ್ತೆ ಬಾಗಿ-
ದೆನ್ನ ನೆನೆದು ನಕ್ಕೆಯಾ?

ಹೆಸರು ಕೇಳೆ ಕೊಸರಿ ಹೋದು–
ದನ್ನು ಸ್ಮರಿಸಿ ನಕ್ಕೆಯಾ?
ಏಕೆ ನಕ್ಕೆ ಹೇಳು ಚೆನ್ನೆ
ಶೋಕ ನಗುವ ತೆರದಲಿ
ಮೂಕ ಮುಕುರ ಸಹಿತ ನಕ್ಕು
ಪ್ರಾಣ ಪಡೆವ ತೆರದಲಿ

* * *

ಏಕೆ ಅತ್ತೆ?

ಏಕೆ ಅತ್ತೆ ಹೇಳು ಮುತ್ತೆ
ಹೊತ್ತು ಮರುಗುವಂದದಿ
ಕಣ್ಣ ಹನಿಯ ಕಂಡ ಎದೆಯ
ಕಲ್ಲು ಕರಗುವಂದದಿ
ಹರ್ಷಬಾಷ್ಪದಿಂದ ಬಾಡು–
ವಂಥ ವದನ ವಾರಿಜ
ಘರ್ಮಬಿಂದುಗಳನು ತಾಳ
ಬಲ್ಲುದೆಂತು ಪದ್ಮಜಾ?
ಏನ ನೆನೆದು ನೀರ ಮಿಡಿದೆ
ಹಾನಿಯೇನು ಹೇಳಲು?
ಅಷ್ಟ ಕೋಟಿ ರೋಮವಿಹುವು
ಕಿವಿಗಳಾಗಿ ಕೇಳಲು!
ಎಂದೋ ಆಡಿದಂಥ ನನ್ನ
ಬಿರುನುಡಿಗಳ ನೆನೆದೆಯಾ?
ಯಾವುದೋ ಅತೃಪ್ತ ಆಶೆ
ನೆನಪಾಗಲು ನೊಂದೆಯಾ?
ತವರ ನೆನಪು ಒಡವೆಯಾಸೆ
ಬಸಿರ ಬಯಕೆ–ಯಾವುದು
ನಿನ್ನ ಮಧುರ ಹೃದಯ ಕಲಕಿ
ಅಳುವ ಹಾಗೆ ಮಾಳ್ಪುದು?

ಯಾವ ಕೊರತೆ ನೋವಿನೊರತೆ–
ಯಾಗಿ ತುಂಬುತಿರುವುದು?
ಯಾವ ಚಿಂತೆ ದುಃಖ–ಸರಿತೆ
ಯಾಗಿ ತುಂಬಿ ಹರಿವುದು?

ಇದ್ದಕ್ಕಿದ್ದ ಹಾಗೆ ದುಕ್ಕ
ಉಕ್ಕಿ ಬರಲು ಕಾರಣ?
ಇದ್ದುದಕ್ಕೊ ಇಲ್ಲದುದಕೊ
ಚೆನ್ನೆ ನಿನ್ನ ರೋದನ?

ನೂರು ನೋವುಗಳನು ಸಹಿಪೆ
ನೆನೆದು ನಿನ್ನ ನಗೆಮೊಗ
ನೀನು ನೋಯೆ ಕಣ್ಣು ತೋಯೆ
ರುದ್ರಭೂಮಿ ಈ ಜಗ!

ಏಕೆ ಅತ್ತೆ ಹೇಳು ಮುತ್ತೆ
ಹೊತ್ತು ಮರುಗುವಂದದಿ
ಕಣ್ಣ ಹನಿಯ ಕಂಡ ಎದೆಯ
ಕಲ್ಲು ಕರಗುವಂದದಿ

* * *

ಬಯಲಾಟ

ಬಯಲಾಟ ನೋಡು
ಬಯಲಾಟ ನೋಡು
ಬಯಲಾಟ ನೋಡು ಗೆಳೆಯ
ಇದು ಎಂಥ ಆಟ ಗೆಳೆಯ!
ಇದು ಎಂಥ ನೋಟ ಕೆಳೆಯ!
ಆ ಬೆಟ್ಟ ಅಟ್ಟ
ಕುಣಿಯುವನು ಅಟ್ಟ
ಹಾಸದಲಿ ದಿಟ್ಟ
ಜಗಜಟ್ಟಿ ಮೇಘರಾಜ

ಮೋಡಗಳ ಉಟ್ಟ
ಮಿಂಚುಗಳ ತೊಟ್ಟ
ಮೈಚಳಿಯ ಬಿಟ್ಟ
ನಾಟ್ಯರ್ಷಿ ಮೇಘರಾಜ

ಕುಣಿಯುವನು ಥಕ್ಕ
ಥಕಥೈ ಕಡ್ತಕ
ಧಿತ್ತಾ ಕಡ್ತಕ
ಗತ್ತಿಂಗೆ ಮೇಘರಾಜ

ನಡುಗಿಸುತ ದಿಕ್ಕ
ಕಾಲಡಿಗೆ ಸಿಕ್ಕ
ಬೆಟ್ಟಗಳ ಸೊಕ್ಕ
ಮುರಿವಂತೆ ಮೇಘರಾಜ

ಗುಡುಗೇ ಮೃದಂಗ
ನಾದದ ತರಂಗ
ಸೂಸಿವೆ ದಿಗಂಗ
ಪುಳಕಿಸುವ ಹಾಗೆ ಜವದಿ

ನಭದಂತರಂಗ
ಕಂಪಿಸುವ ಪಾಂಗ
ತೋರುತ್ತ ಚೆಂಗ-
ನಿಳಿಯಿತ್ತು ಉಲ್ಕೆ ನಭದಿ

ನುಡಿಸಿದರೆ ಗುಡುಗು
ಕೆರಳಿದರೆ ಸಿಡಿಲು
ಝಳಪಿಸಲು ಕಡುಗ-
ಮೈಮುರಿವ ಮಿಂಚಿನಲಗು

ಇವ ಹೆಜ್ಜೆಯಿಡಲು
ಈ ಪೊಡವಿಯೊಡಲು
ಸಂತಸದ ಕಡಲು
ಆನಂದ ಹೊರಗು ಒಳಗು

ಹಿಮ್ಮೇಳ ಬಾನ
ಭೇದಿಸುವ ಧ್ವಾನ
ಪುಲಕಿತವು ಪ್ರಾಣ
ಕತೆಗಾರನೆಲ್ಲಿ, ಕಾಣ!

ಈ ಯಕ್ಷಗಾನ
ಬಣ್ಣಿಸುವ ಜಾಣ
ಮುಗಿಸಯ್ಯ ಕವನ
ನಿನಗೆಲ್ಲಿ ಮುಂದೆ ತ್ರಾಣ?

* * *

ಅಂತರಂಗದ ಅಂತರಿಕ್ಷದಿ

ಅಂತರಂಗದ ಅಂತರಿಕ್ಷದ
ಭಾವಭಗಣಕೆ ಲೆಕ್ಕವೆ?
ನರನನೋಟಕೆ ನಿಲುಕಲರಿಯದ
ಗ್ರಹಗಳೆಲ್ಲವು ಸಿಕ್ಕವೆ?

ಮುಂದೆ ತೋರುವ ಗ್ರಹಗಳಾಚೆಗೆ
ಸೂರ್ಯಮಂಡಲ ಬೇರಿವೆ
ಜ್ಞಾತಲೋಕಗಳಾಚೆ ಅರಿಯದ
ಲೋಕವೆನಿತೋ ಬೇರಿವೆ

ಊಹೆ ಕಲ್ಪನೆ ಗ್ರಹಣ ಮನನದ
ಯುಗಯುಗದ ತಪಕೆಟುಕದ
ಗುಹ್ಯವಿಷಯಗಳೆನಿತು ಕೋಟಿಯೋ
ಯಾರು ಗುರುತಿಸಬೇಕದ?

ಅಂತರಂಗದ ಅಂತರಿಕ್ಷದಿ
ಅಂತವಿಲ್ಲದ ವ್ಯಾಪ್ತಿಯು
ಒಮ್ಮೆ ಕತ್ತಲೆ ಒಮ್ಮೆ ನಿಗಿನಿಗಿ
ಆತ್ಮ ಸೂರ್ಯನ ದೀಪ್ತಿಯು

ಸಣ್ಣದೆಂದರೆ ಸಣ್ಣದಿದು ಭಾ-
ವಿಸಲು ಭೂಮದಿ ಭೂಮವು
ಘಟದ ಹಿಂಗಡೆ ತಟವೆ ತೋರದ
ಅಂತರಂಗದ ವ್ಯೋಮವು!
ಹೃದಯ ತರಣಿಯ ಸ್ಫುರಣ ಕಿರಣದ
ರಾಸಲೀಲೆಯ ರಂಗವು
ಶುದ್ಧ ಪ್ರೇಮವೆ ಪೌರ್ಣಿಮಾಶಶಿ
ಕಲ್ಪನೆಯೆ ಪತಂಗವು
ಪ್ರತಿಭೆ ವಿದ್ಯುನ್ನಟಿಯು ಸ್ಫೂರ್ತಿಯು
ಮಿಂಚಿನಂಚಿನ ಚಂಚಲೆ
ಸ್ವಪ್ನ ರೋಹಿಣಿ ಪ್ರೇಮಚಂದ್ರಗೆ
ಲಕ್ಷರೂಪಿಣಿ, ಪ್ರೇಮಲೆ
ಇಲ್ಲಿ ದುಗುಡದ ಕಾಳಮೇಘವು
ಸೊಗದ ಶಾರದ ನೀರದ
ಇಲ್ಲಿ ಆಸೆಯ ನೂರು ತಾರಗೆ
ದೂರ ದೃಷ್ಟಿಗು ತೋರದ
ಇದೊ ನಿರಾಶೆಯ ನಿಶೆಯ ಕಾಳಿಮೆ
ಧೃತಿಯ ಧ್ರುವ ನಕ್ಷತ್ರವು
ಇದೊ ಕಲಾಮತಿ ನಿತ್ಯ ಬರೆಯುವ
ಬಯಲ ಭಿತ್ತಿಯ ಚಿತ್ರವು
ಮನದ ಕಾಮನೆ ಕಾಮಚಾಪವು
ಗರ್ವ ಮೇಘದ ಗರ್ಜನೆ
ಕಿಡಿಯ ಕಾರುವ ಕ್ರೋಧವೇ ಶಿಖಿ
ಬೆಳ್ಳಿ ಚಿಕ್ಕೆಯು ಚಿಂತನೆ
ಇಲ್ಲೆ ಹುಟ್ಟಲು ಬಹುದು ಗಂಗೆಯು
ಇಲ್ಲೆ ಬಿಜ್ಜೋದರಿಯರು
ಇಲ್ಲೆ ಕಿನ್ನರ ಸ್ವರ ತರಂಗಿಣಿ
ಈಪ್ಸಿತದ ಅಪ್ಸರೆಯರು

ಇಲ್ಲೆ ನಂದನವಿಲ್ಲೆ ಮಸಣವು
ಮೃತ್ಯು ಲಕ್ಷ್ಮಿಯ ವಾಸವು
ಇಲ್ಲೆ ನಾಕವು ಇಲ್ಲೆ ನರಕವು
ಬಯಸಿದೊಡೆ ಕೈಲಾಸವು

* * *

ಬೆಂಗಳೂರ ಹುಡಿಗೆ

ಹೂವ ಮುಡಿದು ಒಂದು ಹೆಡಿಗೆ
ತತ್ತರಿಸುತಿರಲು ನಡಿಗೆ
ಒನಪು ಸೂಸೆ ಅಡಿಗೆ ಅಡಿಗೆ
ಹೊರಟೆ ಬೆಂಗಳೂರ ಹುಡಿಗೆ–
ಯಾವ ಕಡೆಗೆ?

ಮುಗಿಲ ಬಿಲ್ಲು ಉಟ್ಟ ಉಡಿಗೆ
ಮಯೂರ ಪಂಖ ತೊಟ್ಟ ತೊಡಿಗೆ
ಮುದುಕರೆದೆಯು ಸಹಿತ ನಡುಗೆ
ಹೊರಟೆ ಬೆಂಗಳೂರ ಹುಡಿಗೆ–
ಯಾವ ಕಡೆಗೆ?

ಹೆಜ್ಜೆಗೊಮ್ಮೆ ಲಜ್ಜೆ ತುಳುಕೆ
ಮಧ್ಯ ಬಳಲಿ ಬಾಗಿ ಬಳುಕೆ
ನವಿರು ಮೂಡೆ ನಡೆವ ನೆಲಕೆ
ಹೊರಟೆ ನೋಟ ಬೀರಿ ಕೆಲಕೆ–
ಯಾವ ಸ್ಥಲಕೆ?
ಉರದಿ ನೂರು ನೋಟ ಸಿಲುಕೆ
ಕಾಮಿ ಗಾಳಿ ಕೈಯ ಕುಲುಕೆ
ಮೋಹ ಚಿಮ್ಮೆ ಎಡಕೆ ಬಲಕೆ
ಹೊರಟೆ ದೃಷ್ಟಿ ತೂರಿ ಕೆಲಕೆ–
ಯಾವ ಸ್ಥಲಕೆ?

ಮಗಮಗಿಸಲು ನಡೆದ ಹಾದಿ
ಝಗಝಗಿಸಲು ಹೊರಟ ಬೀದಿ
ಧಗಧಗಿಸಲು ಜನದ ವನಧಿ
ಹೊರಟೆ ಶುದ್ಧ ಹುಡುಗಿತನದಿ–
ಎತ್ತ ನಡೆದಿ?
ಬಿರಿದ ಹೂವೊ ಇಂದ್ರವನದಿ
ಕಳಿತ ಹಣ್ಣೊ ಕಲ್ಪ ಕುಜದಿ
ಇಳೆಯ ಹೆಣ್ಣೊ ಇವಳು ನಿಜದಿ?
ಹೊರಟೆ ಅಚ್ಚ ಹರೆಯ ಹುಡದಿ
ಎತ್ತ ನಡೆದಿ?

* * *

ಕಣ್ಣುಮುಚ್ಚಾಲೆ

ಚಿಕ್ಕಂದಿನೊಳು ಆಟವೆಂದು ಆಡಿದೆ ಸಖಿಯೆ
ಕಣ್ಣುಮುಚ್ಚಾಲೆಯನು ನಿನ್ನ ಕೂಡ
ಬೆಳೆದಂತೆ ಬಿದಿಯಿದೋ ವಿಧವಿಧದಿ ಆಡುತಿದೆ
ಕಣ್ಣುಮುಚ್ಚಾಲೆಯನು ನನ್ನ ಕೂಡ
ಬಿಸಿಲು ಬೆಳ್ದಿಂಗಳೂ ಆಡುತಿವೆ ಹಗಲಿರುಳು
ಕಣ್ಣುಮುಚ್ಚಾಲೆಯನು ನೆರಳ ಕೂಡ
ಆಡುತಿದೆ, ಆಡುತಿದೆ ದೈವವಿದೊ ಹಗಲಿರುಳು
ಕಣ್ಣುಮುಚ್ಚಾಲೆಯನು ಕರುಳ ಕೂಡ
ಮೋಡವೂ ಆಡುತಿದೆ ನೋಡದೋ ಆಗಸದಿ
ಕಣ್ಣುಮುಚ್ಚಾಲೆಯನು ಶಶಿಯ ಕೂಡ
ಆಡುವವರಾರಿಹರು ಪ್ರೇಮಿಯೊಲು ಈ ಜಗದಿ
ಕಣ್ಣುಮುಚ್ಚಾಲೆಯನು ವಿಷದ ಕೂಡ

* * *

ರೂಪ

ಸದ್ರೂಪ

ಪುಷ್ಪ-ವರ್ಣಮಾಲೆಯಲ್ಲಿ ನಿನ್ನ ಹಾಡು ಬರೆದಿದೆ
ಪಕ್ಷಿಕುಲದ ವಾಣಿಯಲ್ಲಿ ನಿನ್ನ ಗಾನ ಹರಿದಿದೆ
ಮುಗಿಲ ನೂರು ದೀಪಗಳಲಿ ನಿನ್ನ ಬೆಳಕೆ ಮೆರೆದಿದೆ
ಜಗದ ಬೈಗು ಬೆಳಗಿನಲ್ಲಿ ನಿನ್ನ ಸೊಬಗೆ ಸುರಿದಿದೆ
ಕಣ್ಣು ಕಾಣುವನಿತು ದೂರ ಚೆಲುವು ಚೆಲ್ಲವರಿದಿದೆ
ಎಲ್ಲ ಚೆಲುವಿನಲ್ಲಿ ನಿನ್ನ ಅಂದ ಚೆಂದ ಬೆರೆದಿದೆ

ಚಿದ್ರೂಪ

ಚಂದ್ರಲೇಖೆಯಲ್ಲಿ ನಿನ್ನ ಅಮೃತ ರುಚಿಯು ಅಡಗಿದೆ
ತೊಯ್ದ ಮಣ್ಣಿನಲ್ಲಿ ನಿನ್ನ ಮೈಯ ಕಂಪು ಇಡಿಗಿದೆ
ಬೀಜ ಕೋಟಿಯಲ್ಲಿ ನಿನ್ನ ತೇಜರಾಶಿ ಮಡಗಿದೆ
ಮೇಘಮಾಲೆಯಲ್ಲಿ ನಿನ್ನ ದಿವ್ಯಧ್ವನಿಯ ಗುಡುಗಿದೆ
ಎಲ್ಲ ತೋರ್ಕೆಯಾಚೆ ನಿನ್ನ ಚೆಲುವು ಸೊಬಗು ಬೆಡಗಿದೆ
ಶಿಲೆಯ ಮರೆಯ ಶಿಖಿಯ ತೆರದಿ ನೀನೆ ಎಲ್ಲು ಅಡಗಿದೆ

ಆನಂದ ರೂಪ

ನೆಲವು ಮುಗಿಲನಪ್ಪಿದಲ್ಲಿ ಒಪ್ಪಿ ಮೆರೆವ ಸಿರಿಯೆ
ಗಿರಿಯು ಗಗನ ಮುದ್ದಿಪಲ್ಲಿ ಮೂಡಿ ಬರುವ ತೆರೆಯೆ
ಶಶಿಯ ಸೆಳೆತದಿಂದ ಶರಧಿ ಹಿಗ್ಗಿ ಮೇಲೆ ಹರಿಯೆ
ಬಾನು ಬಯಲು ಬುವಿಗಳಲ್ಲಿ ಒಗೆವ ಸೊಗದ ನೊರೆಯೆ
ರಾಧೆಯೆದೆಯ ಕೃಷ್ಣನಾಗಿ ಹೊಳೆವ ಜೀವಝರಿಯೆ
ಕೃಷ್ಣನೆದೆಯ ರಾಧೆಯಾಗಿ ನಲಿವ ಬಾಳಕರೆಯೆ

ನಮೋ ನಮೋ ರೂಪವೆ-
ನಮೋ ಬಾಳ ದೀಪವೆ !

* * *

ಮಾನಸಕೆ ಮೊರೆ

ವಿಷವಾಗಿ ಬಾಳೆ
ಕಸಿವಿಸಿಯ ತಾಳೆ
ರಸವಾಗಿ ಬಳಿಗೆ ಬಾರೆ
ರಸವಳಿದ ಮೇಲೆ
ಅಸುವಳಿದ ಹಾಗೆ–ಮಾ
ನಸ ತುಂಬಿ ಸೂಸಿ ಬಾರೆ!

ಗೋಗರೆವೆ ಕರೆವೆ
ಮಾನಸವೆ ಬಾರ
ತಾಮಸವ ಕಳೆಯೆ ಬಾರ
ಕಿಲ್ಮಿಷವ ಕಳೆದು
ರಾಜಸವ ತೊಳೆದು
ಸಂತಸದ ಸೆಲೆಯ ತಾರ!

ಇದೊ ಹಂಸ ಹಾರಿ
ಬರುತಿಹವು ಸಾರಿ
ಸುತ್ತೆಲ್ಲ ಸೊಗವ ತೂರಿ
ಚಳಿಯೊಡ್ಡು ಜಾರಿ
ಹೊಂಬಿಸಿಲ ಬೀರಿ
ರವಿ ಬರುವ ತೇರನೇರಿ

---

* ಕೈಲಾಸ–ಮಾನಸ ಸರೋವರಕ್ಕೆ ಹತ್ತಿರದಲ್ಲಿಯೇ ರಾಕ್ಷಸ–ತಾಳ ಎಂಬ ಸರಸಿಯೊಂದಿದೆ. ಒಂದು ಸಣ್ಣ ಕಾಲುವೆ ಮಾನಸಸರೋವರದಿಂದ ಹೊರಟು ರಾಕ್ಷಸತಳ ಸರಸಿಯನ್ನು ಸೇರುತ್ತದೆ. ಮೊದಲು ರಾಕ್ಷಸತಳದ ನೀರನ್ನು ಯಾರೂ ಕುಡಿಯುತ್ತಿರಲಿಲ್ಲವೆಂದೂ, ಮಾನಸದಿಂದ ರಾಕ್ಷಸಕ್ಕೆ ಕಾಲುವೆಯುಂಟಾಗಿ ಮಾನಸದ ನೀರು ರಾಕ್ಷಸಕ್ಕೆ ಸೇರಿದ ಮೇಲೆ ಅದೂ ಪವಿತ್ರವೆನಿಸಿ ಕುಡಿಯತೊಡಗಿದರೆಂದೂ ದಂತಕಥೆಯಿದೆ. ಇದು ರಾಕ್ಷಸವು ಮಾನಸಕ್ಕೆ ಮೊರೆಯಿಡುತ್ತಿರುವ ಹಾಡು.

ಹಿಮವಾಗಿ ಮೆರೆದೆ
ಇದುವರೆಗೆ ಬರಿದೆ
ಲೋಕೋಪಕಾರ ಮರೆದೆ
ನನ್ನನ್ನು ಮರೆದೆ
ನಿನ್ನನ್ನೆ ಮರೆದೆ
ಇನ್ನಾದರೆರಕ ಬರದೆ?

ಮತ್ತೊಮ್ಮೆ ಕರಗು
ಜಲರಾಶಿಯಾಗು
ಜಡ ನಿದ್ರೆಯನ್ನು ನೀಗು
ಥಳಥಳಿಸಿ ಬೆಳಗು
ಕಲಕಲದಿ ಮೊಳಗು
ಅಲೆಯಲೆಯ ಕುಣಿಸಿ ತೊಳಗು

ಮತ್ತೊಮ್ಮೆ ಕಮಲ–
ವನ ವಲರಿ ಭ್ರಮರ–
ಸಂಗೀತ ಬರಲಿ ಮಧುರ
ಕೈಲಾಸ ಶಿಖರ
ತರುಗುಲ್ಮ ನಿಕರ
ಗಳಿಗಾಗು ನೀನು ಮಕುರ

ಇದೊ ಹಿಮವು ಸೀಳಿ
ಬಹುರೂಪ ತಾಳಿ
ನಡೆದಿಹುದು ಶಬ್ದ ಕೇಳಿ
ಅದೊ ಜಲದ ನೀಲಿ
ಬಂದಿಹುದು ತೇಲಿ
ಹೊಸ ಹುಟ್ಟನಿಂದು ಹೋಲಿ

ಇದೊ ಸಲಿಲಲೀಲೆ
ಕಲ್ಲೋಲ ಮಾಲೆ
ಅದೊ ಮತ್ಸ್ಯ ನೃತ್ಯ ಶಾಲೆ
ಓ ಹಿಮದುಕೂಲೆ
ಹರಿ ಇನ್ನುಮೇಲೆ
ನೀನಲ್ತೆ ಚಲನಶೀಲೆ?

ಮುಗಿದಾಯ್ತು ನಿದ್ದೆ
ಮೈಕೊಡಹಿ ಎದ್ದೆ
ಜಡತೆಯನು ಮತ್ತೆ ಗೆದ್ದೆ
ಹರಿಯೌ ಸಮೃದ್ಧಿ
ಸರ್ವಾಂಗ ಶುದ್ಧಿ
ಕರೆಯುವುದು ಮೂಲ ಶ್ರದ್ಧೆ

ಹಿಮ ಹಿಮಕೆ ತಾಗಿ
ಮೃದು ಮಥನವಾಗಿ
ಮತ್ತೊಮ್ಮೆ ಉದಕವಾಗಿ
ಹಿಮಶ್ವೇತ ಕರಗಿ
ಜಲ ನೀಲಿಯಾಗಿ
ಕೆರೆ ನೀಲಪದಕವಾಗಿ

ಬಾ, ಪರುಷ ಬಾರ
ಓ ಹರುಷ ಬಾರ
ಪ್ರತಿ ನಿಮಿಷ ಜನಿಸಿ ಬಾರ!
ರಸವರ್ಷ, ಜೀವ-
ದುತ್ಕರ್ಷ ಬಾರ
ಸಂಘರ್ಷವಳಿಸು ಬಾರ !

ಹರಿ ಹಿಮದ ಸೆರೆಯ
ತೆರೆ ನಿನ್ನ ಸಿರಿಯ
ತ್ವರೆ ಕೇಳು ನನ್ನ ಮೊರೆಯ
ನೀ ಪುಣ್ಯ ತಿರೆಯ
ಲಾವಣ್ಯ ಧರೆಯ
ಮತ್ತೊಮ್ಮೆ ತಾಯಿ ಹರಿಯ!

* * *

ಜಗವೆ ಕೂಡಲಸಂಗಮ

ಪ್ರಕೃತಿಯೇ ಗುರು ಗಗನ ಲಿಂಗವು
ಜಗವೆ ಕೂಡಲ ಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ

ಕುಡಿವ ನೀರೇ ತೀರ್ಥ ತಿನ್ನುವ
ರೊಟ್ಟಿ ಶಿವನ ಪ್ರಸಾದವು
ಶ್ರಮದ ಬೆಮರೇ ಸ್ನಾನ ದುಡಿತದ
ಹಾಡೆ ಮಂತ್ರನಿನಾದವು

ಭದ್ರವನ್ನೇ ನೋಳ್ಪ ಅಕ್ಷಿಯೆ
ಭಾವಿಸಲು ರುದ್ರಾಕ್ಷಿಯು
ಭದ್ರವನ್ನೇ ನುಡಿವೆ ಮಾಡುವೆ–
ನೆಂಬ ಬುದ್ಧಿಯೆ ದೀಕ್ಷೆಯು

ಸರ್ವವೂ ಶಿವನಂಶವೆನ್ನುವ
ಧರ್ಮವೊಂದೇ ಧರ್ಮವು
ಅನ್ಯರನು ಅಳಲಿಸದ ಹಿತಕರ
ಕರ್ಮವೊಂದೇ ಕರ್ಮವು

ಎಲ್ಲರೆಲ್ಲರಿಗಾಗಿಯೆನ್ನುವ
ಜ್ಞಾನವೊಂದೇ ಜ್ಞಾನವು
ಒಲಿದು ಒಲಿಸುವ ನಲಿದು ನಲಿಸುವ
ಕಲೆಯೆ ಅಮೃತನಿಧಾನವು

ಉಣಿಸಿ ಉಣ್ಣುವ ಭಾವ ಭಕ್ತಿಯು
ಒಲ್ಲೆನೆನೆ ಸುವಿರಕ್ತಿಯು
ಕೂಡಿ ಕಲಿಯಲು ಕೂಡಿ ಬೆಳೆಯಲು
ಕೂಡಿ ನಲಿಯಲು ಮುಕ್ತಿಯು

* * *

ಮೈಮುರಿದು ಮೇಲೇಳು

ಮೈಮುರಿದು ಮೇಲೇಳು
ಮಲಗಿರುವ ಚೆಲುವೆ
ಚೇತರಿಸಿಕೊಂಡೇಳು
ಒಳಗಿರುವ ಒಲವೆ
ಬೀಜಗಳ ಮಡಿಲಿಂದ
ಸಿಡಿದೇಳು ಚೆಲುವೆ
ಬೊಡ್ಡೆಗಳ ಮರೆಯಿಂದ

ಹೊರಗೆ ಬಾ ಚೆಲುವೆ
ಭೂಗರ್ಭದೊಳಗಿಂದ
ಪುಟಿದು ಬಾ ಚೆಲುವೆ
ಆಕಾಶದಿಂದಿಳೆಗೆ
ಇಳಿದು ಬಾ ಚೆಲುವೆ
ಮೈಮುರಿದು ಮೇಲೇಳು
ಮಲಗಿರುವ ಚೆಲುವೆ!

ಕನ್ನೆತನದಲಿ ಹೂತು
ಹೊಮ್ಮಿ ಬಾ ಒಲವೆ
ಸಣ್ಣತನದಲಿ ಸ್ರವಿಸಿ
ಚಿಮ್ಮಿ ಬಾ ಒಲವೆ
ತಂದೆತಾಯ್ತನದಲ್ಲಿ
ತಳಿರಿ ಬಾ ಒಲವೆ
ಜೀವ ಜೀವಕೆ ಒಲಿದು
ಅಲರಿ ಬಾ ಒಲವೆ
ಚೇತರಿಸಿಕೊಂಡೇಳು
ಒಳಗಿರುವ ಒಲವೆ!

* * *

ಚರಣ ಚಿಹ್ನ

ಯಾರಾರ ಚರಣ ಚಿಹ್ನ
ಮೂಡಿಹವು ಮನದಿ ಚೆನ್ನ?
ಮೊದಲು ಮೂಡಿತು ತಾಯ
ತಳಿರಡಿಯ ಚಿಹ್ನ ರಾಯ
ತಂದೆಯಡಿ ಗುರುವಿನಡಿ–
ಗಾಯ್ತು ಮನವಚ್ಚುಪಡಿ
ಯದ್ಯದ್ವಿಭೂತಿಯೋ
ಶ್ರೀಮದೂರ್ಜಿತವೋ
ಆ ಎಲ್ಲರಡಿಮೂಡಿ
ಮನವಾಯ್ತು ಮಡಿ!

ಆ ಸಂಜೆ ನಿನ್ನನ್ನು
ನೋಡುತಲೆ ಮನವನ್ನು
ಎಂಥ ಝುಂಝಾವಾತ
ಆವರಿಸಿತೋ ನಾಥ!
ಧೂಳೆದ್ದು ಮೊದಲಿದ್ದ
ಹೆಜ್ಜೆಗಳು ಮಸಕಾಗಿ

ನೆನಹು ಪುಳಿನದ ಮೇಲೆ
ನಿನ್ನ ಹೆಜ್ಜೆಯ ಲೀಲೆ–
ಗಾರಂಭವಾಯ್ತೆರೆಯ
ಪಡೆದೆ ನಾನೀ ಸಿರಿಯ!

ಹೂವುಗಳ ಹೃದಯವನು
ಹೂಬಿಸಿಲು ಹೊಕ್ಕಂತೆ
ಇಬ್ಬನಿಯ ಎದೆಯಲ್ಲಿ
ಇನ ಕಿರಣ ನಕ್ಕಂತೆ
ಚಕ್ರತೀರ್ಥದ ನಡುವೆ
ಶಶಿಬಿಂಬ ಸಿಕ್ಕಂತೆ
ತಂತಿಯಿಂ ಸಿಡಿದ ಸ್ವರ
ತಂತಿಯಲೆ ಹೊಕ್ಕಂತೆ

ಎದೆಯ ಹೊಕ್ಕುವು ನಿನ್ನ
ಹೆಜ್ಜೆಗಳು ಹೃದಯೇಶ
ಬೇರೆ ಅಡಿಗಳ ಗೊಡವೆ
ಇನ್ನೇಕೆ ಪ್ರಾಣೇಶ?
ನಾ ಪಡೆದ ಸಿರಿಗಳಲಿ
ಇದುವೆ ಮಹದೈಶ್ವರ್ಯ
ನನ್ನ ಧನ್ಯತೆಗಿಷ್ಟೆ
ಸಿರಿ ಸಾಕು ಆರ್ಯ!

* * *

ಉತ್ತರ

ಹೂವ ತರಲಿಲ್ಲೆಂದ ನಲ್ಲೆಗೆ
ಯಾವ ಉತ್ತರ ಹೇಳಲಿ?

ಹೂಗಳೇತಕೆ ಹೂವಿಗೆಂಬೆನು
ಯಾಕೆ ಸುಳ್ಳನು ಹೇಳಲಿ?

ಯಾವುದಿದೆ ಹೂ ಪೇಟೆಯೊಳು ಸಖಿ
ನಿನ್ನೊಳೇ ಮೊದಲಿಲ್ಲದ?

ನಿನ್ನೊಳಿವೆ ಜಗದೆಲ್ಲ ಹೂಗಳು
ನಾನು ಭಾವಿಸೆ ಷಟ್ಪದ!

ನಿನ್ನ ಮೂಗಿನ ಸಂಪಿಗೆಗೆ ಸಮ–
ನಾದ ಸಂಪಿಗೆಯೆಲ್ಲಿದೆ?

ಇದ್ದರೂ ಬಾಡುವುದು, ಬಾಡದ
ನಾಗ ಸಂಪಿಗೆಯಿಲ್ಲಿದೆ!

ತುಟಿ ಗುಲಾಬಿಯು, ಕಣ್ಣುಕೋರಕ
ಮುಖವೆ ಕಮಲವು ಮಾನಿನಿ

ನಗೆಯೆ ಮಲ್ಲಿಗೆ ಕೆನ್ನೆ ಕೇದಗೆ
ರದನ ಕುಂದುವು ಕಾಮಿನಿ

ನೀ ಸಚೇತನ ಪುಷ್ಪವನ ಸಖಿ
ಏಕೆ ಹೂಗಳ ಬಯಸುವಿ?

ಹೂಗಳೊಡನೆಯೆ ಸ್ಪರ್ಧೆ ನಡೆದರೆ
ನೀನೆ ಹೂಗಳ ಜಯಿಸುವಿ!

ಉಳಿದ ಹೂಗಳಿಗೊಂದೆ ರೂಪವು
ನಿನ್ನ ಹೂ ಹಲವಂದವು

ಹೂವಿನಲಿ ಹೂ ಹುಟ್ಟುವಚ್ಚರಿ
ಅಲ್ಲಿ ನಡೆವುದಮಂದವು!

ಕೆನ್ನೆ–ಕೇದಗೆಯಲ್ಲಿ ಲಜ್ಜೆಯ
ಚೆಂಗುಲಾಬಿಯು ಬಿರಿವುದು!

ಕಣ್ಣ ನೈದಿಲದಲ್ಲಿ ಕೋಪದ
ಕೆಂಪು ತಾವರೆ ಬರುವುದು!

ಮುಖದ ಕಮಲದಿ ಕಣ್ಣ ನೈದಿಲ
ಅದರೊಳೀ ಕೆಂದಾವರೆ!

ಏನು ಮೋಡಿಯು ಎಂಥ ಗಾಡಿಯು
ಮತ್ತೆ ಹೂಗಳ ತರುವರೆ?

ಮುನಿಸ ಬಿಡು ಬಾ ತೊಡಿಸು ಕೊರಳಿಗೆ
ಕರ-ಶಿರೀಷದ ಮಾಲೆಯ

ಮನದ ಆರಡಿ ಅದರ ಮಧುರಸ
ಕುಡಿದು ಹೊಡೆಯಲಿ ಜೋಲಿಯ.

* * *

ಹೃದಯದ ಹುಲ್ಲೆ

ನಿನ್ನ ಕಲ್ಲೆದೆಯ ಮೇಲೆ
ನನ್ನ ಕಂಬನಿಯ ಧಾರೆ
ಸುರಿಯುತ್ತಲೇ ಇಹುದು-
ಮೊರೆಯುತ್ತಲೇ ಇಹುದು!
ನಿನ್ನ ನಿಷ್ಠುರದ ಮೇಲೆ
ನನ್ನ ನಿಷ್ಠೆಯ ಧಾರೆ
ಸುರಿಯುತ್ತಲೇ ಇಹುದು-
ಹರಿಯುತ್ತಲೇ ಇಹುದು!
ನಿನ್ನ ನಿರ್ಲಕ್ಷ್ಯದಲೆ
ನನ್ನ ಅರ್ಪಣ ವೀಣೆ
ಮಿಡಿಯುತ್ತಲೇ ಇಹುದು-
ನುಡಿಯುತ್ತಲೇ ಇಹುದು!

ನಿನ್ನ ನಿಷ್ಕಂಪದಲೆ
ನನ್ನೆದೆಯ ಸುವ್ವಾಲೆ
ಹಾಡುತ್ತಲೇ ಇಹುದು-
ಕಾಡುತ್ತಲೇ ಇಹುದು!
ನಿನ್ನ ನಿರ್ದಯದಲ್ಲೆ
ನನ್ನ ಹೃದಯದ ಹುಲ್ಲೆ
ಜಿಗಿಯುತ್ತಲೇ ಇಹುದು-
ನೆಗೆಯುತ್ತಲೇ ಇಹುದು !

* * *

ಬರಲಿಲ್ಲ !

ಬರಲಿಲ್ಲ ಈ ತಟಕೆ ನೀನಾದರೂ
ಬರಲಿಲ್ಲ ಆ ತಟಕೆ ನಾನಾದರೂ ॥ ಪ ॥
ಆಗಲಿಕೆಯೆ ಅಗಲಲಿಲ್ಲೇನಾದರೂ
ಹಗಲೊಂದು ಹಲವಾರು ಯುಗವಾದರೂ ॥ ಅ.ಪ ॥

ವಿರಹಕ್ಕೆ ಕೊನೆಯುಂಟೆ ಎಂದಾದರೂ
ಪ್ರೇಮಕ್ಕೆ ಬಲವುಂಟೆ ಮುಂದಾದರೂ
ಏರಿಕೆಯ ಯೌವನವು ಹಿಂದಾದರೂ
ಹೋಗೊಮ್ಮೆ ಕನಸಿನಲಿ ಬಂದಾದರೂ.... ಬರಲಿಲ್ಲ
ಎದೆಯೆಲ್ಲ ಮೃದುವಾಗಿ ಹೆಣ್ಣಾದರೂ
ಮೈಯೆಲ್ಲ ನವೆನವೆದು ಸಣ್ಣಾದರೂ
ಮೈಕೂದಲೆಲ್ಲವು ಕಣ್ಣಾದರೂ
ತೋರದಾ ಮುಖಚಂದ್ರವಿನ್ನಾದರೂ..... ಬರಲಿಲ್ಲ....
ಮೂಕಶೋಕವೆ ನನ್ನ ಗತಿಯಾದರೂ
ನಿನ್ನ ನೆನಹೇ ನನ್ನ ಮತಿಯಾದರೂ
ಜೀವನವೆ ಜ್ವಲಿಸುವ ಚಿತೆಯಾದರೂ
ಪತಿಯಳಿದ ರತಿಯಂತೆ ಸ್ಥಿತಿಯಾದರೂ....
ಬರಲಿಲ್ಲ ಈ ತಟಕೆ ನೀನಾದರೂ
ಬರಲಿಲ್ಲ ಆ ತಟಕೆ ನಾನಾದರೂ॥

* * *

ದೂರವಿಲ್ಲ

ಅಳುತಿರುವ ಇಬ್ಬನಿಯ ಕಂಡು ನಗುತಿಹ ಹೂವೆ
ನೀನಳುವ ಸಮಯವೂ ದೂರವಿಲ್ಲ
ನಗುತಿರುವ ನೈದಿಲವ ನೋಡಿ ಅಳುತಿಹ ಕಮಲ
ನೀ ನಗುವ ದಿವಸವೂ ದೂರವಿಲ್ಲ

ಬೇಸಿಗೆಯ ಬಡತನವ ನೆನೆದು ಮರುಗುವ ತೊರೆಯೆ
ಮಳೆಗಾಲದೈಶ್ವರ್ಯ ದೂರವಿಲ್ಲ
ಸುಗ್ಗಿಯಲಿ ಹಿಗ್ಗಿನಲಿ ತೂಗಿ ತೊನೆಯುವ ವನವೆ
ಶಿಶಿರ ತಹ ನಗ್ನತೆಯು ದೂರವಿಲ್ಲ

ಹುಣ್ಣಿಮೆಯ ಚಂದಿರನ ಪಡೆದು ನಗುತಿಹ ರಜನಿ
ಅಮವಾಸ್ಯೆ ಕಾದಿಹುದು-ದೂರವಿಲ್ಲ
ವಿರಹವನೆ ನೆನೆ ನೆನೆದು ಪರಿತಪಿಸುತಿಹ ಜೀವಿ
ಮಧುರ ಮಿಲನವು ಕೂಡ ದೂರವಿಲ್ಲ

ಬದುಕಿರುವ ಸಂಭ್ರಮದಿ ನಗುತಿರುವ ಜೀವಿಯೇ
ಮರಣ ಮಸಣಗಳೆರಡು ದೂರವಿಲ್ಲ
ಈ ಜಗವ ಮೂದಲಿಸಿ ಗೋಗರೆವ ಜೀವಿಯೇ
ಆ ಜಗದ ಮೇರೆಯೂ ದೂರವಿಲ್ಲ

* * *

ಜೀವ-ಜಡ

ಅಲ್ಲಿ,
ಆ ಬಯಲಿನಲ್ಲಿ
ನಿನ್ನೆಯೋ ಮೊನ್ನೆಯೋ
ಹುಡಿಯು ಹಾರುತಿತ್ತು
ಇಂದಲ್ಲಿ,
ಚೆಲುವ ಚೆಲ್ಲಿ
ಕೊನರಿ ನಿಂತಿದೆ ಹಸಿರು
ಮೊಳೆತು ಕಾಣದ ಬಿತ್ತು

ಬಗೆಯ ಬಯಲೆ,
ಕೊನರಲಾರೆಯ ನೀನು

ಈ ಬಯಲಿನಂತೆ?
ಚಿಗುರಲಾರದೆ ಜೀವ
ಜಡವು ಚಿಗಿತಂತೆ?
ಅದೊ,
ಆ ವೃಕ್ಷದಲ್ಲಿ
ಔಷಧಿಗು ಇರಲಿಲ್ಲ
ಎಲೆಯೊಂದು ಮೊನ್ನೆ

ಇಂದಲ್ಲಿ
ಹೊಗರ ಚೆಲ್ಲಿ
ಥಳಥಳಿಸುತಿವೆ ಚಿಗುರು
ಹೆತ್ತು ಹೂವನ್ನೇ!
ಮನದ ವನವೆ,
ಚಿಗುರಲಾರೆಯ ನೀನು
ವೃಕ್ಷ ಚಿಗಿತಂತೆ?
ಮಲರಲಾರದೆ ಜೀವ
ಜಡ ಮಲರಿದಂತೆ?

ಅಕೊ,
ಆ ಕೆರೆಯಲ್ಲಿ
ಕೊಳೆತ ಮೀನಿನ ನಾತ
ಬರುತಿತ್ತು ನಿನ್ನೆ
ಇಂದಲ್ಲಿ
ಮುದವ ಚೆಲ್ಲಿ
ನೃತ್ಯವಾಡುತಲಿಹಳು
ಸಲಿಲ ಕನ್ಯೆ!

ಹೃದಯಸರಸಿ,
ತುಂಬಲಾರೆಯ ನೀನು
ಕೆರೆ ತುಂಬಿದಂತೆ?
ತುಂಬಲಾರದೆ ಜೀವ
ಜಡ ತುಂಬಿದಂತೆ?

* * *

ನೌಕೆ–ನಾವಿಕ

ನಾನು ಮುಳುಗುವ ನೌಕೆ ನಾವಿಕ
ಅಡಿಯ ಕಡಲಿದೊ ಭೀಕರ
ಇದು ತಿಮಿಂಗಿಲ ಮೊಸಳೆ ಮೀಂಗಳ
ಬಾಳ ಕೊಳಗುಳದಾಕರ

ಎಲ್ಲಿ ಕಾಲನ ಕಲ್ಲು ಬಂಡೆಯು
ಅಡಗಿಹುದೊ ತೆರೆಯಡಿಯಲಿ
ಎಲ್ಲಿ ಕರ್ಮದ ಘರ್ಮವಾಹಿನಿ
ಸೆಳೆದುಕೊಳ್ವುದೊ ಉಡಿಯಲಿ!

ಎಲ್ಲಿ ಝುಂಝೂವಾತ ಘಾತಿಸಿ
ಮುಳುಗಿ ತಳವನು ಕಾಣ್ವೆನೊ!
ಎಲ್ಲಿ ಭೀಷಣ ವೃಷ್ಟಿ ಸುರಿಯಲು
ಜೀವದಾಸೆಯ ಮಾಣ್ವೆನೊ!

ಎಲ್ಲ ಕಂಟಕಗಳನು ಎದುರಿಸಿ
ಮುಂದುವರಿದರು ನಾವಿಕ
ಎಷ್ಟು ದೂರವೊ ನಿನ್ನ ತೀರವು
ಸೇರಬಲ್ಲೆಯ ನಾವಿಕ?

ನೂರು ಜನ್ಮವ ನೂರು ನೌಕೆಯ
ಪಡೆದು ಬಂದರು ತಡಿಯನು
ಸೇರಲಾರೆನು, ಹೌದು, ನೌಕೆಯೆ
ಒಪ್ಪಿದೆನು ಈ ನುಡಿಯನು

ಆದರೂ ಹಿಡಿ ಹುಟ್ಟು ಹಾಕಲು
ಹುಟ್ಟಿದಂಬಿಗ ನಾನೆಲ
ಕಡಲ ಮೇಲೆಯೆ ತೇಲೆ ಹುಟ್ಟಿಹ
ತೆಪ್ಪ ನೌಕೆಯು ನೀನೆಲ

ಹುಟ್ಟ ಹಾಕುತ ಹೋಗುವೆನು ಬಿಡು
ಸಿಗಲಿ ಸಿಗದಿರಲಾ ತಟ!
ತೆರೆಯ ತುಳಿಯುತ ನೀನು ಮುಂಬರಿ
ಏಕೆ ಕೊನೆಮುಟ್ಟುವ ಹಟ?

ಮುಂದೆ ನಡೆದರೆ ದಿವ್ಯ ಪಯಣವು
ಮುಳುಗೆ ಸಲಿಲ ಸಮಾಧಿಯು!
ನಡೆಯದಿದ್ದರೆ ಮಡಿಯದಿರುವೆಯ?
ನಡೆವುದೊಂದೇ ಹಾದಿಯು!

* * *

ನಾನಾರು?

ಮುಂಜಾನೆ ಅವರನ್ನು ದಿನದ ದುಡಿತಕ್ಕಾಗಿ
ಕಳಿಸಿ ನೋಡುತಲಿರಲು ಬಾಗಿಲಲಿ ನಿಂದು
ಹಿಂದಿನಿಂ ಬಂದೆನ್ನ ಕಂದಯ್ಯ ಕೇಳುವನು
ಸೆರಗಿನೊಳು ಮುಖ ಮುಚ್ಚಿ, 'ನಾನಾರು'? ಎಂದು.

ಮಧ್ಯಾಹ್ನದಾಯಾಸ ಕಳೆದುಕೊಳ್ಳಲಿಕೆಂದು
ಹಾಯಾಗಿ ಮಲಗಿರಲು ಹೇಳಲೇನೆಂದು

ಗೆಳತಿ ಮೆಲ್ಲನೆ ಬಂದು ಕಣ್ಮುಚ್ಚಿ ಕೇಳುವಳು–
'ನಾನಾರು, ನಾನಾರು, ನಾನಾರು?' ಎಂದು.

ಸಂಜೆಯಾಯಿತು ಎಂದು ಅವರು ಬರುವರು ಎಂದು
ಒಲೆಮುಂದೆ ಕುಳಿತಿರಲು ಚಹ ಮಾಡಲೆಂದು
ಬೆಣ್ಣೆಯಾಸೆಯ ಬೆಕ್ಕಿನಂತೆ ಬಂದೆವೆ ಮುಚ್ಚಿ
ಅವರು ಸಹ ಕೇಳುವರು. "ನಾನಾರು?" ಎಂದು.

ಯಾರಾರಿಗುತ್ತರವ ಹೇಳಲೌ 'ನಾನಾರು'?
ಎಂಬ ಪ್ರಶ್ನೆಗೆ ತಾಯಿ, ಸಾಕಾಯಿತು!
'ನಾನಾರು?' ಎನ್ನುವರು: 'ನೀನಾರು?' ಎಂದಿಲ್ಲ–
ಈ ಹಿಗ್ಗು ಕಡೆತನಕ ಬೇಕಾಯಿತು!

* * *

ಶಂಕೆಯ ಬೆಂಕಿ

ಏಕೆ ಮುಖಮಂಡಲದಿ ಮೃದು–ಸ್ಮಿತ–
ಜ್ಯೋತಿ ಬೆಳಗದೆ ಹೋಯಿತು?
ಎಂದು ಇಲ್ಲದ ಪ್ರೇಮ–ಪರಿಭವ–
ವಿಂದೆ ನನಗೇಕಾಯಿತು?

ಕೊರಡು ಕೊನರುವುದೆನ್ನ ಕಾಲಿನ
ಸೋಂಕಿನಿಂದಲಿ, ನೀರನ
ಸಹಜ ಸಸ್ಮಿತವದನವೆನ್ನನು
ನೋಡಿ ಬಾಡಿದ ಕಾರಣ?

ತನ್ನನುಳಿದನ್ಯರನು ನೆನೆದನೆ
ಕನಸಿನಲ್ಲಿಯು ಶಿವಶಿವ!
ರೋಮ ರೋಮದಿ ತನ್ನದೇ ಜಪ
ತಪ್ಪದಾವುದೊ ಶಿವಶಿವ!

ಮೊದಲು ವಿರಹದ ಬೆಂಕಿ ಸುಟ್ಟಿತು
ಇನ್ನು ಶಂಕೆಯ ಬೆಂಕಿಯೆ?
ಬರಲಿ ಬೇರೆಯ ನೂರು ಉರಿ, ಬರ-
ಬೇಡ ಶಂಕೆಯ ಬೆಂಕಿಯೆ!

* * *

ಬಾ ಪ್ರೇಮ ಪೂಜಾರಿ

ಮನ್ಮನೋಮಂದಿರಕೆ ಬಾ ಪ್ರೇಮ ಪೂಜಾರಿ
ನಿನ್ನ ಮೂರ್ತಿಗೆ ನೀನೆ ನಮಿಸಲೆಂದು
ನಿನ್ನ ನಿಜವನು ನಿನ್ನ ನಿಲವ ನೀನರಿಯಲ್ಲಿ
ಪೂಜಾರಿಯೇ ಪೂಜ್ಯನಾಗಿ ನಿಂದು

ಯಾವ ಕೈ-ಸೋಂಕಿಗೂ ಯಾವ ಉಳಿ ಚಾಣಕೂ
ಹಂಗಾಗದೆಯೆ ಕಟ್ಟಿದೀ ಮಂದಿರ
ನಿನ್ನ ಮೂರುತಿ ಪಡೆದು ಧನ್ಯವಾಯಿತು ದೊರೆಯೆ
ನೀನಲ್ಲಿ ಶಿವ ಸತ್ಯ ಶುಭ ಸುಂದರ

ಕಲ್ಲಗುಡಿಯೊಳಗಿರಲಿ ಕಲ್ಲದೇವರು ಪ್ರಿಯನೆ
ಕಲ್ಲೆದೆಯ ಪೂಜಾರಿಯಾಶ್ರಯದಲಿ
ಜೀವಂತ ಗುಡಿ ಹೃದಯ ಜೀವಂತ ದೇವರನು
ಬೇಡುತಿದೆ, ಬಾ ಹೃದಯದಾಶ್ರಮದಲಿ

ನಡೆವ ಗುಡಿಯಲಿ ನೀನು ನಡೆವ ಮೂರುತಿಯಾಗಿ
ನಡೆಯಲೇ ಬೇಕಲ್ತೆ ನಾ ನಡೆದ ಕಡೆಗೆ?
ನೀನೊಲ್ಲದಿದ್ದರೂ ನಾ ಬಿಡುವೆನೇ ನಿನ್ನ?
ಸುಮ್ಮನೇ ಬಾ ಮೂರ್ತಿ ನೀ ನಿನ್ನ ಗುಡಿಗೆ!

ಹೊಸ ಹರೆಯ ಕನಸುಗಳ ಹಾಲುಗಲ್ಲಿನ ಗುಡಿಯ
ಅರ್ಪಣದ ಪೀಠವನ್ನೇರು ನೀರ
ಗಂಡು-ಗೋಪುರಕಿಂದು ಹೆಂಗರುಳ ಹೊಂಗಳಸ
ಏರಿಸುವೆ ಆರಾಧ್ಯ ಒಳಗೆ ಬಾರ!

ನಂಬಿಗೆಯ ಸಾರಣೆಯ ಹಂಬಲದ ಕಾರಣೆಯ
ತನಿವಗೆಯ ತೋರಣವನನುಗೊಳಿಸಿಹೆ
ಬೇಗುದಿಯ ಸುಣ್ಣದಿಂ ಬಯಕೆಗಳ ಬಣ್ಣದಿಂ
ಮನಸಿನೀ ಮಂದಿರವ ಸಿಂಗರಿಸಿಹೆ

ಇದೊ ಮಧುರ ಭಾವಗಳ ಸಾಲು ದೀಪವ ಹಚ್ಚಿ
ಕಾಮನೆಯ ಕುಸುಮಗಳ ತಂದಿರಿಸಿಹೆ
ಮೀಸಲಾಸೆಯ ಮುಡಿಪು ಕಟ್ಟಿಟ್ಟು ನನ್ನನೇ
ನೈವೇದ್ಯವನ್ನಾಗಿ ಮುಂದಿರಿಸಿಹೆ

ಈ ಗುಡಿಯ ಶೂನ್ಯತೆಗೆ ಪೂರ್ಣತೆಯ ತಾ ನೀರ
ತೆರಹಿಗೊಲವಿನ ಅಚ್ಚ ಕುರುಹಾಗಿ ಬಾ!
ಬರುವುದಿಲ್ಲವೆ? ಬರದೆ ಇರಲು ಸಾಧ್ಯವೆ ನಿನಗೆ?
ಇದು ಸಾಧ್ಯವಿಲ್ಲೆಂಬ ಅರುಹಾಗಿ ಬಾ!

ಬರುವುದಿಲ್ಲೆಂಬೆಯಾ? ಬಂದಿಲ್ಲವೇ ಈಗ?
ಬಂದು ನೋಡೆನ್ನೆದೆಯ ಇಂದಾದರೂ!
ವಂದ್ಯನಪ್ಪೆಯೊ ಒಪ್ಪಿ, ಬಂದಿಯಪ್ಪೆಯೊ ತಪ್ಪಿ?
ಪಾರಾಗ ಬಲ್ಲೆಯಾ ಮುಂದಾದರೂ?

ನಿನಗಾಗಿ ಕಟ್ಟಿದೀ ಮನದ ಮಂದಿರದಲ್ಲಿ
ಕಟ್ಟಿ ಹಾಕುವೆ ನಿನ್ನ ಮೈಸೊಕ್ಕು ತೋರೆ!
ಒಲಿದು ಬಂದರೆ ನಿನ್ನ ನಲಿದು ಕುಳ್ಳಿರುಸುವೆನು
ಪ್ರೇಮ ಪೀಠದಿ ನಲವು ರೆಕ್ಕೆದೋರೆ!

* * *

ವೃಂದಾವನ

ಯಮುನಾಜಲ ಕಲಕಲರವ ಕೊಳಲೂದಿದ ಹಾಗೆ
ಧಾವಿಸುತಿಹ ಗಾಳಿಯ ತೆರೆ ಗೋಪಿಕೆಯರ ಹಾಗೆ
ಜಲದಲೆಗಳ ನಲಿದಾಟವು ರಾಸಲೀಲೆಯಾಗೆ
ಈ ದೃಶ್ಯವೆ ಆ ಕೃಷ್ಣನ ವೃಂದಾವನವಾಗೆ
ನವಿರೆದ್ದಿತು ಮೈಮನಕಿದೊ
ತೀರದಿ ನಿಂತಿರಲು
ಎಚ್ಚತ್ತಿಹ ಕವಿಕಲ್ಪನೆ
ವಿಸ್ಮಯವಾಂತಿರಲು!

ಕಾವೇರಿಯ ಕಟ್ಟೆಯ ಬಳಿ ಇಂದ್ರಜಾಲವರಳಿ
ನಂದನವನವೇಕೊ ಕಳಚಿ ಭೂಮಿಯ ಮೇಲುರುಳಿ
ಮೈಸೂರಿನ ಮಣ್ಣಿನೆದೆಯ ಚೆಲುವಿನ ಮನ ಕೆರಳಿ
ವೃಂದಾವನ ತಲೆಯೆತ್ತಿದೆ ನಮ್ಮ ಹೆಮ್ಮೆ ಮರಳಿ
ಕನ್ನಡಿಗರ ಕನಸುಗಳಿವು
ಈ ದೀಪದ ಸಾಲು
ಅವರಾಸೆಯ ಭಾಷೆಗಳಿವು
ಕಾರಂಜಿಯ ಸಾಲು!

ನಿನ್ನೆದೆಯೊಳು ನನ್ನಿಯ ನದಿ ಅದಕೊಡ್ಡನು ಕಟ್ಟು
ವೃಂದಾವನ ಬೆಳೆಸಲ್ಲಿಯೆ ಭಾವನೆಗಳ ನೆಟ್ಟು
ಮಗಮಗಿಸಲಿ ಬಗೆವಾಡವು ಸೊಬಗಿನ ಹೂ ಬಿಟ್ಟು
ಇದರಂದಕೆ ಸರಿಗಾಣದೆ ಬುವಿ ಕಚ್ಚಲಿ ಬೊಟ್ಟು
ನಿನ್ನೊಳಗಿದೆ ವೃಂದಾವನ
ಇಂದ್ರನವನ ಅರಸು!
ಸುಂದರವನ ಬಂಧುರವನ
ನಂದನವನ ಬರಿಸು!

* * *

ಒಂದು ಚಿತ್ರ

ಮೇಘಮಾಲೆಯು ಶೈಲಮಾಲೆಯ
ಮೇಲೆ ಲೀಲೆಯೊಳಿಳಿಯಿತು
ನೋಡನೋಡುತ ಬುವಿಯ ಬಾನಿನ
ಭೇದವೆಂಬುದೆ ಅಳಿಯಿತು

ಗಂಡು ಹೆಣ್ಣಿನ ವೇಷ ಧರಿಸಲು
ಕೇಶ ಕಟ್ಟುವ ತೆರದಲಿ
ಬೆಟ್ಟದೀ ಬೋಳ್ದಲೆಗೆ ದೊರೆಯಿತು
ವ್ಯೋಮಕೇಶವು ಭರದಲಿ

ಹಸಿರೆ ರೇಶಿಮೆ ಸೀರೆಯಾಯಿತು
ಬಂಡೆಗಳೆ ಸ್ತನಮಂಡಲ
ಯಾವ ಕೀಚಕನನ್ನು ವಧಿಸುವ–
ನೀ ಹಿಡಿಂಬೀಪ್ರಿಯನೆಲ!

ಕರಗಿಹೋಯಿತು ಮೇಘಮಾಲೆಯು
ಹಿಂದೆ ಸಂಧ್ಯಾ ಸೂರ್ಯನು!
ಇದುವೆ ಬೆಟ್ಟವೆ? ಕೀಚಕಾರುಣ–
ರಕ್ತರಂಜಿತ ಭೀಮನು!

ಎಲ್ಲಿಹಳು ಆ ಬೆಂಕಿಸೀರೆಯ
ಉರಿಯ ರವಿಕೆಯ ದ್ರೌಪದಿ!
ಅವಳ ಹಿಗ್ಗನು ಕಂಡು ಬಣ್ಣಿಸೆ
ಸಾಲದೀ ಬಡ ಚೌಪದಿ!

* * *

ಮಾನಸ ಸರೋವರ / ೧೯೭

ಇನ್ನೊಂದು ಚಿತ್ರ

ತೊಟ್ಟಿಲಲಿ ಮಲಗಿರುವ ಕಂದನ
ಎತ್ತಿ ಕೊಳ್ಳಲು ಬಾಗಿದ
ತಾಯ ತೆರದಲಿ ಬಾನು ತೋರಿತು
ಯಾವ ಕಂದನು ಕೂಗಿದ?

ಕಂದ ಕಣ್ಣಿಗೆ ಕಂಡ ಕೂಡಲೆ
ತೋರ ಮೊಲೆಗಳು ತೊರೆದುವು
ಹಾಲ ಹನಿಗಳು ಮಿಂಚ ಮಿಂದಿಹ
ಮುತ್ತಿನಂದದಿ ಸುರಿದುವು

ಹಾಲ ಸವಿಯದು ಸಾಲದಾಯಿತೊ?
ಕಲ್ಲು ಸಕ್ಕರೆ ಸುರಿಯಿತು
ವೃಕ್ಷ ಸಸ್ಯದ ಲಕ್ಷ ಶಿಶುಗಳ
ನಾಲಗೆಯ ಬರ ಹರಿಯಿತು

ಕುಡಿದು ಮಿಕ್ಕಿದ ಹಾಲ ಹನಿಗಳು
ಹಾಲುತುಟಿಗಳ ಮೇಲಿವೆ
ಹುಲ್ಲು ಬಳ್ಳಿಯ ಗುಲ್ಮ ಕಳ್ಳಿಯ
ಮೇಲೆ ಹನಿಗಳ ಸಾಲಿವೆ

ಆಡುತಿರುವರು ಕೋಟಿ ತೊಟ್ಟಿಲ
ಗಳಲಿ ತಣಿದಿಹ ಕಂದರು
ದಿವ್ಯ ದೃಶ್ಯವನಿದನು ನೋಡಲು
ಸ್ವರ್ಗದವರೇ ಬಂದರು.

* * *

ಚಿತ್ತವೊಂದು ಚಾವಡಿ

ಚಿತ್ತವೊಂದು ಚಾವಡಿ
ಅಲ್ಲಿ ಗಲಭೆ ಗಡಿಬಿಡಿ
ಗರ್ವವೆಂಬ ಗೌಡನು
ಗದರಿ ಗದರಿ ನುಡಿವನು
ಆಶೆ ಶಾನುಭೋಗನು
ತಾಸಿಗೊಂದು ಸೋಗನು
ಹಾಕಿ ಹಣವ ಸುಲಿವನು
ಸುಲಿದು ತಿಂದು ನಲಿವನು
ದಾಸ ಬುದ್ಧಿ ಓಲೆಕಾರ
ಚಂಚಲತೆಯೆ ತಳವಾರ
ಪಂಚೇಂದ್ರಿಯ ಪಂಚರು
ಲಂಚ ಕೊಳುವ ಕೆಂಚರು
ಇಲ್ಲಿ ಜನರು ಬರುವರು
ಜಗಳಗಳನು ತರುವರು
ವಾದ ಮಾಡಿ ದಣಿವರು
ಬೋಧೆ ಮಾಡಿ ಕುಣಿವರು
ಚಿತ್ತವೊಂದು ಚಾವಡಿ
ಅಲ್ಲಿ ಗಲಭೆ ಗಡಿಬಿಡಿ
ಹೊಸಮನೆಗಳು ಹುಟ್ಟಿವೆ
ಹೊಸ ಮಠಗಳು ಕಟ್ಟಿವೆ
ಸಚಿವಾಲಯ ಬೆಳೆದಿವೆ
ನ್ಯಾಯಾಲಯ ಮೊಳೆದಿವೆ
ಶಾಸನ ಸಭೆ ಮೂಡಿವೆ
ಏಸೋ ಸಭೆ ಕೂಡಿವೆ
ಏನೇನೋ ಎದ್ದಿವೆ

ಹೊಸರೂಪವ ಹೊದ್ದಿವೆ
ಆದರು ಈ ಚಾವಡಿ
ಅದೇ ಹಳೆಯ ಚಾವಡಿ
ಅದೇ ಹಾಳು ಗೋಡೆಯು
ಅದರ ಮೇಲೆ ಜೇಡವು
ಅದೇ ಹಳೆಯ ಮಾಳಿಗೆ
ಬೀಡು ಇಲಿಯ ಸಾಲಿಗೆ
ಅದೇ ಆಶೆ ಆಮಿಷ

ಅದೇ ಮೊದಲಿನ ತಾಮಸ
ಅದೇ ಹಳೆಯ ಚಾವಡಿ
ಅದೇ ಹಳೆಯ ಗಡಿಬಿಡಿ
ಚಿತ್ತವೊಂದು ಚಾವಡಿ
ಅಲ್ಲಿ ಗಲಭೆ ಗಡಿಬಿಡಿ!

* * *

ಕೋವಿಯ ಕೋರಿಕೆ

ಏಕೆ ಹುಟ್ಟಿಸಿದೆಯೊ ಬ್ರಹ್ಮ
ಯಾವ ಜನ್ಮದಾವ ಕರ್ಮ
ಕೊಟ್ಟಿತೆನಗೆ ಕೋವಿಜನ್ಮ
ಗೈಸಿತಿಂಥ ಪಾಪಕರ್ಮ!
ಎಂಥ ಎದೆಯ ಭೇದಿಸಿದೆನು
ಎಂಥ ಹೃದಯ ಛೇದಿಸಿದೆನು
ಎಂಥ ಮಹಿಮನನ್ನು ಕೊಂದೆ

---

* ಗೋಡಸೆ ಗಾಂಧೀಜಿಗೆ ಗುಂಡಿಟ್ಟ ಕೈಕೋವಿಯ ಕೋರಿಕೆ.

ಅಯ್ಯೋ ನೊಂದೆ, ನೊಂದೆ, ನೊಂದೆ!
ಎಲ್ಲಿ ಪಾಪ ತೊಳೆದುಕೊಳಲಿ
ಎಲ್ಲಿ ತಾಪ ಕಳೆದುಕೊಳಲಿ
ಯಾವ ಬೆಂಕಿಯಲ್ಲಿ ಸುಡಲಿ
ಯುವ ಜಲದಿ ಜೀವ ಬಿಡಲಿ
ಯಾವ ನೆಲದಿ ದೇಹವಿಡಲಿ
ಯಾವ ಗಾಳಿಗಸುವ ಕೊಡಲಿ
ಅಯ್ಯೋ, ತಾಳಲಾರೆನು–
ಇನ್ನು ಬಾಳಲಾರೆನು!
ಜಗದ ಕೋಟಿ ಕೋವಿಗಳಲಿ
ಕೆಂಡ ಕಾರ್ವ ಕೊಳವಿಗಳಲಿ
ನನ್ನ ಪಾಲಿಗೇಕೆ ಎಂತು
ಇಂಥ ಹೀನ ಕಾರ್ಯ ಬಂತು
ಎಲೊ ಪಾಪಿಯೆ ಗೋಡಸೆ
ಈ ಅಕೃತ್ಯ ಮಾಡಿಸೆ
ನನ್ನನಂದು ಕೊಂಡೆಯಾ
ನಿನ್ನ ನಾಡ ತಂದೆಯಾ
ಗಾಂಧಿಯನ್ನು ಕೊಂದೆಯಾ
ನನಗೆ ಕುಂದ ತಂದೆಯಾ!
ಎಲೆವೊ ಕಾಲ ಹೇಳು ತಿಳಿಸಿ
ಏನ ಗಳಿಸಿದಿವನ ಕೊಲಿಸಿ
ಎಂಥ ವಿಷದ ಗಳಿಗೆಯಲ್ಲಿ
ಹುಟ್ಟಿಸಿದೆಯೊ ಬ್ರಹ್ಮ ಇಲ್ಲಿ
ಎಂಥ ನಂಜನುಣಿಸಿ ಬೆಳಸಿ
ಇಂಥ ಮಹಿಮನನ್ನು ಕೊಲಿಸಿ
ನೂಕಿಬಿಟ್ಟೆ ನರಕದಲ್ಲಿ
ಇಂಥ ಪಾಪ ಕೂಪದಲ್ಲಿ!
ನೀನೆ ತೋರು ನನಗೆ ದಾರಿ

ಪಾಪ ತೊಳೆದುಕೊಳ್ಳ ದಾರಿ
ಇಲ್ಲದಿರೆ ಜೀವ ಕೊಟ್ಟ
ನಿನ್ನೆದೆಯನೆ ಸೇರಿಸಿಟ್ಟ
ಕಳೆದುಕೊಳ್ವೆ ಬೊಮ್ಮನೆ
ತೋರು ದಾರಿ ಸುಮ್ಮನೆ!
ನನ್ನನೊಮ್ಮೆ ಮಳೆಯ ಮಾಡು
ಜಗದ ಜೀವ ಕಳೆಯ ಮಾಡು
ಸುರಿಸು ರಾಜಘಾಟದಿ
ಅಭಿಷೇಕದ ಮಾಟದಿ
ನನ್ನನೀಗ ಮಾಲೆ ಮಾಡು
ಕಂಬನಿಗಳ ಹಾರ ಮಾಡು
ಹಾಕು ಆ ಸಮಾಧಿಗೆ
ಹಾಸು ಅದರ ಹಾದಿಗೆ
ನನ್ನನೊಮ್ಮೆ ಧೂಪ ಮಾಡು
ಆ ಸಮಾಧಿಯೆದುರು ಸುಡು

ನನ್ನನೊಂದು ದೀಪ ಮಾಡು
ಆ ಸಮಾಧಿಯೆದುರಿಗಿಡು
ಆ ದಾರಿಯ ಮಣ್ಣ ಮಾಡು
ಈ ಒಂದೇ ಪುಣ್ಯ ನೀಡು
ಆ ನೆಲದಲಿ ಹುಲ್ಲು ಮಾಡು
ಈ ಪಾಪವನಿಲ್ಲ ಮಾಡು
ಮುಂದೆಂದೂ ಕೋವಿಯ
ಜೀವ ಕಳೆವ ಜೀವಿಯ
ಜನ್ಮ ಮಾತ್ರ ನೀಡಬೇಡ
ಕೈಮುಗಿಯುವೆ ಬೇಡ ಬೇಡ!

* * *

ಸರದಾರಗೆ ಶ್ರದ್ಧಾಂಜಲಿ

ಸೈತಾನಿ ಶಕ್ತಿಗಳ ಸಂಪೂರ್ಣ ಸದೆಬಡಿದು
ಸಬಲ ಭಾರತ ರಚಿಪ ಮಣಿಹ ಮುಗಿಯದ ಮುನ್ನ
ಭಾರತದ ವೈರಿಗಜಸಿಂಹಸ್ವಪ್ನವೆ ನೀನು
ಬಯಲಾದೆಯಾ !

ಒಳ ಹೊರಗೆ ಜ್ವಾಲೆಗಳು ಹೊತ್ತುತಿಹ ಹೊತ್ತಿನಲೆ
ಶಕ್ತಿ ಸ್ಥೈರ್ಯದ ಶಿಶುವೆ ಸತ್ವ ಧೈರ್ಯದ ಅಸುವೆ
ಕರ್ತವ್ಯ ಮೂರುತಿಯೆ ಭಾರತದ ಕೀರುತಿಯೆ
ನಿನ್ನವರ ತೊರೆದೆಯಾ !

ಬಾಪುವಿನ ಸೂಜಿಗಲ್ಲಿಗೆ ಅಂಟಿ ಉಂಟಾದ
ಉಕ್ಕಿನ ಮಹಾಬಾಹು, ಸೋಲರಿಯದಿಹ ಶೂರ,
ರಿಪುಭಯಂಕರ, ದೀನಬಂಧು, ಕ್ಷಮಾಶೀಲ,
ಸ್ವಾತಂತ್ರ್ಯ ಸಂಗರದ ಸೇನಾನಿ, ದೊರಕಿಸಿದ
ಸ್ವಾತಂತ್ರ್ಯ ಜ್ಯೋತಿಯನು ಬಿರುಗಾಳಿ ಬಳಗದಲಿ
ವಜ್ರಮುಷ್ಟಿಯ ನಡುವೆ ಉಳಿಸಿ ಬೆಳಗಿದ ಕಲಿಯೆ
ಕಡುಗಲಿಯೆ, ಹೆಬ್ಬುಲಿಯೆ, ತಬ್ಬಲಿಗಳ ತೊರೆದು
ಮರೆಯಾದೆಯಾ !

ಖಡ್ಗವನು ಕೈಕೊಳದೆ ಹೂಂಕಾರ ಮಾತ್ರದಲಿ
ರಾಜನವ್ವಾಬರನು ನತಮಸ್ತಕರ ಮಾಡಿ
ಬುವಿ ಬೆರಳು ಕಚ್ಚುತಿರೆ ಭಾರತದ ಏಕತೆಯ
ಭೀಮವಿಕ್ರಮದಿಂದ ಸಾಧಿಸಿದ ಸಾಹಸಿಯೆ,
ಶತಮಾನಗಳ ಹಿಂದೆ ಮಹಮೂದ ಗಜನವಿಯ
ದೌರ್ಜನ್ಯದಿಂ ಭಂಗವಡೆದ ಸೌರಾಷ್ಟ್ರಸ್ಥ
ಸೋಮನಾಥನ ಮತ್ತೆ ಸಕಲ ವೈಭವದೊಡನೆ
ಪ್ರಸ್ಥಾಪಿಸಿದ ಸ್ವಾಭಿಮಾನ ಪ್ರದೀಪವೆ,
ಬಾರ್ಡೋಲಿ ರೈತರಲಿ ಸಾಮ್ರಾಜ್ಯ ಶಕ್ತಿಯನು
ತುಂಬಿ ಪಶುಶಕ್ತಿಯನಹಿಂಸೆಯಿಂದಲೆ ಜಯಿಸಿ
ಶತ್ರುಮುಖದಿಂದಲೇ ಸ್ತುತಿ ಪಡೆದ ನರವೀರ,

ಆಂಗ್ಲ ನೀತಿಯ ವರ್ಮಘಾತಕ್ಕೆ ಹೋಳಾಗಿ
ಜಾತೀಯ ದ್ವೇಷಾಗ್ನಿ ಜ್ವಾಲೆಗಾಹುತಿಯಾಗಿ
ಧಗಧಗನೆ ಉರಿದೆದ್ದ ನಾಡ ಬೆಂಕಿಯನೆಲ್ಲ
ಅಂಗುಷ್ಠದಲಿ ಹೀರಿದತುಲಪ್ರತಾಪಿಯೆ,
ಕಾಶ್ಮೀರ ಜುನಗಢದಿ ಹೈದರಾಬಾದಿನಲಿ
ಪೃಥ್ವಿಯನೆ ಎದುರಿಸುತ ಚಂಡ ವಿಕ್ರಮಮೆರೆಸಿ
ಶತ್ರುಸೈನ್ಯವ ಹಣೆದು ನಮ್ಮ ಭಾರತ ಸೈನ್ಯ
ಶಕ್ತಿಯಲಿ ವಿಶ್ವಾಸ ಹುಟ್ಟಿಸಿದ ಕಟ್ಟಾಳೆ
ಬಾಪುವಿನ ಅಗಲಿಕೆಯ ಬೇಗೆಯಾರದ ಮುನ್ನ
ಭಾರತಿಯ ಬೆಂಬಲವೆ ಬಯಲಾದೆಯಾ !

"ಕಸ್ತೂರ ಬಾ ಬಾಪು ಮಹಾದೇವ ದೇಸಾಯಿ–
ಯಿರುವ ತಾಣಕೆ ಹೋಗಲೆನ್ನ ಮನ ತವಕಿಪುದು,"
ಎಂದು ಸಾಬರಮತಿಯೊಳನತಿದೂರದಿ ನುಡಿದೆ–
ಇದೆ ನೆಪವೆ ಸಾಕೆಂದು ಸೆಳೆದುಕೊಂಡನೆ ನಿನ್ನ –
ನಪ್ಪಲಾತುರದಿಂದ ಕಾದಿದ್ದ ಮಾದೇವ !

ಆಗಲೈತಂದೆ,
ಈ ನಾಡ ನರನಾರಿನಯನವಾರಿಯೊಳೆಸೆವ
ಶುದ್ಧ ಶ್ರದ್ಧಾಂಜಲಿಯ ಸ್ವೀಕರಿಸು;
ನಮ್ಮ ನಾಡಿನ ಭಾಗ್ಯಲಕ್ಷ್ಮಿಯನು ಹರಸು;
ನಮ್ಮಗೋಚರ ರಕ್ಷೆಯಾಗಿ ಸಂಚರಿಸು !

ಕೀರ್ತಿಕಾಯದಿ ನಿಂತು ಕಾಯುತ್ತಲಿರು ನೀನೆ
ಬೆಸೆದ ಭಾರತವನ್ನು ಅನಂತ ಕಾಲ!
ಈಗಿರುವ ಮುಂಬರುವ ನಾಡಿಗರ ಪರವಾಗಿ
ಕೈಮುಗಿವ ಕವಿ ನಿನಗೆ ಓ ಶುಭ್ರಶೀಲ !

* * *

ನಮನ

ಬಸವನಾಳಕ್ಕಿಳಿದ ಬಸವನಾಳರ ಬಾಳ
ನೆನಹೆ ನಂದಾದೀಪ ನಾಡ ಜನಕೆ!
ಅಳಿವ ಬಾಳಲ್ಲವದು, ಹೊಳೆವ ತಿಳಿವಿನ ಬೆಳಕು,
ಮರಣವೆಲ್ಲಿದೆ ಇಂಥ ಶರಣತನಕೆ?

ಪಾವಿತ್ರ್ಯವೀ ಬಾಳ ನೆನೆದು ಮಡಿಯಾಗುವುದು
ಚಾರಿತ್ರ್ಯಮೌದಾತ್ಯವನ್ನು ಪಡೆವುದು
ನುಡಿಯು ನಡೆಯಾಗುವುದು ನಡೆಯೆ ನುಡಿಯಾಗುವುದು
ಒಲವು ತಿಳಿವನು ತಬ್ಬಿ ಸೊಗ ಹಡೆವುದು!

ರಾಗಭೋಗಗಳಿಲ್ಲಿ ತ್ಯಾಗಯೋಗಗಳಾಗಿ
ಪೂಜೆಯಾಗಗಳಾಗಿ ಮೆರೆದುವಲ್ತೆ?
"ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿಚಾತ್ಮನಿ,"
ಎಂಬ ತತ್ತ್ವವೆ ಮೈಯ ತಳೆದುದಲ್ತೆ?

ಎಂಥ ಗಾಂಭೀರ್ಯವದು ಏನು ಔದಾರ್ಯವದು
ಎನಿತು ಮಾಧುರ್ಯವೋ ಬಸವನಾಳರದು
ಆತ್ಮದೈಶ್ವರ್ಯವದು ಶೀಲಸೌಂದರ್ಯವದು
ಏಂ ಚಿತ್ತಸ್ಥೈರ್ಯವೋ ಬಸವನಾಳರದು!

ಪ್ರೇಮ ತುಂಬಿದ ಉರವು ಜ್ಞಾನ ತುಂಬಿದ ಶಿರವು
ಕ್ರಿಯೆಯು ತುಂಬಿದ ಕರವು ಅವನ ಇರವು
ಶಾಂತಿ ತುಂಬಿದ ಮೊಗವು ಕಾಂತಿ ತುಂಬಿದ ಕಣ್ಣು
ತುಂಬು ಬಾಳದು, ಅಲ್ಲಿ ಎಲ್ಲಿ ತೆರವು?

ಹೆಸರು ಹಣ ಸನ್ಮಾನ ಸ್ಥಾನ ಹುಸಿ ಹೆಮ್ಮೆಗಳು
ಬಿರುದು ಬಾವುಲಿಗಳಿಗೆ ಬಾಗದವನು
ಯಾರ ದಾಕ್ಷಿಣ್ಯಕೂ ಯಾವ ಪೇರಾಸೆಗೂ
ತನ್ನ ತತ್ತ್ವದ ನಿಷ್ಠೆ ನೀಗದವನು

ಎಂಥ ಬಿರಿ ಬಂದರೂ ಗೆರೆ ಬೀಳಲಿಲ್ಲವನ
ಫುಲ್ಲ ಪ್ರಸನ್ನ ಮುಖಮಂಡಲದ ಮೇಲೆ

ಅಲ್ಲಿ ನಲಿಯುತ್ತಿತ್ತು ನಿತ್ಯನೂತನವಾಗಿ
ಸಾತ್ವಿಕತೆ ಸೌಜನ್ಯಗಳ ರಮ್ಯಲೀಲೆ

ಸಹಿಸಿದನು ಈ ಜಗದ ಕಪಟವನು ಕುಟಿಲವನು
ವಂಚಕತ್ವವ ಮನವ ಕಹಿಗೊಳಿಸದೆ
ಕೇಡು ಬಗೆದವನಿಗೇ ಬೇಡಿದನು ಸದ್ಗತಿಯ
ಮಾಡಿದನು ಸಂಸಾರ ಸವಿಗೆಡಿಸದೆ

ತೆಯ್ದನಿತು ಕಂಪೊಗೆವ ಬಾವನ್ನದಂದದಲಿ
ಒರೆದಷ್ಟು ಮಿರುಗುವಾ ಬಂಗಾರದಂತೆ
ಕಾಸಿದಷ್ಟೂ ಮಧುರಮಪ್ಪ ಕೆನೆವಾಲಿನೊಲು
ಬಾಳಿದನು ಭವ್ಯನಿವ ಬೆಳಕು ಸವಿಯಂತೆ

ಎನಿತು ಬಾಳಿನ ಹಣತೆ ಹೊತ್ತಿಕೊಂಡುವೊ ಇವನ
ಪ್ರಜ್ವಲಿಪ ಜಾಜ್ವಲ್ಯ ಚಿಜ್ಜ್ಯೋತಿಯಿಂದ
ಎನಿತು ಜೀವಿಗಳೆದೆಗೆ ಸೊದೆಯು ಒದಗಿತೊ ಇವನ
ಅನಿಮಿತ್ತ ಬಂಧುತ್ವ ಸುಪ್ರೀತಿಯಿಂದ!

ನಮನವೀ ಶೋಧಕಗೆ ಬೋಧಕಗೆ ಸಾಧಕಗೆ
ಶಿವದ ಆರಾಧಕಗೆ ಭ್ರಾಂತಿಭೇದಕಗೆ
ಸ್ಮಾರಕವು ಚಿರಮಕ್ಕೆ ನಾಡಿಗರ ನೆನಹಿನಲಿ
ಸಮ್ಯಕ್ಷ್ವವಾದಕಗೆ ಅಶಿವಭೇದಕಗೆ!

* * *

ಕನ್ನಡದ ದೀಪ

ಹೊತ್ತಿತೋ ಹೊತ್ತಿತು
ಕನ್ನಡದ ದೀಪ
ಮುಗಿಯಿತೋ ಮುಗಿಯಿತು
ಶತಮಾನಗಳ ಶಾಪ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

ಕಣ್ಣು ಕುಕ್ಕಿಸುವಂತೆ
ದೇದೀಪ್ಯಮಾನ
ಹರ್ಷವುಕ್ಕಿಸುವಂತೆ
ಶೋಭಾಯಮಾನ
ಕನ್ನಡದ ಮನೆಯಾಗೆ
ಜ್ಯೋತಿರ್ನಿಧಾನ
ಕನ್ನಡದ ಪ್ರಾಣ
ಕನ್ನಡದ ಮಾನ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!
ಕನ್ನಡದ ನನ್ನಿಗರ
ಕಣ್ಣ ಬರ ಹಿಂಗೆ
ಕನ್ನಡದ ಮಣ್ಣು ಸಹ
ಹೊರೆಯೇರಿ ಹೊಂಗೆ
ದಡಸೂಸಿ ಹರಿದಾಡೆ
ಆ ಕೃಷ್ಣೆ ತುಂಗೆ
ಮೋದಾಂತರಂಗೆ
ಶುಭ-ಮಂಗಲಾಂಗೆ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!
ಬೆಳಕಿನಲೆ ಜಳಕವನು
ಮಾಡೆ ಭೂಗಗನ
ತಮಜಾರೆ ಮಗಮಗಿಸೆ
ಮಲಯಮಧುಪವನ
ನಭಕೇರೆ ಕನ್ನಡದ
ಮಂಗಳ ಧ್ವಾನ
ಕನ್ನಡದ ಪ್ರಾಣ
ಕನ್ನಡ ನಿಧಾನ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

ಉರಿವವರು ಬೇಕಿನ್ನು
ಇದರೆಣ್ಣೆಯಾಗಿ
ಸುಡುವವರು ಬೇಕಿನ್ನು
ನಿಡುಬತ್ತಿಯಾಗಿ
ಧರಿಸುವರು ಬೇಕಿದನು
ಸಿರಿಹಣತೆಯಾಗಿ
ನನ್ನಿಯುಸಿರಾಗಿ
ಧರ್ಮಕ್ಕೆ ಬಾಗಿ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ !

ಚಿರಕಾಲ ಬೆಳಗಲೀ
ಕನ್ನಡದ ದೀಪ
ಜನಕೆಲ್ಲ ಬೆಳಕಾಗಿ
ಪುಣ್ಯ ಪ್ರದೀಪ
ಭಾರತಕೆ ಬಲವಾಗಿ
ಭವ್ಯ ಪ್ರದೀಪ
ಕಳೆಯುತ್ತ ತಾಪ
ಬೆಳೆಸುತ್ತ ಸೈಪ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ !

* * *

ಸೂರ್ಯ ಮುಳುಗಿದ ಸ್ಥಳ

ಸೂರ್ಯ ಮುಳುಗಿದ ಸ್ಥಳದೊಳಿನ್ನೂ
ಬೇಗೆ ಹೊತ್ತಿದ ಹಾಗಿದೆ
ಮೇಘ ಋಷಿಗಳ ಮಧ್ಯದಲ್ಲಿದೊ
ಯಜ್ಞಕುಂಡವು ಹೇಗಿದೆ

ಸುತ್ತಿ ಬಹ ಕತ್ತಲೆಯ ಕುಡಿಗಳು
ಹೋಮಧೂಮದ ಹಾಗಿವೆ
ಆ ದಿಗಂಗನೆ ಗಗನ ರಾಣಿಯ
ಶಿರಗಳಗ್ನಿಗೆ ಬಾಗಿವೆ

ಇದೊ ವಿಹಂಗಮ ಮಂತ್ರ ಘೋಷವು
ಮನಕೆ ಮಂಗಲ ತರುತಿದೆ
ಕ್ಷಿತಿಜ ನಯಭಯಭರಿತ ಭಕ್ತಿಯ
ಭರದಿ ತನ್ನನೆ ಮರೆತಿದೆ

ನಿಂತ ತಾಣದಿ ಮಣಿದು ತಣಿದುವು
ತರುಮರಾದಿಗಳಗ್ನಿಗೆ
ಕೆಲವೆ ನಿಮಿಷಗಳವಧಿ ಸಾಕೇ–
ಇಂಥ ಸೈಪಿನ ಸುಗ್ಗಿಗೆ?

* * *

ಏತಕಿಲ್ಲ?

ಭಾವವೆಂಬ ಹಾಲಹರಿಸಿ
ಜ್ಞಾನವೆಂಬ ತುಪ್ಪ ಸುರಿಸಿ
ಪರಮಾರ್ಥದ ಸವಿಯ ಬೆರೆಸಿ
ನಮಗೆ ಉಣಿಸಿ

ಜಗದಾತ್ಮನ ನಿಲವ ತಿಳಿಸಿ
ಭವಿ ಭಕ್ತರ ಭೇದ ಅಳಿಸಿ
ಸರ್ವರಿಗೂ ಸಮತೆ ಕಲಿಸಿ
ನಮ್ಮ ತಣಿಸಿ

ಮೆರೆದ ಜಗತ್ಪತಿಯ ಸತಿಯೆ
ಜಗದ್ವಂದ್ಯೆ ವಿಮಲ ಮತಿಯೆ
ಅಧ್ಯಾತ್ಮದ ಅಮಲ ಲತೆಯೆ
ಪುಣ್ಯವತಿಯೆ

ಅನುಭಾವದ ಕೊನೆಯ ಸ್ಥಿತಿಯೆ
ವೈರಾಗ್ಯದ ಚರಮಗತಿಯೆ
ಸಕಲ ಶರಣಸನ್ನುತೆಯೆ
ಭಕ್ತಿರತಿಯೆ

ನಿನ್ನ ಅಡಿಯ ಹುಡಿಯ ಒಂದು
ಕಣವು ಕೂಡ ಸಿಗದೆ ಇಂದು?
ಇದನು ನೆನೆದು ಮನವು ನೊಂದು
ಹೋಯ್ತು ಬೆಂದು!

ನಾಡನೆಲ್ಲ ಅಲೆದೆ ಅಂದು
ನಿನ್ನ ಚರಣಚಿಹ್ನ ಕಂಡು
ಪಾದರೇಣು ಬಳಿದು ತಂದು
ನಾಳಿಗೆಂದು!

ಒಬ್ಬನೂ ಉಳಿಸಲಿಲ್ಲ
ಬೆಳ್ಚಸವನು ಗಳಿಸಲಿಲ್ಲ
ಗೆಲವುಗಂಬ ನಿಲಿಸಲಿಲ್ಲ
ಹುಂಬರೆಲ್ಲ!

ತಾಯ ಕುರುಹ ಉಳಿಸಲಿಲ್ಲ
ವಚನಗಳಲಿ ಅವಳ ಸೊಲ್ಲ
ಕೇಳ್ವುದೆ ಗತಿಯಾಯಿತಲ್ಲ
ಕೇಳ್ವರಿಲ್ಲ!

ಕದಳಿಯೆಲ್ಲಿ? ಹುಡುಕಲಿಲ್ಲ!
ಉಡುತಡಿಯಲಿ ಕುರುಹೆ ಇಲ್ಲ!
ಕಲ್ಯಾಣದಿ? ಕೇಳ್ವರಾರು
ಕತ್ತಲೆಲ್ಲ!

ಶ್ರೀಶೈಲದಿ ಬೆರೆದಳಲ್ಲ
ಪರಮೋನ್ನತಿ ಮೆರೆದಳಲ್ಲ
ಅಲ್ಲಿ ಕೂಡ ಕುರುಹೆ ಇಲ್ಲ
ಏತಕಿಲ್ಲ?

ಅಕ್ಕನ ಈ ನಾಡಿನಲ್ಲೆ
ಅಕ್ಕನ ಕುರುಹೇತಕಿಲ್ಲ?
ಅಕ್ಕನ ಮಕ್ಕಳಿಗೆ ಇದರ
ಅರಿವು ಪರವೆಯೇತಕಿಲ್ಲ?

ಚಣಚಣವೂ ಕೇಳುತಿಹುದು–
"ಏತಕಿಲ್ಲ, ಏತಕಿಲ್ಲ, ಏತಕಿಲ್ಲ?"
ಈ ನಾಡಿನ ಕಲ್ಲು ಕೂಡ
ಈ ಪ್ರಶ್ನೆಯ ಕೇಳುತಿಹುದು

ಈ ನಾಡಿನ ಹುಲ್ಲು ಕೂಡ
ಇದೇ ದೂರ ಹೇಳುತಿಹುದು
ಕಣಕಣವೂ ಕನವರಿಸಿತು–
"ಏತಕಿಲ್ಲ, ಏತಕಿಲ್ಲ ಏತಕಿಲ್ಲ"?

* * *

ಜಮಾ ಖರ್ಚು

ಸ್ವಾತಂತ್ರ್ಯವೇನೊ ಬಂತು
ಸೌಜನ್ಯ ಮಾತ್ರ ಹೋಯ್ತು

ಬಿಡುಗಡೆಯು ಬಂತೊ ಇಲ್ಲೊ
ಹತ್ತುಗಡೆ ಹೊರಟುಹೋಯ್ತು

ಗಣರಾಜ್ಯವೇನೊ ಬಂತು
ಗುಣರಾಜ್ಯ ಕರಗಿ ಹೋಯ್ತು
ಒಣಹೆಮ್ಮೆಯೊಂದು ಉಳಿದು
ತನಿವಗೆಯು ಸುಟ್ಟು ಹೋಯ್ತು

ಕಲ್ಯಾಣರಾಜ್ಯ ಬಂತು
ಕ'ಲ್ಯಾಣಬುದ್ಧಿ ಹೋಯ್ತು
ಎಲ್ಲರಿಗು ಓಟು ಬಂತು
ಒಳ್ಳೆವರ ಕಾಲ ಹೋಯ್ತು

ರಾಷ್ಟ್ರೀಯರಾಜ್ಯ ಬಂತು
ರಾಷ್ಟ್ರವೇ ಕಾಣದಾಯ್ತು
ಜಾತೀಯ ಜಗಳ ಹೆಚ್ಚಿ
ದೇಶವೇ ಮರೆತು ಹೋಯ್ತು

ಬಂದದ್ದು ಹೋದುದೆಷ್ಟು
ಯಾವುದಕೆ ಬೆಲೆಯು ಹೆಚ್ಚು
ನೀನೊಮ್ಮೆ ಮಾಡಿ ನೋಡೋ
ಈ ನಾಡ ಜಮಾ ಖರ್ಚು

* * *

ದೊಡ್ಡ ಬೆಟ್ಟ

ದೊಡ್ಡ ಬೆಟ್ಟದ ಮೇಲೆ ನಿಂತು ಆಲಿಸುತಿದ್ದೆ
ಅನಂತತೆಯ ಆಹ್ವಾನಧ್ವನಿಯನಂದು

ನೀಲಗಿರಿ ನೀಲಜಲ ದೊಡ್ಡ ಬೆಟ್ಟವೆ ನೌಕೆ
ನಾನೆ ಅಂಬಿಗನೆಂಬ ಭಾವ ಬಂದು

ಮಲಗಿರುವ ಭೂರಮೆಯ ಸ್ತನನಿತಂಬಗಳಂತೆ
ವಿನ್ಯಸ್ತ ಶಿಖರಗಳು ಅಸ್ತವ್ಯಸ್ತ
ಹಸಿರುಡೆಯು ಮರಕತದ ಮಾಲೆ ಚೆಲ್ಲಾಪಿಲ್ಲಿ
ಪರವಶದಿ ನಿಶ್ಯಬ್ದ ಪರ್ವತ ಸಮಸ್ತ

ತಮಿಳು ನಟನಟಿಯರೊಲು ತುಂಬಿದ ಶರೀರಗಳು–
ನೀಲಗಿರಿ ಶಿಖರಗಳು, ಷಿಕಾರದಂತೆ
ಗೃಹನೌಕೆಯೀ ಬೆಟ್ಟ ದಾಲಸರಸಿಯು ಕಣಿವೆ
ಉದಕಮಂಡಲ ತೋರೆ ಶ್ರೀನಗರದಂತೆ–

ರೋಮಾಂಚಕಂಚುಕದಿ ಕಂಪಿಸಿತು ಮೈಮನವು
ಝೋಂಪಿಸಿತು ಹೃದಯಸ್ಥ ವಿಸ್ಮಯದ ಶಿಶುವು
ದೃಷ್ಟಿ ಕಾಲುವೆಯಾಗೆ ದೆಸೆಗಳೇ ಹೊಲವಾಗೆ
ಒಳಗಿಂದ ನುಗ್ಗಿದುದು ಕೌತುಕದ ರಸವು

ನಿಮ್ಮ ನೀಲಿಮೆ ಹೆಚ್ಚೂ ನಮ್ಮ ಕಾಳಿಮೆ ಹೆಚ್ಚೊ
ಎಂದು ಕೇಳ್ದುವು ನೀಲಗಿರಿಯ ಮೇಘ
ಇಬ್ಬರಿಗು ನಾನೀವೆ ಬಂಗಾರದುಡುಗೊರೆಯ
ಬಿಡಿ ನಿಮ್ಮ ಜಗಳವನ್ನೆಂದ ದಿನರಾಜ

ಏನು ಸುರಭಿತ ಮರುತ ಕಾಫಿತೋಟದಿ ಬರುತ
ಮುಂದುವರಿಯುವುದನ್ನೇ ಏಕೊ ಮರೆತ!
ಅಲ್ಲಿರುವ ಬಾಲೆಯರ ಬೆರಗುನೋಟದಿ ಬೆರೆತ–
ಕಾಮಿಯಾದನೆ ಕೊನೆಗೆ ಇವನು ಸಹಿತ?

ಅಲ್ಲೆಲ್ಲೊ ಗಾಳಿಯಲಿ ಗಂಧ ನಾದಗಳೆರಡು
ಗುದುಮುರಿಗೆ ಹಾಕುತಿವೆ ಹುಡುಗತನದಿ
ಬಣ್ಣ ಬೆಳಕುಗಳೆರಡು ಕಣ್ಣು ಮುಚ್ಚಾಲೆಯಲಿ
ಮೈಮರೆತಹಾಗಿಹುದು ಹುಡುಗಿತನದಿ

ಭೂಮತೆಗೆ ಪಾವನತೆ ಪಾವನತೆಗೊಪ್ಪುತಿಹ
ರಾಮಣೀಯತೆ ಬೆರೆಯೆ ಬರೆಯಲೇನು?
ಇದು ಬೆಟ್ಟವಿದುಕ್ಷೇತ್ರವಿದು ದಿವ್ಯಧಾಮವೈ
ಆನಂದನಿಕ್ಷೇಪವೀ ಶೈಲಸಾನು

ನಿಂತು ನನ್ನನೆ ಮರೆತೆ ಭವ್ಯ ಭಾವದಿ ಬೆರೆತೆ
ಬಾನವರ ಬೆಲೆ ಬಂತು ನನ್ನತನಕೆ!
ಸಿಡಿಲ ಹೆಗಲನ್ನೇರಿ ಮಿಂಚು ಬಂದಿತು ಮನಕೆ
ಶತಮಾನಗಳ ಸತ್ವ ಬಂತು ಕ್ಷಣಕೆ !

* * *

ಒಮ್ಮೆ ಕೋಗಿಲೆ ಕೂಗಲು

ನೂರು ಸಲ ಜುಮ್ಮೆನುವುದೀ ಮನ
ಒಮ್ಮೆ ಕೋಗಿಲೆ ಕೂಗಲು
ವಿರಹಶ್ರುತಿ ಹಿಡಿದೆದೆಯ ತಂತಿಗೆ
ಕುಕಿಲಿನಂಗುಲಿ ತಾಗಲು!

ಮುಗ್ಧಮೌನವು ಸ್ನಿಗ್ಧಗೇಯದಿ
ಸ್ವರ-ಸುರಾಂಗನೆಯಾಗಲು
ಎದೆಯ ತೊಟ್ಟಿಲದಲ್ಲಿ ಪ್ರಿಯಸಖಿ
ಮಧುರ ರೂಪವು ತೂಗಲು!

ಸುಪ್ತಪ್ರಣಯದ ಗುಪ್ತಗಾಮಿನಿ
ತಪ್ತವಾಹಿನಿಯಾಗಲು
ರೂಪರಾಣಿಯ ಸೊಕ್ಕು ಮುರಿಯುತ
ಪ್ರೇಮಪ್ರಭುವಿಗೆ ಬಾಗಲು

ಸ್ನಾಯುಗಳ ಸಂಗೀತ ರಕ್ತದ
ನೃತ್ಯ ನೂತನವಾಗಲು
ತನುವು ಕಂಪಿಸಿ ಮನವು ಝೇಂಪಿಸಿ
ಜೀವ ಜಡತೆಯ ನೀಗಲು

ಕೂಗು ಕೂಗೆಲೆ ರಾಗಯೋಗಿಯೆ
ಬೇಗೆ ಹೊತ್ತಲಿ ಬಗೆಯಲಿ!
ದಗ್ಧ ಹೃದಯದ ಶುದ್ಧ ಕ್ಷೇತ್ರದಿ
ಮಿಲನಮಾಧವಿ ಚಿಗಿಯಲಿ !

* * *

ನೀನಿಲ್ಲದಾಗ

ನೀನೆದುರಿಗಿರಲೆಂದು ನಾನೇಕೆ ಪ್ರಾರ್ಥಿಸಲಿ
ಏಕೆ ಬೇಡಲಿ ನಾನು ಒಂದೆ ಮುಖವ?
ನೀನಿಲ್ಲದಿದ್ದಾಗ ನೋಡಿದುದು ಎಲ್ಲವೂ
ಮೂಡಿಸುವುದಿಲ್ಲವೇ ನಿನ್ನ ಮುಖವ?

ನೀನೆ ನನ್ನೆದುರಿದ್ದು ನಲ್ವಾತನಾಡುತಿರು–
ಎಂದೇಕೆ ಹಾರೈಸಲೆನ್ನೆರೆಯ ಕೇಳು
ನೀನಿಲ್ಲದಿದ್ದಾಗ ತಿರೆಯ ಸುಸ್ವರವೆಲ್ಲ
ನಿನ್ನ ಸ್ವರವಾಗಿಯೇ ಕೇಳಿಸದೆ ಹೇಳು

ನೀನೆನ್ನ ಮುಂದಿದ್ದು ಮುಂಡಾಡು ಎಂದೇಕೆ
ಹಂಬಲಿಸಲೆನ್ನೆರೆಯ ನೀನಿಲ್ಲದಾಗ
ಸುಳಿಗಾಳಿಯಲೆಯೆಲ್ಲ ಮೆಲ್-ಸೋಂಕಿನಲಿ ನಿನ್ನ
ಸ್ಪರ್ಶಸುಖವನೆ ನನಗೆ ನೀಡುತಿರುವಾಗ

ನೀನೆದುರಿಗಿದ್ದರೇ ನಿನ್ನ ಸುಯ್ಗಂಪಿಹುದು
ಇಲ್ಲದಿರೆ ಇಲ್ಲವೆಂಬೆಯ ಗಾಡಿಕಾರ?
ನೀನಿಲ್ಲದಿದ್ದಾಗ ಈ ಜಗದ ಕಂಪೆಲ್ಲ
ನಿನ್ನ ಮೈಗಂಪಾಗಿ ಸುಳಿಯುವುದು ನೀರ!

ನೀನೆದುರಿಗಿದ್ದರೆಯೆ ನನ್ನ ರಸನೆಗೆ ಬರವು
ನಾಚುವುದು ಉಸಿರಲ್ಕೆ ನಿನ್ನ ಹೆಸರನ್ನು!
ನೀನಿಲ್ಲದಿದ್ದಾಗ ಅದಕಾವ ಸಂಕೋಚ?
ನುಡಿಯುವುದು ನೂರು ಸಲ ನಿನ್ನ ಹೆಸರನ್ನು!

ನೀನೆದುರಿಗಿರುವಾಗ ತುಕ್ಕು ಹಿಡಿಯುವ ಪ್ರೇಮ
ನಿನ್ನ ವಿರಹಾಗ್ನಿಯಲಿ ದಗ್ಧವಾಗಿ
ತಪ್ತ ಕಾಂಚನದಂತೆ ಉರಿವ ಚಂದನದಂತೆ
ಮಿಂಚುವುದು ಮಗಮಗಿಪುದತಿ ಶುದ್ಧವಾಗಿ

ಇರಲೆನಗೆ ಆಗಾಗ ಅಗಲಿ ಕೂಡುವ ಸೊಗಸು
ಇರಲಿ ಕನಸಿನ ತುಂಬ ನಿನ್ನ ನಿಲವು
ಮನಸಿನಲಿ ಕನಸಿನಲಿ ಜಾಗರದಿ ಸುಪ್ತಿಯಲಿ
ಇರಲಿ ನಂದಾದೀಪವಾಗಿ ಒಲವು!

* * *

ಹೊತ್ತಿಸು

ಹಣತೆ ಹೊತ್ತಿಸೆ ಎಣ್ಣೆ ಇರದಿರೆ
ಹೊರಗೆ ಕತ್ತಲೆ ಕವಿಯಲಿ
ಕವಿಯದಿರಲೈ ಕಾಳ ನಿನ್ನಯ
ಮನದ ಮಂತ್ರದ ಗವಿಯಲಿ

ಅಲ್ಲಿ ಆಶೆಯ ದೀಪ ಉರಿಯಲಿ
ಶ್ರದ್ಧೆ-ಸ್ನೇಹವ ಹೀರುತ
ಶುಕ್ಲ ಪಕ್ಷವ ಕೃಷ್ಣ ಪಕ್ಷವ
ಹಗಲು ರಾತ್ರಿಯ ಮೀರುತ

ಉಳಿದ ದೀಪಗಳೆಲ್ಲ ಭಾವಿಸೆ
ಶಿವನ ಹಂಗೈ ಸೋದರ
ನಿನ್ನದೆನ್ನುವ ದೀಪವೊಂದೇ
ಅದುವೆ ಆಶೆಯು ಸೋದರ

ಹೊತ್ತಿಸದನೇ ಮತ್ತೆ ಮತ್ತೆಲೆ
ಸತ್ತು ಹುಟ್ಟುವ ಜೀವಿಯೆ
ಆರಗೊಡದಿರು, ಆರಿದರುಸಹ
ಮತ್ತೆ ಹೊತ್ತಿಸು ಜೀವಿಯೆ

ಯಾರ ಅಪ್ಪಣೆಗಾಗಿಯೂ ನೀ
ದಾರಿ ಕಾಯದೆ ಹೊತ್ತಿಸು
ಕಾಲವಿಧಿಗಳ ಕ್ರೂರ ಆಜ್ಞೆಯ
ಮೀರಿಯಾದರು ಹೊತ್ತಿಸು

ನಿನ್ನ ದೀಪವೆ ನಿನ್ನ ಸುಟ್ಟರೆ
ಸುಡಲಿ ಜ್ಯೋತಿಯ ಹೊತ್ತಿಸು
ಬರಿದೆ ಉರಿಯಲಿ ಕಿಚ್ಚ ಸುರಿಯಲಿ
ಗೊಡೆವೆಯೇತಕೆ ಹೊತ್ತಿಸು

* * *

ಮನದ ಮಸಣ

ಮೂಗು ಮುರಿಯದಿರು ಗೆಳೆಯ–
ಎಂಥ ತಾಣಕೆ ಬಂದೆನೆಂದು
ಇಂದು ನೀ ನೋಡುತಿಹೆಯಿಲ್ಲಿ
ಬೆಲೆಗಳ ಬೂದಿಯನು
ಕಲೆಗಳ ಕೊಳೆತ ಹೆಣಗಳನು
ಒಲವಿನ ತಲೆ ಬುರುಡೆಯನ್ನು!
ಅತ್ತ ನಡೆದಿದೆ ನೋಡು–
ಆಶೆಗಳ ದಹನ,
ಕ್ಲೇಶಗಳ ನರ್ತನ!
ಮಣ್ಣೊಳಿಡುತಿಹರಿತ್ತ–
ಕರುಳ ಬಳ್ಳಿಯ ಅರಳ,
ತನಿವಗೆಯ ತಿರುಳ!

ನೀಚತೆಯ ನರಿಗಳಿದೊ ಎಳೆಯುತಿವೆ ಹೆಣಗಳನು
ದೌರ್ಜನ್ಯ ಘೂಕಗಳು ಕಿರಚುತಿಹುವು!
ನಗ್ನಕಾಮದ ಕೊಳ್ಳಿದೆವ್ವಗಳು ಕುಣಿಯುತಿವೆ
ಸ್ವಾರ್ಥಸರ್ಪಗಳಿಕೋ ಬುಸುಗುಡುತಲಿಹುವು!

ಹೀನತನ ಹುಗಿಯುತಿದೆ ಮಾನವತೆಯನು ಅಲ್ಲಿ
ಮಾನ ರೋದಿಸುತಿಹುದು ವಿಧವೆಯಂತೆ!
ದಾನವತೆ ಗಹಗಹಿಸಿ ಕೈತಟ್ಟಿ ನಗುತಲಿದೆ,
ಪರರ ದುಃಖವು ಅದಕೆ ಅಮೃತದಂತೆ!

ನೋಡುತ್ತ ವಿಶ್ವಾಸ ಕೊನೆಯುಸಿರನೆಳೆಯುತಿದೆ,
ಮೋಸವಿಕ್ಕಿದ ವಿಷದ ತುತ್ತು ನುಂಗಿ!
ನೀತಿಪ್ರೇತವ ತಿನ್ನಲಾತುರದಿ ಬಂದಿಹವು
ಆಮಿಷದ ನಾಯಿಗಳು ಹೊರೆಯೇರಿ ಹೊಂಗಿ!

ಆದರ್ಶಶಿಶು ತನ್ನ ತಾಯ ಹಾಲೇ ತನಗೆ
ನಂಜಾಗಿ ಬಂದಿಹುದು ಸಿದಿಗೆಯಲ್ಲಿ!
ಕೈಹಿಡಿದ ಮಡದಿಯೇ ವಿಷವಿಕ್ಕೆ ಪ್ರೇಯಸ್ಸು
ಶವವಾಗಿ ಬಂದಿಹುದು ಹೊದಿಕೆಯಲ್ಲಿ!

ಮಾತ್ಸರ್ಯದಗ್ನಿಯಲಿ ಸಮತೆ ಸೈರಣೆ ಸುಟ್ಟು
ಮಮತೆ ಸೋದರತೆಗಳು ಕರಿಕಾಗುತಿಹುವು!
ಹಗೆತನದ ಬೆಂಕಿಯಲಿ ಸುಗುಣಸಂತತಿ ಸುಟ್ಟು
ವೈಷಮ್ಯವಿಷದ ಹೊಗೆ ನಭಕೇರುತಿಹುದು!
ಇಸ್ಸಿ.....
ಏನು ದುಸ್ಸಹ ದುರ್ವಾಸನೆ!
ಇದು ನರಕ,
ಈ ಲೋಕದ ನರಕ!
ಎಲ್ಲ ಲೋಕಗಳ ಎಲ್ಲ ಗಂಧಗಳ ತಂದರೂ
ಹೋಗದೀ ದುರ್ಗಂಧ,
ಓ ಸ್ವಾರ್ಥಾಂಧ
ದುಷ್ಕಾಮ ತಮಂಧ!

ನಮ್ಮ ನಗರಗಳ ಚರಂಡಿಗಳಲ್ಲೂ
ಸಿಗದು ಇಂಥ ದುರ್ಗಂಧ!
ನಗರ ಸಭೆಗಳ ರಾಜಕಾರಣದಲ್ಲೂ
ದೊರೆಯದಿಂಥ ದುರ್ಗಂಧ!
ಮೂಗು ಮುಚ್ಚು, ಮೂಗು ಮುಚ್ಚು!
ಹುಚ್ಚ, ಎಲ್ಲಿಯವರೆಗೆ ಮುಚ್ಚುವೆ?

ಮೂಗು ಮುಚ್ಚು,
ಉಸಿರುಗಟ್ಟಿ ಸಾಯಿ!
ಮುಚ್ಚದಿರು,
ಈ ದುರ್ಗಂಧ ಕುಡಿದು ಸಾಯಿ !
ಸಾಯಿ, ಸಾಯಿ, ಸಾಯಿ !
ಇದು ಸಾಯುವ ಸ್ಥಳ ಬಡಪಾಯಿ !
ಇದು ಮಸಣ,
ಮನದ ಮಸಣ !

ಇದು,
ಒಳ್ಳೆಯದೆಲ್ಲವೂ ಸುಡುವ ಸ್ಥಳ,
ಸತ್ಯವನ್ನು ಹುಗಿದಿಡುವ ಸ್ಥಳ,
ಭೀಭತ್ಸವು ಕುಣಿಯುವ ಸ್ಥಳ,
ಲಾಲಸೆಗಳು ಕೊಬ್ಬುವ ಸ್ಥಳ !

ಇಲ್ಲಿ, ಏನೂ ಬೆಳೆಯದೆ ?
ಬೆಳೆಯುವುದು, ಬೆಳೆಯುವುದು
ಬೆಳೆದಿದೆ ನೋಡು–
ಅಲ್ಲಿ, ಬೆಲೆಗಳ ಬೂದಿಯಲಿ
ದುರುಳತನದ ಗರಗಸವಳ್ಳಿ!
ತಳ್ಳಿಯ ಕಳ್ಳಿ!

ನೀತಿಯ ಗೋರಿಯ ಮೇಲೆ ಬೆಳೆದಿದೆ ನೋಡು–
ಜಾತೀಯತೆಯ ಹೇಸಿಗೆ ಹೂವು,
ದೋಷದ ಹೂವು!

ಅಲ್ಲಿ ಚಿಗಿತಿದೆ ನೋಡು–
ಅನ್ಯಾಯದ ನಾಯಿತೊಳಚಿ,
ಘಾಟವ ನೆರಚಿ!

ನಿಂದೆಯ ನೆಗ್ಗಿಲಮುಳ್ಳು
ಸ್ವಪ್ರಶಂಸೆಯ ಗೊಳಗುಳಿಕೆ

ಮಬ್ಬಿನ ಮದಗುಣಿಕೆ
ವಿಷಯದ ಕಾರಿಕಂಟಿ
ಕೇಡಿನ ಕಾಡ ಕವಡಿ
ಕೊಬ್ಬಿನ ಬಡ ಚೊಗಚಿ
ನಿಂತಿವೆ ನಿಗುಚಿ!

ಇಂದಿನೀ ದುರ್ಗತಿಯ ಕಂಡು
ಹಳಹಳಿಸಬೇಡ
ತಳಮಳಿಸಬೇಡ,
ಕಳವಳಿಸಬೇಡ!

ಇಂದಿನೀ ಮನದ ಮಸಣದಲ್ಲಿಯೇ
ಹಿಂದೆ ಬೆಳೆಯುತ್ತಿತ್ತು
ಒಲವಿನ ಉಪವನ,
ನಲವಿನ ನಂದನ,
ಮಾನವತೆಯ ಮಧುವನ!

ಆ ಪ್ರೇತ ಸುಡುವಲ್ಲಿಯೇ
ಈ ಹಿಂದೆ ಬೆಳೆದಿತ್ತು
ವಿಶ್ವಾಸವಲ್ಲರಿಯು!
ಆ ಹೆಣವ ಹುಗಿವಲ್ಲಿಯೇ
ಮೊದಲು ಬೆಳೆಯುತ್ತಿತ್ತು,
ಒಳ್ಪಿನ ಕಲ್ಪವಲ್ಲರಿಯು!
ಸ್ನೇಹ-ಸಹಕಾರಕ್ಕೆ ಸದ್ಗುಣದ ಮಲ್ಲಿಗೆಯು
ಹಬ್ಬಿ ಹೂಬಿಡುತಿತ್ತು ಇಲ್ಲೆ ಗೆಳೆಯ
ಆದರದ ಮಾಧವಿಯ ಸೋದರತೆ ಜೊನ್ನದೊಲು
ತಬ್ಬಿ ಮುತ್ತಿಡುತಿತ್ತು ಇಲ್ಲೆ ಕೆಳೆಯ
ರಸಿಕತೆಯ ಹಸಿರಲ್ಲಿ ಮೃದುಭಾವ ಹಿಮಮಣಿಗ-
ಳಿಲ್ಲೆ ಹೊಳೆದುವು ಹಿಂದೆ ಸುಳ್ಳಲ್ಲ ಸಖನೆ

ಇಲ್ಲೆ ಪುಟಿದುವು ಹಿಂದೆ ಹಿಗ್ಗುಗಳ ಬುಗ್ಗೆಗಳು
ಇಲ್ಲೆ ಬಿರಿದುವು ಕಲೆಯ ಕುಸುಮ ಸಖನೆ

ಗಂಧವಾಹನನಿಲ್ಲಿ ಮಂದಗತಿಯಲಿ ಸುಳಿಯೆ
ನಂದನದ ನೆನಪಾಗುತಿತ್ತು ಮಿತ್ರ
ಅರವಿಂದ ಮಂದಾರ ಕುಂದಾದಿ ಕುಸುಮಗಳ
ಗಂಧ ಹರಡುತ್ತಿತ್ತು ಹರಿದಾರಿ ಸುತ್ತ
ಸುಜ್ಞಾನ ವೃಕ್ಷಕ್ಕೆ ಸತ್ಕಾರ್ಯ ಫಲವಿಲ್ಲೆ
ನೂರು ಸಲ ಬಿಟ್ಟಿಹವು ಈ ಹಿಂದೆ ಗೆಳೆಯ
ಧರ್ಮಾರ್ಥಕಾಮಗಳ ನವಿಲ ನರ್ತನವಿಲ್ಲೆ
ನಿತ್ಯನಡೆಯುತ್ತಿತ್ತು ಬೆಡಗಿನಲಿ ಕೆಳೆಯ

ಸಮತೆಜಲವನು ಹೀರಿ ಮಮತೆ ಕೊನರುತ್ತಿತ್ತು
ಚಂದನದ ವನವಾಗಿ ಇಲ್ಲೆ ಸಖನೆ
ಚೆಲುವಿನುಯ್ಯಲೆಯಲ್ಲಿ ಒಲವು ತೂಗುತ್ತಿತ್ತು
ದಣಿವಿರದೆ ದಿನದಿನವು ಇಲ್ಲೆ ಸಖನೆ

ಯಾರು ಕೆಡಿಸಿದರಿದನು
ಪಾಳ್ಗೈದರಾರು?
ಯಾವ ನೀಚರು ಇದನು
ನಾಶಗೈದವರು?

ತೋರೆನಗೆ ತೋರೆನಗೆ
ತರಿದೊಗೆವೆನವರ!
ಮಸಣವಿದರೊಳೆ ಸುಡುವೆ
ಅವರ ಶವವ!

ಕೆರಳದಿರು ಸುಮ್ಮನೆ ಕಿಡಿಯಾಗಿ ಗೆಳೆಯ,
ಹರಿಹಾಯದಿರು ಹೆರರ ಮೇಲೆ ಕೆಳೆಯ!
ಈ ನಗುವ ನಂದನವ

ಮಸಣ ಮಾಡಿದವ ನೀನೇ !
ಈ ಮಸಣದಲಿ ಮತ್ತೆ
ವನ ಬೆಳೆಸುವವ ನೀನೇ !
ನಿನಗೆ ನೀನೇ, ನಿನಗೆ ನೀನೇ,
ನಿನ್ನ ಕೆಡಿಸುವವ ನೀನೇ !
ನಿನಗೆ ನೀನೇ, ನಿನಗೆ ನೀನೇ,
ನಿನ್ನ ಸರಿಪಡಿಸುವವ ನೀನೇ !
ಕಿತ್ತೊಗೆ ಈ ಮನದ ಮಸಣದ ಹೊಲಸ,
ಮತ್ತೆ ಬಿತ್ತಿದರಲ್ಲಿ ಒಳಿತು ಲೇಸಿನ ಬೆಳಸ,
ಕೊಡುವನಿಹನೆಲ್ಲರಿಗೆ ಈ ಬೆಳೆಗೆ ಹುಲುಸ,
ನೀನೆ ನೆಟ್ಟಗೆ ಮಾಡು, ನಿನ್ನದಿದು ಕೆಲಸ!

ಬುದ್ಧಿಯ ಬುಲ್ ಡೋಝುರು ಹೊಡೆ,
ಶುದ್ಧಿಯ ಟ್ರಾ ್ಯಕ್ಟರು ಹೊಡೆ,
ಶ್ರದ್ಧೆಯ ನೇಗಿಲವನು ಹೊಡೆ,
ಸಿದ್ಧಿಯ ಸಿರಿ ಬೆಳೆಯನು ಪಡೆ!
ಬಿತ್ತು, ಬಿತ್ತು, ಬಿತ್ತು,
ಬೆಳಕಿನ ಬಿತ್ತು!
ಒಕ್ಕು, ಒಕ್ಕು, ಒಕ್ಕು,
ಅಮೃತದ ತುತ್ತು !

* * *

ವೃಕ್ಷರಾಜ

ವೃದ್ಧ ತಾಪಸನಂತೆ ವಟುವೃಕ್ಷ ತೋರುತಿದೆ
ಧ್ಯಾನಯೋಗದಿ ಗಾಢ ಮೌನ ವಹಿಸಿ
ಸುತ್ತು ಪ್ರಕೃತಿಯು ಸಹಿತ ಸ್ತಬ್ಧವಾಗಿದೆ ನಿಜದಿ
ನಿಶ್ಯಬ್ದವೇ ಬ್ರಹ್ಮವೆಂದು ಗ್ರಹಿಸಿ

ನಿಶ್ಚಲತೆಯೇ ಯೋಗ ಚಂಚಲತೆಯೇ ರಾಗ–
ವೆಂಬಂತೆ ಚಲಿಸದಿದೆ ಎಲೆಯು ಸಹಿತ!
ಕುಂಭಕದ ಕುರುಹಿನೊಲು ಗಾಳಿ ಸಹ ಸುಳಿಯದಿದೆ
ಹರಿವುದನೆ ನಿಲ್ಲಿಸಿತೊ ಹೊಳೆಯು ಸಹಿತ?

ಭಸಿತಾಂಗದಂತಿದರ ಬಿಳಿಬೊಡ್ಡೆ, ರುದ್ರಾಕ್ಷಿ–
ಹಣ್ಣುಗಳು, ಜಡೆಗಡ್ಡ ಜೋಲು ಬೇರು
ಹುತ್ತವೇರಿದ ಹಾಗೆ ಸುತ್ತಿಹವು ಪರ್ಣಗಳು,
ಋಷಿಯಲ್ಲ ಮರವೆಂದು ಹೇಳುವರದಾರು?

ತನ್ನಂತರಂಗದಲಿ ಆರಾಧ್ಯನನು ಕಂಡು
ಹೊರಗ ಮರೆದಿಹ ಮುನಿಯೆ, ನಮಿಪೆ ನಿನಗೆ!
ನಿನ್ನತುಲ ಶಾಂತಿಯಲಿ ತಾದಾತ್ಮ್ಯ ತೃಪ್ತಿಯಲಿ
ಕೊಡುವೆಯಾ ಒಂದಿನಿಸು ಪಾಲ ನನಗೆ?

ನಿನ್ನ ತಪದೇರಿಕೆಯ ಕಂಡಿದೋ ಬಾನಿನಲಿ
ಬೆರಗುಗಣ್ ಮುಚ್ಚದಿದೆ ನಕ್ಷತ್ರರಾಶಿ!
ಬೆಟ್ಟ ವಿಸ್ಮಿತ ಮೂಕ, ವನ ಭಕ್ತಿ ಭಯ ಭರಿತ,
ಉಲಿಯದಿದೆ ಗಳಹದಿದೆ ಪಕ್ಷಿಕಾಶಿ!

ವಟು ವೃಕ್ಷ ಕೋಟಿಯದು ದಿಟದಲಿದೊ ಅಡಗಿಹುದು
ನಿನ್ನೊಂದೆ ಬೀಜದಲಿ, ಅಂಥ ಬೀಜ
ಲೆಕ್ಕಕ್ಕೆ ಸಿಗದಷ್ಟು ನಿನ್ನೊಳಿವೆ, ನೀನೆಂಥ
ಸಂಕ್ಷಿಪ್ತ ಬ್ರಹ್ಮಾಂಡ ವೃಕ್ಷರಾಜ!

* * *

ಕುರುಡು ದೈವಕ್ಕೆ

ನನ್ನಾಸೆಯೇನೆಂಬ ಪ್ರತಿಕೂಲ ದೈವವೇ
ನಿನ್ನಿಚ್ಚೆಯೇನಿಹುದು, ಮೊದಲು ಹೇಳು;
ನಿನ್ನ ಬತ್ತಳಿಕೆಯಲಿ ಉಳಿದ ಕಣೆಗಳ ಮುಗಿಸು
ನನಾಸೆಯೇನೆಂದು ಆಮೇಲೆ ಕೇಳು!

ನೀನು ಕೊಡಬಹುದಾದ ಪೆಟ್ಟುಗಳ ಘಟ್ಟಣೆಗೆ
ಪಟ್ಟೆನ್ನದಿರುವುದೇ ನನ್ನಾಸೆ ಗೆಲೆಯ!
ನೀನುಣಿಸಬಹುದಾದ ವ್ಯಥೆಯ ಊಟವ ನುಂಗಿ
'ಹಾ'ಯೆನ್ನದಿರುವುದೇ ನನ್ನಳ್ತಿ ಕೆಳೆಯ!

ಹಾಲಾಹಲವ ಕುಡಿದು ಶೂಲವನ್ನೇರಿಯೂ
ಸೋಲನೊಪ್ಪದ ಮತಿಯೆ ನನಗಿರುವ ಆಸೆ
ಆಳಾಗಿ ದುಡಿಸಿದರು ಕೀಳಾಗಿ ನಡೆಸಿದರು
ದೇಹಿಯೆನ್ನದ ಧೃತಿಯೆ ನಾ ತೊಟ್ಟ ಭಾಷೆ

ನಿನ್ನ ದಯದಿಂದೆಲ್ಲ ಪಡೆದವರ ಹೆಸರೆಲ್ಲಿ
ನಿನ್ನನೆದುರಿಸಿ ಅಳಿದ ಕಲಿಗಳೆದುರು?
ನಿನಗೆ ಮೊಳಕಾಲೂರಿ ಸುಖವ ಪಡೆವುದಕಿಂತ
ನಿನ್ನನೆದುರಿಸಿ ಪಡೆವ ದುಃಖವೇ ಮೇಲು?

ಹಾಕು ಹಾಕೆಲೆ ಕುರುಡ ಜಯಮಾಲೆಯನು ನಿನಗೆ
ಬೇಕಾದ ಬಿಕನಾಸಿಗಳ ಕತ್ತಿನಲ್ಲಿ
ನೀನೆತ್ತಿ ಹಿಡಿದವರ ಎತ್ತಿ ಹಿಡಿವುದೆ ಹೊತ್ತು!
ಉಳಿದಾರು ನೀ ತುಳಿದ ಜನ ಹೊತ್ತಿನಲ್ಲಿ!

* * *

ರಾಷ್ಟ್ರ ರಾಜೇಶ್ವರಿಗೆ

ಇಂದಿನೀ ದಸರೆಯೊಳು ಪ್ರಥಮ ಪೂಜೆಯು ನಿನಗೆ
ರಾಷ್ಟ್ರ ರಾಜೇಶ್ವರಿಯೆ, ಆತ್ಮದೈಸಿರಿಯೆ
ಭಗವತಿಯೆ ಭಾರತಿಯೆ ಭುವನ ವಂದಿತ ಮಾತೆ
ಚಾಮುಂಡಿ ಶ್ರೀದೇವಿ ಗೌರಿ ವಾಗೀಶ್ವರಿಯೆ

ಮುನ್ನಿನಂದದಿ ನಿನ್ನ ಖಿನ್ನ ವದನಾಬ್ಜವನು
ಕಣ್ಣೀರಿನಿಂ ತೊಯ್ಸಿ ನಿಟ್ಟುಸಿರ ಧೂಪ
ಕೆನ್ನೀರ ಕುಂಕುಮವು ಪ್ರಾಣ ಪುಷ್ಪಾಂಜಲಿಯು
ತಪ್ತ ಹೃದಯದ ಕ್ಲೇಶಜ್ವಾಲಾಪ್ರದೀಪ

ಆತ್ಮನೈವೇದ್ಯದಲಿ ಬಲಿಪೂಜೆಯನು ಗೈವ
ಕಾರಣವು ಉಳಿದಿಲ್ಲ ಕಾರುಣ್ಯಸರಿತೆ
ದಾಸ್ಯಪಂಕದಿ ಅರಳಿ ನಿಂತಿಹುದು ನಿನಗಾಗಿ
ಬಿಡುಗಡೆಯ ಪಂಕಜದ ಪೀಠ ಸಚ್ಚರಿತೆ

ಕಬ್ಬಿಣದ ಸರಪಳಿಯು ಬಿಗಿದ ಕಾಲ್ಗಳೊಳಿಂದು
ಸ್ವಾತಂತ್ರ್ಯ ನೂಪುರದ ಝುಣಝುಣತ್ಕಾರ
ದಾಸ್ಯ ಶೃಂಖಲೆ ಬಿಗಿದ ವರದ ಹಸ್ತದೊಳಿಂದು
ವೇದ-ವೀಣೆಯ ಮೃದುಲ ಮಧುರ ಝಂಕಾರ

ಮತ್ತೆ ಮಸ್ತಕದಲ್ಲಿ ಸಮತೆ ಶಾಂತಿಯ ಮುಕುಟ
ಮತ್ತೆ ಮುಖದಲಿ ಮಧುರ ಮಂದಹಾಸ
ಮತ್ತೆ ಹಿಮಗಿರಿಶಿರದಿ ಧರ್ಮಚಕ್ರಧ್ವಜವು
ಮತ್ತೆ ಕಡಲಲೆಯಲ್ಲಿ ವಿಜಯ ಘೋಷ

ಆಸ್ಥಿ ಪಂಜರಗಳಲಿ ಮತ್ತೆ ಚೇತನ ಚಿಮ್ಮಿ
ಆತ್ಮಗೌರವ ಹೊಮ್ಮಿ ಬಂತು ತಾಯೆ

ಮಣ್ಣ ಬೊಂಬೆಗಳಿಂದು ವಜ್ರದೇಹಿಗಳಾಗಿ
ನಿನ್ನ ಪೂಜೆಗೆ ಬಾಗಿ ನಿಂತಿಹರು ತಾಯೆ

ನಿನ್ನುದರದೊಳು ಬರುವುದೇ ಭಾಗ್ಯ ಭಗವತಿಯೆ
ಈಗ ಬದುಕಿರುವುದೋ, ಪರಮ ಭಾಗ್ಯ!
ಇನ್ನೇನಯಾಚಿಸೆವು ನಿನ್ನನ್ನು ನಾಚಿಸೆವು
ನಿನ್ನ ನೆರಳಲಿ ನಮಗೆ ನರಕವೂ ಸ್ವರ್ಗ!

ಪಾಶವೀ ಶಸ್ತ್ರಕ್ರಿಯೆ ಬೇರ್ಪಡಿಸಿದಂಗಗಳು
ಸ್ವರ್ಣ ಶೃಂಖಲೆಗಾಗಿ ಹಾತೊರೆಯುತಿಹವು
ಅನಿಮಿತ್ತ ವೈರದಿಂ ಪೂರ್ವಪಶ್ಚಿಮವೆರಡು
ಸಹವಿನಾಶನಕಾಗಿ ಕಾತರಿಸುತಿಹವು

ನಿನ್ನ ಮಕ್ಕಳೊ? ಸಕಲ ಸನ್ಮತಿಗೆ ಸದ್ಗತಿಗೆ
ಸಹಜೀವನಕ್ಕಾಗಿ ಹೋರುತಿಹರು
ಲೇಸನೇ ಕೇಡೆಂದು ಕೇಡನೇ ಲೇಸೆಂದು
ನಾಶದೆಡೆ ಹೊರಟರ್ಗೆ ನಿಜದೋರುತಿಹರು

ಇನ್ನಾರ ಮಾತೆಯರು ಇನ್ನೇನ ಬೇಡಿದರು
ನೀನೆಮ್ಮ ಬೇಡುವುದು ನಮಗರಿದೆ ತಾಯೆ?
ಬಾಳುವೆವು, ಬಾಳಗೊಡುವೆವು ಸರ್ವಜೀವಿಗಳನ್ನು
ನಮ್ಮೆದೆಯು ನೋಯುವುದು ನರನೆಲ್ಲೆ ನೋಯೆ!

ಊರೆಲ್ಲ ನಂಟರು ಕೇರಿಯೆಲ್ಲವು ಬಳಗ
ಧಾರುಣಿಯೆ ನಮ್ಮ ಗುರು, ಕುಲದೈವ ತಾಯೆ!
ಯಾರೆಮಗೆ ವೈರಿಗಳು? ಯಾರನ್ನು ಬಿಡಲಹದು?
ಯಾರೊಡನೆ ದ್ವೇಷವನು ಸಾಧಿಪುದು ತಾಯೆ?

ವೈರಿಗಳು ಹೊರಗಿಲ್ಲ, ಒಳಗಿಹರು, ಅಡಗಿಹರು–
ನಮ್ಮಲ್ಲೆ ಎಲ್ಲೆಲ್ಲು ಅವರೊಡನೆ ಯುದ್ಧ

ಬರಿ ಮೈಯು ಬರಿ ಹೊಟ್ಟೆ ಬರಿದಲೆಯು ಬರಿಮನೆಯು
ಬರ ನೆರೆಯು ರುಜೆಯೊಡನೆ ತುಮುಲಯುದ್ಧ!

ಮರುಭೂಮಿಯಲಿ ಮತ್ತೆ ನಂದನದ ನಗೆಸೂಸೆ
ಪೆರ್ದೊರೆಗಳನು ಕಟ್ಟಿ ನಿಲಿಸುತಿಹೆವು
ಬಂಜೆ ನೆಲದಲಿ ಮತ್ತೆ ಬಂಗಾರ ಬೆಳೆವಂತೆ
ನೇಗಿಲದ ಯೋಗಿಗಳ ಒಲಿಸುತಿಹೆವು

ಹಂಗಿನಮೃತಕ್ಕಿಂತ ತಂಗುಳನ್ನವು ಲೇಸು
ಎಂದು ನಮ್ಮನೆ ನಾವು ನಂಬಿರುವೆವು
ಎಂಥ ಬಿರಿ ಬಂದರೂ ಅನ್ಯರಂಕಿತ ಬೇಡ
ಎಂಬ ನಿರ್ಧಾರದಲಿ ಮುಂಬರಿವೆವು

ಉಳಿದವರು ಅಣುಬಾಂಬುಗಳ ತಂದು ಪೂಜಿಸಲಿ
ತಮ್ಮ ತಾಯಿಯನೆಮಗೆ ಈ ಪೂಜೆ ಸಾಕು
ಸಂಹಾರವಲ್ಲ, ಶ್ರಮ; ವಿದ್ವೇಷವಲ್ಲ, ದಮ;
ವೈರವಲ್ಲಾಹಾರ– ಈ ಬುದ್ಧಿ ಬೇಕು

* * *

ಸ್ವಾತಂತ್ರ್ಯದ ಸಪ್ತ ವರ್ಷಗಳು

ಇದು ಯಾವ ಸದ್ದು?
ಭಾರತವ ಬಿಗಿದಿರ್ದ ಬಂಧನಗಳೆಲ್ಲವೂ
ಛಿಳಿ ಛಿಟಿಲ್ ಛಿಟಿಲೆನುತ ಮುರಿವ ಸದ್ದು
ಮ್ಲಾನ ಮುಖದಲಿ ಮಿಂಚು ಮೈದೋರಿ ಕೊರಲಿಂದ
ದಿಕ್ತಟವ ಭೇದಿಸುವ ಜಯ ಘೋಷ ಹೊಮ್ಮುತಿರೆ
ಗಿರಿಗುಹೆಗಳೆಲ್ಲವೂ ಮಾರ್ದನಿಯ ಕುಡುತಲಿರೆ
ಸಾಗರ ತರಂಗದಿಂ ಹಿಮ ಶೃಂಗಗಳವರೆಗೆ
ಸರ್ವವೂ ಗರ್ವದಿಂ ಕೇಕೆಯನು ಹಾಕುತಿರೆ

ಗಾಳಿ ಘೀಳಿಡುತಲಿರೆ ಬೆಂಕಿ ಝೇಂಕರಿಸುತಿರೆ
ಬೆಳಕು ತುಳುಕಾಡುತಿರೆ ಗಂಧ ಗರಿಗೆದರುತಿರೆ
ರಸವು ಒಸಗೆಯ ನುಡಿಯ ನುಡಿಯುತುಲಿದಾಡುತಿರೆ

ಭಾರತದ ಸ್ವಾತಂತ್ರ್ಯ–
ರವಿಗೆ ಸುಸ್ವಾಗತವ
ಕೋರುತಿಹ ಭಾರತೀಯರ ಕೊರಳ ಸದ್ದು

ಅಲ್ಲ, ಅದಲ್ಲ:
ಭರತಮಾತೆಯ ದೇಹ ಸೀಳಿ ಎರಡಾಗುತಿರೆ
ಅಸ್ಥಿಗಳು ಲಟಲಟನೆ ಮುರಿದ ಸದ್ದು!
ಸ್ನಾಯುಗಳು ಪರಪರನೆ ಹರಿವ ಸದ್ದು!
ಮನೆ ಮಾರುಗಳ ತೊರೆದು ಮಾನ ಪ್ರಾಣಗಳನ್ನು
ಉಳಿಸಿಕೊಳ್ಳಲು ಸಿಕ್ಕ ಸಿಕ್ಕೆಡೆಗೆ ಓಡುತಿಹ–
ದಾರಿಯಲಿ ಜಾತೀಯ ಜ್ವಾಲೆಗಾಹುತಿಯಾಗಿ
ಚೀತ್ಕರಿಸುತಿಹ ನಿರಾಶ್ರಿತರ ಸುಯ್ಲಿನ ಸದ್ದು!
ಅಗ್ನಿಗಾಹುತಿಯಾಗಿ ಧಗಧಗನೆ ಉರಿಯುತಿಹ
ಮನೆಗಳಲಿ ದನಕರುಗಳೆಲ್ಲ ಕರಿಕಾಗುತಿರೆ
ವಿಜಯದುನ್ಮಾದದಲಿ ಕುಣಿವ ಸಾವಿನ ಸದ್ದು!
ಅದೊ ಸತೀತ್ವದ ಹರಣ ಸಾಮುದಾಯಿಕವಾಗಿ
ನಡೆದಿರಲು ಗಹಗಹಿಪ ಪಾಶವೀ ಶಕ್ತಿಗಳ
ವಿಕಟಾಟ್ಟಹಾಸ ಸಂಘಟ್ಟ ಶಬ್ದವು ಸದ್ದು!

ಬೇರೊಂದು:
ಬ್ರಿಟಿಶರಾವುಗೆಗಳನು ಪೂಜಿಸುತ ದಿನಗಳೆದ
ದೇಶೀಯ ರಾಜರೇ ಸ್ವಾತಂತ್ರ್ಯವನು ಸಾರಿ
ಭಾರತ ದ್ರೋಹಿಗಳ ಮಾಲೆ ಸೇರಲು ಬಯಸೆ
ಪ್ರಕ್ಷುಬ್ಧ ಪ್ರಜೆಗಳೀ ದ್ರೋಹಿಗಳ ತಳ್ಳಿರೆನು–

ತಬ್ಬರಿಸಿ ಕೈಕೊಂಡ ಚಳವಳಿಯ ಸದ್ದು!
ಈ ಸೊಳ್ಳೆಗಳಿಗೇಕೆ ಶಸ್ತ್ರಾಸ್ತ್ರ ಸೈನ್ಯಗಳು
ಹೂಂಕಾರ ಮಾತ್ರದಿಂ ಹಾರಿಸುವೆನಿವುಗಳನು

ಎಂದು ಗರ್ಜಿಸುತಿರುವ ವಲ್ಲಭನ ಸದ್ದು!
ಕಾಶ್ಮೀರ ಜುನಗಢಿದಿ ಹೈದರಾಬಾದಿನಲಿ
ಕೊಲೆಗಡುಕರುಪಟಳಕೆ ತತ್ತರಿಸಿ ತಲ್ಲಣಿಸಿ
'ಶಿವಶಿವಾ!' ಎಂದೊರಲ್ವ ಜನರ ಗೋಳಿನ ಸದ್ದು!
ಕನಿಕರದ ಕಣ್ಣೀರ
ಕಳವಳದ ತಳಮಳದ
ಹೃದಯಭೇದಕ ಸದ್ದು, ಮರ್ಮಭೇದಕ ಸದ್ದು!

ಮತ್ತೊಂದು:
ಕಾಶ್ಮೀರದಲಿ ನುಗ್ಗಿ ಕೊಲೆ ಸುಲಿಗೆಗಳ ಸುಗ್ಗಿ
ನಡೆಸಿದ್ದ ಮಿಕಗಳೇ ಕಿರ್ರೆನುತ ಓಡುತಿಹ–
ಜುನಗಢದ ನವ್ವಾಬ ಸಪ್ಪಳಿಲ್ಲದೆ ಜಾರಿ
ರೋರಾಡಿ ರೋದಿಸಲು ಹೊರಟ ದುಗುಡದ ಸದ್ದು
ಗುಂಡಿಟ್ಟು ಕೊಂದವಗೆ ಕೈಮುಗಿದ ಬಾಪುವಿನ
ಬಾಯಿಂದ ಹೊರಬಿದ್ದು ವಿಶ್ವಹೃದಯವ ಹಿಂಡಿ
ಅಣುರೇಣು ತೃಣಕಾಷ್ಠಗಳಲಿ ಮಾರ್ದನಿಗೊಂಡ
"ಹೇರಾಮ, ಹೇರಾಮ!" ಎಂಬ ಸ್ವರ್ಗದ ಸದ್ದು!
ಹೈದರಾಬಾದಿನಲಿ ರಝುವಿ ಹಚ್ಚಿದ ಬೆಂಕಿ

ಅವನೆ ಕಟ್ಟಿದ ಮನೆಯ ಸುಡುತಲಿಹ ಸದ್ದು!
ಸುಖದುಃಖಗಳ ಮಿಶ್ರ–
ಸ್ವರಸಂಕುಲದ ಸದ್ದು
ಭಾರತದ ಉದ್ದಕ್ಕು ಬಡತನದ ಸದ್ದು!

ಇನ್ನೊಂದು:
ಹೊಸರಾಜ್ಯ ಘಟನೆಯನು ಹೊಸರಾಷ್ಟ್ರ ಯೋಜನೆಯ
ಹೊಸ ಆಯ್ಕೆಗಳ ಜನವು ಸ್ವಾಗತಿಪ ಸದ್ದು
ಅಲ್ಲಲ್ಲಿ ತಲೆಯೆತ್ತಿ ಮೆರೆಯುತಿಹ ನೂರಾರು
ಕಾರ್ಖಾನೆಗಳು ಗೈವ ಗೆಲವು ಹಿಗ್ಗಿನ ಸದ್ದು
ಬಖರ ನಂಗಾಲಿನಿಂ ತುಂಗಭದ್ರೆಯವರೆಗೆ
ಹಲವು ಕಟ್ಟೆಗಳಿಂದ ಜಲಧುಮುಕುತಿಹ ಸದ್ದು
ಹಳ್ಳಿಹಳ್ಳಿಗಳಲ್ಲಿ ಶ್ರಮದಾನ ಭೂದಾನ
ಸಂಪತ್ತಿದಾನಗಳ ಸಂತಸದ ಸದ್ದು
ಹೊಲ ಹೊಲದಿ ಯಂತ್ರಗಳು ನೀರೆಳೆವ ಸದ್ದು
ದಾರಿ ದಾರಿಗು ಸರಕು ಬಂಡಿಗಳ ಸದ್ದು
ಉತ್ಪತ್ತಿ, ನಿರ್ಮಾಣ
ವಿಕಸನದ ಸದ್ದು
ನವರಾಷ್ಟ್ರ ಶಿಲ್ಪಿಗಳ ಸಂಭ್ರಮದ ಸದ್ದು!

ಮಗುದೊಂದು:
ಸಾಹಿತ್ಯ ಸಂಗೀತ ನಾಟಕದ ಆಕದಮಿಯ
ಗ್ರಾಮಗೀತೋತ್ಸವದ ಬಾನಿನುಲಿಯ
ವೈಜ್ಞಾನಿಕ ಪ್ರಯೋಗಾಲಯಗಳೇಕದಶ
ಕೃಷಿ ಪಂಡಿತರ ಮಾನಸಭೆಯ ಸದ್ದು
ಇಂಡೋನೇಶಿಯಲಿಬಿಯ ಮೊದಲಾದ ರಾಷ್ಟ್ರಗಳು
ಸ್ವಾತಂತ್ರ್ಯದಾತನೆಂದೆಮ್ಮ ನಾಯಕನನ್ನು
ಹಿಗ್ಗಿನಿಂ ಹೊಗಳುತಿಹ ಸಂತಸದ ಸದ್ದು
ಕೊರಿಯ ಇಂಡೋಚೀಣಗಳಲಿ ನರಬಲಿಯನ್ನು
ನಿಲ್ಲಿಸಿದ ಭಾರತದ ಜಗ ಹೊಗಳ್ವ ಸದ್ದು
ದಮನಕ್ಕೆ ದಾಳಿಯಿಡಲಿರುವ ವೀರರ ಸದ್ದು
ವಿಜಯಗಳ ವೈಭವದ
ಸಾಹಸದ ಸಾಧನೆಯ

ತ್ಯಾಗ ಬಲಿದಾನಗಳ ತೇಜಗಳ ಸದ್ದು!
ಏಳು ವರ್ಷಗಳಾಚೆ ಹೋಳಾಗಿ ಸ್ವಾತಂತ್ರ್ಯ
ಪಡೆದ ಭಾರತವರ್ಷ ಪಟ್ಟಕಷ್ಟಗಳೆನಿತೊ!
ಎದುರಿಸಿದ ಎಡರುಗಳು ತೊಡರು ಎನಿತೊ!
ಪ್ರಕೃತಿಕ್ಷೋಭೆಗಳೆನಿತೊ ಹಗೆಯ ಹಾವಳಿಯೆನಿತೊ
ಸಾಮ್ರಾಜ್ಯ ಶಕ್ತಿಗಳ ಕುಹಕವೆನಿತೊ
ಆದರೂ ಬಗ್ಗಿಲ್ಲ ಭಾರತವು ಭಯಗಳಿಗೆ
ಬಲಶಾಲಿಯಾಗುತ್ತ ನಡೆದಿರುವುದು
ಶಾಂತಿ ಸತ್ಯದ ಧ್ವಜವ ಧವಳಗಿರಿಯಲಿ ನಿಲಿಸಿ
ಜಗಕೆ ಬೆಳಕಾಗುತ್ತ ಸಾಗಿರುವುದು
ವಿಜಯೋಸ್ತು ಭಾರತವೆ
ವರ್ಧಿಷ್ಣು ಭಾರತವೆ
ಅಡಗದಿರಲೆಂದಿಗೂ ನಿನ್ನ ಗೆಲವಿನ ಸದ್ದು!

* * *

ಮಾನಸ ಸರೋವರ

ನಿನ್ನ ಕರುಣೆಯ ಸರಿಯೆ ಸುರಿದು ತುಂಬಿದೆ ತಂದೆ
ಎಂದೊ ಬತ್ತಿದ ಮನದ ಸರಸಿಯಿಂದು!
ಇಲ್ಲದಿರೆ ತುಂಬಿಸಲು ಬಲ್ಲೆನೇ ನಾ ನನ್ನ
ಬೊಗಸೆಯಲಿ ನೀರನ್ನು ತಂದು ತಂದು?

ಎಲ್ಲ ತುಂಬಿಸಬಹುದು ಏನಾದರೂ ಮಾಡಿ
ಎಂತಾದರೂ ಮಾಡಿ ಕಂತುಹರನೆ
ತೂತು ಬಿದ್ದಿಹ ಮಡಕೆ ಮನವ ತುಂಬಿಸಬಹುದೆ
ನಾನೆಂಬ ಸೋರುತಿಹ ಚಿಪ್ಪಿನಿಂ ಹರನೆ?

ಮಾನಸ ಸರೋವರವ ತುಂಬಿಸುವುದಂತಿರಲಿ
ನನ್ನಳವೆ ಅದರಾಳ ಅಗಲವರಿಯುವುದು?
ನೀ ತುಂಬು ಎಂದಾಗ ತುಂಬಿದೀ ಕೆರೆ ನೀನೆ
ಬರಿದಾಗು ಎಂದಾಗ ಬರಿದೆ ಆಗುವುದು!

ಈ ಕೆರೆಯ ಕಟ್ಟಿದವ ನಾನಲ್ಲ. ಈ ಕೆರೆಯ
ತುಂಬಿಸುವ ಭಾರವೂ ನನ್ನದಲ್ಲ!
ತುಂಬದಿದ್ದರು ನನಗೆ ಅಪಮಾನವೇನಿಲ್ಲ
ತುಂಬು, ಬಿಡು, ಭರಭಾರ ನಿನ್ನದೆಲ್ಲ!

ಈಗ ತುಂಬಿದೆಯಲ್ಲ, ಏನ ಬೆಳಸುವಿ ಹೇಳು–
ಇದರ ಸಲಿಲದಿ ತಂದೆ ಶರಣು ಬಂದೆ
ಓದುಗರ ಎದೆಯ ಹೊಲಕಿದರ ನೀರನು ಉಣಿಸಿ
ಬೆಳಸು ಹಿಗ್ಗಿನ ಬೆಳೆಯ, ಬೆಳಸ, ತಂದೆ!

ಈ ಕೆರೆಯ ತೂಬುಗಳ ಬಾಯ್ಮುಚ್ಚಿ ನೀರಿನಲಿ
ಕಮಲಕೇಳೀವನವ ಬೆಳೆಸಬೇಡ!
ಮತ್ತೆ ತುಂಬಲಿ ಬಿಡಲಿ, ನೀರು ಬಿಡು–ನೀರು ಬಿಡು–
ನೌಕಾವಿಹಾರಕ್ಕೆ ಉಳಿಸಬೇಡ್ದೇ

* * *

ಕಲ್ಲೋಲ ಮಾಲೆ

ಕಲ್ಲೋಲ ಮಾಲೆ

ಯಾವ ಹೂಗಳ ಎಸಳುಗಳೊ ಇವು
ಯಾವ ಹಕ್ಕಿಯ ಗರಿಗಳೊ
ಯಾವ ತೆನೆಗಳ ಕಾಳುಗಳೊ ಇವು
ಯಾವ ಹೊನಲಿನ ತೆರೆಗಳೊ
ಇಡಿಯ ಹೂವುಗಳಲ್ಲ ಮುಡಿಯಲು
ಚವರಿಯಲ್ಲವು ಹಿಡಿಯಲು
ರಾಶಿಯಲ್ಲಿವು ಹಿಗ್ಗಿ ಪಡೆಯಲು
ಸಲಿಲವಲ್ಲಿವು ಕುಡಿಯಲು
ಸುರಿಯಲಿರವಿನ ಚರಣತಲದಲಿ
ಮೆರೆಯಲಿರುಹಿನ ಕರದಲಿ
ಬಾಳ ಗುಬ್ಬಿಗೆ ಗುಟುಕಿವಾಗಲಿ
ಬಾಳ ತೊರೆಯಲಿ ಹರಿಯಲಿ.

* * *

೧

ನಿನ್ನ ಹೃದಯಸಮುದ್ರದಲ್ಲಿ
ಮೀನು ಮೊಸಳೆಗಳಷ್ಟೇ ಇಲ್ಲ
ಮುತ್ತುರತ್ನಗಳೂ ಇವೆ–
ಹುಡುಕಿ ನೋಡು!
ನಿನ್ನ ಚಿತ್ತಭೂಮಿಯಲ್ಲಿ
ಕಲ್ಲು ಮಣ್ಣುಗಳಷ್ಟೇ ಇಲ್ಲ
ಚಿನ್ನ ರನ್ನಗಳೂ ಇವೆ–
ಬೆದಕಿ ನೋಡು!
ನಿನ್ನ ಮನದ ಪಾಷಾಣದಲ್ಲಿ
ಕಾಠಿಣ್ಯ ಕಠೋರತೆಗಳಷ್ಟೇ ಇಲ್ಲ
ದಿವ್ಯ ಮೂರ್ತಿಯೂ ಮಡಗಿದೆ–

ಕಟೆದು ನೋಡು
ನಿನ್ನ ಮತಿಯ ಮರಳ್ಗಾಡಿನಲ್ಲಿ
ಶುಷ್ಕತರುಮರಗಳಷ್ಟೇ ಇಲ್ಲ
ಪುಷ್ಪಫಲಗಳೂ ಇವೆ–
ಅರಸಿ ನೋಡು!
ನಿನ್ನ ಬಾಳ ಬಾನಿನಲ್ಲಿ
ಗುಡುಗು ಸಿಡಿಲುಗಳಷ್ಟೇ ಇಲ್ಲ
ಇಂದ್ರಚಾಪವೂ ಇದೆ–
ಕಣ್ದೆರೆದು ನೋಡು!

* * *

೨

ಈ ವನದಿ ಮಂದಾರ
ಆಗೊಮ್ಮೆ ಈಗೊಮ್ಮೆ
ಈ ಮನೆಯ ಸಿಂಗಾರ
ಆಗೊಮ್ಮೆ ಈಗೊಮ್ಮೆ
ಈ ಮನದ ಝೇಂಕಾರ
ಆಗೊಮ್ಮೆ ಈಗೊಮ್ಮೆ
ಆನಂದದವತಾರ
ಆಗೊಮ್ಮೆ ಈಗೊಮ್ಮೆ
ಒಳ್ಳೆಯದು ಎಲ್ಲವೂ
ಆಗೊಮ್ಮೆ ಈಗೊಮ್ಮೆ
ಜೀವನವು ಸಾಗುವುದು
ಹಾಗೊಮ್ಮೆ ಹೀಗೊಮ್ಮೆ!

* * *

೩

ಆಗೊಂದು ಈಗೊಂದು ಹನಿಯನಿತ್ತರೆ ಸಾಕು
ಹನಿಸದಿರು ಮಧುರಸವ ನನ್ನ ಮೇಲೆ
ಆಗೊಮ್ಮೆ ಈಗೊಮ್ಮೆ ಮುತ್ತನಿತ್ತರೆ ಸಾಕು
ಸುರಿಯದಿರು ಪ್ರಣಯ ರಸ ಮೇಲೆ ಮೇಲೆ
ಅಹುದು,
ಅಭಾವವನ್ನು ಹೇಗಾದರೂ ಸಹಿಸಿಕೊಳ್ಳಬಹುದು–
ಸಮೃದ್ಧಿಯನ್ನು ಸಹಿಸಿಕೊಳ್ಳುವುದೇ ಕಷ್ಟ;
ದುಃಖವನ್ನು ಹೇಗಾದರೂ ಸಹಿಸಿಕೊಳ್ಳಬಹುದು,
ಸುಖವನ್ನು ಸಹಿಸಿಕೊಳ್ಳುವುದೇ ಕಷ್ಟ;
ಬಡತನವನ್ನು ಹೇಗಾದರೂ ಸಹಿಸಿಕೊಳ್ಳಬಹುದು.
ಒಡೆತನವನ್ನು ಸಹಿಸಿಕೊಳ್ಳುವುದೇ ಕಷ್ಟ!

* * *

೪

ಅಲ್ಲೊಂದು ಇಲ್ಲೊಂದು ಸುಂದರ ಮುಖ
ಆಗಿಷ್ಟು ಈಗಿಷ್ಟು ಜೀವನ ಸುಖ
ಆಗೊಮ್ಮೆ ಈಗೊಮ್ಮೆ ದೈವೀ ಕ್ಷಣ
ಎಲ್ಲಿಯೋ ಒಬ್ಬನಲಿ ಕವಿತಾ ಗುಣ
ಅಲ್ಲೊಂದು ಇಲ್ಲೊಂದು ಚಿನ್ನದ ಗಣಿ
ಯಾವುದೋ ಫಣಿಯಲ್ಲಿ ಚಿಂತಾಮಣಿ
ಅಲ್ಲೊಂದು ಇಲ್ಲೊಂದು ಪ್ರೀತಿಯ ಸೆಲೆ
ಆಗಿಷ್ಟು ಈಗಿಷ್ಟು ಬಾಳಿಗೆ ಬೆಲೆ

* * *

೫

ಶೈಶವವೆಂದಿತು:
'ನಾನು ಲೀಲಾಲೋಲೆ'
ಬಾಲ್ಯವೆಂದಿತು:
'ನಾನು ಕ್ರೀಡಾಶೀಲೆ'
ತಾರುಣ್ಯವೆಂದಿತು:
'ನಾನು ಒಲವಿನ ಉಯ್ಯಾಲೆ'
ವಾರ್ಧಕ್ಯವೆಂದಿತು:
'ನಾನು ಅನುಭವದ ಕಣ್ಣುಮುಚ್ಚಾಲೆ'
ವೃದ್ಧಾಪ್ಯವೆಂದಿತು:
'ನಾನು ಭಕ್ತಿಯ ಜಪಮಾಲೆ'
ಜಗತ್ತು ಕೂಗಿ ಹೇಳಿತು:
'ನಾನು ಕರ್ತವ್ಯದ ಯಜ್ಞಶಾಲೆ!'

* * *

೬

ಬಾಳ ಕಡಲಲಿ ಮುಳುಗಿ ಮೂರು ಮುತ್ತನು ತಂದೆ
'ಸ್ನೇಹ, ಸೈರಣೆ, ಸಮತೆ' ಎಂದು ಕರೆದೆ!
ಬಾಳ ಬನದಲಿ ತಿರುಗಿ ಮೂರು ಫಲಗಳ ತಂದೆ
'ದಿಟ, ಚೆಲುವು, ಒಲವುಗಳು' ಎಂದು ಒರೆದೆ!
ಬಾಳಿನಾಗಸದಲ್ಲಿ ಮೂರು ನಕ್ಷತ್ರಗಳು–
'ಒಲಿ, ಒಲಿಸು, ಕೂಡಿ ನಲಿ' ಎಂದು ಹೆಸರು;
ಬಾಳ ಭಾಂಡಾರದಲಿ ಮೂರು ರತ್ನಗಳುಂಟು–
'ನೆನಿಕೆ, ನಯ, ನಂಬಿಕೆ' ಗಳೆಂದು ಉಸಿರು.

* * *

೭

ಹೂವು ಅರಳುತ್ತಲಿದ್ದಿತು....
ಗಾಳಿಯೆಂದಿತು–
  'ನನಗೆ ನಿನ್ನ ಗಂಧ ಬೇಕು'
ಮಧುಕರನೆಂದಿತು–
  'ನನಗೆ ನಿನ್ನ ಮಧು ಬೇಕು'
ಚಿಟ್ಟೆಯೆಂದಿತು–
  'ನನಗೆ ನಿನ್ನ ಮುತ್ತು ಬೇಕು'
ಕಿರಣವೆಂದಿತು–
  'ನನಗೆ ನಿನ್ನೊಡನೆ ಲಾಸ್ಯ ಬೇಕು'
ಇಬ್ಬನಿಯೆಂದಿತು–
  'ನನಗೆ ನಿನ್ನ ಸಂಗ ಬೇಕು'
ಕೀಟವೆಂದಿತು–
  'ನನಗೆ ನಿನ್ನನ್ನು ಕೊರೆವುದೇ ಬೇಕು!'
ಹೂವೆಂದಿತು–
ಹುಟ್ಟಿದ ತಪ್ಪಿಗೆ....
ಎಷ್ಟು ಜನರನ್ನು ತುಷ್ಟಿಗೊಳಿಸಬೇಕು!
ಇನ್ನು ಬಹಳ ಹೊತ್ತು ಬದುಕಬಾರದು!

* * *

೮

ಎದೆಯ ಹೂ ಅರಳಿಹುದು ಮುಡಿದುಕೋ ಮನದನ್ನೆ
  ಕೀಟ ಕೊರೆಯುವ ಮುನ್ನ,
  ಹಿಮ ಸುರಿವ ಮುನ್ನ!
ಬಾಳು ಜೇನಾಗಿಹುದು ಬಾಯಿ ಸವಿ ಮಾಡಿಕೋ
  ಮಳೆಯು ಸುರಿಯುವ ಮುನ್ನ,
  ಹುಳು ನೆರೆವ ಮುನ್ನ!

ಮನವು ಮುತ್ತಾಗಿಹುದು ನತ್ತಾಗಿ ಧರಿಸಿಕೋ
ಸಿಂಪು ತೆರೆಯುವ ಮುನ್ನ,
ಅದು ಜರಿವ ಮುನ್ನ!
ಜೀವನವು ದೊರೆತಿಹುದು ದೇವನಿಂ ವರವಾಗಿ
ಸಫಲಗೊಳಿಸದ ಚೆನ್ನೆ,
ವಿಫಲವಾಗುವ ಮುನ್ನ!

* * *

೯

ಗಾಳಿ ಧೂಳಿಯೊಡನೆ ಆಡಿಯೂ ಮಲಿನವಾಗುವುದಿಲ್ಲ,
ಸುಗಂಧ ನಿರ್ಗಂಧದೊಡನಿದ್ದೂ ಕಂದುವುದಿಲ್ಲ, ಕುಂದುವುದಿಲ್ಲ;
ಬೆಂಕಿ ಸಿಹಿ ಸೌದೆಯನ್ನು ಸುಟ್ಟು ಸಿಹಿಯಾಗುವುದಿಲ್ಲ,
ಕಹಿ ಕಟ್ಟಿಗೆ ಸುಟ್ಟು ಕಹಿಯಾಗುವುದಿಲ್ಲ;
ನೀರು ಕೊಳೆಯನ್ನು ತೊಳೆದು ಖಿನ್ನವಾಗುವುದಿಲ್ಲ,
ಪೂಜೆಗೊಂಡು ಪ್ರಸನ್ನವಾಗುವುದಿಲ್ಲ;
ಪೃಥ್ವಿ, ಪಾದ ಸೋಂಕಲು ಕುಗ್ಗುವುದಿಲ್ಲ,
ಮಸ್ತಕವನ್ನಿರಿಸಿದರೆ ಹಿಗ್ಗುವುದಿಲ್ಲ;
ಆಕಾಶ ಬೆಳಕು ತುಳುಕಿದರೆ ನಲಿವುದಿಲ್ಲ,
ಕತ್ತಲೆ ಮುಸುಕಿದರೆ ಅಳಲುವುದಿಲ್ಲ.
ನೀನೂ ಈ ಪಂಚಭೂತಗಳಿಂದಲೇ ಜನ್ಮಿಸಿರುವೆ,
ನೀನೇಕೆ ಮಲಿನವಾಗಬೇಕು, ಖಿನ್ನನಾಗಬೇಕು,
ಕುಗ್ಗಬೇಕು, ಕೊರಗಬೇಕು, ಅಳಲಬೇಕು, ಬಳಲಬೇಕು?

* * *

೧೦

ಮೆಲ್ಲ ಮೆಲ್ಲನೆ ತೀಡು ಗಾಳಿಯೆ
ಮೊಗ್ಗು ತುಟಿಗಳ ತೆರೆಯಲಿ
ಮೆಲ್ಲ ಮೆಲ್ಲನೆ ಕುಟ್ಟು ಗೆಳತಿಯೆ
ಅಕ್ಕಿ ತೌಡನು ತೊರೆಯಲಿ

ಮೆಲ್ಲ ಮೆಲ್ಲನೆ ಬಾರೊ ಯೌವನ
ಎದೆಯ ಕದವದು ತೆರೆಯಲಿ
ಮೆಲ್ಲ ಮೆಲ್ಲನೆ ಒಳಗೆ ಬಾ ಸಖ
ಪ್ರೀತಿ ಮೈಯನು ಮುರಿಯಲಿ
ಮೆಲ್ಲ ಮೆಲ್ಲನೆ ಅರಳು ಜೀವನ
ಶೀಲ ಸೌರಭ ಸುರಿಯಲಿ
ಮೆಲ್ಲ ಮೆಲ್ಲನೆ ಅಪ್ಪು ಮರಣವೆ
ಜೀರ್ಣ ವಸನವು ಸರಿಯಲಿ.

* * *

೧೧

ಒಲೆಯ ಉರಿ:
"ನಾನು ಅಡುಗೆ ಮಾಡಬಲ್ಲೆ,
ಬೆಳಕನ್ನು ನೀಡಲಾರೆ."
ಒಲೆಯ ಮೇಲಿನ ದೀಪ:
"ನಾನು ಬೆಳಕನ್ನು ಬೀರಬಲ್ಲೆ,
ಅಡುಗೆ ಮಾಡಲಾರೆ."
ಗೃಹಿಣಿ:
"ನನಗೆ ಅಡುಗೆ ಮಾಡುವ ಉರಿಯೂ ಬೇಕು.
ಬೆಳಕು ನೀಡುವ ದೀಪವೂ ಬೇಕು."

* * *

೧೨

ಬೆಳೆವುದದು ಭೂಮಿಗುಣ
ಬೆಳೆದು ಬೆಳಕಾಗುವುದೆ ಬಾಳಗುಣವು
ಮೊಳೆವುದದು ಬೀಜಗುಣ
ಬೆಳೆದು ಸವಿಯಾಗುವುದೆ ಕಾಳಗುಣವು
ಉರಿವುದದು ಅಗ್ನಿಗುಣ
ಉರಿದು ಬೆಳಕಾಗುವುದೆ ಜ್ಯೋತಿಗುಣವು

ಸವಿಯಹುದು ನುಡಿಯ ಗುಣ
ಸವಿಯು ಬೆಳಕಾಗುವುದೆ ಗೀತಗುಣವು.

* * *

೧೩

ಕೆಳಗಣ ನೆಲದತ್ತ ತಿರಸ್ಕಾರಪೂರ್ಣ ದೃಷ್ಟಿ ತೂರಿ ನುಡಿಯಿತು ಹಿಮಶಿಖರ:
"ನೆಲವೆ, ನಿನ್ನ ಮಣ್ಣಿನ ಮೈಯಿಂದ ದೂರವಿರುವೆನೆಂದೇ ನಾನಿಷ್ಟು ಪರಿಶುದ್ಧನಾಗಿ ಉಳಿದಿರುವೆ. ನನ್ನಲ್ಲಿ ಹುಡುಕಿದರೂ ಕಾಣದು ಮಣ್ಣ ಕಣವೊಂದು. ನಾನು ಸಂಪೂರ್ಣ ಶುದ್ಧ"
ಮೆತ್ತಗೆ ಉತ್ತರವಿತ್ತಿತು ಮಣ್ಣು:
"ಹೆಮ್ಮೆ ಬೇಡ; ಹಮ್ಮು ಬೇಡ ಹಿಮವೆ, ನನಗೆ ಬೇಕೆನಿಸಿದಾಗ ಕರಗಿ ಹರಿದು ಬಂದು ನನ್ನ ಮೈ ತೊಯ್ಸಲೆಂದೇ ನೀನಲ್ಲಿರುವೆ! ಹರಿದು ಬರಲು ಹಗುರಾಗಲೆಂದೇ ಹರ ನಿನ್ನನ್ನು ಎತ್ತರದಲ್ಲಿರಿಸಿದ್ದಾನೆ– ಬಿಮ್ಮಿನಿಂದ ಬೀಗಲೆಂದಲ್ಲ!"

* * *

೧೪

ಮೇಲೆ ಮರ ಚಲಿಸಿದರೆ
ಚಲಿಪ ಚಂಚಲ ಛಾಯೆ
ನಿನಗೆ ಗತಿಶೀಲತೆಯ ಗರ್ವ ಬೇಡ!
ಪಡೆದು ಸೂರ್ಯನ ತೇಜ
ಬೆಳಗುತಿಹ ಉಡುರಾಜ
ತೇಜಸ್ವಿ ನಾನೆಂದು ಕೂರ್ವ ಬೇಡ!
ಕೇಳಿದಷ್ಟನು ಹೇಳಿ
ಜನ ತಣಿಪ ಅರಗಿಳಿ
ನಾನು ಪಂಡಿತವಕ್ಕಿಯೆಂದುಬ್ಬಬೇಡ!
ಮಳೆಯ ನೀರನು ಕೊಂಡು
ಸುರಿಸಿ ನನ್ನದಿದೆಂದು
ಮರವೆ ಮರವೆಯನಿಂತು ತಬ್ಬಬೇಡ!

* * *

೧೫

ಮೋಡಗಳೆ,

ನಿಮ್ಮ ಮೈ ಬೆಳಗಿಸಿಕೊಳ್ಳಲು ಇನ-ಶಶಿಗಳ ಮೈ ಮುಸುಕುವ ಅಗತ್ಯವೆಲ್ಲಿದೆ? ದೂರದಲ್ಲಿದ್ದೂ ಕಾಂತಿ ಪಡೆಯಬಹುದು ನಿಮ್ಮ ಕಾಯಗಳು ರವಿಶಶಿರಶ್ಮಿಗಳಿಂದ. ರವಿಶಶಿಗಳನ್ನೇ ಮರೆಮಾಡಿ ನೀವು ನಿಂತರೆ ನಿಮಗೆ ಹೆಚ್ಚಿನ ಲಾಭವೇನೂ ಇಲ್ಲ, ಜಗಕೆ ಬೆಳಕು ಸಾಲದಾಗುತ್ತದೆ. ಜಗಕೆ ಕತ್ತಲೆ ಕವಿದರೂ ಕವಿಯಲಿ, ನಾವು ರವಿಶಶಿಗಳನ್ನೇ ಮರೆಮಾಡಬಲ್ಲೆವೆಂಬುದನ್ನು ತೋರುವ ಹವ್ಯಾಸವೆ ನಿಮಗೆ? ತೋರಿರಿ, ಎಷ್ಟು ಹೊತ್ತು ತೋರುವಿರಿ!

* * *

೧೬

ಕೆಡುಕಿಗಿಹವು ನೂರು ದಾರಿ
  ಒಳಿತಿಗೊಂದೆ ದಾರಿ
ಸುಳ್ಳಿಗಿಹವು ನೂರು ದಾರಿ
  ಸತ್ಯಕೊಂದೆ ದಾರಿ
ಬುದ್ಧಿಗಿಹವು ನೂರು ದಾರಿ
  ಹೃದಯಕೊಂದೆ ದಾರಿ
ಕರ್ಮಕಿಹವು ನೂರು ದಾರಿ
  ಧರ್ಮಕೊಂದೆ ದಾರಿ

* * *

೧೭

ಸುಟ್ಟ ಸಗಣಿ ಶುದ್ಧವಾಗಿ ಭಸ್ಮವಾಗುತ್ತದೆ:
ಸುಟ್ಟ ಅದಿರು ಶುದ್ಧವಾಗಿ ಧಾತುವಾಗುತ್ತದೆ;
ಸುಟ್ಟ ಗಂಧದ ಚೆಕ್ಕೆ ಹೊಗೆಯಾಗಿ ಮಗಮಗಿಸುತ್ತದೆ;
ಸುಟ್ಟ ಕಣಕ ಪಕ್ವವಾಗಿ ರೊಟ್ಟಿಯಾಗುತ್ತದೆ.
ಸುಡು ನಿನ್ನ ದುರ್ಗುಣವ-
ಸುಟ್ಟ ದುರ್ಗುಣ ಶುದ್ಧವಾಗಿ ಸದ್ಗುಣವಾಗುತ್ತದೆ;
ಸುಡು ನಿನ್ನ ಕರ್ಮವ-

ಸುಟ್ಟ ಕರ್ಮ ನಿರ್ಮಲವಾಗಿ ಧರ್ಮವಾಗುತ್ತದೆ;
ಸುಡು ನಿನ್ನ ಹಮ್ಮು ಬಿಮ್ಮುಗಳ–
ಸುಟ್ಟ ಹಮ್ಮು ಶುದ್ಧವಾಗಿ ಶಿವವಾಗುತ್ತದೆ!

* * *

೧೮

ಸಾಗರದಿ ಭೋರ್ಗರೆವ ಬೆಟ್ಟದೆರೆಗಳ ಸಿಟ್ಟು
ಶಾಂತವಾಗಲಿ ಕೊನೆಗೆ ಕಡಲಿನಲ್ಲೆ
ಮರುಭೂಮಿಯೊಳಗೆದ್ದ ಬಿರುಗಾಳಿಗಳ ರಭಸ
ಆರಿ ಹೋಗಲಿ ಮರಳುಗಾಡಿನಲ್ಲೆ
ಮೋಡದಲಿ ಘುಡುಘುಡಿಪ ಗುಡುಗುಗಳ ಅಬ್ಬರವು
ಅಡಗಲೈ ಗುಡುಗಾಡಿ ಮೋಡದಲ್ಲೆ
ಹೃದಯದಲಿ ಹೊಯ್ದಾಡಿ ಆಶೆಗಳು ರೋಷಗಳು
ಶಮನವಾಗಲಿ ಕೊನೆಗೆ ಹೃದಯದಲ್ಲೆ.

* * *

೧೯

ಹೂವೆ–
ನೀನೂ ಮಣ್ಣಿನಲ್ಲಿ ಹುಟ್ಟಿ ಬಂದೆ,
ನಾನೂ ಮಣ್ಣಿನಲ್ಲಿ ಹುಟ್ಟಿ ಬಂದೆ,
ನೀನು ಸಂಗಡ ಸುಗಂಧ ತಂದೆ,
ನಾನು ದೇಹದ ದುರ್ಗಂಧ ತಂದೆ,
ನೀನು ಮಧುರ ಮಧು ತಂದೆ,
ನಾನು ವಿಷಯದ ವಿಷ ತಂದೆ,
ನೀನು ಅಮೃತಬಿಂದು ತಂದೆ, ನಾನು ಸ್ವೇದಬಿಂದು ತಂದೆ,
ನೀನು ಕುಂದಿಲ್ಲದ ಅಂದ ಚೆಂದ ತಂದೆ,
ನಾನು ವಿಚಾರಿಸಿದರೆ ಹುರುಳಿಲ್ಲದ ಚೆಲುವು ಚೆಂದ ತಂದೆ!
ನಿನ್ನ ಜಾಣ್ಮೆಯನ್ನು ನೀಡಲಾರೆಯಾ ನನಗೂ?
ಕವಿಯೆ–

ಈ ಹಾರಿ ಹೋಗುವ ಸೌರಭಕ್ಕಾಗಿ ಏಕೆ ಹಾರೈಸುವಿ?
ನಿನ್ನ ಸದ್ಭಾವ ಸುಗಂಧವನ್ನು ನಂಬು–ಅದು ಕಲ್ಪಾಂತರ ಸ್ಥಾಯಿ!
ಈ ಕರಗಿ ಹೋಗುವ ಮಧುವಿಗಾಗಿ ಏಕೆ ಕೊರಗುವಿ?
ನಿನ್ನ ಪ್ರೇಮ–ಮಧುವನ್ನು ನಂಬು– ಅದು ಅಜರ, ಅಮರ!
ಈ ಬತ್ತುವ ಬಿಂದುವಿಗಾಗಿ ಏಕೆ ಮರುಗುವಿ?
ನಿನ್ನ ವಿಚಾರಬಿಂದುಗಳನ್ನು ನಂಬು– ಅವು ಅಕ್ಷಯ!
ಈ ಒಣಗಿ ಉದುರುವ ಅಂದಚೆಂದಕ್ಕೇಕೆ ಆಸೆ ಪಡುವೆ?
ನಿನ್ನ ಮನದ ಚೆಲುವನ್ನು ಅರಳಿಸಿಕೋ– ಅದು ಅವಿನಾಶಿ?

* * *

೨೦

ನೀರಿನಿಂದುಂಟಾದ ಕಿಲುಬನು
  ನೀರಿನೊಳೆ ತೊಳೆವಂದದಿ
ನೆಟ್ಟ ಮುಳ್ಳನು ಮತ್ತೆ ಮುಳ್ಳೊಳೆ
  ಹೊರದೆಗೆದು ಕಳೆವಂದದಿ
ಮನದ ಕಿಲುಬನು ಮನದೊಳೇ ತೊಳೆ
  ಮನದ ಮುಳ್ಳನು ಮನದೊಳೆ
ಕಿತ್ತು ಕಳೆ! ಮನದೊಳಗೆ ಬೆಳಿಸೈ
  ಮನದ ಚೆಲುವಿನ ಸಿರಿ ಬೆಳೆ!

* * *

೨೧

"ಪಂಜರದಲ್ಲಿರು ಹಕ್ಕಿ,
  ನಿನಗೆ ಇದ್ದಲ್ಲಿಯೇ ಹಾಲು–ಹಣ್ಣು ಒದಗಿಸುವೆ"
"ನನಗೆ ಹಾರುವ ಸ್ವಾತಂತ್ರ್ಯವಿಲ್ಲದಿರೆ
  ಏನಿದ್ದೊಡೇನು ಎನ್ನೊಡೆಯ?"
"ಹಾಗಾದರೆ ಸ್ವೇಚ್ಛೆಯಿಂದ ಸ್ವಚ್ಛಂದವಾಗಿ ಹಾರು,
  ಹೊಟ್ಟೆಗೆ ಆಹಾರ ಕೇಳಬೇಡ!"
"ಹೊಟ್ಟೆಗಿಕ್ಕದಿದ್ದರೆ ನಾನು ಹಾರುವ ಬದಲು

ನನ್ನ ಹರಣ ಹಾರುವುದು ಎನ್ನೊಡೆಯ!"
"ಎರಡೂ ಒಮ್ಮೆಗೇ ಎಲ್ಲಿ ಸಿಕ್ಕುವುವು ಹಕ್ಕಿ?"
"ನಿನ್ನ ಒಡೆತನವಿಲ್ಲದಲ್ಲಿ– ನನ್ನ ಗೂಡಿನಲ್ಲಿ!"

* * *

೨೨

ಯಾರು ಅಹಿತರು ನಿನಗೆ ಈ ಮೂವರೊಳಗೆ?
ನೀನಿತ್ತ ಕಸ ನುಂಗಿ ರಸವನೀಯುವ ಮಣ್ಣೊ?
ಬೆಂಕಿಯೊಳು ಸುಟ್ಟು ಅಲಂಕಾರವಾಗುವ ಹೊನ್ನೊ?
ಬಾಳ ಹಣತೆಯೊಳೆಣ್ಣೆಯಾಗಿ ಉರಿಯುವ ಹೆಣ್ಣೊ?
ಯಾರು ಅಹಿತರು ನಿನಗೆ ಈ ಮೂವರೊಳಗೆ?
ಪ್ರಾಣದೇವನ ಸಾಕಿ ಸಲಹುತಿಹ ತನುವೊ?
ಮೂಲೋಕದೊಡೆಯನನೆ ಮಡಗಿಕೊಳ್ಳುವ ಮನವೊ?
ತನ್ನನಿತ್ತನ್ಯರಿಗೆ ಹಿತವೀವ ಧನವೊ?
ಯಾರು ಅಹಿತರು ನಿನಗೆ ಈ ಮೂವರೊಳಗೆ?

* * *

೨೩

ನನ್ನವೆಂಬ ವಿಚಾರಗಳನ್ನು ನೀಡಿ
ನಿನ್ನವರ ಸೇವೆ ಮಾಡಲಾರೆನು ತಂದೆ,
ನನಗೆ ಆ ಯೋಗ್ಯತೆಯಿಲ್ಲ!
ನನ್ನ ವಿಕಾರಗಳನ್ನೇ ಅರ್ಪಿಸುವೆ!
ಅವುಗಳಿಂದ ಇನ್ನಾವ ಉಪಕಾರವಾಗದಿದ್ದರೂ
ಪರಿಹಾರಕ್ಕಾಗಿ ಪ್ರವಾದಿಗಳನ್ನು, ಪುರುಷೋತ್ತಮರನ್ನು
ಪ್ರೇರಿಸಬಲ್ಲುವು ಅವು!
ಇದೇನು ಸಣ್ಣ ಸೇವೆಯೆ?

* * *

೨೪

ಈ ಬಗೆಯ ಬೆಂಗಾಡನ್ನು ಬೆದಕಿ ನೋಡುವಿಯಾ?
ಕೆದರಿದರೆ ಕೈಗೆ ಬರುವುವು–
ಬೆನ್ನೆಲುವು, ತಲೆಬುರುಡೆ, ಬಿಡಿ ಎಲುವು!
'ಮೇಲಿನ ಮೋಹದ ಹೊದಿಕೆ ಹೋಗೆ
ಎನಿತು ಭೀಕರ ನಿಜತೆ'! ಎಂಬೆಯಾ?
'ಹೊನ್ನಿನ ಹರಿವಾಣದೊಳಿದ್ದರೂ
ಎನಿತುಗ್ರ ಸತ್ಯತೆ!' ಎಂಬೆಯಾ?
ಹೌದು–
ಕಣ್ಣ ಕೋರೈಸುವ ಕೋಲ್ಮಿಂಚಿನಾಚೆ
ಪ್ರಳಯಕರ ವಿದ್ಯುನ್ಮಾಲಿ!
ಈ ತರಲ ತೆರೆಗಳ ಲಲಿತ ಲಾಸ್ಯದ ಹಿಂದೆ
ತಿಮಿಂಗಿಲ ಮೀಂಗಳ ರುದ್ರ ನೃತ್ಯ!
ಈ ಸುರಭಿತ ಸುಮಮಂಜರಿಯ ಹಿಂದೆ
ಪೂತ್ಕರಿಸುವ ಕಾಳಸರ್ಪ!
ಅಂತೆಯೇ ನಿಜಕೆ ಸೊಬಗಿನ ಹೊದಿಕೆ!
ಅದಿಲ್ಲದಿರೆ ಭಯದಿ ನಡುಗೀತು ಬದುಕೆ!

* * *

೨೫

ವನಶ್ರೀ–

"ಮಾಗಿಯ ಸೋಂಕಿನಿಂದ ಮೊಗ ಬಾಡಿ, ಮೈ ಸುಕ್ಕಿ, ಒಳಹೊರಗು ಬರಿದಾಗಿ ಬಾಯ್ಬಿಡುತ್ತಲಿದ್ದ ನನಗೆ ನವಯೌವನವಾಗಿ ಬಂದೆ ಬಸಂತ! ನಿನ್ನ ಸ್ಪರ್ಶಮಾತ್ರದಿಂದ ಪಲ್ಲವ–ಪುಲಕ ಪಡೆದೆ. ಕಂಪಿನ ಕಂಪನ ಪಡೆದೆ, ಹೂಗೊಂಚಲ ರೋಮಾಂಚನ ಪಡೆದೆ! ನಿನಗೆನಿತು ಋಣಿ ನಾನು!"

ವಸಂತರಾಜ–

"ವನಶ್ರೀ, ನಾನು ನೀನಿರುವಲ್ಲಿಗೆ ಮಾತ್ರ ಬರಲಿಲ್ಲ– ಜಗದಗಲಕ್ಕೂ ಮುಗಿಲಗಲಕ್ಕೂ ಹಬ್ಬಿ ಹರಡಿದೆ. ಆದರೂ ಉಳಿದೆಲ್ಲ ಕಡೆಗೆ ಅಕಾಯನಾಗಿಯೇ, ಅರೂಪನಾಗಿಯೇ, ಅಜ್ಞಾತನಾಗಿಯೇ ಉಳಿದಿರುವೆ! ನಿನ್ನ ಸಂಸರ್ಗ ಪಡೆದಾಗ

ಮಾತ್ರ ನಾನೂ ಸಕಾಯನಾದೆ, ಸರೂಪಿಯಾದೆ, ಸುರೂಪಿಯಾದೆ! ಕಾರಣ ನಾನು ನಿನಗೆ ಎಣೆಯಿಲ್ಲದಷ್ಟು ಋಣಿ!"

* * *

೨೬

ಜಗವೆ ದೇಗುಲ ಜೀವ ದೇವನು
ಜೀವನವೆ ಆರಾಧನೆ
ಹಗಲು ದೀಪವು ರಾತ್ರಿ ಅಕ್ಷತೆ
ಗೈದುದೆಲ್ಲವು ಸಾಧನೆ
ಪ್ರೀತಿ ತುಳುಕುವ ಮನೆಯೆ ಸ್ವರ್ಗವು
ಪ್ರೀತಿಪರೆ ದೇವತೆಗಳು
ಘನತರವು ಗಾರ್ಹಸ್ಥ್ಯ ಯೋಗವು
ಪ್ರೀತಿಸಿರೆ ದಂಪತಿಗಳು.

* * *

೨೭

'ಅನೇಕ, ಅನೇಕ', ಎಂದ ಪ್ರಕೃತಿಪೂಜಕ–
ಕೂದಲ ನೋಡಿ;
'ಎರಡು, ಎರಡು', ಎಂದ ದ್ವೈತಿ–
ಬೈತಲ ನೋಡಿ;
'ಏಕ, ಏಕ,' ಎಂದ ಅದ್ವೈತಿ–
ತುರುಬು ನೋಡಿ,
'ಎರಡೋ, ಒಂದೋ– ನೆನೆವ ಮನ ಒಂದು,
ನಿಜ ಒಂದು' ಎಂದ ಭಕ್ತ–
ತಲೆಯ ನೋಡಿ!

* * *

೨೮

ಸಾವಿರಾರು ಪುಷ್ಪಜಾತಿ
ಗಂಧ ಮಾತ್ರ ಒಂದೆ
ಸಾವಿರಾರು ರಮ್ಯ ವಸ್ತು
ಅಂದ ಮಾತ್ರ ಒಂದೆ
ಸಾವಿರಾರು ಉರಿವ ವಸ್ತು
ಬೂದಿ ಮಾತ್ರ ಒಂದೆ
ಸಾವಿರಾರು ನಿನ್ನ ನಾಮ ಹಾದಿಮಾತ್ರ ಒಂದೆ
ಸಾವಿರಾರು ನಿನ್ನ ಅಲೆಯು
ಸಿಂಧು ಮಾತ್ರ ಒಂದೆ
ಒಂದು ಒಡೆಯೆ ಮೂರೊ ನೂರೊ
ಒಂದು ಮಾತ್ರ ಒಂದೆ.

* * *

೨೯

ಬೇರು ಮರಕ್ಕೆ–

"ನಿನ್ನ ಭಾರವನ್ನು ಹೊತ್ತು, ನಿನಗೆ ಸಾರಜನಕವನ್ನಿತ್ತು, ಯಾರಿಗೂ ಗೊತ್ತಾಗದಂತೆ ಇದ್ದೇವೆ ನಾವು– ಬೇರುಗಳು".

ಮರ ಬೇರಿಗೆ–

"ಚಳಿ, ಮಳೆ, ಗಾಳಿ, ಬಿಸಿಲುಗಳನ್ನೆಲ್ಲ, ಕೊಡಲಿ ಕುಡುಗೋಲುಗಳನ್ನೆಲ್ಲ ನಾನೇ ಸಹಿಸಿಕೊಂಡು ನಿಮಗೆ ನೋವಾಗದಂತೆ ನೋಡಿಕೊಳ್ಳುತ್ತಲಿದ್ದೇನೆ. ನನ್ನನ್ನು ಕಡಿದೊಯ್ದರೂ ನೀವಾದರೂ ಉಳಿದು. ವಂಶ ಉಳಸಲೆಂಬ ಆಸೆಯಿಂದ ಎಲ್ಲ ಕ್ಲೇಶಗಳನ್ನೂ ಸಹಿಸಿಕೊಂಡು ಬದುಕಿದ್ದೇನೆ."

*

ಬೇರು ನೀರುಂಡರೆ ಸಾಲದೆ?
ಎಲೆ ಎಲೆಗೆ ನೀರೂಡುವ ವಿಫಲಾಯಾಸವೇಕೆ,
ವ್ಯರ್ಥ ಪರಿಶ್ರಮವೇಕೆ?
ಬೇರಿಗೆ ಸಿಹಿನೀರನ್ನೆರೆ, ಮೇಲೆ ಸಿಹಿಯಾದ

ಫಲ ದೊರೆತೀತು! ಎರೆ, ಎರೆ, ನೀರನೆರೆ!
ಯಾರು ಎರೆವವರು? ಬೇರೆ, ನೀನೆ ಹುಡುಕಿಕೋ
ನಿನ್ನ ನೀರನ್ನು! ಇಳಿ, ಆಳಕ್ಕೆ ಇಳಿ;
ಮುಳುಗು, ಇಳೆಯಲ್ಲಿ ಮುಳುಗು! ಅಲ್ಲಿ,
ಹೀರು ಸಾರವನ್ನು; ಆ ಸಾರವನ್ನೇ ಮೇಲೇರಿಸು!
ಫಲಿಸಲದು ಅಲ್ಲಿ, ಹೊಸ ಯುಗ ವ ಕ್ಷಕ್ಕೆ ಇಂಥ ರಸವತ್ಫಲ
ಬಿಟ್ಟರೆ ಅದನ್ನು ಸವಿವ ಜೀವಪಕ್ಷಿಯ ಭಾಗ್ಯಕ್ಕೆ
ಎಣೆಯುಂಟೆ?

* * *

೩೦

ಬಿರುಗಾಳಿಯೆದ್ದಾಗ ಮರ ಮುರಿದು ಬಿದ್ದಾವು
ಒರಗಿಬಿಡು ಹುಲ್ಲಾಗಿ ಇಳೆಯ ತೊಡೆಯಲ್ಲಿ
ಸಿಡಿಲೆರಗಿ ಹೊಯ್ವಾಗ ಗಿರಿ-ಶಿಖರ ಸಿಡಿದಾವು
ಹರಳಾಗಿ ಹರಿ ತೊರೆಯ ತಂಪು ಮಡಿಲಲ್ಲಿ!

* * *

೩೧

ಹೂವು ಬೀಜಕ್ಕೆ-
'ಒಂದಾದ ನಿನ್ನಲ್ಲಿ ಹಲವಾಗಿ
ಮೂಡಿದೆ- ನೂರಾರು ಎಸಳಾಗಿ.'
ಹಣ್ಣು ಹೂವಿಗೆ-
'ಅನೇಕವಾದ ನಿನ್ನಲ್ಲಿ ಏಕವಾಗಿ
ಒಡಮೂಡಿದೆ- ಏಕ ರಸವಾಗಿ.'
ಬೀಜ ಹಣ್ಣಿಗೆ-
'ನಿನ್ನೊಡಲೊಳಿರುವ ನನ್ನೊಡಲಿನಲ್ಲಿ ಲೆಕ್ಕಕ್ಕೆ ಸಿಕ್ಕದಷ್ಟು
ಹೂವು ಹಣ್ಣುಗಳು ಅಡಗಿವೆ- ಒಡಮೂಡುವ ಸನ್ನಾಹದಲ್ಲಿ!'

*

ಅರಳಿತು ಹೂ- ಸುಳಿಗಾಳಿಯ ಕಚಕುಳಿಗೆ;
ಅರಳಿತು ಜೋಳ- ಕಾಯ್ದ ಹಂಚಿನ ಮೇಲೆ;
ಅರಳದು ಮನ-ಉರಿಗೆ ಗಾಳಿಯ ಸುಳಿಗೆ!
ಬರಲಿದೆಯೇ ಅದನು ಅರಳಿಪ ಗಳಿಗೆ?

* * *

೩೨

ಹಣ್ಣಾಗದಿಹ ಹೂವೆ ಸಣ್ಣಾಗದಿರು ಮನದಿ
ಮಣ್ಣಾಗಿ ಹೋಗದೇ ಹಣ್ಣು ಕೂಡ?
ಬಣ್ಣವಿಲ್ಲದ ಹೂವೆ ಖಿನ್ನವಾಗುವಿಯೇಕೆ
ಮಣ್ಣಾಗದಿರುವುದೆ ಬಣ್ಣ ಕೂಡ?
ಮುತ್ತಾಗದಿಹ ಹನಿಯೆ ವ್ಯರ್ಥ ಕೊರಗುವಿಯೇಕೆ
ಮುತ್ತೊಡೆದು ಬೆರೆಯದೆ ಮಣ್ಣ ಕೊನೆಗೆ?
ಹೆಸರಾಗದಿಹ ಜೀವಿ ಬಸವಳಿಸದಿರು ಮನದಿ
ವಿಸ್ಮೃತಿಯನಪ್ಪದೆ ಹೆಸರು ಕೊನೆಗೆ?

* * *

೩೩

ಕಸ್ತೂರಿ ಮೃಗ-
"ನಾನೆಂಥ ಬೆಪ್ಪು ಕಸ್ತೂರಿ ನನ್ನ ನಾಭಿಯಲ್ಲಿಯೇ ಇದ್ದರೂ
ಇನ್ನೆಲ್ಲಿಯೋ ಇರಬೇಕೆಂದು ಅಡವಿ ಅಡವಿ ಅಲೆದೆ!'

ಮನುಜ-
'ನಿನಗಿಂತ ಬೆಪ್ಪು ನಾನಿಲ್ಲಿದ್ದೇನೆ, ಈ ಮೃಣ್ಮಯದಲ್ಲಿಯೇ
ಚಿನ್ಮಯನಿದ್ದರೂ ಅವನಿಗಾಗಿ ಕ್ಷೇತ್ರ ತೀರ್ಥಗಳನ್ನೆಲ್ಲಾ
ಅಲೆದು ಬಂದೆ!'

* * *

೩೪

ಯಾವ ದೇಗುಲವನ್ನು ಹೊಕ್ಕರೂ ಹೋದಂಥ
ಬಾಗಿಲೋಳಗಿಂದಲೇ ಬರಬೇಕು ಹೊರಗೆ
ದೇಹವಿಟ್ಟವರೆಲ್ಲ ದೇಹ ತೊಟ್ಟವರಾಗಿ
ಮತ್ತೆ ಬರಲೇಬೇಕು ಜನನಿಬಿಡ ಧರೆಗೆ
ನೀರಿನಲೆ ಹುಟ್ಟಿಯೂ ನೀರಿನಲೆ ಮರಣವು
ನೀರಿನಲೆ ಹೊಸಹುಟ್ಟು ನೀರ ತೆರೆಗೆ
ಎಲ್ಲೆಲ್ಲಿ ಸುತ್ತಿದರು ಎಲ್ಲೆಲ್ಲಿ ಹರಿದರೂ
ಸಾಗರವೆ ಸಾಯುಜ್ಯಸ್ಥಾನ ತೊರೆಗೆ

* * *

೩೫

ಅರಮನೆ ಗುಡಿಸಲಿಗೆ–
'ಪಾಪ, ನಿನಗೆ ಮಣ್ಣ ಹಣತೆಯೂ ಇಲ್ಲವಾಯಿತೆ? ನನ್ನ
ಲೆಕ್ಕವಿಲ್ಲದಷ್ಟು ದೀಪಗಳಲ್ಲಿ ಒಂದನ್ನು ಕೊಡಲೆ?'
ಗುಡಿಸಲು ಅರಮನೆಗೆ–
'ಹೊರಗಿನ ಬೆಳಕಿನಲ್ಲಿ ಒಳಗಿನ ಹುಳುಕನ್ನು ಮುಚ್ಚಿ
ಕೊಂಡಿರುವ ಅರಮನೆಯೆ, ಹೊರಗೆ ಸಾವಿರ ದೀಪಗಳು
ಝಗಝಗಿಸುತ್ತಲಿದ್ದರೂ ನಿನ್ನೆದೆಯೊಳು ಕತ್ತಲೆಯಿದೆ.
ಹೊರಗೆ ಕತ್ತಲೆಯಿದ್ದರೂ ನನ್ನೆದೆಯೊಳು ಬೆಳಕಿದೆ,
ನನಗದೇ ಸಾಕು!'

*

'ಬಡ ದೀಪವೆ, ಸುತ್ತು ಮುತ್ತಿರುವ ಕತ್ತಲೆಯಲ್ಲಿ
ಏಕೆ ಮಿಣಮಿಣನೆ ಮಿಣುಕುತ್ತಲಿರುವೆ?'
'ಕತ್ತಲೆಯ ಕಾಳ ಕರಾಳ ಗರ್ಭದಲ್ಲಿಯೂ ಬೆಳಕು
ಬದುಕ ಬಲ್ಲುದೆಂಬುದನ್ನು ತೋರಿಸಲು!'

* * *

೩೬

ನನಗೆ ಅಮೃತ ಬೇಕಿಲ್ಲ–
ಮಡದಿ ಕಡೆದೀವ ಮಜ್ಜಿಗೆಯೆ ಸಾಕು!
ಕಲ್ಪವೃಕ್ಷದ ಹಣ್ಣು ಬೇಕಿಲ್ಲ–
ನಾನೆ ದುಡಿದುಣುವ ಕಜ್ಜಾಯ ಸಾಕು!
ಸ್ವರ್ಗ, ನಂದನ, ಅಲಕ ಬೇಕಿಲ್ಲ–
ಒಲ್ಮೆಯುಕ್ಕುವ ಮುರುಕು ಮನೆಯೆ ಸಾಕು!
ಸುಧೆಯೆ ಬೇಕೆನುವ ಸುರಸುಂದರಿಯು ಬೇಕಿಲ್ಲ–
ರೊಟ್ಟಿ ತಟ್ಟುವ ಸರಳ ಸತಿಯೆ ಸಾಕು!

* * *

೩೭

ಈ ಬಂಡಿಗೆ ಯಾವ ಎತ್ತುಗಳನ್ನು ಹೂಡಲಿ?
ಈ ರಥಕ್ಕೆ ಯಾವ ಕುದುರೆಗಳನ್ನು ಕಟ್ಟಲಿ?
ಈ ಕ್ಷಿಪಣಿಗೆ ಯಾವ ನಿಯಂತ್ರಕನನ್ನು ನಿಯಮಿಸಲಿ?
ಹೂಡುವವನೆ,
ಹೂಡು ನಿನ್ನನೆ ಮೊದಲು ಹದುಳದ ಬಂಡಿಗೆ!
ಕಟ್ಟುವವನೆ,
ಕಟ್ಟು ನಿನ್ನನೆ ಮೊದಲು ಲೇಸಿನ ರಥಕೆ!
ನಿಯಮಿಸುವವನೆ,
ನಿಯಮಿಸು ಮೊದಲು
ನಿನಗೊಬ್ಬ ನಿಯಂತ್ರಕನನ್ನು!

* * *

೩೮

ವಾನರನು ನರನಾದ ಉತ್ಕ್ರಾಂತಿಯಲ್ಲಿ
ನರನು ವಾನರನಾದ ನವಕ್ರಾಂತಿಯಲ್ಲಿ
ಸಕಲ ಸಂಪದ ಬಂತು–ಶಾಂತಿಯೆಲ್ಲಿ?
ಜೀವನವೆ ಸಾಗಿಹುದು ಬರಿ ಭ್ರಾಂತಿಯಲ್ಲಿ!

* * *

೩೯

ಬಾಲ್ಯ–
  'ಹಣ್ಣು, ಹಣ್ಣು' ಎಂದಿತು;
ತಾರುಣ್ಯ–
  'ಹೆಣ್ಣು, ಹೆಣ್ಣು' ಎಂದಿತು;
ವಾರ್ಧಕ್ಯ–
  'ಹೊನ್ನು, ಹೊನ್ನು' ಎಂದಿತು:
ಮುಪ್ಪು–
  'ಮಣ್ಣು, ಮಣ್ಣು' ಎಂದಿತು

*

ಇದುವರೆಗೆ ನೀನು ತುಳಿದೆ ಮಣ್ಣನ್ನು,
ಇನ್ನೇನು, ಮಣ್ಣು ತುಳಿಯಲಿದೆ ನಿನ್ನನ್ನು!

* * *

೪೦

ಹಗಲು ರಾತ್ರಿ ಧಾತ್ರಿಯಲ್ಲಿ
  ಕಾಂಬುದೇನು ಕಣ್ಣಿಗೆ?
ಹುಟ್ಟಿ ಹುಟ್ಟಿ ಮಣ್ಣೊಳೆ
  ಮತ್ತೆ ಮತ್ತೆ ಮಣ್ಣಿಗೆ!
ಒಂದು ಗಂಡು ಒಂದು ಹೆಣ್ಣು
  ಅದೂ ಮಣ್ಣು ಇದೂ ಮಣ್ಣು
ಹರೆಯ ಮಬ್ಬು ಮುಚ್ಚೆ ಕಣ್ಣು
  ತಬ್ಬಿಕೊಂಡು ಮೋಹವನ್ನು
ತರಲು ಮುಪ್ಪು ಹಣ್ಣಿಗೆ
  ಮತ್ತೆ ಮತ್ತೆ ಮಣ್ಣಿಗೆ!

* * *

೪೧

ಸುರಾಸುರರೆಂದರು–
  'ನಮಗೆ ರಸ ಬೇಕು, ಸುಧಾರಸ!'
ಶರಧಿಯೆಂದಿತು–
  'ಮೊದಲು ವಿಷ, ಆಮೇಲೆ ರಸ!'

*

ಸೋಲಿನ ಸರ್ಪದ ಹೆಡೆಯಲ್ಲಿ ಗೆಲವಿನ ರತ್ನವಿದೆ–
  ಅರಸಿ ನೋಡು!
ಶೋಕದ ತಂತಿಯಲ್ಲಿಯೇ ಅಶೋಕದ ಆಲಾಪನೆಯಿದೆ–
  ನುಡಿಸಿ ನೋಡು!
ಕೊನರದ ಕೊರಡಿನಲ್ಲಿಯೇ ಬಯಸಿದ ಬೊಂಬೆಯಿದೆ–
  ಕೆತ್ತಿ ನೋಡು!
ನಿರಾಶೆಯ ಬಸಿರಿನಲ್ಲಿಯೇ ಆಶೆಯ ಬೀಜವಿದೆ–
  ಬಿತ್ತಿ ನೋಡು!

* * *

೪೨

ಕೇದಗೆಯ ಚಂದನದ ಗಂಧವನು ಬಯಸುವೊಡೆ
  ಸರ್ಪಗಳ ವಿಷದಂತಕಂಜಬೇಡ
ಸಾಗರದ ಸಿಂಪುಗಳ ಮುತ್ತುಗಳ ಬಯಸುವೊಡೆ
  ಘೋರ ಜಲಪ್ರಾಣಿಗಳಿಗಂಜಬೇಡ
ಜೇಂಗೊಡದ ಸವಿಜೇನಿನಾಸ್ವಾದ ಬಯಸುವೊಡೆ
  ಜೇನುಹುಳುಗಳ ಕಡಿತಕಂಜಬೇಡ
ಜೀವನದ ಮಾಧುರ್ಯ ಸೌಂದರ್ಯ ಬಯಸುವೊಡೆ
  ಜೀವನದ ಕಹಿ, ವಿಕೃತಿಗಂಜಬೇಡ!

* * *

೪೩

ವಿಹಾರಿ–

'ಅಂಬುಧಿಯ ಅಲೆಗಳ ನರ್ತನವನ್ನು ನೋಡುವುದಿಲ್ಲವೆ?'

ಮುತ್ತುಗಾರ–

'ಅದರ ತಳದ ಮುತ್ತುಗಳನ್ನು ನೋಡುವುದಿಲ್ಲವೆ?'

*

ಆಕಾಶ ಸಮುದ್ರಕ್ಕೆ–

'ಎಷ್ಟು ನಿರಾಶೆಯೋ ನಿನಗೆ, ಅನವರತ ಅಲೆಗಳಲ್ಲಿ ಚಡಪಡಿಸುತ್ತ ಗೋಗರೆಯುತ್ತಲೇ ಇರುವಿ. ನನ್ನ ಐಶ್ವರ್ಯ ನೋಡಿ ಅಸೂಯೆಯೆ?'

ಸಮುದ್ರ ಆಕಾಶಕ್ಕೆ–

'ಎಷ್ಟು ದುರಾಶೆಯೋ ನಿನಗೆ–ಲೆಕ್ಕವಿಲ್ಲದ ಚಿಕ್ಕೆ ಕಣ್ಣುಗಳನ್ನು ಪಿಳುಕಿಸದೆ ನೋಡುತ್ತಲೇ ಇರುವಿ. ನನ್ನ ಮುತ್ತು ರತ್ನಗಳ ಮೇಲೆ ಕಣ್ಣಿಟ್ಟಿರುವಿಯಾ?'

* * *

೪೪

ಕಲ್ಪಕಲ್ಪಾಂತಗಳ ಸಂಕಲ್ಪ– ಅನಲ್ಪ–
ಹೆಣಗುತಿದೆ ಸಿದ್ದಿ ಶ್ರೀರೋಹಣಗಿರಿಯ ಶಿರ ಮುಟ್ಟಲು,
ಸ್ಥಲ ಕಾಲಗಳ ತೊಡರ ತಲೆಮೆಟ್ಟಲು,
ಪ್ರಕೃತಿಕೃತ ಬಂಧಗಳ ತರಿದೊಟ್ಟಲು!
ಇನ್ನೇನು– ಮೂರೇ ಬೆರಳು–
ಗುರಿಯಗಿರಿಯ ಶಿರದ ಕುರುಳು ಎಂದಾಗ
ಒಮ್ಮೆಗೆ ಜೋಲಿ! ಕಾಲು ಜಾರಿ
ಮೊದಲು ಹೊರಟ ಸ್ಥಳಕ್ಕೇ ಸವಾರಿ!
ಮತ್ತೆ ನಡೆಯಬೇಕು ಅದೇ ದಾರಿ!
ಇದರಲ್ಲಿಯೇ ಇರವಿನ ಐಸಿರಿ!

* * *

೪೫

ಹಗಲೆ–
'ಝಗಝಗಿಸುವ ಸೂರ್ಯಪ್ರಕಾಶದಲ್ಲಿ ಮೈಮರೆತು
ಸೂರ್ಯಪ್ರಕಾಶಕ್ಕೂ ಮೀರಿ ನಿಂತ ನಿನ್ನ ಲೆಕ್ಕವಿಲ್ಲದ
ಕತ್ತಲೆಯ ತಾಣಗಳನ್ನು ಮರೆಯದಿರು'.
ರಾತ್ರಿಯೆ–
'ಕತ್ತಲೆಯ ಅವರಣದಿಂದ ಕುರುಡಾಗಿ ಮಿತ ಪ್ರಕಾಶವನ್ನು
ಬೀರುವ ನಕ್ಷತ್ರಗಳನ್ನೂ ಮಿಂಚುಳ್ಳಿಗಳನ್ನೂ ಮನೆದೀಪ
ಗಳನ್ನೂ ಮರೆಯದಿರು!'

*

ಪೌರ್ಣಿಮೆ–
'ಎಲ್ಲರಿಗೂ ಅಸಹ್ಯವೆನಿಸಿರುವ ಅಮಾವಾಸ್ಯೆಯೆ, ಕತ್ತಲೆ
ಯಿಂದ ಬೆಳಕಿನೆಡೆಗೆ ನಡೆಯಲು ಎಂದು ಕಲಿಯುವೆ?'
ಅಮಾವಾಸ್ಯೆ–
'ನಾನು ಚಂದ್ರನಿಗೆ ಜನ್ಮವಿತ್ತರೆ ನೀನವನ ಕ್ಷಯಕ್ಕೆ ಕಾರಣ
ಳಾಗುವಿ. ಯಾರು ಕತ್ತಲೆಯಿಂದ ಬೆಳಕಿನೆಡೆಗೆ ನಡೆಯು
ವವರೆಂಬುದನ್ನು ನೀನೇ ನಿರ್ಣಯಿಸು.'

* * *

೪೬

ಅತ್ತ ಗಿರಿ ಇತ್ತ ದರಿ
  ನಡುವೆ ಕಾಲುದಾರಿಯು
ಅತ್ತ ಮಬ್ಬು ಇತ್ತ ಮಬ್ಬು
  ನಡುವೆ ದೀಪಧಾರಿಯು
ಅತ್ತ ಮುಳ್ಳು ಇತ್ತ ಮುಳ್ಳು
  ನಡುವೆ ಚೆಂಗುಲಾಬಿಯು
ಅತ್ತ ಹುಟ್ಟು ಇತ್ತ ಸಾವು
  ನಡುವೆ ಬಾಳ ನಾವೆಯು

* * *

೪೭

ತಡಸಲು ನುಡಿಯಿತು–
'ನನ್ನ ವೇಗ ಹೆಚ್ಚು.'
ಕಾರಂಜಿ ನುಡಿಯಿತು–
'ಕೆಳಗಿಳಿಯುವುದು ಸುಲಭ, ಮೇಲೇರುವುದು ಕಷ್ಟ.'

*

ನದಿ ದಂಡೆಗಳಿಗೆ–
'ನೀವು ನನ್ನ ವಿಸ್ತರಣಕ್ಕೆ ಅಡ್ಡಿಯಾಗಿರುವಿರಿ.'
ದಂಡೆಗಳು ನದಿಗೆ–
'ನೀನು ನಮ್ಮ ಆಲಿಂಗನಕ್ಕೆ ಅಡ್ಡಿಯಾಗಿರುವಿ.'

*

ಮಳೆ ಇಳೆಗೆ–
'ನಿನ್ನೆದೆಯ ತೊಯ್ಸಹೋಗಿ ನನ್ನ ಮೈ ಮಣ್ಣಾಯಿತು.'
ಇಳೆ ಮಳೆಗೆ–
'ನನ್ನೆದೆಯ ಮಧು ಹೀರಿ ನಿನ್ನಿರವು ಸವಿಯಾಯಿತು'

* * *

೪೮

ಇರುವುದೊಂದೆ, ಆದರದರ
ರೂಪವೆನಿತು ಹೇಳು!
ನೆನೆವುದೊಂದೆ, ಆದರದರ
ಚೇಷ್ಟೆಯೆನಿತು ಹೇಳು!
ಸ್ವರಗಳೇಳು, ಅವುಗಳಿಂದ
ರಾಗವೆನಿತು ಹೇಳು!
ವರ್ಣವೇಳು, ಅವುಗಳಿಂದ
ಚಿತ್ರವೆನಿತು ಹೇಳು!
ಸಾಧ್ಯವೊಂದು, ಅದನು ಪಡೆವ

ಬಟ್ಟೆಯೆನಿತು ಹೇಳು!
ಹೃದಯವೊಂದು, ಅದರೊಳುದಿಪ
ಭಾವವೆನಿತು ಹೇಳು!

* * *

೪೯

ಮಲ್ಲಿಗೆ ಕಣಗಿಲೆಗೆ–
'ನನಗೆ ನಿನ್ನ ಬಣ್ಣವಿಲ್ಲವಲ್ಲ!'
ಕಣಗಿಲೆ ಮಲ್ಲಿಗೆಗೆ–
'ನನಗೆ ನಿನ್ನ ಪರಿಮಳವಿಲ್ಲವಲ್ಲ!'
ಕೇದಗೆ ಗುಲಾಬಿ–
'ನಮಗೆ ಬಣ್ಣ ಪರಿಮಳಗಳೆರಡೂ ಇದ್ದೂ ಮುಳ್ಳ ಪಂಜರದಲ್ಲಿ ನರಳುತ್ತಲಿರುವೆವಲ್ಲ!'

*

ಕೋಗಿಲೆ–
'ಗಿಳಿಯೆ, ನಿನಗೆ 'ಆ' ಎನ್ನಲೂ ಬರುವುದಿಲ್ಲ– ನಿನಗೆ ಪಂಡಿತವಕ್ಕಿಯೆಂದು ಯಾರು ಹೆಸರಿಟ್ಟರು?'
ಗಿಳಿ–
'ಕೋಗಿಲೆ, ನಿನ್ನಂತೆ ಹಾಡಬಲ್ಲ ಹಕ್ಕಿಗಳು ಹಲವಿವೆ, ಆದರೆ ನನ್ನಂತೆ ಮಾತಾಡಬಲ್ಲ ಹಕ್ಕಿ ನಾನೊಂದೇ! ನೆನಪಿರಲಿ!'

* * *

೫೦

ಮರವೆ ಒಣಗಿದ ಮೇಲೆ ಹಣ್ಣು ಬಯಸುವರೆ?
ವರನೆ ತೀರಿದ ಮೇಲೆ ಹೆಣ್ಣು ಹುಡುಕುವರೆ?
ನೀರಿರದ ಕೆರೆಯಲ್ಲಿ ತಾವರೆಯನರಸುವರೆ?
ಪುಷ್ಪ ಪ್ರತಿಬಿಂಬದಲಿ ಪರಾಗ ಹುಡುಕುವರೆ?

ಕಬ್ಬಿನಂತಿಹುದೆಂದು ಬಿದಿರು ಮೆಲಿದರೆ ಸವಿಯೆ
ಬಿದಿರಕ್ಕಿಯಿಹುದೆಂದು ಕಬ್ಬು ಸೀಳಲು ತರವೆ?
ಕರಿಬೇವ ತಿನುವಂತೆ ಬೇವು ತಿಂದರೆ ರುಚಿಯೆ?

* * *

೫೧

ಅದ್ವೈತಿ–
"ಸೋಹಂ ಸೋಹಂ" ಎಂದ;
ದ್ವೈತಿ–
"ದಾಸೋಹಂ ದಾಸೋಹಂ" ಎಂದ;
ಭಕ್ತ–
'ಅಹಂ' ಎಂಬುದೇ ಅಳಿದ ಮೇಲೆ 'ಸೋಹಂ' ಎಂಬುದೇನು, 'ದಾಸೋಹಂ' ಎಂಬುದೇನು?" ಎಂದ.
ಶಾಸ್ತ್ರ–
'ನೇತಿ, ನೇತಿ' ಎಂದಿತು;
ಧರ್ಮ–
'ನೀತಿ, ನೀತಿ' ಎಂದಿತು;
ಹೃದಯ–
'ಪ್ರೀತಿ, ಪ್ರೀತಿ' ಎಂದಿತು.

೫೨

ವಕ್ರರೇಖೆ ನೂರು ವಿಧ
ಸರಳರೇಖೆಯೊಂದೆ
ಜಗದ ಭಾಷೆ ನೂರು ವಿಧ
ಹೃದಯಭಾಷೆಯೊಂದೆ
ಜೀವಿಗಳಿಗೆ ಬಣ್ಣ ಹಲವು
ಜೀವ ಮಾತ್ರ ಒಂದೆ
ನಾಡು ನುಡಿಯ ಗಡಿಗಳೆನಿತೂ
ಪೊಡವಿ ಮಾತ್ರ ಒಂದೆ!

* * *

೫೩

ಮಾತು–
'ನನ್ನ ಶಬ್ದ ಕವಿಗಡಚಿಕ್ಕಿಸುತ್ತದೆ!'
ಕೃತಿ–
'ನನ್ನ ಮೌನ ನಿನ್ನ ಸದ್ದಡಗಿಸುತ್ತದೆ!'

*

ಜ್ಞಾನವೆಂದಿತು–
'ನನಗೆ ತಿಳಿದಿದೆ!'
ಅಜ್ಞಾನವೆಂದಿತು–
'ನಾನೂ ಇದೇ ತಪ್ಪನ್ನೇ ಮಾಡಿ ಅಜ್ಞಾನವಾದೆ!'

*

ಹಿಂದಿನ ಕಾಲವೆಂದಿತು–
'ದೀಪದ ಕೆಳಗೆ ಕತ್ತಲೆ.'
ಇಂದಿನ ಕಾಲವೆಂದಿತು–
'ದೀಪದ ಮೇಲೆ ಕತ್ತಲೆ'.

* * *

೫೪

ಕೀಳು ರಾಜಕಾರಣ
ಹತ್ತು ಮುಖದ ರಾವಣ
ಸ್ವಾರ್ಥ ಶೂರ್ಪನಖಿಯ ಮಾತ
ಕೇಳಿ ಸುಗುಣವೆಂಬ ಸೀತೆ–
ಯನ್ನು ಕದ್ದು ದುರುಳತನದಿ
ಇಟ್ಟುಬಿಟ್ಟ ಶೋಕವನದಿ!
ಸಂಸ್ಕೃತಿಯ ಶ್ರೀರಾಮ
ಹಲುಬುತಿಹ ವನವನದಿ!
ಸಾಹಿತ್ಯದ ಆಂಜನೇಯ
ಹುಡುಕಿ ಬಾರೊ ಹಾರಿ ಜಲಧಿ

ಸುಗುಣವೆಂಬ ಸೀತೆಯ
ಪೂತೆ ಖ್ಯಾತೆ ತ್ರಾತೆಯ!

* * *

೫೫

ಸತ್ಯ ಕೇಳಿತು–
'ಮಿಥ್ಯೆ, ನೀನು ನನಗಿಂತಲೂ ಹೇಗೆ ಜನಪ್ರಿಯಳಾದೆ?'
ಮಿಥ್ಯೆ ಉತ್ತರವಿತ್ತಿತು–
'ಸತ್ಯದ ಸೋಗು ಹಾಕಿ!'

*

"ಹೇ ಕೀರ್ತಿ ಕಾಮಿನಿಯೆ, ಎಲ್ಲರೂ ನಿನ್ನನ್ನು
ಬಯಸುತ್ತಾರೆ; ನೀನಾರನ್ನು ಬಯಸುವಿ?"
"ನನ್ನನ್ನು ಬಯಸದವರನ್ನು ಬಯಸುತ್ತೇನೆ!"

*

"ನಿದ್ರಾಂಗನೆ, ಎಲ್ಲರಿಗೆ ನೀನು ನಿದ್ರೆ ಬರಿಸುವೆ;
ನಿನಗೆ ನಿದ್ರೆ ಬರಿಸುವವರಾರು?"
"ಹೊರಗೆ ಎಚ್ಚರಿದ್ದು ಒಳಗೆ ಮಲಗಿರುವವರಿಗೆ ನಾನು ನಿದ್ರೆ ಬರಿಸುತ್ತೇನೆ; ಹೊರಗೆ ಮಲಗಿ ಒಳಗೆ ಎಚ್ಚರಿರುವವರು ನನಗೆ ನಿದ್ರೆ ಬರಿಸುತ್ತಾರೆ!"

* * *

೫೬

ಒಳಿತಿಗೆ ವನವಾಸ ಬಂತು
ರಾಜಕೀಯ ದ್ಯೂತದಿ
ಕೆಡುಕಿಗೆ ಅಧಿಕಾರ ಬಂತು
ಅಧಿಕ ಜೀವಜಾತದಿ
ಪಂಚಶೀಲ ಪಾಂಚಾಲಿಯ
ವಸ್ತ್ರಹರಣ ನಡೆದಿದೆ
ದುರ್ಯೋಧನ ದುಶ್ಶಾಸನ–
ರಟ್ಟಹಾಸ ನಡೆದಿದೆ

ತಾಳು ಧರ್ಮ-ದ್ರೌಪದಿ,
ಮುಗಿಯಲಿದೆ ಪಣದ ಅವಧಿ
ಬರುವ ಪುಣ್ಯ ಪಾರ್ಥನಿಗೆ
ಋತದ ಪಾರ್ಥಸಾರಥಿ!

* * *

೫೭

ಕಣ್ಣು ಕನ್ನಡಿಗೆ-
"ಕನ್ನಡಿಯೆ, ನಿನ್ನಲ್ಲಿ ಎಲ್ಲರ ಮುಖ ಕಾಣಿಸುತ್ತದೆ; ನಿನ್ನ ಮುಖ ಕಾಣಿಸುವುದೆಲ್ಲಿ?"
ಕನ್ನಡಿ ಕಣ್ಣಿಗೆ-
"ಕಣ್ಣು ಎಲ್ಲವನ್ನೂ ಕಾಣುತ್ತದೆ; ತನ್ನನ್ನು ಯಾತರಲ್ಲಿ ಕಂಡುಕೊಳ್ಳುತ್ತದೆ?"

* * *

೫೮

ಅಂದಿಗಂದಿನ ಪ್ರಶ್ನೆ
ಇಂದಿಗಿಂದಿನ ಪ್ರಶ್ನೆ
ಎಂದೆಂದಿಗೂ ಇಹುದು ಯಕ್ಷಪ್ರಶ್ನೆ
ಅಂದಿನವರುತ್ತರವೆ
ಇಂದಿನವರಿಗೆ ಪ್ರಶ್ನೆ
ಇಂದಿನುತ್ತರ ಮುಂದೆ ಕೂಟಪ್ರಶ್ನೆ
ನನಗೆ ನೀನೇ ಪ್ರಶ್ನೆ
ನಿನಗೆ ನಾನೇ ಪ್ರಶ್ನೆ
ನಮ್ಮಿರವೆ ನಮಗಲ್ತೆ ಮೂಕಪ್ರಶ್ನೆ?

ಸವಿಯಾಗಿ ಬಾಳೋಣ
ಎದೆಯೊಲಿವನಾಳೋಣ
ಇಲ್ಲೆ ಗತಿ ಕಾಣೋಣ- ಯಾಕೆ ಪ್ರಶ್ನೆ?

* * *

೫೯

ಎಲೆಲೆ ಸಲಿಲದ ಮೀನೆ,

ಎಷ್ಟು ಲೀಲಾಜಾಲವಾಗಿ ಮುಳುಗುವಿಯಲ್ಲ ನೀರಿನಲಿ!

ಕಲಿಸಲಾರೆಯ ನನ್ನ ಮನದ ಮೀನಿಗೂ ನಿನ್ನಂತೆ ಮುಳುಗುವುದ ?

ತನ್ನಲೆ ತಾನು ಮುಳುಗುವುದು! ಎಷ್ಟು ಕಷ್ಟದ ಕಾರ್ಯ, ಎಷ್ಟು ಸುಲಭ ಸಾಧನೆ! ಸಾಗರದಿ ಮುಳುಗಿದೆ, ಸರೋವರದಿ ಮುಳುಗಿದೆ, ಹೊನ್ನರಾಶಿಯಲ್ಲಿ ಮುಳುಗಿದೆ, ಹೆಣ್ಣ ಕೇಶದಲ್ಲಿ ಮುಳುಗಿದೆ, ಮಣ್ಣಿನಾಶೆಯಲ್ಲಿ ಮುಳುಗಿದೆ–ನಿನ್ನಲ್ಲಿ ನೀನು ಮುಳುಗಿದೆಯ? ಮುಳುಗಲಾರೆಯ ದಿನಕ್ಕೊಮ್ಮೆಯಾದರೂ?

ಹೊರಗಿನಲಿ ಮುಳುಮುಳುಗಿ ಬಳಲುವ ಯುಗವೆ, ಒಳಗೆ ಮುಳುಗುವುದನ್ನು ಕಲಿಸುವ ಯುಗಕ್ಕೆ ದಾರಿ ಬಿಡು, ದಾರಿ ಬಿಡು! ಈ ಯುಗಾಂತವಾಗದೆ ಆ ಯುಗಾದಿಯೆಲ್ಲಿ?

* * *

೬೦

ಮಾನವರು ಕೆಟ್ಟಾರು,
ಮಾನವತೆ ಉಳಿದೀತು!
ಕವಿ ದೇಹವಿಟ್ಟಾನು
ಕವಿತೆಯುಳಿದೀತು!
ಕೃತಿಗಿಳಿಯುದಿದ್ದರೂ
ಕನಸೊಂದು ಉಳಿದೀತು!
ಅದನುಂಡೆ ಬರಲಿರುವ
ಮನಸು ಬೆಳೆದೀತು!

* * *

೬೧

ಕಬ್ಬಿನ ತೋಟ ಕಂಗಳಿಗೆ ಹಬ್ಬವಾಗಿ ಬೆಳೆದಿದ್ದಿತು. ಆಪಾತ ಮಧುರವಾಗಿಯಲ್ಲ, ಆಪಾದ ಮಸ್ತಕ ಮಧುರವಾಗಿ ಉಬ್ಬಿ ಹಬ್ಬಿ ಬೆಳೆದಿದ್ದುವು ಕಬ್ಬುಗಳು.

ಕಬ್ಬು ಶೇಖರಿಸಿದ್ದ ಸವಿಯ ಕಂಡು ಕರುಬಿದುವು ಬೇಲಿಯ ಮುಳ್ಳುಬಳ್ಳಿಗಳು. 'ನಮಗಿಂತ ಹೇಳಲಾಗದಷ್ಟು, ತಾಳಲಾಗದಷ್ಟು ಹೆಚ್ಚು ಸವಿಯನ್ನು ಹೀರುತ್ತಿರುವಿರಿ ನೀವು ನಿಂತ ನೆಲದಿಂದ!' ಎಂದು ಆಕ್ಷೇಪಿಸಿದುವು, ಆರೋಪಿಸಿದುವು, ಆಪಾದಿಸಿದುವು ಅವು.

ಸಮತೆಗೆಡದೆ ಸಮಾಧಾನದಿಂದಲೇ ಉತ್ತರವಿತ್ತುವು ಕಬ್ಬುಗಳು: 'ನಿಮಗೆ ಸವಿ ಹೀರಲು ಬೇಡವೆಂದವರಾರು? ಮುಳ್ಳು ಬಳ್ಳಿಗಳೆ, ನೀವು ನಮಗಿಂತ ಹೆಚ್ಚಾಗಿಯೇ ಸವಿ ಹೀರಿರಿ. ಸಾರ ಹೀರುವ ಸ್ವಾತಂತ್ರ್ಯ ಸರ್ವರಿಗೂ ಇದೆ.'

ಮುಳ್ಳು ಬಳ್ಳಿಗಳಿಗೆ ಮಾತೇ ಹೊರಡದಾದುವು. ಸವಿ ಹೀರುವುದನ್ನೇ ಕಲಿತಿರಲಿಲ್ಲ ಅವು. ಮುಳ್ಳಾಗಿ ಚುಚ್ಚುವುದನ್ನು ಮಾತ್ರ ಕಲಿತವರು ಸವಿ ಹೀರಿ, ಸವಿಯಾಗಿ, ಸವಿ ನೀಡುವರೆ ಸರ್ವರಿಗೆ?

* * *

೬೨

ಮನದ ತಲೆಯನು ಹಿಕ್ಕಿ ಸಿಕ್ಕು ಬಿಡಿಸಲು ಹೋದ
ಹಣಿಗೆಯೇ ಮುರಿದಿಹುದು ಹೆಣಗಿ ಹೆಣಗಿ
ಬಗೆಯ ತೆನೆಗಳ ಹೆಕ್ಕಿ ಒಕ್ಕಲೆಳಸಿದ ಬಾಳು
ಕಂಕಿಗಳನಾಯ್ದಿಹುದು ಗೊಣಗಿ ಗೊಣಗಿ
ತಿಳಿವಿನುಕ್ಕಿನ ತೆಕ್ಕೆಯಲ್ಲಿ ಬಿಕ್ಕುತಲಿಹುದು
ಒಲವು ಅಕ್ಕಸಬಡುತ ಚಡಪಡಿಸುತ
ಬಲದ ಕಪಿಮುಷ್ಟಿಯಲಿ ವಿಲವಿಲನೆ ಒದ್ದಾಡಿ
ತಿಳಿವು ತಳಮಳಿಸುತಿದೆ ತಡವಡಿಸುತ!

* * *

೬೩

ಬದನೆಕಾಯಿ ಹಾಗಲಕಾಯಿಗೆ–
"ಒಳಗೆ ವಿಷವಿದ್ದರೂ ಹೊರಗೆ ವೇಷ ಚೆನ್ನಾಗಿದೆ
ನಿನಗೆ, ಹಾಗಲಕಾಯಿ! ದುರ್ಜನರೆಲ್ಲ ಹೀಗೆಯೇ!"
ಹಾಗಲಕಾಯಿ ಬದನೆಕಾಯಿಗೆ–
"ನಾನು ಅಧರಕ್ಕೆ ಕಹಿ, ಉದರಕ್ಕೆ ಸಿಹಿ, ಬದನೆಕಾಯಿ,
ನೀನು ಮಾತ್ರ ಅಧರಕ್ಕೆ ಸಿಹಿ, ಉದರಕ್ಕೆ ಕಹಿ! ಯಾರು
ದುರ್ಜನರು ನೀನೇ ನಿರ್ಣಯಿಸು!"

* * *

೬೪

ಗೋಳ ಕೋಳಿ ಸುಖದ ಮೂಟೆ–
ಯಿಟ್ಟುದನ್ನು ಕಂಡೆನು
ಸುಖದ ಆಸೆ ಗೋಳ ಕೂಸ
ಹೆತ್ತುದನ್ನು ಕಂಡೆನು
ಒಳಿತಿನುದರದಿಂದ ಕೆಡುಕು
ಜಿಗಿದುದನ್ನು ಕಂಡೆನು
ಬೇಡದೆದೆಯ ಸೀಳಿ ಬೇಕು
ನೆಗೆದುದನ್ನು ಕಂಡೆನು!

* * *

೬೫

"ಈ ಬೆಳಕು ನನ್ನ ಕಣ್ಣು ಕುಕ್ಕಿಸುತ್ತಿದೆ ತಂದೆ, ತಾಳಲಾರವು
ಇದನ್ನು ನನ್ನ ಕಣ್ಣುಗಳು! ಇದು ಬೇಡ!"
"ತಥಾಸ್ತು!"
"ಈ ಕತ್ತಲೆ ನನ್ನ ಕಣ್ಣು ಕುರುಡುಗೊಳಿಸುತ್ತಿದೆ ತಂದೆ,
ಇದನ್ನು ತಾಳಲಾರವು ನನ್ನ ಕಣ್ಣುಗಳು! ಇದು ಬೇಡ!"
"ತಥಾಸ್ತು!"

"ಇದೇನು–ಅರ್ಧ ಕತ್ತಲೆ, ಅರ್ಧ ಬೆಳಕು! ಇದೆಂಥ ನೆಳಲು ಬೆಳಕಿನಾಟ ತಂದೆ? ಇದನ್ನೂ ತಾಳಲಾರೆ! ಇದೂ ಬೇಡ!"

"ನೀನು ಬೇಡುವುದಾದರೂ ಏನು ವತ್ಸ? ಕತ್ತಲೆ ಬೇಡ, ಬೆಳಕು ಬೇಡ, ಕತ್ತಲೆ ಬೆಳಕುಗಳ ಬೆರಕೆ ಬೇಡ! ಇನ್ನು ಬದಲಾವಣೆ ಸಾಧ್ಯವಿಲ್ಲ. ನಿನ್ನ ಆಯ್ಕೆಯ ಸ್ವಾತಂತ್ರ್ಯ ಮುಗಿಯಿತಿಲ್ಲಿಗೆ! ಇದರಲ್ಲಿಯೇ ಬದುಕಬೇಕು ನೀನು!"

* * *

೬೬

ಈ ಮನೆಯೊಳೇ ನಿನಗೆ ಅಡಗುದಾಣಗಳುಂಟು
ಆಡು ನಿನ್ನೊಡನೆ ನೀ ಕಣ್ಣುಮುಚ್ಚಾಲೆ
ಅಡಗು ನೀನೇ ಮತ್ತೆ ಹುಡುಕು ನೀನೇ ನಿನ್ನ
ಕೊಟ್ಟುಕೋ ನಿನಗೆ ನೀನೂರು ಮೆಚ್ಚೋಲೆ
ಯಾರು ನಂಬಲಿ ಬಿಡಲಿ ನೀ ಮಾತ್ರ ನಂಬಿಬಿಡು
'ನನ್ನ ಸರಿ ನಾನೆ ಈ ಆಟದಲಿ' ಎಂದು.
ಹುಚ್ಚಾಟವೆಂದಿದನು ಹಳಿವವರು ಇದ್ದಾರು
ಹುಚ್ಚು ಹುಚ್ಚನು ಹಳಿಯೆ ನಿನಗಾವ ಕುಂದು?

* * *

೬೭

'ಯಾವ ಹೊಲದ ಬೀಜಗಳಿವು.
ಎಲ್ಲಿ ಬೆಳೆದ ಬೀಜಗಳಿವು,
ಯಾರು ಬಿತ್ತಿದ ಬೀಜಗಳಿವು–
ಎಲ್ಲಿಂದ ಹೊತ್ತು ತಂದೆ ಗಾಳಿ?'
'ಎಲ್ಲಿಯವೇ ಇರಲಿ
ಎಲ್ಲಿಂದಲೇ ತರಲಿ–
ಒಳ್ಳೆಯ ಬೀಜಗಳಿವು ಒಡೆಯ
ಕೊಡು ನಿನ್ನ ಹೊಲದೊಳೊ ಎಡೆಯ!'
'ಸಿಕ್ಕ ಬೀಜಗಳೆಲ್ಲ ಬೇಕಿಲ್ಲ ಗಾಳಿ
ಬಿತ್ತುವೆನು ಬೀಜಗಳ ಬಲ್ಲವರ ಕೇಳಿ
ನೋಡುವೆನು ಬೀಜಗುಣ ಕೆಲಕಾಲ ತಾಳಿ
ಹೋಗಿ ಬಾ ಗಾಳಿ!'
'ಹೋಗುವೆನು ಹೊಲದೊಡೆಯ– ನಿನ್ನದೇ ಹಾನಿ!
ಬೀಜಗಳಿಗಿವೆ ಬೇರೆ ಹೊಲಗದ್ದೆ ಜಾಣ್ಗಿ
ನಿನಗೆ ಬೇಕಾದಾಗ ಸಿಕ್ಕವಿವು ಬೀಜ
ಸಿಕ್ಕಾಗ ತಾತ್ಸಾರ ಮಾನವಗೆ ಸಾಜ.'

* * *

೬೮

ಮರದ ಬಾಯಿ ಬೇರು
ಬುದ್ಧಿಯ ಬಾಯಿ ಹೃದಯ
ಆ ಹೃದಯಸಮುದ್ರದಲ್ಲಿ ಮುಳುಗದ ಬುದ್ಧಿಗೆ ಬೆಲೆಯೆಲ್ಲಿ?
ಲಿಂಗದ ಬಾಯಿ ಜಂಗಮ
ಜ್ಞಾನದ ಬಾಯಿ ಕರ್ಮ
ಆ ಕರ್ಮದ ಕುಲುಮೆಯಲ್ಲಿ ಕರಗದ ಜ್ಞಾನಕ್ಕೆ ಬೆಲೆಯೆಲ್ಲಿ?

* * *

೬೯

ಇಂದಿನ ಇಂದುವಿನ ಮೇಲೆ
ಹಿಂದಿನ ಕರಿನೆರಳು
ಮುಂದಿನ ಭಯ ನಂಜಾಗಿರೆ
ಇಂದು ಕಂದುಗೊರಳು!

* * *

೭೦

ಮರುಳಾಗಿದೆ ಕತ್ತಲೆಗೇ
ವಿಜ್ಞಾನದ ಗೂಗೆ
ಕುಣಿಯಲದುವೆ ಬಾಳ ಬನದಿ
ಆಗಿ ಸೊಗದ ಸೋಗೆ!

* * *

೭೧

ಈ ದಾರಿಯ ಹಿಂದೆ ಮುಂದೆ
ಅಡ್ಡಗೋಡೆ ಕಟ್ಟಿದೆ
ಹಿಂದೆ ಹೊರಳಿ ಹೋಗಕೂಡ-
ದೆಂಬುದೊಂದು ಕಟ್ಟಿದೆ.

* * *

ಮೊದಲು ಮಾನವನಾಗು

ಅಸಹಜವೇನಲ್ಲ !

ಶ್ರೀಗಿರಿಯ ವನದಲ್ಲಿ ಯೋಗಿ ಸಂಕುಲವಂತೆ,
ಆಶ್ಚರ್ಯವೇನಲ್ಲ–ಇದು ಸಹಜವೇ !
ಶ್ರೀಗಂಧವನದಲ್ಲಿ ಭೋಗಿ ಸಂಕುಲವಂತೆ,
ಆಶ್ಚರ್ಯವೇನಲ್ಲ, ಇದು ಸಹಜವೇ !
ಜೀವನದ ವನದಲ್ಲಿ ಭಾವಸುಮಕುಲವಂತೆ,
ಆಶ್ಚರ್ಯ ಕೆಲವರಿಗೆ, ಅಸಹಜವೇನಲ್ಲ !
ಬಗೆಯ ಸಿರಿ–ಬನದಲ್ಲಿ ಜಗವೆ ಅರಳಿಹುದಂತೆ,
ಆಶ್ಚರ್ಯ ಕೆಲವರಿಗೆ–ಅಸಹಜವೇನಲ್ಲ !

* * *

ಬಿಡುಗಡೆಯ ಬದುಕಿನಲಿ ನಚ್ಚಿರಲಿ !

ಸಾಕಿದವ ಪಂಜರದಿ ಹಾಕಿದುದನಂಜುತ್ತ
ಭುಂಜಿಸಿದ ದಿನಗಳನು ಮರೆತು ಬಿಡು ಹಕ್ಕಿ
ಬಂಧನದ ಕಹಿ ನೆನಪು ಬಿಡುಗಡೆಯ ಹಾಲಿನಲಿ
ನಂಜುಗೂಡಿಸದಿರಲಿ ನೆಮ್ಮದಿಯ ನೆಕ್ಕಿ !
ಮಂಜರನಿಗಂಜುತ್ತ ಪಂಜರದಿ ದಿನಗಳೆದೆ
ಹಂಗಿನಾಹಾರವನು ಹೇಗೊ ತಿಂದು
ಬಂಧ ಸ್ವಚ್ಛಂದವಾಗಿರುವಂದು ಆನಂದ–
ದಿಂದಿರದೆ ನವೆಯುವುದೆ ನಿರ್ನೆರಂ ನೊಂದು?
ಪಂಜರದಿ ನೀನಿಲ್ಲ ಏಕಾಂಗಿ ನೀನಲ್ಲ
ಹೆಮ್ಮರದಿ ನೆಲೆಸಿರುವೆ ಹಲವರೊಡನೆ

ಹಕ್ಕಿಗಳು ಹೆಚ್ಚಿದರು ಹಣ್ಣುಗಳ ಬರವಿಲ್ಲ
ಹಿಗ್ಗುವುದ ಕಲಿ ಸವಿದು ಸರ್ವರೊಡನೆ

ಮರವೊಂದು ತೆರವಾಗೆ ಕರೆದಾವು ಬೇರೆ ಮರ
ಹೊಸ ಹಣ್ಣ ಹೊರೆಯಿಂದ ಬಾಗಿ ತೂಗಿ

ಹಣ್ಣೆಲ್ಲ ನನಗೆಂಬ ಸಣ್ಣತನ ಬಿಟ್ಟುಬಿಡು
ಹೊಟ್ಟೆ ಬಂದೀತೊಂದೆ ಹಣ್ಣಿನಿಂ ಬೀಗಿ

ವನವು ಘನ, ತರು ಬಹಳ, ಫಲವಿಪುಲ–
ಕರುಬೇಕೆ, ಕೊರಗೇಕೆ, ಹೊಟ್ಟೆಯುರಿಯೇಕೆ?

ವನದಗಲ ಮನವಿರಲಿ ದೊಡ್ಡ ದೃಷ್ಟಿಯು ಬರಲಿ
ಬಿಡುಗಡೆಯ ಬಾಳಿನಲಿ ಅಲ್ಪತನವೇಕೆ?

ಉಲಿದಾಡೆ ಕಾನಿಹುದು ಅಲೆದಾಡೆ ಬಾನಿಹುದು
ಕೆಲೆದಾಡೆ ಹಕ್ಕಿಗಳ ಬಳಗವಿಹುದು

ತೊಡರೆ ತೊಡವಾಗುವುವು ಬಿಡುಗಡೆಯ ಕೈ ಕಾಲ್ಗೆ
ದುಗುಡವೇ ಸೊಗವಾಗಿ ಬಳಿಗೆ ಬಹುದು

ಬಿಡುಗಡೆಯ ಬದುಕಿನಲಿ ನಚ್ಚಿರಲಿ, ಕೆಚ್ಚಿರಲಿ–
ಬೇಡಿಕೊಳ್ಳದ ಬಾಳ ಬಾಳ್ವೆನೆಂಬ

ಪಂಜರದ ಹುಚ್ಚೇಕೆ ಮಚ್ಚರದ ಕಿಚ್ಚೇಕೆ
ಬನವು ನೀಡಿದೆ ನಿನಗೆ ಸಾಕಷ್ಟು ಇಂಬ !

* * *

ಒತ್ತುಗುಂಡಿಯ ಮೇಲೆ ಬೆರಳು !

ಕಲ್ಲಿನಾಯುಧ ಹಿಡಿದ ಕೈಬೆರಳು
ಬಿಲ್ಲು ಬಾಣವ ಹಿಡಿದ ಬೆರಳು
ಕೊಲ್ಲುವಾಯುಧದೊಡನೆ ಕಂಠಪತ್ರವ ಹಿಡಿದು
ಸಲ್ಲಲಿತ ಕೃತಿಗಳನು ಬರೆದ ಬೆರಳು !

ಕಲ್ಲಿನಲಿ ಕೈಲಾಸ ಕಂಡರಿಸಿ ಗುಹೆಗಳಲಿ
ಚಿತ್ರದಮರಾವತಿಯ ಕುಸುರಿಸಿದ ಬೆರಳು
ರಥ ಚಕ್ರದಚ್ಚಿನಲಿ ಕೀಲವಾಗಿಹ ಬೆರಳು
ಗೋವರ್ಧನೋದ್ಧರಣಗೈದ ಬೆರಳು

ಅಲ್ಲಿ ಮೋಹನ ಮುರಲಿ ಇಲ್ಲಿ ವೀಣಾತಂತ್ರಿ
ಎಲ್ಲೆಲ್ಲು ವಾದ್ಯಗಳ ನುಡಿಸಿದಾ ಬೆರಳು
ಅಂಗನೆಯ ಮುಂಗುರುಳ ನೇವರಿಸಿ ಕೂಸುಗಳ
ಮುಂದಲೆಯ ಸವರಿ ಸುಖಿಸಿರುವ ಬೆರಳು
ಕೆಳೆಯ ಕೈ ಕುಲುಕಿ ಸೊಗಕೆ ಕಚಕುಳಿಯಿಟ್ಟು
ಕಣ್ಗೆ ಕಾಡಿಗೆ ಹಣೆಗೆ ಕುಂಕುಮವನಿಟ್ಟ ಬೆರಳು !

ಕಿಡಿಯ ಕಾರುವ ಉರಿಯುನುಗುಳುವ ಗುಂಡುಗಳ
ಬೆಂಕಿ ಚೆಂಡೆಸೆಯುವಾ ಬಿಡುಕಗಳ ಮೇಲಿಳಿದು
ಗಾಂಧಿ ಕೆನ್ನಡಿ ಕಿಂಗ್ ರಾಬರ್ಟ್‌ರಂಥವರ
ಪಾವನ ಪ್ರಾಣಗಳ ಹೀರಿ ಸಾಕಾಗದೇ
ಒತ್ತುಗುಂಡಿಯ ಮೇಲೆ ನಿಂತಿಹುದೆ ಬಂದು?

ಆಸ್ಫೋಟವೊಂದರಲಿ ಲಕ್ಷ ಮಾನವರಸುವ
ಸುರ್ರನೆಯೆ ಹೀರುವ ದೈತ್ಯಾಸ್ತ್ರಗಳ ಬಿಡುಕ
ಸಿಡಿತವೊಂದರ ಕಿಡಿಗೆ ಹಲವು ನಗರಗಳನ್ನು
ಆಹುತಿಯ ಕೊಳುವಂಥ ಅಗ್ನ್ಯಸ್ತ್ರಗಳ ಬಿಡುಕ
ಬಿಟ್ಟು ತಣಿದಿಲ್ಲವೇ ಬಿಡುಗನಾ ಬೆರಳು?

ಒತ್ತಿದರೆ ನಿಮಿಷದಲಿ ಸೃಷ್ಟಿಯೆಲ್ಲವ ಘೋರ
ಕ್ರೂರ ಜ್ವಾಲೆಗಳಿಂದ ಸುಟ್ಟುರಿವ ಒತ್ತುಗುಂಡಿ
ಒತ್ತಿದವರನು ಒತ್ತದವರನು ಒಂದೆ
ತುತ್ತಿನಲಿ ತಿನಬಲ್ಲ ಒತ್ತುಗುಂಡಿ !

ಹತರಿಗೆಲ್ಲುಳಿಯುವರು ಚಿತೆಯನಣಿಗೊಳಿಸುವರು
ಎಂದು ಮಾರಣ ದಹನ ಕ್ರಿಯೆಯನೊಟ್ಟಿಗೆ ಗೈವ ಒತ್ತುಗುಂಡಿ
ಬೇಕಾಯಿತೇ ಬಿಡುಗನ ಬೆರಳಿಗೆ?
ಒಡ್ಡಿಹುದೆ ಕೊರಳ ಮನುಕುಲ ಬೆಂಕಿಯ ಉರುಲಿಗೆ?

ಬಿಡುಗ, ನೀನಾಗಬೇಡವೋ ಗಿಡಗ !
ಒತ್ತುಗುಂಡಿಯೊಳೆಂಥ ವಿಪತ್ತು ಕಾದಿದೆ ಜಗಕೆ
ನಸು ವಿಚಾರಿಸಿ ನೋಡು !
ಒತ್ತಿದೆಯೊ ಗುಂಡಿಯನು–ಮೃತ್ಯು ಮನುಕುಲಕೆಲ್ಲ !

ಮುನ್ನಿನೊಲು ಕೆನ್ನೀರ ಮುನ್ನೀರಿನಲಿ ರುಂಡ
ಮುಂಡಗಳು ತೆಪ್ಪದೊಲು ತೇಲಬೇಕಿಲ್ಲ
ಮುನ್ನಿನೊಲು ತಲೆಬುರುಡೆಯಲ್ಲಿ ರಕ್ತವ ಕುಡಿಯೆ

ಶಾಕಿನಿಯ ಡಾಕಿನಿಯ ಬಳಗ ಬರಬೇಕಿಲ್ಲ
ಕೊಳೆತ ಹೆಣಗಳ ನಾತ ನೂರು ಮೈಲಿನವರೆಗೆ ಹರಡಬೇಕಿಲ್ಲ !
ಮನೆಮನೆಗೆ ಕಂಬನಿಯ ಮಳೆ ಸುರಿಯಬೇಕಿಲ್ಲ
ಶವದ ರಾಶಿಯ ಮೇಲೆ ವೈಧವ್ಯ ಕುಣಿಯಬೇಕಿಲ್ಲ
ಒತ್ತಿದೆಯೊ ಗುಂಡಿ–ಮೃತ್ಯು ಮುದುಕರಿಗೆ, ಮಕ್ಕಳಿಗೆ,
ಮಂಗಲೆಯರಿಗೆ
ಕೈದು ಹಿಡಿದವರಿಗೆ, ಕುಂಚ ಹಿಡಿದವರಿಗೆ, ಲೆಕ್ಕಣಿಕೆ ಹಿಡಿದವರಿಗೆ
ಅವರಿವರೆನ್ನದೆ ಎಲ್ಲರಿಗೆ !

ಮೋನಾಲಿಸಾ, ಮೇಘದೂತ, ಮೊಝಾರ್ಟನ ಸಿಂಫೊನಿ
ಸಪ್ತ ಸೋಜಿಗಗಳು, ಗೊಮ್ಮಟ, ಗುಮ್ಮಟ, ತಾಜಮಹಲು,
ಕಾಶಿ, ಕಾಬಾ, ಮೆಥುಸಲಾ, ಬೋಧಿಗಯಾ–
ಮಾನವನ ಜೀವನಕೆ ಮೂಲ್ಯವಿತ್ತುದಕೆಲ್ಲ ಮೃತ್ಯು
ಒತ್ತಿದರೆ ಬೆರಳೊಂದು ಒತ್ತುಗುಂಡಿಯನು !

ಹಿಂದೆಂದು ಇನಿತೊಂದು ಜೀವಿಗಳ ಭವಿತವ್ಯ
ಒಂದೆ ಬೆರಳಿನ ಕ್ರಿಯೆಯನವಲಂಬಿಸಿತ್ತು?
ಹಿಂದೆಂದು ಇನಿತೊಂದು ಮಾರಕಾಸ್ತ್ರವ ಪಡೆದ
ದೇಶದೆದೆಯೇ ಅದುರಿ ಕಂಪಿಸಿತ್ತು?
ಇತ್ತ ಶಸ್ತ್ರಾಸ್ತ್ರಗಳು ಅತ್ತ ಶಸ್ತ್ರಾಸ್ತ್ರಗಳು
ಎತ್ತೆತ್ತಲೂ ಶಸ್ತ್ರರಾಶಿಯಿದ್ದವರಿಗೇ ಭೀತಿ ಒಳಗೆ
ಇಲ್ಲದವರಿಗೊ? ಜನನ ಮರಣ ಪ್ರತಿ ಘಳಿಗೆ !
ಎನಿತು ಅಧ್ರುವವಾಯ್ತು ಜೀವನ !
ಭದ್ರತೆಯ ಹೆಸರಿನಲೆ ಅಧ್ರುವದ ಬೀಜಾರೋಪಣ–
ಒತ್ತುಗುಂಡಿಯ ಜನನ !

ಎಂಥ ಬೆರಳಿರುವುದೋ ಒತ್ತುಗುಂಡಿಯ ಮೇಲೆ !
ಸಿಡುಕಿನದೊ ದುಡುಕಿನದೊ ಸೇಡಿನದೊ ಕೆಡುಕಿನದೊ
ಪ್ರೀತಿಯದೊ ನೀತಿಯದೊ ಭೀತಿಯದೊ ಕೋತಿಯದೊ
ಮಾನವನದೋ ಮಾನವನ ಹೆಸರಿನಲಿ
ಅಜ್ಞಾತ ಅಜ್ಞೇಯ ವಿಧಿಯಗೋಚರ ಬೆರಳೊ?
ಸಂಯಮಿಯ ಬೆರಳೊ ಸೈತಾನನ ಬೆರಳೊ?
ಯಾರು ಊಹಿಸಬಹುದು ಎಂಥ ಕಾಲದಿ ಎಂಥ
ಭಾವಪ್ರಭಾವಕ್ಕೆ ಸಿಕ್ಕೀತು ಈ ಬೆರಳು;
ಏನು ಮಾಡೀತು ಎಂಬುದನು?

ಯಾವುದೋ ಕೀಲೋತ್ಪಾಟೀವ ವಾನರಃ
ಏನಕೇನ ಪ್ರಕಾರೇಣ ಅಲ್ಲಿಗೆ ಬಂದು
ಅರಿತೋ ಅರಿಯದೆಯೋ ಒತ್ತಿಬಿಟ್ಟರೆ ಬಟನ್
ಜಸ್ಟ್ ಫಾರ ದಿ ಫನ್?

ಎಲ್ಲ ಯತ್ನವ ಮಾಡಿ ಒತ್ತುಗುಂಡಿಯ ಬಳಿಗೆ
ಕೋತಿ ಬಾರದ ಹಾಗೆ ನೋಡಿಕೊಳ್ಳೋಣ !
ಕೈಮೀರಿ ಕೋತಿ ಬಂದರು ಸಹಿತ ಅದಕೆ
ಹೆಂಡ ಸಿಕ್ಕದ ಹಾಗೆ ಏರ್ಪಾಟು ಮಾಡಿಕೊಳ್ಳೋಣ !

* * *

ಅವಿಭಕ್ತಂ ವಿಭಕ್ತೇಷು !

ಅವಿಭಕ್ತಂ ವಿಭಕ್ತೇಷು
ಇದರಲ್ಲಿಯೆ ನಮಗೆ ಲೇಸು
ಎಲ್ಲೆ ಇರು ಏನೆ ಮಾಡು
ಇದೇ ಮಂತ್ರವನು ಜಪಿಸು
ಇದೇ ಸೂತ್ರವನ್ನು ಪಠಿಸು–
  ಅವಿಭಕ್ತಂ ವಿಭಕ್ತೇಷು–
  ಅವಿಭಕ್ತಂ ವಿಭಕ್ತೇಷು!

ಕಾಶ್ಮೀರದ ಕಣಿವೆಯಲ್ಲಿ
ಕೇರಳದ ಕುಟೀರದಲ್ಲಿ
ಭಾರತದಲ್ಲೆಲ್ಲ ಕಡೆಗೆ
ಇದೇ ಮಂತ್ರ ಘೋಷವಿರಲಿ–
ಇದೇ ನಾದ ಕೇಳುತಿರಲಿ–
  ಅವಿಭಕ್ತಂ ವಿಭಕ್ತೇಷು–
  ಅವಿಭಕ್ತಂ ವಿಭಕ್ತೇಷು !

ಭೇದಗಳನು ಎಣಿಸಬೇಡ
ವಾದಗಳನು ಗುಣಿಸಬೇಡ
ಆಸೇತು ಹಿಮಾಚಲ
ಒಂದೇ ಹಾಡು ತಿಳಿದು ನೋಡೆ

ಹಾಡು ಗೆಳೆಯ ಇದೇ ಹಾಡ
ಅವಿಭಕ್ತಂ ವಿಭಕ್ತೇಷು
ಅವಿಭಕ್ತಂ ವಿಭಕ್ತೇಷು!

ನನ್ನ ನುಡಿ ನಿನ್ನ ನುಡಿ
ನನ್ನ ಗಡಿ ನಿನ್ನ ಗಡಿ
ಒಂದೆ ಜನ್ಮಭೂಮಿಯಿರಲಿ
ಏನಿದೆಲ್ಲ ಗಡಿಬಿಡಿ?
ಇನ್ನಾದರು ನಂಬಿ ನುಡಿ
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು !

ಬ್ರಹ್ಮ ವಿಷ್ಣು ಶಂಕರ
ಅಲ್ಲಾ ಹೋ ಅಕಬರ
ಯಾರನ್ನೇ ಸ್ಮರಿಸು ಯಜಿಸು
ಯಾಕೆ ಜಗಳ ಸೋದರ?
ಹೊಮ್ಮಲೊಂದೆ ಸುಸ್ವರ–
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು !

ಸಪ್ತಶೈಲ ಪಂಚನದಿ
ಸುತ್ತು ಮುತ್ತು ಪುಣ್ಯಶರಧಿ
ಮಸ್ತಕದಲಿ ಹಿಮಕಿರೀಟ!
ಎಂಥ ನಾಡು ಎಂಥ ನಿಧಿ !
ಇಲ್ಲಿ ಬದುಕಲೊಂದೆ ವಿಧಿ
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು !

ಯಾರೊಡನೆಯು ವೈರವಿಲ್ಲ
ಯಾರಿಗು ಧಿಕ್ಕಾರವಿಲ್ಲ
ಬಂದವರಿಗೆ ತಂದೆ ತಾಯಿ
ಈ ದೇಶಕೆ ಸಾಟಿಯಿಲ್ಲ
ನುಡಿಯೊ ಇಲ್ಲಿ ಒಂದೆ ಸೊಲ್ಲ

ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು !

ಏನೆ ಉಡು ಏನೆ ತೊಡು
ಏನೆ ಉಣ್ಣು ಏನೆ ಬಿಡು
ನಿಂತ ನೆಲವು ಒಂದೆ ಇರಲು
ಭೇದ ಭಾವಗಳನು ಸುಡು !
ನಮ್ಮ ಋಷಿಗಳೊಡನೆ ಹಾಡು–
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

* * *

ಯುದ್ಧ್ಯಸ್ವ !

ಯುದ್ಧ್ಯಸ್ವ ಯುದ್ಧ್ಯಸ್ವ
ಬಾ ಅರ್ಪಿಸು ಸರ್ವಸ್ವ !

ಯುದ್ಧ್ಯಸ್ವ ಯುದ್ಧ್ಯಸ್ವ
ಬೆರಗಾಗಲಿ ವಿಶ್ವ !
ಹೆಬ್ಬಾವಿನ ಹಲ್ಲನು ಮುರಿ
ಹಾಲೆರೆದುದು ಸಾಕು !
ಹಗೆ ಹಾವು, ನೀ ಗರುಡನು
ಹರಿ ಹೆಡೆಯನು, ನೂಕು !

ಹಿಮದಲ್ಲಿಯೇ ಹುಗಿ ಹಗೆಯನು
ಹಳದಿಯ ರಕ್ಕಸನ
ಈ ಘಾತುಕ ಈ ವಂಚಕ
ವೃಶ್ಚಿಕ–ಭಕ್ಷಕನ !
ಯುದ್ಧ್ಯಸ್ವ ಯುದ್ಧ್ಯಸ್ವ
ಬಾ ಅರ್ಪಿಸು ಸರ್ವಸ್ವ !

ಯುದ್ಧ್ಯಸ್ವ ಯುದ್ಧ್ಯಸ್ವ
ಬೆರಗಾಗಲಿ ವಿಶ್ವ !
ಜನಮನವಿದೊ ಜ್ವಾಲಾಮುಖಿ
ದಾವಾನಲವಿಂದು

ಈ ಅಗ್ನಿ–ಸ್ಫೋಟದಲಿ
ಹಗೆ ಹೋಗಲಿ ಬೆಂದು !
ಈ ಹೂಣರ ಹೆಣ ತೇಲಲಿ
ನೆತ್ತರ ನದಿಗಳಲಿ !
ಜಯಭೇರಿಯು ಭೋರ್ಗರೆಯಲಿ
ನಮ್ಮಯ ಗಡಿಗಳಲಿ !

ಪಣ ತೊಟ್ಟೆವು ನಾವೆಲ್ಲರು
ರಣ ಗೆಲ್ಲುವೆವೆಂದು
ರಣ ಗೆದ್ದೇ ವಿಶ್ರಮಿಪೆವು
ಉನ್ಮತ್ತರ ಕೊಂದು !

ಈ ಉಕ್ಕಿನ ನಿರ್ಧಾರವು
ಒಕ್ಕೊರಲಲಿ ಉಕ್ಕಿ
ಸೊಕ್ಕಡಗಲಿ ಚೀಣೀಯರ
ಹೋಗಲಿ ಹುಡಿಮುಕ್ಕಿ !

ಯುದ್ಧ ಶ್ವ ಯುದ್ಧ ಶ್ವ
ಬಾ ಅರ್ಪಿಸು ಸರ್ವಸ್ವ !
ಯುದ್ಧ ಶ್ವ ಯುದ್ಧ ಶ್ವ
ಬೆರಗಾಗಲಿ ವಿಶ್ವ !

ಧಗಧಗಿಸುವ ಕಿಚ್ಚಾಗಲಿ
ಕನ್ನಡಿಗರ ಕೆಚ್ಚು !
ಕನ್ನಡತಿಯರೆದೆ ಮಿಡಿಯಲಿ
ಓಬವ್ವನ ರೊಚ್ಚು !

ತೊಡು ಖಾಕಿಯ ಹಿಡಿ ಕೋವಿಯ
ನಡೆ ಯುದ್ಧಕೆ ಯುವಕ !
ನರ ನರದಲಿ ಹರಿದಾಡಲಿ
ಹಗೆ ಗೆಲ್ಲುವ ತವಕ !

ಬಲಿದಾನವ ಬೇಡುತ್ತಿದೆ
ಭರತಾವನಿಯಿಂದು
ಕೊಡು ಬಲಿಯನು ಪಡೆ ಗೆಲುವನು
ಶತ್ರುಗಳನು ಕೊಂದು !

ಸ್ವಾತಂತ್ರ್ಯದ ಸಂರಕ್ಷಣೆ
ಸರ್ವರ ಹೊಣೆಯಿಂದು
ಈ ರಾಷ್ಟ್ರದ ರಕ್ಷಣೆಗೆ
ಕೊಡು ರಕ್ತದ ಬಿಂದು !

ಯುದ್ಧಸ್ವ ಯುದ್ಧಸ್ವ
ಬಾ ಅರ್ಪಿಸು ಸರ್ವಸ್ವ !
ಯುದ್ಧಸ್ವ ಯುದ್ಧಸ್ವ
ಬೆರಗಾಗಲಿ ವಿಶ್ವ !

ದುಡಿ ಗಳಿಸು ಪಡೆ ಉಳಿಸು
ಶಸ್ತ್ರಾಸ್ತ್ರಕೆ ಸಲಿಸು
ತನುಮನಧನ ಭರತಾರ್ಪಣ
ಭಾರತವನು ಬಲಿಸು

ಇದೊ ರಕ್ತದ ಕಾಣಿಕೆಯಿದೊ
ಶ್ರಮಸ್ವೇದದ ಮುಡಿಪು !
ನಾವೆಲ್ಲರು ಸೈನಿಕರೇ
ಇರಲಾವುದೆ ಉಡುಪು !

ಊರೂರೂ ಕಿತ್ತೂರು
ಮನೆಮನೆಯೂ ದುರ್ಗ !
ಪ್ರತಿ ಪೌರನ ಎದೆಯಲ್ಲಿದೆ
ಸ್ವಾತಂತ್ರ್ಯದ ಸ್ವರ್ಗ !

ಗಣಿ ಗಿರಣಿಯು ರಣರಣಿಸಲಿ
ರಣ ಸಿದ್ಧತೆಯಿಂದ !
ಉತ್ಪತ್ತಿಯು ಉಕ್ಕೇರಲಿ
ಹೊಲಗದ್ದೆಗಳಿಂದ !

ಯುದ್ಧಸ್ವ ಯುದ್ಧಸ್ವ
ಬಾ ಅರ್ಪಿಸು ಸರ್ವಸ್ವ
ಯುದ್ಧಸ್ವ ಯುದ್ಧಸ್ವ
ಬೆರಗಾಗಲಿ ವಿಶ್ವ !

ಇದೆ ಗರ್ಜನೆ ಇದೆ ಘೋಷಣೆ
ಇದೆ ನಮ್ಮಯ ಸ್ವರವು !

ಇದೆ ಧ್ಯೇಯವು ಇದೆ ಧರ್ಮವು
ಇದು ರಾಷ್ಟ್ರದ ಕರೆಯು
ಯುದ್ಧ್ಯಸ್ವ ಯುದ್ಧ್ಯಸ್ವ
ಬಾ ಅರ್ಪಿಸು ಸರ್ವಸ್ವ !
ಯುದ್ಧ್ಯಸ್ವ ಯುದ್ಧ್ಯಸ್ವ
ಬೆರಗಾಗಲಿ ವಿಶ್ವ !*

* * *

ಕೈಗೆ ಬರಲಿ ಕೋವಿ !

ಕರೆಯುತಿಹಳು ರಣಭೈರವಿ,
ಕೈಗೆ ಬರಲಿ ಕೋವಿ !
ಅದೊ ಹಳದಿಯ ರಕ್ತಬೀಜ
ದನುಜನಾದ ನಿನ್ನ ಅನುಜ
ಸಿಡಿದೇಳಲಿ ಕ್ಷಾತ್ರತೇಜ
ಸುಟ್ಟುರುಳಲಿ ಅರಿಸಮಾಜ
ಬರಲಿ ಬಲವು ತೀವಿ–
ಕೈಗೆ ಬರಲಿ ಕೋವಿ !
ಅಧಿಕ ಸಂಖ್ಯೆ ಅಧಿಕಾಯುಧ
ಇರದಿರೇನು ವೀರ ಯೋಧ !
ಕಿಡಿಗೆದರಲಿ ನಿನ್ನ ಕ್ರೋಧ
ಹುಡಿ ಮುಕ್ಕಲಿ ವೈರಿ ಮದ
ನುಗ್ಗು ಶೌರ್ಯಜೀವಿ–
ಕೈಗೆ ಬರಲಿ ಕೋವಿ !
ಕೇಳು ಕೇಳು ಹಗೆಯ ಕೂಗು
ಪ್ರಳಯ ರುದ್ರನಾಗಿ ಸಾಗು
ಸಿಡಿಲ ಗಿಡಗವಾಗಿ ಎರಗು

---

* ೧೯೬೨ರಲ್ಲಿ ಚೀಣದ ದಾಳಿ ನಡೆದಾಗ ಬರೆದುದು.

ರಿಪು ಸೈನ್ಯವ ತಿಂದು ತೇಗು
ವಿಘ್ನಗಳನ್ನು ಸೋವಿ–
ಕೈಗೆ ಬರಲಿ ಕೋವಿ !
ಮಿತ್ರರಾರು ಶತ್ರುವಾರು
ತಿಳಿಯದಿಹುದೆ? ಇರಲಿ ಹೋರು !
ಯಾರ ಮುಂದೆ ಇಡುವೆ ದೂರು?
ಇರಿ, ಕೊಲ್ಲು, ಕೊಚ್ಚು, ತೂರು !
ರಣಯಜ್ಞಕೆ ರಕ್ತ ಹವಿ
ಕೈಗೆ ಬರಲಿ ಕೋವಿ !
ಉಸಿರಾಗಲಿ ಅಗ್ನಿಧಾರೆ
ದೃಷ್ಟಿ ವಿಸ್ಫುಲಿಂಗಧಾರೆ
ನುಡಿಯು ಗುಡುಗು ಸಿಡಿಲ ಸೂರೆ
ನಡೆ ವಿಲಯದ ಬಲ್ಪು ಬೀರೆ
ಏನು ನಿನ್ನ ಠೀವಿ–
ಕೈಗೆ ಬರಲಿ ಕೋವಿ !
ಕರೆಯುತಿಹಳು ರಣಭೈರವಿ
ಕೈಗೆ ಬರಲಿ ಕೋವಿ !

*　　*　　*　　*

ಕರೆಯುತಿಹಳು ಶಾಂತಿದೇವಿ–
ಆಗು ಸ್ನೇಹಜೀವಿ !
ಚಾಚು ಮುಂದೆ ಕೆಳೆಯ ಕರವ
ಮರೆತು ಘೋರ ಸಂಗರವ
ಹೊಮ್ಮಲಿನ್ನು ಮೈತ್ರಿರವ
ಶಾಸ್ತ್ರೀಜಿಗೆ ಗೌರವ
ದಿಗ್ ದಿಗಂತ ತೀವಿ
ನೀನು ಶಾಂತಿ ಜೀವಿ !

*　　*　　*　　*

ಕರೆಯುತಿಹಳು ಅಭಾವದೇವಿ
ಆಗು ಕರ್ಮಜೀವಿ !
ಹಲ ಹಿಡಿ ಬಲರಾಮನಾಗು
ಸಸ್ಯಶರಧಿ ಸೋಮನಾಗು
ನಿರ್ಮಾಣದಿ ನಿಸ್ಸೀಮನಾಗು
ಎಲ್ಲ ಕೊರತೆಗಳನು ನೀಗು
ಉದಿಸೆ ನಾಡ ಭಾಗ್ಯರವಿ–
ಆಗು ಕರ್ಮಜೀವಿ !

*　　*　　*　　*

ಕರೆಯುತಿಹಳು ರಾಷ್ಟ್ರಜೀವಿ–
ಆಗು ರಾಷ್ಟ್ರಜೀವಿ !
ಬವರವಿರಲಿ ಬರವೆ ಇರಲಿ
ಉರಿಯೆ ಇರಲಿ ಸಿರಿಯೆ ಇರಲಿ
ಭೇಧ ಭಾವ ಬಾರದಿರಲಿ
ದೇಶದಿ ವಿಶ್ವಾಸವಿರಲಿ
ನಾಡ ನಂಬದವನೆ ಭವಿ–
ಆಗು ರಾಷ್ಟ್ರ ಜೀವಿ !*

*　　*　　*

ಮರಗೂಳುಣಿ

ಮರಗೂಳಿನಿಂದಲೇ ಬದುಕಿರುವ ಕೀಟಗಳೆ
ಮರವನ್ನು ಉಳಿಸಿ ನೀವೂ ಉಳಿಯಿರಿ
ಮರವಳಿದರೆ ನೀವೂ ಅಳಿವಿರಿ !
ಮರವೇ ಮುರಿದು ಬಿದ್ದರೆ ತಿನ್ನುವಿರೇನನ್ನು?
ಅನ್ನದಾತನ ಕೊಂದು ತೋರಿಸುವಿರಾ ಬೆನ್ನು?

---

* ೧೯೬೫ರಲ್ಲಿ ಪಾಕಿಸ್ತಾನದ ದಾಳಿ ನಡೆದಾಗ ಬರೆದುದು.

ಒಳಗೊಳಗೇ ಟೊಳ್ಳುಗೊಳಿಸಿದಿರಿ ಟೊಂಗೆಗಳನ್ನು
ಒಳಗೊಳಗೇ ಪೊಳ್ಳುಗೊಳಿಸಿದಿರಿ ಬೊಡ್ಡೆಯನ್ನು
ಬೇರುಗಳ ಬೆನ್ನು ಹತ್ತಿರುವಿರೇನು ಈಗ ?
ಬೇರುಗಳನುಳಿಸಿಹಿರ? ಎಂಥ ತ್ಯಾಗ !

ಬಿರುಗಾಳಿ ಬೀಸೀತು ಮರಗೂಳು ತಿನುವಾಗ
ಕೆಳಗೆ ಸಿಕ್ಕೀರಿ, ಮಣ್ಣು ಮುಕ್ಕೀರಿ ಮರಬೀಳುವಾಗ !
ಎಂಥ ಮರಕೆಂಥ ಗತಿ ಬಂದಿದೆ !
ಯಾವ ವಿಧಿಯಿದೆಕೆ ಈ ಗತಿ ತಂದಿದೆ !

ಎಂಥ ಅಲ್ಪಪ್ರಾಣಿ ಎಂಥ ಮಹಾವೃಕ್ಷ ತಿಂದಿದೆ !
ವಿಶಾಲ ವೃಕ್ಷವಿದರ ವಿಸ್ತಾರ ಛಾಯೆಯಲಿ
ಬದುಕಿದರು ಕೋಟಿ ಕೋಟಿ ಜೀವಿಗಳು
ಅವರು ಸವಿದುಳಿದ ಫಲಗಳ ಸವಿದು
ಬದುಕಿದರು ನೆರೆಹೊರೆಯ ನೂರ್ಕೋಟಿ ಜನರು !

ಜಗದ್ಭಕ್ಷಕ ಕಾಲ ಭಕ್ಷಿಸದೆ ವೃಕ್ಷವಿದ
ರಕ್ಷಿಸಿದಶ್ರಿತಜನರ ಜೀವ ರಕ್ಷಣೆಗೆ
ಹಳ ರೆಂಬೆ ಕಳಚುತಲೆ ಹೊಸ ರೆಂಬೆ ಕೊನರಿದುವು
ಹಳ ತೊಗಟಿ ಉದುರುತಲೆ ಹೊಸ ತೊಗಟಿ ಚಿಗುರಿದುದು
ಸುಗ್ಗಿ ಬಂದಾಗೊಮ್ಮೆ ನುಗ್ಗಿದುದು ಹೊಸ ಹೊಗರು
ಹೊಮ್ಮಿದುವು ಹೊಸ ತಳಿರು, ಹೊಸ ಹೂವು, ಹೊಸ
ಹಣ್ಣು–

ತಣ್ಣನೇ ತಣಿಯವೊಲು ನೋಡಿದರ ಕಣ್ಣು !
ಇಂಥ ಹೆಮ್ಮರವ. ಪುಣ್ಯದ ಮರವ,
ಶತಮಾನಗಳ ದಾಳಿ ಹಾಳು ಮಾಡದ ಮರವ
ಬಿರುಗಾಳಿಗಳ ಬಡಿತ ಅಲುಗಾಡಿಸದ ಮರವ
ಸಿಡಿಲುಗಳು ಹೊಯ್ದರೂ ಸುಟ್ಟುಹೋಗದ ಮರವ
ನೆರೆ ಕೊಬ್ಬಿ ಹರಿದರೂ ಕೊಚ್ಚಿಹೋಗದ ಮರವ
ಸದ್ದಿಲ್ಲದೆಯೇ ಸ್ವಾಹಾ ಮಾಡಿಹವು ಕೀಟಗಳು–
ಮುದ್ದಿಟ್ಟುವಿಧ್ವಂಸಗೊಳಿಪ ಕೀಟಗಳು !

ಈ ಬೃಹತ್ತಿಗೀ ಮಹತ್ತಿಗೀ ಗತಿಯೆ?
ಭೂಮತೆಗೆ ಅಲ್ಪದಿಂದಲೆ ಸಂಹೃತಿಯೆ?

* * *

ಕನ್ನಡ ಕುಲ

ನಂಬು ಕನ್ನಡವನ್ನು ನಂಬು ಕನ್ನಡ ಜನವ
ನಂಬು ಕನ್ನಡ ನಾಡ ಭವಿತವ್ಯವನ್ನು
ನಂಬು ಕನ್ನಡಕುಲವ ನಂಬು ಕನ್ನಡ ಕಲೆಯ
ನಂಬು ಕನ್ನಡದಮಲ ಕಾವ್ಯವನ್ನು.

ಕನ್ನಡದ ನಂಬಿಕೆಯೆ ಭಿನ್ನತೆಗಳನು ಬೆಸೆದು
ಒಂದುಗೂಡಿಸಿತೆಲ್ಲ ಕನ್ನಡದ ನೆಲವ
ಕನ್ನಡದ ನಂಬಿಕೆಯೆ ಕೈಹಿಡಿದು ನಡಸೀತು
ಉನ್ನತಿಯ ಶಿಖರಕ್ಕೆ ಕನ್ನಡದ ಕುಲವ.

ಅಮೃತಮಂಥನದಲ್ಲಿ ವಿಷವು ಹುಟ್ಟಿದ ಹಾಗೆ
ಇಂದು ಮೂಡಿರಬಹುದು ನಾಡಿನಲ್ಲಿ
ಆ ಕುಲವು ಈ ಕುಲವು ಎಂಬ ಕೋಲಾಹಲವು
ಬೀಡುಬಿಟ್ಟಿದೆ ಮತಿಯು ಕೇಡಿನಲ್ಲಿ !

ಆದರಿದು ಸ್ಥಿರವಲ್ಲ ನಮಗೆ ಇದು ತರವಲ್ಲ
ಇಂದೊ ನಾಳೆಯೊ ಮತ್ತೆ ಕನ್ನಡಿಗರೆಲ್ಲ
'ಒಂದೆ ಕನ್ನಡ ನೆಲವು ಒಂದೆ ಕನ್ನಡ ಕುಲವು,
ಎಂದು ಗರ್ಜಿಸಿ ತಹರು ಕನ್ನಡಕೆ ಗೆಲ್ಲ !

ನೂರು ಕುಲಗಳು ಸೇರಿ ಕನ್ನಡದ ಕುಲವಾಗಿ
ಭಾರತಕೆ ಬಲವಾಗಿ ಬೆಳಗುತಿಹುದು
'ಈ ಕುಲವ ಒಡೆಯದಿರಿ ಹೋರಾಡಿ ಮಡಿಯದಿರಿ'
ಎಂದು ಕನ್ನಡ ಕಹಳೆ ಮೊಳಗುತಿಹುದು.

ಎಲ್ಲರಿಗೆ ನೆಲೆಯಿಹುದು ಎಲ್ಲರಿಗೆ ಬೆಲೆಯಿಹುದು
ಸಿರಿಯು ಚಿಮ್ಮುವ ನಮ್ಮ ನಾಡಿನಲ್ಲಿ

ಸ್ವಾರ್ಥಕ್ಕೆ ಮರುಳಾಗಿ ವ್ಯರ್ಥ ಕಡಿದಾಡದಿರಿ
ಈ ಚಿನ್ನ ರೇಶಿಮೆಯ ಬೀಡಿನಲ್ಲಿ !

ಏನಾದರೂ ಗಳಿಸು ಎಂತಾದರೂ ಬಳಸು
ಕನ್ನಡದ ಕುಲವನ್ನು ಮಾತ್ರ ಉಳಿಸು !
ಕನ್ನಡದ ಮೂಲಕವೆ ಕನ್ನಡಿಗನುದ್ಧಾರ
ಕನ್ನಡದಿ ನಂಬಿಕೆಯನುಳಿಸಿ ಬೆಳೆಸು !

ಕನ್ನಡಕೆ ಬಲವಕ್ಕೆ ಕನ್ನಡಕೆ ಗೆಲವಕ್ಕೆ
ಕನ್ನಡದ ಕುಲ ನಿತ್ಯ ಸತ್ಯವಕ್ಕೆ
ಕನ್ನಡದ ಪ್ರೇಮವೇ ಕನ್ನಡಿಗನುಸಿರಕ್ಕೆ
ಬರದಿರಲಿ ಎಂದಿಗೂ ಕನ್ನಡಕ್ಕೆ ಧಕ್ಕೆ !

* * *

ತುಂಗಭದ್ರಾ ಜಲಾಶಯ

ಭಾರತದ ಬಿಡುಗಡೆಯ ಮರದ ಬೇರೊಂದು
ಹೀರುತಿದೆ ನೀರನಿಲ್ಲಿ
ಹರಡಲಿದೆ ಆ ಮರದ ರೆಂಬೆಯೊಂದಕ್ಕೆ
ಇಲ್ಲಿ ಪಲ್ಲವಿಸುತಿಹ ಸಮೃದ್ಧಿ–ವಲ್ಲಿ
ಈ ಕಲ್ಪವೃಕ್ಷದ ಎಲ್ಲ ಬೇರುಗಳಿಗೆ
ಇಂಥ ನೀರಿನಾಸರ ದೊರೆತರೆ–
ಈ ಸುರತರುವಿನ ಎಲ್ಲ ರೆಂಬೆಗಳಿಗೆ
ಇಂಥ ಕಲ್ಪವಲ್ಲಿ ಹರಡಿದರೆ–
ಕಿಚ್ಚು ಹಚ್ಚೆಂದ ಸ್ವರ್ಗಕ್ಕೆ !
ಸುರರೆ ಬರಬಹುದು ಭಾರತ ಮಾರ್ಗಕ್ಕೆ !
ಅಲ್ಲಿ ತಾಳಿಕೋಟೆಯಲ್ಲಿ
ವೈರಿರಕ್ತವ ಚೆಲ್ಲಿ
ಬಲಿಪೀಠವೇರಿದ
ವಿಜಯನಗರದ ವೀರರ ತೀರದ
ವಿಜಯವಾಂಛೆ, ಅತೃಪ್ತ ಅಭಿಲಾಷೆ
ತಳೆದು ಸಲೀಲ ಸಲಿಲದ ಭಾಷೆ

ಉದ್ಘೋಷಿಸುತ್ತಿದೆಯಿಲ್ಲಿ–
  ತುಂಗಭದ್ರಾ ಜಲಾಶಯದಲ್ಲಿ !
'ಕನ್ನಡದ ತೇಜ ಅವಿನಾಶಿ
  ಇಲ್ಲಿ ಅದು ಸಲಿಲ–ವೇಷಿ
ಇದೆ ಇನ್ನು ಕನ್ನಡದ ಕಾಶಿ !'
ನಿಜವಲ್ತೆ ಈ ನಾಡ ಅಂತರಂಗದ ಅಧ್ಯಕ್ಷ
  ಶ್ರೀ ವಿರೂಪಾಕ್ಷ?
ಈ ಜಲಾಶಯದ ತರಲ ತರಂಗ ಸಂಗೀತದಲಿ
  ಕನ್ನಡದ ಮರುಹುಟ್ಟು ಹಾಡುತಿದೆ ಜಯಗೀತೆ
ನಿಜವಲ್ತೆ ಸತ್ಯ ಪಕ್ಷ?
  ಬಿದ್ದಿತ್ತು ಈ ವರೆಗೆ ಈ ಹಾಳು ಹಂಪೆ
ಕನ್ನಡಿಗರ ಸಾಮ್ರಾಜ್ಯದ ಸಮಾಧಿಯಂತೆ
  ಕಂಡವಗೆ ಕಟು ಸ್ಮೃತಿಯ ವ್ಯಾಧಿಯಂತೆ
ನಿಂತಿದ್ದುವು ವಿಗ್ರಹಗಳಿಲ್ಲಿ ಅಪರಾಧಿಯಂತೆ
  ತುಂಗೆ ಹರಿಯುತ್ತಿದ್ದಳಲ್ಲಿ ರೋದಿಪಂತೆ !
ಈ ಜಲಾಶಯದ ಹುಟ್ಟು
  ಮರುಹುಟ್ಟು ಹಂಪೆಗೆ
ಮತ್ತೆ ಮಹಿಮೆಯು ಬಂತು
  ಈ ಹಾಳು ಕೊಂಪೆಗೆ !
ಕೇಳಿ ಸಲಿಲ–ಸ್ವನವ ತುಂಗಭದ್ರೆಯ ಧ್ವನಿಯ–
  'ಯಂ ಕಾಮಯೇ
ತಂತಂ ಸಮೃದ್ಧಂ ಕೃಣೋಮಿ!'
  ಮಾಡಬಲ್ಲಳು ಇವಳು
ಬರದ ಬೀಡನೆ ಸಿರಿಯ ನಾಡನಾಗಿ
  ಸೊಗದ ಗೂಡನಾಗಿ
  ಸೌಖ್ಯದೀಡನಾಗಿ !
ಮಾಡಲಿ !
  ಬರದ ಬಾನಲೆ ಸೊಗದ ಹಕ್ಕಿ ಹಾರಾಡಲಿ !
ಕೊರತೆಯ ಒರತೆಯಲ್ಲಿಯೆ ಸುಖದ ಸೆಲೆ ಮೂಡಲಿ !
  ತುಂಗಭದ್ರೆ ಸುಖದ ಮುದ್ರೆಯೊತ್ತಲಿ

ಈ ಅಭಾವಪೀಡಿತ ಪ್ರದೇಶಕ್ಕೆ !
ಆಯ್ದುಕೊಳಲಿ ಕನ್ನಡ ನಾಡನ್ನೆ
ಸಮೃದ್ಧಿಶ್ರೀ ತನ್ನ ನಿವಾಸಕ್ಕೆ !

* * *

ನಮ್ಮ ಮನೆಯಲ್ಲಿಯೇ ಹೆರವರಾದೆವು ನಾವು !

ನಮ್ಮ ಮನೆಯಲ್ಲಿಯೇ ಹೆರವರಾದೆವು ನಾವು
ಇದನು ನೆನೆದಾಗೊಮ್ಮೆ ಉಕ್ಕುವುದು ನೋವು !

ಬಂದ ಅತಿಥಿಯೇ ಇಂದು ಒಡೆಯನು
ಅವನಿಗೇ ಹಿಡಿ ನೀನು ಕೊಡೆಯನು
ಕಲಿತು ಬಿಡು ನೀ ಅವನ ನುಡಿಯನು
ಕಲಿತು ಬಿಡು ನೀ ಅವನ ನಡೆಯನು!

ಯಾಕೆ ಒಣ ಅಭಿಮಾನ, ಸಂಕುಚಿತ ಭಾವ?
ಅವನು ಸಹ ನಮ್ಮವನೆ, ನಮ್ಮ ಭಾವ !

ಯಾರಿದ್ದರೇನು, ದೂರದವರಲ್ಲ
ಯಾರಿದ್ದರೂ ನೀನು ದೂರಲೇ ಬೇಕಿಲ್ಲ
ಮನೆ ನಮ್ಮದೆಂಬುವಾ ಹೆಮ್ಮೆ ಏಕಿಲ್ಲ?
ಇರಲು ನಮಗೂ ಅನುವು ದೊರೆಯ ಸಾಕಲ್ಲ !

ನಾವೊಬ್ಬರೇ ಇರುವ ದುರ್ಬುದ್ಧಿ ಬೇಡ
ಸರ್ವರಿಗೆ ಸನ್ಮತಿಯ ಭಗವಂತ ನೀನು !

ನಾವೆ ಇದ್ದರೆ ನಮಗೆ ಕರ ಕೊಡುವ ಕಾಟ
ಹಗಲೆಲ್ಲ ಸಾರಣಿಯ ಕಾರಣಿಯ ಕಾಟ
ಹೆರವರಿರುವುದು ನಮಗೆ ತಪ್ಪಿಸಲು ಕಾಟ
ತಿಳಿಯದವರಾಡುವರು ತಲೆಗೊಂದು ಮಾತ !

ಯಾರಿದ್ದರೂ ನಮಗೆ ಅಪಮಾನವೇನಿಲ್ಲ
ಇದರಂತರಾರ್ಥವನು ಬಲ್ಲವನೆ ಬಲ್ಲ !

* * *

ಹೃದಯ ನಿಕ್ಷೇಪ

ಹೃದಯ ನಿಕ್ಷೇಪವಿದ ಹಗಲೆ ಲೂಟಿಯ ಮಾಡು
ಕೋಟೆ ಕೊತ್ತಳವಿಲ್ಲ, ಕಾವಲಿಲ್ಲ !

ಶಾಸನದ ಭಯವಿಲ್ಲ ಸರಕಾರದಳುಕಿಲ್ಲ
ಶಾಸ್ತ್ರದಂಜಿಕೆಯಿಲ್ಲ, ಜೇಲು ಇಲ್ಲ !

ಬಾಗಿಲಕೆ ಕದವಿಲ್ಲ ಬೀಗ ಮೊದಲೇ ಇಲ್ಲ
ಮುಚ್ಚಿಟ್ಟ ಭಾಂಡಕ್ಕೆ ಮುಚ್ಚಳವೆ ಇಲ್ಲ !

ಕದ್ದ ಮೇಲೂ ಕೂಡ ಭದ್ರತೆಯ ಶ್ರಮವಿಲ್ಲ
ಹಣದ ಉಬ್ಬರಕ್ಕಾಗಿ ಹೆದರಬೇಕಿಲ್ಲ !

ಸುಲಿದಷ್ಟು ಸೆಲೆಯೊಡೆವ ಸಿರಿಯಿದನು ಸುಲಿದುಕೋ
ಕಲ್ಲುಮಣ್ಣಿನಕೂಡ ಗುದುಮುರಿಗೆ ಸಾಕು.

ವಿನಿಮಯದ ಗಡಿಗೆರೆಯ ಮೀರಿರುವ ನಾಣ್ಯವಿದು
ಸರ್ವದೇಶದ ಸರ್ವ ಜನಕೆ ಬೇಕು.

ನಿಕ್ಷೇಪ ನನ್ನದೆನೆ ಅಕ್ಷೇಪಿಸುವರಿಲ್ಲ
ಅಕ್ಷಮವು ಈ ಸಿರಿಯು ಸಂಪಾದಿಸು.

ರುಕ್ಷಜೀವನಕಿದುವೆ ಇಕ್ಷುರಸಧಾರೆಯಲಿ
ಯಾರೆ ಸೂಚಿಸಲಿದನು, ಅನುಮೋದಿಸು !

* * *

ನೋಟ !

ಜೀವನ ಸಮಸ್ತವನು ಸೆರೆಗೊಂಡ ಮೊದಲ ನೋಟ–
ಮೆಲ್‌ನೋಟ, ನಲ್‌ನೋಟ, ಗೆಲ್‌ನೋಟ, ಮತ್ತ ನೋಟ !
ನೀರವ ನಿಮಂತ್ರಣವನಿತ್ತೆಳೆದ, ಸೆಳೆದ ನೋಟ !

ಹೃದಯ ಶಿಶುವನು ತೂಗುತೊಟ್ಟಿಲಲ್ಲಿ ಪಟ್ಟಿರಿಸಿ
ತೂಗಿ ಜೋಗುಳ ಹಾಡಿ ಮಲಗಿಸಿದ ನೋಟ !

ಮುಗ್ಧಹೃದಯದ ಮಧುವ ಸೂಸಿ ಸುತ್ತೆರಚುತ್ತ
ಮನೆಯ ಪಾರ್ಥಿವರಜವ ಮಧುರಗೊಳಿಸಿದ ನೋಟ !

ಬಾಳ ಬೀಣೆಯ ಮೂಕ ತಂತಿಗಳ ಮೇಲೆಲ್ಲ
ಬೆರಳಾಗಿ ಸಂಚರಿಸಿ ಇಂಚರವ ಹೊರಡಿಸಿದ–
ಅಸ್ಪಷ್ಟರೇಖೆಗಳ ಮಸಕಾದ ಚಿತ್ರಕ್ಕೆ
ಬಣ್ಣಗಳ ಬೀಗತನ ಮಾಡಿಸಿದ ನೋಟ !

ಅಮೃತಕರಗಳ ತೆರದಿ ಮನದ ಮುಕುಳವ ಬಿರಿಸಿ
ಸೌರಭದ ಸೆರೆ ಬಿಡಿಸಿ ಮಧು ಬಿಂದುಗಳ ಸುರಿಸಿ
ಚೇತನಕೆ ಚೇತನವ ಬರಿಸಿ ನಲವನು ಹರಿಸಿ
ಸವಿ ಬೆಳಕುಗಳ ನೂರು ಸೆಲೆಯಿತ್ತ ನೋಟ !

ಹುಸಿ ಕಲಹ, ಹುಸಿಮುನಿಸು, ಸುಳ್ಳುಸಿಡಿಮಿಡಿಗಳಿಗೆ
ರಂಗುರಂಗಿನ ರಂಗವಾದ ನೋಟ !

ಮಂಗತನ ತೋರಿಸಿದ ತುಂಟ ನೋಟ
ಹಟಮಾರಿತನ ಸುರಿದ ಕಿಡಿಗೇಡಿ ನೋಟ
ಕಂಬನಿಯ ಮಂಜಿನಲಿ ನುಸುಳಿ ಕಿರಣದಹಾಗೆ
ನಿರ್ದೋಷಿ ನಾನೆಂದು ನುಡಿದ ನೋಟ !

ನಗುವ ನಯನದಿ ನಲಿದು ಅಳುವ ಅಕ್ಷಿಗಳಲ್ಲಿ
ಅಸಹಾಯಿ ನಾನೆಂದು ಮಿಡಿದ ನೋಟ !

ಮಿಲನದಲಿ ಮಿನು–ಮಿನುಗಿ ವಿರಹದಲಿ ಮಿಣು–ಮಿಣುಕಿ
ಕನಿಕರಕೆ ಕರೆಯಿತ್ತ ದೀನ ನೋಟ !

ನಂಬಿಕೆಯ ತಂಬೆಲರ ಚುಂಬನಕೆ ವಿಕಸಿಸುತ
ಸಂಶಯದ ಹಿಮ ಬೀಳೆ ಸುರುಟಿರ್ದ ನೋಟ !

ನೂರು ಭಾಷ್ಯವನೋದಿ ಅರಿಯದಿಹ ಅರ್ಥವನು
ನುಡಿಗೆ ಹಂಗಾಗದೆಯೆ ಒರೆದ ನೋಟ !

ಅರ್ಥವನೆ ಮೀರಿರುವ ಅರ್ಥವನೆ ಬಯಸದ
ಅರ್ಥಕ್ಕೆ ಅರ್ಥವಾಗಿರುವ ನೋಟ !

ಬಾಳ ಬಳ್ಳಿಯ ಮೇಲೆ ಸೊದೆಯಾಗಿ ಸುರಿಯುತಿರು

ಬಾಳಿಗೇ ಬಾಳಿತ್ತು ಬಾಳಿಸುವ ನೋಟ !
ನೀನೆ ಹಲವಂದದಲಿ ಹೂವಾಗಿ ಅರಳಿದರೆ
ಅಂದ ಗಂಧದ ಸುಗ್ಗಿ ಎದೆಯ ತೋಟ !

* * *

ತಾಜಮಹಲು

ಶಿಲೆಯ ಹಾಲಿಗೆ ಕಲೆಯ ಹೆಪ್ಪು ಹಾಕಿ
ಕಡೆಯೆ ಕುಶಲತೆಯೆಂಬ ಕಡೆಗೋಲನಿಕ್ಕಿ
ಹರಿದುದಾಕಡೆ ತಕ್ರ ಯಮುನೆಯಾಗಿ,
ಮೆರೆದುದೀಕಡೆ ಬೆಣ್ಣೆ ತಾಜಮಹಲಾಗಿ !

* * *

ಒಂಟಿ ನಕ್ಷತ್ರ

ಆಗಸದ ಅಕ್ಷಯ ಪಾತ್ರೆಯಲ್ಲಿ
ಉಣ್ಣದುಳಿದ ಅಗಳೊಂದು
ಈ ಒಂಟಿ ನಕ್ಷತ್ರ !
ಅದನುಂಡು ತೇಗಿದನು
ಮೇಘ ಶತಪತ್ರ ನೇತ್ರ–
ಗುಡುಗಿನಲ್ಲಿ !

ಅದಕಂಡು,
ದಿಶಾದ್ರೌಪದಿಯ ಮುದಿತ ವದನದ್ಯುತಿಯು
ನಯನ ದೀಧಿತಿಯು
ಹೊಮ್ಮಿದುದು ಮಿಂಚಿನಲ್ಲಿ
ಮುಗಿಲ ಅಂಚಿನಲ್ಲಿ !
ಕ್ಷಿತಿಜ ಧರ್ಮಜನಕ್ಷಿ
ತೊಯ್ದ ಹಾಗಿವೆ
ತೃಪ್ತಿ ಭಾಷ್ಪದಿಂದ
ಉದಯಪುಷ್ಪದಿಂದ

ಬಯಲ ಮಾಯಾವಿ ರಾವಣನ
ವಿದ್ಯುದಾಯುಧದಿಂದ
ಮೇಘ–ಜಟಾಯು ಹತನಾಗೆ ನೊಂದ
ದಿಶಾ ಸೀತೆಯ ನಯನದಿಂದ
ಕಳಚಿ ಉಳಿದ ಏಕ ಮಾತ್ರ ಅಶ್ರುಬಿಂದು
ಈ ಒಂಟಿ ನಕ್ಷತ್ರವೆಂದು
ಯಾರು ಬರೆದವರು?
ಯಾರು ಬರೆದವರು?

ಭಗಣ ಸಗರ ಸಂತತಿಯೆಲ್ಲ ಬಯಲಾಗಿ
ಉಳಿದ ಭಗೀರಥ
ಈ ಒಂಟಿ ನಕ್ಷತ್ರ
ತಪದಲ್ಲಿಹನು–ತ್ರಿನೇತ್ರ
ತ್ರಿಪಥೆಯನು ಕಳಿಸಿ
ಭಗಣಕುಲ ಬದುಕಿಸಿ
ಬೆಳಗಿಸುವವರೆಗೆ !

ಅದೊ,
ಮೇಘ ಜೂಟದಿಂದ
ಇಳಿಯುತಿಹ ಗಂಗೆ
ಪಾವನ ತರಂಗೆ
ವಿಮಲಾಂತರಂಗೆ !

ಅದೊ,
ಮರೆಯಾದ ನಕ್ಷತ್ರ
ತಳೆದು ಹೊಳೆ ಹೊಳೆವ ಗಾತ್ರ
ಮಿನುಗುತಿವೆ ಸರ್ವತ್ರ !
ಧನ್ಯ ಒಂಟಿ ನಕ್ಷತ್ರ !

* * *

ಕಾಲದ ಕರೆ

ಪಥರಹಿತ ವಿಪಿನದಲಿ ಚರಿಸು ಬಾ ನನ್ನೊಡನೆ
ಉಪವನವಿಹಾರವನು ಮರೆತು ಸ್ವಲ್ಪ
ಕಾನನದ ಸ್ವಚ್ಛಂದ ಸೌಂದರ್ಯ ಸಾಮ್ರಾಜ್ಯ
ಸ್ಥಿರವಾಗಿ ನಿಂತಿಹುದು ಕಲ್ಪಾನುಕಲ್ಪ
ಕಡೆಯಿರದ ಕಡಲಲ್ಲಿ ಈಸುಬಾ ನನ್ನೊಡನೆ
ಈಸುಗೊಳವನು ಮರೆತು ಕೆಲವು ಕಾಲ
ಅಬ್ಬರದ ಪೆರ್ದೆರೆಗೆ ಉಬ್ಬಿದೆದೆಯನ್ನು ಒಡ್ಡಿ
ಸಾಹಸದಿ ಮುಂದುವರಿ ಮೇಲೆತ್ತಿ ಫಾಲ
ನಿಸ್ಸೀಮನಭದಲ್ಲಿ ಹಾರು ಬಾ ನನ್ನೊಡನೆ
ಗೂಡಿನೊಳಗಣ ಗುಟುಕು ಮರೆತು ಕೊಂಚ
ನಕ್ಷತ್ರಗಳ ನೆರಳಿನಲ್ಲಿ ರೆಕ್ಕೆಯ ಬೀಸು
ಅವುಗಳಾಚೆಗೆ ಚಾಚಿ ಗುರಿಯ ಚುಂಚ
ಮನೆಯ ಗೋಡೆಗಳನ್ನು ಕ್ಷಣಕಾಲ ಮರೆತು ಬಾ
ವಿಶ್ವಜೀವನ ತೀರ್ಥದಲ್ಲಿ ಮುಳುಗು
ದೇಶದೇಶದ ಜನರ ಹೃದಯಸಮ್ಮೇಳನದಿ
ಮೂಡುವುದು ಹೊಸ ಜಗದ, ಯುಗದ ಬೆಳಗು !

* * *

ಬೇಡುವೆನಿದನೆ.....

ಬೇಡುವೆನಿದನೆ ಬೇಡದಲೆ ಕೊಡುವ ತಂದೆ!
ನೀನೀಯದಿರೆ ಪಡೆವೆನೇ ನಾನೆ ನನ್ನಿಂದೆ?
ಕಾಡುವ ಬಾಯನಲ್ಲ, ಬೇಡದ ಬಾಯ ಕೊಡು:
ಕೊಂಬ ಕೈಯನಲ್ಲ, ನೀಡುವ ಕೈಯ ಕೊಡು;
ಸುಖಿಸುವ ಮೈಯನಲ್ಲ, ದುಡಿಯುವ ಕಾಯ ಕೊಡು;
ಕೆಡಿಸುವ ಮತಿಯನಲ್ಲ, ಕಟ್ಟುವ ಧ್ಯೇಯ ಕೊಡು !

ಕಣ್ಗಳಿಗೆ–
ಬತ್ತಿರುವ ಹಿಗ್ಗುಗಳ ಬುಗ್ಗೆಗಳನಲ್ಲ,

ಸೆಲೆಯೊಡೆವ ಒಲವುಗಳ ತೋರಿಸುತಿರು;
ಒತ್ತಿ ಬಹ ಕಂಬನಿಯ ಹತ್ತಿ ಹಿಡಿವುದನಲ್ಲ,
ಕಣ್ಣೀರ ತೊಡೆವುದನು ಕಾಣಿಸುತಿರು !

ಕಿವಿಗಳಿಗೆ–

ಒಡೆವ ಬಳೆಗಳ ಸದ್ದನಲ್ಲ, ಬಿಡುಗಡೆ ಹಿಡಿದು
ಮುರಿವ ಬೇಡಿಗಳ ಸ್ವರ ಕೇಳಿಸುತಿರು;
ಸುಡುವ ಹಾರೈಕೆಗಳ ಹಾಹಾಕಾರವನಲ್ಲ,
ಪೂರೈಕೆಗಳ ಗೇಯ ಕೇಳಿಸುತಿರು;

ನಾಲಗೆಗೆ–

ಹಂಗಿನಮೃತವನಲ್ಲ, ಹಂಗಿಲ್ಲದಂಬಲಿಯ–
ನಾನೆ ದುಡಿದಂಬಲಿಯ ಕರುಣಿಸುತಿರು;
ನಂಜನುಂಡರು ಜಿಹ್ವೆ ನಂಜನುಗುಳದ ಹಾಗೆ
ನಯವನೇ ಅನವರತ ಕಲಿಸುತ್ತಿರು !

ಮೂಗಿಗೆ–

ಸೀಯುತಿಹ ಸ್ನೇಹಗಳ ಹೆಣನಾತವನ್ನಲ್ಲ,
ಅರಳ್ವ ಎದೆ–ಮುಗುಳುಗಳ ನರುಗಂಪ ನೀಡು !

ತ್ವಚಕೆ–

ಶೋಷಣೆಯ ಸಾಣೆಕಲ್ಲಲಿ ತೆಯ್ದ ನಿಷ್ಕರುಣ
ಸ್ವಾರ್ಥದತಿ ದುರ್ಗಂಧ ಲೇಪನವು ಬೇಡ;
ಅನುಕಂಪದರೆಗಲ್ಲಿನಲಿ ತೆಯ್ದ ತ್ಯಾಗ ಮೇಣ್
ಸೇವೆಯುರು ಬಾವನ್ನದಣ್ಪನೇ ನೀಡ !
ಬಿದ್ದ ಸಲಕೊಮ್ಮೆ ಎದ್ದು ನಿಲ್ಲುವ ಧೃತಿಯ
ದುಃಖವೆಲ್ಲಿದ್ದರೂ ನನ್ನದೆಂಬುವ ಮತಿಯ
ಮನುಕುಲವೆ ಕುಲದೈವವೆಂಬ ಜನಹಿತರತಿಯ
ಕೊಡು ನನಗೆ ನಾನಿತ್ತುದನೆ ಮರೆವ ಪದ್ಧತಿಯ !
ಬೇಡುವೆನಿದನೆ ಬೇಡದಲೆ ಕೊಡುವ ತಂದೆ !
ನೀನೀಯದಿರೆ ಪಡೆವೆನೇ ನಾನೆ ನನ್ನಿಂದೆ?

* * *

ಕೊಟ್ಟು ಬಿಡು ಕಾಲ !

ಏನು?

ಇನ್ನೊಂದು ಗುಟುಕು ವಿಷವಿಹುದೆ?
ಕೊಟ್ಟು ಬಿಡು ಕಾಲ !

ಮೀನ ಮೇಷವು ಬೇಡ,
ಮಿಜಿ ಮಿಜಿಯು ಬೇಡ,
ಕೇಳದಿರು ನನ್ನ ಅನುಕೂಲ !

ಏಕೆ ಸಕ್ಕರೆಯ ಒಪ್ಪ?
ತುಂಬಿಬಿಡು ಕಪ್ಪ–
ಕೊಟ್ಟುಬಿಡು ಹೀಗೆಯೆ,
ಕುಡಿಯುವೆನು ಹಾಗೆಯೆ !

ದಡ್ಡು ಬಿದ್ದಿದೆ ಕೊರಳು
ವಿಷವನ್ನು ಕುಡಿಕುಡಿದು
ನಡುಕ ಬಾರದು ಕೈಗೆ
ವಿಷದ ಬಟ್ಟಲು ಹಿಡಿದು !

ಹಾಕು ವಿಷ ಬಟ್ಟಲಿಗೆ
ಸುರಿ ನನ್ನ ಗಂಟಲಿಗೆ
ಕುಡಿಯುವೆನು ಸುಧೆಯಂತೆ
ಇದುವರೆಗೆ ಕುಡಿದಂತೆ !

ಎನಿತು ಸಲ ಆಗಿಲ್ಲ
ನಿನ್ನ ತೇಜೋವಧೆಯು?
ಎನಿತು ಸಲ ಆಗಿಲ್ಲ
ಗರ್ವ ಭಂಗ ?
ಆದರೂ ನಿರ್ಲಜ್ಜ,
ಮತ್ತೆ ಪರಿಕಿಸುತಿರುವೆ !

ನಿನಗಿದೇ ಕಜ್ಜ–
ಅದಕಿಂತು ವರ್ತಿಸುವೆ !

ಪರುಕಿಸೋ ಪರುಕಿಸು,
ಇರುವವರೆಗೂ ಅಸು !

ಕೊನೆಯ ಉಸಿರಿನ ವರೆಗೆ
ಒರೆದು ನೋಡು,
ಅರೆದು ನೋಡು,
ಕೊರೆದು ನೋಡು !

ಒಮ್ಮೆ ಹಾಲಾಹಲವ
ಕುಡಿದು ಬದುಕಿಹ ಶಿವನು–
ನಿತ್ಯವೂ ನಂಜೀಂಟಿ
ಬದುಕಿರುವೆ ನಾನು !

ಯಾರಾರನೋ ಕೆಣಕಿ
ಸೋಲಿಸಿದ ಅಲ್ಪಶ್ರೇಯ
ನನ್ನ ಕೆಣಕಲು ಬಂದೆ
ದೇವಾನಾಂ ಪ್ರಿಯ !

ಇದು ನೋಡು–
ಒಕ್ಕುಡಿತವನು ಮಾಡಿ
ಕುಡಿದುಬಿಟ್ಟೆನು ವಿಷವ !

ಹೀರಿತೇನದು ಅಸುವ?
ಇಲ್ಲ, ನಿನಗೀಯೆ ನಾನು ಆ ಜಸವ !

ನನ್ನ ಜೀವನ ನಿಷ್ಠೆ
ನಿನ್ನ ವಿಷವನೆ ಹೀರಿ
ರಸವ ಮಾಡಿದುದನ್ನು
ನೋಡಿ ಬೆರಗಾಗು–ಕಾಲ,
ನೋಡಿ ಬೆರಗಾಗು !

* * *

ಕೆಸರಾಟ

ಇದರ ಹೆಸರೇ ಕೆಸರಾಟ–
ಏಕಿಲ್ಲಿ ನಿನ್ನ ಸ್ವಚ್ಛತೆಯ ಸಾರ?
ಕಾಮನ ಹುಣ್ಣಿಮೆಯಲ್ಲಿ ಬಣ್ಣದೋಕುಳಿ
ಕೆಸರಾಟದಲ್ಲಿ ಮಣ್ಣಿನೋಕುಳಿ !
ಕೆಸರೆರೆಸೆಯುವುದನ್ನು ಕಲಿ !

ಬಾ,
ಕೆಸರ್ಗೆಯ್ಯ ಕೆಸರಾಂಕನಾಗು;
ಕೆಸರಿಗೆಯ ಕರ್ದಮಧಾರಿಯಾಗು ;
ಕೆಸರುಡು, ಕೆಸರೇಳಿಸು, ಕೆಸರುದೋರು,
ಕೆಸರ್ಗೂಡು, ರಾಡಿಮಾಡು, ರಾಡಿ ತೂರು !

ಬೇಡ !
ದೂರು ನಿಲ್ಲು !
ಏಕೆ ಗೈಯುವೆ ಸಲ್ಲದ ಗುಲ್ಲು?
ಕೆಸರಿನಲೆ ಬೆಳೆಯುವುವು ತಾವರೆ, ನೆಲ್ಲು !

ಅಂತೆಯೇ–
ಕೆಸರಾಟವೇ ನಮಗೆ ಪರಮದಿವ್ಯೆ
ಕೆಸರ್ಗಲ್ಲನಿಕ್ಕುವುದೆ ಮೂಲ ಕರ್ತವ್ಯ !
ನಾವಿಟ್ಟ ಕೆಸರ್ಗಲ್ಲುಗಳ ಲೆಕ್ಕ
ಇಡುವವರ ಸೊಕ್ಕು
ಯಮಾ ನೋಡಿ ನಕ್ಕ !
ಕೆಸರಿನಲ್ಲಿ ಕಲ್ಲು ಕೆಸರ್ಗಲ್ಲು
ರಾಡಿಯಲ್ಲಿ ಕಲ್ಲು– ರಾಡಿಕಲ್ಲು !
ಕೆಸರು ಕೆಸರೆಂದೇಕೆ ಮೂಗು ಮುರಿಯುವಿ?
ಹೊಲಸು ಹೂಲಸೆಂದೇಕೆ ಹಲ್ಲುಕಿರಿಯುವಿ?
ನಲ್ಲರ ಮೈಯೊಳಷ್ಟೇ ಅಲ್ಲ–
ಎಲ್ಲೆಡೆಯೊಳೂ ಲೇಸು ಪೊಲ್ಲಮೆಯು !

ಹೇಳಿಯೇ ಇದೆಯಲ್ಲಿ–

ಕೈ ಕೆಸರಾದರೆ ಬಾಯಿ ಮೊಸರೆಂದು.
ಕೆಸರಾಟವಾಡಿ ಮೊಸರನಷ್ಟೇ ಅಲ್ಲ
ಬೆಣ್ಣೆಯನ್ನೂ ಪಡೆದಿಹೆವು
ತುಪ್ಪವನ್ನೂ ಕುಡಿದಿಹೆವು
ಕೆನೆಯನ್ನೂ ಜಡಿದಿಹೆವು !
ಇನ್ನಾವ ಆಟದಲಿ ಇದೆ ಇಷ್ಟು ಲಾಭ?
ಅಂತೆಯೇ ಕೆಸರಾಟದಲಿ ನಮಗೆ ಲೋಭ !
ಕೆಸರು ಕೆಸರೆಂದೇಕೆ ಬೀಳುಗಳೆವರು
ಕೊಸರೂ ಕಾಣದ ಗಾವಿಲರು?

ಕೆಸರಿನಲೆ ಮೂಡಿದುದು ಮೊದಲು ಪ್ರಾಣ
ಕೆಸರಾಟದಿಂದಲೇ ನಮಗೆ ತ್ರಾಣ
ಕೆಸರಾಟವಾಡುವವನೇ ಜಾಣ
ಆಡದವ ಕೋಣ !

ಕೆಸರು ಕೆಸರಿನಲಿ ಭೇದವೆಣಿಸುವರಲ್ಲ ನಾವು !
ಕೊಚ್ಚೆ ನೀರಿನ ಕೆಸರೊ ಕಣ್ಣೀರ ಕೆಸರೊ
ನಮಗಿಲ್ಲ ನೋವು.
ಬಲಿಪೀಠದಿಂದಿಳಿವ ನೆತ್ತರಿನ ಕೆಸರು
ದುಡಿವ ಮೈಯಿಂದಿಳಿವ ಬೆವರಿನ ಕೆಸರು
ದುಃಖಿತರ ಕಂಬನಿಯ ಬೆಚ್ಚನ್ನ ಕೆಸರು
ಎಲ್ಲ ಒಂದೇ ನಮಗೆ
ಸಮದರ್ಶಿಗಳಿಗೆ !

ನಮಗೆ,

ಎಲ್ಲ ಕೆಸರೂ ಬೇಕು ಕೆಸರಾಟಕೆ
ಈ ಆಟವೇ ಶ್ರೇಷ್ಠ ಬಸಿರೂಟಕೆ !

* * *

ಋಣ–ಸ್ಮರಣ

ಆರಾರ ವಂಚಿಸುತ ಸಾಗಿಸಿಹೆ ಬದುಕನ್ನು
ಯಾರಾರ ಋಣದಲ್ಲಿ ಜೀವಿಸಿಹೆನು?
ಹೇಗೆ ತೀರಿಸಬಲ್ಲೆ ಲೆಕ್ಕವಿಲ್ಲದ ಋಣವ–
ಯಾವ ಜನ್ಮದ ಋಣವ ತೀರಿಸಿಹೆನು?
ಕರುಗಳನು ವಂಚಿಸುತ ಕರೆದುಕೊಳ್ಳುವೆ ಹಾಲ
ಹಕ್ಕಿಗಳ ವಂಚಿಸುತ ಹಣ್ಣ ತರಿವೆ
ದುಂಬಿಗಳ ವಂಚಿಸುತ ಹೂವುಗಳನೆತ್ತುವೆನು
ಜೇನ್ನೊಣಗಳನು ತಳ್ಳಿ ಜೇನ ಸುರಿವೆ
ಬಿತ್ತುವನಿಗಿಲ್ಲೆನಿಸಿ ಬತ್ತವನು ಕೊಳ್ಳುವೆನು
ನೆಯ್ದವನಿಗಿಲ್ಲೆನಿಸಿ ಬಟ್ಟೆ ತೊಡುವೆ
ಕಟ್ಟಿದವಗಿಲ್ಲೆನಿಸಿ ಕಟ್ಟಡಗಳನು ಪಡೆವೆ
ಕಲಿಸಿದವಗಿಲ್ಲೆನಿಸಿ ಸಿರಿ ಸೌಖ್ಯ ಪಡೆವೆ
ನನ್ನ ಉಪಕಾರಿಗಳ ನನ್ನ ಅಪಕಾರಗಳ
ಲೆಕ್ಕ ಬರೆಯಲು ಬೇಕು ನೂರು ವರುಷ !
ಹೀಗಿದ್ದರೂ ಮೆರೆವೆ ಉಪಕಾರಿ ನಾನೆಂದು
ಎಲ್ಲಿಹನು ನನ್ನಂಥ ಪುಣ್ಯಪುರುಷ?
ಋಣವ ನೀ ಸ್ಮರಿಸಿಕೋ ಋಣವ ನೀ ಸ್ಮರಿಸಿಕೋ
ಋಣಮುಕ್ತಿಗಾಗಿಯೇ ಶ್ರಮಿಸು ಸತತ
ರಿಣಗೂಳು ತಿನ್ನುತ್ತ ಕಳೆದೆಯಾದರೆ ಹೊತ್ತ
ಕೊಳೆಯಬೇಕಾದೀತು ಋಣದಿ ನಿರುತ !

* * *

ರಾಜಘಾಟ

ಅದೊ, ಯಮುನಾ ತಟ
ಇದೊ, ರಾಜಘಾಟ !

ಕೆಂಪು ಕೋಟೆಯ ಪೆಂಪು ಪೆರ್ಮೆಯಿಲ್ಲ
ತಾಜಮಹಲಿನ ಸಿರಿಯು ಸೊಬಗು ಇಲ್ಲಿಲ್ಲ
ಮೀನಾರದೆತ್ತರವು ಪಿರಾಮಿಡಿನ ಬಿತ್ತರವು
ಆ ಅಜಂತೆಯ ಚಿತ್ರ ಮೊದಲೆ ಇಲ್ಲ
  ಗರ್ಭಗುಡಿ ಗೋಪುರವು
  ರಂಗಮಂಟಪ ಸ್ತೂಪ
  ಘಂಟೆ ಜಾಗಟೆ ಪೂಜೆ ಇಲ್ಲವೇ ಇಲ್ಲ !
ಅಂದಣದ ದುಂದುಭಿಯ ರಥದ ಕಹಳೆಯ ವೇದ–
ಮಂತ್ರ ಘೋಷದ ಗರಿಮೆ ಹಿರಿಮೆಯಿಲ್ಲ
ಈ ಯುಗದ ಪರಮೋಚ್ಚ ಪರಮಪಾವನ ಚರಿತ
ಮಾನವ ಕುಲೋತ್ತುಂಗ ಮಲಗಿರುವನಿಲ್ಲಿ
  ಸರಲ ನಿರಾಡಂಬರ ನಿರ್ಮಲ ಸಮಾಧಿಯಿಲ್ಲಿ !
ಇರುವಾಗ ಸರಳತೆಯ ಸಿರಿಯಾಗಿ ಬಾಳಿದನು
ವಿಶ್ವಜೀವಿಗಳೆದೆಯ ಸಾಮ್ರಾಜ್ಯವಾಳಿದನು
ಬಾಳಿದನು ಭವ್ಯನವ ಶತ್ರುವನೆ ಪ್ರೀತಿಸುತ
ಸೇವಾ ಪ್ರದೀಪದಿಂ ನಾಲ್ದೆಸೆಯ ದ್ಯೋತಿಸುತ
ಬಡವಗಿಂತಲು ಬಡವನಾಗಿ ಗುಡಿಸಲಿನಲ್ಲಿ
ಬಿಡುವಿರದೆ ದುಡಿಯುತ್ತ ಅರ್ಧಬರಿ ಮೈಯಲ್ಲಿ !
ಅವಗುಣ ಬಣ್ಣಿಸುವಿ ಮತ್ತಾವುದನು ಬಿಡುವಿ?
ಅವನಡಿಯ ಹುಡಿಯಿಂದ ಮಡಿಯಾಯ್ತು ಪೊಡವಿ !
ಇಂಥ ಸಂತರ ಸಂತ ಮಲಗಿರುವ ತಾಣದಲಿ
ಈ ನಿಜದ ನೆಲೆಯಲ್ಲಿ ಒಲವಿನ ನಿಧಾನದಲಿ
ಕರಗುವುದು ಮೋಡದೊಲು ಆಡಂಬರ
ಇಳೆಯೆ ಗುಡಿ, ಗೋಪುರವು ನೀಲಾಂಬರ !
  ಅದೊ, ಯಮುನಾ ತಟ,
  ಇದೊ, ರಾಜಘಾಟ !

* * *

ಕಂಡೆ ಅನ್ಯದಿ ನನ್ನನು !

ಹರಿಯ ಹೃದಯದಿ ಹರನ ಕಂಡೆನು
ಹರನ ಹೃದಯದಿ ಹರಿಯನು
ಸಿರಿಯ ಹೃದಯದಿ ಶಿವೆಯ ಕಂಡೆನು
ಶಿವೆಯ ಹೃದಯದಿ ಸಿರಿಯನು
ಹೆಣ್ಣಿನೆದೆಯಲಿ ಗಂಡು ಕಂಡೆನು
ಗಂಡಿನೆದೆಯಲಿ ಹೆಣ್ಣನು
ಹಣ್ಣಿನೆದೆಯಲಿ ಬೀಜ ಕಂಡೆನು
ಬೀಜದೆದೆಯಲಿ ಹಣ್ಣನು
ಮಣ್ಣಿನೆದೆಯಲಿ ಬಣ್ಣ ಕಂಡೆನು
ಬಣ್ಣದೆದೆಯಲಿ ಮಣ್ಣನು
ಕಣ್ಣಿನೆದೆಯಲಿ ಕುರುಡು ಕಂಡೆನು
ಕುರುಡಿನೆದೆಯಲಿ ಕಣ್ಣನು
ನೋವಿನೆದೆಯಲಿ ನಲವ ಕಂಡೆನು
ನಲವಿನೆದೆಯಲಿ ನೋವನು
ಸಾವಿನೆದೆಯಲಿ ಜೀವ ಕಂಡೆನು
ಜೀವದೆದೆಯಲಿ ಸಾವನು
ನನ್ನ ಎದೆಯಲಿ ನಿನ್ನ ಕಂಡೆನು
ನಿನ್ನ ಎದೆಯಲಿ ನನ್ನನು
ತನ್ನತನದಲಿ ಅನ್ಯತನವನು
ಕಂಡೆನನ್ಯದಿ ನನ್ನನು !

* * *

ಒಂದು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ !

ಒಂದು ಹೆಜ್ಜೆ ಮುಂದೆ
ಎರಡು ಹೆಜ್ಜೆ ಹಿಂದೆ
ನಡೆ ಮುಂದೆ, ನಡೆ ಮುಂದೆ, ಮುಂದೆ !

ಅವನೇನನೊ ಕಟ್ಟಿದ
ಇವನು ಬಂದು ಕೆಡಿಸಿದ
ಇವನೇನನೊ ಬೆಳಸಿದ
ಅವನು ಬಂದು ಕಡಿಸಿದ
ಮಗನ ಕೈಯೆ ಕೊಡಲಿಯಾಯ್ತು
ಬೆಳಸಿದುದಕೆ ತಂದೆ–
ಒಂದು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ !
ನಡೆ ಮುಂದೆ, ನಡೆ ಮುಂದೆ, ಮುಂದೆ !
ಅವ ಕೆಡಹಿದ ಗೋಪುರವ
ಇವ ಸುಟ್ಟನು ಮೀನಾರವ
ಅವನು ಕೆಡಿಸೆ ಗುರುದ್ವಾರ
ಇವನು ಸುಟ್ಟ ಮಂದಿರ
ಕೆಡಿಸುವುದೇ ಪರಮ ಪ್ರಗತಿ
ಕೆಡಿಸದವನೆ ಹಂದೆ
ಒಂದು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ,
ನಡೆ ಮುಂದೆ, ನಡೆ ಮುಂದೆ, ಮುಂದೆ !
ಇವನಿಗವನು ಸೂಕರ
ಅವನಿಗಿವನು ಕಾಫರ
ಇನ್ನೊಬ್ಬನು ಇವರಿಬ್ಬರ
ಕರೆವ 'ಕರಿಯ, ಬರ್ಬರ!'
ಮನುಜರೆಲ್ಲರೊಂದೆ ಹೇಗೆ
ಒಬ್ಬನಿರಲು ತಂದೆ?
ಒಂದು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ
ನಡೆ ಮುಂದೆ, ನಡೆ ಮುಂದೆ, ಮುಂದೆ !
ಅವನಗುಣಾಕಾರಕಿವನ
ಭಾಗಾಕಾರ ಸರಿಯಿದೆ
ಕೂಡಿದಷ್ಟೆ ಕಳೆದುಬಿಟ್ಟ
ಶೇಷ ಬರೋಬರಿಯಿದೆ !
ಲೆಕ್ಕ ಲೆಕ್ಕವಿಲ್ಲದಷ್ಟು
ಶೇಷ ಮಾತ್ರ ಒಂದೆ !

ಒಂದು ಹೆಜ್ಜೆ ಮುಂದೆ, ಎರಡು ಹೆಜ್ಜೆ ಹಿಂದೆ
ನಡೆ ಮುಂದೆ, ನಡೆ ಮುಂದೆ, ಮುಂದೆ !

* * *

ಎಣ್ಣೆಮಜ್ಜನ

ಮೂರ್ತಿಯ ಮುಖದ ಮೇಲಿನ
ಹುಬ್ಬು ಕಣ್ಣು ಮೂಗು ಬಾಯಿಗಳು
ಗುರುತು ಸಿಕ್ಕದ ಹಾಗೆ ವಿಕೃತವಾಗುವವರೆಗೆ
ಎಣ್ಣೆಮಜ್ಜನ ಮಾಡು !
ಕೈಬೆರಳ ಸಂದಿಯಲಿ
ಕಿವಿಗಳಲಿ ಕೇಶದಲಿ
ಜಿಗುಟು, ಜಿಡ್ಡು, ಕಸಕಡ್ಡಿ–
ಅಡ್ಡಾದಿಡ್ಡಿ
ಅಂಟುವಂತೆಸಗು !
ಇದಕಾರ ಅಡ್ಡಿ?
ಎಣ್ಣೆಮಜ್ಜನವೆ ಕಜ್ಜ,
ಹೇಳಿಹನು ಅಜ್ಜ !
ಸಾಗಲಿ ಎಣ್ಣೆ ಮಜ್ಜನ–
ಅನುದಿನ !
ಮೂಲಮೂರ್ತಿಯೆ ಮರೆಯಾಗಿ
ಮೂಲಶಿಲೆಯಂತಾಗಿ
ಆಕಾರವಳಿದು ನಿರಾಕಾರ ಉಳಿವಂತೆ
ಶಿಲ್ಪಿಯ ಅಲ್ಪತನವಳಿದು
ಅರ್ಚಕನ ದಿವ್ಯತೆಯ ಮೊಳೆವಂತೆ
ಎಣೆಯಿಲ್ಲದ ಎಣ್ಣೆಮಜ್ಜನ ಮಾಡು
ಮಾಡಿ ಕುಣಿದಾಡು !
ತಿಕ್ಕಿ ತೊಳೆದೀ ಈ ಜಿಡ್ಡ,
ಓ ಮಡ್ಡ !

ಮೂರ್ತಿಯ ಮಹಿಮೆಯೇ ಹೋದೀತು
ಆ ಜಿಡ್ಡಿನೊಡನೆ
ಗುಡಿದಾಟಿ ಗಡನೆ !
ಅದರ ಮೇಲೆಯೆ ಬಡಿ
ಹಿಡಿ ಹಿಡಿ
ಸಿಂಧೂರ, ಚಂದನ, ಕುಂಕುಮ !
ಏರಿಸು ಕರಿಕೆ, ಪತ್ರಿ, ಸುಮ !
ಸುಡು ದೀಪವ ಘಮ ಘಮ !
ಉರಿಸು ದೀಪವ ಚುಮ ಚುಮ !
ಜಿಡ್ಡಿಗೇ ಅಡ್ಡ ಬಿದ್ದು
ದಿಂಡುರುಳಿ ಎದ್ದು
ಬೇಡಿಕೋ ವರವ
ಮಿದುಳಿನ ಮಜ್ಜೆಗೇ ಎಣ್ಣೆ ಮಜ್ಜನಗೈವ
ಮಹಾವರವ !

* * *

ಪೀತಾಂಬರ

ಪ್ರೀತಿಯ ಪೀತಾಂಬರ ಕೆಡದಿರಲೆಂದು
ಪದರು ಪದರಾಗಿ ಮಡಿಚಿ
ರೇಶಿಮೆ ದಾರಸುತ್ತಿ ಕಟ್ಟಿ
ಕೇದಗೆಯ ಗರಿಯಿಟ್ಟು
ಧೂಪ ಧೂಮ್ರವ ಕೊಟ್ಟು
ಬಟ್ಟೆ ಹೊದಿಸಿದ ತೊಗಲ ಪೆಟ್ಟಿಗೆಯೊಳಿಟ್ಟೆ
ಬೀಗವ ಜಡಿದುಬಿಟ್ಟೆ
ಕಾಮಿನಿಯೆ !
ಹೊರಗಿನ ಮಿರಿಮಿರಿ ಮಿಂಚುವ ಅಂಚು
ಮಿಂಚುತ್ತಲೇ ಇದೆ
ಆದರೆ, ಒಳಗೆ ನಡೆದಿದೆ
ಒಳಗೆ ಮಡಿಕೆಗಳಲ್ಲಿ ನಡೆದಿದೆ

ಗೆದ್ದಲಿನ ಅದೃಶ್ಯಲೀಲೆ !
ನೂರು ವರ್ಷಗಳಾದರೂ ನನ್ನ ಪೀತಾಂಬರ
ಮಾಸದು, ಉಳಿವುದು ಆ ಚಂದ್ರ ತಾರಂಬರ
ಎಂಬಾಸೆಯಿರಿಸಿಕೊಂಡಿದ್ದ ಕಾಮಿನಿಯೆ
ನಿನಗರಿವಾಗುವ ಮೊದಲೇ
ಜರಡಿಯಾಗಿದೆಯಲ್ಲ ಜರದ ಪೀತಾಂಬರ !
ಮೇಲಿನ ಮೆರುಗನ್ನು ನಂಬಿ
ನೀನಿದನು ನಂಬದಿರಬಹುದು
ಆದರೆ,
ನಿಜವು ನಂಬಿಕೆಯಾಗಬಹುದಾದರೂ ನಂಬಿಕೆಯೆ ನಿಜವಲ್ಲ
ಗೆದ್ದಲಿಗೆ ರಜವಿಲ್ಲ
ನಿನ್ನ ನಿಜವನು ತಿಳಿಯೆ ನಿನಗೆ ಬಿಡುವಿಲ್ಲ !
ಆಗೊಮ್ಮೆ ಈಗೊಮ್ಮೆ
ಪೀತಾಂಬರದ ಮಡಿಕೆಗಳ ಬಿಚ್ಚಿ ಜಾಡಿಸಿ
ಸೂರ್ಯರಶ್ಮಿ ಸ್ನಾನಮಾಡಿಸಿ
ಮತ್ತೆ ಮಡಿಚಿ ಇಟ್ಟಿದ್ದರೆ
ನುಸಿಯ ಪಾಲಾಗುತ್ತಿರಲಿಲ್ಲ ಜೀನಿಯ ಬದುಕು
ಜರದ ಪೀತಾಂಬರ !
ಆದರೆ,
ಆಲಸ್ಯವೋ ಅಜ್ಞಾನವೋ ಅವಜ್ಞೆಯೋ ಅರಿಯೆ–
ಮಡಿಚಿ ಮುಚ್ಚಿಟ್ಟುಬಿಟ್ಟೆ
ಪೆಟ್ಟಿಗೆಯಲ್ಲಿ ಬಚ್ಚಿಟ್ಟುಬಿಟ್ಟೆ
ಗೆದ್ದಲಿಗೆ ಎಡೆಯಾಯ್ತು ಬಟ್ಟೆ !
'ಹುಚ್ಚಿ,
ಹುಳುತಿಂದರೇನಾಯಿತು?
ಪೀತಾಂಬರ ಪೀತಾಂಬರವೇ' ಎನ್ನುವಿಯಾ?
'ಹುಳುವಿಂದ ಬಂದ ರೇಶಿಮೆಯ
ಹುಳು ತಿಂದರೂ ಬೆಲೆ ತಗ್ಗದು' ಎನ್ನುವಿಯಾ?
ಇದು ಆತ್ಮವಂಚನೆ, ಕಾಮಿನಿಯೆ !
ಅರಿಯೆಯಾ–

ಛಿದ್ರವಿಲ್ಲದೆಯೆ ಛಿದ್ರಗಳ ತೋರುವ
ಛಿದ್ರಾನ್ವೇಷಕರಿಂದ ತುಂಬಿದೆ ತಿರೆ !
ರಂಧ್ರವಿದ್ದೂ ರಂಧ್ರ ತೋರಿಸದಿಹರೆ
ಆ ರುಂದ್ರ ರಂಧ್ರಾನ್ವೇಷಕರು ?
'ಈಗೇನ ಮಾಡಲಾಗುವುದು–
ಗೆಳತಿ, ಈಗೇನ ಮಾಡಲಾಗುವುದು?'
ಇನ್ನಾವ ಗತಿಯಿಹುದು.
ಬೇರಾವ ಪಥವಿಹುದು?'
ಸೂಜಿದಾರವ ಹಿಡಿದು
ಹೊಲಿದುಕೋ ಹರಿದುದನು
ಸರಿಪಡಿಸಿಕೊ ಸಾಧ್ಯವಿರುವಷ್ಟು !
ತೂತು ಬಿದ್ದುದಕಿಂತ ತೇಪೆ ಕೀಳಲ್ಲ
ಕಂಡು ಸರಿಪಡಿಸಿಕೊಂಡ ಹಾಳು ಹಾಳಲ್ಲ
ಒಳಗೆ ಹುಳುಕಿರೆ ಮೇಲೆ ಬೆಳಕು ಸಲ್ಲ
ಕೇಳೆನ್ನ ಸೊಲ್ಲ–
ತಿದ್ದಿಕೋ ಸಾಧ್ಯವಿರುವಷ್ಟು !
ಏನು ಫಲವೆನ್ನುವಿಯಾ?
ಇನ್ನೇನು ಫಲ?
ಇನ್ನಷ್ಟು ಹಾಳಾಗುವುದು ನಿಂತೀತು !
ಮೊದಲಿನ ಬೆಲೆ ಬರದಿದ್ದರೂ
ಬರುವಷ್ಟು ಬೆಲೆಯಾದರೂ ಬಂದೀತು !

* * *

ನೆನಪಿನ ಒನಪು

ನೆನಪು ಅಲೆಯುತಿತ್ತು ಮನದ
ವನದಿ ಅತ್ತ ಇತ್ತ
ಮರವೆಯುರದ ಮೇಲೆ ಮಿಣುಕು
ಬೆಳಕು ಚಿಮುಕಿಸುತ್ತ
ಯಾವ ನೆನಪೊ ಯಾರ ನೆನಪೊ
ಈಗ ಯಾಕೆ ಬಂತು?

ನುಡಿಯೆ, 'ಮರೆಯ ಬೇಡ, ಬೇಡ!'
ಎಂದು ಎದೆಯ ತಂತು !
ಅತ್ತ ಚಲಿಸೆ ಒಂದು ಬೆಳಕು
ಇತ್ತಲೊಂದು ಸೆಳಕು
ಯಾವ ಚಣವು ಹಾಕಲಿದೆಯೊ
ಈ ಎರಡಕೆ ತಳುಕು
ಮುಂದೆ ಬರುವ ಹಾಗೆ ತೋರಿ
ಹಿಂದೆ ಸರಿವ ಪಾಂಗು
ನಡೆನಡೆಯುತ ನಿಂತುದೇಕೆ
ಯಾವುದಿದರ ಗುಂಗು?
ನೆನಪಿನ ಹೆಗಲೇರಿ ನೆನಪು
ಬಂತು ಬೀರಿ ಒನಪು
ಮಿನುಮಿನುಗಿತು ಮಸುಕಾಯಿತು
ಮರೆಯಾಯಿತು ನೆನಪು !

* * *

ಹೇಗೆ ಸಾಗುವುದು ಹೇಳುವಿಯಾ?

ಬೇಗ ಬೇಗ ಸಾಗೆನ್ನುವಿ ಗೆಳೆಯಾ
ಹೇಗೆ ಸಾಗುವುದು ಹೇಳುವಿಯಾ?
ಒಡೆದ ಕನಸುಗಳ ಚೂರನು ತುಳಿದು
ರಕ್ತ ಬಸಿಯುತಿದೆ ಕಾಲಲ್ಲಿ
ಆದರ್ಶದ ಹರಿದರಿವೆಯ ತೇಪೆಯ
ಜೋಳಿಗೆ ಹಿಡಿದಿಹೆ ಕೈಯಲ್ಲಿ
ವಿಶ್ವಾಸದ ಈ ಊರುಗೋಲಿಗೂ
ಆಸರವೀಯುವ ಬಲವಿಲ್ಲ
ತಂದ ಬುತ್ತಿಯನು ತಿಂದು ಮುಗಿಸಿಹೆನು
ಮುಂದೆ ಗತಿಯು? ಶಿವನೇ ಬಲ್ಲ !

ಊರಿನ ಹೆಸರೇ ತಿಳಿಯದು ನನಗೆ
ದಾರಿಯನಾರನು ಕೇಳುವೆನು?
ಹೆಸರೇ ಇಲ್ಲದ ವ್ಯಸನ ಮನದಲಿ
ಯಾರಿಗೆ ವಿವರಿಸಿ ಹೇಳುವೆನು?
ದಣಿದಿದೆ ದೇಹ ದಣಿದಿದೆ ದೃಷ್ಟಿ
ಹೇಗೆ ಪಯಣವಿದ ತಾಳುವೆನು?
ಕೈಗಡ ಬಾಯ್ಗಡ ಎಲ್ಲ ಮುಗಿದುವು
ಎಲ್ಲಿ ತರಲಿ ಹೊಸ ಸಾಲವನು?
ಅರಿದಿಹೆನೆಂಬುವ ಮರವೆಯ ಮಬ್ಬು
ಆವರಿಸಿರುವುದು ಅಯನವನು
ಕಂಡಿಹೆನೆಂಬುವ ಕಳ್ಳಿಯ ಹಾಲಿದೊ
ಕುರುಡುಗೊಳಿಸಿಹುದು ನಯನವನು
ಗೊತ್ತೇ ಇಲ್ಲದ ಗೊತ್ತುಗುರಿಗಳು
ಕುಂಠಿತಗೊಳಿಸಿವೆ ಪಯಣವನು
ಬತ್ತಿಯೆ ಇಲ್ಲದ ಮೇಣಬತ್ತಿಯಿದೆ !
ಏನು ಮಾಡಲೀ ಮಯಣವನು?
ಬೇಗ ಬೇಗ ಸಾಗೆನ್ನುವಿ ಗೆಳೆಯಾ
ಹೇಗೆ ಸಾಗುವುದು ಹೇಳುವಿಯಾ?

* * *

ಹಸಿರು ಹರಿದು ಬಂತು !

ಹಸಿರು ಹರಿದು ಬಂತು–
ಕೊಡಗಿನಲ್ಲಿ ಇಂತು !
ಬೆಟ್ಟದಿಂದ ಕೆಳಗೆ ಉರುಳಿ
ಘಟ್ಟದಲ್ಲಿ ತೆವಳಿ
ಬೆಟ್ಟನೇರಿ ಕಣಿವೆಗಿಳಿದು
ಬಂಡೆಗಳಲಿ ನುಸುಳಿ

ಅತ್ತಣಿಂದ ಇತ್ತಣಿಂದ
ಎತ್ತಣಿಂದ ಬಂತು
ಹಸಿರು ಹರಿದು ಬಂತು–
ಕೊಡಗಿನಲ್ಲಿ ಇಂತು !
ಮರ ಮರಗಳ ನರಗಳಲ್ಲಿ
ರಕ್ತವಾಗಿ ಹರಿದು
ಲತೆ ಲತೆಗಳ ತ್ವಚಗಳಲ್ಲಿ
ಹಚ್ಚೆ ಚಿತ್ರ ಬರೆದು
ಚಿತ್ತ ಬಂದ ಹಾಗೆ ಸುತ್ತಿ
ಮತ್ತೆ ಮರಳಿ ಬಂತು
ಹಸಿರು ಹರಿದು ಬಂತು–
ಕೊಡಗಿನಲ್ಲಿ ಇಂತು !
ಕಾಫಿ ತೋಟದಲ್ಲಿ ಚಲಿಸಿ
ಕಿತ್ತಳೆ ಮರ ಬಳಸಿ
ಏಲಕ್ಕಿಯ ಆಲಂಗಿಸಿ
ಬತ್ತದ ಮೈ ತೊಳೆಸಿ
ಕಾವೇರಿಗೆ ಕೈಮುಗಿದು
ಕಾಣ್ಕೆಯಿತ್ತು ಬಂತು
ಹಸಿರು ಹರಿದು ಬಂತು–
ಕೊಡಗಿನಲ್ಲಿ ಇಂತು !
ಹಸಿರನ್ನೇ ಉಸಿರಾಡಿಸಿ
ಹಸಿರನುಟ್ಟು ತೊಟ್ಟು
ಹಸಿರಕೊಂಡು ಹಸಿರನುಂಡು
ಹಸಿರನು ಹಣೆಗಿಟ್ಟು
ಹಸಿರ ಬಸಿರನಾಂತ ಮಲೆಗೆ
ನೆಲಕೆ ಜಲಕೆ ಬಂತು
ಹಸಿರು ಹರಿದು ಬಂತು–
ಕೊಡಗಿನಲ್ಲಿ ಇಂತು !

ಹಚ್ಚಹಸಿರು ಪಚ್ಚೆ ಹಸಿರು
ಗಿಳಿಯ ತಿಳಿಯ ಹಸಿರು
ಅಚ್ಚ ಹಸಿರು ಸ್ವಚ್ಛ ಹಸಿರು
ಎಳೆಯ ಹಸುಳೆ–ಹಸಿರು
ಹಲವು ಬಗೆಯ ಹಸಿರು ಮೂಲ
ಕೊಸರಿಕೊಂಡು ಬಂತು
ಹಸಿರು ಹರಿದು ಬಂತು–
ಕೊಡಗಿನಲ್ಲಿ ಇಂತು !
ಚರಿಸದ ಹುಲ್ಲಿನಲಿ ಚರಿಸಿ
ಹರಿಯದಂತೆ ಹರಿದು
ನಿದ್ದೆಯಿಂದ ಎದ್ದಹಾಗೆ
ಎದ್ದು ಮೈಯ ಮುರಿದು
ಒನಪಿನಿಂದ ಕೊಂಕಿನಿಂದ
ಬಿಂಕದಿಂದ ಬಂತು
ಹಸಿರು ಹರಿದು ಬಂತು
ಕೊಡಗಿನಲ್ಲಿ ಇಂತು !

* * *

ಮೊರೆ

ಉರಿಯಲಿಲ್ಲ ಆರಲಿಲ್ಲ
ಬಾಳ ಹಣತೆ ಹೇ ಪ್ರಭೋ !
ಬತ್ತಲಿಲ್ಲ ತುಂಬಲಿಲ್ಲ
ಬಾಳ ಒರತೆ ಹೇ ವಿಭೋ !
ಅರಳಲಿಲ್ಲ ಉರುಳಲಿಲ್ಲ
ಬಾಳ ಹೂವು ಹೇ ಪ್ರಭೋ !
ಮುಳುಗಲಿಲ್ಲ ತೇಲಲಿಲ್ಲ
ಬಾಳ ನಾವೆ ಹೇ ವಿಭೋ !

ಏಳಲೇಕೆ ಬೀಳಲೇಕೆ
ಬಾಳಲೇಕೆ ಈ ತೆರ?
ಗೊಳಮೊಟ್ಟೆಯಿಟ್ಟು ಬಂತು
ಬಾಳ ಮರಿಗೆ ಬೇಸರ !
ಇರವಿಗೊಂದು ಗುರಿಯ ತೋರು
ಇದನೆ ಬೇಡಿಕೊಳ್ಳುವೆ !
ಬದುಕಿಗೊಂದು ಅರ್ಥ ತೋರು
ಅದನೆ ಹಾಡಿಕೊಳ್ಳುವೆ !

* * *

ಬದುಕಗೊಡಿ, ನನ್ನನೂ ಬದುಕಗೊಡಿರಿ !

ಬದುಕಗೊಡಿ ನನ್ನನೂ
ಬದುಕಗೊಡಿರಿ !
ಬದುಕುವಧಿಕಾರವನು
ಮಾತ್ರಕೊಡಿರಿ
ಬದುಕಗೊಡಿ, ನನ್ನನೂ ಬದುಕ ಗೊಡಿರಿ !

ಘಟನೆ ನೀಡುವ ಮೂಲಭೂತ ಹಕ್ಕುಗಳಲ್ಲ
ನಟನೆ ನೀಡುವ ದಾನದಯೆಯ ಬಿಕ್ಕೆಗಳಲ್ಲ
ಜೀವಿಸುವ ಹಕ್ಕನ್ನು ಮಾತ್ರ ಕೊಡಿರಿ
ನನ್ನಗೋಜಿಗೆ ನನ್ನ ಬಿಟ್ಟು ಬಿಡಿರಿ
ಬದುಕಗೊಡಿ ನನ್ನನೂ ಬದುಕಗೊಡಿರಿ !

ಓಟು ನೀಡುವ ಹಕ್ಕು ಏಟು ಹಾಕುವ ಹಕ್ಕು
ಬಾಯ್ಗೆ ಬಂದದ್ದನ್ನೆ ಬೊಗಳುವಾ ಹಕ್ಕು
ಎಲ್ಲ ಹಕ್ಕುಗಳನ್ನು ನೀವೆ ದಕ್ಕಿಸಿಕೊಳಿರಿ
ನನಗೆ ಬದುಕುವ ಹಕ್ಕು ಮಾತ್ರ ಕೊಡಿರಿ
ಬದುಕುಗೊಡಿ, ನನ್ನನೂ ಬದುಕಗೊಡಿರಿ !

ನಿಮ್ಮ ರಾಗವು ಬೇಡ ನನ್ನದೆಯ ಹಾಡಿಗೆ
ಬಿಟ್ಟು ಬಿಡಿ ನನ್ನನ್ನು ನನ್ನಗತಿ, ಪಾಡಿಗೆ
ನಿಮ್ಮ ಘನತತ್ವಗಳ ನೀವೆ ಜೀರ್ಣಿಸಿಕೊಳಿರಿ
ನನಗೆ ಬದುಕುವ ಭಾಗ್ಯ ಮಾತ್ರಕೊಡಿರಿ
ಬದುಕಗೊಡಿ ನನ್ನನೂ ಬದುಕಗೊಡಿರಿ !

ಬೇಕಿಲ್ಲ ಸಿರಿಸೊಗದ ಸುರುಕುಗಳು ನನಗೆ
ಸಾಕಿಷ್ಟು ಒಣ–ರೊಟ್ಟಿ ಮುರುಕುಗಳು ನನಗೆ
ನಿಮ್ಮ ಕಪಿಮುಷ್ಟಿಯನು ಮಾತ್ರ ಬಿಡಿರಿ
ನನ್ನ ನಿರ್ಣಯ ನನಗೆ ಬಿಟ್ಟು ಕೊಡಿರಿ
ಬದುಕಗೊಡಿ ನನ್ನನೂ ಬದುಕಗೊಡಿರಿ !

ಬೇಡ ನೀವೀಯುವಾ ಸ್ವರ್ಗದ ಟಿಕೆಟ್ಟು
ಪರಲೋಕದಲಿ ಪದವಿಪಡೆವ ಪರ್ಮಿಟ್ಟು
ಇಲ್ಲಿ ನನ್ನಿಷ್ಟದೊಲು ಇರಲು ಬಿಡಿರಿ
ಕುಣಿಯಬೇಡಿರಿ ನೀವು ನನ್ನಮೇಲಡರಿ
ಬದುಕಗೊಡಿ ನನ್ನನೂ ಬದುಕಗೊಡಿರಿ!

* * *

ನಿಂತು ಮುಂದೆ ಸಾಗು !*

ನಿಂತು ಮುಂದೆ ಸಾಗು–
ತಡೆದು ಮುಂದೆ ಹೋಗು !
ಏಕೆ?
ಎಲ್ಲಿಂದಲೋ ಬಂದೆ–
ಏನಿದೆಯೊ ಮುಂದೆ !
ಏರುದಾರಿ ಜಾರುದಾರಿ
ಕಾಲುದಾರಿ ಕವಲುದಾರಿ
ಹೆದ್ದಾರಿ ಹಾವುದಾರಿ
ಲೆವೆಲ್ ಕ್ರಾಸಿಂಗ್, ಹೇರಪಿನ್ ಬೆಂಡ್

ಇಲ್ಲವೆ ಡೆಡ್ ಎಂಡ್–
ಏನಿದೆಯೊ ಮುಂದೆ
ಇದೇ ಮೊದಲ ಸಲ ಬಂದೆ
ಈ ದಾರಿಗೆ !
ಗೊತ್ತಿದೆಯೆ ಹೊರಟದ್ದು
ಯಾವ ಊರಿಗೆ?
ನಿಲ್ಲೆನ್ನುತಿದೆ ಕಲ್ಲು
ಕೇಳು ಹಲಗೆಯ ಸೊಲ್ಲು
ನಾಯಿ ಸಹ ಜೊತೆಗಿಲ್ಲ
ಒಬ್ಬನೇ ಉಳಿದೆಯಲ್ಲ!
ನಿಂತು ಮುಂದೆ ಸಾಗು
ತಡೆದು ಮುಂದೆ ಹೋಗು !
ಏಕೆ ಅವಸರ?
ಯಾಕೆ ತರಹರ?
ಯಾರು ಕಾದಿಹರು ನಿನಗಾಗಿ?
ಈಗಲೂ ನೀ ವಿಯೋಗಿ?
ಆ ಮಿಲನ, ಆ ಸಹಜೀವನ
ಎಲ್ಲ ಕರಗಿದುವೆ ಕನಸಾಗಿ?
ಮತ್ತಾವ ಮಿಲನ
ಆಗಿ ಪ್ರೇಮದ ಕವನ
ಇತ್ತಿದೆ ಔತಣ?
ಇತ್ತರೆ ಈಯಲಿ
ತುಸು ದಾರಿ ಕಾಯಲಿ
ಸಾವಧಾನಿಯಾಗು
ನಿಂತು ಮುಂದೆ ಸಾಗು
ತಡೆದು ಮುಂದೆ ಹೋಗು !

---

* Halt and Proceed ಹಲಗೆ ನೋಡಿ

ಬಂದಿತ್ತೆ ಕರೆಯೊಲೆ? ಕೇಬಲ್ಲು?
ಬಂದಿತ್ತೆ ದೂರ್ವಾಣಿ ಸಂದೇಶ? ಸಿಗ್ನಲ್ಲು
ಮಾರುತ್ತರ ವಿತ್ತಿಹೆಯ?
ವಿಳಾಸ ಸರಿಯಾಗಿ ಬರೆದೆಯ?
ಅಂಚೆ ಚೀಟಿಗಳ ಅಂಟಿಸುವುದು ಮರೆತಿಲ್ಲ ತಾನೆ?
ಉತ್ತರ ಜೋಬಿನಲ್ಲಿಯೇ ಉಳಿದಿಲ್ಲ ತಾನೇ?
ಯಾರ ಕೈಯಲ್ಲಿ ಕೊಟ್ಟಿದ್ದೆ
ಅಂಚೆ ಪೆಟ್ಟಿಗೆಗೆ ಹಾಕಲು
ಲೇಟ್ ಫೀ ಕೊಟ್ಟು
ರೈಲು ಡಬ್ಬಿಯಲೆ ನೂಕಲು?
        ಕ್ಲಾಸ್ ಫೋರ್ ಆಫೀಸರ ಕೈಯಲ್ಲಿಯೇ?
        ಸರಿ ಹೋಯಿತು !
ಅದೂ ನೆನಪಿಲ್ಲವೇ?
ಪೂರ್ತಿ ಸರಿಹೋಯಿತು !
        ಕುಳಿತುಕೋ ಸ್ವಲ್ಪ
        ಮಾಡಿಕೋ ನೆನಪು
ಜಾಗರೂಕನಾಗು
ನಿಂತು ಮುಂದೆ ಸಾಗು !
ಹೊತ್ತಿರಲಿಕೆ ಊರಿಗೆ ಸೇರೋ
ಕತ್ತಲಾದ ಮೇಲೆ ಕೇಳುವವರಾರೋ?' ಎಂಬೆಯಾ?
        ಕತ್ತಲೆಯಲೆ ಹುಟ್ಟಿದವಗೆ
        ಕತ್ತಲೆಯ ಭಯವೇಕಣ್ಣ?
ಕತ್ತಲೆಯಲಿ ಹೇಗೋ ಪಾರಾಗಬಹುದು
ಬೆಳಕಿನಲೇ ಭಯವಣ್ಣ !
ಕಾಕದೃಷ್ಟಿಗಳ ಭಯವಿಲ್ಲ ಕತ್ತಲೆಯಲ್ಲಿ
ನೂರು ಬಿರುನೋಟಗಳು ಬೆಂಬೆತ್ತುವುವು ಬೆಳಕಿನಲ್ಲಿ !
ಕತ್ತಲೆಯ ಪರದೆಯಲಿ ಕಾಣದಾಗುವುವಲ್ತೆ
ಕುರೂಪ ಸುರೂಪದ ಭೇದ, ವರ್ಣ ಭೇದ?
ಕತ್ತಲೆಯ ಮುಸುಕಿನಲಿ ಮುಚ್ಚಿ ಹೋಗುವುವಲ್ತೆ

ಆಳು ಅರಸರ ಭೇದ, ವರ್ಗ ಭೇದ ?
ಹೊತ್ತು ಮುಳುಗಿದರೆ ಮುಳುಗಲಿ
ಕತ್ತಲಾದರೆ ಆಗಲಿ
ನಿಂತು ಮುಂದೆ ಹೋಗು
ತಡೆದು ಮುಂದೆ ಸಾಗು !
ಆಗದೆ? ಅವಸರವೆ?
ಅವಸರ, ಅವಸರ, ಇನ್ನೂ ಅವಸರ !
ತ್ವರೆ, ತ್ವರೆ, ಇನ್ನೂ ತ್ವರೆ !
ವೇಗ, ವೇಗ, ಇನ್ನೂ ವೇಗ–
ಬೇಗ, ಬೇಗ, ಬೇಗ !
ಏಕೆ?
ವೇಗವೇ ಪ್ರಗತಿಯ ಮಾನದಂಡವೆಂಬೆಯಾ?
ತ್ವರಿತಗತಿಯಿಂದಲೇ ಸದ್ಗತಿಯೆಂಬೆಯಾ?
ಸ್ವರ್ಗಕ್ಕೇರಲು ಸಾಸಿರ ವರ್ಷ ಬೇಕು
ನರಕಕ್ಕಿಳಿಯಲು ನಿಮಿಷ ಮಾತ್ರ ಸಾಕು
ಮೇಲೇರುವುದು ತಡ
ಕೆಳಗಿಳಿಯಬಹುದು ಬಡಬಡ
ಈ ವೇಗ ಉನ್ನತಿಯ ಅಳತೆಗೋಲೆ?
ಮೇಲೇರಿಕೆಗಿಂತ ಕೆಳಗಿಳುವುದೆ ಮೇಲೆ?
'ವೇಗವಾಗಿ ಹೋಗು–
ನಿಲ್ಲದಿರು ಸಾಗು.' ಎಂಬೆ–
ನಾನೊಂದ ಬೆಸಗೊಂಬೆ–
ಬೇಗ ಹೋಗಿ ಹೊತ್ತು ಉಳಿಸಿ
ಮಾಡುವುದಾದರೂ ಏನು?
ಎಲೆಯಾಟವೊ ಕಾಕ್‌ಟೇಲೋ
ರೇಸ್‌ಕೋರ್ಸ್ ಪ್ಲಾ ನು?
ಇಲ್ಲಿವೆ–
ಬಂದ್ ಭಾರತ ವಾಚನ
ಫೇರಾವ್ ರಾಮಾಯಣ ಪಾರಾಯಣ

ಧರನೋಪ ನಿಷದ್ ವ್ಯಾಖ್ಯಾನ–
ಇವಕಾಗಿಯೆ ಈ ವೇಗ?
ಉಳಿದುವುಕೆಲ್ಲಿದೆ ಜಾಗ?
ಕೇಳದಿರು ಕಲ್ಲಕೂಗ
ತೊರೆಯದಿರು ವೇಗಯೋಗ
ಇನ್ನೂ ತ್ವರಿತಗೊಳಿಸು ವೇಗ–
ಬೇಗ, ಬೇಗ, ಬೇಗ !

* * *

ಸಹೃದಯನಿಗೆ

ಬಾಳ ಬೆತ್ತಲೆ ಚಿತ್ರ ಬಯಸಬೇಡ,
ಚಂದಿರನ ಹಿಂಬದಿಯ ನೋಡಬೇಡ–
ಸಹೃದಯ ನೋಡಬೇಡ !
ಮಣ್ಣ ಮೈಯಿಂದಾಯ್ದು
ಚಿನ್ನದೆಳೆಗಳ ನೆಯ್ದು
ಕೃತಕೃತ್ಯವಾಗುವುದು ಕವಿಯ ಕೈವಾಡ
ಮಣ್ಣೆ ಬೇಕೆಂದವನ ಕಾಡಬೇಡ–
ಸಹೃದಯ ಕಾಡಬೇಡ !
ನೆರೆ ಬಂದ ತೊರೆಯಿಂದ
ಗೊಡಗು ನೀರನು ತಂದು
ಸೋಸದೆಯೆ ಕುಡಿಯುವುದೆ? ಬೇಡ, ಬೇಡ?
ರಾಡಿಯೇ ಬೇಕೆಂದು ಕಾಡಬೇಡ–
ಸಹೃದಯ ಕಾಡಬೇಡ !
ಸೋಗೆಯನು ಮುರಿದೊಗೆದು
ಸಿಗುರುಗಳ ಕಳೆದೊಗೆದು
ಕಬ್ಬಿನಚ್ಚನು ನೀಡೆ ದೂರಬೇಡ
ಸೋಗೆಯೇ ಬೇಕೆಂದು ಕಾಡಬೇಡ
ಸಹೃದಯ ಕಾಡಬೇಡ !

* * *

ಕೆಮ್ಮಣ್ಣ ಗುಂಡಿ

ಕೆಮ್ಮಣ್ಣ ಗುಂಡಿ
ಸ್ವರ್ಗಕ್ಕೆ ಕಿಂಡಿ !
ವರ್ಣ ವರ್ಣಗಳ ಪರ್ಣ ಪರ್ಣದಲಿ
ಸ್ವರ್ಣ ಕಿರಣಗಳು ಸುಳಿದಾಗ
ಕಾಡಿನ ಹೂಗಳ ಕೆನ್ನೆಗಳಿಗೆ ಉಷೆ
ಹೊಂಬಿಸಿಲರಸಿನ ಬಳಿದಾಗ
ಜುಳು ಜುಳು ಹರಿಯುತ ಕುಲು ಕುಲು ನಗುತ
ಹರಿ ನೀರ್ ಹೊನ್ನೊಲು ಹೊಳೆದಾಗ
ಮರಕತ ಹುಲ್ಲಿಗೆ ಮುತ್ತಿನ ಅಂಗಿ
ರತ್ನದ ಟೊಪ್ಪಿಗೆ ದೊರೆತಾಗ
ಕುಂಕುಮ ಮಣ್ಣಲಿ ಕುಸುಮಗಂಧಮಯ
ಬಿಂದುಗಳಳಿಯುತ ಬೆರೆತಾಗ
ಹಕ್ಕಿಯ ಹೊತ್ತಿಹ ಮರಗಳೆ ಹಕ್ಕಿಯ
ಹಾಡ ಕೇಳಿ ಮೈಮರೆತಾಗ
ಮಂದ ಮಂದ ಸೌಗಂಧವಾಹನನು
ಸೋಂಕಿಗೊಮ್ಮೆ ಸೊಗವಿತ್ತಾಗ
ಶಾಂತಿಕರನು ಬಹು ಚಿಂತೆಯ ಎದೆಯನು
ನಲವು–ನೇಗಿಲಲಿ ಉತ್ತಾಗ
ಜಡತೆಯ ಜಾಡಿಸಿ ಅಲಸಿಕೆಯೋಡಿಸಿ
ಕವಿತೆಗೆ ಕವಿ ಮನ ತೆತ್ತಾಗ
*ಹಗ್ಗ– ಹಾದಿಯಲಿ ಹೊರಟ ತೊಟ್ಟಿಲಲಿ
ಅದಿರಿನೆದೆಯು ಬೆದರಿರುವಾಗ
ಮಲೆಯ ಹಟ್ಟಿಯಲಿ ಮೋಡದ ಕುರಿಗಳು
ಅತ್ತ ಇತ್ತ ಚೆದುರಿರುವಾಗ
ನೋಟದ ಸಿಂಪು ತೃಪ್ತಿಯ ಮುತ್ತನು
ತನಗೆ ತಾನೆ ಉದುರಿಸುವಾಗ

---

* Rope-Way

ಬಾನಿನ ನೀಲಿಯ ವಿಜಲ ಸರಸಿಯಲಿ
ಬೆಳಕಿನ ನಳಿನವು ಬಿರಿದಾಗ
ಮೈಯಿಂದಿಳಿದು ಮನಸಿನ ಮೇಲೆ
ಜೊನ್ನದ ಜೇನ್ಮಳೆ ಸುರಿದಾಗ
ಮರಗಳ ಕೊರಳನು ಸುಸ್ವರಗೊಳಿಸಿ
ಕಾಣದ ಕೋಗಿಲೆ ಕರೆದಾಗ
ಕೆಮ್ಮಣ್ಣ ಗುಂಡಿ–
ಸ್ವರ್ಗಕ್ಕೆ ಕಿಂಡಿ !

* * *

ಕವಿ ರವಿ

ಮಂದಾಕಿನೀ ತಟದಿ ಹುಟ್ಟಿ ಹಿಮಗಿರಿ ಮೆಟ್ಟಿ
ಕಾವ್ಯ ಜಾಹ್ನವಿಯಾಗಿ ಹರಿದು ಹೋದೆ
ಮೂಡಣದಿ ಹುಟ್ಟಿ ಪಡುವಣವ ಸುತ್ತಿ
ಪೊಡವಿಗೇ ತೊಡವಾಗಿ ಮೆರೆದು ಹೋದೆ
ನಿನ್ನ ಮೋಡಿಯ ಗೂಢವೇನಿಹುದೊ ಗುರುದೇವ
ಒಮ್ಮೆಗೇ ವಿಶ್ವಜಿತುವಾಗಿ ಹೊಳೆದೆ
ಕವಿರವಿಯ ಕಿರಣಗಳೆ ಹರಣವಾದುವು ಜನಕೆ
ಲೋಗರೆದೆ ಕವಿದಿದ್ದ ಕತ್ತಲೆಯ ಕಳೆದೆ
ಎಚ್ಚತ್ತ ಭಾರತದ ಉಚ್ಚಸ್ವರ ನೀನಾದೆ
ಕಂಗೆಟ್ಟ ಮನುಕುಲದ ಎದೆಯ ದನಿಯಾದೆ
ಪಾಶವೀಬಲದೆದುರು ಮಂಡೆಯೂರದ ಧೃತಿಯ
ಶ್ರುತಿಯಾದೆ, ಸ್ವಾತಂತ್ರ್ಯಸಿಂಹದ್ವನಿಯಾದೆ
ಅಡ್ಡಗೋಡೆಗಳನ್ನು ಕೆಡಹಿ ಮಾನವಕುಲಕೆ
ಮರ್ತ್ಯಲೋಕದ ಮಹಾಮನೆಯ ಕಟ್ಟಿ
ವಿಶ್ವಮಾನವರನ್ನು ನೋಡಲೆಳಸಿದೆ ಅಲ್ಲಿ
ಬಹುದೂರ ಹರಿದಿತ್ತು ನಿನ್ನ ದಿಟ್ಟಿ

ಹೋದುದೇ ಹೆದ್ದಾರಿಯಾಯ್ತು ನೀ ಶಿಕ್ಷಣದಿ
ಸಾಹಿತ್ಯಸಂಗೀತ ಚಿತ್ರಕಲೆಗಳಲಿ
ಇಂದಿಗೂ ನಿನದಿಸುತಲಿಹುದು ನಿನ್ನಯ ದನಿಯು
ಬಂಗಾಲಕೊಲ್ಲಿ, ಜಾಹ್ನವಿಯ ಅಲೆಗಳಲಿ
ತೊಡೆಯೆಮ್ಮಾ ಭಾವನೆಯ ಬರಡುತನವನು ಗುರುವೆ
ಕಳೆಯೆಮ್ಮ ಕಲ್ಪನೆಯ ಕೊರಡುತನವ
ಕವಿರವಿಯು ಅಸ್ತಮಿಸೆ ಕೃತ್ತಿರವಿಯು ಮುಳುಗುವನೆ?
ಬೆಳಗು ಬಾ ನರಮತಿಯ ಕಾಳುತನವ !

* * *

ಕುರುಡಿ

ಏ ಕುರುಡಿ
ಏಕೆ ಹಿಡಿದಿರುವೆ ತಕ್ಕಡಿ?
ಕಾಣುವುವೆ ಇಕ್ಕೆಲದ ಪರಡಿ?
ತೂಗುತಿಹೆ ಕಾಣದ ಸರಕ–
ಏನಿದು ಕುರುಡಿನ ಗರಡಿ !

ತೂಕಕಿಟ್ಟುದ ತೆಗೆದು
ಮತ್ತೊಂದನಿಟ್ಟರೂ
ಕಾಣಿಸದು ನಿನಗೆ?
ಕರಿಮಣ್ಣನೇ ಇಟ್ಟು
ಕಸ್ತೂರಿಯೆಂದರೆ
ಪ್ರಮಾಣಿಸುವಿ ಹೇಗೆ?

ವೀಸೆ ಕಲ್ಲನು ತೆಗೆದು
ಕೆ. ಜಿ. ಕಲ್ಲಿಟ್ಟರೂ
ತಿಳಿಯುವುದೆ ನಿನಗೆ?
ತೂಗಿರುವ ವಸ್ತುವನೆ
ಮತ್ತೆ ತೂಕಕ್ಕಿರಿಸೆ
ಅರಿವಾಗುವುದೆ, ಎಲೆಗೆ?

ತೂಗುತಲೆ ಬಂದಿರುವೆ ಯುಗ ಯುಗದಿ !

ಮಾಡಿರುವರಾರು ನಿನ್ನ ತೂಕವ ನಿಗದಿ?
ಒಪ್ಪುತಲೆ ಬಂದಿಹೆವು ನಿನ್ನ ತೂಕವ ನಾವು
ಚೌಕಶಿಯ ಮಾಡದಲೆ ! ಬೆಲ್ಲವೆಂದಿತ್ತೆ ಬೇವು !

ತೂಕಸರಿಯಿಲ್ಲೆನುವ ಕೆಚ್ಚ ತೋರಿದ ಕಲಿಗೆ
ಸಾಮಾನೆ ಸಿಗದಾಯ್ತು,
ಉಪವಾಸ ಗತಿಯಾಯ್ತು !

ಹೌದಪ್ಪಗಳ ಚಾವಡಿಯಲ್ಲಿ ಹೌದಪ್ಪ
ಅಲ್ಲಪ್ಪಗಳ ಚಾವಡಿಯಲ್ಲಿ ಅಲ್ಲಪ್ಪ
ಇಂಥವನಿದ್ದರೂ ಬೆಪ್ಪ
ಎಲ್ಲ ಸರಿಹೋಯ್ತು
ಸಿಕ್ಕಷ್ಟೆ ವರವಾಯ್ತು !
ತೂಗುತ್ತಲೇ ಸಾಗು
ತಿಳಿದಂತೆ ತೂಗು
ಏ ಕುರುಡಿ ಕುಕ್ಕಾರಿ !

ಎಂದು ಬರುವಳೊ ನಿನ್ನ
ಕೈಯ ತಕ್ಕಡಿಯನ್ನ
ಕಸಿದು ತೂಗುವ ಕಣ್ಣುಳ್ಳ ಗೌರಿ !

* * *

ಯಾರೋ ಹೇಳಿದರು?

ಯಾರೋ ಹೇಳಿದರು?
ಹೇಳಿದ್ದಾರು !
ಹೇಳ್ದೇನ್ ಮಾಡ್ಯಾರು?
ಹೇಳೋರ್ದೇನ್ ಹೋಗತೈತಿ ಗಂಟು?
ನಾನೂ ಹೇಳಲೇನ್ ಅವರ ಬಗ್ಗೆ ನೂರೆಂಟು?
ಸುಮ್ಮ ಸುಮ್ಮ ಹುಟ್ಟಿಸಿಕೊಂಡು ನಂಟು
ಬಂದು ಹೊಡೀತಾರೆ ಪಂಟು !
ಯಾರೋ ಹೇಳಿದರಂತೆ !

ಹೇಳ್ದೇನ್ ಮಾಡ್ತಾರ ?
ಕಿವಿಗೊಡೋವ್ರು ಇರ್ತಾರಂತ
ಹೇಳೋವ್ರು ಹುಟ್ತಾರ !
ಮಹಾತ್ಮಾಗಾಂಧಿ ಮೆಚ್ಚಿದ್ದ ಮಂಗನ್ನ ತಂದಿಡ್ತೀನಿ
ಮನ್ಯಾಗಿನ್ನು
ಅದರ್ಹಂಗ ಕಿವಿಯಾಗ ಬೊಟ್ಟಿಟ್ಕೊಂಡು
ಮರೀರಿ ಮಂದಿ ಹೇಳೋದನ್ನು !
ಸುಖವಾಗಿ ಸಾಗಬಾರ್ದು ಯಾರ್ದೂ ಸಂಸಾರ
ಈ ಪರಪಂಚದಾಗ
ಬಸವಣ್ಣನ ಮೂಗಿನಾಗ ಬೊಟ್ಟು
ನಡೀಬೇಕು ಹೀಗs!
ನಮ್ಮಷ್ಟಕ್ಕ ನಾವು ಹಾಯಾಗಿದ್ರೆ
ಇವರಿಗ್ಯಾಕ ಹೊಟ್ಟಿ ಉರಿಬೇಕು?
ಇವರ ಹರಕಿ ಸಲ್ಲೋಕೆ
ನಮ್ದೆ ಕುರೀ ಬೇಕು?
ಇವರ ಮಸಾಲೆ ಕಡುಬಿಗೆ
ನಮ್ಮ್ ತೆಂಗಿನತುರೀ ಬೇಕು?
ಎಲ್ಲಾರೂ ತಮತಮದ್ನs ನೆನಪಿಟ್ಟು
ಮಂದೀದನ್ನ ಮರೀಬೇಕು !
ಯಾರೋ ಹೇಳಿದ್ರಂತೆ–
ಹೇಳ್ದೇನ್ ಮಾಡ್ತಾರ?
ಎಲ್ಲಾ ಕಾಲದಾಗೂ
ಇಂಥೋವ್ರು ಇದ್ದೇ ಇರ್ತಾರ !
ರಾಮನ ಕಾಲದ ಅಗಸನಿಂದ
ಈ ಊರ ಮಜ್ಜಿಗಿ ಮುದುಕಿವರೆಗೂ
ಹುಟ್ತಾನೇ ಬಂದಾರ
ಒಮ್ಮೊಮ್ಮೆ ಒಂದೊಂದು ತರ

ಸುದ್ದಿ ಸೂರಕ್ಕಗಳು
ಚಾಡಿ ಚೌಡಪ್ಪಗಳು
ಇವರೆಂಥ ಸರದಾರರು–
ಇನ್ನೊಬ್ರ ಸುಖದ ದರೋಡೆಖೋರರು !

* * *

ಎಷ್ಟು ಜನರ ಸಂತೋಷಾ ಬಲಿ ಕೊಂಡಿ
ಎಲೆಲೇ ಚಾಡಿಯ ಚೇಳಿನ ಕೊಂಡಿ?
ನಿನ್ನ ಬಸುರು ಮಾಡೋ ಮಿಂಡ
ಇನ್ನೂ ಹುಟ್ಟಿಲ್ಲೇನಲೆ ಚಂಡಿ?
ನೀನೂ ಲೂಪ್ ಹಾಕ್ಕೊಂಡೀಯೇನು ಮತ್ತೆ
ಇನ್ನೂ ಅದನ್ನ ಅರಿಯದಿದ್ದಾಗ ಜಗತ್ತೆ?
ಚುಚ್ಚು ಚುಚ್ಚು ಕೊಂಡೀನ
ಕಚ್ಚು ಕಚ್ಚು ಮಂದೀನ !
ನಿನ್ನ ವಿಷಾ ನಿನಗ ಏರಿ
ನಿನ್ನ ಪ್ರಾಣಾನೇ ಹೀರಿ
ತೂರೋ ವರೆಗೂ ಕಚ್ಚು
ನಿನಗ ಕಚ್ಚೋದೇ ಮೆಚ್ಚು !

* * *

ಯಾರೋ ಹೇಳಿದ್ರು–
ಯಾರೋ ಅಂದ್ರು !
ಅವ್ನಂದ, ನಾನಂದೆ, ನೀನಂದಿ–
ಆದ್ದೆಲ್ಲ ನಿಂದೆಗೆ ತಾಯಿ ತಂದಿ !
ಹಡದದ್ದು ಕಂದ ಅಲ್ಲ–ಹಂದಿ !
'ಏ, ಖಬರದಾರ್,
ಹಂದಿ ಅಂತಾ ಇನ್ನೊಮ್ಮೆ ಅಂದೀ !'
'ಆಗ್ಲೆಪೋ ಆಗ್ಲಿ–
ಮೆಚ್ಚಿದೋರ್ಗೆ ಮುದ್ದಲ್ವೆ ಹಂದಿ?

ಆದರೆ ಇದು ಹೊಲಸು ತಿನ್ನೋ ಹಂದಿಯಲ್ಲ–
ಹೊಲಸು ಮಾಡೋ ಹಂದಿ !
ಮ್ಯಾಲಕ ಎತ್ತೋ ಹಂದಿಯಲ್ಲ,
ತಳಕ್ಕ ಒತ್ತೋ ಹಂದಿ !
ಏ ಹಂದಿ, ನಿನ್ನ ಹಡದವರ್ನೇ ಕೊಂದೀ !'

* * *

ಯಾರೋ ಹೇಳಿದ್ರು,
ಯಾರೋ ಅಂದ್ರು !
ಅವನಂದ, ನೀನಂದಿ, ನಾನಂದೆ
ವರುಷದಾಗ ಗಳಿಸಿದ ಹೆಸರು ನಿಮಿಷದಾಗ ಕೊಂದೆ
ಇನ್ನೊಬ್ಬರ ಮನಸೀನ ಶಾಂತೀನs ಸುಟಗೊಂಡು ತಿಂದೆ !
ಇದಕಾಗೇ ಹುಟ್ಟಿ ಬಂದೆ !
ಇದಕಾಗೇ ಹುಟ್ಟಿ ಬಂದ್ಯಾ ಬಿಕನಾಸಿ?
ಎಲೆ ಎಲೇ ಏಏ ಪರದೇಸಿ–
ಇದಕ್ಕ ಏನು ಹೆರೋದು ಬೆಳಸೋದು?
ಇದಕ್ಕ ಏನು ಸಾಲಿಗೆ ಕಳಿಸೋದು?
ಇದಕ್ಕ ಏನು ಓದೋದು ಬರಿಯೋದು?
ಇದಕ್ಕ ಏನು ಬಾಯಿ ಕೊಟ್ಟಿರೋದು?
ಏನಪ್ಪಾ–
ಕುರುಡ್ಯಾಕ ಕವರಬೇಕೋ ಒಳ್ಳೇದು ಕಂಡಾಗ ಕಣ್ಗೆ,
ಕಿವುಡ್ಯಾಕ ಕವರಬೇಕೋ ಒಳ್ಳೇದು ಬಿದ್ದಾಗ ಕಿವಿಗೆ !
ಕೆಟ್ಟದ್ದು ಕಂಡಿತೋ, ಕುರುಡಿಗೂ ಕಣ್ಣು,
ಕೆಟ್ಟದ್ದು ಕಂಡಿತೋ, ಕುರುಡಿಗೂ ಕಣ್ಣು,
ಕೆಟ್ಟದ್ದು ಕೇಳ್ತೋ, ಕಿವುಡಿಗೂ ಕಿವಿ !
ಇದ್ಯಾಕ ಹೀಗ ಏ ಕವಿ?
ನೀನೇನ್ಮಾಡೀ, ಇದು ಹೀಗ ಈ ಬುವಿ !

* * *

ಇದೂ ಒಂದು ಸುದ್ದಿ !

ಇದೂ ಒಂದು ಸುದ್ದಿ–
ನಾಳೆಗಿದೇ ರದ್ದಿ !
ಅವನು ಬಂದನಂತೆ
ಇವನು ಹೋದನಂತೆ
ಅಲ್ಲಿ 'ಲಾಕ್ ಅಪ್' ಅಂತೆ
ಇಲ್ಲಿ ಭಾರಿ ಸಭೆ
ಇಲ್ಲಿ ಜಾತಿ ಗಲಭೆ
ಎಲ್ಲೋ ಅಪಘಾತ
ಬಸ್ ಸುಟ್ಟನಾತ
ಇದೂ ಒಂದು ಸುದ್ದಿ–
ನಾಳೆಗಿದೇ ರದ್ದಿ !
ಮದುವೆಯಾಗಿ ಅರೇ
ಆರು ತಿಂಗಳಂತೆ
ಪದ್ದಿ ಹಡೆದಳಂತೆ
ಪದಕ ಪಡೆದಳಂತೆ
ತಾಯಿಮಗಳು ಒಂದೇ
ಫ್ಯಾಷನ್ ಸ್ಪರ್ಧೆಗಿಳಿದು
ತಾಯಿ ಗೆದ್ದಳಂತೆ
ಮಗಳು ಬಿದ್ದಳಂತೆ
ಇದೂ ಒಂದು ಸುದ್ದಿ–
ನಾಳೆಗಿದೇ ರದ್ದಿ !
ಪದವೀದಾನದಲ್ಲಿ
ತುಂಬುವಷ್ಟು ಜಲ್ಲಿ
ಪದಕಪಡೆದ ಸಮರ್ಥ
ಆದನಂತೆ ಗುಮಾಸ್ತ
ಕಾಪೀ ಮಾಡಿ ಮನೆಗೆ

ಹೋದನಂತೆ ಕೊನೆಗೆ
ಇಂದು ಮುಂದಾಳಂತೆ
ಬಹಳ ಮಂದಾಳಂತೆ
ಇದೂ ಒಂದು ಸುದ್ದಿ–
ನಾಳೆಗಿದೇ ರದ್ದಿ !
ಯಾರೋ ಸುದ್ದಿಗಾರ
ಬೆರಸಿ ಉಪ್ಪುಖಾರ
ಕರೆಯ ಚೀಟಿ ನೋಡಿ
ವರದಿ ಸಿದ್ಧಮಾಡಿ
ಹೇಳಿದ್ದೇನೇ ಇರಲಿ
ಊದಿ ತನದೆ ಮುರಲಿ
ಕಳಿಸಿಬಿಡುವ ಸುದ್ದಿ
ತಿಳಿದ ಹಾಗೆ ತಿದ್ದಿ
ಇದೂ ಒಂದು ಸುದ್ದಿ–
ನಾಳೆಗಿದೇ ರದ್ದಿ !
ಸದ್ದಿ ಮೆದ್ದ ಬುದ್ಧಿ
ಬೇಡುತಿಹುದು ಸುದ್ದಿ
ಹೊಚ್ಚ ಹೊಸ ಸುದ್ದಿ
ತಾಜಾ ತಾಜಾ ಸುದ್ದಿ
ಸಿಕ್ಕದಿರಲು ಸುದ್ದಿ
ಮಾಡಬಹುದೆ ನಿದ್ದಿ?
ಹೊಸೆಯೊ ಹೊಸ ಸುದ್ದಿ
ಮಾಡಿಬಿಡು ಹೊಸ ಪ್ರಸಿದ್ಧಿ
ಇದೂ ಒಂದು ಸುದ್ದಿ
ನಾಳೆಗಿದೇ ರದ್ದಿ !
ವರುಷದೊಳ್ಪ ನಿಮಿಷದಲ್ಲಿ
ಒರಸಿಬಿಡುವ ಸುದ್ದಿ
ಜನದ ಮನದ ಮದ್ದು ಮನೆಗೆ

ಕಿಡಿಯನಿಡುವ ಸುದ್ದಿ
ಮಂಗಮತಿಗೆ ಮದ್ಯ ಕುಡಿಸಿ
ಚೇಳ ಕಡಿಪ ಸುದ್ದಿ
ನಂಬಿಕೆಗಳ ಹಾಲಿನಲ್ಲಿ
ಹುಳಿಯ ಹಿಳಿವ ಸುದ್ದಿ–
ಹೊಸೆಯೋ ಹೊಸ ಸುದ್ದಿ
ಮಾಡಿ ಬಿಡು ಪ್ರಸಿದ್ಧಿ
ಇದೂ ಒಂದು ಸುದ್ದಿ
ನಾಳೆಗಿದೇ ರದ್ದಿ !

* * *

ಬಾಗಿಲನು ತೆರೆಯೊ !

ಬಾಗಿಲನು ತೆರೆಯೊ–ಎದೆ
ಬಾಗಿಲನು ತೆರೆಯೊ–ಇದೊ
ಬಾಗುವೆನು ತೆರೆಯೊ, ಅನು–
ಭಾವಿ ಶ್ರಿ ಕನಕಣ್ಣ !
ರಾಗ ದ್ವೇಷವ ತೀಗಿ
ಯೋಗ ಮತಿಯನೆ ನೀಡಿ
ಜಾಗರವಗೊಳಿಸು ಮನ
ತೆರೆಸು ತಿಳುವಿನ ಕಣ್ಣ, ಅನು–
ಭಾವಿ ಶ್ರೀ ಕನಕಣ್ಣ !
ಬಾಗಿಲನು ತೆರೆಯೊ.....
ಆರು ವೈರಿಯ ಗೆಲಿಸು
ಮೂರು ಏಳನು ಅಳಿಸು
ಈರೈದುಗಳ ನಿಲಿಸು
ನನ್ನಿಗೆರಗಿಸು ನನ್ನ, ಅನು–
ಭಾವಿ ಶ್ರೀ ಕನಕಣ್ಣ !
ಬಾಗಿಲನು ತೆರೆಯೊ.....

ಕ್ಷುದ್ರವನೆ ಛಿದ್ರಿಸುತ
ಭದ್ರವನೆ ಮುದ್ರಿಸುತ
ಚಿದ್ರಸವನೀಂಟಿಸೊ
ಇಲ್ಲವಾಗಲಿ ಬನ್ನ, ಅನು-
ಭಾವಿ ಶ್ರೀ ಕನಕಣ್ಣ
ಬಾಗಿಲನು ತೆರೆಯೊ.....
ಯಾರು ಹಿತವರೊ ತಿಳಿಯೆ
ನೂರು ಮತಗಳನರಿಯೆ
ಸಾರವಾದುದನೊರೆಯೊ,
ನೀಡೋ ನಾಡಿನ ಪುಣ್ಯ ಅನು-
ಭಾವಿ ಶ್ರೀ ಕನಕಣ್ಣ !
ಬಾಗಿಲನು ತೆರೆಯೊ.....
ವೇದ ವಾದಗಳಲ್ಲಿ
ಓದು ವಿದ್ಯೆಗಳಲ್ಲಿ
ಸಾಧನೆಯ ಹಾದಿಯನೆ
ತೋರು ತೋರೆಲೆ ಧನ್ಯ, ಅನು-
ಭಾವಿ ಶ್ರೀ ಕನಕಣ್ಣ !
ಬಾಗಿಲನು ತೆರೆಯೊ.....

* * *

ಮಾಡಿಸು ಶಕ್ತಿ ಸ್ನಾನ !

ಲೋಹದ ಬಾಹು ಉಕ್ಕಿನ ಸ್ನಾಯು
ವಜ್ರದ ವಕ್ಷಸ್ಥಲವು
ಬೇಕು ಭಾರತಕೆ ಭಾರತೀಯರಿಗೆ
ಹನುಮ ಭೀಮರಾ ಬಲವು
ಶಕ್ತಿಯಿಂದಲೇ ಮುಕ್ತಿ ಭಾರತಕೆ
ಶಕ್ತಿ ಸಾಧಿಸಿರಿ ಸತತ
ನಿರ್ಭಯರಾಗಿರಿ ಭೀತಿಯ ನೀಗಿರಿ
ಭೀತ ಮಾನವನೆ ಪತಿತ

ಶಕ್ತಿ ಸಾಹಸವೆ ಸ್ವರ್ಗ ಭಾವಿಸಲು
ಬಲಹೀನತೆಯೇ ನರಕ
ಬಲವನಾರ್ಜಿಸಿರಿ ಬಲಿದು ಗರ್ಜಿಸಿರಿ
ಸುರಿದು ಸಿಡಿಲಿನ ಸುರುಕ
ನರಿಗಳಂದದಲಿ ಒರಲಬೇಡಿರಿ
ನರಸಿಂಹರು ನೀವು
ಮೃತ್ಯುಂಜಯರು ಕಾಲಕಾಲರು
ಮುರಮರ್ದನರು ನೀವು
ಎಂದು ಗರ್ಜಿಸಿದ ವೀರಕೇಸರಿಯೆ
ಗುರು ವಿವೇಕಾನಂದ
ಪ್ರಾಣದಾಯಿನೀ ನಿನ್ನ ವಾಣಿಯಿದು
ನೀಡಲಿ ಶಕ್ತಿಸ್ಪಂದ !
ಶತ್ರು ಮುತ್ತಿರುವ ನಿನ್ನ ಭಾರತಕೆ
ಶಸ್ತ್ರದೀಕ್ಷೆಯನು ನೀಡು !
ಅರಿಭಯಂಕರತೆ ಬರಲಿ ಭಾರತಕೆ
ಶಕ್ತಿಪಾತವನು ಮಾಡು !
ಹೇಡಿತನವ ಹೊಡೆದೋಡಿಸು ಸ್ವಾಮಿ
ಮಾಡಿಸು ಶಕ್ತಿಸ್ನಾನ
ಮೊಳಗಲಿ ಮತ್ತೆ ಹಿಮಗಿರಿ ಶಿಖರದಿ
ಭಾರತ ವಿಜಯಧ್ವಾನ !

* * *

ಭಾವದಲಕ್ಷ್ಮಿಯೆ ಬಾರಮ್ಮ !

ಭಾವದಲಕ್ಷ್ಮಿಯೆ ಬಾರಮ್ಮ–ಪುರಂದರ
ಭಾವದಲಕ್ಷ್ಮಿಯೆ ಬಾರಮ್ಮ !
ದಾಸ್ಯಭಾವದ ಲಕ್ಷ್ಮಿ ಸಖ್ಯಭಾವದ ಲಕ್ಷ್ಮಿ
ನವವಿಧಭಕ್ತಿಯ ನಿಜಭಾವಲಕ್ಷ್ಮಿಯೆ
ಭಾವದಲಕ್ಷ್ಮಿ ಬಾರಮ್ಮ.....

ಸಾಹಿತ್ಯ ಕಮಲದಲಿ
ನಿಂತಿರುವ ನಿಜಲಕ್ಷ್ಮಿ
ಸಂಗೀತ ಸುಧೆಯನ್ನು
ಸೂಸುವ ಶುಭಲಕ್ಷ್ಮಿ
ಭಾವದಲಕ್ಷ್ಮಿ ಬಾರಮ್ಮ....
ತಂಬೂರಿ ನಾದಕ್ಕೆ
ತಲೆಯ ತೂಗುವ ಲಕ್ಷ್ಮಿ
ಬಾಲಕೃಷ್ಣನ ಗೆಜ್ಜೆ
ದನಿಗೆ ನಲಿಯುವ ಲಕ್ಷ್ಮಿ
ಭಾವದಲಕ್ಷ್ಮಿ ಬಾರಮ್ಮ....
ದೇವರನಾಮಗಳ
ದಿವ್ಯಭಾವದ ಲಕ್ಷ್ಮಿ
ಸುಳಾದಿ ಕೃತಿಗಳ
ಶಿವಭಾವಲಕ್ಷ್ಮಿ
ಭಾವದಲಕ್ಷ್ಮಿ ಬಾರಮ್ಮ.....
ಮುಗ್ಧಭಾವದ ಲಕ್ಷ್ಮಿ
ಮಧ್ವಭಾವದ ಲಕ್ಷ್ಮಿ
ಶುದ್ಧ ಕನ್ನಡದಲ್ಲಿ
ಸಿದ್ಧಿಪಡೆದಿಹ ಲಕ್ಷ್ಮಿ
ಭಾವದಲಕ್ಷ್ಮಿ ಬಾರಮ್ಮ, ಪುರಂದರ
ಭಾವದಲಕ್ಷ್ಮಿ ಬಾರಮ್ಮ !....

* * *

ಪಾಲುಂಡು ಮೇಲುಂಬರೆ?

ಪಾಲುಂಡು ಮೇಲುಂಬರೆ !
ಇಲ್ಲ–ಇದು ಹೊಲ್ಲ ;
ಪಾಲುಂಡು ಮೇಲುಂಬರೆ?
ಈಗ ನಡೆದಿದೆಯಲ್ಲ–

ಪಾಲುಂಡೂ ಮೇಲುಂಬ–ತನ್ನ
ಪಾಲುಂಡೂ ಮೇಲುಂಬ ಭಂಡಾಟ,
ಹೀಗುಣ್ಣುವವರ ಕೊಂಡಾಟ
ಪಾಲುಂಡೂ ಮೇಲೆ ಬೇಕು
ಮಾದಕ ರಸ
ಉಣ್ಣುವ ಮೊದಲೂ ಬೇಕು
ಉಂಡಮೇಲೂ ಬೇಕು
ಬೈನಿ ಈಚಲರಸ, ದ್ರಾಕ್ಷಾರಸ,
ಇದನುಳಿದು ಹಾಲೆಮಗೆ ವಿಷ !
ಬೇಕು ಮಾದಕರಸವೆ,
ನಮಗೆ ಹಸಿವೆ !
ಹಲವು ಹೆಡೆಗಳ ಹಾವು ಹಸಿವೆ
ದೊರೆಯದಿರೆ ಮಾದಕರಸವೆ,
ಆದೀತು ಬರಿ ವಿಷವೆ !
'ಹಸಿವೆಂಬ ಹೆಬ್ಬಾವು
ಬಸಿರ ಬಂದು ಹಿಡಿದಡೆ
ವಿಷವೇರಿತ್ತಯ್ಯ ಆಪಾದ ಮಸ್ತಕಕ್ಕೆ !'
ಬಸಿರಿನ ಹಸಿವೆ ಹೆಸರಿನ ಹಸಿವೆ
ಹೆಣ್ಣು ಹೊನ್ನು ಮಣ್ಣುಗಳ ಹಸಿವೆ
ಉರವಣಿಪ ಇಂದ್ರಿಯಗಳ ಹಸಿವೆ
ಕೊಲೆ ಸುಲಿಗೆಯ ಹಸಿವೆ ನೆಲ ಛಲಗಳ ಹಸಿವೆ
ಹಲವು ಹೆಡೆಗಳ ಹಾವು ಹಸಿವೆ
ಬದುಕೀತೆ ಇರದೆ ಮಾದಕ ರಸವೆ,
ತಣಿದೀತೆ ತಿಂದು ತುಸುವೆ ತುಸುವೆ?
ತನ್ನ ಪಾಲುಂಡು ಮೇಲುಂಬರೆ?
ಉಂಡರೇನಾಯಿತು?
ತನ್ನ ಪಾಲಿನಷ್ಟೇ ಉಂಡಿದ್ದರೆ ಕೌರವೇಶ
ಆಗುತ್ತಿತ್ತೆ ಗೀತೋಪದೇಶ?

ಮಾಡಿಹನೆ ಈಶ
ಎಲ್ಲರ ಅನ್ನಕೋಶ
ಸ್ಪ್ಯಾಂಡ್‌ರ್ಡ ಮೇಜರ್‌ಮೆಂಟಿನ ಪ್ರಕಾರ?
ಭಿನ್ನ ಭಿನ್ನ ಇಲ್ಲವೇ ಆಕಾರ?
ಮಾಡದಿರು ಶಬ್ದ ಚಕಾರ
ಪಾಲುಂಡು ಮೇಲುಂಡರೆ !
ಉಂಡವರೇನು ಧರ್ಮಲಂಡರೆ?
ಹೇಳಿಯೇ ಇದೆಯಲ್ಲ–
ಹುಚ್ಚುಮುಂ....ಯ ಮದುವೆಯಲ್ಲಿ
ಉಂಡವನೇ ಜಾಣ,
ಉಣ್ಣದಿದ್ದವ ಕೋಣ !

* * *

ಬಸವನ ಬೆಳಕೆ

ಬಸವನ ಬೆಳಕೆ
ಎಲ್ಲಾಡಿ ಬಂದೆ?
ಭಾರತವೆಲ್ಲವ
ಸುತ್ತಾಡಿ ಬಂದೆ !
ನಿಟ್ಟುಸಿರೆದೆಯನು
ಬೆಳಗಿಸಿ ಬಂದೆ
ನಿರಾಶೆಯೆದೆಯನು
ತೊಳಗಿಸಿ ಬಂದೆ
ಹೆಣ್ಣಿನ ಕಂಬನಿ
ಬತ್ತಿಸಿ ಬಂದೆ
ಆಶಾಜ್ಯೋತಿಯ
ಹೊತ್ತಿಸಿ ಬಂದೆ
ದೀನರ ಬಾಳನು ಮುಸುಕಿದ ಕಾಳವ
ಕಬಳಿಸಿ ಬಂದೆ,

ಧವಳಿಸಿ ಬಂದೆ !
ಬಸವನ ಬೆಳಕೆ
ಎಲ್ಲಾಡಿ ಬಂದೆ?
ಕನ್ನಡವನದಲಿ
ಕುಣಿದಾಡಿ ಬಂದೆ
ವಚನಕುಸುಮಗಳ
ಮಲರಿಸಿ ಬಂದೆ
ಹಾಡುಗಬ್ಬಗಳ
ಅಲರಿಸಿ ಬಂದೆ
ಸಂವಾದಗಳನು
ಕುದುರಿಸಿ ಬಂದೆ
ನುಡಿ ಮುತ್ತುಗಳನು
ಉದುರಿಸಿ ಬಂದೆ
ಪಾಮರರೆದೆಯಲಿ ಪ್ರತಿಭೆಯ ಪ್ರಭೆಯನು
ಪಸರಿಸಿ ಬಂದೆ,
ಕುಸುರಿಸಿ ಬಂದೆ !
ಬಸವನ ಬೆಳಕೆ
ಎಲ್ಲಾಡಿ ಬಂದೆ?
ಕಾಯಕ ಕ್ಷೇತ್ರದಿ
ನಲಿದಾಡಿ ಬಂದೆ
ಬೆವರಿನ ಹನಿಯಲಿ
ಬೊಮ್ಮವ ತೋರಿಸಿ
ಕಾಯ ಕಷ್ಟದಲಿ
ಕೈಲಾಸ ತೋರಿಸಿ
ದುಡಿಯದೆ ಪಡೆಯುವ
ಬುದ್ಧಿಯ ಬಿಡಿಸಿ
ವೃತ್ತಿಗೆ ತತ್ವದ
ಛತ್ರವ ಹಿಡಿಸಿ
ದುಡಿಮೆಯ ದೇವರ ದೇಗುಲದಲ್ಲಿ

ನರ್ತಿಸಿ ಬಂದೆ,
ಕೀರ್ತಿಸಿ ಬಂದೆ !
ಬಸವನ ಬೆಳಕೆ
ಎಲ್ಲಿಗೆ ಮುಂದೆ?
'ವಿಶ್ವವೆಲ್ಲವೂ
ನನ್ನದೆ' ಎಂದೆ
ಹೊರಡುವೆ ನಾನು
ಹೊರಡುವೆ ಮುಂದೆ
ಬರಲಿದೆ ವಿಶ್ವವು
ನನ್ನಯ ಹಿಂದೆ
ಅವರಿವರೆಂಬೆನೆ?
ಎಲ್ಲರು ಒಂದೆ !
ಎಲ್ಲರಿಗಿರುವನು
ಒಬ್ಬನೆ ತಂದೆ !
ಎಲ್ಲರ ಲೇಸನು ಬಯಸುತ ಎಲ್ಲೆಡೆ
ಬರುವೆನು ಹೋಗಿ,
ಬರುವೆನು, ಬಂದೆ !

* * *

ಮೊದಲು ಮಾನವನಾಗು !

ಓದಿ ಬ್ರಾಹ್ಮಣನಾಗು
ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು
ದುಡಿದು ಗಳಿಸಿ
ಏನಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೇ–
ಮೊದಲು ಮಾನವನಾಗು !

ಹಿಂದು ಮುಸ್ಲಿಮನಾಗು
ಬೌದ್ಧ ಕ್ರೈಸ್ತನೆ ಆಗು
ಚಾರ್ವಾಕನೇ ಆಗು
ಭೋಗ ಬಯಸಿ
ಏನಾದರೂ ಆಗು
ಹಾರೈಸಿದಂತಾಗು
ಏನಾದರೂ ಸರಿಯೆ,
ಮೊದಲು ಮಾನವನಾಗು !
ರಾಜಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು !

* * *

ಚರಗ

ಆಯ್ತು ಜಗವೆ ಪವಿತ್ರವು !

ಮರ್ತ್ಯದಿಂದ ಸ್ವರ್ಗದತ್ತ
ಹರಿದಳು ಹೊಸ ಜಾಹ್ನವಿ:
ಭುವಿಯ ಬಾನಿನಲ್ಲಿ ಮೂಡಿ
ನೆಗೆದ ನಭಕೆ ಹೊಸ ರವಿ!
ವಿಶ್ವತೆಗುದಿಸಿತ್ತು ಮನುಜ
ದೇಹ ಧರಿಪ ಧನ್ಯತೆ;
ಈ ಲೋಕಕೆ ದೊರೆಯಿತೊಮ್ಮೆ
ಆ ಲೋಕದ ಮಾನ್ಯತೆ!
ಶಿವದ ಶವಕೆ ಜೀವ ಬಂತು
ಸತ್ತ ಸತ್ಯ ಬದುಕಿತು:
ಪ್ರೀತಿ-ಪ್ರೇತದಲ್ಲಿ ಮತ್ತೆ
ಜೀವರಸವು ತುಳುಕಿತು!
ಹಿಂಸೆಗೆ ಅಜ್ಞಾತವಾಸ
ದ್ವೇಷಕೆ ವನವಾಸವು
ಬಂದಿತೊಮ್ಮೆ ಗಾಂಧಿ ಹುಟ್ಟೆ
ಹುಸಿಗೆ ಬಂದಿವಾಸವು!
ಏನಿದೆಂಬೆ ಮಣ್ಣಬೊಂಬೆ
ಸಿಡಿಲಾಳುಗಳಾದುದ?
ಏನೆನಂಬೆ ಮೂಕ ರೈತ
ಲೋಕವೀರನಾದುದ?
ಹುಲ್ಲು ಕಡ್ಡಿ ಅಲುಗಿಸಿತೋ
ದಾಸ್ಯದ ಹಿಮಾದ್ರಿಯ!
ಗಾಂಧಿಯುಸಿರು ತೊಲಗಿಸಿತೋ
ಕುಂಭಕರ್ಣ ನಿದ್ರೆಯ!
ಬಲದ ಬಲಿ ಅಬಲತೆಗೆ
ಒಲವಿಗಾಯ್ತು ವಿಜಯವು!

ಸಾಮಾನ್ಯತೆಗಾಯ್ತು ಪಟ್ಟ,
ನನ್ನಿಯಾಯ್ತುಜೇಯವು!
ಸೋತ ಶತ್ರು ಪ್ರೀತನಾಗಿ
ಗೈದ ಗಾಂಧಿ-ಸ್ತುತಿಯನು;
ಮೈಮೆಗೆರಗಿ ಮರೆತ ತನ್ನ
ರಾಜ್ಯಹೋದ ವ್ಯಥೆಯನು!
ನುಡಿ ನುಡಿಯೊಳು ನೂರು ತೀರ್ಥ
ನಡೆಯೆ ದಿವ್ಯ ಕ್ಷೇತ್ರವು;
ಗಾಂಧಿ ನಡೆದ ನೆಲವೆ ಅಲ್ಲ-
ಆಯ್ತು ಜಗವೆ ಪವಿತ್ರವು!

* * *

ಎಡೆಯೂರ ಆತ್ಮಶ್ರೀ

ಐದು ಶತಮಾನಗಳ ಐದಳದ ಹೂವಿನಲಿ
ಎನಿತೊಂದು ಅಂದಗಳು, ಎನಿತೊಂದು ಗಂಧಗಳು!
ಒಂದೊಂದಕೂ ಇಹುದು ಆನಂದವೀವ ಗುಣ;
ಎಲ್ಲವೂ ಆನಂದ-ಸಿಂಧುವಿನ ಬಿಂದುಗಳು!
ಆದರೂ ಅವುಗಳಲಿ ಒಂದಕ್ಕೆ ಮನಸೋತೆ;
ಅದನೆ ಬಣ್ಣಿಸಹೊರಟು ಸೋತಿಹುದು ಈ ಗೀತೆ!
"ಸೂರ್ಯನ ಬೆಳಗಿಂಗೆ
ಕೊಳ್ಳಿಯ ಬೆಳಗ
ಹಿಡಿಯಲುಂಟೆ ಮರುಳೆ?"
ಹಿಡಿಯ ಹೊರಟಿಹೆನಲ್ಲ ಹೆಗ್ಗತನದಲಿ ನಾನು!
ಕರೆಯಬಹುದೆ ಅಶುದ್ಧಂಗೆ ಕಾಮಧೇನು?'
ಶಿವತತ್ತ್ವದಲಿ ಉದಿಸಿ, ಶಿವತತ್ತ್ವದೊಳೆ ಬೆರೆಸಿ,
ಜಗದ ಮನುಜರಿಗಾಗಿ ಅಧ್ಯಾತ್ಮ-ಭಾನು
ರೂಪು ಮಾಡಿ ನಿರೂಪ, ರೂಪುನಿರೂಪುವಿಡಿದಾಚರಿಸಿ,
ರೂಪು ನಿರೂಪಳಿದಾಗಿ ಅರಿವಿನಲರಿನ ಜೇನು

ಎಡೆಯೂರ ಆತ್ಮಶ್ರೀ ಯೆಡೆಯೂರ ಮಾಡಿ,
ನಂಬಿದವರಿಗೆ ಇಷ್ಟಸಿದ್ಧಿಗಳ ನೀಡಿ,
ಅಲ್ಲಮನ ಅಪರಾವತಾರಿಯೆನಿಸಿ,
ಶಿವಯೋಗ ಸಾಮ್ರಾಜ್ಯ ಸಾಮ್ರಾಟನೆನಿಸಿ
ಅನುಭಾವ ಶ್ರೀಗಿರಿಯ ಶಿಖರ ತಾನೆನಿಸಿ,
ಅರಿವೆನಿಸಿ, ಗುರುವೆನಿಸಿ, ಪರತತ್ತ್ವವೆನಿಸಿ
ಜಗವ ಬೆಳಗಿದ ಸಿದ್ಧಲಿಂಗನಿಗೆ ಮನಸೋತೆ!
ಇದನೆ ಬಣ್ಣಿಸಹೊರಟು ಸೋತಿಹುದು ಈ ಗೀತೆ!
"ಸೂರ್ಯನ ಬೆಳಗಿಂಗೆ
ಕೊಳ್ಳಿಯ ಬೆಳಗ
ಹಿಡಿಯಲುಂಟೆ ಮರುಳೆ?"
ಉಲುಹಡಗಿ ಇರ್ದೊಡೇಂ ಎಲೆಗಳೆದ ಈ ವೃಕ್ಷ?
ಊರ್ಧ್ವ ಮೂಲದ ಅಧಶ್ಯಾಖೆಗಳ ಆತ್ಮವೃಕ್ಷ?
ಎಲೆ ಕಾಯ ಹಂಗಿರದೆ ಫಲ ಕೊಡುವ ಕಲ್ಪವೃಕ್ಷ?
ಯುಗಯುಗವು ಕಳೆದರೂ ಹಳೆಯದಾಗದ ವೃಕ್ಷ?

* * *

ಅಜೇಯವಾಗು ಭಾರತ!

ಅದಮ್ಯವಾಗು, ಅಜೇಯವಾಗು,
ಅಭೇದ್ಯವಾಗು ಭಾರತ!
ಬಲಾಢ್ಯವಾಗು, ಗುಣಾಢ್ಯವಾಗು,
ಸಮೃದ್ಧವಾಗು ಭಾರತ!
ಜಾತಿ ವಿಷಕೆ
ಗುರುಡನಾಗು
ದ್ವೇಷಾಗ್ನಿಗೆ
ವರುಣನಾಗು
ಮೌಢ್ಯತಮಕೆ
ಅರುಣನಾಗು
ನೀತಿಯಾಗು

ಪ್ರೀತಿಯಾಗು
ಜ್ಯೋತಿಯಾಗು ಭಾರತ!
ಅದಮ್ಯವಾಗು
ಅಜೇಯವಾಗು
ಅಭೇದ್ಯವಾಗು ಭಾರತ
ದಾಸ್ಯಶಿಲೆಗೆ
ಕುಲಿಶವಾಗು
ದೈನ್ಯಲೋಹ
ಪರುಷವಾಗು
ದಲಿತ ಜನಕೆ
ಹರುಷವಾಗು
ಸಮತೆಯ
ಸ್ವಾತಂತ್ರ್ಯಯುಗದ
ಭೇರಿಯಾಗು ಭಾರತ!
ಅದಮ್ಯವಾಗು
ಅಜೇಯವಾಗು
ಅಭೇದ್ಯವಾಗು ಭಾರತ!
ಬಾಲವನಕೆ
ವಸಂತವಾಗು
ಸುದತಿ ದಾಸ್ಯ
ಯುಗಾಂತವಾಗು
ಸಾಧನೆಯಲಿ
ಅನಂತವಾಗು
ಶಕ್ತಿಯಾಗು
ಋದ್ಧಿಯಾಗು
ವಿದ್ಯೆಯಾಗು ಭಾರತ!
ಅದಮ್ಯವಾಗು
ಅಜೇಯವಾಗು
ಅಭೇದ್ಯವಾಗು ಭಾರತ!

* * *

ಏಕೆ ಮನೆಯೆ ಬೇಗ ಬಿರುಕು ಬಿಟ್ಟೆ?

ಬಹುದಿನಗಳಾಗಿಲ್ಲ ನಿನ್ನನ್ನು ಕಟ್ಟಿ,
ಏಕೆ ಮನೆಯೇ ಬೇಗ ಬಿರುಕು ಬಿಟ್ಟೆ?
ಮೂರು ದಶಕಗಳವಧಿ ಸಾಕೆ ಶಿಥಿಲತೆಗಿಲ್ಲಿ?
ತಳಪಾಯವಾಗಿರುವ ತ್ಯಾಗಕ್ಕೆ ಬೆಲೆಯೆಲ್ಲಿ?
ಬಿಡುಗಡೆಗೆ ಬಲಿಯಾದ ಗಂಡುಗಲಿಗಳ ಗಟ್ಟಿ
ಗುಂಡಿಗೆಯ ರಕ್ತದಲಿ ರಾಷ್ಟ್ರಭಕ್ತಿಯ ಮಣ್ಣ
ಬೆರೆಸಿ ಇಟ್ಟಿಗೆ ಮಾಡಿ ತ್ಯಾಗಾಗ್ನಿಯಲಿಸುಟ್ಟು
ಕಟ್ಟಿದೀ ಕಟ್ಟಡವು ಇಷ್ಟು ಬೇಗನೆ ಬಿರಿಯೆ
ದೇಶದಾಶೋತ್ತರಕೆ ನೆಲೆಯೆಲ್ಲಿ?
ಶ್ರೇಯ ಪುಷ್ಕರಣಿಗೆ ಸೆಲೆಯೆಲ್ಲಿ?
ಮನೆಯೊಡೆಯರಿದ್ದೂ
ಮನೆಯಲ್ಲಿ ರಜ ತುಂಬಿದೆ:
ರಸದ ನೆಲೆವನೆಯಲ್ಲಿ
ಕಸ ತುಂಬಿದೆ:
ಹೊಸತಿಲಲ್ಲಿ ಹುಲ್ಲು ಹುಟ್ಟಿದೆ:
ತೊಲೆಗಳಲ್ಲಿ ಇಲ್ಲಾಣ ಕಟ್ಟಿದೆ;
ಕಂಬಕಂಬವೂ
ಜೇಡಜಾಲದ ಹೂ ಬಿಟ್ಟಿದೆ:
ಸೊಳ್ಳೆಗಳ ಸಂಗೀತ
ಇಲಿಗಳ ನೃತ್ಯ
ಹೆಗ್ಗಣಗಳ ಹಿಮ್ಮೇಳ ಸಾಗಿದೆ!
ಬುಡಕಟ್ಟು ಕುಸಿಯುತ್ತಿದೆ,
ನೆಲಗಟ್ಟು ಬಿರಿಯುತ್ತಿದೆ.
ಮನೆಗೆ ಮನೆಯೇ ಗಬ್ಬು ನಾರುತ್ತಿದೆ
ಸುಳ್ಳು ನುಡಿನುಡಿದು ನಾರುವ
ನಾಯಕರ ಬಾಯಿಯಂತೆ!
ಮಾಳಿಗೆಗೆ ಮಾಳಿಗೆಯೇ

ಸೋರುತ್ತಿದೆ–
ಮುಂದಾಳುಗಳ ಮಾತಿನಲಿ
ಜನರಿಟ್ಟ ವಿಶ್ವಾಸದಂತೆ!
ಕನ್ನ ಹಾಕದೆಯೆ ಕಳ್ಳ ನುಗ್ಗಲು ಬಹುದು–
ಛಿನ್ನ ವಿಚ್ಛಿನ್ನವೀ ಮಹಾಮನೆಯು!
ಅಂಕಣಂಕಣವು
ಬೇರೆ ಮನೆಯೆಂಬಂತೆ
ಎಕ್ಕಲಡಿಕ್ಕಿಮಾಡುತಿವೆ!
ಕೇಳಿ ಬರುತಿದೆ
ಕೋಣೆ ಕೋಣೆಯಿಂದ
ಕೇಡಿನ ಸ್ವರ,
ಕೀಳಿನಸ್ವರ,
ಕೇಣದ ಅಮಂಗಳ ಸ್ವರ!
ಮಾಡಿದಡುಗೆಯ
ಕೂಡಿ ಉಣ್ಣುವುದಿರಲಿ–
ಕೂಡಿ ಆಡುವುದೂ ಪಾಪವೆನಿಸಿದೆ.
ಹಾವು ಮುಂಗಸಿಗಳನು
ಒಂದೆ ಬುಟ್ಟಿಯೊಳಿಟ್ಟರೀತಿ
ಅಣ್ಣ ತಮ್ಮದಿರ
ಎಣ್ಣೆಸೀಗೆಯ ಪ್ರೀತಿ!
ನೀರಿಗಾಗಿ ಜಗಳ,
ಬೇರೆ ನಾಡಿಗಾಗಿ ಕಡಿದಾಟ,
ಗಡಿಗಾಗಿ ಹೊಡೆದಾಟ,
ಮಾತು ಮಾತಿಗೆ ಗುದ್ದಾಟ!
ಮನೆಯೋ, ಇದು
ಕಡುದುರುಗಳ ಹುಟ್ಟೊ?
ಈ ಒಳಜಗಳವ ಮೆಟ್ಟೊ!
ಮನೆ ಮುರುಕರ ಮೇಲಿಳಿಯಲಿ
ನಿನ್ನಯ ಸಿಟ್ಟೊ!

ಮನೆ ಬೀಳುವ ಮೊದಲೇ
ಅದರ ರಿಪೇರಿಗೆ
ಟೊಂಕವ ಕಟ್ಟೊ!

* * *

ಅವಿಭಾಜ್ಯವಿರಲಿ ದೇಶ!

ರಾಜ್ಯ ರಾಜ್ಯದಲಿ ವ್ಯಾಜ್ಯಸಹಜ, ಅವಿ
ಭಾಜ್ಯವಿರಲಿ ದೇಶ!
ತಡೆದು ದೇಶವನು ಒಡೆವ ಶಕ್ತಿಗಳ ತ
ಪ್ಪಿಸಿರಿ ಸರ್ವನಾಶ!
ಹಲವು ಧರ್ಮಗಳು ಹಲವು ಭಾಷೆಗಳು
ಇರುವುದೊಂದೆ ದೇಶ!
ಒಂದೆ ದೇಹ ಹಲವಾಗಿ ಬಿಡುವುದೆ
ಧರಿಸೆ ವಿವಿಧ ವೇಷ?
ಗಿರಿಸಮುದ್ರಗಳು ಒಂದುಗೂಡಿಸಿದ
ದೇಶವನೆ ಕೊಯ್ದೆವಂದು;
ಎರಡು ರಾಷ್ಟ್ರಗಳ ವಾದಕಾಹುತಿಯ
ರಕ್ತ ಹೊಯ್ದೆವಂದು!
ಮತ್ತೆ ಮತ್ತೆ ಆ ಸತ್ತವಾದಕಸು-
ವಿತ್ತು ಬದುಕಿಸುವುದೆ?
ಇರುಳು ಕಂಡ ಬಾವಿಯಲಿ ಹಗಲೆ
ಕಣ್ಮುಚ್ಚಿ ಬೀಳಬಹುದೆ?
ದೇಶದ್ರೋಹಿಗಳ ದುಷ್ಟಕೂಟವಿದೊ
ರಕ್ತ ಬೀಜನಂತೆ
ಬೆಳೆಯುತಿಹುದು ಕಡಿದಷ್ಟು ಹೆಚ್ಚಿ-
ಸುಮ್ಮನೇಕೆ ನಿಂತೆ?
ಏಳಿರೇಳಿರೋ ಹೂಳಿರೆಲ್ಲ ವಿ
ಧ್ವಂಸಕಾರಿ ಮತಿಯ:
ದೇಶಭಕ್ಷಕರ ದಾಳಿ ಎದುರಿಸಿರಿ
ಮಾಡಿ ಅಶಿವ ಕ್ಷತಿಯ!

ಎಷ್ಟು ಬಾರಿ ಈ ಆತ್ಮಘಾತುಕತೆ, ಇ
ನ್ನೆಷ್ಟು ಆತ್ಮ ಮೋಸ?
ಬೇಕೆ ಮತ್ತೆ ಹಳ ಆಳುಬಾಳು, ಹೊಸ
ದಾದ ದಾಸ್ಯ-ಪಾಶ?
ಮಾಯ್ದುಗಾಯಗಳ ಮತ್ತೆ ಜಿಗುಟುವಿರ
'ಸ್ವಾಸ್ಥ್ಯ ಸಾಕು; ಎಂದು?
ಹಳೆಯ ವೈರಗಳು, ಹಳೆಯ ಸ್ವೈರಗಳು
ಮುತ್ತಿಹವೆ ಮತ್ತೆ ಬಂದು?
ಕೀಳುತನಕೆ ಕೂಳಾಗಬೇಡಿರೋ,
ಖಿಲ್ಲತೆಗೆ ಪಟ್ಟಗಟ್ಟಿ!
ಅಲ್ಪತನಕೆ ಬಲಿಯಾಗಬೇಡಿ ನಿಜ-
ದೇಶಹಿತವ ಮೆಟ್ಟಿ!
ಒಂದೆ ದೇಶವಿದು
ಒಂದೆ ದೇಶವಿದು
ಒಂದೆ ದೇಶವೆನ್ನಿ!
ನಾವೆಲ್ಲ ಒಂದೆ
ನಾವೆಲ್ಲ ಒಂದೆ
ನಾವೆಲ್ಲ ಒಂದೆ ಎನ್ನಿ!
ರಾಜ್ಯ ರಾಜ್ಯದಲಿ ವ್ಯಾಜ್ಯ ಸಹಜ, ಅವಿ
ಭಾಜ್ಯವಿರಲಿ ದೇಶ!
ತಡೆದು ದೇಶವನು ಒಡೆವ ಶಕ್ತಿಗಳ
ತಡೆಯೂ ಸರ್ವನಾಶ!

* * *

ಸೈಪಿನ ಸೊಮ್ಮನಿತ್ತು ಗೆಲಿಸು!

ಕರಿಮಣ್ಣು ಕತ್ತುರಿಯು
ಕೆಮ್ಮಣ್ಣು ಕೇಶರವು
ನಿನ್ನದಿರು ಕಸವರವು ಕರ್ನಾಟಕಾಂಬೆ!
ನಿನ್ನ ಜೋಳವು ಮುತ್ತು
ರಾಗಿ ಸೊಗಸಿನ ತುತ್ತು

ಗೋಧಿ ಹವಳದ ಬಿತ್ತು, ನೀರು ಜೇನೆಂಬೆ!
ಹಳ್ಳಿ ಹಳ್ಳಿಯು ಕ್ಷೇತ್ರ
ಹಳ್ಳ ಹಳ್ಳವು ತೀರ್ಥ
ಬಳ್ಳಿ ಬಳ್ಳಿಯು ಚಿತ್ರ–
ಲಾಸ್ಯ ನೃತ್ಯ!
ಕಲ್ಲು ಕಲ್ಲೂ ಗಾಥೆ
ಸೊಲ್ಲು ಸೊಲ್ಲೂ ಗೀತೆ
ಎಲ್ಲೆಲ್ಲು ಸಚ್ಚರಿತೆ,
ಪುಣ್ಯಕೃತ್ಯ!
ತೆಂಗು ಬಾಳೆಯ ಉಡಿಗೆ
ಕಡಲ ತೆರೆಗಳ ನಿರಿಗೆ
ನೀಲ ನೀರದ ಸೆರಗು
ನಿನಗೆ ಮಾತೆ!
ತೊರೆಯ ಮಿರುಗುವ ದಡಿಯು
ಗಿರಿಯ ಗುಣ್ಪಿನ ಮುಡಿಯು
ರತ್ನ ತುಂಬಿದ ಉಡಿಯು
ನಿನಗೆ ಪೂತೆ!
ನಿನ್ನ ಮಿಂಚಿನ ನಯನ
ನಿನ್ನ ಚಂದನ ಶ್ವಸನ
ನಿನ್ನ ರೇಷ್ಮೆಯ ವಸನ
ಇನ್ನಾರಿಗುಂಟು?
ನಿನ್ನ ಸಿರಿ ಮೊಗ ಪ್ರೇಯ
ನಿನ್ನ ಸಿರಿನಗೆ ಶ್ರೇಯ
ನಿನ್ನೊಲವೆ ಅಭ್ಯುದಯ
ಬಾಳಿನಿಡುಗಂಟು!
ತಾಯೆ ನಮ್ಮನು ಹರಸು
ನಮ್ಮ ಬನ್ನವನೊರೆಸು
ಭಿನ್ನ ಭಾವವ ಮರೆಸು
ಅರವ ಕಲಿಸು;

ನಿನ್ನ ನಂಬದ ನಮ್ಮ
ಹುಂಬತನದೀ ಹಮ್ಮ
ಮುರಿದು, ಸೈಪಿನ ಸೊಮ್ಮ–
ನಿತ್ತು ಗೆಲಿಸು!

* * *

ಎರಡು ರಾಜ್ಯಗಳಿಗೆ ಒಂದೇ ರಾಜಧಾನಿ!

ಎರಡು ರಾಜ್ಯಗಳಿಗೆ ಒಂದೇ ರಾಜಧಾನಿ
ಎಂಬ ಗುಮಾನಿ
ನನಗೆ
ನನ್ನ ಬಗೆಗೆ!
ಆಸ್ಟ್ರೇಲಿಯಾದ
ಬುಲ್‌ಡಾಗ್ ಇರುವೆಗಳ ತಲೆ ಬಾಲಗಳಂತೆ
ಕತ್ತರಿಸಿ ಬೇರ್ಪಡಿಸಿದರೂ ಕಡಿದಾಡುವ
ಎರಡು ರಾಜ್ಯಗಳು
ವ್ಯಾಜ್ಯಹೋಮಕ್ಕೆ ಆಜ್ಯಗಳು!
ಇಂಥ ರಾಜ್ಯಗಳಿಗೆ ಸರಿಯಾಗಿ
ಮನುಜ ಮನುಜಗೆ ವ್ಯಕ್ತ,
ಮಂತ್ರಿಯಿರಬೇಕು ಮಿಕ–
ಎಂಬ ನಂಬಿಕೆಯ
ಎರಡು ಸಚಿವ ಸಂಪುಟಗಳು
ಸಾಕ್ಷಾತ್ ಸಂಕಟಗಳು!
ಅವುಗಳಲ್ಲಿ
ಹೈಡ್ರಾ ಸರ್ಪದ ಹೆಡೆಗಳಂಥ ಮಂತ್ರಿಗಳು.
ಕುತಂತ್ರಿಗಳು, ಕಂಡಾಪಟ್ಟೆ ಕಂತ್ರಿಗಳು
ಎರಡು ಸಂಪುಟಗಳಿಗೂ ಒಂದೆ ಕ್ಯಾಬಿನೆಟ್ ರೂಮು
ಯಾವ ಸಂಪುಟಕ್ಕೂ ಇಲ್ಲ ಏಕ ಸ್ವಾಮ್ಯದ ಕ್ಷೇಮು!
ಅಲ್ಲಿ ಸಂಪುಟದ ಸಭೆಗಳು ನಿರಂತರ:
ಸಭೆಗಳಿಗೂ ಗಲಭೆಗಳಿಗೂ ಇಲ್ಲ ಅಂತರ!
ಅರ್ಥವೇ ಪ್ರಧಾನವೆಂಬುದು ಆ ಸಂಪುಟದ ಸ್ಲೋಗನ್,

ಕಾಮವೇ ಪ್ರಧಾನವೆಂಬುದು ಈ ಸಂಪುಟದ ಕ್ಲಾ ್ಯರಿಯನ್!
ಎರಡೂ ಸಂಪುಟದವರೂ
ತಂತಮ್ಮ ವಾದ ಸಮರ್ಥಿಸಿದ್ದೇ ಸಮರ್ಥಿಸಿದ್ದು,
ಗುರಿನುಡಿಗಳ ಘೋಷಿಸಿದ್ದೇ ಘೋಷಿಸಿದ್ದು!
"ಅರ್ಥವಿಲ್ಲದೆ ಹೇಗೆ ಕಾರ್ಯಸಾಧನೆ?"
ಎಂಬುದವರ ಸವಾಲು;
"ಕಾಮವಿಲ್ಲದ ಅರ್ಥ ವ್ಯರ್ಥ ಸಂಪಾದನೆ!"
ಎಂಬುದಿವರ ಜವಾಬು!
ಒಂದು ಷರಾಬು
ಇನ್ನೊಂದು ಕಬಾಬು!
"ಜಯವಾಗಲಿ ಅರ್ಥಕ್ಕೆ, ಜಯವಾಗಲಿ ಅರ್ಥಕ್ಕೆ!"
"ಜಯವಾಗಲಿ ಕಾಮಕ್ಕೆ, ಜಯವಾಗಲಿ ಕಾಮಕ್ಕೆ!"
ಕ್ಯಾಬಿನೆಟ್ ರೂಮಿನಿಂದ ಇವೇ ಕೂಗುಗಳು
ಸಂಪುಟ ಸಭೆಗಳಿಂದ ಇವೇ ರಾಗಗಳು!
ಎಂದಿಗೆ ಮುಗಿವುದೋ ಈ ವಿತಂಡ ವಾಗ್ವಾದ?
ಎಂದಿಗಿವರಿಗೆ ಕೇಳಿಸುವುದೋ–
"ಧರ್ಮಂ ಪ್ರಧಾನಂ
ಅರ್ಥಂ ಧರ್ಮಾಂಘ್ರಿಪ ಫಲಂ,
ಅದರ್ಕೆ ರಸಮದು ಕಾಮಂ"
ಎಂಬ ಸಮನ್ವಯ ಸೂತ್ರದ ಸುನಾದ?
ಎರಡು ರಾಜ್ಯಗಳಿಗೆ ಒಂದೇ ರಾಜಧಾನಿ
ಎಂಬ ಗುಮಾನಿ
ನನಗೆ–
ನನ್ನ ಬಗೆಗೇ!

* * *

ನಾವು ನಿರಾಶ್ರಿತರು!

ರಾಷ್ಟ್ರ ವಿಭಜನೆ ಹೆತ್ತ ಅನಾಥ ಸಂತತಿ ನಾವು,
ದ್ವಿರಾಷ್ಟ್ರ ವಾದಕ್ಕಿತ್ತ ಆಹುತಿಯು ನಾವು;
ಜಾತೀಯತೆಯ ಪ್ರೇತವಲ್ಲರಿ ಬಿಟ್ಟ ನೋವಿನ ಹೂವು ನಾವು;

ಬಿಡುಗಡೆಗೆ ತೆತ್ತ ಬೆಲೆ, ಬಲಿ ನಾವು;
ಮತೀಯತೆಯ ಮತ್ತಗಜ ಕಿತ್ತೆಸೆದ
ಕಮಲಗಳು, ಕಮಲ ಲತೆಗಳು ನಾವು–
ನಾವು ನಿರಾಶ್ರಿತರು,
ನಿರ್ಗತಿಕರು,
ನಿರ್ಭಾಗ್ಯರು!
ನಡೆವೆಣಗಳು, ನುಡಿವೆಣಗಳು,
ತುಳಿದವರ ಕಾಲಧೂಳಿಯ ಕಣಗಳು!
ಕಾಲುಶತಮಾನ ಕಳೆಯುತ್ತ ಬಂತು,
ನಾವಿನ್ನೂ ಬರುತ್ತಲೇ ಇದ್ದೇವೆ,
ಸಾವನ್ನೂ ಕರೆಯುತ್ತಲೇ ಇದ್ದೇವೆ,
ಸಾವು ಬರಲಿಲ್ಲವೆಂದು
ನಿಮ್ಮ ಬಳಿಗೆ ಬರುತ್ತಲೇ ಇದ್ದೇವೆ,
ನಾವು ಬಂದಿಹೆವು ನಿಮ್ಮ ಮನೆಗೆ–
ಅಪ್ರಾರ್ಥಿತ ಅತಿಥಿಗಳಾಗಿ,
ಅನಪೇಕ್ಷಿತ ಜ್ಞಾತಿಗಳಾಗಿ!
ಏನು ಮಾಡುವುದು ಮುನ್ನಿನ ಬಂಧುಗಳೆ
ವಿಭಜನೆಯ ವಿಷ ಕೆಡಿಸದ ಅಮೃತ ಬಿಂದುಗಳೆ?
ಏನು ಮಾಡುವುದು, ಎಲ್ಲಿಗೆ ಹೋಗುವುದು,
ಯಾರ ಆಶ್ರಯವನ್ನು ಯಾಚಿಸುವುದು,
ಯಾವ ಸತ್ತೆಯ ಮುಂದೆ ವ್ಯಥೆಯ ಕಥೆಯನಿದ ವಾಚಿಸುವುದು?
ಬಿಡುಗಡೆಯ ಬಡಾಯಿ ಕೊಚ್ಚಿಕೊಳ್ಳುವ ದೇಶಗಳು
ಪ್ರಜಾತಂತ್ರದ ಮಂತ್ರ ಜಪಿಸುವ ದೇಶಗಳು,
ಸ್ವನಿರ್ಣಯಾಧಿಕಾರದ ಘೋಷಣೆ ಗೈವ ದೇಶಗಳು,
ದುರ್ಬಲರ ರಕ್ಷಣೆಯ ಪಣತೊಟ್ಟ ದೇಶಗಳು–
ಸತ್ಯದ, ನ್ಯಾಯದ, ಶಾಂತಿಯ, ಸೋದರತೆಯ, ಸಮಾನತೆಯ
ಸೋಗು ಹಾಕಿರುವ ದೇಶಗಳು

ಎಲ್ಲವೂ ತಟಸ್ಥ, ನಿರ್ಲಿಪ್ತ, ನಿರ್ವಾಣಿ ನಮ್ಮ ಬಗೆಗೆ!
ಬೀಗಬಿದ್ದಿದೆಯೇನೊ ಬಾಯ್ಗೆ, ನಾಲಗೆಗೆ!
ಏನು ಮಾಡುವುದು ಮುನ್ನಿನ ಬಂಧುಗಳೆ–
ಎಲ್ಲರೂ ತೊರೆದರೂ ಕರೆದು ಆಶ್ರಯವಿತ್ತ
ಕಾರುಣ್ಯ ಸಿಂಧುಗಳೆ?
ಬದುಕುವುದೋ, ಬದುಕದಿಹುದೋ?
ಬದುಕಿದರೆ ಏತಕಾಗಿ ಬದುಕುವುದು?
ಯಾತನೆಗಾಗಿಯೆ? ಯಾಚನೆಗಾಗಿಯೆ?
ದೀನತೆಗಾಗಿಯೆ? ಮಾನಹೀನತೆಗಾಗಿಯೆ?
ಬದುಕನೇ ಬಳಸಿರುವ ಶೂನ್ಯತೆಗಾಗಿಯೆ?
ಬದುಕ ತೊರೆವುದೆ? ಏಕೆ?
ದರ್ಪಕ್ಕೆ ಸೊಪ್ಪು ಹಾಕಿಯೆ?
ದೌರ್ಜನ್ಯದ ಮುಂದೆ ಮೊಂಡೆಯೂರಿಯೆ?
ಅನ್ಯಾಯಕ್ಕೆ ಅತ್ಯಾಚಾರಕ್ಕೆ
ಅಮಾನುಷತೆಗೆ ಶರಣಾಗತರಾಗಿಯೆ?
ಇದು ಯಾವ ಪುರುಷಾರ್ಥ?
ಇದೊರೊಳೇನಿದೆ ಅರ್ಥ?
ಬದುಕದಿರೆ ಬಿಡುಗಡೆಯೆ ವ್ಯರ್ಥ!
ನಮ್ಮೊಳಿನ್ನೂ ನೀರಾಗಿಲ್ಲ
ನಮ್ಮ ಪೂರ್ವಜರ ರಕ್ತ!
ಬದುಕ ತೊರೆಯಲು
ನಾವು ಗೈದ ಅಪರಾಧವಾದರೂ ಏನು?
ಹುಟ್ಟಿ ಬೆಳೆದಲ್ಲಿ ಗಟ್ಟಿಯಾಗಿ ನಿಂತುದೆ?
ನಿಂತ ನೆಲವನ್ನೇ ನಂಬಿದುದೆ?
"ಸ್ವಧರ್ಮೇ ನಿಧನಂಶ್ರೇಯಃ" ಎಂದು
ನಂಬಿನಡೆದುದೆ?
"ಸ್ವಭಾಷೆಯೇ ಸ್ವರ್ಗ" ಎಂದು ನುಡಿದುದೆ?
"ಸ್ವಾಯತ್ತತೆ ನಮ್ಮ ಹಕ್ಕು" ಎಂದು ಸಾರಿದುದೆ?
ನಮ್ಮ ವಿಶ್ವಾಸದವರನ್ನೇ ಆರಿಸಿದುದೆ?

ಯಾವುದು ನಮ್ಮ ಅಪರಾಧ?
ಯಾತಕ್ಕಾಗಿ ಈ ನರಮೇಧ?
ಸೈತಾನನಾಳಿಕೆಯನೆ ಒಪ್ಪಿ
ಅನ್ಯಾಯವನೆ ಅಪ್ಪಿ
ಬದುಕಿರೆಂದೆನುವಿರಾ ಭಾರತದ ಬಂಧುಗಳೆ
ಯಾರು ಕೈಬಿಟ್ಟರೂ ನಮ್ಮ ಕೈಬಿಡದ
ಕಾರುಣ್ಯ ಸಿಂಧುಗಳೆ?
ಹೇಳಲಾರಿರಿ ಹೀಗೆ ನೀವು,
ಅಂತೆಯೇ ಬಂದಿಹೆವು ನಿಮ್ಮ ಬಳಿ ನಾವು!
ನೀವು ಕೈಬಿಟ್ಟರೆಮಗುಂಟು ಸಾವು!
ನಾವಾಗೆವು ಸೈತಾನನ ಕೊಡಲಿಗೆ ಕಾವು!
ನಿಮ್ಮ ಬೆಲ್ಲದಲಿ ನಾವಿಷ್ಟು ಬೇವು!
ನೆರವು ನೀಡಿರಿ:
ಕೈವಿಡಿದು ಕಾಪಾಡಿರಿ!
ಕರುಣದಿಂ ನೋಡಿರಿ!
'ಇವನಾರವ, ಇವನಾರವ, ಇವನಾರವ?' ಎನ್ನದಿರಿ!
'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎನ್ನುತಿರಿ!
ತುಸು ನೋಡಿ ನಮ್ಮ ಕಡೆಗೆ–
ಹೇಗಿವೆ ನಮ್ಮ ಉಡಿಗೆ ತೊಡಿಗೆ!
ಉಟ್ಟ ಬಟ್ಟೆಯಮೇಲೆ ಬಂದಿರುವೆವು,
ಹಸಿದ ಹೊಟ್ಟೆಯ ಹೊತ್ತು ತಂದಿರುವೆವು!
ಪುಟ್‌ಪಾಥೆ ಮಂಚ ಬಾಣತಿಗೆ,
ಪಾಷಾಣ ತೊಟ್ಟಿಲವು ಹಸುಗೂಸಿಗೆ!
ಭೂಮಿಯೇ ಹಾಸಿಗೆಯು, ಅಕಾಶ ಹೊದಿಕೆ,
ಚಿಂದಿಯೇ ಸೀರೆ, ಕೇಶಗಳೆ ರವಿಕೆ!
ಅಳಲೆ ಆಹಾರ, ಕಂಬನಿಯೆ ಪಾನೀಯ,
ನಿಟ್ಟುಸಿರೆ ಔಷಧವು, ನಿರಾಶೆಯೇ ಉಪಾಯ!
ಅಲ್ಲಿ ಬಿದ್ದು ಹದ್ದಿಗೆ ಆಹಾರವಾಗುದಕಿಂತ

ಇಲ್ಲಿ ಬಿದ್ದು ನಿಮ್ಮ ಗದ್ದೆಗೆ ಗೊಬ್ಬರವಾಗುವೆವು;
ನೆರವು ನೀಡಿರಿ–
ತಾಯ್ತಂದೆಗಳಿರ, ಬಂಧುಗಳಿರ–
ನೆರವು ನೀಡಿರಿ,
ಕರವಿಡಿದು ಕಾಪಾಡಿರಿ,
ಕರುಣದಿಂ ನೋಡಿರಿ,
ಉದ್ಧಾರ ಮಾಡಿರಿ!
ಬಂದಿಹೆವು ನಿಮ್ಮ ಬಾಗಿಲಿಗೆ
ನಾವು...ನಾವು
ನಿರಾಶ್ರಿತರು,
ನಿರ್ಗತಿಕರು,
ಶರಣಾರ್ಥಿಗಳು,
ಮೈತಳೆದ ಅರ್ತಿಗಳು!

* * *

ಏ ಬಡತನವೇ, ಹೊರಟು ಹೋಗು!

ಏ ಬಡತನವೇ, ಹೊರಟುಹೋಗು!
ದೂರ ತೊಲಗು, ದೂರ ತೊಲಗು, ತೊಲಗು!
ಅಮ್ಮನ ಆಜ್ಞೆ ಹೊರಟು
ಹದಿನೈದು ವರ್ಷಗಳಾದರೂ
ಇನ್ನೂ ಮುಂದೆಯೇ ನಿಂತಿರುವೆಯಾ–
ಹಲ್ಲು ಕಿರಿಯುತ್ತ,
ಜೊಲ್ಲು ಸುರಿಸುತ್ತ?
ಹೋಗೋ ಹೋಗು–ಹೋಗು!
ಎಲ್ಲಿಗಾದರೂ ಹಾಳಾಗಿ ಹೋಗು!
ಹಳ್ಳಿಗಳಿಗೆ ಹೊರಟು ಹೋಗು;
ನಗರಗಳ ಕೊಳೆಗೇರಿಗಳಿಗೆ ಹೋಗು;
ನಿರುದ್ಯೋಗಿಗಳ ಬರಿಮನೆಗಳಿಗೆ ಹೋಗು;
ಅನಾಥರ, ಅಂಗವಿಕಲಗಳ ಕುಟೀರಗಳಿಗೆ ಹೋಗು;

ಆದಿ ಜನರ ಕೇರಿಗಳಿಗೆ,
ಗುಳೇಕಾರರ ಊರುಗಳಿಗೆ,
ಲಮಾಣಿಗಳ ತಾಂಡಾಗಳಿಗೆ,
ಕೇರಾಫ್ ಪುಟ್‌ಪಾಥ್ ಜನರ
ತುಳಿತದ ತಾಣಗಳಿಗೆ ಹೋಗು!
ಎಲ್ಲಿಗಾದರೂ ಹಾಳಾಗಿ ಹೋಗು–
ನಮ್ಮಬೆನ್ನು ಬಿಡು!
ಹೋಗುವುದಿಲ್ಲವೆ?
ನಿಲ್ಲು,
ನಮ್ಮ ಬಡತನ ನಿವಾರಣೆಯ
ನೀಲಿ ನಕ್ಷೆಗಳ ನೀಲಗಿರಿಯಲ್ಲಿ,
ನಮ್ಮ 'ಗರೀಬಿ ಹಟಾವ್' ಗೊತ್ತುವಳಿಗಳ
ವಿಂಧ್ಯಾದ್ರಿ ಹಿಮಾದ್ರಿಗಳಲ್ಲಿ
ಜೀವಂತ ಹುಗಿದುಬಿಡುವೆವು ನಿನ್ನನ್ನು!
ಯಾರೆಂದು ತಿಳಿದಿರುವಿ ನಮ್ಮನ್ನು?
ನಾವೂ ನಿನ್ನೆ ಮೊನ್ನೆಯವರೆಗೆ
ನಿನ್ನ ಸಂತಾನಕ್ಕೆ ಸೇರಿದವರೇ!
ನಿನ್ನಂತೆ, ಎಲುವಿನ ಹಂದರವಾಗಿದ್ದವರೇ!
ಈಗಲೀಗ
ಕಟ್ಟಿಸಿದ್ದೇವೆ
ಪಟ್ಟಣಗಳಲ್ಲಿ
ಬಹುಮಹಡಿ ಬಂಗ್ಲೆಗಳನ್ನು!
ಇಟ್ಟಿದ್ದೇವೆ
ವಿದೇಶೀ ಕಾರುಗಳನ್ನು,
ಠೀವಿಯ ಟಿ.ವಿ.
ಶೈತ್ಯಾಗಾರಗಳನ್ನು!
ಆದರೂ ತೊಟ್ಟಿದ್ದೇವೆ
ಪವಿತ್ರ ಖಾದಿಯನ್ನು–
ಕ್ಷಿಪ್ರ ಶ್ರೀಮಂತಿಕೆಗೆ ಹಾದಿಯನ್ನು!

ಈಗಿದು ಬಡವರ ಕಡವರವಲ್ಲ,
ಬಿಡುಗಡೆಯ ಬವರದ ಸಮವಸ್ತ್ರವಲ್ಲ,
ದಾಸ್ಯವಿಚ್ಛೇದಕ ಶಸ್ತ್ರವಲ್ಲ–
ಈಗ ಇದು
ಕಾನೂನು ಕಟ್ಟಳೆಗಳ ಪುಸ್ತಕಗಳನ್ನು
ಪರಪರನೆ ಹೆಚ್ಚುವ ಈಳಿಗೆ:
ಠಾಣೆಗಳ ಲಾಕಪ್ಪುಗಳ,
ಜೈಲುಗಳ ಬ್ಯಾರಕ್ಕುಗಳ
ಕಂಬಿಗಳನ್ನು
ಕರಕರನೆ ಕೊಯ್ವ
ಗರಗಸ!
ಕಳ್ಳಸಂತೆ, ಕಲಬೆರಕೆ,
ಬೆಲೆಯೇರಿಕೆ,
ಕಂತ್ರಿನೋಟು, ಕಳ್ಳಸಾಗಾಣಿಕೆ
ಇತ್ಯಾದಿ
ರಾಷ್ಟ್ರೋದ್ಧಾರ ಕಾರ್ಯಗಳಿಗೆ
ಅಡ್ಡಬರುವ
ಅಡ್ಡಿಯ ಗುಡ್ಡಗಳನ್ನು
ಪುಡಿಪುಡಿ ಮಾಡುವ
ವಜ್ರಾಯುಧ!
ಇಂಥ ದಿವ್ಯಾಸ್ತ್ರಧಾರಿಗಳಾದ
ನಮ್ಮ
ಕಟ್ಟಪ್ಪಣೆಯ ಕಡೆಗಣಿಸಿ
ನಿತ್ತರಿಸಿಕೊಳ್ಳುವಿಯಾ
ನೀನು?
ನಮ್ಮ ಘೋಷಣೆಗಳಿಂದ
ಬಿರಿಯುತಿದೆ ಬಾನು!
ಚುನಾವಣೆಯಿಂದ ಚುನಾವಣೆಗೆ
ನಮ್ಮ ಭೀಷಣ ಘೋಷಣೆಗಳು

ಘೋಷಣೆಗಳ ಬಲದಿಂದಲೇ
ಶೋಷಣೆಗಳು!
ಮಾಡದಿರು ಬರೀ ದೂಷಣೆ–
ಮಾಡೆಮ್ಮ ಸಾಧನೆಗಳ ತಪಾಸಣೆ!
ಇದಾಗಲೇ
ಉದ್ಯಮಪತಿಗಳ ಮಹಲುಗಳಿಂದ.
ಮಂತ್ರಿ–ಶಾಸಕ–ಪ್ರಶಾಸಕರ ಭವ್ಯ ಭವನಗಳಿಂದ,
ಗುತ್ತಿಗೆದಾರ
ಕಳ್ಳಸಾಗಾಣಿಕೆದಾರ,
ಕಾಳಸಂತೆಚೋರ–
ಎಲ್ಲ ಹರಾಮಖೋರರ
ಸಿರಿಸುರಿವ, ಸಿರಿಹರಿವ ಸದನಗಳಿಂದ
ಹೊರದೂಡಿದ್ದೇವೆ ನಿನ್ನನ್ನು!
ಹೊಸದಾಗಿ ಹಣವಂತರಾಗಬಯಸುವರಿಗೆ
ಕಳ್ಳಭಟ್ಟಿ ಸೆರೆ,
ಮಟಕಾ ಜೂಜುಗಳ
ಖುಲ್ಲಮ್‌ಖುಲ್ಲಾ
ಪರವಾನಗಿ ಕೊಟ್ಟುಬಿಟ್ಟಿದ್ದೇನೆ!
ಅವರ ನಿಗೂಢ ನೀಡಗಳಿಂದಲೂ
ನಿನ್ನನ್ನು ಚೆಂಡುಹಿಡಿದು ತಳ್ಳುತ್ತಿದ್ದೇವೆ!
ಪಂಚತಾರಾ ಹೋಟೆಲುಗಳಲ್ಲಿ ಕುಳಿತು
ನೊರೆ ನೊರೆ ರಾಯಲ್ ಸೆಲೂಟು
ಜುರು ಜುರು ಎಳೆಯುತ್ತ,
ವಿದೇಶೀ ಸಿಗರೇಟುಗಳ
ಹೊಗೆ ಸುರುಳಿ ಉಗುಳುತ್ತ,
ಕ್ಯಾಬರೆ ಕುಣಿತ ನೋಡುತ್ತ,
ಸ್ಟ್ರಿಪ್‌ಟೀಜ್ ಬೇಡುತ್ತ,
ಬೆತ್ತಲೆ ನೃತ್ಯಗಳಿಗಾಗಿ ಕಾಡುತ್ತ,
ಕೋಡಗಿಸುತ್ತ,

ಸೈತಾನಿಸುತ್ತ
ನಿನ್ನನ್ನು ಓಡಿಸುವ
ಉಪಾಯಗಳನ್ನೇ
ಅರಸುತ್ತಿರುತ್ತೇವೆ!
ನಿನ್ನ ಹೆಸರನ್ನೇ ಬಳಸಿಕೊಂಡು
ನಮ್ಮ ಬಲವ ಬೆಳೆಸಿಕೊಂಡು,
ನಿನ್ನನ್ನು ಪಾತಾಳಕ್ಕೆ ತುಳಿವ
ಯುಕ್ತಿ ಪ್ರಯುಕ್ತಿಗಳನ್ನೇ
ಹುಡುಕುತ್ತಿರುತ್ತೇವೆ!
ಕಾರಣ,
ಖಬರದಾರ್,
ಹುಷಿಯಾರ್-ಸದ್-ಹುಷಿಯಾರ್
ಏ ಬಡತನದ ಬಡಪಾಯಿ-
ನಮ್ಮ ಎಂಜಲಕೆ ಬಾಯ್ಬಿಡುವ ಬಡನಾಯಿ!
ಕೇಳೆಮ್ಮ
ಹೊರಟು ಹೋಗೆಂಬ
ಕಟ್ಟಪ್ಪಣೆಯ
ಮಾಡು ಪಲಾಯನ
ಎಲ್ಲಿಯಾದರೂ ಅಡಗು
ಇಲ್ಲದಿರೆ, ತಿಂಬೇವು ನಿನ್ನ ಅಡಗು!

* * *

ಹಣ-ಹಣತೆಗಳ ಹಬ್ಬವೆ

ಬೆಳಕು ಕತ್ತಲೆಯನೇ ಕಬಳಿಸಲಿ,
ಕತ್ತಲೆ ಬೆಳಕನ್ನೇ ನುಂಗಲಿ,
ಬೆಳಕು ನಿಶ್ಚಿತ!
ಅಂತೆ ಬೆಳಕಿನ ವ್ರತ-
ಬಾಳಾಗೆ ಬೆಳಕಿನ ಪಥ!
ಉಳ್ಳವರ ಬಲ್ಲಿದರ

ಹಣದ ಹಬ್ಬ ಮಾತ್ರವಲ್ಲ
ಈ ದೀಪಾವಳಿ:
ಕತ್ತಲೆಯ ಹೊಲದಲ್ಲಿ
ಬೆಳಕನ್ನು ಬಿತ್ತುವ
ಹಣತೆಗಳ ಹಬ್ಬವೂ ಹೌದು–
ಈ ದೀಪಾವಳಿ
ಹಣದ ಮಬ್ಬಿನ ಗರ್ಭ ಸೇರಲಿ
ಹದುಳದ ಹಣತೆಗಳ ಸಿರಿ ಬೆಳಕು–
ಸಾಕು ಬರಿಥಳುಕು!
ಹೊಸ ಬಾಳ ಹರಿಕಾರನಾಗಿ
ಹರಿಯಲಿ ಹೆಚ್ಚಿನ ಹಣವು
ಹಳ್ಳಿಗಳತ್ತ
ಕೊಳಗೇರಿಗಳತ್ತ
ಅರೆ ಹೊಟ್ಟೆಯತ್ತ
ಬರಿ ಮೈಯತ್ತ
ಹೊಸ ಆಸೆಯ ಚಿಗುರಿಸುತ್ತ
ಗುಡಿಸಲುಗಳ
ಜೋಪಡಿಗಳ
ದಟ್ಟ ಕಾವಳದಲ್ಲಿಯೇ
ಲಕಲಕಿಸುವ
ನೇತ್ರನಕ್ಷತ್ರಗಳು!
ಥಳಥಳಿಪ ಮಹಲುಗಳ
ಝಗಝಗಿಪ ದೀಪಗಳ
ಪ್ರಖರ ಪ್ರಕಾಶದಲ್ಲಿಯೂ
ನಿಸ್ತೇಜ ನಯನಗಳು!
ಆ ಹೊಳಪು ಇಲ್ಲಿಗೆ
ಈ ಹೆಚ್ಚಿನ ಹಣ ಅಲ್ಲಿಗೆ
ಹರಿಸಲಣೆ ಗೊಳಿಸುವಿಯಾ
ಹಣ–ಹಣತೆಗಳ ಹಬ್ಬವೆ?

* * *

ದುಡಿವ ಕೈಗಳಿಗೆ ನಮೋ ನಮೋ!

ದುಡಿವ ಕೈಗಳಿಗೆ ನಮೋ ನಮೋ
ಕೊಡುವ ಕೈಗಳಿಗೆ ನಮೋ ನಮೋ
ಬೇಡದೆ ಕಾಡದೆ ದುಡಿದಷ್ಟನ್ನೇ
ಪಡೆವ ಕೈಗಳಿಗೆ ನಮೋ ನಮೋ!
ದುಡಿವ ಕೈಗಳಿಗೆ, ಗಿಡವ
ನೆಡುವ ಕೈಗಳಿಗೆ, ನೆಟ್ಟು
ಕಡಿವ ಕೈಗಳಿಗೆ, ಜಲ್ಲಿ
ಒಡೆವ ಕೈಗಳಿಗೆ ನಮೋ ನಮೋ!
ಆಡುವ ಕೈಗಳಿಗೆ, ಮೊಸರು
ಕಡೆವ ಕೈಗಳಿಗೆ, ಕಸವ
ಹೊಡೆವ ಕೈಗಳಿಗೆ, ಸಗಣಿ,
ಹಿಡಿವ ಕೈಗಳಿಗೆ ನಮೋ ನಮೋ!
ದುಡಿವ ಕೈಗಳಿಗೆ, ಶಸ್ತ್ರ
ತೊಡುವ ಕೈಗಳಿಗೆ, ವೀಣೆ
ಮಿಡಿವ ಕೈಗಳಿಗೆ, ಸಂತ
ವಿಡುವ ಕೈಗಳಿಗೆ ನಮೋ ನಮೋ!
ಕೊಡುವ ಕೈಗಳಿಗೆ, ಬಾಷ್ಪ
ತೊಡೆವ ಕೈಗಳಿಗೆ, ಅನ್ನ
ವಿಡುವ ಕೈಗಳಿಗೆ, ಎತ್ತಿ
ಹಿಡುವ ಕೈಗಳಿಗೆ ನಮೋ ನಮೋ!
ದುಡಿವ ಕೈಗಳಿಗೆ ನಮೋ ನಮೋ
ಕೊಡುವ ಕೈಗಳಿಗೆ ನಮೋ ನಮೋ
ಬೇಡದೆ ಕಾಡದೆ ದುಡಿದಷ್ಟನ್ನೇ
ಪಡೆವ ಕೈಗಳಿಗೆ ನಮೋ ನಮೋ!

* * *

ಇದೇ ಶುಭ ಗಳಿಗೆ!

ಎಲ್ಲಿಯೇ ಇದ್ದರೂ ಎಲ್ಲೆಡೆಯೊಳಿದ್ದಂತೆ
ಹಸಿವೆ ವಿಷಮತೆ ಜಾಡ್ಯ ಸ್ವಾರ್ಥ ಸುಲಿಗೆ!
ನಿನಗಿರುವ ಸಮಯ ಸಿರಿ ಶಕ್ತಿ ಸಾಧನಗಳನು
ಇವ ನಿವಾರಿಸೆ ಬಳಸು, ಇದೇ ಶುಭ ಗಳಿಗೆ!
ಸೆರೆ ಸಿಂದಿಗಳಿಗುಂಟು, ಶಸ್ತ್ರಾಸ್ತ್ರಗಳಿಗುಂಟು,
ಸಚಿವ ಸಂಪುಟಗಳ ವಿಸ್ತರಣೆಗುಂಟು;
ಹೊರದೇಶ ಸಂಚಾರ ಮೆರವಣಿಗೆಗಳಿಗುಂಟು,
ಹಸಿದವರಿಗಿಲ್ಲವೆನ್ನುವುದೆಂಥ ಪಂಟು?
ವರ್ಣಾಂಧಕಾರವೋ, ಲಿಂಗಭೇದವೊ, ಕಸಬು–
ಕಾಯಕದೊಳೇ ತಾರತಮ್ಯ ತೋರುವುದೋ–
ಮೂಲವೇನೇ ಇರಲಿ ಮೇಲು ಕೀಳಿನ ಭಾವ
ಕಾಳಕಟವೆ ನಿಜದಿ; ಅದನು ಮೀರುವುದು!
ದೇಹ–ಮನ–ಬುದ್ಧಿಗಳಿಗೆಲ್ಲ ಜಾಡ್ಯವು ಇಂದು–
ಉಳ್ಳವನಿಗೂ ಇಲ್ಲದವಗು ಜಾಡ್ಯ!
ಆಸ್ಪತ್ರೆ ಹೆಚ್ಚಿದರು ಆರೋಗ್ಯ ಮೃಗಜಲವು–
ವಿಜ್ಞಾನ ಯುಗದಲ್ಲಿ! ಎಂಥ ಚೋದ್ಯ!
ಅರಮನೆಯ ಆಧಾರ ತಪ್ಪಿತೆನುವಷ್ಟರಲಿ
ಹೊಸ ಸ್ಥಾನ ಸಿಕ್ಕಿಹವು ಸ್ವಾರ್ಥ ದೈತ್ಯನಿಗೆ!
ಡಿಳ್ಳಿಯಿಂದಲೆ ಹರಿದು ಹಳ್ಳಿಗೂ ಹರಡಿರುವ
ಸ್ವಾರ್ಥ ಸಂತತಿ ಕೊಂದು ಕಟ್ಟು ಸೆದಿಗೆ!
ದೇವರಿಗೆ ಅವತಾರ ಹತ್ತೊ ಇಪ್ಪತ್ತೆ ೃದೊ
ಸುಲಿಗೆಯವತಾರಗಳ ಲೆಕ್ಕವುಂಟೆ?
ಧರ್ಮ, ದೇವರು, ಸ್ವಾಮಿ, ಸರಕಾರ, ಸಹಕಾರ–
ಎಲ್ಲೆಲ್ಲು ಸುಲಿಗೆಯದೆ ಸಾಮ್ರಾಜ್ಯ, ತಂಟೆ!
ಸುಲಿಗೆ–ವಿಷಮತೆ–ಸ್ವಾರ್ಥ ರಕ್ಕಸರಿಗುಡಿಸುವರು
ದೇವತೆಯ ಉಡುಪನ್ನು, ಮರುಳು ಗೊಳಿಸೆ!
ವೇಷವೇನೇ ಇರಲಿ, ಮೋಸ ಹೋಗಲೆ ಬೇಡ–
ಸಿದ್ಧನಾಗಿವುಗಳನು ಹೊಡೆದೋಡಿಸೆ!
ಎಲ್ಲಿಯೇ ಇದ್ದರೂ ಎಲ್ಲೆಡೆಯೊಳಿದ್ದಂತೆ–
ಹಸಿವೆ, ವಿಷಮತೆ, ಜಾಡ್ಯ, ಸ್ವಾರ್ಥ ಸುಲಿಗೆ!

ನಿನಗಿರುವ ಸಮಯಸಿರಿ ಶಕ್ತಿ ಸಾಧನಗಳನು
ಇವ ನಿವಾರಿಸೆ ಬಳಸು. ಇದೇ ಶುಭ ಗಳಿಗೆ:

* * *

ಜೀರ್ಣೋದ್ಧಾರ

ಈ ಸುಂದರ ಮಂದಿರ ಬಿದ್ದು ಹೋಗುತ್ತಿದೆ,
ಇದರ ಜೀರ್ಣೋದ್ಧಾರವಾಗಬೇಕೆಂಬೆಯಾ?
ಜೀರ್ಣವಾದಷ್ಟೂ ಇದರ ಪುರಾತತ್ವಮೌಲ್ಯ ಹೆಚ್ಚುವುದಣ್ಣ.
ಜೀರ್ಣೋದ್ಧಾರವಾದರೆ ಇದ್ದ ಕಿಮ್ಮತ್ತೂ ಉಳಿಯದಣ್ಣ!
ಹಳೆಯದಾದಷ್ಟೂ, ಹೊಲಸಾದಷ್ಟೂ,
ಹಲಾಕು ಆದಷ್ಟೂ ಹೆಚ್ಚು ಬೆಲೆ ಇದಕ್ಕೆ,
ಜೀರ್ಣೋದ್ಧಾರ ಮಾಡಿ ತರದಿರು ಇದರ ಮಹತ್ವಕ್ಕೆ ಧಕ್ಕೆ!
ಪುರಾತತ್ವ ಇಲಾಖೆಗೆ ವಹಿಸಿಕೊಟ್ಟುಬಿಟ್ಟರೆ
ಸಾಕೆನ್ನಿಸುತ್ತಿದೆ;
ಅದರ ಲೆಕ್ಕವಿಲ್ಲದ ಅರಕ್ಷಿತ ದೇಗುಲಗಳ ಪಟ್ಟಿಗೆ
ಇದೂ ಸೇರಿ ಹಾಯಾಗಿರುತ್ತದೆ;
ಇನ್ನಷ್ಟು ಭಗ್ನವಾಗಿ, ನಾಶಸಂಲಗ್ನವಾಗಿ,
ಇನ್ನಷ್ಟು ಮೌಲಿಕವೆನಿಸುತ್ತದೆ!
ಇದರ ಜೀರ್ಣೋದ್ಧಾರ ಮಾಡಿದರೆ
ಹಾಕಿದ ಹಣ ಹಾಳು,
ಹೊತ್ತು ಹೊತ್ತಿಗೆ ಪೂಜಾದಿಗಳ
ವ್ಯವಸ್ಥೆ ಮಾಡುವ ಗೋಳು!
ಅಲ್ಲದೆ, ಚಾಚು ಪೀಠಗಳಲ್ಲಿ
ಅಲ್ಲೊಂದು ಇಲ್ಲೊಂದು ಅಪ್ಪಿ ತಪ್ಪಿ ಉಳಿದಿರುವ
ಕಲಾಮಯ ವಿಗ್ರಹಗಳ ಕದ್ದು
ವಿದೇಶೀಯರಿಗೆ ಮಾರಿ ಕಪ್ಪು ಹಣ ಗೆದ್ದು
ಶುಭ್ರ ಶ್ರೀಮಂತರಾಗುವ
ಸುವರ್ಣಸಂಧಿ ತಪ್ಪುವ ಅನಾಹುತ!
ಯಾಕಪ್ಪಾ ಈ ಪೀಕಲಾಟ?

ಮೇಲಾಗಿ,
ಈಗ ಇಲ್ಲಿ ಬೀಡು ಬಿಟ್ಟಿರುವ ಬಾವುಲಿಗಳು, ಇಲಿಗಳು,
ಹಾವು ಹೆಗ್ಗಣಗಳು
ಇನ್ನೆಲ್ಲಿಗೆ ಹೋಗಬೇಕು?
ಇಲ್ಲಿ ಕದ್ದು ಕೂಡುವ ಜಾರ ಜಾರೆಯರು, ಚೋರರು,
ಜೂಜುಗಾರರು, ಕುಡುಕರು, ಕದೀಮರು
ಇನ್ನಾವ ಆಶ್ರಯಸ್ಥಾನ ಅರಸಬೇಕು–
ಇದರ ಜೀರ್ಣೋದ್ಧಾರವಾಗಿ
ಇಲ್ಲಿ ವ್ಯವಸ್ಥೆ ಸ್ಥಾಪಿತವಾದರೆ?
ವ್ಯವಸ್ಥೆಯ ವೈರಿಗಳು ನಾವು,
ನಮ್ಮಿಂದ ವ್ಯವಸ್ಥೆಗೆ ಸಾವು!
ವ್ಯವಸ್ಥೆಯಿರುವಲ್ಲಿ ಪ್ರಯೋಜನ ನಾಸ್ತಿ ನಮಗೆ;
ಅವ್ಯವಸ್ಥೆಯಿದ್ದರೇ ಲಾಭ ಜಾಸ್ತಿ ನಮಗೆ;
ಅಂತೆಯೇ, ಅವ್ಯವಸ್ಥೆಯಲ್ಲಿಯೇ ಆಸ್ಥೆ ನಮಗೆ!
ಇರಲಿ ಬಿಡಿ ಅವ್ಯವಸ್ಥೆ,
ಅಸ್ತವ್ಯಸ್ತತೆಯೇ ಇಂದಿನ ವ್ಯವಸ್ಥೆ!
ಹೀಗಿರುವಾಗ,
ಏಕೆ ಜೀರ್ಣೋದ್ಧಾರ?
ಆಗಲಿ ಮೊದಲು ನಮ್ಮ ಉದ್ಧಾರ!

* * *

ರಾಯ್‌ಬರೇಲಿ ರೈತರ ಹಾಡು

ಇಂದಿರಾಜಿ ಆಗಲಿ, ಇನ್ನಾರೇ ಆಗಲಿ,
ಸೆರೆಮನೆಗೆ ಕಳಿಸುವರ
ಮನೆಗೆ ಕಳಿಸುವೆವು!
ಒಲಿಸಿ ಆಳ್ವುದ ಬಿಟ್ಟು ಅಳಿಸಿ ಆಳುವರನ್ನು
ಕೆಳಗೆ ಇಳಿಸುವೆವು!
ರಾಮರಾಜ್ಯವೂ ಬೇಡ,
ಗ್ರಾಮರಾಜ್ಯವೂ ಬೇಡ,

ಪ್ರಜಾರಾಜ್ಯವೂ ಬೇಡ,
ಸುಖೀರಾಜ್ಯವೂ ಬೇಡ–
ನನ್ನ ರಾಜ್ಯವೇ ಬೇಕು, ಆಮೇಲೆ
ನನ್ನ ಮಗನ ರಾಜ್ಯ ಬೇಕುನ್ನುವರ
ಉರುಳಿಸುವೆವು!
ಎಲ್ಲಿಂದ ಬಂದರೋ
ಅಲ್ಲಗೇ ತೆರಳಿಸುವೆವು!
ನಾವು ರೈತರು ಇಂದು ಒಂದಾದೆವು–
ಸುಲಿವವರ ಸದೆಬಡಿಯೆ ಮುಂದಾದೆವು!
ಹಿಂದು ಮುಸ್ಲಿಮರೆಂದು
ಸಿಖ್ಖ ಕ್ರೈಸ್ತರು ಎಂದು
ಹರಿಜನ ಗಿರಿಜನರೆಂದು
ಹಿಂದುಳಿದವ ಮುಂದುವರಿದವನೆಂದು
ನಮ್ಮ ವಿಭಾಗಿಸಿ ಭೋಗಿಸಿದವರ
ಅಟ್ಟುವೆವು ಆಚೆ!
ಬೆಣ್ಣೆ ತೂಗಿದ ಮಂಗಗಳನು
ನೂಕುವೆವು ಈಚೆ!
ನಾವು ರೈತರು ಇಂದು ಒಂದಾದೆವು,
ಸುಲಿವವರ ಸದೆಬಡಿಯೆ ಮುಂದಾದೆವು!
ನೀನ್ಯಾಕೋ ನಿನ್ನ
ಹಂಗ್ಯಾಕೋ ಬಡವ
ನಿನ್ನ ನಾಮದ ಬಲವೊಂದು
ಇದ್ದರೆ ಸಾಕೋ ಬಡವ–ಎಂದು
ಬಡವರ ಹೆಸರಿನಲೆ ಬಡವರ ಸುಲಿದವರ
ಸದ್ದಡಗಿಸುವೆವು;
ಗೋಮುಖದ ವ್ಯಾಘ್ರಗಳ
ಒದ್ದೋಡಿಸುವೆವು!
ನಾವು ರೈತರು ಇಂದು ಒಂದಾದೆವು–
ಸುಲಿವವರ ಸದೆಬಡಿಯೆ ಮುಂದಾದೆವು!

ನಮ್ಮಂಥವರ
ಒಂದು ವರ್ಷದ ಗಳಿಕೆ
ಸಾಮ್ಯವಾದಿಗಳಿವರ
ಒಂದು ದಿವಸದ ಬಳಕೆ!
ವೇಷಗಾರಿಕೆಯ ಮೋಸಗಾರರಿವರ
ದುಡಿಸುವೆವು ಹೊಲದಿ!
ವಿದೇಶದ ಕಾರಿನಿಂದಿಳಿಸಿ
ನಡೆಸುವೆವು ನೆಲದಿ!
ನಾವು ರೈತರು ಇಂದು ಒಂದಾದೆವು–
ಸುಲಿವವರ ಸದೆಬಡಿಯೆ ಮುಂದಾದೆವು!
ಐದು ವರ್ಷಕ್ಕೊಮ್ಮೆ
ಮುಖವ ತೋರಿಸುವವರ
ತಮ್ಮ ಹಿತಕಾಗಿಯೇ
ನಮ್ಮ ಮತವೆನುವವರ
ಸುಳ್ಳು ವಚನಗಳ ಕಳ್ಳರಿವರ
ತಳ್ಳುವೆವು ಗಣಿಗೆ!
ಬೊಜ್ಜು ಕರಗಿಸಲೆಂದು
ದೂಡುವೆವು ಗಿರಣಿಗೆ!
ನಾವು ರೈತರು ಇಂದು ಒಂದಾದೆವು,
ಸುಲಿವವರ ಸದೆಬಡಿಯೆ ಮುಂದಾದೆವು!
ಹಣ ಹೆಂಡಗಳ ಬಲದಿ
ಜಾತಿ ಕುಲಗಳ ಬಲದಿ
ಒಡೆದು ಒಡೆತನಗೈವ
ಭೇದನೀತಿಯ ಬಲದಿ
ಮುಗ್ಧ ರೈತರ ಮರುಳುಗೊಳಿಸುತ್ತ
ಆಳುವ ಕಾಲ ಹೋಯ್ತು!
ನಮ್ಮ ಒಗ್ಗಟ್ಟಿನಲೆ ನಮ್ಮ ಏಳಿಗೆಯೆಂಬ
ಅರಿವು ನಮಗಾಯ್ತು!
ನಾವು ರೈತರು ಇಂದು ಒಂದಾದೆವು

ಸುಲಿವವರ ಸದೆಬಡಿಯೆ ಮುಂದಾದೆವು!
ತುರ್ತುಸ್ಥಿತಿ, ಮೀಸಾ,
ಬಿ.ಎಸ್.ಎಫ್., ಪಾಶ,
ರಿಜರ್ವ್ ಪೋಲಿಸ್,
        ಸೆರೆಮನೆ ವಾಸ
ಯಾವುವೂ ಬಗ್ಗಿಸವು
        ನಮ್ಮನಿನ್ನು!
ಬಗ್ಗಿಸಲು ಬಯಸುವರ
ಬಗ್ಗಿಸುವೆವಿನ್ನು!
ನಾವು ರೈತರು ಇಂದು ಒಂದಾದೆವು,
ಸುಲಿವವರ ಸದೆಬಡಿಯೆ ಮುಂದಾದೆವು!
ಇವರ ಮತಗಳು ನಮ್ಮ
ಕಿಸೆಯಲ್ಲೆ ಇವೆಯೆಂಬ
ನಮ್ಮನುಳಿದರೆ ಇವರಿ-
ಗಿನ್ನಾರು ಗತಿಯೆಂಬ
ಭ್ರಾಂತಿ ಬಿಡಿ, ಭ್ರಾಂತಿ ಬಿಡಿ
        ಇನ್ನಾದರೂ!
ನಮ್ಮ ನಂಬಿಕೆ ಉಳಿಸಿ-
        ಮತಗಳನು ಬೇಡಿರಿ
                ಮುಂದಾದರೂ!
ನಾವು ರೈತರು ಇಂದು ಒಂದಾದೆವು,
ಸುಲಿವವರ ಸದೆಬಡಿಯೆ ಮುಂದಾದೆವು!

* * *

ಹೆಗಲು

ಹೌದು ಬುದ್ಧಿ-
        ಇದು ನನ್ನ ಹೆಗಲಲ್ಲ.
        ನಿಮ್ಮ ಹೆಗಲು;

ಇದು ನಿಮ್ಮನ್ನು
ಹೊರಲೆಂದೇ ಹುಟ್ಟಿದೆ–
ಇರುಳು ಹಗಲು!
ಇದು ಮೆತ್ತಗಿಲ್ಲ,
ಮೆತ್ತೆ ಹಾಕಿ ಹತ್ತಿರಿ–
ಇಲ್ಲಿ ಉಳಿದಿರುವುವು
ಬರೀ ಎಲುವು ತೊಗಲು!
ನೀವು
ಇದರ ಮೇಲೆ ಕುಕ್ಕುರಿಸುವ
ಹಕ್ಕು ಪಡೆದುಕೊಂಡೇ
ಹುಟ್ಟಿದ್ದೀರಿ:
ನಾನೂ, ನನ್ನ ಹೆಗಲೂ
ನಿಮಗೆ ಹನುಮನಾಗಲೆಂದೇ
ಹುಟ್ಟೀವಿರಿ!
ಬನ್ನಿ, ಹೆಗಲೇರಿರಿ
ಹರಾಹುರಿಯಿಂದ:
ನಾನೂ ಹೊತ್ತು ನಡೆವೆ
ತರಾತುರಿಯಿಂದ–
ನಿಮ್ಮ ಸಿರಿಮನೆಯತ್ತ,
ತೇಕುತ್ತ ದೇಕುತ್ತ!
ಭರ್ಜರಿ ಬಂಗ್ಲೆ ಮುಟ್ಟಿದ ಮೇಲೆ
ಹೆಗಲಿನಿಂದಿಳಿದು
ನಾಲ್ಕು ಕಾಸು ಬಿಸಾಡುವಿರಂತೆ!
"ಹೆಗಲು ನೋಯಿತೇನೋ ಹನುಮ?'
ಎಂದು ಸಹ ಕೇಳದೆ
ಒಳಗೆ ಹೋಗಿ,
ಬಕ್ಕರಿಸಿ ತುಪ್ಪ ಹೋಳಿಗಿ,
ಬಾದಾಮಿ ಹಾಲು ಕುಡಿದು,

ಹೆಗಲ ಮೇಲೆ ಸೆಟಿದು ಕುಳಿತು ಸೆಡೆದ ಮೈಯ
ಮೆತ್ತಗೆ ಮೆತ್ತೆಯ ಮೇಲೆ ಉರುಳಿಸಿ,
ಬಡವರ ರಾಜ್ಯ ಬಂದೇ ತೀರಬೇಕೆಂದು
ಹೃದಯಾರೆ ಹಾರೈಸುತ್ತ
ಹಾಯಾಗಿ ಮಲಗಿ
ಗೊರಕೆ ಹೊಡೆಯುವಿರಂತೆ!
ನಾನೋ,
ಇನ್ನೊಬ್ಬರು ಹೆಗಲೇರುವ
ಮುನ್ನವೇ
ಒತ್ತಿ ಹಿಚುಕಿ ನೀವಿ
ಹೆಗಲ ಹಗುರ ಮಾಡಿಕೊಂಡು
ಹೊರಲು ಸಿದ್ಧನಾಗುತ್ತೇನೆ!
ಯಾರು ಕೇಳಿದರೂ–
'ಬುದ್ಧಿ, ಇದು ನನ್ನ ಹೆಗಲಲ್ಲ,
ನಿಮ್ಮ ಹೆಗಲು'
ಎನ್ನುತ್ತೇನೆ!

* * *

ಹೊಕ್ಕು ತುಂಬುವ ಬಾವಿ

ಇದು ಹೊಕ್ಕು ತುಂಬುವ ಬಾವಿ–
ಇಲ್ಲಿಲ್ಲ ನೀರು ಸೋವಿ!
ಗಡಗಡೆಯ ಗಡಗಡಕೆ ಕೊಡ ಸೇದಿ
ಹಿಡಿದು ಮನೆಯ ಹಾದಿ
'ತಂದೆ ಕೋ' ಎಂದು
ಕಡಕಿನಲಿ ಕೊಡುವಹಾಗಿಲ್ಲ;
'ಪಂಪು– ಬಸವನ 'ಸ್ವಿಚ್ಚು'–ಬಾಲ ಮುರಿದು
ಗಡಗಡನೆ ನೀರು ಪಡೆದು
ಟ್ರೇಲರಿನಲಿ ಗಿಡಿದು.

ನಿಮಿಷದಲಿ ನೀರು ತಂದ
ಬಡಾಯಿ ಕೊಚ್ಚುವಂತಿಲ್ಲ!
ಇದು ಹೊಕ್ಕು ತುಂಬುವ ಬಾವಿ.
ಇಲ್ಲಿಲ್ಲ ನೀರು ಸೋವಿ!
ಯಾರನೂ, ಏನನೂ ಆಶ್ರಯಿಸದೆ
ಇನ್ನಾರ ಆಸರೆಯನೂ ಬಯಸದೆ
ನೀನೆ ಇಳಿಯಬೇಕು ಇದರೊಳಗೆ–
ಒಳಗೆ, – ಇನ್ನೂ ಒಳಗೆ;
ಕೆಳಗೆ, – ಇನ್ನೂ ಕೆಳಗೆ!
ಇಳಿದಷ್ಟೂ ಆಳವು,
ದಟ್ಟಿಸುವ ಕಾಳವು!
ಎನಿತು ಮೆಟ್ಟಿಲುಗಳಿವು?
ಒಂದೆರಳ್ಮೂರು ಅಲ್ಲ, ನೂರು;
ಅಲ್ಲಲ್ಲ, ಸಾವಿರಾರು!
ಏಕೆ ಬೇಕಿತ್ತು ಈ ಕಾರುಭಾರು!
ಮಂದಿ ಚೆಲ್ಲಿದ ನೀರು ಇರಲಿಲ್ಲವೇ ಮೇಲೆ?
ನೋಡು ಆ ಮೂಲೆ–
ಅಲ್ಲಿ ಪಲ್ವಲ ಲೀಲೆ!
ಹಿಡಿದು ಕುಡಿಕೆ
ತುಂಬಬಹುದಿತ್ತು ಕೊಡಕೆ
ಇದೇ ನೀರ,
ನಾರುವ ನೀರ!
ಒಯ್ದು ಕೊಡಬಹುದಿತ್ತು ಮನೆಯಾಕೆಗೆ.
ಕೊಟ್ಟುದನೆ ಕುಚ್ಚಿ ಎಳೆವಾಕೆಗೆ!
ಕೊಡಬಹುದಿತ್ತು–
ಕುಡಿಯಬಹುದಿತ್ತೇ ಈ ನೀರ?
ರಾಡಿ ನೀರ, ರೊಜ್ಜು ನೀರ?

ಈ ನೀರ ಕುಡಿವುದಕಿಂತ
ನೀರಡಿಸಿರುವುದೇ ಲೇಸಲ್ಲವೆ?
ಕಸ ತಿನ್ನುವುದಕ್ಕಿಂತ
ಹಸಿದಿರುವುದೇ ಲೇಸಲ್ಲವೆ?
ಹಸಗೆಟ್ಟು ಉಳಿವುದಕ್ಕಿಂತ
ಹದುಳವಿಡಿದು ಅಳಿವುದೇ ಲೇಸಲ್ಲವೆ?
ಯಾರೋ ತೊಳೆದು ಚೆಲ್ಲಿದ ನೀರ ಬಯಸಬೇಡ.
ಹೊಲಸು ನೀರಿಗೆ ಬಾಯಿ ಬಿಡಬೇಡ!
ಕಾಲಲ್ಲಿ ಕಸುವಿಲ್ಲವೆ?
ಮನದಲ್ಲಿ ಛಲವಿಲ್ಲವೆ?
"ಛಲಬೇಕು ಶರಣಂಗೆ–
ಅನ್ಯರೊಗೆದುದ ಸ್ವೀಕರಿಸೆನೆಂಬ
ಛಲಬೇಕು ಶಂಣಂಗೆ–
ನನ್ನ ಕಾಯಕ ನಾನೆ ಕೊನೆಗೊಳಿಪೆನೆಂಬ!"
ಇಳಿ, ಇನ್ನಾದರೂ ಇಳಿ,
ಒಳಗೆ ಇಳಿ, ಬಿಟ್ಟು ಮೈಚಳಿ!
ಕೆಳಕ್ಕೆ ಇಳಿದಷ್ಟೂ ತಿಳಿನೀರು ನಿನಗೆ,
ಸೀಯಾಳದಂಥ ಸಿಹಿನೀರು ನಿನಗೆ!
ಒಯ್ಯಿ ಅದನೇ ಮನೆಗೆ!
ಕಷ್ಟಪಟ್ಟರೆ ಸುಖವುಂಟು;
ಸುಖಕ್ಕೆ ನೂರು ಮುಖವುಂಟು;
ಒಳಕ್ಕೆ ಇಳಿದರೆ ಎಲ್ಲವೂ ಉಂಟು;
ಇಲ್ಲದಿರೆ ಸುಖ ಕನಸಿನ ಗಂಟು!
ಈಗಲಾದರೂ ತಿಳಿ,
ಒಳಕ್ಕೆ ಇಳಿ!
ಇದು ಹೊಕ್ಕು ತುಂಬುವ ಬಾವಿ,
ಇಲ್ಲಿಲ್ಲ ನೀರು ಸೋವಿ!

* * *

ಮಂತ್ರಿಯ ಮನವಿ !

ಸುಮ್ ಸುಮ್ನೆ ನಮ್ಮನ್ನ ಬೈಬ್ಯಾಡ್ರಿ,
ನಾವು ಹೇಳೊದ್ನೂ ಸ್ವಲ್ಪ ಕೇಳ್ರಿ!
ದೂರುಗಳೇನೋ ನೂರಾರು;
ಆದ್ರ ನಮ್ಮ ಮ್ಯಾಗ ನೀವು ಮಸೆಯೋ ಕತ್ತಿ
ಮೂರೇ ಮೂರು!
ಮಂತ್ರಿಯಾದೋರು ನುಡಿಧಾಂಗ ನಡೆಯೋದಿಲ್ಲ ಅನ್ನೋದು
ಮೊದಲನೇ ಕತ್ತಿ:
ನಾವೇನ ಮಾಡೋಣ್ರೀ?
ನಮ್ಮ ಹೊತ್ತೆಲ್ಲಾ ನುಡಿಯೋದರೊಳಗ ಹೋಗ್ತೈತಿ–
ನುಡಿದಂತೆ ನಡೆಯಾಕ
ಹೊತ್ತೆಲ್ಲಿಂದಾ ತರೋಣ್ರಿ ?
ನೀವೇ ಹೇಳ್ರಿ!
ಮಂತ್ರಿಗಳು ಸುಳ್ಳು ಭಾಳ ಹೇಳ್ತಾರಂತೀರಾ?
ಸತ್ತಾಕ್ಕೂ ಸತ್ಯಕ್ಕೂ ಸಂಬಂಧ ಎಲ್ಲಿದೆರಿ?
ನಿಮ್ಮ ಕಾವ್ಯದಾಗ ಎಂಥದೋ ಸತ್ಯ ಇರಬೋದು
ಅಲ್ಯೂ ಅದೀಗ ಸತ್ತಿದೆ ಅಂತಾ ಸುದ್ದೀ ಕೇಳೀನಿ!
ನಮಗೆ ಬೇಕಾಗಿರೋದು ಆ ಸತ್ಯ ಅಲ್ಲರಿ.
ಮನೆ ಸತ್ಯ.
ಹೋಮ್ ಟ್ರುತ್ ಅಂತಾರಲ್ರೀ
ಇಂಗ್ಲೀಷಿನಾಗ–
ಆ ಸತ್ಯ ಹೇಳ್ತೀನಿ ಕೇಳಿ!
ನಮಗ ಬೇಕು ನಮ್ಮ ಜನರ ಮತಗೋಳು;
ಅವು ಸಿಗದಿದ್ರ ನಮ್ಮ ಬಾಳೇ ಗೋಳು!
ಇದ್ದದ್ದು ಇದ್ಹಾಂಗ ಹೇಳಿದ್ರ
ನಮ್ಮ ಜನಾ ಮತಾನ್ಯ ಕೊಡೋದಿಲ್ಲಲ್ರಿ?
ನಾವೇನ ಮಾಡೋಣ್ರಿ?
ನೀವೇ ಹೇಳ್ರಿ!

ಈ ದೇಶದ ಅರುವತ್ತು ಮೂರು ಕೋಟಿ ಜನಕ್ಕ
ಹಾಲಿರ್ಲಿ, ಮಜ್ಜಿಗೀ ಕೊಡೋಕೂ ಸಾಧ್ಯ ಇಲ್ಲ!
ಇದು ಸತ್ಯ ಅಂಬೊಲ್ಲಿ ಇದಿರ ಮಾತಿಲ್ಲ!
ನಾವು ಐದು ವರ್ಷಗಳಿಗೆ ಮಾತ್ರ ಆರಿಸಿಬರೋರು–
ಐದು ವರ್ಷ ಯಾಕೆ,
ಐವತ್ತು ವರ್ಷಕ್ಕಂತಾ ಆರಿಸಿ ಬಂದ್ರೂ
ಕೋಟಿ ಕೋಟಿ ಜನರ
ಬಡತನಾ ಕಳೆಯೋದು ಸಾಧ್ಯವೇನ್ರಿ?
ಇಲ್ಲಾರಿ !
ಇದು ಸತ್ಯ !
ಈ ಸತ್ಯ ಹೇಳಿದ್ರೆ
ಈ ಬಕರಾಗಳು ನಮಗ ಮತಾ ಕೊಡ್ತಾರೇನ್ರಿ?
ನೀವೇ ಹೇಳ್ರಿ!
ನೀವು ನಮಗ ಮತಾ ಕೊಟ್ಟುಬಿಡ್ರಿ;
ನಾವು ಆರಿಸಿ ಬಂದೇಟಿಗೆ
ಒಂದೇಟಿಗೆ
ನಿಮ್ಮ ಬಡತನಾ ಬುಡಮೇಲ್ಮಾಡ್ತೀವಿ,
ನಿಮ್ಮನೆ ಮುಂದೆ
ಹಾಲಿನ ಹಳ್ಳಾ ಹರಿಸ್ತೀವಿ.
ಬೆಣ್ಣೆ ಬೆಟ್ಟ ಏರಿಸ್ತೀವಿ–
ಅಂತಾ ಅಂದು ಬಿಟ್ರೆ
ಅವರ ಮತಗಳೆಲ್ಲಾ ನಮ್ ಬುಟ್ಟೀಗೆ!
ಸತ್ಯ ಹೇಳಿದ್ರೂ ಮತಾ ಸಿಗತಿದ್ರ
ನಾವ್ಯಾಕ ಸುಳ್ಳು ಹೇಳತಿದ್ವಿರಿ?
ನೀವೇ ಹೇಳ್ರಿ!
ಮಂತ್ರಿಗಳು ಭಾಳ ದುಡ್ಡು ಹೊಡೀತಾರಂತೀರಾ?
ದುಡ್ಡಿಲ್ದೆ ಮತ ಕೊಡೋ
ದಡ್ಡರಾರೂ ಉಳ್ದಿಲ್ರಿ ಈಗ!

ದುಡ್ಡಿಲ್ದೆ ಹ್ಯಾಗ ಆರಿಸಿ ಬರೋದ್ರಿ ?
ನೀವೇ ಹೇಳ್ರಿ !
ಸುಮ್‌ಸುಮ್ನೆ ನಮ್ಮನ್ನ ಬೈಯೋದು ಬಿಟ್ಟು
ನೀವೂ ಈ ಮನೆ ಸತ್ಯ ತಿಳಕಳ್ರಿ,
ತಿಳಿದು ಬಾಳ್ವೆ ಮಾಡ್ರಿ!
ತಿಳೀದೆ ಬೈದ್ರ ಏನ ಬರ್ತೈತ್ರಿ ?
ನೀವೇ ಹೇಳ್ರಿ !

* * *

ಬೆಲೆಪಟ್ಟಿ

ಬೆಲೆಪಟ್ಟಿ ಪ್ರದರ್ಶಿಸದೆ ವ್ಯಾಪಾರ ಕೂಡದಂತೆ,
ಮಾರಾಟ ಮಾಡಬಾರದಂತೆ,
ಸರಕಾರದ ಸುತ್ತೋಲೆ ಬಂದಿದೆಯಂತೆ,
ತಪ್ಪಿದರೆ ದಂಡವಂತೆ. ಶಿಕ್ಷೆಯಂತೆ, ಸೆರೆಮನೆಯಂತೆ!
ಇದೆಲ್ಲಾ ಗ್ರಾಹಕರ ಕಣ್ಣೊರಸಲಿಕ್ಕಂತೆ!
ಬೆಲೆಪಟ್ಟಿ ಹಾಕಿಯೂ
ಬೇಕಾದ ಬೆಲೆಗೆ ಮಾರಬಹುದಂತೆ!
ಸಂಬಂಧಪಟ್ಟರಿಗೆ ಮಾಮೂಲು ಕೊಟ್ಟರೆ ಸಾಕಂತೆ!
ಆಗಲಿ, ಹಾಗೆಯೇ ಆಗಲಿ–
ಬೆಲೆಪಟ್ಟಿಗಳ ಕೆಳಗೇ ಕಳ್ಳವ್ಯಾಪಾರ ಸಾಗಲಿ!
ಯಾವ ಗುಡಿಯಾದರೇನು–
ನಿದ್ರೆ ಬಂದರೆ ಸಾಕು!
ನೀನೂ ಬೆಲೆಪಟ್ಟಿ ಹಾಕು!
ನನ್ನದಂತೂ ಅಂಗಡಿಯೆಂಬುದಿಲ್ಲ–
ನಾನೇ ಅಂಗಡಿ,
ಅಡ್ಡಾಡುವ ಅಂಗಡಿ!
ಇದುವರೆಗೆ ಕದ್ದು ಮಾಡುತ್ತಿದ್ದುದ
ಇನ್ನು ಖುದ್ದು ಮಾಡುವೆ,

ಮುದ್ದಾಮ್ ಮಾಡುವೆ,
ಬೆಲೆಪಟ್ಟಿ ಹಾಕಿ,
ಸುತ್ತೋಲೆಯ ಕಣ್ಣಲ್ಲಿ ಮಣ್ಣುಹಾಕಿ!
ಎಲ್ಲರೂ ಇದನ್ನು ಮಾಡುತ್ತಿರುವಾಗ
ನಾನು ಮಾಡದೆ ವಿಧಿಯಿಲ್ಲ;
ನಮ್ಮಂಥವರು ಇದನ್ನು ಮಾಡದಿದ್ದರೆ
ಪಾಪ, ರಾಜಕಾರಣಿಗಳಿಗೆ ಚುನಾವಣಾನಿಧಿಯಿಲ್ಲ!
ಚುನಾವಣೆಗಳಿಲ್ಲದಿದ್ದರೆ ಪ್ರಜಾಪ್ರಭುತ್ವವಿಲ್ಲ.
ಪ್ರಜಾಪ್ರಭುತ್ವವಿಲ್ಲದಿದ್ದರೆ ಸ್ವರಾಜ್ಯವಿಲ್ಲ,
ಸ್ವರಾಜ್ಯವಿಲ್ಲದಿದ್ದರೆ ನಮಗೆ ಸ್ವ-ರಾಜ್ಯವಿಲ್ಲ!
ಇದು ಸಂಭವಿಸದಂತೆ
ಪ್ರಜಾತಂತ್ರ ಕುಸಿಯದಂತೆ
ನನ್ನ ಪಾಲಿನ ಕರ್ತವ್ಯ ನಾನೂ ಮಾಡುವೆ,
ನನ್ನ ಬೆಲೆಪಟ್ಟಿಯನ್ನೂ ಬಹಿರಂಗಮಾಡುವೆ!
ಇಲ್ಲಿದೆ ನೋಡಿ ನನ್ನ ಬೆಲೆ ಪಟ್ಟಿ:
ಎಲ್ಲ ರೋಖ್ಯವ್ಯಾಪಾರ, ಇಲ್ಲ ಉದ್ದರಿ, ಇದು ಗಟ್ಟಿ!
ಪಕ್ಷಾಂತರಕ್ಕೆ ಬೆಲೆ ಆರಂಕಿಗಳಲ್ಲಿ
ಪಕ್ಷದಲ್ಲಿದ್ದೇ ಕೈಕೊಡಲು ಐದಂಕಿಯಲ್ಲಿ!
ವರ್ಗಮಾಡಿಸಲು ನಾಲ್ಕಂಕಿ ಸಾಕು,
ವರ್ಗ ರದ್ದು ಪಡಿಸಲು ಐದಂಕಿ ಬೇಕು!
ಸುಳ್ಳು ಸರ್ಟಿಫಿಕೇಟಿಗೆ ಮೂರಂಕಿ ಮಾತ್ರ,
ಕೆಲಸ ಕೊಡಿಸಲಿಕುಂಟು ಸಂಬಳದ ಸೂತ್ರ!
ನನ್ನದು ನ್ಯಾಯ ಬೆಲೆಯ ಅಂಗಡಿ,
ಇಲ್ಲ, ಚೌಕಾಸಿಯ ಗಡಬಿಡಿ!
ಸರಕಿಗೆ ತಕ್ಕ ಬೆಲೆ,
ಪಕ್ಷಿಗೆ ತಕ್ಕ ಬಲೆ;
ಕಾಸಿಗೆ ತಕ್ಕ ಕಜ್ಜಾಯ
ಬೇಡೆನಗೆ ಅನ್ಯಾಯ!

* * *

ಉಗ್ರಾಣ

ನಿನ್ನಂತೆ ಪುಣ್ಯಗೈದವರುಂಟೆ
ಈ ದೇಶದಲ್ಲಿ
ಓ ಉಗ್ರಾಣವೆ?
ಸರಕಾರ ಕೊಂಡ ಕಾಳು,
ಬೆರಕೆಯ ಕಸ, ಧೂಳು,
ವಿಶ್ವವಿದ್ಯಾಲಯಗಳ
ಮಾರದ ಪುಸ್ತಕಗಳು,
ಕಾಳಸಂತೆಯ
ಸರಕುಗಳು,
ಕಳ್ಳ ಸಾಗಾಣಿಕೆಯ
ಎಲ್. ಎಸ್. ಡಿ. ಹಷಿಷುಗಳು–
ಎಲ್ಲವುಗಳ ಆಶ್ರಮಸ್ಥಾನವೆ!
ಯಾರಿಗಿಲ್ಲದಿದ್ದರೂ
ನಿನಗಿವೆ ಎಲ್ಲವೂ–
ಕಾಳು, ಬೇಳೆಯೂ,
ಬೆಲ್ಲವೂ!
ಹಸಿದವರ ಹೊಟ್ಟೆ
ಬರಿದಾಗಿದ್ದರೇನಂತೆ?
ನಿನ್ನ ಹೊಟ್ಟೆ ಮಾತ್ರ
ಪುಟ್ಟಪೂರ ಭರ್ತಿ!
ಹಸಿದವರ ವರೆಗೆ
ಹರಿದು ಹೋದರೆ ಕಾಳು
ನಿನಗೆಲ್ಲಿ
ಸದಾ ಭರ್ತಿಯಿರುವ ಕೀರ್ತಿ!
ಇರುವೆ ತಿನ್ನಲಿ,
ಇಲಿ ತಿನ್ನಲಿ,
ಹೆಗ್ಗಣ ತಿನ್ನಲಿ–

ಎರಡು ಗೇಣಿನ
ಹರಿದಾಡುವ ಹೆಗ್ಗಣ ತಿನ್ನಲಿ,
ಎಂಟು ಗೇಣಿನ
ನಡೆದಾಡುವ ಹೆಗ್ಗಣ ತಿನ್ನಲಿ–
ಹಸಿದ ಮಾನವ ಮಾತ್ರ ತಿನ್ನದಿರಲಿ!
ಅವನಿಗೆ ಮರಣ ಬಂದರೂ ಬರಲಿ!
ಗೋದಾಮು ತುಂಬಿ
ಹೊರಸೂಸುತ್ತಿದ್ದರೆ ಸಾಲದೆ?
ಅದರ ಕಾಳು ಹಸಿದವರಿಗೆ ಮುಟ್ಟಲೇಬೇಕೆಂದು
ಎಲ್ಲಿದೆ ಕಾಯಿದೆ?
ಕಷ್ಟಪಟ್ಟು ಕೂಡಿಟ್ಟ ಕಾಳನ್ನು
ಹೊಟ್ಟೆ ಹಸಿದವರು ತಿಂದುಹಾಕಿದರೆ
ಯಾರಿಗೆ ಫಾಯಿದೆ!
ಕೃತಿಗಿಳಿಯಲೇ ಬೇಕೇನು
ಚುನಾವಣೆಯ ವಾಯಿದೆ?
ಅಂತೂ,
ನಿನ್ನಂಥ ಪುಣ್ಯವಂತರಿಲ್ಲ
ಈ ದೇಶದಲ್ಲಿ
ಓ ಉಗ್ರಾಣವೆ!
ಎಲ್ಲರ ಹೊಟ್ಟೆಗಳಿಗೆ, ತಲೆಗಳಿಗೆ
ಬೇಕಾಗುವ ಎಲ್ಲವುಗಳ
ಆಶ್ರಯ ಸ್ಥಾನವೆ!

* * *

ನಾಯ ಜಗಳ

ದೇಶ ಹೆಣವಾಗುತ್ತಿರಲು
ಹೆಣವೆಂದೆ ತಿನಬಂದ
ನಾಯ ಜಗಳವ ನೋಡಾ!
ಮಾಂಸ ನನ್ನದೆನ್ನುವ ನಾಯಿ ಅತ್ತ

ರಕ್ತ ನನ್ನದೆನ್ನುವ ನಾಯಿ ಇತ್ತ
ಅಸ್ಥಿಗಳ ಕಡಿಕಡಿದು
ತಮ್ಮ ನೆತ್ತರನೆ ಕುಡಿದು
ಸಂತೋಷ ಪಡುತಿರುವ ಶ್ವಾನಸುತ್ತ!
ಕರುಳ ಕಿತ್ತು ತಿನ್ನುವ ನಾಯಿ
ಕೊರಳ ಹರಿದು ತಿನ್ನುವ ನಾಯಿ
ನರನರಗಳ ತರಿದು
ಕಿಬ್ಬದಿಗಳ ಮುರಿದು
ಕಚ್ಚಾಡುವ, ಕಿತ್ತಾಡುವ, ಕಿರುಚಾಡುವ ನಾಯಿ
ಅಂದಣವನೇರಿಯೂ ಕಂಡೊಡೆ ಮುನ್ನಿನ
ಸ್ವಭಾವವ ಬಿಡದ ನಾಯಿ
ಮುಗಿಬಿದ್ದಿವೆ ಜೀವಂತ ಹೆಣಕೆ
ಮಾಂಸಕೆ, ರಕ್ತಕೆ, ನೆಣಕೆ!
ಬಿಳಿಯ ಬಾಯೊಂದು ಸಿಳ್ಳು ಹಾಕಿದರೆ
ಬಾಲವಲ್ಲಾಡಿಸುತ ಬಂದು
ಬೂಟು ನೆಕ್ಕುತ್ತಿದ್ದ ನಾಯಿಗಳು–
ಕರಿಯ ಸಿಪಾಯಿಯೊಬ್ಬ ಕೈಯನೆತ್ತಿದರೆ
ಕೊಂಯಯ್ಯೋ ಎಂದೋಡಿ
ಸಂದಿಗೊಂದಿಗಳನ್ನು ಸೇರಿಕೊಳ್ಳುತ್ತಿದ್ದ

* * *

ನಾಯಿಗಳು

ಮನೆಮನೆಯ ಎಂಜಲಕೆ ಬಾಯ್ಬಿಡುತ ತಿರುಗಿ
ಮೋರೆಯೊಣಗಿಸಿಕೊಂಡು ಸುತ್ತಾಡಿ ಸೊರಗಿ
ನಡೆವೆಣಗಳಂತಿದ್ದ ನಿರ್ವೀರ್ಯ ನಾಯಿಗಳು–
ಹಳನಾಯಿಗಳು, ಹೊಸನಾಯಿಗಳು,
ಜಾತಿನಾಯಿಗಳು, ಜವಾರಿನಾಯಿಗಳು,
ಹಂಡಬಂಡನಾಯಿಗಳು, ದಿಂಡೆಬೆಂಡಲನಾಯಿಗಳು,
ಕೀಳುನಾಯಿಗಳು, ಸೀಳುನಾಯಿಗಳು,
ಕವಡುನಾಯಿಗಳು, ಕಂತ್ರಿನಾಯಿಗಳು,

ದೇಶ–ದೇಹಕ್ಕೆಯೇ ಬಾಯಿಕ್ಕ ಬೇಕೆ?
ದೇಹ ಹೆಣವಾಗದೆಯೆ ಅದ ನೆಕ್ಕಬೇಕೆ?
ಹೊಸದೇನಲ್ಲ ಈ ದೇಶಕ್ಕೆ ಚಿತ್ರ ಹಿಂಸೆ,
ಮರ್ಮಘಾತ, ಅಂಗಚ್ಛೇದ, ವಿಶ್ವಾಸವಧೆ!
ಆದರೂ ಇಂದಿನೊಲು ಹಿಂದಾರು ಗೈದಿಹರು
ದೇಶವನೆ ಹರಿದು ತಿನ್ನುವ ಪರಮ ಪಾತಕವ?
ತಿನ ಬಂದ ನಾಯಿಗಳ ತಳ್ಳುವರೆ ಇಲ್ಲವೆ?
ದೇಶ ಹೆಣವಾಗುವ ಮೊದಲೆ ಉಳಿಸುವರೆ ಇಲ್ಲವೆ?
ನಾಯ ಬಡಿಯಲಿಕೆಂದು ಕೊಂಡೆ ಬಣ್ಣದ ಕೋಲ
'ಬಡಿವುದೆ, ಬಡಿಯದಿಹುದೆ?' ಆಗಿಹೆ ಸಂಶಯಾಕುಲ!
ಬಡಿದರೆ ಬಣ್ಣದಕೋಲು ಮುರಿವಭಯ
ಬಡಿಯದಿರೆ ದೇಶವೇ ಹೆಣವಾಗುವ ಭಯ!
ಆಯ್ದುಕೋ–ಬಣ್ಣದಕೋಲು ಬೇಕೋ,
ದೇಶ ಬೇಕೊ?

* * *

ದಲಿತ ಡಮರು

ಭಂ ಭಂ ಭಂ
ಬಭಂ ಭಂ ಬಭಂ ಭಂ
ದಲಿತ ಡಮರು ನಾದ
ಕ್ರಾಂತಿ ಭೈರವನ
ಕರಾಳ ಡಮರು ನಾದ!
ದಿಕ್ಕೆಟ್ಟಿಹವು
ಬಾಯ್ಕಟ್ಟಿಹವು
ವಿವಿಧ ವಿಕಟವಾದ! ಭಂ ಭಂ ಭಂ
ಧರ್ಮದ ಬೊಂತೆ
ಕರ್ಮದ ಕಂತೆ
ವಿಕೃತ ವರ್ಣವಾದ
ಸೊಮ್ಮಿನ ಹಾವಳಿ
ಸುಲಿಗೆಯ ದಾಳಿ

ಉಚ್ಚ ನೀಚ ಭೇದ
ಮಣ್ಣು ಮುಕ್ಕುತಿವೆ
ರಕ್ತ ಕಕ್ಕುತಿವೆ
ಉಳಿಸವಿನ್ನು ವೇದ!
ಭಂ ಭಂ ಭಂ
ಬಭಂ ಭಂ ಬಭಂ ಭಂ
ದಲಿತ ಡಮರು ನಾದ!
ಕ್ರಾಂತಿ ಭೈರವನ
ಕರಾಳ ಡಮರು ನಾದ!
ಸೊಲ್ಲೆ ಗುಡುಗು
ಬಿಸುಸುಯ್ಯೆ ಸಿಡಿಲು
ಬಾಷ್ಪ ಬಡಬ ಶಿಖಿಯು
ಹಸಿದ ಒಡಲು
ಜ್ವಾಲೆಗಳ ಕಡಲು
ಮನವು ಮೃತ್ಯುಮುಖಿಯು!
ಮತದ ಮಬ್ಬನು
ಹಣದ ಕೊಬ್ಬನು
ಮಾಡಿ ಮಾಡಿ ಶೋಧ
ಹರಿದು ತಿನ್ನಲಿದೆ
ಹುರಿದು ತಿನ್ನಲಿದೆ
ಕ್ಷುಬ್ಧ ದಲಿತಕ್ರೋಧ!!
ಭಂ ಭಂ ಭಂ
ಬಭಂಭಂ ಬಭಂಭಂ
ದಲಿತ ಡಮರುನಾದ!
ಇಕ್ಕಿರನ್ನವನು
ತಕ್ಕ ಪೇಯವನು
ತಣಿಯೆ ದಲಿತ ಕ್ಷುಧೆಯು

ಹಸಿವು ಕಾರೆ ವಿಷ
ವಿಷವು ನಿಮ್ಮ ರಸ
ನಂಜು ನಿಮ್ಮ ಸುಧೆಯು
ತನ್ನಿ ಬುದ್ಧನನು
ತನ್ನಿ ಬಸವನನು
ಬಾಪುಭೀಮರನ್ನೆದೆಗೆ
ಕೆಡೆವ ಮುನ್ನ
ಭಾರತದ ಭವನ
ದಲಿತ-ಕ್ರೋಧ-ಗದೆಗೆ!
ಭಂ ಭಂ ಭಂ
ಬಭಂ ಭಂ ಬಭಂ ಭಂ
ದಲಿತ ಡಮರುನಾದ-
ಕ್ರಾಂತಿ ಭೈರವನ
ಕರಾಳ ಡಮರು ನಾದ!

* * *

ಕತ್ತರಿ

ಹೌದು,
ನಾನು ಕತ್ತರಿ!
ಆದರೆ
ಎಲ್ಲ ಕತ್ತರಿಗಳಂತಲ್ಲ ನಾನು!
ಹಿಡಿಕೆಗಳಿಲ್ಲದ
ಹರಿತ ಛೇದಕಗಳಿಲ್ಲದ
ಕಾಣದ ಕತ್ತರಿ ನಾನು!
ಕೂದಲುಗಳ ಕತ್ತರಿಸುವ
ಹೊಕ್ಕುಳ ಹುರಿ ಛೇದಿಸುವ
ಅಳತೆಗೆ ತಕ್ಕಂತೆ ಅರಿವೆಗಳ ಛಿದ್ರಿಸುವ
ಕತ್ತರಿ ನಾನಲ್ಲ!

ಅನಾವರಣ ಸಮಾರಂಭಗಳಲಿ
ಮಂತ್ರಿಗಳ ಮೃತ ಹಸ್ತಸೇರಿ
ರಿಬ್ಬನ್ನು ಕತ್ತರಿಸುವ
ಕತ್ತರಿಯೂ ನಾನಲ್ಲ!
ಸಾಂಸನ್ನನ ಕೇಶಖಂಡಿಸಿದ
ಡೆಲೀಲಾಳ ಕತ್ತರಿಯಲ್ಲ
ಜೇಬುಗಳ ಕತ್ತರಿಸುವ
ಕಳ್ಳರ ಕೈಯ ಕತ್ತರಿಯಲ್ಲ
ಕುರಿಗಳ ಉಣ್ಣೆ ತೆಗೆವ
ಕುರುಬನ ಕೈಯ ಕತ್ತರಿಯಲ್ಲ
ನಾನೊಂದು ವಿಚಿತ್ರ ಕತ್ತರಿ!
ನನಗೆ ನಾಮವಿಲ್ಲ
ನನಗೆ ರೂಪವಿಲ್ಲ
ಅಮೂರ್ತ ಕತ್ತರಿ ನಾನು!
ಕಳೆವ ಭಯವಿಲ್ಲ
ಮುರಿವ ಅಂಜಿಕೆಯಿಲ್ಲ
ಅದೃಶ್ಯ ಕತ್ತರಿ ನಾನು!
ಎರಡು ಮನಗಳು ಒಂದಾದರೆ
ಎರಡರ ಬದುಕು ಚೆಂದಾದರೆ
ಭೇದಿಸಿ ಬಿಡುವ ಗೂಢ ಕತ್ತರಿ ನಾನು!
ನಂಟಿನ ಗಂಟುಗಳ ಛೇದಿಸಿ
ಸೌಮನಸ್ಯದ ಸೂತ್ರಗಳ ಛಿದ್ರಿಸಿ
ಸಂಲಗ್ನ ಸ್ನೇಹಗಳ ಭಗ್ನಗೊಳಿಸಿ
ಎದೆ ಎದೆಗಳ ರುಗ್ಣಗೊಳಿಸಿ
ಕೆಳೆಯ ನಟಿಸಿ
ಕರುಳ ಕೊಯ್ವ
ಒಲವ ತೋರಿ
ಒಳಗೆ ಕೊಲ್ವ
ನಂದನದ ಆಸೆ ತೋರಿ

ಮಸಣಕ್ಕೆ ಒಯ್ವ
ಸೂಕ್ಷ್ಮಾತಿಸೂಕ್ಷ್ಮ ಕತ್ತರಿಯು ನಾನು!
ಸತ್ಯದ ಸೋಗುಹಾಕಿ
ಸತ್ಯದ ಹತ್ಯೆಗೈವ ಕತ್ತರಿ
ಸಂಧಾನದ ಸೋಗು ಹಾಕಿ
ಪರಂಧಾಮಕ್ಕೆ ಕಳಿಸುವ ಕತ್ತರಿ
ಹೊತ್ತಿಗೊಂದು ಮುಖವಾಡ ಧರಿಸಿ
ಹತ್ತುಗಡೆಗಳ ಕತ್ತರಿಸುವ ಕತ್ತರಿ–
ಹೌದು,
ನಾನು ಕತ್ತರಿ
ಆದರೆ
ಎಲ್ಲ ಕತ್ತರಿಗಳಂತಲ್ಲ ನಾನು!
ನನ್ನ ನಿಜರೂಪ ತಿಳಿಯೆ ನೀನು!

* * *

ಪತ್ರಿಯ ಮರದ ಕೆಳಗೆ

ಈಚಲ ಮರದ ಕೆಳಗೆ ಕುಳಿತು
ಹಾಲು ಕುಡಿದರೂ ಹೆಂಡ ಕುಡಿದರೆನ್ನುತ್ತಿತ್ತು–
ಹಿಂದಿನ ಕಾಲ;
ಪತ್ರಿಯ ಮರದ ಕೆಳಗೆ ಕುಳಿತು
ಹೆಂಡ ಕುಡಿದರೂ ಹಾಲು ಕುಡಿದರೆನ್ನುತ್ತಿದೆ
ಇಂದಿನ ಕಾಲ!
ಸ್ಮಾರಕ ನಿಧಿಗಳೊ, ಶತಮಾನೋತ್ಸವಗಳೊ,
ಮಹಿಮರ ಜಯಂತಿಗಳೊ, ಆಶ್ರಮಗಳೋ–
ನಾಯಿ ಕೊಡೆಗಳ ತೆರದಿ ಬೆಳೆದಿರುವ, ಬೆಳೆಯುತಿಹ
ಸಂಘಗಳೊ, ಸಂಸ್ಥೆಗಳೊ, ಸಮಿತಿಗಳೊ, ಸಭೆಗಳೋ–
ಹಲವು ಪತ್ರಿಯ ಮರಗಳ ನೆರಳಿದೆ
ಹೆಂಡ ಕುಡಿದು ದಕ್ಕಿಸಿಕೊಳ್ಳಲು

ಹೆಂಡ ಕುಡಿದೂ–
ಹಿರಿತನದ ಹಕ್ಕ ಗಿಟ್ಟಿಸಿಕೊಳ್ಳಲು!
ಹೆಂಡ ಹೆಂಡವೆಂದೇಕೆ
ಬೀಳುಗಳೆವರು
ಹೆಂಡಕಾಣದ ಗಾವಿಲರು?
ಹೆಂಡದಿಂದ ಬಂದ ಹಣದಲ್ಲಿ
ಇರುವುದೆ ಹೆಂಡದ ವಾಸನೆ?
ಬರುವುದೆ ಕಡಮೆ ಬೆಲೆ
ಉಳಿದ ಹಣಕ್ಕಿಂತ ಹೆಂಡದ ಹಣಕ್ಕೆ ಗೆಳೆಯನೆ!
ಬೇಕಾದರೆ ಈ ಹೆಂಡದ ಹಣದಿಂದಲೇ
ಪಾನ ಪ್ರತಿಬಂಧ ಪ್ರಚಾರಕ್ಕೆ
ಸಹಾಯ ಧನ ಸಲ್ಲಿಸುವೆವು;
ಪಾನ ನಿರೋಧ ಪ್ರಚಾರಕರಿಗೆ
ಹಣವಿಲ್ಲದೆಯೆ ಹೆಂಡ ಒದಗಿಸುವೆವು!
ಈ ಗಾಂಧೀ ಶತಮಾನೋತ್ಸವದಲ್ಲಿ ಮಾಡದೆ
ಇನ್ನಾವಾಗ ಮಾಡುವುದು ಇಂಥ ಪುಣ್ಯ ಆಯೋಜನ?
ಮಾಡುವವರು ಹಿಂಸೆಯಿಂದ ಹುಸಿಯಿಂದ ಮಾಡುತ್ತಿದ್ದಾರೆ
ನಾವು ಹೆಂಡದಿಂದ ಮಾಡುವೆವು ಗಾಂಧೀ ಪೂಜನ!
ಹೊಸ ಹೊಸ ಪತ್ರಿಯ ಮರಗಳನ್ನು ಬೆಳೆಸುವೆವು;
ಅವುಗಳಿಗೆ ನವ ನವೀನ ಕಟ್ಟೆಗಳ ಕಟ್ಟಿಸುವೆವು;
ಆ ಕಟ್ಟೆಗಳ ಮೇಲೆ ಪಟ್ಟಾಗಿ ಕುಳಿತು
ನಿರ್ಭಯವಾಗಿ, ನಿಸ್ಸಂಕೋಚವಾಗಿ,
ನಿರಾತಂಕವಾಗಿ, ಅವ್ಯಾಹತವಾಗಿ
ಹೆಂಡ ಕುಡಿಯುವೆವು
ಕಂಡ ತಿನ್ನುವೆವು– ತಪ್ಪು
ದಂಡವನ್ನೂ ಕೊಡುವೆವು!
ಕೊಟ್ಟೂ ಹಿರಿತನವ ಬಿಟ್ಟು ಕೊಡೆವು!
ಪತ್ರಿಯ ಮರವೊಂದರ ರಕ್ಷಣೆಯಿರುವವರೆಗೆ
ನಾವೆಂದಿಗೂ ಕೆಡೆವು!...

....
ಈ ಪತ್ರಿಯ ಮರಗಳನ್ನೂ ಉರುಳಿಸುವ
ಬಿರುಗಾಳಿ ಬರಬಹುದೆ?
ನಮ್ಮ ಈ ಆಶ್ರಯ ಸ್ಥಾನಗಳಿಗೆ
ದಾಳಿ ತರಬಹುದೆ?
ಛೆ, ಆ ಬಿರುಗಾಳಿಗೇನು ಬುದ್ದಿಯಿಲ್ಲವೆ
ಪವಿತ್ರ ಪತ್ರಿಯ ಮರಗಳನ್ನು ಉರುಳಿಸಲು?
ಹೆಂಡಕ್ಕೂ ಹಾಲಿನ ಹಿರಿಮೆ ಗರಿಮೆಯೀವ
ಪತ್ರಿಯ ಕಟ್ಟೆಗಳ ಕಬಳಿಸಲು?
ಒಂದುವೇಳೆ–
ಬಿರುಗಾಳಿ ಬಂದರೂ
ಅದಕ್ಕೂ ಹೆಂಡ ಕುಡಿಸಿಬಿಡೋಣ–
ಅದಕ್ಕೂ ಹೆಂಡದ ಹುಚ್ಚು ಹಿಡಿಸಿ ಬಿಡೋಣ!

* * *

ಕೋಟೆ ಬಿದ್ದು ಕಂದಕ ಉಳಿದಿದೆ!

ಕೋಟೆ ಬಿದ್ದು
ಕಂದಕ ಉಳಿದಿದೆ!
ಅತ್ತ
ಕೊತ್ತಲವೊಂದು
ಕತ್ತೆತ್ತಿ ಸಾರುತಿದೆ!
"ಕೊತವಾಲನ
ಕಾರ್ಯವನ್ನೀಗ
ಕಂದಕ ಮಾಡುತ್ತಿದೆ!"
ಕೋವಿ ಮದ್ದುಗಳಿಲ್ಲ
ಗಜದ ಸದ್ದುಗಳಿಲ್ಲ
ವೀರ ಘೋಷಗಳಿಲ್ಲ
ಸಮರಾವೇಶಗಳಿಲ್ಲ

ಕೆರೆ ಹಾವು
ರೆಕ್ಕೆ ಚೇಳು
ಕ್ರಿಮಿ ಕೀಟಗಳ ಸೊಲ್ಲು
ಕಪ್ಪೆಗಳ ಗುಲ್ಲು
ಕಾಲಿಟ್ಟವರ
ಕೆಡಹಿ ಬಿಡುವ
ಹಾವಸೆಗಲ್ಲು
ಕಾಲಿಗೆ ತೊಡಕುವ
ಜೊಂಡು
ಪಾಚಿ
ನಾಗಮುರಿ ಬಳ್ಳಿ
ಕಳ್ಳ ಹುದುಲು
ಕಾಣದ ಕೊರಕಲು
ಇವುಗಳಿಗೀಗ
ಕಾವಲಿನ ಪಾಳಿ!
ಕ್ವಚಿತ್ತಾಗಿ ಪ್ರೇಮದ
ಸತತವಾಗಿ ಕಾಮದ
ನಗ್ನ ಭೋಗದ
ಮನೋರೋಗದ
ಹೊಂಚುಗಳ
ಒಳ ಸಂಚುಗಳ
ಒಳ ಜಗಳಗಳ
ಒಣ ರಗಳೆಗಳ
ಅಡುಂಬೊಲವಾಗಿದ್ದ
ಅರಮನೆ
ಇಂದು ಬರಿಮನೆ–
ಅಲ್ಲ, ಬರಿಹೆಸರು
ಬರಿ ಕೆಸರು!

ಅಲ್ಲೀಗ
ರಾಗ ರಾಗಿಣಿ ಹೋಗಿ
ನಾಗ ನಾಗಿಣಿ ನೆಲೆಸಿವೆ
ನರರ ರಕ್ತ ಹೀರುತ್ತಿದ್ದ
ಹೆಗ್ಗಣಗಳು ಹೋಗಿ
ಮಣ್ಣು ಕೆದರುವ
ಹೆಗ್ಗಣಗಳು ಬಂದಿವೆ!
ಆಚೆಯ ಗುರುಮನೆಯಲ್ಲಿಂದು
ಗುಪ್ತ ಕಾಮ ಕೇಳಿಗಳು ಮಾಯವಾಗಿ
ಹಕ್ಕಿ ಪಕ್ಕಿಗಳ
ಬಹಿರಂಗ ಸಂಗಗಳು ನಡೆದಿವೆ
ಆನೆ ಮೇಯುತ್ತಿದ್ದಲ್ಲಿ
ಆಡು ಸಹ ಕಾಣದಿದೆ
ಕುದುರೆ ಕುಣಿಯುತ್ತಿದ್ದಲ್ಲಿ,
ಕತ್ತೆಯೂ ಇಣುಕದಿದೆ!
ಇವುಗಳ ಕಾಯಲು
ಕೊತವಾಲನೇಕೆ ಬೇಕು?
ಕಂದಕವೇ ಸಾಕು!
ಗುಂಡಿಗೆಯ ಕೋಟೆ ಬಿದ್ದಾಗ
ಕಲ್ಲಿನ ಕೋಟೆ ಬೀಳಲೇ ಬೇಕು!
ಗಂಡಸುತನದ ಕೊತ್ತಲ ಕೆಡೆದಾಗ
ಕೊತವಾಲನಾವ ತೊಪ್ಪಲು?
ಸುತ್ತಲೂ ಹಾಳು–
ಹಾಳು ಹಾಳೋ ಹಾಳು–
ಎಂದು ಗೋಳಾಡದಿರು
ಆ ಕೋಟೆ ಇಂದು ಇದ್ದರೂ
ಯಾವ ಉಪಯೋಗಕ್ಕೆ ಬರುತ್ತಿತ್ತು?
ಹೊಳಲ ಹಬ್ಬುಗೆಗಾಗಿ
ಹೊಸ ಬಡಾವಣೆಗಳಿಗಾಗಿ

ನಾವೇ ಕೆಡಹುತ್ತಿರಲಿಲ್ಲವೆ ಅದನ್ನು?
ಎದ್ದು ಸಡ್ಡು ಹೊಡೆದು
ಗೆಲ್ಲುವ ಛಲ ಹಿಡಿದು
ಕಟ್ಟು ಹೊಸ ಕಾಲದ ಕೋಟೆಯ
ತೀರಿಸಿಕೋ ತೋಳ ತೀಟೆಯ
ಗಟ್ಟಿ ಗುಂಡಿಗೆಯೇ ಕೋಟೆ
ಗೆಲುವ ಛಲವೇ ಕೊತ್ತಲ
ಒಲವೇ ಬತೇರಿ
ಬಲವೇ ಬಾವುಟ
ಒಮ್ಮತವೆ ಕಂದಕ
ಬಾಳುವೆಯೆ ಕೊಳಗುಳ!
ಈ ಕಾಳಗವ ಗೆಲ್ಲು
ಕೀಳರಿಮೆಯ ಕೊಲ್ಲು!

* * *

ಏನಾರ ಕಲೀಬೇಕಂತೀಯಾ?

ಏನಾರ ಕಲೀಬೇಕಂತೀಯಾ?
ಏನ ಕಲ್ತು ಏನ್ಮಾಡ್ತೀಯೋ ಮಾರಾಯಾ?
'ಜಿಂದಾಬಾದ್, ಮುರ್ದಾಬಾದ್'
ಈ ಎರಡನ್ನರ ಕಲ್ತು ಬಿಡು;
ಕಾಸು ಕೊಡೋವ್ರು ಹೇಳಿಧಾಂಗ
ಇವನ್ನ ಕೂಗಾಕ ಕಲ್ತು ಬಿಡು!
'ಬಾಬಾ'ಗಳು ಬಂದ್ರೆ ಪರಾಕು ಹೊಡಿ,
ಮುಖಂಡ್ರು ಬಂದ್ರೆ ಜೈಕಾರ ಹೊಡಿ,
ಗೆದ್ದ ಎತ್ತಿನ ಬಾಲಾ ಹಿಡಿ,
ಹೊತ್ತು ಬಂದ್ಹಾಂಗ ಕೊಡಿ ಹಿಡಿ,
ಕೈತುಂಬಾ ಕಾಸು ಪಡಿ,
ಒಂದು ಬಂಡಿ ಹೆಂಡಾ ಜಡಿ,
ಮೇಲೆ ಬೀಡಿ, ಬೀಡಾ ಹೊಡಿ!

ರಾಮನೇನು ರಾವಣನೇನು,
ಸೀತೆಯೇನು ಸೂರ್ಪನಕಿಯೇನು–
ಹೆಂಡಾ ಹಣಾ ಕೊಡೋವ್ರು ದೇವ್ರು,
ಅವರ್ನ ಹಾಡಿ ಹರಸಾಕ ಕಲಿ!
ಕೊಡದವರೆದ್ರು ಕಪ್ಪು ನಿಶಾನಿ
ಹಾರಿಸಿ ಕಿರಚಿ ಕುಣಿಯಾಕ್ಕಲಿ!
ಮಂದೀ ಮನೀಗೆ ಬೆಂಕಿ ಹತ್ತಿದ್ರ
ಅದರಾಗ ಬ್ಯಾಳಿ ಬೆಯ್ಸಾಕ ಕಲಿ,
ಉಂಡ ಮನೀಗಳಾ ಎಣಿಸಿ
ಅದಕ ಕನ್ನಾ ಹಾಕಾಕ್ಕಲಿ!
ಮುಂದಕ ತಂದವರ್ನ ಹಿಂದಕ ನೂಕಿ
ನೀನೆ ಮುಂದಕ ಬರಾಕ ಕಲಿ;
ಬಡವರ ಹೆಸರ್ಲೆ ಬಡವರ ಸುಲಿದು
ಒಡೆತನ ಗಳಿಸಿ ಮೆರಿಯಾಕ ಕಲಿ!
ದುಡ್ಡು ಪಡೆಯೋರು ದಡ್ಡರಂಡೆ ಗಂಡ್ರು
ದುಡೀದೆ ದುಡ್ಡು ದೋಚಾಕ ಕಲಿ;
ಹಾಸಿಗೆ ಇರದಿದ್ರ ಬೇರೆಯವರ
ಹಾಸಿಗೇಲಿ ಕಾಲು ಚಾಚಾಕ್ಕಲಿ!
ಕೊಟ್ಟವ ಕೊರಭದ್ರ, ತಿಂದವ ಇರಭದ್ರ,
ಹುಚ್ಮಂಡೆ ಮದಿವ್ಯಾಗ ಹೊಡಿಯಪ್ಪ!
ಹತ್ತರಗೂಡ ಹನ್ನೊಂದಾಗು,
ಪರಸೀಗೂಡ ಗೋವಿಂದಾಗು,
ಕಲಿಕಿ ಗಿಲಕಿ ಯಾಕಪ್ಪ?
ಅಷ್ಟೊಂದು ಹ್ಯಾವ ಇದ್ದದ್ದಾದ್ರೆ
ಒಮ್ಗೆ ಎಂ.ಎ.ಗೆ ಕಟ್ಟಪ್ಪ:
ಎಂ.ಎ. (ನಪಾಸು) ಎಂದ್ಬರಕೊಂಡು
ಮೂಗು ಮೇಲ್ಮಾಡಿ ಬದುಕಪ್ಪ!

* * *

ಹಾಡುತಿರಲಿ ಹಳ್ಳಿ!

ಹಾಡುತಿರಲಿ ಹಳ್ಳಿ
ಕೇಳುತಿರಲಿ ಡಿಳ್ಳಿ
ಹಾಡಿನೊಡನೆ ಹಬ್ಬುತಿರಲಿ
ಹೊಸ ಬಾಳಿನ ಬಳ್ಳಿ!
ಹಾಡುತಿರಲಿ ಹಳ್ಳಿ!
ಹೂವೊ, ಮುಳ್ಳೊ, ಕಳ್ಳಿ–
ಏನೆ ಇರಲಿ ಇಲ್ಲಿ;
ಬದುಕಿನೆಲ್ಲ ಭವಣಿಗಳನು
ಹಿಡಿದು ಆಚೆ ತಳ್ಳಿ–
ಹಾಡುತಿರಲಿ ಹಳ್ಳಿ!
ಇಲ್ಲಿ ಸಾಲ ಶೂಲ
ಜಂಜಡಗಳ ಜಾಲ
ಆದರೂನು ಬತ್ತದಿರಲಿ
ಹಾಡಿನಮೃತವಲ್ಲಿ!
ಹಾಡುತಿರಲಿ ಹಳ್ಳಿ!
ಬೆನ್ನು ಬಿಡದ ಬಡತನ
ಯುಗ ಯುಗಗಳ ಜಡತನ
ಬಿಟ್ಟು ಹೋಗಲಿಹವು ಇನ್ನು
ಇಕೊ, ಬೆಳಗಿನ ಬೆಳ್ಳಿ!
ಹಾಡುತಿರಲಿ ಹಳ್ಳಿ!
ನಿಮಗೆ ನಿಮ್ಮ ನೆಲೆಯಿದೆ
ನಿಮಗು ಇನ್ನು ಬೆಲೆಯಿದೆ
ಹಳ್ಳಿಯವರೆ ಚಿಂತೆಬಿಡಿರಿ
ಸುಲಿಗೆಗಿಡಿರಿ ಕೊಳ್ಳಿ!
ಹಾಡುತಿರಲಿ ಹಳ್ಳಿ!

* * *

ಹೊಸ ವರುಷದ
ಹೊಸ ಹೊಸ ದಿನ ದಿನವೆ ಬೇಕೆ?

ಖುಷಿ ಪಡಲು,
ಹುಸಿ ಹಿಗ್ಗಿನ ಎಲವು ಕಡಿಯಲು,
ಎಲುವು ಹರಿಸುವ
ಒಸಡಿನ ಕೆನ್ನೀರ ಕುಡಿಯಲು?
ಹೊಸವರುಷದ ಹಬ್ಬವೆ ಬೇಕೆ
ಕೃತಕ ಹರುಷದೊಡನೆ
ಕಣ್ಣು ಮುಚ್ಚಾಲೆಯಾಡಲು?
ಬಿಸಿಲು ನೆಳಲಿನ
ಮುಟ್ಟುವಾಟವಾಡಿ ಓಡಲು?
ಯಾಕೆ ಇಂದೇ
ಈ ಆಶಾವನ ವಿಹಾರ?
ಅದೇನೋ ಅಂತಾರಲ್ಲ, ಆ ಇಚಾರ?
ಹೊಸ ವರುಷ ಹೊಸ ಹರುಷ
ತರುವುದೆಂಬ ವಿಶ್ವಾಸ
ತರಲೆಂಬ ಆಶಾವಿಲಾಸ
ಎಷ್ಟುಸಲ ಹುಸಿ ಬಿದ್ದಿಲ್ಲ ಇದುವರೆಗೆ?
ಇಲ್ಲವೇ ಈ ಅಣಕ ನಾಟಕಕ್ಕೆ ಅಂಕಪರದೆ?
ಆಡಿದ್ದನ್ನೇ ಆಡುವ,
ಹಾಡಿದ್ದನ್ನೇ ಹಾಡುವ
ಕಿಸುಬಾಯಿ ದಾಸರಿಗೆ
ಬುದ್ಧಿಯಿರದಿದ್ದರೆ ಹೋಗಲಿ–
ನಂಬಿ ನಂಬಿ ಮೋಸ ಹೋಗಿಯಾ,
ಮೋಸ ಹೋದಷ್ಟು ವಿಶ್ವಾಸ ತಾಳಿ
ನಂಬಿದ್ದನ್ನೇ ನಂಬುವವರಿಗೆ ಬುದ್ಧಿಬರಬಾರದೆ?
ನಿನ್ನೆಯ ಬನ್ನದ ಬಸಿರಿನಲ್ಲಿಯೇ
ಬೆಳೆದ ಈ ಬರಡು ದಿನ

ತಂದೀತೆ ತನ್ನಿಂದತಾನೆ
ಹಿಗ್ಗಿನ ಹೊಸ ಜನನ,
ಹರ್ಷದ ಔತಣ?
ನಮ್ಮ ಪೊಳ್ಳು ಆಸೆಗಳ ಜೊಳ್ಳು ಹೊತ್ತ
ಈ ಟೊಳ್ಳುದಿನ
ಕೊಟ್ಟೀತೆ ನಮಗೆ
ಹೊಸ ಪಯಿರಿನ ಸಾಂತ್ವನ?
ಕೈಲಾಗದವರ ಕನಸುಗಳಿಂದ
ನಪುಂಸಕರ ನನಸುಗಳಿಂದ
ಹೇಡಿಗಳ ಹಾರೈಕೆಗಳಿಂದ
ನರಸತ್ತವರ ಹರಕೆಗಳಿಂದ
ನಾವು ಬೇಡಿದುದನೀವ ವರ್ತಮಾನದ,
ಬಯಸಿದಂತೆ ಮಾಡುವ ಭವಿತವ್ಯದ
ನಿರ್ಮಾಣ ಸಾಧ್ಯವೆ?
ನಿರ್ವಾಣದ ದೇಶದಲ್ಲಿ ನಿರ್ಮಾಣ ಸಾಧ್ಯವೆ?
ಗಂಡುತನವ ಬಿತ್ತಿರೋ
ಇಂದಿನ ಉರದಲ್ಲಿ
ಅದೊಂದೆ ಉಪಕಾರಿ, ಸಹಕಾರಿ
ಜೀವನದ ಧುರದಲ್ಲಿ!

* * *

ಆಸೆಯ ಹೆಣ

ನಡೆದಿಹೆನು ಮಸಣದತ್ತ
ಈ ಹೊತ್ತು–
ನನ್ನಾಸೆಗಳ ಹೆಣವ
ನಾನೆ ಹೊತ್ತು!
ಸಮಾಜದ ಸುಡುಗಾಡಿನಲ್ಲಿ
ಇದನ್ನು ಸುಡಲೆ?

ಸಂಪ್ರದಾಯದ ಸಿಮೆಟರಿಯಲ್ಲಿ
ಹುಗಿದು ಬಿಡಲೆ?
ಸರಕಾರದ ಎಲೆಕ್ಟ್ರಿಕ್ ಕ್ರೆಮೆಟೇರಿಯಮ್ಮಿನ
ಬಾಯ್ಗೆ ಕೊಡಲೆ?
ಹರಿವ ಹಳ್ಳಕ್ಕೋ
ಹದ್ದುಗಳ ನೆರವಿಗೋ
ಸರ್ಜಿಕಲ್ ವಾರ್ಡಿಗೋ
ಮುಡುಪಿಡಲೆ?
ಪೋಸ್ಟ್ ಮಾರ್ಟಮ್ ಮಾಡಿಸಿ
ಪ್ರಯೋಜನವೇನು?
ಸಾವಿನ ಕಾರಣ ತಿಳಿದು
ಸಾರ್ಥಕತೆಯೇನು?
ಆಸೆಗಳು ಬದುಕುವ
ದೇಶವೇ ಇದಲ್ಲ!
ಇಲ್ಲಿ ಕೇಳುವವರಾರು
ಸಾಯ್ವ ಆಸೆಯ ಸೊಲ್ಲ?
ಚಿಗಿಯುತ್ತಲೇ ಚಿವುಟಿರವನು
ಎನ್ನುವ ದೇಶದಲ್ಲಿ
ಬೆಳೆಯ ಬಹುದೇ ನರನ
ಆಶೋತ್ತರವಲ್ಲಿ?
ಮನವಿಲ್ಲದ ಮಾನವನೆ ಗುರಿ
ಈ ಮನನಿಕರ ದೇಶದಲ್ಲಿ!
ಸತ್ತ ಇಂದ್ರಿಯಗಳ ಶವವೇ ಶ್ರೇಷ್ಠ
ಈ ಸ್ವಘಾತುಕರ ನಿವಾಸದಲ್ಲಿ!
ಗಂಡಸುತನವೇ ಪಾಪ,
ಷಂಡತನ ಪುಣ್ಯವಿಲ್ಲಿ!
ನೈಸರ್ಗಿಕ ಜೀವನ ಶಾಪ,
ಅನೈಸರ್ಗಿಕತೆ ವರವಿಲ್ಲ!

ಹೆಣ್ಣು, ಹೊನ್ನು, ಮಣ್ಣು–
ಎಲ್ಲ ತ್ಯಾಜ್ಯವಿಲ್ಲ;
ಇವಕಾಗಿಯೇ ತೆರೆ ಮರೆಯಲ್ಲಿ
ಎಲ್ಲರ ವ್ಯಾಜ್ಯವಿಲ್ಲ!
ಅಂತೆಯೇ ಇಂಥಲ್ಲಿ ಇನ್ನು
ಇರುವುದು ಸಾಕಾಗಿ
ನಡೆದಿಹೆನು ಮಸಣದತ್ತ
ಈ ಹೊತ್ತು–
ನನ್ನಾಸೆಗಳ ಹೆಣವ
ನಾನೆ ಹೊತ್ತು!

* * *

ಒಂದು ಸೆರೆಮನೆಯಿಂದ ಇನ್ನೊಂದು ಸೆರೆಮನೆಗೆ

ಒಂದು ಸೆರಮನೆಯಿಂದ ಇನ್ನೊಂದು ಸೆರೆಮನೆಗೆ
ಹೋಗುವುದೆ ಗತಿಯಾಯ್ತೆ ನಮಗೆ ಕೊನೆಗೆ?
ಬೆಸ್ಟಾ ೃಲುಗಳ ಕೆಡಹಿ ಬಿಗಿದ ಬೇಡಿಯ ಕಡಿದು
ತನು ಹೊರಗೆ ಬಂದರೂ ಸೆರೆಯೊಳಿದೆ ಮನವು!
ಮನ ಸೆರೆಯೊಳಿದ್ದಾಗ ಮನೆಯೆ ಸೆರೆಮನೆಯಲ್ತೆ?
ಮನದ ಸೆರೆ ಹರಿದಾಗ ಸೆರೆಮನೆಯೆ ಮನೆಯು!
ಕಲ್ಲು ಮಣ್ಣಿನ ಗೋಡೆ ಕೆಡಹಿದರೆ ಬಂತೇನು?
ಕಬ್ಬಿಣದ ಬೇಡಿಗಳ ಕಡಿದರಾಯ್ತೆ?
ಬುದ್ಧಿಗಿವೆ ಬೇಡಿಗಳು, ಮನಕೆ ಸಂಕೋಲೆಗಳು
ಅವನು ಕಡಿಯದ ನಾವು ಸೆರೆಯಾಳ್ಗಳಲ್ತೆ?
ಶಾಸ್ತ್ರಗಳ ಸಂಕೋಲೆ, ರೂಢಿಗಳ ಸಂಕೋಲೆ,
ಮೂಢವಿಶ್ವಾಸಗಳ ನೂರು ಸಂಕೋಲೆ–
ರಕ್ತಬೀಜನ ಹಾಗೆ ಕಡಿದಷ್ಟು ಕೊನರುತಿವೆ
ಕಾಣುತಿಹ, ಕಾಣದಿಹ ಸಂಕೋಲೆ–ಮಾಲೆ!

ಸಂಕೋಲೆಗಳ ಕಡಿಯ ಬಂದವರೆ ಹೊಸದೊಂದು
ಸಂಕೋಲೆಯನು ಬಿಗಿದು ಹೋಗಿಹರು ನಮಗೆ!
ಸ್ವಾತಂತ್ರ್ಯವಲ್ಲವಿದು, ಸಂಕೋಲೆಯೆಂದವರು
ಗುರಿಯಾದರಿಲ್ಲಿ ಕಲ್ಲಿಗೆ, ಗಲ್ಲಿಗೆ!

* * *

ಪುಷ್ಪಪ್ರಶ್ನೆ

ಮುಳ್ಳುಗಳಿಗಂಜುವೆಯ ಮೂಳೆ ಪಡೆದಿಹ ಮನುಜ?
ಮುಳ್ಳಮೇಲೆಯೆ ಮಲಗಿ ನಗುವೆ ನಾನು!
ಕಲ್ಲ ಮೇಲರಳುವೆನು, ಮುಳ್ಳಮೇಲರಳುವೆನು–
ನೆಲ ಬೇಲಿ ಸಮನೆಂದು ಬಗೆವೆ ನಾನು!
ಭದ್ರಭವನದೊಳಿದ್ದು ಭಯಪಡುವೆಯಾ, ಮನುಜ?
ಬಯಲಲ್ಲಿ ಬಿಸಿಲು ಮಳೆಗಂಜದಿಹೆ ನಾನು!
ಚಂಡಾಳಿಯೇ ಬರಲಿ, ಕಾಳ ನಾಗವೆ ಬರಲಿ–
ಹೂವಡಿಗನುಗುರಿಗೂ ಹೆದರದಿಹೆ ನಾನು!
ನೂರು ವರುಷವ ಪಡೆದು ಮರಣ ಭಯವೇ, ಮನುಜ?
ಕೆಲ ನಿಮಿಷ ಪಡೆದರೂ ಪರಿತಪಿಸೆ ನಾನು!
ಮಂಜು ದಾಳಿಯೆ ಬರಲಿ, ಬಿರುಗಾಳಿಯೇ ಬರಲಿ–
ಜೀವನವನಿತ್ತವನ ಶಪಿಸೆ ನಾನು!

* * *

ಕನ್ನಡಿಯ ಬಿನ್ನಪ

ಇದ್ದಂತೆ ನಿನ್ನ ಮುಖ ನಿನಗೆ ನಾ ತೋರಿದರೆ
ನನ್ನ ಮೇಲೇಕಿನಿತು ರೋಷ ನೋಟಕನೆ?
ಮೂಲ ಆಕೃತಿಯ ವಿಕೃತಿಯನು ಪ್ರತಿಕೃತಿಯು
ಹೋಗಲಾಡಿಸಬಲ್ಲುದೆಂತು ವೀಕ್ಷಕನೆ?
ಮೂಲದಲ್ಲಿಲ್ಲದಿಹ ಚೆಲುವ ಚಿಗುರಿಸಲಾರೆ,
ಮೂಲದ ಕುರೂಪವನು ಕಳೆಯಲಾರೆ;

ವಾಸ್ತವದ ವದನಕ್ಕೆ ಈಪ್ಸಿತದ ಬಣ್ಣವನು
ಆಕಾಂಕ್ಷೆಗಳ ಒಪ್ಪ ಬಳಿಯಲಾರೆ!
ನನ್ನಲ್ಲಿ ನೀ ಚೆಂದ ಕಾಣಬೇಕಾದರೆ
ನಿನ್ನ ಮೊಗವನೆ ಮೊದಲು ಸರಿಪಡಿಸಿಕೋ!
ಪ್ಲಾಸ್ಟಿಕ್ ಸರ್ಜರಿಯೊ, ಬ್ಯೂಟೀಷಿಯನ್ ಶಾಪೊ–
ಯಾವುದು ಉಪಾಯವೋ ಅದ ಮಾಡಿಕೋ!
ಏನಾಗದಿದ್ದರೂ ಒಂದಾಗಬಲ್ಲುದು–
ಮನದ ಚೆಲುವನು ಮೊಗದಿ ಚಿಮ್ಮಿಸಯ್ಯ!
ಇದ್ದದ್ದರಲ್ಲಿಯೇ ಉದ್ಭವಿಸಿ ಬೆಳಗೀತು
ಇಲ್ಲದಂದವು ಮಾಡಿ ಮೊಗವನ್ನು ರಯ್ಯ!

* * *

ವಾಹನಗಳೆ ನಿಲ್ಲಬಹುದು

ಜೋಡು ಜಡೆ, ಒಂದೆ ಹೂವು
ಬಲದ ಜಡೆಯ ಮೇಲೆ;
ಹಿಗ್ಗು ಹೆಜ್ಜೆಯಿಡುವ ಹಾಗೆ
ಹೊರಟಿರುವಳು ಬಾಲೆ!
ಹೊರಳಿ ಹೊರಳಿ ನೋಡುವವರ
ಪರವೆಯಿಲ್ಲ ಇವಳಿಗೆ;
ಚಿತ್ತವೆಲ್ಲಿ ಒತ್ತೆಯಿಹುದೊ,
ಮತ್ತೆಬಹುದೆ ಅಳವಿಗೆ?
ಒಳಗೊಳಗೇ ನೆನಹು–ಕೊಳಲು
ನುಡಿಯುತಿರುವ ಹಾಗಿದೆ!
ಎಚ್ಚರ ವಿಸ್ಮೃತಿಯ ಹಾದಿ
ಹಿಡಿಯುತಿರುವ ಹಾಗಿದೆ!
ನಾಚಬೇಡ, ಗೆಳತಿಗೊಮ್ಮೆ
ತಿಳಿಸು ಬಾಲೆ ಬಯಕೆಯ!

ತಿಳಿಸಿ ಹಗುರಗೊಳಿಸು ಎದೆಯ,
ಉಳಿಸು ಜರದ ರವಿಕೆಯ!
ಗೆಳತಿಯಿಲ್ಲವೇನೂ ಮನದ
ಗುಟ್ಟನೊರೆಯಲಿವಳಿಗೆ!
ಎಳೆವುದೇನೊ ಒಳಗಿನಳುಕು
ಕೊನೆಗೆ ಇವಳ ಬವಳಿಗೆ!
ದೇವರೆ ಕಾಪಾಡಬೇಕು
ಅಪಘಾತದಿನಿವಳನು!
ವಾಹನಗಳೆ ನಿಲ್ಲಬಹುದು
ನೋಡಿ ಇಂಥ ಚೆಲುವನು!

* * *

ನಾಚು ಪ್ರಿಯೆ

ನಾಚು, ಪ್ರಿಯೆ, ನಾಚು–
ದಿನಕ್ಕೊಮ್ಮೆಯಾದರೂ ನಾಚು,
ಮಾಡಲೆನ್ನಮನ ನಾಚು!

ನಾಚಿ ಕೆಂಪೇರಿದ
ನಿನ್ನ ಕೆನ್ನೆಗೊತ್ತಿದ
ಒಂದೇ ಒಂದು ಮುತ್ತು
ಸಹಜ ಕಪ್ಪೋಲಕ್ಕಿತ್ತ
ನೂರು ಮುತ್ತುಗಳಿಗೆ ಸಮ!

ನಾಚಿಕೆಯ ಸುಮ
ಅರಳುತ್ತಿರಲಿ
ಗಲ್ಲದ ಕುಳಿಯ ಸುತ್ತ
ರಕ್ತಿರಕ್ತತೆಯಾಗುತ್ತ
ನೋಡಿದಾಗೊಮ್ಮೆ
ಇಮ್ಮು ಹೊಮ್ಮೆ!

ಕತ್ತಿನಳತೆಗೆ ಕತ್ತರಿಸಿದ
ಈ ಕೇಶಗಳು
ಚೆಲುವಿನ ರಾಶಿಗಳು

ಇನ್ನೊಮ್ಮೆ
ಹಿಮ್ಮಡಿಯವರೆಗೆ ಬೆಳೆದು
ನೂರು ಕೇಶಾಲಂಕಾರಗಳ ತಳೆದು
ಜಡೆಯ ನಾಗರವಾಗಿ
ಶೃಂಗಾರ ಸಾಗರವಾಗಿ
ಪಟ್ಟದ ಕಲ್ಲಿನ
ಕಲ್ಲಿನ ಹೆರಳುಗಳಲ್ಲಿ
ಚೈತನ್ಯ ಚಿಮ್ಮಿದಂತೆ
ಬಗೆಬಗೆಯ ಕಬರಿಗಳಾಗಿ
ನಗುನಗುವ ಹೂಮಾಲೆ ಧರಿಸಿ
ಸೊಬಗಿನ ಮಳೆ ಸುರಿಸಿ
ತೇಲಿಸಲಿ ನನ್ನ
ಸೊಗದ ಸರಸಿಯಲ್ಲಿ!
ಬಳೆಯಿಲ್ಲದ ಬೋಳು ಕೈಗಳು
ನೂಪುರವಿಲ್ಲದ ಬೋಳು ಕಾಲ್ಗಳು
ಆಗೊಮ್ಮೆ ಈಗೊಮ್ಮೆ
ಬಳೆ, ನೂಪುರ ಧರಿಸಿ
ಕಿವಿಗೆ ಇಂಚರ ಸುರಿಸಿ
ನವಿರೇಳಿಸಲಿ ನನಗೆ–
ಹೆಮ್ಮೆ ಬರಿಸಲಿ ನಿನಗೆ!
ಇವೆಲ್ಲ ದೌರ್ಬಲ್ಯದ್ಯೋತಕ
ಪೌರುಷವೆ ಪ್ರಗತಿಯ ಪ್ರತೀಕ–
ಎಂದು ವಾದಿಸುವಿಯೇನು?
ಇದನು ಪೂರ್ಣ ವಿರೋಧಿಸೆ ನಾನು!
ಗಂಡುಗಂಡಾಗಿ ಉಳಿದು
ಹೆಣ್ಣಿನ ಮಾರ್ದವ
ಪಡೆದುಕೊಳಲಿ
ಹೆಣ್ಣು ಹೆಣ್ಣಾಗಿ ಉಳಿದು
ಗಂಡಿನ ಗುಂಡಿಗೆಯ
ಗಳಿಸಿಕೊಳಲಿ

ಹೆಣ್ಣು ಹೆಣ್ಣೆಂದು
ಗಂಡು ಹೆಣ್ಣಿಗನಾಗದಿರಲಿ
ಗಂಡುಗಂಡೆಂದು
ಹೆಣ್ಣು ಗಂಡುಬೀರಿಯಾಗದಿರಲಿ!
ಮಿತಿಯಲ್ಲಿ ಗಂಡಿಗೆ ಭೂಷಣ
        ಹೆಣ್ಣಿನ ಮೃದುಲತನ;
ಮಿತಿಯಲ್ಲಿ ಹೆಣ್ಣಿಗೆ ಭೂಷಣ
        ಗಂಡಿನ ಗಡಸುತನ
        ಬತ್ತದಿರಲಿ ನಿನ್ನ ಹೆಣ್ಣುತನ!
ಅದುವೆ ನನ್ನ ಚೇತನಕೆ ಚೇತನ–
        ನಲವು–ನವಿಲ ನರ್ತನ!
ಬಾ ಬಳಿಗೆ
ಈಗ ಬೇಕೆನೆಗೆ
ನಿನ್ನ ನಾಚಿದ ಕೆನ್ನೆ
        ಅರೆ ನಿಮೀಲಿತನಯನ
        ಅದಿರುವ ಅಧರ
        ಕಂಪಿಸುವ ಕರ!
ನಾಚು, ಪ್ರಿಯೆ, ನಾಚು–
ಈಗೊಮ್ಮೆ ನಾಚು,
ದಿನಕೊಮ್ಮೆ ನಾಚು!

* * *

ಇನ್ನುಳಿದ ದಿನಗಳನು

ನನ್ನೆದೆಯ ನನೆಯರಳೆ
ನಿನ್ನುಸಿರೆ ತಂಬೆಲರು
        ಎದೆಗೆ ಹತ್ತಿರವಾಗಿ ಉಸಿರಾಡಿಸು!
ನಿನ್ನ ಕುರುಳಿನ ನೆರಳೆ
ಅಲ್ಲಿ ಕೊನರುವ ತಳಿರು
        ಅವನೆ ಹೃದಯದ ಮೇಲೆ ಹರಿದಾಡಿಸು!

ನರೆ ಬಂತು ಕೇಶಕ್ಕೆ
ತೆರೆ ಬಂತು ಗಲ್ಲಕ್ಕೆ
ಮುಪ್ಪಿಲ್ಲ ನಿನ್ನ ಸಿರಿನಗೆಯ ಸೊಗಕೆ!
ಮೊದಲಿಗಿಂತಲು ಮಧುರ
ನಿನ್ನ ಸಿರಿಗೊರಳ ಸ್ವರ
ಇದರ ಸವಿಯಿರೆ ಅಂಜೆ ನಾನು ಜಗಕೆ!
ಒಲಿದಷ್ಟು ಹೆಚ್ಚುವೀ
ಒಲವೆ ಬಲ ಬದುಕಿನಲಿ
ಈ ಒಲವೆ ಕಂಪು ತಿಳಿ ಎದೆಯಲರಿನಲ್ಲಿ!
ಬಳಸಿದನಿತೂ ಬೆಳೆವ
ಬದುಕಿನಗಲಕೆ ನಿಲುವ
ಅದ್ಭುತವೆ ಅಡಗಿಹುದು ಒಲವಿನಲ್ಲಿ!
ಬದುಕಿದೆವು ಇದುವರೆಗೆ
ಕವಿಯು ಒಲವಿನ ಕರೆಗೆ
ಕಿವುಡು ಬೀಳದ ತೆರದಿ, ಬಾಳಗೆಳತಿ!
ಇನ್ನುಳಿದ ದಿನಗಳನು
ದಿನದ ಕ್ಷಣಕ್ಷಣಗಳನು
ಇಂತೆಯೇ ಕಳೆಯೋಣ, ನನ್ನ ಸಂಗಾತಿ!

* * *

ಕರುಳ ಬಳ್ಳಿ

ಕರುಳಬಳ್ಳಿ ಬಾಡದಿರಲು
ಕಂಬನಿಗಳನುದುರಿಸು
ಹಿಗ್ಗಿನವೋ ಕುಗ್ಗಿನವೋ
ಬಾಷ್ಪ ಬಿಂದು ಸುರಿಸು
ಮರುಕದ ಮಳೆ ಬರಲು ಕಳೆ
ಕರುಳ ಸಿರಿಯ ಸಸಿಗೆ
ಎರಕದಲರು ಅರಳುವುದು
ನಿಟ್ಟುಸಿರಿನ ಬಿಸಿಗೆ
ಬಿಸಿಲುಗಾಳಿ ಬಡಿಸಿ ಕೊಳದೆ
ಹಣ್ಣಾಗದು ಒಲವು

ದುಗುಡದಡೆಯೆ ತೂಲತಕಲ್ಪ
ರಸದುಂಬುಲು ಫಲವು
ಹಣ್ಣಾಗುವವರೆಗೆ ಬಿಡುವ
ತಾಳ್ಮೆ ಮಾತ್ರ ಬೇಕು
ಕಸುಗಾಯನೆ ಕುಡಿದು, ಒಗರು
ಎಂಬುದಿನ್ನು ಸಾಕು

* * *

ತಂಗಳಾನೇ ತಿನಿಸು

ತಂಗಳಾ ತಿಂದು ತಿಂದು ಸಾಕಾಯ್ತು
ಇನ್ನರ ಬಿಸೇದ ತಿನಸಂದ್ರ
ತಂಗಳಾನ ಬಿಸಿಮಾಡಿ
ತಿನಸಾಕ ಸುರು ಮಾಡ್ದೆಲ್ಲೆ?
ಎಂಥಾ ಬೆರಕಿ ಹೆಣ್ಣು ನೀನು?
ನಿನಗ ಎಷ್ಟೂ ಕಷ್ಟ ಆಗಬಾರದೇನು?
ನೀನೇನು ಐದು ಮಲ್ಲಿಗೆ ತೂಕದಾಕೀನಾ?
ನಾಜೂಕ ನವಣಿ ತೆನೀನಾ?
ಯಾಲಕ್ಕಿ ಗೊನೀನಾ?
ಎಲ್ಡು ಹೊತ್ತು ಬಿಸೇದ ಕುಚ್ಚಿ ಹಾಕಂದ್ರ
ತಂಗಳಾನ್ನ ಬಿಸಿಮಾಡಿ ತಿನಸ್ತಾಳ
ನನ್ನ ಕಟ್ಟಾಣಿ!
ತಂಗಳಾ ತಿನುವಾಗ
ಹಳಸಿದ್ದು ಉಣ್ಣೋ ಅಂಜಿಕ್ಯಾದ್ರೂ ಇರಲಿಲ್ಲ.
ನೀನೀಗ ಬಾಸೀನ ಬಿಸಿಮಾಡಿ
ನೀಡಾಕ ಸುರು ಮಾಡಿದ ಮ್ಯಾಗ
ಹಸಿಬಿಸಿ ಯಾವ್ದೋ
ಹಳಸಿದ್ದು ಯಾವ್ದೋ
ಬೆಂದದ್ದು ಯಾವ್ದೋ
ಬೇಯದ್ದು ಯಾವ್ದೋ
ಮುಗ್ಗ್ ಯಾವ್ದೋ
ಕಗ್ಗ್ ಯಾವ್ದೋ

ಎಗ್ಗಿಲ್ಲ ತಿನ್ನಬೇಕ್ ನಾನು
ಬಿಸೇದಂತಾ
        ಹೆಸರಿಟ್ಟಕೂಡ್ಲೆ
        ಕಸಾನೂ ತಿನಬೇಕೇನು?
ಲೇ, ಸಾಕೆ ನಿನ್ನ ಬಿಸಿ ಅಡಿಗಿ,
        ನೀನು ಮೈಗಳ್ಳಿ, ತುಡುಗಿ!
ನಿನ್ನಂಥ ಕೈಲಾಗದವ್ಳು
        ಬಿಸೀದಿನ್ನೇನ ಮಾಡ್ಯಾಳು?
ಇನ್ನಮ್ಯಾಗ
        ನಿಜವಾದ ಬಿಸೀದರಾ ಮಾಡು
        ಇಲ್ಲಾ ತಂಗಳಾನ್ನಾ ತಿನಸು!
        ಹೊಟ್ಯಾಗ ಹ್ಯಾಗೂ ಬಿಸಿ ಆಗತ್ತಲ್ಲ–
                ಹಸಿವಿಬೆಂಕಿ ಹುಸಿಯೋಲ್ಲ
                        ಮೋಸ ಮಾಡೋಲ್ಲ!
ಕೈ ಹಿಡಿದಾಕಿ ಕೈಕೊಟ್ರೂ
                        ಅದು ಕೈಕೊಡೋಲ್ಲ!

* * *

ಮೈತ್ರಿ ಚೈತ್ರ

ಮತ್ತೆ ಬರದಿರದಣ್ಣ ತನ್ನ ನಿಯಮಿತ ದಿನಕೆ
        ಮೈತ್ರಿಚೈತ್ರವು ನಿನ್ನ ಮನದ ವನಕೆ!
        ಬೋಳು ಬೋಳಿದ್ದರೂ
        ಹಾಳು ಮುಸುಕಿದ್ದರೂ
        ಬೇರು ಹಸಿಯಾಗಿಹವು–
                ಚಿಂತೆ ಬೇಡ!
ಸುಗ್ಗಿಯಲರಲಿ ಜಳಕ
ಬೊಡ್ಡೆಗಳಿಗಿದೊ ಪುಳಕ
ಕೊನರಲಿದೆ ಕೊರಡು ಸಹ–
                ಶಂಕೆ ಬೇಡ!
ಹೊಸಹೊಗರು ಚಿಗುರಿನಲಿ
ರೆಂಬೆಗಳ ಉಗುರಿನಲಿ

ಹೊಮ್ಮಿ ಹೊಂಗಿಸದಿರದು
ಹಳೆಯ ಕಾಡ!
ಹೊಸ ಸೊಬಗು ಹೂಗಳಲಿ
ಬಳ್ಳಿಗಳ ಬಾಯ್ಗಳಲಿ
ಹೊಸಕಂಪು ಚಿಮ್ಮಲಿದೆ–
ಕಾದು ನೋಡ!
ಇಂದು ಹೇಗೇ ಇರಲಿ
ವನವ ದಹಿಸದೆ ಇರಲಿ
ದ್ವೇಷ ಮಾತ್ಸರ್ಯಗಳ
ದಾವಾಗ್ನಿ–ಗೆಳೆಯ!
ವನ ಉಳಿಯೆ ನಿಶ್ಚಯವು
ಕೆಳೆಯ ಸುಗ್ಗಿಯ ಬರವು
ಉಳಿಸುವನ, ಬತ್ತಿಸದೆ
ಸುಮನಸದ ಸೆಲೆಯ!

* * *

ನಾನೀಗೇನ ಮಾಡ್ಲಿ?

ನಾನೀಗೇನ ಮಾಡ್ಲಿ?
ಈ ಪೇಚಿನಾಗಿಂದಾ ಹ್ಯಾಂಗ್ ಪಾರಾಗ್ಲಿ?
ಯಾವ್ದೋ ಗುಳಿಗೀ ಗಳಿಗ್ಯಾಗ
ಕವಿತಾ ಕಳಿಸ್ತೀನಿ ಅಂತಾ
ಮಾತು ಕೊಟ್ಟು ಬಿಟ್ಟೆ:
ಇದೂ ಮಂತ್ರಿಗಳ ಮಾತಂತಾ ತಿಳಿಕಂಡು
ಮರ್ತ್ ಬಿಡ್ತಾರಂತಾ ಲೆಕ್ಕಾ ಹಾಕಿದ್ದೆ!
ಇವ್ರು ಮರೀಬಾರ್ದ?
ಮತ್ತೆ ಮತ್ತೆ ಪತ್ರ–
'ಯಾವಾಗ ನಿಮ್ಮುತ್ರ?' ಅಂತಾ!
ಈ ವಿಶೇಷ ಸಂಚಿಕೆಯವರ್ದ
ವಿಶೇಷ ಕಿರಿಕಿರಿಯಪಾ!
ಅಶೇಷ ಸ್ಫೂರ್ತಿ ಗೊಳೇ ಮಾಡಿ
ವಿಶೇಷ ಸಂಚಿಕೆ ಹೊರಡಿಸಿ
ಸಶೇಷ ಸಾಲಾ ಹೊತ್ಕೋತಾರಂತೆ!

ಹೊರಲಿ! ನಮಗ್ಯಾಕ ಈ ತರಲಿ?
ಆದ್ರೆ, ಇವರ ಈ ಅವಸರಕ್ಕ
ನಾ ಕವಿತಾ ಎಲ್ಲಿಂದಾ ತರಲಿ?
'ಬರಿ, ಬರಿ' ಅನ್ನೋದೇನೋ ಸರಿ–
ಆದ್ರೆ ಬರಿಯೋದು ಬಲು ಬಿರಿ!
ಬರಿಯೋದಾದ್ರೂ ಏನನ್ನ?
ಬರಿಯಾಕ ಹುರುಪು ಕೊಡುವಂಥಾದು
ಆದನರ ಏನೀಗ?
ಎಲ್ಲಾ ವಾಕರಕಿ ಬರೋ ಯ್ಯಾಪಾರ
ನಡದೈತೀಗ!
ಅದನ್ನ ಬರಿ–
ಕೊಡು ಈ ಕದೀಮರಿಗೆ ಬರಿ
ಅಂತೀರಾ?
ಬರಿ ಕೊಟ್ರೂ ಸುಡ್ದ ಚರ್ಮ ಇವರ್ದು!
ಆನೆಗಿಂತ ದಪ್ಪ, ಆಮೆಗಿಂತ ಬಿರುಸು!
ಕಚಕುಳಿ ಅಂತಿರ್ಲಿ, ಚಿವುಟಿದ್ರೂ,
ಕಚ್ಚಿದ್ರೂ, ಚುಚ್ಚಿದ್ರೂ
ಜುಮ್ಮೆನ್ನದ ಜರ್ಬಿನ ಚರ್ಮಕ್ಕ
ಲೆಕ್ಕಣಿಕೀಲಿ ತಿವಿದ್ರ ಏನಾಗುತ್ತ?
ಲೆಕ್ಕಣಿಕೀಬಿಟ್ಟು ಈಟಿ ಹಿಡಿ ಅಂತೀರಾ?
ಇದ್ರಾಗ ಅವರ್ನ ಸೋಲ್ಸೋಶಕ್ತಿ
ಇದೆಯಾ ನಮ್ಗ?
ಅದೇನೋ ಅಂತಾರಲ್ಲ–
ಅಭ್ಯಾಸ ಇಲ್ದ ಹಾರುವ ಹೋಮಾ ಮಾಡಿ
ಗಡ್ಡಾ ಮೀಸೆ ಸುಟ್ಕೊಂಡಾ ಅಂತ,
ಹಾಗಾದೀತು ಇವ್ರ ಮ್ಯಾಲೆ ಕತ್ತಿ ಎತ್ತಿದರ!
'ಹಾಗಾದ್ರೆ ಇವರ್ನ ಬಗ್ಗು ಬಡಿಯೋ
ಉಪಾಯಾನೇ ಇಲ್ಲೇನು?' ಅಂತಾ ಕೇಳ್ತೀರಾ?
ನನ್ಗೂ ಹೊಳ್ದಿಲ್ಲ ಅಂಥಾ ಉಪಾಯಾ!
ಸಾಮೋಪಾಯಕ್ಕ ಇವ್ರು ಮಣಿಯೋರಲ್ಲ;
ದಾನೋಪಾಯಕ್ಕ ದುಡ್ಡು ನಮ್ಮಲ್ಲಿಲ್ಲ–

ಸುರೀತಾರ ಅವ್ರೇ ದುಡ್ಡಕೇಳಿದವರ್ಗೆಲ್ಲ!
ಇನ್ನ, ಭೇದೋಪಾಯ್ದಾಗ ಅವರ್ನ ಮೀರೋರು ಯಾರೂ ಇಲ್ಲ;
ದಂಡೋಪಾಯ್ದಾಗ ಉಸ್ತಾದ್ರು ಅವರೆಲ್ಲ!
ಇನ್ನಾವ್ದು ಉಳೀತು ಉಪಾಯ?
ಅಂಥಿಂಥ ಉಪಾಯಾ ಹೂಡಿದ್ರ ನಮ್ಗೇ ಅಪಾಯ!
ಐತೆ ಒಂದುಪಾಯ–
ಅಪಾಯ ಇಲ್ದ ಉಪಾಯ:
ಅವ್ರ ಸಾಮೋಪಾಯ್ದ ಸವಿಮಾತು ನಂಬಬ್ಯಾಡ್ರಿ;
ಅವ್ರ ದಾನೋಪಾಯಕ್ಕ ಕೈ ಒಡ್ಡ ಬ್ಯಾಡ್ರಿ;
ಅವ್ರ ಭೇದೋಪಾಯಕ್ಕ ಬಲಿ ಬೀಳ್ಬ್ಯಾಡ್ರಿ;
ಅವ್ರ ದಂಡೋಪಾಯಕ್ಕ ಬೆದರಬ್ಯಾಡ್ರಿ!
ಇದು ನಮ್ಮಿಂದ ಆಗೋದಿಲ್ಲಾ ಅಂದ್ರೆ
ನಮಗಿದ್ದದ್ದೇ ಇವ್ರ ತೊಂದ್ರೆ!
ಮತ್ತೆ, ನೀವೂ ಇವ್ರ ಎಂಜಲಾನೇ ತಿಂದ್ರೆ
ಯಾತಕ್ಕ ಕುವೆಂಪು ಬೇಂದ್ರೆ?
ಇದೆಲ್ಲಾ ಹಾಳಾಗಿ ಹೋಗ್ಲಿ–
ನಾನೀಗೇನ್ ಮಾಡ್ಲಿ?

* * *

ಕಾವ್ಯಾನಂದ ಕಾಣೆಯಾಗಿದ್ದಾನೆ !

ಕಾವ್ಯಾನಂದ ಕಾಣೆಯಾಗಿದ್ದಾನೆ!
ಹುಡುಕಿ ಕೊಟ್ಟವರಿಗೆ
ಭಾರೀ ಭೂರಿ
ಬಹುಮಾನದ ಘೋಷಣೆ!
ಪೋಲೀಸರಿಗೆ ದೂರು ಕೊಟ್ಟಾಗಿದೆ;
ಸುಳುವು ಸಿಕ್ಕರೆ
ದಯವಿಟ್ಟು
ಪುರಾಣಿಕ ದಂಪತಿಗಳಿಗೆ ತಿಳಿಸಿರಿ,
ಭಾರೀ ಬಹುಮಾನ ಗಳಿಸಿರಿ!
ಹೋಗುವ ಮುನ್ನ ಹೇಳುವುದಿರಲಿ
ನಾಲ್ಕು ದಶಕಕ್ಕೂ ಮಿಕ್ಕಿ ನೋಡಿಕೊಂಡವರಿಗೆ

ನಾಲ್ಕು ಸಾಲು ಬರೆದಿಟ್ಟು ಹೋಗಬೇಡವೆ?
ಎಲ್ಲಿಗೆ ಹೋದನೆಂಬುದ ತಿಳಿಸದಿದ್ದರೆ ಹೋಗಲಿ,
ಯಾಕೆ ತೊರೆದು ಹೋದನೆಂಬುದನ್ನು ತಿಳಿಸ ಬೇಡವೆ?
ಎಂಥ ವಿಚಿತ್ರ ವ್ಯಕ್ತಿ ಈ ಕಾವ್ಯಾನಂದ
ಧಡಧಡ ಬಂದ, ಬಡಬಡ ಹೋದ!
ಇದ್ದಕ್ಕಿದ್ದಂತೆ
ಯಾಕೆ ಹೊರಟು ಹೋಗಿರಬಹುದು?
"ವಾರ್ಧಕ್ಯಕ್ಕೇಕೆ ವಾರ್ಧಿಕ ಷಟ್ಪದಿ,
ದಣಿದ ಮನದ ವನದಲ್ಲೇಕೆ ಕವನ-ಷಟ್ಪದಿ?"
ಎಂದೆಣಿಸಿ, ಹರೆಯನರಸಿ ಹೋಗಿರಬಹುದೆ?
ಸಹಜ ಭಾವಗಳ ಅಭಾವ ತಲೆದೋರಿ,
ಅಸಹಜ ಅನಿಸಿಕೆಗಳನ್ನು ಅರಗಿಸಿಕೊಳ್ಳಲಾಗದೆ
ಪಲಾಯನ ಮಂತ್ರ ಜಪಿಸಿರಬಹುದೆ?
ಹೊಕ್ಕುಳ ಕೆಳಗೇ ನೆಲೆಸಲು ಮನವೊಪ್ಪದೆ
ಹೇಸಿ ಹೋಗಿರಬಹುದೆ?
ಮಣ್ಣಿನ ವಾಸನೆಗೂ ಎರವಾಗಿ
ಮದ್ದಿನ ವಾಸನೆ ಬರುತಿಹುದ ಗಮನಿಸಿ
ರೋಸಿ ಹೋಗಿರಬಹುದೆ?
ಶುಕಪಿಕ ಅಂಚೆಕೊಂಚೆ ಮಾವು ಮಲ್ಲಿಗೆಗಳ ಮಾತನಾಡಿದರೆ
ಹಳಬನೆಂದಾರೆಂದು ಹೆದರಿ ಬಾಯ್ಮುಚ್ಚಿಕೊಂಡಿದ್ದು
ಉಸಿರು ಕಟ್ಟಿದಂತಾಗಿ ಹತಾಶನಾಗಿ ಹೋಗಿರಬಹುದೆ?
ಗುಣಕ್ಕೆ ಸಲ್ಲಬೇಕಾದ ಬೆಲೆ
ಗುಂಪಿನ ಗಾಂಪರಾಟಕ್ಕೆ ಸಲ್ಲುದ ಕಂಡು
ನಿರಾಶನಾಗಿ ಹೋಗಿರಬಹುದೆ?
ತನ್ನ ಕನಸಿನ ಕನ್ನಡಕುಲ ನುಚ್ಚುನೂರಾಗಿ
ಪಂಗಡ ಪಂಗಡಗಳ ಸಿಂಗಿ ಕಾಳಕೂಟ ವಿಷ
ಹಬ್ಬಿ ಹರಡುತ್ತಿಹುದ ಕಂಡು
ಭ್ರಮನಿರಸನವಾಗಿ ಹೋಗಿರಬಹುದೆ?
ಜನನಿಬಡ ಏಕಾಕಿತನ ಸಾಕಾಗಿ
ನಿರ್ಜನ ಸಹವಾಸ ಸುಖ ಬೇಕಾಗಿ
ಬೇಕೆನಿಸಿದಕಡೆ ಹೋಗಿರಬಹುದೆ?

ಪರಿಚಿತರ ಮಧ್ಯದ ಪರಕೀಯತನ ಸಾಕಾಗಿ,
ಅನ್ಯ ಪರಿಸರದಲ್ಲಿ ತನ್ನತನ ಕಂಡುಕೊಳ್ಳಲು,
ಕರುಳರಿದ ಕಡೆಗೆ ಹೋಗಿರಬಹುದೆ ?
ಜನ ಬದುಕಲೆಂದು ಬರೆವುದು ದೂರಾಗಿ
ತಾ ಬದುಕಲೆಂದು ಬರೆಯಲು ಒಪ್ಪದೆ
ಒಳದನಿಯು ಕರೆದತ್ತ ಓಡಿರಬಹುದೆ?
ಬರೆದು ಪರಿವರ್ತನೆ ತರುವುದು
ಭ್ರಮೆಯೆಂಬ ಭಾವನೆ ಬಲಿತು
ಬರೆಯುವುದಕೇ ಕೈಮುಗಿದು ಹೋಗಿರಬಹುದೆ?
ಏಕೆ ಹೊದನೋ ಏನೋ–
ಅವನಿಗೇ ಗೊತ್ತು!
ಕಾಣೆಯಾಗಿರುವುದಂತೂ ಸತ್ಯ,
ಈ ಹೊತ್ತು!
ಸುಳಿವು ಸಿಕ್ಕರೆ ತಿಳಿಸಿರಿ;
ಬಹುಮಾನ ಗಳಿಸಿರಿ;

* * *

ಚರಗ

ಚರಗ ಚೆಲ್ಲುವ ಬಾರೆ–ನೀರೆ!
ಆಗಲೀ ದಿನ ನಮ್ಮ ಚೆನ್ನ ಚರಗದ ಸೂರೆ–
ಚರಗ ಚೆಲ್ಲುವ ಬಾರೆ–ನೀರೆ;
ಹುಲ್ಲುಲ್ಲಿಗೋ–ಚೆನ್ನವರೆಗೋ!
ಭೂಮಿ ಕೊಟ್ಟದ್ದನ್ನು
ಭೂಮಿಗೆ ತಿರುಗಿಸುವ
ಚರಗ ಚೆಲ್ಲಿದುದಾಯ್ತು
ಇದುವರೆಗೆ
ಬದುಕು ಕೊಟ್ಟದ್ದನ್ನು
ಬದುಕಿಗೇ ತಿರುಗಿಸುವ
ಚರಗ ಚೆಲ್ಲುವ ಬಯಕೆ
ಈಗ ನಮಗೆ

ಅತ್ತ ಬೆಳೆಯುವ ಹೊಲವು
ಇತ್ತ ಬದುಕಿನ ಹೊಲವು
ಒಂದು ಇನ್ನೊಂದಕ್ಕೆ
ಆಗಿಹುದು ಬಲವು
ಆ ಹೊಲಕು ಚರಗವಿದೆ
ಈ ಹೊಲಕು ಚರಗವಿದೆ
ಚೆಲ್ಲೋಣ ಚರಗವನು
ಚೆಲ್ಲಾಡೆ ಚೆಲುವು
ಹುಲ್ಲುಲ್ಲಿಗೋ–ಚೆನ್ನವರೆಗೋ;
ಪಡ ಬೀಳದಿರಲೆಮ್ಮ
ಬೆಳೆ ಸಿರಿಯ ಹೊಲವು
ಹಸಿರುನಗೆ ನಗುತಿರಲಿ
ಯಾವತ್ತು ನೆಲವು
ಉಳುವವಗೆ ಬರುತಿರಲಿ
ಬಹಳಷ್ಟು ಫಲವು
ಹುಲ್ಲುಲ್ಲಿಗೋ–ಚೆನ್ನವರೆಗೋ;
ಬತ್ತದಿರಲೆಂದಿಗೂ
ಬದುಕಿನಲಿ ಒಲವು
ಬದುಕಿನಲಿ ಒಲವಿರಲು
ನೋವಿನಲೆ ನಲಿವು
ಗೆದ್ದವಗೆ ಸೋಲಿಲ್ಲ
ಸೋತವಗೆ ಗೆಲವು;
ಹುಲ್ಲುಲ್ಲಿಗೋ– ಚೆನ್ನವರೆಗೋ;
ಚರಗ ಚೆಲ್ಲುವ ಬಾರೆ–ನೀರೇ;
ಆಗಲೀದಿನ ನಮ್ಮ
ಚೆನ್ನಚರಗದ ಸೂರೆ;
ಹುಲ್ಲುಲ್ಲಿಗೋ– ಚೆನ್ನವರೆಗೋ!

* * *

ಹಾಲ್ದೆನೆ

ಎನಿತೀ ನೋಟದ ಸವಿ :

ನಳನಳಿಸುವ
ರಾಳಿಯ ಬೆಳೆಯ ನಡುವೆ
ಹಾಯಾಗಿ ಹರಿವ ಕಾಲುವೆ–
ಸಲಿಲ ಲೋಕದ ಚೆಲುವೆ!
ಸುಳಿಗಾಳಿಗೆ
ತಲೆದೂಗುವ
ಹಾಲ್ದೆನೆಗಳು
ಸೊಬಗಿನ ನನೆಗಳು!
ಯಾವ ತೆನೆ ತಿನ್ನುವುದು
ಯಾವುದ ಬಿಡುವುದು–
ಎಂದು ಅತ್ತಿಂದ ಇತ್ತ
ಇತ್ತಿಂದ ಅತ್ತ
ಹಾರುತ್ತಿಹ ಹಕ್ಕಿಗಳು
ಬಯಲ ಬಾನ ಚುಕ್ಕೆಗಳು!
ಬಂದ ಬೆಳೆ ಸಿರಿಯ
ಕಣ್ತುಂಬ ನೋಡುತ್ತ
ಹೊಂಪುಳಿ ಹೋಗುತ್ತ
ನಿಂತಿರುವ ನೇಗಿಲಯೋಗಿ–
ತೃಪ್ತಿಯೇ ತಾನಾಗಿ!
ನೋಡುತ್ತ ಪರವಶನಾದ ಕವಿ:
ಎನಿತೀ ನೋಟದ ಸವಿ!

* * *

ನಭದ ನೀಲಿಯ– ರೂಪಕ

ನಭದ ನೀಲಿಯ ಮೇಲೆ ತೇಲುತಿವೆ ಲೀಲೆಯಲಿ
ಬೆಳ್ದಿಂಗಳನು ಮಿಂದ ಬಿಳಿಯ ಮೋಡ!
ಈ ನೋಟ ನೋಡಿಯೂ ಹೇಗೆ ತಡೆಹಿಡಿಯುವುದು

ಹೊರಹೊಮ್ಮ ಬೇಕೆಂದು ತವಕಿಸುವ ಹಾಡ?
ಮೋಡದ ಮೂಗಿಗೆ ಚಿಕ್ಕೆಯ ನತ್ತು
ಲಕಲಕ ಲಕಲಕ ಹೊಳೆಯುತ್ತಿತ್ತು
ಕಿವಿಗೂ ಚಿಕ್ಕೆಯ ಬೆಂಡೋಲೆ
ಹೆರಳಿಗೆ ಚಿಕ್ಕೆಯ ಹೂಮಾಲೆ
ಇದ್ದರೆ ಎನಿತು ಚೆನ್ನಾಗಿತ್ತು
ಎಂದೆನಿಸಿತ್ತು
ಕವಿಗೆ:
'ಫಲಿಸದೆ ಉಳಿವುದೆ ಒಳ್ಳೆಯ ಬಯಕೆ?'
ಎಂಬ ಸರ ಕೇಳಿತ್ತು
ಕಿವಿಗೆ!

* * *

ದಾಸ್ಯ ಪಂಕದಿಂದೆದ್ದ ಪದ್ಮ

ದಾಸ್ಯ ಪಂಕದಿಂದೆದ್ದ ಪದ್ಮ,
ಸ್ವಾತಂತ್ರ್ಯಕ್ಷ್ಮಿಗಾದೆ ಸದ್ಮ!
ಈ ಪದ್ಮದರಳಿಕೆಯೆ
ನೀರವ ನಿಯಂತ್ರಣವಾಯ್ತು
ಆಸೇತು ಹಿಮಾಚಲ
ಬಿಡುಗಡೆಯ ಬಂಡುಣಿಗಳಿಗೆ–
ಅದೆಂಥ ಅಮೃತ ಗಳಿಗೆ!
ಈ ಪುಣ್ಯ ಪದ್ಮದ ಸುಗಂಧ ತರಂಗ ತಾಕಲು
ಪೃಥ್ವಿಯ ಪ್ರಬಲತಮ ಸಾಮ್ರಾಜ್ಯ ತತ್ತರಿಸಿತು!
ಈ ಪಾವನ ಪದ್ಮದ ದಳದಳವೂ
ಭಾರತದ ಬಿಗಿದ ಬೇಡಿಗಳ ಕತ್ತರಿಸಿತು!
ಎಲ್ಲೆಲ್ಲಿಯ ಗಾಳಿಯ ಸುಳಿಗಳೋ ಬಂದು
ತಿರಿದೊಯ್ದುವಿದರ ಪರಿಮಳವನು
ತಿರಿದಷ್ಟು ಪಿರಿದಪ್ಪ ಪರಿಮಳವನು

ಭುವಿಯ ತುಂಬಿ, ಬಯಲ ತುಂಬಿ,
ಬಾನ ತುಂಬಿದ್ದ ಪರಿಮಳವನು!
ಪರಿಮಳವೆ ತಲೆ ನೋವು ತಲೆಯಿಲ್ಲದರಿಗೆ
ಸುಗಂಧವೇ ಶತ್ರು ದುರ್ಗಂಧ ಪ್ರಿಯರಿಗೆ
ಪರಿಮಳಕೆ ಸೆಲೆಯಾದ
ಪದ್ಮವನೆ ಲಯಗೊಳಿಸೆ
ಪರಿಮಳವೆ ಲಯವಪ್ಪುದೆಂಬ
ಭ್ರಮೆ ಇವರಿಗೆ!
ಪದ್ಮವನ್ನೇನೋ ಕಡಿದೊಗೆದ
ಇವರ ಪ್ರತಿನಿಧಿ!
ಬತ್ತಿದಾಗೆ ಪರಿಮಳ ನಿಧಿ?

* * *

ಕಂದರದೀ ಬಟ್ಟಲದಲಿ–ರೂಪಕ

ಕಂದರದೀ ಬಟ್ಟಲದಲಿ
ಬೆಳುದಿಂಗಳ ಹಾಲು
ಕುಡಿಯುತ್ತಿವೆ ಕಣ್ಣುಗಳು
ಬೇರೂರಿವೆ ಕಾಲು!
ಹೂ–ಹಕ್ಕಿ ಹಾಡಿದುದು ಗಂಧ–ಗೀತೆಯನು
ಮಿಡಿದು ಬಯಲ ಬೀಣೆಯನು
ಹಕ್ಕಿ–ಹೂ ಹೊತ್ತಿಸಿತು ವರ್ಣ–ಜ್ಯೋತಿಯನು
ಬೆಳಗಿ ಕುಳಿತ ತಾಣವನು
ಬಯಲ ಮಗ್ಗದೊಳಿದೋ
ಗಾಳಿನೆಯ್ಯುತಲಿಹುದು
ಬಂಗಾರ ಕಿರಣಗಳ ಬಟ್ಟೆಯನ್ನು
ಭುವಿಯಿಂದ ಬಾನಿಗೇ
ಮುಂಜಾವು ಕಟ್ಟುದಿದೆ
ಬಂಗಾರ ಕಿರಣಗಳ ಬಟ್ಟೆಯನ್ನು

ಬತ್ತಿಸ ಬಲ್ಲನೇ ಅದನು ವಿಧಿ?
ಹರಡುತಿದೆ ಖಂಡದಿಂ ಖಂಡಕ್ಕೆ
ಸಕಲ ಬ್ರಹ್ಮಾಂಡಕ್ಕೆ
ಅಬಲರಲಿ, ಅಬಲೆಯರಲಿ
ಕರಿಯರಲಿ ಬಿಳಿಯರಲಿ
ದಲಿತರಲಿ ದಾಸರಲಿ
ಬಡವರಲಿ ದುಡಿವರಲಿ
ಹೊಸ ಬದುಕಿನಾಸೆಯನು ಪುಟಗೊಳಿಸುತ
ಮನುಜಕೃತ ವಿಷಮತೆಯ ಸಟೆಗೊಳಿಸುತ
ಮನುಜ ಗೌರವವನ್ನು ದಿಟಗೊಳಿಸುತ!
ಇದನು ವಾಸಿಸಿದ ನಾಸಿಕವೆ ನಾಸಿಕ,
ಕಾಶಿ ರಾಮೇಶ್ವರ!

* * *

ಇದೇನಿದು? ಇದೆಂತಾದುದು?– ರೂಪಕ

ಇದೇನಿದು? ಇದೆಂತಾದುದು?
ಬಿಳಿ ಮೋಡಗಳ ಮೈಗೆ
ಬಂಗಾರದ ಹರುಕು ಬೊಂತೆ!
ನೆಹರೂ ನೀಡಿದ
ಮಾವು ಸೀಪಿದ
ಬರ್ನಾರ್ಡ್ ಷಾನ ಗಡ್ಡದಂತೆ!
ಗಾಳಿಯ ಗರಡಿಯಲ್ಲಿ
ಗಂಧ ನಡೆಸಿದೆ
ಅಂಗ ಸಾಧನೆಯನ್ನು
ಅನಂಗನಾಗಿ!
ಹೊಂಬಣ್ಣದ
ಕೆಮ್ಮಣ್ಣಿನಲ್ಲಿ
ಹೊರಳಾಡಿ ಹೊರಳಾಡಿ
ಮೈಯೆಲ್ಲ ರಾಡಿ!

ಮೀಹಕಾಗಿ
ಬೆಳ್ದಿಂಗಳ ಬರವ
ಬಯಸಿದುದು ಗಂಧ
ಬಂತು ಬೆಳುದಿಂಗಳು
ಬಂದ ಚಂದ್ರ!

* * *

ಕಣಕಣವು ನವಿಲು!

ಈಸು ಬಿದ್ದನು ಚಂದ್ರ ನಭದ ನೀಲಿಯಲಿ
ಈಸು ಬಿದ್ದಿತು ಜೊನ್ನ ಕೆಳಗೆ ಗಾಳಿಯಲಿ
ಈಸು ದಿನ ಕಾಣದೀ ಲಲಿತ ಕೇಳಿಯಲಿ
ಬಲು ಚೆಂದ ಶಶಿ ಜ್ಯೋತ್ಸ್ನೆ ನವ್ಯ ಲೀಲೆಯಲಿ!
ತಲೆದೂಗುತಿವೆ ಕಂಡು ತರುಲತೆಗಳು
ಉಲ್ಲಸಿತ ಗೂಡಿನಲಿ ಖಗ ತತಿಗಳು
ಕೆಳಗೆ ನೆಲ ನೆರಳುಗಳು ಸತಿಪತಿಗಳು
ಈಗ ಬೇಕೇ ರತಿಗೆ ಸಮ್ಮತಿಗಳು?
ವಿರಹಿಯೊಲು ಅಲೆಯುತಿವೆ ಪರಿಮಳಗಳು
ತಂಪನ್ನು ತಡವುತಿವೆ ತಳಮಳಗಳು
ತರಹರವ ತೋರುತಿವೆ ತಿಳಿಗೊಳಗಳು
ಬಾಯ್ ಬಾಯಿ ಬಿಡುತಲಿವೆ ಹೂದಳಗಳು
ಜೊನ್ನದಪ್ಪುಗೆಯಲ್ಲಿ ಪುಲಕಿತವು ಬಯಲು
ಮರ ಮರದಿ ಮರ್ಮರವು ಅಗಲಿಕೆಯ ಹುಯಿಲು
ಹಸುರಲ್ಲವಿದು ತಿರೆಯ ಹೊಂಪುಳಿಯಕುಯಿಲು
ಕುಣಿಯಲೆಲ್ಲಿಹುದೆಡೆಯು, ಕಣಕಣವು ನವಿಲು!
ಕಣಕಣವು ನವಿಲೀಗ ಕಣಕಣತಕೋಹಿಲವು
ಅಣು ಅಣುವು ಗಿಣಿಯೀಗ ಅಣು ಅಣುವು ಬುಲಬುಲವು
ವಿಶ್ವವೇ ಸ್ವರಮೇಳ, ಗ್ರಹತಾರೆ ತಬಲವು
ಇದರೊಡನೆ ದನಿ ಗೂಡಿಸುವುದೆನ್ನ ಹಂಬಲವು!

* * *

ಬಾ ಸುಗ್ಗಿ, ನಾನು ಬಿಟ್ಟು – ರೂಪಕ

ಮಾಗಿ: "ಬಾ ಸುಗ್ಗಿ, ನಾನು ಬಿಟ್ಟು
ಹೋಗುತ್ತಿರುವ ಬೆತ್ತಲೆ ಬನವನ್ನು
ಚಿಗುರಿಸು ನೀನು"

ಸುಗ್ಗಿ: "ನೀನು ತರಗೆಲೆ ಮೆದ್ದು
ತಪ ಮಾಡದೆಯೆಂದೇ
ಬನ ಸಿದ್ಧವಾಗಿದೆ ಚೆಲುವಿನ ಹೆರಿಗೆಗೆ,
ಮಾಗಿ! ನೀನೇ ಉಪಕಾರಿ ವನಕ್ಕೆ"

ವಿಹಾರಿ: "ನಾನಿಲ್ಲಿಗೆ ಈ ಮುನ್ನ ಬಂದಾಗ
ಇಲ್ಲೊಂದು ಮನಮೋಹಕ ಮರವಿತ್ತು
ಈಗದು ಮಾಯವಾಗಿದೆಯಲ್ಲ?"

ಬದಿಯ ಬೀಜ: "ಸ್ವಾಮಿ ಹೊಸ ಮರವಾಗಿ
ಹೊಮ್ಮುವ ಸತ್ವ ನನ್ನೊಳಗಿದೆ;
ಊರಿ ನೀರುಣಿಸುವ ನಿಷ್ಠೆ
ನಿಮ್ಮಲ್ಲಿದೆಯೆ?"

* * *

ಸಿಕ್ಕದೇ ಇವರಿಗೆ ಶಾಂತಿ ಜಲ?

ದೊಡ್ಡ,
–ದೊಡ್ಡ ಬಹುದೊಡ್ಡ ಮರವೊಂದು
ಧೊಪ್ಪನೆ ಬಿದ್ದಿತು!
ಭೂಮಿ ಕಂಪಿಸಿತು,
ಬಿರುಕು ಬಾಯಿ ತೆರೆಯಿತು!
ಮೂರು ಸಾವಿರ ಸರದಾರರನ್ನು
ನುಂಗಿ ನೀರ್ಕುಡಿಯಿತು!
ಮೂರು ಸಾವಿರ ವಿಧವೆಯರ
ಕಣ್ಣೀರ ಧಾರೆ
ಸುರಿದೂ, ಸುರಿದೂ, ಸುರಿದೂ

ಲಾವಾರಸವಾಗಿ
ಹರಿದೂ, ಹಿರಿದೂ, ಹರಿದೂ
ಆಸ್ಫೋಟಿಸಿದೆ
ಪಂಜಾಬದಲ್ಲಿ
ಜ್ವಾಲಾಮುಖಿಯಾಗಿ!
ಸಾವಿರ ಸಾವಿರ ಕೋವಿಗಳು
ಗುಂಡಿನ ಮಳೆ ಸುರಿಸುತ್ತಿವೆ
ಅದನ್ನು ಆರಿಸಲು
ನಿವಾರಿಸಲು!
ಬೆಂಕಿಗೆದುರಾಗಿ ಬೆಂಕಿ
ಇನ್ನಷ್ಟು ಬೆಂಕಿ
ಧಗಧಗಿಸುವ ಬೆಂಕಿ!
ಸಿಕ್ಕದೇ ಇವರಿಗೆ ಶಾಂತಿ ಜಲ?
ಮಾನವೀಯ ಪರಿಹಾರ ಜಲ?
ಕ್ಷಮಾ ಜಲ, ದಯಾ ಜಲ'
ಬಾಂಧವ್ಯ ಜಲ?

* * *

ಮನೆಯ ಮೋರಿಯಲ್ಲಿರುವ – ರೂಪಕ

ತಂದೆ: "ಮನೆಯ ಮೋರಿಯಲ್ಲಿರುವ ಹೊಲಸು
ಅಲ್ಲಿಯೇ ಇರಲಿ ಬಿಡು. ಅದನ್ನು ತಂದು
ಅಂಗಳಕ್ಕೇಕೆ ಎಸೆಯುವಿ?"
ಮಗ: "ಹೊಲಸನ್ನು ಮುಚ್ಚಿಟ್ಟು ಏನು ಫಲ?
ಅದನ್ನು ಬಹಿರಂಗಗೊಳಿಸಲು
ಅಂಗಳಕ್ಕೆಸೆವುದೇ ಲೇಸು."
ತಾಯಿ: "ಮೋರಿಯಲ್ಲಿ ಉಳಿಸುವುದೂ ಬೇಡ,
ಅಂಗಳಕ್ಕೆ ಎಸೆಯುವುದೂ ಬೇಡ,
ಬೂದಿ ಬೆರೆಸಿ ತಿಪ್ಪೆಗೆ ಹಾಕು ಮಗು–

ಒಳ್ಳೆಯ ಗೊಬ್ಬರವಾಗಲಿ!"
ನಕ್ಷತ್ರಗಾನಕ್ಕೆ ಪಕ್ಕವಾದ್ಯಗಳುಂಟೆ?
ಮೇಘ ಚಿತ್ರಕೆ ಉಂಟೆ ಬಣ್ಣ ಬಳಿವವರು?
ಭೃಂಗಗಳಿಗೂ ಉಂಟೆ ಸಂಗೀತ ಶಾಲೆಗಳು?
ದೇವ ಶಿಲ್ಪಕು ಉಂಟೆ ಜಾಣ ಉಳಿಯವರು?

* * *

ಹಳ್ಳೀಯ ಹಾಡೆಂದು ಹಾಸ್ಯ ಮಾಡಲು ಬೇಡಿ

ಹಳ್ಳೀಯ ಹಾಡೆಂದು ಹಾಸ್ಯ ಮಾಡಲುಬೇಡಿ
ಕಳ್ಳೀನ ಬಳ್ಳೀಯ ಕುಡಿಗೋಳು।
ಕಳ್ಳೀನ ಬಳ್ಳೀಯ ಕುಡಿಗೋಳು –ಬಾಳಿನ
ಬಿಲ್ಲು ಬಿಟ್ಟಂಥ ಕಣೆಗೋಳ॥
ಹೊತ್ತಗೆಯೋದಿಲ್ಲ, ಶಾಸ್ತ್ರವ ಕೇಳಿಲ್ಲ
ಹತ್ತಿಲ್ಲ ಸಾಲಿಯ ಮೆಟ್ಟಲುಗಳ।
ಹತ್ತಿಲ್ಲ ಸಾಲಿಯ ಮೆಟ್ಟಲು–ಅನುಭವ
ಒತ್ತಿ ಬಂದಾಗ ಉಸಿರಿದೆವ॥
ಪದವಿಟ್ಟು ಅಳಿಕಿಸಿ ಮಿದುಳನ್ನು ಬಳಲಿಸಿ
ಬೆದಕ್ಯಾಡಿ ಪದಗಳ ಬರೆದಿಲ್ಲ।
ಬೆದಕ್ಯಾಡಿ ಪದಗಳ ಬರೆದಿಲ್ಲ ಇವನಮ್ಮ॥
ಮದುವೇನ ಮುಂಜ್ಯೇನ ಧಗದೇನ ಧಗೆಯೇನ।
ಬದುಕಿನ ಸಾಲ್ಯಾಗ ಕಲಿತೇವ॥
ಹದಿಹರೆ ಮುಪ್ಪೇನ ಸಾವೇನ?
ಹದಿ ಹರೆ ಮುಪ್ಪೇನ ಸಾವೇನ–ಎದೆ ಹೊಲ
ಬೆದೆಯಾಗೆ ಹಾಡುಗಳ ಬಿತ್ತಿದೆವ॥
ಹೆಸರಾಗ ಬೇಕೆಂಬ ಹಸಿವೆಯೆ ನಮಗಿಲ್ಲ
ಹೆಸರು ಸಹ ಹೇಳಿಲ್ಲ ಹಾಡಿದವರು।
ಹೆಸರು ಸಹ ಹೇಳಿಲ್ಲ ಹಾಡಿದವರು– ಕೇಳಿ
ರಸಿಕರು ಹಿಗ್ಗಿದರೆ ಸಾಕೆಮಗೆ॥
ನೂರೆಂಟು ವಾದ್ಯ ಸಾವಿರ ರೂಪಾಯಿ

ಭಾರಿ ಮಂಟಪಗಳು ಬೇಕಿಲ್ಲ।
ಭಾರಿ ಮಂಟಪಗಳು ಬೇಕಿಲ್ಲ–ನೀವೆಲ್ಲಿ
ಸೇರುವಿರೊ ಅದೆ ಸಭೆ ನಮಗೆಲ್ಲ॥
ಕರೆದೊಮ್ಮೆ ಕೇಳಿರಿ ನಮ್ಮ ಕರುಳಿನ ಹಾಡ
ಕರುನಾಡ ಹಳ್ಳಿಗರ ಹಾಡುಗಳ।
ಕರುನಾಡ ಹಳ್ಳಿಗರ ಹಾಡುಗಳ ಕೇಳಿದರೆ
ಮರೆವಿರಿ ಸಿನಿಮಾದ ಸೆಳೆತಗಳ॥

* * *

ಸಾಗರದ ಸಿಂಪುಗಳೆಂದುವು – ರೂಪಕ

ಸಾಗರದ ಸಿಂಪುಗಳೆಂದುವು; "ಸಾಗರವಿರುವುದು
ನಮ್ಮ ಉದರಗಳಲ್ಲಿ ಮುತ್ತುಗಳನ್ನು ಮೂಡಿಸಲು."
ತರಂಗಗಳೆಂದುವು: "ಶರಧಿಯಿರುವುದು ನಮ್ಮ
ನೃತ್ಯಕ್ಕೆ ರಂಗವಾಗಲು",
ಹಡಗಗಳೆಂದುವು: "ಸಮುದ್ರವಿರುವುದು ನಮಗೆ
ಜಲಪಥವಾಗಲು."
ಬಡವನೆಂದಿತು: "ಕಡಲಿರುವುದು ನನ್ನ
ಒಡಲಿಗೆ ಆಹಾರವಾಗಲು,"
ಜಲಚರ ಪ್ರಾಣಿಗಳೆಂದುವು: "ಜಲಧಿಯಿರುವುದು
ನಮಗೆ ಆಹಾರ ಒದಗಿಸಲು."
ವನಧಿಯೆಂದಿತು: "ನಾನಿರುವುದು
ಮೋಡಗಳಿಗೆ ಉಗಿಯಾಗಲು."
ಮನೆಯ ನಾಲ್ಕು ಗೋಡೆಗಳ ನಡುವೆಯೇ
ಏನೆಲ್ಲವನ್ನೂ ಪಡೆಯಬೇಕು–
ಬೇರೆ ಹಂಬಲ ಬಿಡಬೇಕು.

* * *

ಆಜಿಯನ್ ಲಾಯ

ಅವರ ತಪ್ಪು ಇವರು ಎತ್ತಿ ತೋರಿಸುತ್ತ
ಇವರ ತಪ್ಪು ಅವರು ಎತ್ತಿ ತೋರಿಸುತ್ತ

ಇಬ್ಬರೂ ಒಂದೇ ತಪ್ಪು ಮಾಡಿದಾಗ
ಇಬ್ಬರೂ ತೆಪ್ಪಗಿರುತ್ತ
ತಪ್ಪಿನಿಂದಲೇ
ತಪ್ಪನ್ನು ಸಮರ್ಥಿಸಿಕೊಳ್ಳುತ್ತ
ಎಲ್ಲಿಗೊಯ್ಯುವರೋ ದೇಶವಿದನು
ನಮ್ಮ ನಾಯಕರು
ಸ್ವಾರ್ಥ ಕಾಯಕರು!
ಇವರ ತಪ್ಪುಗಳ ತಪ್ಪಲೆಯಲ್ಲಿ
ಇತ್ತ ಕತಕತಕತ ಕುದಿಯುತ್ತಿವೆ
ಬಾಯಿ ಇಲ್ಲದ ಬಡಪಾಯಿಗಳು
ಅತ್ತ ಗರಿ ಬಿಚ್ಚುತ್ತಿವೆ
ಬಂಡವಳವಿಲ್ಲದ ಬಡಾಯಿಗಳು
ಹಾರ ತುರಾಯಿಗಳು
ಅನುನಾಯಿಗಳು!
ಸುಳ್ಳಿನ ಮೇಲೆ ಸುಳ್ಳು
ಮೋಸದ ಮೇಲೆ ಮೋಸ
ಲಂಚದ ಮೇಲೆ ಲಂಚ
ಅಸೀಮ ಭ್ರಷ್ಟಾಚಾರ ಪ್ರಪಂಚ!
ಯುವಕರಿಗಿರಲಿ
ಬಾಲಕರಿಗೂ ಹೇಸಿಗೆಯೆನಿಸಿದೆ
ಈ ಮುಂದಾಳುಗಳ
ಮುಂದಾಳುಗಳ
ತಿಂದಾಳುಗಳ
ಹೊಲಸು ಕೆಲಸಗಳಿಂದ–
ಸಾರ್ವಜನಿಕ ಅನಾಚಾರ

* * *

ನೆಲದ ಮಣೆಯ ಮೇಲೆ – ರೂಪಕ

ನೆಲದ ಮಣೆಯ ಮೇಲೆ
ಹುಲ್ಲಿನ ಕಣಕವನ್ನು
ಗಾಳಿ ಲಟ್ಟಿಸುತ್ತಿದೆ.

ಏನಿಲ್ಲದಿದ್ದರೂ
ಪ್ರೀತಿಯೊಂದಿರಲಿ
ಏನನೇ ಗೈದರೂ
ನೀತಿಯೊಂದಿರಲಿ
ಏನನ್ನೆ ಬರೆದರೂ
ರೀತಿಯೊಂದಿರಲಿ
ಎಂಥ ಕಾಳವೆ ಇರಲಿ
ಜ್ಯೋತಿಯೊಂದಿರಲಿ
ಬೌದ್ಧಿಕ ವ್ಯಭಿಚಾರ
ಹಸಿ ಬಿಸಿ ವಿಚಾರ
ಹುಸಿ ಪ್ರಚಾರ
ದುರ್ವಿಕಾರಗಳಿಂದ!
ಈ ಆಜಿಯನ್ ಲಾಯಕ್ಕೆ
ಪ್ರತಿಭಟನೆಯ ಮಹಾನದಿ ಹೊಗಿಸಿ
ಶುಚಿಗೊಳಿಸಬೇಕು
ಸಿಡಿದೆದ್ದು ಜನಶಕ್ತಿ
ಇದರಲ್ಲಿದೆ ಅದರ ಮುಕ್ತಿ!

* * *

ಗುಲಗಂಜಿ ಸಂಜೆಯಿದು – ರೂಪಕ

ಗುಲಗಂಜಿ ಸಂಜೆಯಿದು
ಗುಂಜಾಲ ಮಾಗಿದೆಯೆ
ಕುಡಿದು ಕೆಂಪಡರಿರುವ ಮೋಡಗಳಿಗೆ?
ಇಲ್ಲದಿರೆ ಇದುವರೆಗೆ
ಇಲ್ಲದಿಹ ಅನುಬೇಕೆ
ಬರಬೇಕು ನೋಡುತಲೆ ನನಗೆ ಈ ಗಳಿಗೆ?

–

ಬತ್ತಿಸ ಬಲ್ಲನೇ ಅದನು ವಿಧಿ?
ದಿಙ್ಮೂಗ ಫಣಿಯ ಮಣಿಯಂತೆ ಮೆರೆದ
ಮುಳುಗಲಿಹ ಸಾಂಧ್ಯಸೂರ್ಯ

ರತ್ನ ಚೋರನಿಗೆ ರಕ್ಷೆಯಾಗಿ ತಮ
ಹರಡುತಿದೆ! ಚೌರ್ಯ ಅನಿವಾರ್ಯ!

–

ಕಾನನದ ಆನನಕೆ
ಮುತ್ತಿಟ್ಟ ಮೋಡ
ಕಂದರದಿ ಕರಗಿದುದು
ಹಾಂಡಿ ಹಂಸೆಯ ಹಾಡ

* * *

ಇಲ್ಲೆ ದುಡಿ, ಇಲ್ಲೆ ಮಡಿ!

ಈ ನಾಡಿನೊಳು ನೀನು ನೆಮ್ಮದಿಯ ಪಡೆಯದಿರೆ
ಬೇರಾವ ನಾಡಿನಲು ಪಡೆಯಲಾರೆ
ಈ ನುಡಿಯ ಬಲದಿಂದ ಮೇಲ್ಮೆಯನು ಪಡೆಯದಿರೆ
ಬೇರಾವ ನುಡಿಯೊಳೂ ಪಡೆಯಲಾರೆ
ತಾಯ್ನಾಡ ಕಡೆಗಣಿಸಿ ತಾಯ್ನುಡಿಯ ಕಡೆಗಣಿಸಿ
ಶ್ರೇಯ ಪ್ರೇಯಗಳನ್ನು ಪಡೆದವರು ಉಂಟೆ?
ಕರೆಯದತಿಥಿಯ ತೆರದಿ ಹೊರನಾಡ ಸೇರದಿರು
ನೆಚ್ಚಿಗೆಯೆ ಇಲ್ಲದಿಹ ನಂಟೊಂದು ನಂಟೆ?
ಇಲ್ಲೆ ದುಡಿ, ಇಲ್ಲೆ ಮಡಿ, ಇಲ್ಲೆ ನೀನಾಗು ಹುಡಿ–
ಬೇಡಿ ಹೆರವರ ಆಗಬೇಡ ಹೇಡಿ!
ಅಡಿಗಡಿಗೆ ನಿಧಿಯಿಹುದು ಮಿಡಿದಲ್ಲಿ ಸುಧೆಯಿಹುದು
ಪಡೆ ಸಿರಿಯ ಸೂರೆಯನು ಕಾಯಕವ ಮಾಡಿ!

* * *

ಕವಿಯೆ, ನಿನ್ನ ಹಾಡಿಗೆ – ರೂಪಕ

ಕೋಗಿಲೆ: "ಕವಿಯೆ, ನಿನ್ನ ಹಾಡಿಗೆ
ನನ್ನ ಕಂಠಶ್ರೀ ಕೊಡಲೆ?"

ಕವಿ: "ಬೇಡ ಕೋಗಿಲೆ, ನನಗೆ ಬೇಡ ಏಕಸ್ವರ,
ನನಗೆ ಬೇಕು ವಿವಿಧ ಸ್ವರ."

ಹುಣ್ಣಿಮೆ– ಅಮವಾಸ್ಯೆಗೆ: "ನಿನ್ನ ಕರಿ ಮೋರೆ
ನನಗೆ ಅಸಹ್ಯ ಅಮವಾಸ್ಯೆಯೆ!"
ಅಮವಾಸ್ಯೆ–೧ "ನಿನ್ನ ಬೆಳದಿಂಗಳ ಬೋಳು ಸೀರೆ
ನನಗೆ ಅಸಹ್ಯ, ಹುಣ್ಣಿವೆ! ನನಗಿದೆ
ಲಕ್ಷ ನಕ್ಷತ್ರ ಖಚಿತ ಸುಂದರಾಂಬರ!"

* * *

ಕೇಳಿಕೋ ನೀನೆ ನಿನ್ನನ್ನೆ!

ಗಂಗಾ ತರಂಗಗಳ
ಸಂಗೀತವಿದೆ ಕಿವಿಗೆ
ಹಿಮಗಿರಿ ಬೃಹದ್ದೃಶ್ಯ
ಕಣ್ಣುಗಳಿಗೆ
ಕರುನಾಡ ಚಂದನದ
ನರುಗಂಪು ನಾಸಿಕಕೆ
ಜಲಧಿ ಸಂಗಮ ಸಲಿಲ
ಪ್ರೋಕ್ಷಣವು ಪದಕೆ
ಮಲಯ ಮಾರುತದ ಮಧುರ
ಸೋಂಕು ಸರ್ವಾಂಗಕ್ಕೆ
ನೂರು ಶತಮಾನಗಳ
ಸತ್ವ ಮನಕೆ
ಏನುಂಟು ಏನಿಲ್ಲ
ಭಾರತದಿ ಬಂಧು?
ಪಡೆಯದಿಹುದೇನಿಲ್ಲಿ
ನೀ ಮೂಡಿ ಬಂದು?
ಎಲ್ಲ ಇದ್ದೂ ಇಲ್ಲಿ
ನಿನಗವಾದರೆ ಸೊನ್ನೆ
ಯಾಕೆಂದು ಕೇಳಿಕೋ
ನೀನೆ ನಿನ್ನನ್ನೆ!

* * *

ಅಲ್ಲೊಂದು ಇಲ್ಲೊಂದು – ರೂಪಕ

ಅಲ್ಲೊಂದು ಇಲ್ಲೊಂದು ಪರಿಮಳದ ಅಲೆಗಾಗಿ
ಉದ್ದಕೂ ದುರ್ಗಂಧ ವೀಚಿಗಳ ಸಹಿಸು
ಅಲ್ಲೊಮ್ಮೆ ಇಲ್ಲೊಮ್ಮೆ ಮೆಲ್ನಗೆಯ ಸೊಗಕಾಗಿ
ಎಲ್ಲೆಲ್ಲು ಹೊಟ್ಟೆಯುರಿಯಲ್ಲಿ ದಹಿಸು
ನೂರು ಸಲ ಕರಿಕನ್ನ ತಿಂದಾಗ ದೊರೆಯುವುದು
ಒಂದೆ ಸವಿ ಸುರುಕಿಲ್ಲ! ಅನಿತೆ ಸಾಕು!
ಹೆಚ್ಚು ದೊರೆಯಿತೊ, ಹಂಚಿಕೊಳ್ಳು ಉಳಿದವರೊಡನೆ
ಎಲ್ಲ ನನಗೆಂಬುದಕೆ ಕಡಿವಾಣ ಹಾಕು
ಒಂದೆ ಜನ್ಮ ಸಾಲದೆನ್ನ
ಜನ್ಮ ಭೂಮಿ ನೋಡಲು
ಅದರ ಮಹಿಮೆ ಹಿರಿಮೆ ಗರಿಮೆ
ಘನತೆಗಳನು ಹಾಡಲು!

* * *

ನೀವೆ ಬೆಳಗಿರಿ ಇಹವ ಮಹದಿ ನಿಂದು

ನಿಮ್ಮ ಸಿರಿ ಮೊಗವನ್ನು ನೋಡಿದೀ ಕಂಗಳಿಗೆ
ಇನ್ನೇನನೂ ನೋಡುವಾಸೆ ಉಳಿದಿಲ್ಲ
ನಿಮ್ಮ ಸಿರಿ ನುಡಿಗಳನು ಕೇಳಿದೀ ಕಿವಿಗಳಿಗೆ
ಇನ್ನೇನನೂ ಕೇಳುವಾಸೆ ಉಳಿದಿಲ್ಲ
ನಿಮ್ಮ ಪದ ಪದ್ಮಗಳ ಸ್ಪರ್ಶಿಸಿದ ಈ ಕೈಗೆ
ಇನ್ನೇನನೂ ಮುಟ್ಟುವಾಸೆ ಉಳಿದಿಲ್ಲ
ನಿಮ್ಮ ಕರುಣಾಮೃತವ ಸೇವಿಸಿದ ಸಿದ್ಧನಿಗೆ
ಇನ್ನೇನನೂ ಸೇವಿಪಾಸೆ ಉಳಿದಿಲ್ಲ!
ಇನ್ನಾರ ನೋಡಿದರು ನಿಮ್ಮ ಮೈಮೆಯೆ ಮತ್ತೆ
ಮೊದಲಿಗಿಂತಲು ಹೆಚ್ಚಿ ರಾರಾಜಿಸುವುದು
ಇನ್ನೆಲ್ಲಿ ಕಾಣಲಿ ನಿಮ್ಮ ಎತ್ತರ ತಂದೆ
ನನ್ನಿಯೇ ನಿಮ್ಮನ್ನು ಆರಾಧಿಸುವುದು!

ವಿರತಿಯೆದೆಯಲಿ ಕಂಡೆ ನಿಮ್ಮ ಮೂರ್ತಿಯ ತಂದೆ
ಶಾಂತಿ ಬರೆಯುತಲಿಹುದು ನಿಮ್ಮ ಚಿತ್ರ
ಕರುಣೆ ಕಾಣುವ ಕನಸಿನಲ್ಲಿ ನೀವೆ ನಿಂತಿಹಿರಲ್ತೆ?
ತಾಯ್ತಂದೆ ದಿವ್ಯತೆಗೆ ನಿಮ್ಮ ನೇತ್ರ
ಅಡಿಯನಿಟ್ಟೆಡೆ ಹುಟ್ಟಿ ಹೊಗಳ ಬೀರುತಲಿಹುವು
ನೂರಾರು ಸಂಸ್ಥೆಗಳು ಸ್ಮಾರಕಗಳಾಗಿ
ಬಳಿಗೆ ಬಂದವರೆಲ್ಲ ಬೆಳಕಾಗಿ ಮರಳಿದರು
ನಾಸ್ತಿಕರು ತೊಳಗಿದರು ಸದ್ಭಕ್ತರಾಗಿ
ಬೆಳಗು ಭಕ್ತರ ಬಂಧು ಬೆಳಗು ಕರುಣಾ ಸಿಂಧು
ಬೆಳಗು ನಿನ್ನವರೆದೆಯ ಪ್ರೀತಿರಾಕೇಂದು
ಇಹಕೆ ಮಹತಿಯನಿತ್ತ ಮೃತ್ಯುಂಜಯಪ್ಪಗಳೆ
ನೀವೆ ಬೆಳಗಿರಿ ಇಹವ ಮಹದಿ ನಿಂದು

* * *

ಕಡಲ ತಡಿಯ ಮಳಲ ಮೇಲೆ – ರೂಪಕ

ಕಡಲ ತಡಿಯ ಮಳಲ ಮೇಲೆ
ಗೆರೆಗಳನ್ನು ಬರೆದೆ ಹಿಂದೆ
ಅದರೊಳೆ ಆನಂದವೆಂದೆ
ಕಡಲ ನೇಳ ಸುತ್ತಿದರೂ
ತೃಪ್ತಿ ದೊರೆಯದೆಂಬೆ
ಏನಿದೆದೆಯ ದೊಂಬೆ?
ನೆರೆಯೂರಿಗೆ ಹೋಗಿ ಬಂದು
ಹಿಗ್ಗಿ ಧನ್ಯನಾದೆನೆಂದೆ
ಅದರೊಳೆ ಆನಂದವೆಂದೆ
ಭೂಮಿಯೆಲ್ಲ ಸುತ್ತಿದರೂ
ತಣಿವು ದೊರೆಯದೆಂಬೆ
ಏನಿದೆದೆಯ ದೊಂಬೆ?
ಏರಿಸಿ ಆಕಾಶ ಬುಟ್ಟಿ
ಕುಣಿದೆ ಕೆಲೆದೆ ಹಿಂದೆ

ಅದರೊಳೆ ಆನಂದವೆಂದೆ
ಚಂದ್ರನನ್ನು ಸುತ್ತಿದರೂ
ಶಾಂತಿಯಿಲ್ಲನೆಂಬೆ
ಏನಿದೆದೆಯ ದೊಂಬೆ?

* * *

ಮೌನದರ್ಥ

ನೀನೊರೆಯದಿದ್ದರೂ
ನಾನರಿಯೆನೇ ನಿನ್ನ
ದಿನ ದಿನಕೆ ಬೆಳೆಯುತಿಹ
ಮೌನದರ್ಥ?
ಹಗಲಿರುಳು ಸವಿ ನುಡಿಯ
ಸೊಗಸ ಸೂಸಿದ ಕೊರಳು
ಒಮ್ಮೆಗೇ ಸುಮ್ಮನಾಗಿರುವ
ಒಳಗುಟ್ಟ?
ಎನಿತು ನುಡಿದರು ಪ್ರಿಯನೆ
ತಣಿಯದೆನ್ನಯ ರಸನೆ
ನಿನ್ನೊಡನೆ ನಿಶಿದಿನವು
ಎಂದ ಹೆಣ್ಣೆ
ನಾನೆ ನುಡಿಸಿದರು ಸಹ
ಮೌನವನೆ ವಹಿಸುತಿಹೆ
ಬಲ್ಲೆ ನಾ ಕಾರಣವ
ಮನದನ್ನೆ, ರನ್ನೆ!
ಮೊದಲು ಶೋಧನ ಸಹಿತ
ಮಧುರ ಮಂಗಲ ಗೀತ-
ವಾಗಿ ಕೇಳಿಸುತಿತ್ತು ಕಿವಿಗೆ ಸವಿಯೆ
ಈಗ ಗಾನವು ಕೂಡ
ಶೋಕ ಸ್ವರವಾಗಿಯೇ
ಕೇಳುತಿದೆ ಬಾಳಿನಲಿ ಮ್ಲಾನ ಮುಖಿಯೆ!

ನಾಳೆಗಳ ಚಿಂತೆಯೇ
ಬೀಳುಗಳೊ ಸೋಲುಗಳೊ
ಗೋಳಾಟ ನರಳಾಟ ಜಂಜಾಟವೊ

* * *

ಕ್ಲೇಶಗಳು ಕೊರೆ ಕೊರೆದು – ರೂಪಕ

ಕ್ಲೇಶಗಳು ಕೊರೆ ಕೊರೆದು
ಜಿರಡಿಯಾಗಿದೆ ಮನವು!
ಲೇಸಾಯಿತು:
ಇನ್ನಿಲ್ಲಿ ಏನೂ ನಿಲ್ಲದು
ಸುಖವೂ ಸೋರಿ ಹೋಗುವುದು,
ದುಃಖವೂ ಸೋರಿ ಹೋಗುವುದು
ಧನ್ಯವಾದಗಳು ಕ್ಲೇಶಗಳಿಗೆ!
ಬಾಳ ಒಲೆಯ ಮೇಲೆ
ಬಯಕೆಗಳ ಹುರಿವ ಹಂಚು
ಕೆಳಗೆ ಕಾಮದ
ಧಗಧಗಿಸುವ ನಿಗಿನಿಗಿ ಬೆಂಕಿ
ಚಟ್ ಚಟ್ ಸದ್ದು
ಚಟ್ ಪಟ್ ಸಿಡಿಕೆ
ಬಯಕೆಗಳು ಹುರಿದ ಅರಳಾಗಿವೆ!
ಎಷ್ಟು ರುಚಿಯಾಗಿವೆ!
ಭಗ್ನ ಮನದಾಸೆಗಳ
ಅಗ್ನಿವೀಣೆಯ ಸ್ವರವೊ
ಮನದ ಮಾಯದ ಗಾಯಗಳ ಕಾಟವೊ
ಉದ್ವಿಗ್ನಗೊಳಿಸಿಹವೆ
ನಿನ್ನ ಕೋಮಲ ಮನವ
ಉಸರೆನ್ನ ಕಿವಿಯೊಳಗೆ
ನುಂಗಿ ಕೊಂಡಿರದೆ
ನಿನ್ನ ಬನ್ನಗಳೆಲ್ಲ

ನನ್ನ ಬನ್ನವ ಕೂಡಿ
ಹರಿದು ಹೋಗಲಿ ಆಚೆ
ಮಡುಗಟ್ಟಿ ನಿಲದೆ
ಬಗೆಯ ಹಗುರಾಗಿಸಲು
ದುಗುಡಗಳ ಹಂಚಿಕೊ
ನಗೆ ಮತ್ತೆ ಮೂಡೀತು
ನಿನ್ನ ಮೊಗದಲ್ಲಿ
ದುಕ್ಕಗಳ ಬೆನ್ನೇರಿ
ಹಿಗ್ಗು ಬಂದೀತಿಲ್ಲಿ
ಕುಗ್ಗು ಬಂದಂತೆಯೇ
ಸೊಗದ ಹೆಗಲಲ್ಲಿ

* * *

ಹಸಿರೆಲೆಗಳೆ – ರೂಪಕ

ವಿಲಾಸಿ: ‘ ‘ಹಸಿರೆಲೆಗಳೆ,
ನಿಮ್ಮ ಮಧ್ಯದಲ್ಲಿ
ಈ ಹಾಳು ಹಣ್ಣೆಲೆಯನ್ನೇಕೆ
ಉಳಿಸಿಕೊಂಡಿರುವಿರಿ?
ಬಿಸುಡಿ ಬಿಡಿ
ಈ ಅಂದಗೆಟ್ಟ ಹಣ್ಣೆಲೆಯನ್ನು!’’

ಹಸಿರೆಲೆ: ‘‘ಹಣ್ಣಾದ ಹಸುವನ್ನು
ಕಟುಕರಿಗೆ ಮಾರಲು
ಹಣ್ಣಾದ ತಂದೆ ತಾಯಿಗಳನ್ನು
ಹೊರದೂಡಲು
ನಾವೇನೂ ಮನುಷ್ಯರಲ್ಲ!
ಇರುವಷ್ಟು ದಿನ
ಹಾಯಾಗಿ ಇರಲಿ ನಮ್ಮೊಡನೆ
ನಮ್ಮ ಹಿರಿಯ ಈ ಹಣ್ಣೆಲೆ!’’

* * *

ಇದು ಬೆಂಗಳೂರು !

ಹೌದು,
ಇದು ಬೆಂಗಳೂರು!
ಇಲ್ಲಿ
ಗಿರಣಿಗಳ, ವಾಹನಗಳ
ಹೊಗೆಯ ಹೊಟ್ಟೆಯಲ್ಲಿಯೇ
ಹಾದಿ ಹುಡುಕಿಕೊಂಡು
ನುಸುಳಿ ಬರುತ್ತವೆ ಒಮ್ಮೊಮ್ಮೆ
ಸಂಪಿಗೆಯ ಕಂಪಿನಲೆಗಳು
ಕಂಪಿಲ್ಲದ ಬಣ್ಣದ ಹೂಗಳೇ ಬಹಳ!
ಅಪರೂಪ ಕಂಪಿನಲೆಗಳು!
ಲೋಭದ, ಲಾಭ ಬಡಿಕತನದ
ಕುಟಿಲ ತಂತ್ರಗಳ
ಕಾಳ ಸಂತೆಗಳ
ಕಪಟ ಕಾರಸ್ಥಾನಗಳ
ಉಸಿರುಗಟ್ಟಿಸುವ
ಪರಿಸರದಲ್ಲಿಯೂ
ಅಲ್ಲಲ್ಲಿ ಸಂಗೀತ-ನೃತ್ಯಕಲೆಗಳು
ಸಮೂಹ ಮಾಧ್ಯಮಗಳ
ಸರಕಾರ, ಉದ್ಯಮಗಳ
ಹುಸಿ ಪ್ರಚಾರದಲ್ಲಿಯೂ
ಅಪ್ಪಿ ತಪ್ಪಿ ನಿಜದ ಅಲೆಗಳು
ತಮಿಳು, ತೆಲಗು,
ಸಿಂಧಿ, ಹಿಂದಿ,
ಪಂಜಾಬಿ, ಗಿಂಜಾಬಿಗಳ
ಮಾತುಗಳ ಮಧ್ಯದಲ್ಲಿಯೂ
ಕ್ವಚಿತ್ತಾಗಿ ಕನ್ನಡದ
ಕ್ಷೀಣ ನಲ್ಲುಲಿಗಳು!

* * *

ಹಾರೈಕೆ ಮಿಡಿಗಾಯಿ – ರೂಪಕ

ಹಾರೈಕೆ ಮಿಡಿಗಾಯಿ, ಪೂರೈಕೆ ತನಿವಣ್ಣು,
ನಡುವೆ ಗಾಳಿಯ, ಮಳೆಯ, ಕಲ್ಲುಗಳ ಕಾಟ!
ನಿನ್ನೆಗಳ ಬನ್ನಗಳು, ನಾಳೆಗಳ ಕನಸುಗಳು
ಮಧ್ಯದಲಿ ನಗೆ-ಹೊಗೆಯ ಕಣ್ಣಲಿ ಮುಚ್ಚಾಟ
ಕೂರ್ಮೆಗಳ ಹೋಳಿಯಲಿ ಕಾಮನೆಯ ತಿರುಬೊಬ್ಬೆ,
ನಂಬಿಕೆಯ ಬೂದಿಯಲಿ ಕೃತಕತೆಯ ಕತ್ತೆ!
ಬಿದ್ದುದೆಷ್ಟೋ ಬಾರಿ, ಎದ್ದುದಷ್ಟೇ ಸಾರಿ
ಆದರೂ ಗುರಿಯತ್ತ ಮುಂದುವರೆ ಮತ್ತೆ!
ಹೂಡಿಕೊಂಡೆ ನನ್ನನಾನೆ
ಹಾರೈಕೆಯ ಬಂಡಿಗೆ
ಏಕೆ ಹಾಯ್ದುಕೊಳಲಿ ತಲೆಯ
ಪೂರೈಕೆಯ ಬಂಡೆಗೆ?

* * *

ಔತಣ

ಗುಪ್ತ ಚಿತ್ರಕನ ಕಾಣದ ಕುಂಚದ
ವರ್ಣಚಿತ್ರಗಳ ನೋಡಿದಿರಾ?
ಚೈತ್ರ ಪಲ್ಲವದ, ಚೈತ್ರ ಪುಷ್ಪಗಳ
ವಿವಿಧ ವಿಚಿತ್ರವ ನೋಡಿದಿರಾ?
ಯಾವ ಕುಜ್ಜೆಯ ಗಂಧದ ಬಟ್ಟಲು
ಉರುಳಿ ಬಿದ್ದಿತೋ ಉಪವನದಿ
ಗಂಧವಿಲ್ಲಿ, ಒಹೊ, ಗಂಧವಲ್ಲಿ, ಇದೊ
ಗಂಧ ಹೊಮ್ಮುತಿದೆ ಕಣ ಕಣದಿ!
ಮತ್ತೆ ಬಸಿರೆ ಈ ಪ್ರಕೃತಿ ಸುಂದರಿಯು
ಬಯಕೆ ಕಾಡುತಿವೆ ಇವಳನ್ನು
ದೋರೆ ಹುಣಸಿಯು, ಮಿಡಿ ಮಾಂಗಾಯ್ಗಳು
ಬಂದಿವೆ ತೀರಿಸೆ ಬಯಕೆಯನು!

ನಿಸರ್ಗವಾಡಿದ ಓಕುಳಿ ಕಲೆಗಳು
ಬಗೆ ಬಗೆ ಬಣ್ಣದ ಹೂ ಮೊಗ್ಗೆ
ಉಪವನ ವಿಪಿನಕೆ ಹಳ್ಳಿ ಪಟ್ಟಣಕೆ
ಬಣ್ಣ ಬೆಡಗುಗಳ ಹಿರಿ ಲಗ್ಗೆ!
ಲೇಖನಿಗೌತಣ, ಕುಂಚಕೆ ಔತಣ
ಔತಣ ಉಳಿರುಳಿ ನೂಪುರಕೆ
ಉಗಾದಿ ತಂದಿಹ ಸೊಬಗಿನ ಸೂರೆಯ
ಬಣ್ಣಿಸೆ, ರೂಪಿಸೆ, ಕುಣಿವುದಕೆ

* * *

ಕ್ಷಿತಿಜ ಕಾರಂಜಿಯಲಿ – ರೂಪಕ

ಕ್ಷಿತಿಜ ಕಾರಂಜಿಯಲಿ ಬಂಗಾರ ನೀರು–
ಬಾ ಹೊರಗೆ, ಬಾ ಹೊರಗೆ, ಬಾ ಸೊಬಗ ಹೀರು!
ಎಲ್ಲಿ ಕರಗಿತೊ ಕಣ್ಣು ತಪ್ಪಿಸುತ ಚಿನ್ನ
ಯಾವ ಕೊಪ್ಪರಿಗೆಯಲಿ ಹಾಕಿದರೊ ಹೊನ್ನ
ಸೌದೆಯಿಲ್ಲದ ಬೆಂಕಿ ಮರೆ ಮಾಡಿ ತನ್ನ
ಕಾಯಿಸಿತೆ, ಕರಗಿಸಿತೆ? ಕಂಡವನೆ ಧನ್ಯ!
ಎಷ್ಟು ಹೊತ್ತಿರುವುದೋ ಬಲ್ಲವರು ಯಾರು
ಬಾ ಹೊರಗೆ, ಬಾ ಹೊರಗೆ, ಬಾ ಸೊಬಗ ಹೀರು!
ಮೆತ್ತೆಯ ಮೇಲೆ ಮಲಗಲಾಗದ ಮತಿ
ಮೋಡದ ಮೆತ್ತೆಯ ಹೊದೆದು ಮಲಗಿದೆ
ಕಿಡಿಗೇಡಿ ಗಾಳಿಯ ಕುಚೇಷ್ಟೆಯಿಂದ
ಮೆತ್ತೆ ಹಾರಿ ಹೋಗೆ, ದಿಗಂಬರತೆ
ಮತ್ತೆ ಮತಿಗಿದೆ!

* * *

ಬಂದೇ ಬಿಟ್ಟಿತು ದೀಪಾವಳಿ

ಕೊಳೆಗೇರಿಗಳ ಕಣ್ಣು ತಪ್ಪಿಸಿ
ಕೇರಿ, ತಾಂಡೆ, ಪಾಳ್ಯ, ಹಳ್ಳಿಗಳ ಬೈ–ಪಾಸ್ ಮಾಡಿ,
ಹಸಿದವರ, ಕುಸಿದವರ, ಬೆವರು ಬಸಿದವರ ವಂಚಿಸಿ
ಮಧ್ಯಮ ವರ್ಗಗಳಿಗೆ ತುಣುಕುಗಳ ತೂರಿ,

ಉಳ್ಳವರಿಗೆ ಎಲ್ಲ, ಇಲ್ಲದವರಿಗೆ ಏನೂ ಇಲ್ಲ–
ಎಂಬಂತೆ ವರ್ತಿಸುತ್ತ, ನರ್ತಿಸುತ್ತ
ಬಂದೇ ಬಿಟ್ಟಿತು ದೀಪಾವಳಿ–
ಬಹು ಮಹಡಿ ಭವನಗಳಿಗೆ,
ಸತ್ತಾಧಾರಿಗಳ ಸದನಗಳಿಗೆ,
ಸುಲಿಗೆಗಾರರ ನಿಕೇತನಗಳಿಗೆ,
ಬಂಡವಾಳವ ಬಿತ್ತಿ
ಬಡತನ ನಿವಾರಣೆಯ ಬೆಳೆ
ಬೆಳೆವ ಭರದಲ್ಲಿರುವ
ಸರಕಾರಗಳ ಅಧಿಕಾರ ಸ್ಥಾನಗಳಿಗೆ!
ದುರ್ಭಿಕ್ಷ ದುರುದುರು ನೋಡುತ್ತಿದ್ದರೂ
ಫಟಾಕಿ ಹಾರಿಸುವುದರಲ್ಲಿ ಪೈಪೋಟಿ
ಹೆಂಡದ ಹಣ, ಲಂಚದ ಹಣ, ಲೂಟಿಯ ಹಣ,
ಕಪ್ಪು ಹಣಗಳ ಪ್ರದರ್ಶನ ಹತಿಯಲ್ಲಿ ಪೈಪೋಟಿ,
ಉಂಡುದಕ್ಕಿಂತ ಹೆಚ್ಚು ಎಸೆಯುವುದರಲ್ಲಿ
ಬಡವರ ತುತ್ತು ಕಸಿಯುವುದರಲ್ಲಿ
ತೆರಿಗೆ ಇಲಾಖೆಗೆ ಹುಸಿಯುವುದರಲ್ಲಿ
ಇಲ್ಲದವರ ನೆತ್ತಿಯ ಮೇಲೆ
ಶೋಷಣೆಯ ಕತ್ತಿ ಮಸೆಯುವದರಲ್ಲಿ ಪೈಪೋಟಿ!

* * *

ನೀನ್ಯಾಕೋ ನಿನ್ನ – ರೂಪಕ

ನೀನ್ಯಾಕೋ ನಿನ್ನ ಹಂಗ್ಯಾಕೋ, ಬಡವ,
ನಿನ್ನ ನಾಮದ ಬಲವೊಂದಿದ್ದರೆ ಸಾಕೋ
ನಿನ್ನ ಪರವಾಗಿಯೇ ನಾವಿಹೆವು ಆಳಲು,
ನಮ್ಮ ಪರವಾಗಿ ನೀ ಮತ ಮಾತ್ರ ಹಾಕೊ!
ಭಗ್ನ ದೇಗುಲಗಳ
ಭಗ್ನ ಮೂರ್ತಿಗಳ
ಭಗ್ನ ಮನೋರಥಗಳ

ಈ ದೇಶದಲ್ಲಿ
ಭಗ್ನ ಮಾನವರ ನೋಡುತ್ತಿಹೆ,
ಭಗ್ನ ಗೀತೆಗಳ ಹಾಡುತ್ತಿಹೆ!
ಇದು ನಗರಗಳ ಬಕಾಸುರ ಹಬ್ಬ!
ಇದರ ಬಗೆಗೂ ಬರೆಯಲೇ ಬೇಕೆ ಕಬ್ಬ?
ಬರೆಯುವುದಾದರೆ ಬೇಗ ಬರೆ!
ಇದೊ,
ಬಂದೇ ಬಿಟ್ಟಿತು ದೀಪಾವಳಿ–
ಪಂಜಾಬಿನ ರಕ್ತದ ಬಟ್ಟೆಗಳನ್ನುಟ್ಟು
ಕಳ್ಳ ಸಾಗಣೆಯ ಚಿನ್ನದ ಕಿರೀಟವನ್ನಿಟ್ಟು,
ಕರಿದು ಸಕ್ಕರೆಯ ಮಿಠಾಯಿ ಹಂಚುತ್ತ
ಗಾಂಧಿ–ಜೆಪಿಯರ ಮೋರೆಗೆ ಹೊಡೆಯುತ್ತ!

* * *

ನನ್ನಲ್ಲಿ ಹಾಲಿದೆ – ರೂಪಕ

ಹಸು: 'ನನ್ನಲ್ಲಿ ಹಾಲಿದೆ,
ಕರೆದು ಕೋ ಕಟುಕ!
ನನ್ನ ನೆತ್ತರನ್ನೇಕೆ ಹರಿಸುವಿ,
ನನ್ನ ಮಾಂಸವನ್ನೇಕೆ ಮಾರುವಿ?'

ಕಟುಕ: 'ನನಗೆ ನಿನ್ನ ಹಾಲೂ ಬೇಕಿಲ್ಲ,
ನೆತ್ತರು ಮಾಂಸಗಳೂ ಬೇಕಿಲ್ಲ–
ನನಗೆ ಬೇಕು ರೊಟ್ಟಿ ಚಟ್ನಿ!
ಆದರೆ ನನ್ನ ಅಂಗಡಿಗೆ ಬರುವವರು
ಹಾಲು ಬೇಡಿ ಬರುವುದಿಲ್ಲ,
ಮಾಂಸ ಬೇಡಿ ಬರುತ್ತಾರೆ!
ನಾನೇನ ಮಾಡಲಿ'?

ಹಸು: 'ಬೇರೆ ಅಂಗಡಿ ತೆರೆ,
ಬೇರೆ ಕಾಯಕ ಮಾಡು!'

* * *

ಚಾ ಚೂ ಚೇ!

ಹ್ರಾಂ ಹ್ರೀಂ ಹ್ರೂಂ
ಧ್ರಾಂ ಧ್ರೀಂ ಧ್ರೂಂ
ಓಂ ನಂ ಯಂ ಶಂ ವಾಂ ಯಂ
ಓಂ ಚಟ ಚಟ
ಪ್ರಚಟ ಕ್ರಚಟ
ಜ ಕಹ ಕಹ
ವಯ ವಚ–
ಈ ಹಾಳು ಮಂತ್ರಗಳಿಗೆ
ಬಿಡಿರಿ ಎಳ್ಳು ನೀರು.
ಹೊಸಕಾಲದ ಹೊಸ ಮಂತ್ರವ
ಜಪಿಸಿರಿ ಹಗಲಿರುಳು!
ಚಾ ಚೂ ಚೇ–
ಎಂಥ ಸೊಗಸಾದ ಮಂತ್ರ!
ಚಾ ಚೂ ಚೇ–
ಎಂಥ ಸೊಗಸಾದ ಮಂತ್ರ!
ಚಾ ಚೂ ಚೇ–
ಎಂಥ ಸಿದ್ಧಿ ಪ್ರದಾಯಕ ಮಂತ್ರ!
ಹುಸಿ ಬೀಳದ ಮಂತ್ರ,
ಅಸಮಾನ ಮಂತ್ರ,
ಯಂತ್ರಯುಗದ ಶಿಶು
ಈ ಮಂತ್ರ–
ಚಾ ಚೂ ಚೇ!
ಈ ಮಂತ್ರದ ಗುಟ್ಟು
ರಟ್ಟು ಮಾಡಿದಿರಿ
ರಾಮಾನುಜರ ತಪ್ಪ
ನೀವೂ ಮಾಡದಿರಿ!
ಎಲ್ಲಿ,

ಕಿವಿ ಹತ್ತಿರ ತನ್ನಿರಿ
ಇನ್ನೂ ಹತ್ತಿರ ತನ್ನಿರಿ

* * *

ಎಂಥ ದೊಡ್ಡ – ರೂಪಕ

ಎಂಥ ದೊಡ್ಡ ವ್ಯಕ್ತಿಯಾದರೇನು,
ಅವನೂ ಮನುಷ್ಯನೆ!
ಆತ ಹೇಳಿದುದೆಲ್ಲ ಸರಿಯೆಂದರೆ
ಅದು ಮತಿಯ ದಿವಾಳಿಯಯ್ಯ!
ಎಂಥವರು ಬರೆದರೇನು,
ಗ್ರಂಥ ಗ್ರಂಥವೇ,
ಅದರಲ್ಲಿದ್ದುದೆಲ್ಲ ಈಶ್ವರ ಪ್ರಣೀತವೆಂದರೆ
ಬುದ್ಧಿಯ ಹೋಳಿಯಯ್ಯ!
ಅನಿಯಂತ್ರಿತ ಅಧಿಕಾರವನ್ನು ಯಾರಿಗಿತ್ತರೂ
ಅದು ಪ್ರಜಾಧಿಕಾರದ ಮೇಲಿನ ದಾಳಿಯಯ್ಯ!
ಎತ್ತರಕ್ಕೇರ ಬಯಸುವವನು
ತಳದಿಂದಲೇ ಪ್ರಾರಂಭಿಸಬೇಕು;
ಸಾವಿರ ಮೈಲುಗಳ ಪ್ರವಾಸವನ್ನೂ
ಮೊದಲ ಹೆಜ್ಜೆಯಿಂದಲೇ ಆರಂಭಿಸಬೇಕು.
ಯಾರಾದರೂ
ಕೇಳಿ ಬಿಟ್ಟಾರು
ಕೇಳಿ ಕೈ ಕೊಟ್ಟಾರು
ಇನ್ನೂ ಹತ್ತಿರಕ್ಕೆ
ನಿಮ್ಮ ಕಿವಿ ತನ್ನಿ
ಹಾಂ,
ಈಗ ಕೇಳಿ
ಹೊಸ ಮಂತ್ರವನ್ನು–
ಹೊಸ ತಂತ್ರವನ್ನು
ಚಾ ಚೂ ಚೇ!
ಇದರ ಅಂತರಾರ್ಥ ಬೇಕೆ?

ಚಾ–ಚಾಕೂ
ಚೂ–ಚೂರಿ
ಚೇ–ಚೇನು!

* * *

ತುಳಿದಷ್ಟು ಬೆಳೆಯಿತಿದೆ – ರೂಪಕ

ತುಳಿದಷ್ಟು ಬೆಳೆಯಿತಿದೆ
ಬಿಡುಗಡೆಯ ಬಯಕೆ
ಬಗ್ಗುವುದೆ ಜನಶಕ್ತಿ
ದರ್ಪಕ್ಕೆ, ಭಯಕೆ?
ತುಳಿವವಗೆ ಉಳಿವಿಲ್ಲ
ಬಿಡಿ ತುಳಿವ ಸೊಲ್ಲ
ಅಳಿಸಿ ಆಳುವಗಲ್ಲ
ಒಲಿಸುವಗೆ ಗೆಲ್ಲ
ಸಂಪದದ ಉತ್ಪತ್ತಿ
ಒಂದು ಕೈಯಿಂದ
ಸಕಲರಿಗೆ ಸರಿ ಹಸುಗೆ
ಇನ್ನೊಂದರಿಂದ
ತಲೆ ತಾಕಿಗಳ ನಡುವೆ
ಕಾಲು ನೆಲದಲ್ಲಿ
ಸಕಲ ಸದ್ಗತಿರತಿಯು
ಹೃದಯ ತಲದಲ್ಲಿ

* * *

ಇಪ್ಪತ್ತೊಂದನೆಯ ಶತಮಾನಕ್ಕೆ*

ಇನ್ನೂ ಹನ್ನೊಂದು ವರ್ಷ
ಹೇಗಾದರೂ ಬದುಕಿ ಬಿಡಿರಿ
ಖಂಡಿತ ಕರೆದೊಯ್ಯುವೆವು ನಿಮ್ಮನ್ನು

---

* ೧೯೮೯ರಲ್ಲಿ ರಚಿತ

ಇಪ್ಪತ್ತೊಂದನೆಯ ಶತಮಾನಕ್ಕೆ
ಸಿರಿ ಸೌಖ್ಯಗಳ ನಿಧಾನಕ್ಕೆ!
ತೆತ್ತೀಸ ಕೋಟಿ ದೇವತೆಗಳಾಣೆ
ನನ್ನಾಣೆ, ನಿಮ್ಮಾಣೆ, ಎಲ್ಲರಾಣೆ–
ತಪ್ಪದೆ ಕರೆದೊಯ್ಯುವೆವು
ಇಪ್ಪತ್ತೊಂದನೆಯ ಶತಮಾನಕ್ಕೆ
ಸಕಲ ಸೌಕರ್ಯಗಳ ಸುಸ್ಥಾನಕ್ಕೆ!
ಆದರೆ,
ಅಷ್ಟರೊಳಗೆ
ಹಸಿವೆಯ ದಳ್ಳುರಿಗೆ ತುತ್ತಾಗಿ
ಅಪಘಾತಗಳಿಗೆ ಆಹುತಿಯಾಗಿ
ಘೋರ ವ್ಯಾದಿಗಳಿಗೆ ಆಹಾರವಾಗಿ
ನೆರೆ, ಬರ, ದಂಗೆ, ದೊಂಬಿಗಳಿಗೆ ಕವಳವಾಗಿ
ಇನ್ನಾವುದೋ ಅಕಸ್ಮಿಕಕ್ಕೆ ಬಲಿಯಾಗಿ
ನೀನೇ ಇಲ್ಲವಾದರೆ
ನಾವು ಜವಾಬ್ದಾರರಲ್ಲ!
ಅಲ್ಲಿಯವರೆಗೆ ಬದುಕುವ ಜವಾಬ್ದಾರಿ ನಿಮ್ಮದು,
ಬದುಕಿ ಉಳಿದರೆ ಇಪ್ಪತ್ತೊಂದನೆಯ ಶತಮಾನಕ್ಕೆ
ಕರೆದೊಯ್ಯುವ ಜವಾಬ್ದಾರಿ ನಮ್ಮದು!
ಎಂಥ ಘನವಾದ ಹೊಣೆ ಹೊತ್ತಿದ್ದೇವೆ
ನಿಮಗಾಗಿ ನಾವು?
ಅಡ್ಡಬರದಿರಲಿ ಸಾವು!

* * *

ಎಲ್ಲರಿಗೆ ಇಲ್ಲದುದು – ರೂಪಕ

ಎಲ್ಲರಿಗೆ ಇಲ್ಲದುದು
ಸಲ್ಲುವುದೆ ಒಬ್ಬನಿಗೆ?
ಎಲ್ಲೆ ಇರಬೇಡವೇ

ಉಳ್ಳವರ ಸುಖಕೆ?
ಎಲ್ಲಿ ಹೋಗಲಿ, ಹಸಿವೆ
ಹಿಂಗುವನಿತಾದರೂ
ಅನ್ನ ಸಿಗ ಬೇಡವೆ
ಸರ್ವಜನಕೆ?
ಜಾತಿ ಕುಲಗಳ ಮೀರಿ
ವರ್ಣ ವಂಶವ ಮೀರಿ
ಮೇಲು ಕೀಳನು ಮೀರಿ
ಭೇದ ವಾದವ ಮೀರಿ
ಅಲ್ಪತನವನು ಮೀರಿ
ರಾಷ್ಟ್ರಕನ ದಾರಿ!
ಏನಾದರೂ ತಿಂದು, ಏನಾದರೂ ಉಟ್ಟು ತೊಟ್ಟು,
ಫುಟ್‌ಪಾಥಿನಲ್ಲಾದರೂ ಇದು ಬಿದ್ದು
ನೆಲವನ್ನು ಹಾಸಿ, ಆಕಾಶವನ್ನು ಹೊದ್ದು
ಹೇಗಾದರೂ ಮಾಡಿ, ಭಿಕ್ಷೆಯನ್ನಾದರೂ ಬೇಡಿ
ಇನ್ನೂ ಹನ್ನೊಂದು ವರ್ಷ ಬದುಕಿ!
ನಾವು ಕಾದಿರುವೆವು ನಿಮಗಾಗಿ
ಹೊಸ ಶತಮಾನದ ಹೊಸತಿಲಲ್ಲಿ!

* * *

ತಟದ ತಟಸ್ಥನಿಗೆ – ರೂಪಕ

ಕಡಲು: ತಟದ ತಟಸ್ಥನಿಗೆ– "ಸುಮ್ಮನೇಕೆ
ನಿಂತಿರುವೆ ಸಖ, ಒಳಗೆ ಇಳಿ, ಈಸು
ನನ್ನಲ್ಲಿ; ಈಸಿ ಜೈಸು!"

ತಟಸ್ಥ: "ನಿನ್ನನ್ನು ಈಸಿ ಜೈಸುವುದೆ?
ಸಾಧ್ಯವಿಲ್ಲ! ಈ ತಟದಲ್ಲಿಯೇ
ತಟಸ್ಥನಾಗಿದ್ದು ಬಿಡುವೆ."

ಕಡಲು: "ಜೋಕೆ, ನನ್ನಲ್ಲಿ ಬಿದ್ದವರು ಒದ್ದಾಡಿ

ಒದ್ದಾಡಿ ಈಸದಿದ್ದರೂ ತೇಲುವುದನ್ನಾದರೂ
ಕಲಿತಾರು! ನೀನೇನಾದರೂ ಅಪ್ಪಿ ತಪ್ಪಿ
ಬಿದ್ದೆಯೋ, ಮುಳುಗುವುದೆ
ಗತಿ ನಿನಗೆ!"
ನೀರಿದ್ದಲ್ಲಿ ಊರು
ಅನ್ನ ಸಿಕ್ಕುವಲ್ಲಿ ಮನೆಮಾರು
ಹಸುರಿದ್ದಲ್ಲಿ ತುರುಕರು

* * *

ಇನ್ನುವರೆಗೂ

ಎಲ್ಲ ಸಂಕಲೆಗಳನು
ಮುರಿದಿಲ್ಲ
ಹರಿದಿಲ್ಲ
ಎಲ್ಲ ಪಾಶಗಳನ್ನು
ಇನ್ನುವರೆಗೂ
ಎಲ್ಲ ಹಾವಿನ ಹಲ್ಲು
ಮುರಿದಿಲ್ಲ
ಕೊರೆದಿಲ್ಲ
ಅಡ್ಡಿ ಗುಡ್ಡದಿ ದಾರಿ
ಇನ್ನುವರೆಗೂ
ಕೀಳಿನರಗಿನ ಮನೆಯ
ತೊರೆದಿಲ್ಲ
ಹುರಿದಿಲ್ಲ
ಎಲ್ಲ ವಿಷಬೀಜಗಳ
ಇನ್ನುವರೆಗೂ
ಎಲ್ಲ ಸುಲಿಗೆಯ ತಲೆಯ
ತರಿದಿಲ್ಲ
ಕರೆದಿಲ್ಲ

ತಕ್ಕ ಹಸುಗೆಯ ಹಸುವ
ಇನ್ನುವರೆಗೂ
ಆದರೂ ಗುರಿಯನ್ನು
ಮರೆದಿಲ್ಲ
ಸರಿದಿಲ್ಲ
ಜನತಂತ್ರ ಪಥದಿಂದ
ಇನ್ನುವರೆಗೂ

* * *

ಆಪತ್ತೆ ಅವಕಾಶ – ರೂಪಕ

ಆಪತ್ತೆ ಅವಕಾಶ
ಗಂಡುಗಲಿಗಳಿಗೆ
ಅವಕಾಶ ವಾಪತ್ತು
ಅಂಜುಗುಳಿಗಳಿಗೆ
ಮಂತ್ರಿಯಾಗುತ್ತಲೇ
ಮರೆಯುವುದು ಹಳ್ಳಿ
ನೆನಪಿನಲ್ಲುಳಿಯುವುವು
ಬೆಂಗ್ಳೂರು ಡಿಳ್ಳಿ!
ಕೈಲಾಗದ ಕೆಲಸ ಹಮ್ಮಿ
ಸುಮ್ಮನೆ ಬಳಲುವುದಕ್ಕಿಂತ
ಕೈಲಾಗುವುದ ಮಾಡುತ್ತ ನಡೆ
ಕೈಲಾಗುವುದನ್ನು
ಮಾಡುತ್ತ ಮಾಡುತ್ತ
ಕೈಲಾಗದಿದ್ದುದನ್ನೂ ಮಾಡುವ ಶಕ್ತಿ ಬಂದೀತು!
ದೀಪವಿದು ಸುಮ್ಮನೆ
ಉರಿದಿಲ್ಲ
ನೆರೆದಿಲ್ಲ
ದೀಪವಾರಿಪ ಶಲಭ
ಇನ್ನುವರೆಗೂ

ಹೋರುವೆವು ಹುರಿಗೊಂಡ
ಕಲಿಯಾಗಿ
ಛಲಿಯಾಗಿ
ಎಲ್ಲರೇಳ್ಗೆಯ ಗುರಿಯ
ಸಾಧಿಸುವವರೆಗೂ
ಅನ್ನ ಅರಿವಿನ ಸಮರ
ಗೆಲ್ಲುವೆವು
ನಿಲ್ಲುವೆವು
ನಡಕಟ್ಟಿ ಭಾರತವು
ಅಜೇಯವಾಗುವವರೆಗೆ

* * *

ತೇಲಾಡತಾವ – ರೂಪಕ

ತೇಲಾಡತಾವ
ಓಲಾಡತಾವ
ಲೋಲಾಡತಾವ ಮೋಡ
ಹೊಯ್ದಾಡತಾವ
ಹಾಯ್ದಾಡತಾವ
ಕಾಯ್ದಾಡತಾವ ಮೋಡ
ಚಕ್ಕಂದ ನೋಡ
ಉಕ್ಕಂದ ನೋಡ
ಸ್ವಚ್ಛಂದ ಚೆಂದ ನೋಡ
ಬರುವಂದ ನೋಡ
ಆನಂದ ಮೋಡ
ಉಗಿಯೆಂದನಾವ ಮೂಢ?
ಸಮುದ್ರ ನದಿಗೆ: "ಮಳೆ ಬಂದಾಗ ತುಂಬಿ,
ಬೇಸಗೆ ಬಂದಾಗ ಬರಿದಾಗುವ ಬಡನದಿಯೆ
ನನ್ನತ್ತ ನೋಡು, ಎಂದಿಗೂ ಬತ್ತದ ನಿತ್ಯನಿಧಿ ನಾನು"
ನದಿ ಸಮುದ್ರಕ್ಕೆ: "ಮಲೆತ ನೀರಿನ ದೊರೆಯೇ,

ನನ್ನತ್ತ ನೋಡು–ವರುಷ ವರುಷವೂ
ಹೊಸ ನೀರು ನನಗೆ, ಮೀಸಲು ನೀರು ನನಗೆ!"

* * *

ಸಾಲದ ಜಾಲ*

ಸಾಲದ ಹಿರಿ ಜಾಲದತ್ತ
ಧಾವಿಸುತಿದೆ ದೇಶ–
ಬಿಗಿಯುತ್ತಿದೆ ಭಾರತವನು
ಋಣದ ಕ್ರೂರ ಪಾಶ!
ಹುಟ್ಟಬೇಕು ಈ ದೇಶದಿ
ಸಾಲದ ಹೊರೆ ಹೊತ್ತೇ
ಹಾಸೆ ಸಾಲ, ಹೊದೆಯೆ ಸಾಲ,
ತಿನಲು ಋಣದ ತುತ್ತೇ!
ಸಾಲ ಕೊಡದ ದೇಶವಿಹುದೆ
ನಮ್ಮ ದೊಡ್ಡ ದೇಶಕೆ?
ತಂದ ಸಾಲ ಕರಗಿ ಹೋಯ್ತು
ಆಳುವರ ವಿಲಾಸಕೆ!
ಬಡ್ಡಿ ಸಲಿಸೆ ದುಡಿಯಬೇಕು
ಭಾರತೀಯರಿನ್ನು!
ತೀರಿಸುವುದು ಸಾಧ್ಯವಹುದೆ
ಮೂಲ ಸಾಲವನ್ನು!
ಋಣವು ಕತ್ತು ಹಿಸುಕುತಿರಲು
ಹೆಣವಾಗುತ್ತಿದೆ ದೇಶ!
ರಣಹದ್ದುಗಳಿಗೆ ಹಬ್ಬ
ಜನಕೆ ಕಷ್ಟ, ಕ್ಲೇಶ!
ಯಾರ ತಲೆಯ ಮೇಲೆ ಕೊನೆಗೆ
ಈ ಸಂಚಿತ ಸಾಲ?

* * *

---

* Debt-trap ೧೯೮೭ರಲ್ಲಿ ಬರೆದುದು

ಈ ಮನೆಯ ಇಂಗು – ರೂಪಕ

ಈ ಮನೆಯ ಇಂಗು ಬಚ್ಚಲವನ್ನು ನೋಡಿ
'ಇಸ್ಸಿ'ಎನ್ನದಿರು ಗೆಳೆಯ
ಒಳಗೆ ಇಣಿಕಿ ನೋಡು–
ಅಡುಗೆ ಮನೆಯಲ್ಲಿ
ಮಗ ಮಗುಸುವ ಬಗೆಬಗೆಯ ಭಕ್ಷ್ಯಗಳು;
ದೇವರ ಮನೆಯಲ್ಲಿ ದೀಪದ ಬೆಳಕು,
ಧೂಪದ ಸುಗಂಧ;
ನಡು ಮನೆಯಲ್ಲಿ ನಂಟಿನ, ನೇಹದ,
ಸ್ನೇಹದ ಸೌರಭ,
ಗೋಡೆ ಗೋಡೆಗೂ ಚಿತ್ತಾರ!
ಸಾಲದೇ ಸುಖವಾಗಿ ಬದುಕಲು ಇಷ್ಟು?
ಕೊನೆಗೆ ನಿನಗೆ ಬೇಕಾಗುವ ನೆಲವಾದರೂ ಎಷ್ಟು?
ನನ್ನ ಕಣ್ಣ ಕನ್ನಡಿಯಲ್ಲಿ
ಮುಖ ನೋಡಿಕೊಂಡ ನಿನಗೆ
ನಿನ್ನ ಚೆಲುವಿಕೆಯ ಬಗ್ಗೆ ಗರ್ವವೆನಿಸಿತೋ
ನನ್ನ ಒಲವಿನ ಬಗ್ಗೆ ಗೌರವವೆನಿಸಿತೋ?
ಒತ್ತೆ ಬೀಳಲಿಹುದೆ ದೇಶ
ಏರಿ ಸಾಲ–ಶೂಲ
ಕತ್ತರಿಸಲು ಮುಂದಾಗಿರಿ
ಋಣದ ಘೋರ ಪಾಶವ
ಕೈಮೀರುವ ಮುನ್ನವೇ
ತವಿಸಿ ಸರ್ವನಾಶವ!

* * *

ಕೆಚ್ಚಲಿನಿಂದ ಕೆನ್ನೀರು – ರೂಪಕ

ಕೆಚ್ಚಲಿನಿಂದ ಕೆನ್ನೀರು ಬರುವವರೆಗೆ
ದಾನ–ಧೇನುವನ್ನು ಹಿಂಡುತ್ತಿಹರು;

ಖೇಡ್ಡಾ ಇಲ್ಲದೆಯೆ ಕುಣಿಗೆ ಬೀಳುವಷ್ಟು
ಕರದ ಕರಿಯನ್ನು ಅತಿಯ ಅಂಕುಶದಿಂದ
ತಿವಿಯುತ್ತಿಹರು!
"ಏ ದುರ್ಗಂಧವೆ, ಇಲ್ಲಿಗೇಕೆ ಬಂದೆ?"
"ನಾನಿದ್ದಲ್ಲಿಯೇ ಇದ್ದೆ, ನನ್ನನ್ನಿಲ್ಲಿಗೆ
ಎಳೆದು ತಂದ ಗಾಳಿಯನ್ನು ಕೇಳು!"
"ಏ ಗಾಳಿ, ದುರ್ಗಂಧವನ್ನೇಕೆ ತಂದೆ ಇಲ್ಲಿಗೆ?"
"ಅದು ನೀವೇ ಹುಟ್ಟು ಹಾಕಿದ ದುರ್ಗಂಧ,
ನಾನು ಇದ್ದುದನ್ನು ಮಾತ್ರ ತಂದಿದ್ದೇನೆ,
ತರಬಲ್ಲೆ– ಇಲ್ಲದುದ ಹುಟ್ಟಿಸಬೇಕು
ನೀವು."

* * *

ಬಿತ್ತು!

ಬಿತ್ತು!
ಇದ್ದಕಿದ್ದಂತೆ ಬೋಳುಬಾನಿನಲ್ಲಿ
ಕಾರ್ಮೋಡ–ಕಾಡು ಮೂಡಿ
ಹನಿಯೆಲೆಗಳು, ಆಲಿ–ಕಾಯಿಗಳು
ಉದುರಿ, ಉದುರಿ, ಉದುರಿ
ಒಣಗಿ ಘಣಿಲಗೊಂಡ ನೆಲ
ತಪ ತಪ ತಪ ತೊಯ್ಯುವಂತೆ
ರಪ ರಪ ರಪ ಮಳೆಯು ಬಿತ್ತು–
ಬಿತ್ತು, ಬಿತ್ತು, ಬಿತ್ತು!
ಬಿಸಿಲ ಚುಂಬನಕೆ ಬಾಯಿ ತೆರೆದ ನೆಲ
ಬಿರುಕು ಬಿಟ್ಟ ಹೊಲ
ನೆನೆ ನೆನೆದು ಕರಗಿ
ಅದ ಹರಗಿ
ಹಾಕಿ ಕೂರಿಗಿ
ಮಿದುಗೊಳಿಸಿ ಹದ ಮಾಡಿ ಹೊಲವ,

ಋತು ನೋಡಿ, ತಿಥಿ ನೋಡಿ,
ಭೂಮಿ ತಾಯಿಗೆ ಮಣಿದು
ಬಾನ ತಂದೆಯ ನೆನೆದು
ಹೊಸ ಹುರುಪಿನಿಂದ ಬಿತ್ತು–
ಬಿತ್ತು, ಬಿತ್ತು, ಬಿತ್ತು!

* * *

ಸೂಳೆಯರ ಆಣೆಗಳ – ರೂಪಕ

ಸೂಳೆಯರ ಆಣೆಗಳ
ಚುನಾವಣೆಯ ಆಶ್ವಾಸನಗಳ
ನಂಬಬಹುದೆ?
ಕನ್ನಡಿಯೊಳಗಣ ಗಂಟ
ಕಳ್ಳರ, ಖದೀಮರ ನಂಟ
ನಂಬಬಹುದೆ?
ಇಷ್ಟೇಕೆ ಸೆಪ್ಪೆಯಾಗಿದೆ ಈ ದಿನ?
ಚುನಾವಣೆ ಸೋತವರ ಮುಸುಡಿನಂತೆ ದೀನ,
ನಿವೃತ್ತ ಅಧಿಕಾರಿಯ ಮುಖದಂತೆ ಮ್ಲಾನ,
ಹಾಲಿವುಳಿದ ಹೆಣ್ಣಿನ ಮೋರೆಯಂತೆ ಕಳಾಹೀನ–
ಜೀವಂತ ಶವಕ್ಕೆ ಸಮಾನ,
ಇಷ್ಟೇಕೆ ಸಪ್ಪೆಯಾಗಿದೆ ಈ ದಿನ?
ಬಿತ್ತು–
ಹುಳುಕು ಕಳೆದು
ಕಾಡಿಗೆ ತೊಳೆದು
ಜರಡಿಯೊಳು ಜಾಳಿಸಿ
ನೀರಿನಲಿ ಜಾಲಿಸಿ
ಸೋದಿಸಿ, ಸಂಕರಗೊಳಿಸಿ,
ಶಕ್ತಿಮಾನ್ ಮಾಡಿ,
ಹೊಲಸನಳಿಸಿ
ಹುಲುಸುಗೊಳಿಸಿ

ಪ್ರಮಾಣೀಕೃತ ಬಿತ್ತನೆಯ
ಪ್ರಾಮಾಣಿಕವಾಗಿ ಬಿತ್ತು–
ಬಿತ್ತು, ಬಿತ್ತು, ಬಿತ್ತು–
ಮಳೆ ಬಿತ್ತು,
ಬಾ ಬಿತ್ತು!

* * *

ನಾನು ನಿನ್ನ ಪಕ್ಕದಲ್ಲಿಯೇ – ರೂಪಕ

ದೀಪ ಪ್ರಣತಿಗೆ: "ನಾನು ನಿನ್ನ ಪಕ್ಕದಲ್ಲಿಯೇ ಇದ್ದೇನೆ,
ಸ್ವಲ್ಪ ಸಾಹಸ ಮಾಡು; ನಿನ್ನ ಬತ್ತಿಯನ್ನು
ನನ್ನ ದೀಪಶಿಖೆಗೆ ಮುಟ್ಟಿಸು; ಹೊತ್ತುವುದು
ಜ್ಯೋತಿ ನಿನ್ನಲ್ಲಿಯೂ!"

ಪ್ರಣತಿ ದೀಪಕ್ಕೆ: "ಒಡಲಲ್ಲಿ ಎಣ್ಣೆಯಿದ್ದೂ, ಬತ್ತಿಯನ್ನು
ಹೊತ್ತೂ, ದೀಪದ ಪಕ್ಕದಲ್ಲಿದ್ದೂ, ದೀಪ
ಹೊತ್ತಿಸಿಕೊಳ್ಳಲಾಗದ ದುರ್ದೈವಿ ನಾನು, ಗೆಳತಿ!
ನಾವೆಷ್ಟು ಸಿದ್ಧತೆ ಮಾಡಿಕೊಂಡರೂ
ಮನುಷ್ಯನ ಕೈ ಮುಟ್ಟದೆ ಸಫಲತೆಯೆಲ್ಲಿ?"
ಹೊತ್ತುಗಳೆಯಲು ಬೇಕು
ಪತ್ತೆದಾರಿ ಕಥನಗಳು
ಚಿತ್ತವರಳಿಸಲು ಬೇಕು
ನಿನ್ನವರ ವಚನಗಳು
ಚಾಣಕ್ಯರೂ ಬೇಕು, ಅಂತೆಯೇ ಬೇಕೆಮಗೆ
ಮಾಣಿಕ್ಯ ವಾಚಕರ್ ಪ್ರಭುದೇವರು!
ಕರ್ಮವೀರರು ಬೇಕು, ದ್ರಷ್ಟಾರರೂ ಬೇಕು,
ಬೇಕು ಭರತರು–ಬಾಹುಬಲಿದೇವರು

* * *

ಇನ್ನೂ ಆಟ ಮುಗಿದಿಲ್ಲ

ಇನ್ನೂ ಆಟ ಮುಗಿದಿಲ್ಲ
ಈಗಲೆ ತೊಳ್ಳಿ ತರವಲ್ಲ
ತರವಲ್ಲ-ಗೆಳತಿ-ಸರಿಯಲ್ಲ!
ಆಟ ಮುಗಿಯುವವರೆಗೆ ಆಡು
ನಾ ಮುಟ್ಟ ಬರುವೆ, ನೀನೋಡು
ಕಣ್ಣು ಮುಚ್ಚಿರುವೆ, ಇದು ನೋಡು,
ಹುಡುಕಿದರೆ ಸಿಕ್ಕುವೊಲು ನೀನಡಗು
ಇನ್ನೂ ಆಟ ಮುಗಿದಿಲ್ಲ
ಗೆಳತಿ ಮುಗಿದಿಲ್ಲ!
ಕಣ್ಣು ಮುಚ್ಚುವ ಆಟ
ಮುಟ್ಟಿ ಓಡುವ ಆಟ
ಅಗಲಿ ಕೂಡುವ ಆಟ
ಕುಂಟುವಾಟ
ನೆರಳು ಬೆಳಕಿನ ಆಟ
ಉಪ್ಪು ಮುಟ್ಟಿಸುವಾಟ
ಹುಲಿಮನೆಯ ಆಟ, ಜಡೆ-
ಕೋಲಿನಾಟ
ಇನ್ನೂ ಹೂಡದ ಪಂದ್ಯಗಳುಂಟು
ಇನ್ನೂ ಆಡದ ಆಟಗಳುಂಟು
ಇಲ್ಲಿ ಆಟಗಳ ಬರವಿಲ್ಲ
ಈಗಲೆ ತೊಳ್ಳಿ ತರವಲ್ಲ
ತರವಲ್ಲ-ಗೆಳತಿ-ಸರಿಯಲ್ಲ!
ಮನೆಯ ಒಳಗಿನ ಆಟ
ಮನೆಯ ಹೊರಗಿನ ಆಟ
ಸೋತು ಗೆಲ್ಲುವ ಆಟ
ಗೆದ್ದು ಸೋಲುವ ಆಟ

* * *

ಯಾರ ಅಪ್ಪಣೆಯೇಕೆ – ರೂಪಕ

ಯಾರ ಅಪ್ಪಣೆಯೇಕೆ ಸಖ, ಸರಿ–
ದೋರಿದಂದದಿ ಬದುಕಲು?
ಯಾರ ಅಂಜಿಕೆಯೇಕೆ ಸ್ನೇಹಿತ
ನೇರ ಮಾರ್ಗದಿ ನಡೆಯಲು?
ಒಳಿತ ಗೈಸುವ ಅರಿವೆ ಗುರಿ, ಸಖ
ಒಲವೆ ದಾರಿಯು ಅಲ್ಲಿಗೆ
ನಿನ್ನ ಕಾಣ್ಕೆಯೆ ನಿನಗೆ ಬುತ್ತಿಯು
ಸಾಗು ಸಿದ್ಧಿಯ ಎಲ್ಲೆಗೆ!
ಏನ ನೋಡಿ ನಲಿಯಲಿ?
ಏನ ನಂಬಿ ನಡೆಯಲಿ?
ಏನ ನೆಚ್ಚಿ ಬಾಳಲಿ?
ಯಾವ ಹಾದಿ ಹಿಡಿಯಲಿ?
ಹೆಜ್ಜೆಗೊಂದು ಸಂಶಯ
ನಿಮಿಷಕೊಂದು ನಂಬಿಕೆ
ಬೇರು ಬಿಡದೆ ಬೆಳೆವ ಆಸೆ
ಗಳಿಗೆಗೊಂದು ಗೇನಿಕೆ!
ಬಿದ್ದು ಏಳುವ ಆಟ
ಮುದ್ದು ಕದಿಯುವ ಆಟ
ತಪ್ಪೊಪ್ಪುವಾಟ–
ಏನೇನೊ ಆಟಗಳ ಅಡಬೇಕಿನ್ನೂ
ಅಡುತ್ತಲೇ ಕಾಲ ದೂಡಬೇಕಿನ್ನೂ
ಕೂಡುಬಾಳಿನ ಹಾಡು ಹಾಡಬೇಕಿನ್ನೂ
ಬೇರೆಯ ದಾರಿ ನಮಗಿಲ್ಲ
ಇನ್ನೂ ಆಟ ಮುಗಿದಿಲ್ಲ
ಈಗಲೆ ತೊಳ್ಳಿ ತರವಲ್ಲ
ತರವಲ್ಲ–ಗೆಳತಿ–ತರವಲ್ಲ!

* * *

ಬುದ್ಧಿ ಕುರುಡಾಗಿಹುದು – ರೂಪಕ

ಬುದ್ಧಿ ಕುರುಡಾಗಿಹುದು
ಮನವು ಕೊರಡಾಗಿಹುದು
ಭಾವ ಬರಡಾಗಿಹುದು
ಒಲವು ಹುರುಡಾಗಿಹುದು
ಬಾ, ತಾಯೆ ಬಾ!
ಹೂವಿನಂಥ ಭಾವ ಬರಿಸು
ಮತಿಯ ಗಂಗೆ ಹರಿಯಿಸು
ನಿನ್ನ ನಿಲಿಸಿ ನೋಟದಲ್ಲಿ
ಉಳಿದೆಲ್ಲವ ಮರೆಯಿಸು
ತನುವು ಮುಪ್ಪನಪ್ಪಲೇನು
ಮನಕೆ ಮುಪ್ಪು ಬಾರದಿರಲಿ
ಮನೆಗೆ ಕೊರತೆ ಬಂದೊಡೇನು
ಮನದಿ ಕೊರತೆ ತೋರದಿರಲಿ!
ಹಮ್ಮಿದ್ದುದು ಹುಸಿಯಾದರು
ಹಮ್ಮು ಮಂಡಿಯೂರದಿರಲಿ
ಸೊಮ್ಮು ಕೈಯ ಕೊಟ್ಟರೇನು
ಹೆಮ್ಮೆ ಹುಲ್ಲ ಕಚ್ಚದಿರಲಿ
ಬೀಳು ಉತ್ತ ಹೊಲದಿ ಸೊಗದ
ಕಾಳು ಮೂಡಿ ಮೆರೆಯುತಿರಲಿ
ಹಾಳು ಸುತ್ತು ಮುತ್ತಲೇನು
ಬಾಳು ಚಿಗಿತು ನಗುತಲಿರಲಿ

* * *

ಬರೇ ಹೆಚ್ಚ ಮಾಡೀವಾ ಕಡಮೆ ಮಾಡಿಲ್ವಾ?

ನೀವು ಕಾಳಿನ ಬೆಲೆ ಹೆಚ್ಚು ಮಾಡಿದ್ರಿ
ದಿನಸಿ ಬೆಲೆ ಹೆಚ್ಚು ಮಾಡಿದ್ರಿ

ನೀರನ ದರ, ಬಸ್ಸಿನ ದರ, ವಿದುತ್ ದರ ಹೆಚ್ಚು ಮಾಡಿದ್ರಿ
ಜನಸಂಖ್ಯಾ ಹೆಚ್ಚು ಮಾಡಿದ್ರಿ
ದೇಶದ ತಲೆ ಮೇಲೆ
ಸಾಲದ ಹೊರೆ ಹೆಚ್ಚು ಮಾಡಿದ್ರಿ
ನಿರಕ್ಷರತೆ, ನಿರುದ್ಯೋಗ ಹೆಚ್ಚು ಮಾಡಿದ್ರಿ,
ಲಂಚ, ಕಲಬೆರೆಕೆ, ಕಪ್ಪುಹಣ ಹೆಚ್ಚು ಮಾಡಿದ್ರಿ,
ಜಾತೀಯ ದಂಗೆ, ಗೋಲಿಬಾರು ಹೆಚ್ಚು ಮಾಡಿದ್ರಿ,
ದರಗಳನ್ನು ಹೆಚ್ಚು ಮಾಡಿದ್ರಿ–
ಇನ್ನೂ ಏನೇನೋ ಹೆಚ್ಚು ಮಾಡಿದ್ರಿ ಅಂತಾ
ಯಾಕ ಹೊಡಕೋತೀರಿ ಬಾಯಿ ಬಾಯಿ?
ನಾವು ಬರೇ ಹೆಚ್ಚ ಮಾಡೀವಾ
ಏನೂ ಕಡಮೆ ಮಾಡಿಲ್ಲಾ?
ಇದಕ್ಕ ಅನ್ನೋದು
ಜನರಿಗೆ ಸ್ಮರಣಶಕ್ತಿ ಕಡಮೆ ಅಂತಾ.
ತುಸು ನೆನಪಿಸಿಕೊಳ್ಳಿ
ನಾವು ಬಂದ ಮೇಲೆ
ರೂಪಾಯಿ ಬೆಲೆ ಕಡಮೆ ಮಾಡಿಲ್ವಾ?
ಮನಸೇರ ಕಿಮ್ಮತ್ತು ಕಡಮೆ ಮಾಡಿಲ್ವಾ?
ಗ್ರಾಮಾರಣ್ಯ ಭೀಮಾರಣ್ಯ
ಎಲ್ಲಾ ಅರಣ್ಯ ಕಡಮೆ ಮಾಡಿಲ್ವಾ?
ಮಳೆ ಬೆಳೆ ಕಡಮೆ ಮಾಡಿಲ್ವಾ?
ಕರ್ತವ್ಯಬುದ್ಧಿ, ಸೇವಾಬುದ್ಧಿ ಕಡಮೆ ಮಾಡಿಲ್ವಾ,
ಇನ್ನೇನು ಕಡಮೆ ಮಾಡಬೇಕ್ರೋ ಯೀ–
ನಮ್ಮಲ್ಲಿ ನಿಮ್ಮ ವಿಶ್ವಾಸಾನ
ಕಡಮೆ ಮಾಡಿಲ್ವಾ?

* * *

ಈ ಸೃಷ್ಟಿ ಕಮಲ – ರೂಪಕ

ಈ ಸೃಷ್ಟಿ ಕಮಲ, ಲಾವಣ್ಯಲಕ್ಷ್ಮಿ ನಿಂತಿಹಳು ಮುಗಿಲವರೆಗೆ
ಎಲ್ಲಿಹನು ವಿಷ್ಣು? ಎಲ್ಲಿಹುದು ಸ್ಥಾನ? ಸೌಂದರ್ಯದೆದೆಯ ಒಳಗೆ!

ಸೌಂದರ್ಯವಲ್ಲಿ, ಸೌಂದರ್ಯವಿಲ್ಲಿ, ಸೌಂದರ್ಯ ಮೇಲೆ ಕೆಳಗೆ!
ಬಾ ನಿಯ ನೋಡು ಈ ವಿಶ್ವ ರೂಪಲಾವಣ್ಯ ಒಂದು ಗಳಿಗೆ!
ಅದೋ ಚಂದ್ರಕಾಂತಿ, ಅದೆ ಕ್ಷೀರಶರಧಿ, ನಗ ಮೇಘ ಶೇಷ ತಲ್ಪ
ಈ ವಸುಧೆ ಲಕ್ಷ್ಮಿ, ಆಕಾಶ ವಿಷ್ಣು, ಘನಶ್ಯಾಮ ನೀಲ ರೂಪ!
ಸ್ಥಲ-ಕಾಲ ಪ್ರಣತಿ, ಆನಂದ ತೈಲ ಉರಿಯುವುದು ರೂಪ ದೀಪ
ಆಳಿಯುವುದು ಇದನು ನೋಡಿದರ ಮನದ ಕಾರ್ಪಣ್ಯ, ಕ್ಲೈ ಬ್ಯ, ತಾಪ!
ತುಕ್ಕು ಹಿಡಿದ ಬದುಕನೊಮ್ಮೆ
ತಿಕ್ಕಿ ತೊಳೆ, ಓ ಕಲೆ!
ಒಣಗಿಹೋದ ಎದೆಯ ಹೊಲವ
ತೊಯ್ಸು ಮತ್ತೆ ಸೊಗದ ಸೆಲೆ!
ವಿಶ್ವವಿದು ಸುಂದರವು
ಸತ್ಯದಂತಃಪುರವು
ಜೀವವೆಲ್ಲಿದ್ದರೂ ಒಂದೆ ಸ್ವರವು
ಜೀವನವು ಶುಭಕರವು
ದೇವನಿತ್ತಿಹ ವರವು
ಗುರಿಯು ಪ್ರಗತಿಯು, ದಾರಿ ಸಹಕಾರವು.

* * *

ಅಣ್ಣನಲ್ಲಿ ಅರಿಕೆ

ಒಲೆ ಹತ್ತಿ ಅಲ್ಲ,
ಧರೆ ಹತ್ತಿ ಉರಿಯುತಿದೆ ಅಣ್ಣ
ಇರಿಯುತ ಕಣ್ಣ!
ಉನ್ಮಾದವೋ, ಮದವೋ,
ಹೃದಯ ಹೀನತೆಯೋ, ನೀತಿ ಬಾಹಿರತೆಯೋ,
ಮತ್ಸರವೋ, ಕುತ್ಸಿತವೋ,
ಮಾನವತೆಯನೆ ನೆಕ್ಕಿಮುಕ್ಕಿದ ದಾನವತೆಯೋ,
ಶುಷ್ಕ ಬೌದ್ಧಿಕತೆಯೋ,
ರಸಿಕತೆಯನೇ ತಿಂದು ತೇಗಿದ ಪಶುತನವೋ,

ಕೂಳಿನ ಕೊಬ್ಬೊ, ಖೂಳತೆಯ ಮಬ್ಬೊ,
ವಿಜ್ಞಾನವಿತ್ತ ಶಕ್ತಿಯ ಸೊಕ್ಕೋ
ಆತ್ಮವಿನಾಶನೋತ್ಸುಕತೆಯೋ–
ಏನು ಕಾರಣವಾಯಿತೋ
ಈ ಧರೆಯನ್ನೆ ಮುತ್ತಿರುವ ಉರಿಗೆ!
ನೆರೆ ಬಂದ ಹಾಗಿಹುದು ನಂಜಿನ ತೊರೆಗೆ!
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದೆಂದು ಎಚ್ಚರಿಸಿ ಹೋದೆ ಅಣ್ಣ.
ಆದರೂ ತೆರೆಯಲಿಲ್ಲ ನಾವು ತಿಳಿವಿನ ಕಣ್ಣ!
ಇಂದು ಸಾವು ಸಂಭ್ರಮಯುಕ್ತ,
ಜೀವನ ವಿಷಣ್ಣ!
ಕೆಡುಕಿನ ಕೇಕೆಯೆದುದುರು
ಒಳತಿನ ಮುಖ ಸಣ್ಣ!
ಸುಖಕೆಂದಿಟ್ಟ ಮನೆಯ ದೀಪವೆ
ಮನೆಯ ಸುಟ್ಟು, ನೆರೆಮನೆಯ ಸುಟ್ಟು,
ಧರೆಯಗಲಕ್ಕೆ ನಾಲಗೆ ಚಾಚುತಿರುವಾಗ
ಯಾವ ದೀಪಾವಳಿಯ ಆಚರಿಸಲಿ ಅಣ್ಣ

* * *

ತಾರೆಗಳು ಕಣ್ಣು ಚಿವುಟಿ – ರೂಪಕ

ತಾರೆಗಳು ಕಣ್ಣು ಚಿವುಟಿ
ಕರೆಯುತ್ತಿವೆ ಅತ್ತ
ಕುಸುಮ ಕುಲವು ನಗೆಯ ಬೀರಿ
ಕರೆಯುತ್ತಿದೆ ಇತ್ತ
ಅತ್ತೊಂದು ಚಿತ್ತ
ಇತ್ತೊಂದು ಚಿತ್ತ
ಕರ್ತವ್ಯವೂ ಜಬರಿನಿಂದ
ಕರೆಯುತ್ತಿದೆ ಅತ್ತ

ಸೌಂದರ್ಯವು ಒಲಪಿನಿಂದ
ಕರೆಯುತ್ತಿದೆ ಇತ್ತ
ಅತ್ತೊಂದು ಚಿತ್ತ
ಇತ್ತೊಂದು ಚಿತ್ತ
ಬಹಳ ಓದಿ ಬಹಳ ತಿಳಿದೆ
ಇನ್ನು ಬಳಿಗೆ ಬಾ
ವಾದ ಭೇದ ವೈರ ಸಾಕು
ಇನ್ನು ಕೆಳಗೆ ಬಾ
ಕೊಡು ನಿನ್ನ ಕಲ್ಯಾಣ ಪ್ರಣತಿ,
ಭಕ್ತಿರಸ ತೈಲ,
ಆಚಾರ ಬತ್ತಿ,
ತತ್ತ್ವ ಜ್ಯೋತಿ!

* * *

ನಿನ್ನ ನಕ್ಷತ್ರ – ರೂಪಕ

ನಿನ್ನ ನಕ್ಷತ್ರ ಮಂಡಲಗಳ
ರಂಗವಲ್ಲಿಗಳ ನೋಡಿದಾಗ
ಬೆರಗು ನನಗೆ
ಬಡವಿಯ ಗುಡಿಸಲ ಮುಂದಣ
ರಂಗವಲ್ಲಿಯ ನೋಡಿದಾಗ
ಹೆಮ್ಮೆನನಗೆ
ಬಾನವರು ಮಾನವರಿಗೆ: "ನೋವು ಸಾವಿನ
ವ್ಯಥೆಯ ಕಥೆ ನಿಮ್ಮ ಜೀವನ!
ನಿಮಗೆ ಜಿಗುಪ್ಸೆಯಾಗುವುದಿಲ್ಲವೆ
ನಿಮ್ಮ ಜೀವನದ ಬಗ್ಗೆ?"
ಮಾನವರು ಬಾನವರಿಗೆ: "ನಿಮಗೆ ನೋವಿಲ್ಲ,
ಸಾವಿಲ್ಲ; ಬೇಸರ ತರುವುದಿಲ್ಲವೆ
ನಿಮ್ಮ ಬಾಳು ನಿಮಗೆ?"

* * *

ಅಕ್ಕರತೆಯನು ತೊರೆದ ಅಕ್ಕರಿಗತೆ

ಅಕ್ಕರತೆಯನು ತೊರೆದ ಅಕ್ಕರಿಗತೆ
ಹೇಳುತಿವೆ ಬಾಳುವೆಯ ಹಾಳಿನ ಕತೆ!
ನರನರನ ಸಂಬಂಧ ಯಾಂತ್ರೀಕೃತ
ಮನುಜ ವ್ಯಕ್ತಿತ್ವವೇ ಆಗಿದೆ ವಿಭಕ್ತ
ಬೌದ್ಧಿಕತೆಯುದರದಲಿ ಜನಿಸಿಹ ವ್ಯಥೆ
ಹೇಳುತಿದೆ ಬಾಳುವೆಯ ಹಾಳಿನ ಕತೆ
ಅಕ್ಕರತೆಯನು ತೊರೆದ ಅಕ್ಕರಿಗತೆ....
ವಿಧುರವಾಗಿದೆ ಬುದ್ಧಿ ಭಾವನೆಯ ತ್ಯಜಿಸಿ
ಬರಡುಗೊಂಡಿದೆ ಬಾಳು ಬುದ್ಧಿಯ ಯಜಿಸಿ
ನೀರಸತೆಗೊಲಿದಿರುವ ನಾಗರಿಕತೆ
ಹೇಳುತಿದೆ ಬಾಳುವೆಯ ಹಾಳಿನ ಕತೆ
ಅಕ್ಕರತೆಗೊಲಿದಿರುವ ಅಕ್ಕರಿಗತೆ.....
ಪ್ರೀತಿಗೆರಡನೆ ಹೆಸರು ದೌರ್ಬಲ್ಯವೆಂದು
ಕೂಗುತಿದೆ ಹೊಸಮತಿಯು ಭ್ರಾಂತಿಯಲಿ ನಿಂದು
ಸಂಪದದ ಹೆಸರಿನಲಿ ಬರಿ ರಿಕ್ತತೆ
ಹೇಳುತಿದೆ ಬಾಳುವೆಯ ಹಾಳಿನ ಕತೆ
ಅಕ್ಕರತೆಯನು ತೊರೆದ ಅಕ್ಕರಿಗತೆ.....

* * *

ನೋವಿನ ಬಳ್ಳಿಯ – ರೂಪಕ

ನೋವಿನ ಬಳ್ಳಿಯ ಹೂವಿನ ಮಧುವಿದೆ
ನೆನಪಿನ ಮಧುಕರಗೆ
ಅಂಜುವುದೇತಕೆ, ಅಳುಕುವುದೇತಕೆ
ಬನ್ನದ ಬಾಳಿನ ಕರೆಕರೆಗೆ?
ಯಾರು ಕೈ ಬಿಟ್ಟರೂ ನಾನು ಕೈಬಿಡೆ ನಿನ್ನ
ಕನ್ನಡವೆ, ನನ್ನೆದೆಯ ಮಿಡಿವ ನುಡಿಯೆ!
ಯಾವ ನುಡಿ ಬಂದರೂ ನೀನೆ ಒಳನುಡಿ ನನಗೆ
ನನ್ನ ಬಾಳಿನ ಲತೆಯ ದಾಂಗುಡಿಯೆ, ಮಿಡಿಯೆ!
ನಾ ಮೇಲು ನೀ ಮೇಲು ಎನ್ನದಿರಿ ಗೆಳೆಯರೆ

ನಾವೆಲ್ಲರೊಂದಾಗಿ ಇದ್ದರದೆ ಮೇಲು
ನಾ ಹೆಚ್ಚು ನೀ ಹೆಚ್ಚು ಎನ್ನದಿರಿ ಕೆಳೆಯರೆ
ಪ್ರೀತಿ ಹೆಚ್ಚಾಗಲಿ ನೂರಾರು ಪಾಲು

* * *

ಬುದ್ಧಿಯ ಬರ!

ಜನ ಮಸಾಲೆ ದೋಸೆ ತಿನ್ನುವುದನ್ನು
ನಿಲ್ಲಿಸಿಲ್ಲ–
ಆದುದರಿಂದ ಈ ನಾಡಿನಲ್ಲಿ
ಬರವಿಲ್ಲ!
ಎತ್ತದಿರು ಬರದ ಸೊಲ್ಲ–
ಏ ಹುಚ್ಚ ಮಲ್ಲ!
ರೊಟ್ಟಿ ರೊಟ್ಟಿ ಅಂತಾ
ಹೊಟ್ಟೆ ಹೊಟ್ಟೆ ಅಂತಾ
ಯಾಕ ಬಡಬಡಸ್ತೀಯಾ,
ಬುದ್ಧಿ ಬಡವಾಗಸ್ತೀಯಾ?
ಬುದ್ಧಿವಂತರು ಬದುಕಿದರೆ ಸಾಲದೆ?
ಬುದ್ಧಿಗೇಡಿಗಳಿಗೆ ಕೊರತೆ ಯಾವುದಿದೆ?
ದುಡಿತವಿದೆ,
ಹಸಿವೆಯಿದೆ,
ಜಾಡ್ಯವಿದೆ,
ಮೌಢ್ಯವಿದೆ
ಹಾಸಲು ನೆಲವಿದೆ
ಹೊದೆಯಲು ಮುಗಿಲಿದೆ
ಇಷ್ಟು ಸಾಲದೆ?
ಬರ ಎಲ್ಲಿದೆ?
ಇಲ್ಲಿರೋದೊಂದೇ ಬರ–
ಬುದ್ಧಿಯಬರ!
ಬುದ್ಧಿಯಿದ್ದ ಹಲವರ

ಸೇವಿಸಿ ಪಡೆಯಿರಿ ವರ!
ಇನ್ನೆಲ್ಲಿಯ ಬರ?

* * *

ಇನ್ನಾವ ಆಟವನು – ರೂಪಕ

ಇನ್ನಾವ ಆಟವನು ಆಡಿಸಲು ಅಣಿಯಾದೆ
ಸ್ಥಲದ ಅಟ್ಟದ ಮೇಲೆ ಕಾಲ ಕಥೆಗಾರ?
ನಿನಗೆಲ್ಲಿ ನೋಟಕರು ಪಾತ್ರ ವಹಿಸುವ ನಟರ
ಒಲವು, ರುಚಿ, ಆಸೆಗಳ ಪರಿವೆ, ದರಕಾರ?
ತರತರದ ಆಟಗಳು
ತೆರೆಯ ಮುಂದೆ–
ಏನೇನು ನಡೆದಿಹುದೊ
ತೆರೆಯ ಹಿಂದೆ!
ನಿಜದ ನೆರಳು ನಿಜವೆ ನಿಜದಿ
ಜ್ಞಾನ ಸೂರ್ಯನಿರಲು
ನಿಜವು ಇಲ್ಲ, ನೆರಳು ಇಲ್ಲ–
ಕಾಳರಾತ್ರಿ ಬರಲು!

* * *

ಬೆಳಗಲೀ ಭಾರತವು ಸಗ್ಗವಾಗಿ!

ಬೇಲೂರ ಬಾಲೆಯರು ವೇರೂಳ ಇಂದ್ರಸಭೆ
ಬಯಸಿ ಕಾಣತಲಿಹರು ಕೈಲಾಸ ಸ್ವಪ್ನ
ಗೋಲಗುಮ್ಮಟ ನಿತ್ಯ ತಾಜಮಹಲಿಗೆ ತನ್ನ
ಮೇಘ ಸಂದೇಶವನು ಕಳಿಸುತಿದೆ ನೂತ್ನ
ಕುತುಬ ಮಿನಾರವಿದೊ ಕತ್ತೆತ್ತಿ ನೋಡುತಿದೆ
ದಕ್ಷಿಣದ ಎತ್ತರದ ಗೋಪುರಗಳನ್ನು
ಆ ಚಿದಂಬರ ಪುರುಷ ನಟರಾಜನನು ನೆನೆದು
ಕಟ್ಟುವರು ಉತ್ತರದಿ ನೂಪುರಗಳನ್ನು

ಅಲ್ಲಿ ಕಾಂಚನಗಂಗೆ ಆಗುಂಬೆಗೌತಣದ
ಓಲೆಯನು ಬರೆಯುತಿದೆ ಬಂಗಾರದಲ್ಲಿ
ಆಸಾಮಿನೈಸಿರಿಯ ಐದೆಗಿದೊ ಕಳಿಸುತಿದೆ
ಕುಸುಮಗಳ ಶ್ರೀನಗರ ಶೃಂಗಾರವಲ್ಲಿ
ವರ್ಣಗಳ ಮೈಯಲ್ಲಿ ಮಿಂಚುಗಳ ಸೆರೆ ಹಿಡಿದ
ಆ ಅಜಂತೆಯು ಕಾರ್ಲೆ ಖಾಜುರಾಹೊಗಳಿಗೆ
ಸೌಂದರ್ಯ ಸಂದೇಶ ಕಳಿಸುತಿದೆ ಕಾಣದೆ?
ಏನುಕ್ಕು ಬಂದಿತ್ತೊ ಭಾರತದ ಕಲೆಗೆ!
ಇನ್ನಾವ ದೇಶಕ್ಕೆ ಈ ಭಾಗ್ಯವಿಹುದಣ್ಣ
ಇನ್ನೆಲ್ಲಿ ಈ ಸಿರಿಯ ಕಾಣಬಲ್ಲೆ?
ಎಲ್ಲ ದೇಶವ ಸುತ್ತಿ ಇಲ್ಲಿಗೇ ಬರಬೇಕು
ಒಡೆದಿತ್ತು ಶಿವದ ಸೆಲೆ ಮೊದಲು ಇಲ್ಲೆ!
ಭಾಗ್ಯಶಾಲಿಯು ನೀನು ಭಾರತದಿ ಬದುಕಿರುವೆ
ಈ ಹಿಗ್ಗು ಸಾಹಸದ ಬುಗ್ಗೆಯಾಗಿ
ಮಾಡಿಸಲಿ ನಿನ್ನಿಂದ ನಿರ್ಮಾಣ ಕಾರ್ಯಗಳ
ಬೆಳಗಲೀ ಭಾರತವು ಸಗ್ಗವಾಗಿ!

* * *

ಎದ್ದೊಡನೆ ಶೂದ್ರಕರ್ಮ – ರೂಪಕ

ಎದ್ದೊಡನೆ ಶೂದ್ರಕರ್ಮ
ತಿನುವಾಗ ವೈಶ್ಯ ಕರ್ಮ
ಆತ್ಮರಕ್ಷಣೆಗಾಗಿ ಕ್ಷತ್ರ ಕರ್ಮ
ಓದುವಾಗ ಬ್ರಾಹ್ಮಣ ಕರ್ಮ
ಇಂತು,
ಎಲ್ಲರೂ ಶೂದ್ರರು
ಎಲ್ಲರೂ ವೈಶ್ಯರು
ಎಲ್ಲರೂ ಕ್ಷತ್ರಿಯರು, ದ್ವಿಜರು
ಎಲ್ಲರೂ ಗಣ್ಯರು
ಎಲ್ಲರೂ ಮಾನ್ಯರು

ಎಲ್ಲರೂ ಭಾರತದ ಪ್ರಜರು
ಕೋಟಿ ಮನೆಗಳು
ಒಂದೆ ಮನೆತನವು
ಲಕ್ಷ ಪಕ್ಷಿಗಳು
ಒಂದೆ ವನವು
ಪೀಳಿಗೆಗೆ ಪೀಳಿಗೆಗೆ
ಎಷ್ಟು ಅಂತರ!
ಈಗ ದಶಕತ್ರಯಕ್ಕೊಮ್ಮೆ
ಯುಗಾಂತರ!

* * *

ಪ್ರಾಣ-ವೀಣೆ

ಪ್ರಾಣ-ವೀಣೆ ಪ್ರೇಮವಾಣಿ-
ಯಾಗು ಮೈರವಳಿಯಲಿ,
ಸ್ನೇಹ-ಬೀಜ ಮೊಳೆಯಲಿ!
ನೀನು ನುಡಿಯೆ ನಾದದೊಡನೆ
ಸತ್ಯ ಪ್ರೀತಿ ಸುಳಿಯಲಿ
ಬಂಧು-ಭಾವ ಬೆಳೆಯಲಿ!
ಹಿಂದೆ ಕಲಿಕೆಯಲ್ಲಿ ಎನಿತೊ
ಅಪಶ್ರುತಿಗಳೊಗೆದುವು
ತಾಳ ತಪ್ಪಿ ನೆಗೆದುವು
ದೋಷ ಮಿಡಿದ ವೀಣೆಯಿನ್ನು
ಲೇಸಿಗೊಲಿದು ನುಡಿಯಲಿ
ದಿವ್ಯಗಾನ ಹಡೆಯಲಿ
ಸಾಮರಸ್ಯ ಸೌಮನಸ್ಯ
ಸದ್ಭಾವಗಳರಳಲಿ
ಕೆಡುಕು ಒಡಕು ತೆರಳಲಿ
ಎದೆಯ ಕಲ್ಲು ಕರಗುವಂಥ
ಗಾನ ಸುಧೆಯು ಹರಿಯಲಿ
ಹರ್ಷ ಬಾಷ್ಪ ಸುರಿಯಲಿ!

* * *

ರೇಷ್ಮೆ ಸೀರೆಯನ್ನುಟ್ಟು – ರೂಪಕ

ರೇಷ್ಮೆ ಸೀರೆಯನ್ನುಟ್ಟು
ಬಿಮ್ಮನೇ ಬೀಗುತಿಹ ಭಾಮಿನಿಯೆ,
ಮರೆಯದಿರು: ನಿನ್ನ ಈ ಸೀರೆಗಾಗಿ
ಸಾವಿರ ಸಾವಿರ ರೇಷ್ಮೆ ಹುಳುಗಳು
ಸತ್ತು ಮಣ್ಣಾದವೆಂಬುದ!
ಚಿನ್ನ ದೊಡವೆಯನಿಟ್ಟು
ಕೆಮ್ಮನೆ ಕೊಬ್ಬಿರುವ ಕಾಮಿನಿ,
ಮರೆಯದಿರು: ಈ ಚಿನ್ನ
ಸಹಸ್ರಾವಧಿ ಗಣಿ ಕಾರ್ಮಿಕರ
ಶ್ರಮದ ಸ್ವೇದದ ಫಲವೆಂಬುದ
ಮಾನವತೆಗಂಕಿತವು ನಮ್ಮ ರಾಷ್ಟ್ರೀಯತೆಯು
ರಾಷ್ಟ್ರೀಯತಂಕಿತವು ಪ್ರಾಂತೀಯತೆ
ಸಹಿಷ್ಣುತೆಯೆ ಸೂತ್ರವು ಸರ್ವ ಧರ್ಮಗಳಲ್ಲಿ
ಸುಟ್ಟು ಹೋಗಲಿ ಕೆಟ್ಟ ಜಾತೀಯತೆ!

* * *

ಕರುನಾಡ ಕಾರಣಿಕ

ಹಗಲೆಲ್ಲ ಹುಟ್ಟುವರೆ
ಹಳಕಟ್ಟಿಯಂಥವರು–
ಶತಕ ಸುಕೃತದ ಸತ್ವ
ತೊಟ್ಟು ನಿಂತವರು?
ಈ ನಾಡ ಭಾಗ್ಯತರು
ಬಿಟ್ಟಮೃತ ಫಲವೊಂದು
ಸವಿದರೂ ಸವೆಯದಿದೆ
ಕೋಟಿ ಶುಕ ಬಂದು
ಶರಣ ಕುಲದೀಪಕನು
ಜ್ಞಾನ–ದಾಸೋಹಿ

ಕರುನಾಡ ಕಾರಣಿಕ
ಕೀರ್ತಿ-ನಿರ್ಮೋಹಿ
ತಪಿಸಿದನು ನುಡಿಗಾಗಿ
ಜಪಿಸಿ ಕನ್ನಡ ಮಂತ್ರ
ನಾಡಿ ನೇಳಿಗೆಗಿತ್ತ
ಏಕತೆಯ ತಂತ್ರ
ಶಿಕ್ಷಣವೊ, ದುರ್ಭಿಕ್ಷ
ಪರಿಹಾರ ಕಾರ್ಯವೋ
ಸಹಕಾರವೋ ಬ್ಯಾಂಕೊ
ಸ್ವಾತಂತ್ರ್ಯ ಧುರ್ಯವೋ
ಶೋಧನೆಯೋ ಬೋಧನೆಯೋ
ಸುಗತಿ ಸಾಧನೆಯೋ
ವಚನ ಪ್ರಕಾಶನವೋ
ಪತ್ರ ಸಂಪಾದನೆಯೋ-

* * *

ತಲೆಯಲ್ಲಿ ಜ್ಞಾನವು - ರೂಪಕ

ತಲೆಯಲ್ಲಿ ಜ್ಞಾನವು
ಎದೆಯಲ್ಲಿ ಪ್ರೇಮವು
ಕರದಲ್ಲಿ ಕ್ರಿಯೆ
ಇದುವೆ ಬಾಳ ಸಂಪುಟವು
ವ್ಯಷ್ಟಿಹಿತ ಸಮಷ್ಟಿಹಿತ
ಒಂದಕೊಂದ ವಿರೋಧಿ
ಯಾಗುವುದೆ ಮನುಕುಲಕೆ
ಸಾರ್ಥಕತೆ ದಿಟವು-
ಅರಿ, ಅರಿ, ನಿನ್ನ ನೀನೆ ಅರಿ;
ಇಲ್ಲದಿರೆ ನಿನಗೆ ನೀನೆ ಅರಿ
ಹರಿ, ಹರಿ, ಭ್ರಮೆಯ ಜಾಲ ಹರಿ;
ಹರಿದರೆ ನೀ ಹರಿ, ಇಲ್ಲದಿರೆ ಕುರಿ!

ಎಲ್ಲೆಲ್ಲು ಹಳಕಟ್ಟಿ
ನಿಂತರೈ ನಡಕಟ್ಟಿ
ನೆಲದ ಮೇಲಡಿಯಿಟ್ಟು
ಮುಗಿಲಲ್ಲಿ ದಿಟ್ಟಿ
ಕಷ್ಟಗಳೆ ಆಹಾರ
ನಷ್ಟಗಳೆ ನೀರು
ಕ್ಲೇಶಗಳೆ ಹಾಸಿಗೆಯು–
ದೊರೆತುವಿವು ಮೂರು!
ಆದರೂ ಶರಣನಿವ
ಕಂಗೆಡಲೆ ಇಲ್ಲ
ಆದರ್ಶ ಧ್ಯೇಯಗಳ
ಕೈ ಬಿಡಲೆ ಇಲ್ಲ!
ಕೊನೆಯ ಉಸಿರಿನವರೆಗೆ
ನಮಗಾಗಿ ದುಡಿದ
ನಮಗಾಗಿ ಬದುಕಿದನು
ನಮಗಾಗಿ ಮಡಿದ!
ನೆನೆಯಿರಿವನನು ನಿತ್ಯ
ನಮಿಸಿರಿವನಿಗೆ ನಿತ್ಯ
ಇವನು ಕರುನಾಡಿನ
ಕಾರಣಿಕ ಸತ್ಯ!

* * *

ಗಂಟು ಬಿಚ್ಚು – ರೂಪಕ

ಗಂಟು ಬಿಚ್ಚು, ಗಂಟು ಬಿಚ್ಚು,
ಸಂಪ್ರದಾಯಗಳ ಗಂಟು ಬಿಚ್ಚು
ನಿನ್ನ ಮನದ ಗಂಟು ಬಿಚ್ಚು
ಅಂಧ ಶ್ರದ್ಧೆಗಳ ಗಂಟು ಬಿಚ್ಚು
ಇನ್ನಾವ ವಿಧಿಯೋ ಗಂಟು ಬೀಳುವ ಮೊದಲೇ
ಗಂಟು ಬಿಚ್ಚು, ಕಗ್ಗಂಟು ಬಿಚ್ಚು!

ನಿನ್ನದೇನು ಗಂಟು ಹೋಗುತ್ತದೆ–
ಗಂಟು ಬಿಚ್ಚು, ಗಂಟು ಬಿಚ್ಚು!
ಸತ್ಯದ ಬೊಕ್ಕಸದ ತುಂಬ
ಸುಳ್ಳುತೆತ್ತ ಸುಂಕವಿದೆ!
ಬುದ್ಧಿಯ ದೇದೀಪ್ಯ ಮುಖದಿ
ಭ್ರಮೆಯ ಬೆಡಗು ಬಿಂಕವಿದೆ!
ಬರೆವಣಿಗೆ ಕಡಮೆ
ಉರವಣಿಗೆ ಹೆಚ್ಚು
ಮೆರವಣಿಗೆ ಹೆಚ್ಚು
ಸಿದ್ಧಿಯಿಲ್ಲದೆಯೆ ಪ್ರಸಿದ್ಧಿಯ ಹುಚ್ಚು!

* * *

ಎಂಥ ಭಾರತವ ಬಿಟ್ಟು ಹೋಗುವಿರಿ?

ಎಂಥ ಭಾರತವ ಬಿಟ್ಟು ಹೋಗುವಿರಿ
ನಮ್ಮ ನಾಯಕರೆ ಹೇಳಿ?
ನಿಮ್ಮ ಎದುರಿಗೇ ನಿತ್ಯ ನಡೆಯುತಿದೆ
ನಮ್ಮ ಆಸೆಗಳ ಹೋಳಿ!
ಬದುಕು ಎಂಬುದೇ ಬೇಡವೆನಿಸುತಿದೆ
ಬೆಲೆಗಳೇರಿಕೆಯಲಿ
ಕಾಳ ಸಂತೆಗಳ, ಕಪ್ಪು ಹಣದ, ಅತಿ
ಕರದ ಹೇರಿಕೆಯಲಿ!
ಹಣದ ಹೊಳೆಯು ಹರಿಯುತ್ತಲಿಹುದು
ಸ್ವಿಸ್ ಬ್ಯಾಂಕುಗಳಿಗೆ
ಆರ್ತ ಜನಗಳ ಅಶ್ರು ಹರಿಯುತಿವೆ
ರಾಜಧಾನಿಗಳಿಗೆ
'ಸಂತ' 'ಗ್ರಂಥಿ'ಗಳ ಕೊಲೆಯು ನಡೆಯುತಿದೆ
ಹಾಡೆ ಹಗಲು ಇಲ್ಲಿ
'ಸತಿ'ಯ ಬೆಂಬಲಿಸಿ ಶಂಖ ಹೊಡೆವರಿದೊ
ಶಠರು ಮತಗಳಲ್ಲಿ!

ಮಣ್ಣ ಮಕ್ಕಳಿಗೆ ದಲಿತರೆಂದು ನರ
ಮಲವ ತಿನಿಸಿಯಾಯ್ತು!
ಜಾರತನಕೆ ಒಳಗಾಗದವಳ ಬರಿ-
ಮೈಲೆ ಮೆರೆಸಿಯಾಯ್ತು!
ವರನ ದಕ್ಷಿಣೆಯ ಉರಿಯು ಸುಟ್ಟ ಸೌ-
ಭಾಗ್ಯವತಿಯರೆನಿತೊ!
ದೇವದಾಸಿಯರ ವೇಶ್ಯೆ ಬಸವಿಯರ
ಗೋಳ ಕಥೆಗಳೆನಿತೊ!

* * *

ತಳಿಯಂತೆ ದನ - ರೂಪಕ

ತಳಿಯಂತೆ ದನ, ಬಳಿಯಂತೆ ಜನ,
ಬೆಳೆಸಿದಂತೆ ವನ,
ವನದಂತೆ ಪರಿಸರ ಸಂತುಲನ
ಹೂವು ಅರಳುವ ಮುನ್ನ ಬರುವುವೇ ಭೃಂಗಗಳು?
ಬರುವುವೇ ಹಕ್ಕಿಗಳು ಫಲ ಬಿಡುವ ಮುನ್ನ ?
ಕಾಡು ಬೆಳೆಯುವ ಮುನ್ನ ಮೂಡುವುವೆ ಗೂಡುಗಳು?
'ಅರಣ್ಯಕ'ಗಳುದಯವೇ ಅರಣ್ಯಗಳ ಮುನ್ನ?
ಕವಡೆಯನು ಬೋಕಿಯನು
ಕಾಯುವವರುಂಟು;
ಕಲ್ಲು ಮಣ್ಣನು ಕೂಡ
ಕಾಯುವವರುಂಟು-
ಕಾಯುವರೆ ಇಲ್ಲವೆ ನಮ್ಮ ಕಾಡುಗಳನ್ನು-
ಎಲ್ಲ ಸಿರಿಸಂಪದ ಸೊಗದ ಬೀಡುಗಳನ್ನು?
ನಾರವನ್ನು ಹೀರಿರೋ
ಬೇರಿನಂದದಿ
ಸೈಪನ್ನೇ ಬೀರಿರೋ
ಸೂರಿಯಂದದಿ
ಯಾರು ಸುಖಿಗಳು ಇಂದು ದೇಶದಲಿ

ಭ್ರಷ್ಟರನ್ನು ಬಿಟ್ಟು?
ಹೊರಟು ಹೋಗುವಿರ ರೊಟ್ಟಿ ಬೇಡುತಿಹ
ಬಾಯ್ಗೆ ಕಲ್ಲು ಕೊಟ್ಟು?
ಬಿದ್ದು ಹೋಗುವಿರಿ ನೀವು ಸಹಿತ ಒಂ-
ದಿಲ್ಲ ಒಂದು ದಿವಸ
ಮಾಡಿ ಹೋಗದಿರಿ ನಾಡ ಮಸಣವನು
ಮೆರೆದು ಕೆಲವು ವರುಷ!

* * *

ಒಂದು ಗಂಡಿಗೊಂದು - ರೂಪಕ

ಒಂದು ಗಂಡಿಗೊಂದು ಹೆಣ್ಣು
ಒಂದು ಹೆಣ್ಣಿಗೊಂದು ಗಂಡ
ಸೃಜಿಸುವುದು ನಿಸರ್ಗವು
ಒಲವೆ ಬಲವು, ಒಲವೆ ಗೆಲವು,
ಒಲವೆ ಸಿರಿಯು ಸೊಗವು ಎಂದು
ಬಾಳೆ ಮನೆಯೆ ಸ್ವರ್ಗವು!
ತುಟಿಯ ಮೇಲೆ
ನಟಿಯ ಹಾಗೆ
ಮಂದಹಾಸ ಕುಣಿಯಿತು
ಕಂಡ ಕಣ್ಣು
ಹಾಲನುಂಡ
ಕಂದನಂತೆ ತಣಿಯಿತು
ಕೆಣಕದಿರು ಕೆಣಕದಿರು
ಕಡೆಗಣ್ಣ ನೋಟದಲಿ
ಕಟ್ಟಿಕೆಡಿಸುವ ಗೊಂಬೆಯಾಟದೊಲವ
ಹೊಂಬೆಳೆಯು ಬರವಲ್ಲ
ಗೊಂಬೆ ಗುಡಿಗಳ ಕಟ್ಟಿ
ಬಂಜರಾಗಿಸಬೇಡ
ಎದೆಯ ಹೊಂಡ!

ಅದೆಂದೋ ಕಂಡುಕೊಂಡಿದೆ
ಸ್ತ್ರೀ ಪರೀಕ್ಷೆಯನ್ನು ಗಂಡು
ಇನ್ನೂ ಕಲಿಯಬೇಕಿದೆ
ಜಾನಕಿಗೆ ವನವಾಸ, ದ್ರೌಪದಿಗೆ ವನವಾಸ
ಕಾಡಿನಲ್ಲಿ
ಪ್ರತಿ ವನಿತೆಗೂ ವನವಾಸ
ಬೀಡಿನಲ್ಲಿ!

* * *

ಒಂದಾಗುವ ಎಲ್ಲರೂ!

ದೇಶ ಭಕ್ತಿಯಲ್ಲಿ ಮಿಂದು
ಒಂದಾಗುವ ಎಲ್ಲರೂ!
ಕೃಷಿಕರೂ, ಶ್ರಮಿಕರೂ,
ವಣಿಕರೂ, ಮಲ್ಲರೂ
ಗಿರಿಜನರು, ಹರಿಜನರೂ,
ಗೋಂಡರೂ, ಭಿಲ್ಲರೂ–
ಒಂದಾಗುವ ಎಲ್ಲರೂ!
ಹೆಣ್ಣು ಗಂಡು ಎಂಬ ಭೇದ
ಹಿಂದು ಯವನ ಎಂಬ ಭೇದ
ರಾಜ ರಂಕನೆಂಬ ರೋಧ–
ಎಲ್ಲ ಕೊಚ್ಚಿ ಹೋಗಲಿ!
ಔತ್ತರೇಯ, ದಾಕ್ಷಿಣಾತ್ಯ,
ಆರ್ಯ, ದ್ರವಿಡ, ಕುಲಜ, ವ್ರಾತ್ಯ
ಕುಳಿತಿರುವುದು ಒಂದೇ ಭೈತ್ರ
ಜೊತೆಗೆ ಸಾಗಲಿ!
ಕರ್ಮಜಾಲ ಕತ್ತರಿಸುತ
ವರ್ಣ ಭ್ರಮೆಯ ಕಿತ್ತೆಸೆಯುತ
ಜಾತಿ ಕುಲವ ಸುಟ್ಟು ಹಣೆಗೆ
ಬೊಟ್ಟ ನಿಕ್ಕುತ

ಶೋಷಣೆಯ ಸಮಾಧಿ ಮಾಡಿ
ಅಸಮತೆಗಳ ಹೋಳಿ ಮಾಡಿ
ವಿಷಮತೆಗಳ ಹೋಳು ಮಾಡಿ
ನೆಕ್ಕಿ ಮುಕ್ಕುತ
ಮೂಢ ರೂಢಿಗಳನು ತುಳಿದು
ಕುರುಡು ನಂಬಿಕೆಗಳ ಅಳಿದು
ಬಡತನದ ಬೇರುಗಳನೆ
ಭಸ್ಮಗೊಳಿಸುತ

* * *

ಜಳ್ಳನ್ನು ಒಕ್ಕಿ ಒಕ್ಕಿ – ರೂಪಕ

ಜಳ್ಳನ್ನು ಒಕ್ಕಿ ಒಕ್ಕಿ
ಹೊಟ್ಟನ್ನು ಕುಟ್ಟಿ ಕುಟ್ಟಿ
ತೌಡನ್ನು ಬೀಸಿ ಬೀಸಿ
ಬರಿದೆ ಬಳಲಿದೆ
ಕಿಟ್ಟವನು ಕಾಸಿ ಕಾಸಿ
ಮಸಿಯನ್ನು ಸೋಸಿ ಸೋಸಿ
ಗಾಳಿಯನು ಗುದ್ದಿ ಗುದ್ದಿ
ಬರಿದೆ ತೊಳಲಿದೆ
ಉತ್ಥಾನ ಪತನಗಳ ಕಣ್ಣು ಮುಚ್ಚಾಲೆಯನು
ಆಡಿಸುವ ಕಾಲನಿಗೆ ಕ್ರೀಡೆಯದುವೇ!
ಜನನಗಳ ಮರಣಗಳ ಹಾಸುಹೊಕ್ಕುಗಳಿಂದ
ಬದುಕಿನೊಲ್ಲಿಯನೆಯ್ವ ನೇಕಾರನವನೇ!
ನಿನ್ನ ಚಿತ್ರ ನೀನೆ ನಿಜ
ಆದರು ಅದು ಚಿತ್ರವೆ!
ಚಿತ್ರಕೆ ಚೈತನ್ಯ ಬರಲು
ಅರಳಿದಂತೆ ಚೈತ್ರವೆ!
ಹಳ ಬಾಳಿನ ಕೊಳೆಯ ತೊಳೆದು
ಹಳಮತಗಳ ಕಿಟ್ಟ ಕಳೆದು

ನಾವು ಪಡೆದ ನಾರನ್ನೇ
ರೇಷ್ಮೆಗೊಳಿಸುತ
ಒಂದಾಗುವ ಎಲ್ಲರೂ!
ದೇಶ ಭಕ್ತಿಯಲ್ಲಿ ಮಿಂದು
ಒಂದಾಗುವ ಎಲ್ಲರೂ
ಕೃಷಿಕರೂ ಶ್ರಮಿಕರೂ
ವಣಿಕರೂ ಮಲ್ಲರೂ
ಹರಿಜನರೂ, ಗಿರಿಜನರೂ
ಗೋಂಡರೂ, ಭಿಲ್ಲರೂ
ಒಂದಾಗುವ ಎಲ್ಲರೂ!

* * *

ಯಾವುದೋ ಮೋಹ – ರೂಪಕ

ಯಾವುದೋ ಮೋಹ
ಯಾವುದೋ ದಾಹ
ದಹಿಸುತ್ತಲಿಹುದು
ಯಾವುದೋ ಶಕ್ತಿ
ಜೀವನಾಸಕ್ತಿ
ಸಹಿಸುತ್ತಲಿಹುದು
ಗೂಡೇನೋ ನೋಡಲು ಪಾಡಾಗಿದೆ;
ಆದರೆ, ಒಳಗಿರುವುದು
ಕೋಗಿಲೆಯ ಮರಿಯೊ, ಕಾಗೆಯ ಮರಿಯೋ?
ಹಣ್ಣೇನೋ ಕಣ್ಣಿಗೆ ಬಣ್ಣದ ಔತಣವಾಗಿದೆ;
ಆದರೆ, ಒಳಗಿರುವ ರಸ
ಸಿಹಿಯೊ, ಕಹಿಯೊ?
ಬೆಳಕು ಸತ್ತು ಕತ್ತಲೆ ಹುಟ್ಟುತ್ತದೆ,
ಕತ್ತಲೆ ಸತ್ತು ಬೆಳಕು ಹುಟ್ಟುತ್ತದೆ;
ಆದುದರಿಂದ ಇವೆರಡೂ ಪರಸ್ಪರ ವಿರುದ್ಧವೇ?'
ಎಂಬ ಪ್ರಶ್ನೆ ಹುಟ್ಟುತ್ತದೆ.

* * *

ಸುದ್ದಿ ಬಂದಿದೆ!

ಸುದ್ದಿ ಬಂದಿದೆ–
ಮಲೆನಾಡಿನ ಮಡಿಲಿನಲ್ಲಿಯೇ
ಶವ ಸುಡಲು ಸೌದೆಯಿಲ್ಲವಂತೆ!
ಉರುವಲವೇ ಉರಿವ ಸಮಸ್ಯೆಯಾಗಿದೆಯಂತೆ!
ಆಗದೇನು?
ಹಿಮಾಲಯದ ಮೈಯಿಂದಲೂ
ವೃಕ್ಷ–ರೋಮಗಳ ಬೋಳಿಸುತ್ತಿಹರಂತೆ,
ವಿಂಧ್ಯಾದ್ರಿಯ ನೆತ್ತಿ ಬೊಕ್ಕವಾಗಿದೆಯಂತೆ,
ಸಹ್ಯಾದ್ರಿಯೀಗ ಅರೆ ಬೆತ್ತಲೆಯಂತೆ,
ಉಳಿದ ಗಿರಿಗಳಿಗೆ ಆಕಾಶವೇ ಅಂಬರವಂತೆ!
ಬಯಲು ಸೀಮೆಗಳಲ್ಲೋ
ಜಾಲಿಯ ಮರಗಳಿಗೂ ಬರವಂತೆ ಕುರಿಗಳಿಗೆ?
ಕಳ್ಳಿ ಗರಗಸವಳ್ಳಿಗಳೂ ಕಾಣೆಯಾಗುತ್ತಿವೆಯಂತೆ!
ಅಂದು ದ್ರೌಪದಿಯ
ವಸ್ತ್ರಹರಣ ನಡೆದಾಗ
ಅಕ್ಷಯಾಂಬರವೀವ
ಕೃಷ್ಣನಾದರೂ ಇದ್ದ
ಈಗ ನಮ್ಮ ಭೂಮಿತಾಯಿಯ
ವಿಪಿನ ವಸ್ತ್ರಹರಣ ನಡೆದಿದೆ!
ನೋಡಿಯೂ ನೋಡದಂತೆ ಕುಳಿತಿದ್ದಾರೆ
ಪೌರ–ಪಾಂಡವರು!
ಎಲ್ಲಿಂದಲೋ ಬರುವನೆ
'ಚಿಪ್ಕೋ' 'ಅಪ್ಕೋ'ಗಳ ಗರ್ಭದಿಂದುದಿಸಿ
ಎಚ್ಚೆತ್ತ ಜನಶಕ್ತಿಯ ಚಕ್ರಪಾಣಿ?
ಕಳಿಸುವನೆ ಕಾರಾಗೃಹಕ್ಕೆ
ಅರಣ್ಯ ಧ್ವಂಸಕರನ್ನು–
ಪರಿಸರ ವಿನಾಶಕರನ್ನು?
ಮತ್ತೆ ಮೈದೋರುವುದೆ

ವಿಪುಲ ವಿಪಿನಗಳಿಲ್ಲಿ?
ಡಳೆದು ಆಶಾವಲ್ಲಿ?

* * *

ಎಲ್ಲವೂ ರಹಸ್ಯವಿಲ್ಲಿ

ಎಲ್ಲವೂ ರಹಸ್ಯವಿಲ್ಲಿ
ರಹಸ್ಯವೇ ಉಪಾಸ್ಯವು
ಜ್ಞಾತದ ಕಣ್ಣೆದುರಿನಲ್ಲೆ
ಅಜ್ಞಾತದ ಲಾಸ್ಯವು
ಮಾತು ಹೂತು ಗೀತವಾಯ್ತು
ಮಾತು ಮಾತು ಮಥಿಸಲು
ತತ್ತ್ವರತ್ನ ಮೂಡಿ ಬಂತು
ಅಜ್ಞಾತವ ಕಥಿಸಲು
ಲೇಸೆನಿಸಲು ನಾಸಿಕಕೆ
ವಾಸನೆಯದೆ ಮೇಲು
ಲೇಸನೆಸಗೆ ಜೀವನಕೆ
ಅದೇ ತತ್ತ್ವ ಮೇಲು

* * *

ಬುದ್ಧಿ

ಯಾರೆನ್ನುವರು–
ಬುದ್ಧಿ ಹೆಚ್ಚಿಲ್ಲವೆಂದು?
ಶಕುನಿ
ಚಾಣಕ್ಯ
ಮೆರೆಯಾವೆಲ್ಲಿಯರು
ರಾಜಾಸ್ಥಾನಗಳಲ್ಲಿ ಮಾತ್ರವಲ್ಲ
ಹಳ್ಳಿ ಹಳ್ಳಿಗೂ ಹರಡಿರುವಾಗ
ಬುದ್ಧಿ ಹೆಚ್ಚಿಲ್ಲವೆಂದರೆ
ಬಿದ್ದು ಬಿದ್ದು ನಕ್ಕಾರು

ಪೆದ್ದರು ಕೂಡ!
ಎಂಥ ಮಹಾಪೂರ ಬಂದಿದೆ
ಇಂದು ಶುಷ್ಕ ಬುದ್ಧಿಗೆ-
ದುಷ್ಟ ಬುದ್ಧಿಗೆ?
ಇದರಿಂದ
ಬದುಕಿನ
ಎಡ ಬಲದ ಹೊಲಗಳ
ಬೆಳೆವ ಮ-
ಣ್ಣೆಲ್ಲ
ಕೊರೆದು ಹರಿದು ಹೋಗಿ
ಹುಲ್ಲಿದ್ದಲ್ಲಿ
ಕಲ್ಲು ಮೇಲೆದ್ದು
ಬೆಳೆಯುತ್ತಿದ್ದಲ್ಲಿ
ಗರಸು ಬಿದ್ದು
ಸ್ವಾರ್ಥದ ಕೊರಕಲು
ವಂಚನೆಯ ಬಿರುಕುಗಳು
ಸುಲಿಗೆಯ ಸರುವುಗಳು
ಮೈದೋರಿದರೇನಂತೆ?
ಇದಕೇಕೆ ಚಿಂತೆ?

* * *

ಅಸ್ತಿತ್ವದ ಏಕತ್ವದಿ - ರೂಪಕ

ಅಸ್ತಿತ್ವದ ಏಕತ್ವದಿ
ಲಯವಾಗಲಿ ನಾನಾತ್ವ
ನಾನೆಂಬುದೆ ನೀನಾಗಲು
ಇನ್ನೆಲ್ಲಿಯ ದ್ವಿತ್ವ?

ಗಂಗೆಯೊಳಗಣ ಕೊಳೆಯ
ತೆಗೆಯುತಿಹರು
ಅಂಗದೊಳಗಣ ದುರಿತ

ತೊಳೆವರಾರು?

ಈ ನೆರಳು ನನ್ನದಾಗಲಿ
ನೆರಳೇ ನಾನಲ್ಲ
ಬೆಳಕಿನ ಬಣ್ಣ ಬಲ್ಬಿನದಾಗಲಿ
ಬಲ್ಬೇ ಬೆಳಕಲ್ಲ!

ಬದುಕು ಭಾರವಾದಾಗ ಭಾರ,
ಹಗುರಾದಾಗ ಹಾರ!
ಬುದ್ಧಿಗಿಂತ ಕೆಳೆ ಹೆಚ್ಚೆ?
ಬದುಕಿನ ಕಳೆ ಹೆಚ್ಚೆ?
ನೆಮ್ಮದಿಯ ಬೆಳೆ ಹೆಚ್ಚೆ?

ಗಗನಗಾಮಿ ಬುದ್ಧಿಯ
ಪರಮ ಸಿದ್ಧಿ
ಸಿದ್ಧಿಗಳಲ್ಲಿ ಸಿದ್ಧಿಯೆನ್ನುವರು
ಬುದ್ಧಿವಂತರು!

'ತಮ್ಮ ಬುದ್ಧಿ ತಮ್ಮನೇ ತಿಂದಿತ್ತು' ಎಂಬ
ಸೂಳ್ನುಡಿಯ ಮರೆತವರು,
ಭ್ರಮೆಯಲ್ಲಿ ಬೆರೆತವರು!

ನಾಗಾಸಾಕಿ ಹಿರೋಷಿಮಾಗಳ
ಹೆತ್ತ ಬುದ್ಧಿ
'ತಾರಾ ಸಮರ' ಯೋಜನೆಯ
ಬೆನ್ನು ಹತ್ತಿದ ಬುದ್ಧಿ
ಬುದ್ಧಿಯಲ್ಲಿ

ಪ್ರಳಯಶಿಖಿ
ಮರಣಾನುಮುಖಿ!
ಈ ಟ್ರೋಜನ್ ಕುದುರೆಗೆ
ಲಗಾಮು ಹಾಕಿ
ಲಾಯಕ್ಕೆಳೆದು
ತೋಬರಿ ಕಟ್ಟುವ
ಸರದಾರ ಬರುವನೆ?

* * *

ಏನಿದು ಕವಿತೆಗಳೆ – ರೂಪಕ

ಏನಿದು ಕವಿತೆಗಳೆ–
ಬಂದರೆ ಒಂದರ ಹಿಂದೊಂದು ಬರುವಿರಿ
ಕೆ.ಎಸ್.ಆರ್.ಟಿ.ಸಿ.ಬಸ್ಸಿನಂತೆ;
ಬರದಿದ್ದರೆ ಎಷ್ಟು ಕಾದರೂ ಸುಳಿವಿಲ್ಲ
ಪೆನ್ನಾರ ನದಿಯ ಪಯಸ್ಸಿನಂತೆ!

ಸನಿಹಕ್ಕೆ ಸುಳಿಯುವೆ
ಕೈ ತಟ್ಟಿ ಓಡುವೆ
ಮುಟ್ಟು ಬಾ ಎನ್ನುವೆ
ಅಟ್ಟ ಹಾಸದಿ ನಗುವೆ
ಮಟ್ಟ ಮಾಯಾಗುವೆ
ಓ ಕವಿತೆ ಚೆಲುವೆ–
ನಿನಗೆ ಇದು ತರವೆ?

ಬರೆಯದ ಭಾಷೆಯ ಬಸಿರಿನಲಿ
ಒರೆಯದ ಭಾವದ ಉಸಿರಿನಲಿ
ಬದುಕಿನ ಅರ್ಥವ ಹುಡುಕೀ ಹುಡುಕೀ
ಕೊನೆಗೂ ತಣಿದೆನು ಕೊಸರಿನಲಿ!

ತಿಳಿದೂ ತಿಳಿಯದ ರಹಸ್ಯವೊಂದು
ಪರಿಹಾರ ಕಾಣದ ಸಮಸ್ಯೆಯೊಂದು
ಬದುಕನು ಬೆದಕೀ ಬೆದಕೀ ಬೆದಕೀ
ಕೊನೆಗೂ ಉಳಿಯಿತು ಪ್ರಶ್ನೆಯೊಂದು!
ಆ ಯೋಗವೊ, ಈ ಯೋಗವೊ,
ಬದುಕೆ ಹಿರಿಯ ಯೋಗವು;

* * *

ಭಾಗ್ಯದ ಬೆಳ್ಳಿ ಚುಕ್ಕೆ

ಮಧುಮಯವಾಯಿತು
ಈ ಮನೆ
ನೀ ಬರೆ

ಜೇನಿಲ್ಲದ ಹುಟ್ಟು
ಅದುವೆ
ನೀನಿರದಿರೆ!
ನೂರು ಸುಗ್ಗಿಗಳ
ಸಾರ ಸೇರಿತಿಲ್ಲಿ
ನೀನು ಕಾಲಿಕ್ಕೆ
ನೂರು ಶತಕಗಳ
ಸತ್ವ ತುಂಬಿತೆದೆಗೆ
ದೊರೆಯೆ ನಿನ್ನ ತೆಕ್ಕೆ
ರೋಮ ರೋಮದಲಿ
ಪ್ರೇಮಗಾನ
ಸುಧಾಪಾನ
ನಿನ್ನ ಚುಂಬನಕ್ಕೆ
ಮೈಯ ಕಣಕಣದಿ
ಪ್ರೇಮ ನರ್ತನ
ಪ್ರಣಯ ಕೀರ್ತನ
ನಿನ್ನೋರೆ ನೋಟಕ್ಕೆ
ಶುಷ್ಕ ತರುವಿನೊಲು
ಇದ್ದ ತನುವಿನಲಿ
ಕೊನರು ಪಲ್ಲವ
ಮೂಡಿ ಸಿದ್ಧವಿದೆ
ಫಲವ ಬಿಡುವುದಕ್ಕೆ
ಇನ್ನು ಮೂಡಲಿದೆ
ಬಾಳ ಬಾನಿನಲಿ
ಸೊಗದ ಸಗ್ಗದ
ನಮ್ಮ ಭಾಗ್ಯದ
ಬೆಳ್ಳಿ ಚುಕ್ಕೆ!

ಸದ್ಭೋಗದ ಸುವಿರಾಗದ
ಸುತ್ಯಾಗದ ಸಂಯೋಗವು.

ಬನ್ನಿ ಜಗಗಳೇ
ಬನ್ನಿ ಯುಗಗಳೇ
ಹೊಕ್ಕು ತುಂಬಿರೀ ಮನವ
ಅರಿಯಿರಿದನು
ಅನುಭವಿಸಿರಿದನು
ಈ ಘನಕ್ಕಿಂತ ಘನವ!
ಲೋಕ ಲೋಕಗಳೆ
ಹೊಸ ಮಹತ್ವವನು
ಈ ಅಲ್ಪದಲ್ಲಿ ನಿಂದು
ಹೊಸತು ಅರ್ಥವನು
ಕಲ್ಪ ಕಲ್ಪಗಳೆ
ಪಡೆಯಿರಿಲ್ಲಿ ಬಂದು!

* * *

ಕಮ್ಮರಿಯ ತುದಿಗೆ!

ನಿನ್ನುಡಿಯ ತುಂಬ
ನವರತ್ನ ತಾಯೆ
ನಾವಿಹೆವು ಬಡವರಾಗಿ!

ದುಡಿದುಣ್ಣದವರು
ಪಡೆದಾಳದವರು
ಕಪ್ಪರವ ಹಿಡಿದರಾಗಿ!

ನಿನ್ನನ್ನು ನಂಬಿ
ಕಣಜಗಳ ತುಂಬಿ
ಗೌರವದಿ ಬಾಳದವರು

ನಿನ್ನನು ಒಲಿಸಿ
ಸಿರಿ ಸೌಖ್ಯ ಬೆಳೆಸಿ
ತಮ್ಮನ್ನೆ ಆಳದವರು

ಎಲ್ಲವೂ ಇದ್ದು

ಏನೊಂದು ಇಲ್ಲ
ಜನಸಂಖ್ಯೆಯೊಂದ ಬಿಟ್ಟು

ತುಳಿಯುತ್ತಲಿಹುದು
ಶೋಷಣೆಯು ಜನರ
ನೂರಾರು ರೂಪ ತೊಟ್ಟು

ದಂಡಕ್ಕೆ ಉಂಟು
ಹೆಂಡಕ್ಕೆ ಉಂಟು
ಉಂಡುಡಲು ನಮಗೆ ಇಲ್ಲ!

ವೈರಗಳಿಗುಂಟು
ಸ್ವೈರಗಳಿಗುಂಟು
ಪ್ರೀತಿಸಲು ಸಮಯವಿಲ್ಲ!

ಉಳುವವರಿಗಿಲ್ಲ
ಬೆಳೆವವರಿಗಿಲ್ಲ
ಸುಲಿಯುವರಿಗುಂಟು ಇಲ್ಲಿ

ಬಳಲುವರಿಗಿಲ್ಲ
ಬಳಸುವರಿಗಿಲ್ಲ
ದೋಚುವರಿಗುಂಟು ಇಲ್ಲಿ

ದೇಗುಲದ ಶಿಲ್ಪ–
ಕೃತಿಗಳನು ಮಾರಿ
ದೇವರನೆ ಮಾರಿಯಾಯ್ತು!

ಅಡವಿಗಳ ಮಾರಿ
ಅದಿರನ್ನು ಮಾರಿ
ಮಾನವನೆ ಮಾರಿಯಾಯ್ತು!

ತಾಯ್ನುಡಿಗಳನ್ನು
ತೊತ್ತುಗಳ ಮಾಡಿ
ಹೊರನುಡಿಯ ಹೊತ್ತು ಮೆರೆಸಿ

ಆಳಾಗಿ ಮತ್ತೆ
ಕೀಳಾದೆವಮ್ಮ
ಬಳುವಳಿಯ ಒತ್ತೆಯಿರಿಸಿ!

ಕಮ್ಮರಿಯ ತುದಿಗೆ
ನಿಂತಿಹೆವು ಬಂದು
ತಡೆಯಮ್ಮ ಬೀಳದಂತೆ!

ಕೇಡುಗಳ ಮೆಟ್ಟಿ
ಕ್ಲೈಬ್ಯವನು ಕುಟ್ಟಿ
ಹರಸಮ್ಮ ಬಾಳುವಂತೆ!

* * *

ಪೊಡಮಡುವೆನು ನಿನ್ನ ಅಡಿಗೆ!

ಅಣ್ಣನ ಭಕ್ತಿ
ಅಕ್ಕನ ವಿರಕ್ತಿ
ಪ್ರಭುವಿನ ಪರಮಜ್ಞಾನ
ಸಂಗಮಿಸಿದುವಿಲ್ಲಿ
ಅಥಣಿಯಲ್ಲಿ
ಮಹಾಮಹಿಮ
ಮುರುಘೇಂದ್ರ ಶಿವಯೋಗಿಂದ್ರರ
ನಡೆಯಲ್ಲಿ
ನುಡಿಯಲ್ಲಿ
ಇಡಿಯ ಬೆಳಕಿನ ಬಾಳಿನಲ್ಲಿ!

ದೃಷ್ಟಿ
ಕೃಪಾವೃಷ್ಟಿ:
ವಾಣಿ
ಶುಭಸೃಷ್ಟಿ:
ಅಮೃತಸ್ಮಿತ,

ಕಂಡವ ಪುನೀತ;
ಸರ್ವಾಂಗಲಿಂಗ
ಮಂಗಲ ತರಂಗ;
ಮಹಾಜೀವನ,
ಭುವನ ಪಾವನ;
ನಿತ್ಯ ನೂತನ
ಶಿವಚೇತನ;
ಶಿವಯೋಗ ಸಮಾಧಿ
ಭಕ್ತರ ನವನಿಧಿ;

ಅರ್ಚನವಾವುದೊ
ಅರ್ಪಿತವಾವುದೊ
ಎಲ್ಲ ಅನುಭಾವ
ಜಾಗೃತವಾವುದೊ
ಸ್ವಪ್ನವಾದುದೊ
ಎಲ್ಲ ತುರೀಯ
ಇಹವಾವುದೊ
ಪರವಾವುದೊ
ಎಲ್ಲ ಜೀವನ್ಮುಕ್ತಿ
ಜನನವಾವುದೊ
ಮರಣವಾವುದೊ
ಎಲ್ಲ ಶಿವಶಕ್ತಿ!

ತೆರೆದೆದೆಗಳ
ಸಿಂಪುಗಳಿಗೆ
ಶಿವ-ಸ್ವಾತಿ
ಪರಂಜ್ಯೋತಿ
ದಿವ್ಯ ಪ್ರೀತಿ
ಆತ್ಮ ದೀಧಿತಿ

ಪೊಡಮಡುವೆನು
ನಿನ್ನ ಅಡಿಗೆ
ಅದರ ಹುಡಿಗೆ
ಧರ್ಮ ಮೂರುತಿ
ದೇಹ ಧರಿಸಿ ಮೆರೆದ ಪರಮ
ಶರಣ ಸಂಸ್ಕೃತಿ!

* * *

ಮರುಳಸಿದ್ಧನ ಕಂತೆ

ನಮನ

ಏನಿತ್ತೊ ಮೊದಲಲ್ಲಿ, ಏನಿಹುದೊ ಈಗಲೂ,
ಏನುಳಿವುದೋ ಕೊನೆಗೆ ಎಲ್ಲ ಲಯವಾಗೆ।
ಏನೆಂದು ಅರಿಯಲ್ಕೆ, ಒರೆಯಲ್ಕೆ ಬಾರದಾ
ಸ್ಥಾಣುವಿಗೆ ಶರಣೆನ್ನೊ, ಮರುಳಸಿದ್ಧ ॥ ೧ ॥

ಹರನಾಗಿ ಹರಣವನ್ನಿತ್ತು, ಸದ್ಗುರುವಾಗಿ
ಅರಿವಿನಮೃತವನೆರೆದು, ಜನತೆಯಾಗಿ।
ಪರಿಪರಿಯ ನೆರವಿತ್ತು, ಸವಿಯಿತ್ತ, ಸೊಗವಿತ್ತ
ಪರಮನಿಗೆ ಶರಣೆನ್ನು –ಮರುಳಸಿದ್ದ ॥ ೨ ॥

ಧರಣಿಗೆ ಶರಣೆನ್ನು, ಭರತಭೂಮಿಗೆ ಬಾಗು,
ಕರುನಾಡಿಗರ್ಪಿಸೆಲ ಸದ್ಭಕ್ತಿ ಸುಮವ।
ಶರಣರಿಗೆ, ದಾಸರಿಗೆ, ಸಿದ್ಧರಿಗೆ, ಶುದ್ಧರಿಗೆ
ಶಿರಬಾಗು, ನತನಾಗು– ಮರುಳಸಿದ್ಧ ॥ ೩ ॥

ಗಗನ ಬೆಳಕಿನ ಉಗಮ, ನಕ್ಷತ್ರ ಸಂಗಮವು,
ಸೊಗದ ಸರಿ, ಅಮೃತ ಝರಿ, ದಿವ್ಯತೆಯ ದಾರಿ।
ಅಗಣಿತೈಶ್ವರ್ಯಗಳ ಭಂಡಾರಿ, ರೂವಾರಿ,
ಹೊಗಳು ಈ ತಂದೆಯನು– ಮರುಳಸಿದ್ಧ ॥ ೪ ॥

ಗಂಧವತಿ, ರಸವಂತಿ, ರತ್ನಗರ್ಭೆಯು ಪೃಥ್ವಿ,
ಸುಂದರದ ಗಣಿ, ಶುಭದ ಚಿಲುಮೆ, ಶಿವದ
ಹಂದರದ ಹೂದಂಡೆ, ಆನಂದ ನಿಕ್ಷೇಪ,
ವಂದಿಸೀ ತಾಯಿಗೆ, ಮರುಳಸಿದ್ಧ ॥ ೫ ॥

ಜೀವನಕೆ ಅರ್ಥವನು, ಸೊಬಗನ್ನು, ಸಿರಿಯನ್ನು
ಯಾವುದೇ ರೂಪದಲಿ ರೀತಿಯಲಿ ನೀಡಿ।
ಭಾವನೆಯ ಬೆಳಗಿಸುವ, ಬುದ್ಧಿಯನು ತೊಳಗಿಸುವ
ಪಾವನರಿಗೆರಗು ನೀ – ಮರುಳಸಿದ್ಧ ॥ ೬ ॥

ನೀನರಿಯದಂತೆಯೇ ನಿನಗಾಗಿ ದುಡಿಯುತಿಹ
ಈ ನಾಡ, ಹೊರನಾಡ ಶ್ರಮಿಕ ಕೃಷಿಕರಿಗೆ।
ಮಾನವ ಕುಟುಂಬವನು ಉಳಿಸಿ ಬೆಳೆಸುವ ಸಕಲ
ಪ್ರಾಣಿಕೋಟಿಗೆ ನಮಿಸು– ಮರುಳಸಿದ್ಧ ॥ ೭ ॥

ನಮಿಸು ನೀ ಇತಿಹಾಸ ಉಲ್ಲೇಖಿಸದ ಜನರ
ಸಮೂಹ ಮಾಧ್ಯಮಗಳೂ ಲಕ್ಷಿಸದ ಜನರ।
ಅಮಿತ ಗುಣವಿದ್ದರೂ ಆಳುವರು, ಮೇಲ್–ಮಂದಿ
ಗಮನಿಸದ ಜನರನ್ನು– ಮರುಳಸಿದ್ಧ ॥ ೮ ॥

ಹಸಿದಾಗ ಒದಗುವುವು ಅಶನವಾಗೀದೇಹ
ವಶವಾಗೆ ರೋಗಕ್ಕೆ ಭಿಷಜವಾಗಿ।
ಸಸಿ ಕಂದ ಮೂಲಗಳು, ಹಸು ಮೇಷ ಮೀನಗಳು–
ನಸುಬಾಗು ಇವುಗಳಿಗೆ– ಮರುಳಸಿದ್ಧ ॥ ೯ ॥

ಯಾತದಿಂದಲೆ ಬರಲಿ, ಯಂತ್ರದಿಂದಲೆ ಬರಲಿ,
ಪಾತೆಗಳಿಗುದಕವದು ಬಂದರದೆ ಸಾಕು।
ಮಾತಿನಿಂದಲೆ ಬರಲಿ, ಮೌನದಿಂದಲೆ ಬರಲಿ,
ಪೂತ ಗುರುಕೃಪೆ ಬರಲಿ– ಮರುಳಸಿದ್ಧ ॥ ೧೦ ॥

* * *

ಕವನ

ಸುವಿವೇಕಿ, ದಾರ್ಶನಿಕ, ಕಲೆಗಾರ, ಲೇಸಿಗನು,
ಸವಿಗಾರ, ರಸಋಷಿಯು, ಬುದ್ಧಿ ಹೃದಯಗಳ।
ಹವಣರಿತ ಹದುಳಿಗನು– ಇತ್ಯಾದಿ ಎನಲೇಕೆ?
ಕವಿಯೆಂದು ಕರೆದುಬಿಡು– ಮರುಳಸಿದ್ಧ ॥ ೧೧ ॥

ಮಾಡು ಮಣ್ಣಿನ ಕವಿಯ, ನೀಡು ಜನಗಳ ಕಿವಿಯ,
ಮೂಡಿಸೆನ್ನೊಳು ಮಣ್ಣಿನೆದೆಯ ಹಾಡ।
ಬೂದಿ ಸಹ ಬೆಳೆಯುವುದು ಮಣ್ಣಿನೊಳು ಸೇರಿದರೆ,
ಮೋಡಿಯಿದೆ ಮಣ್ಣಿನಲಿ– ಮರುಳಸಿದ್ಧ ॥ ೧೨॥

ಬಾನವರನರ್ಚಿಸುತ, ದಾನಿಗಳ ಕೀರ್ತಿಸುತ,
ಮ್ಲಾನ ಕವಿಯಾಗುವಾ ಬಯಕೆಯೆನಗಿಲ್ಲ।
ದೀನರನು ಅರಿತು, ಅವರನೆ ಕುರಿತು ಬರೆವ ಸಾ–
ಮಾನ್ಯ ಕವಿಯಾಗಿಸೈ– ಮರುಳಸಿದ್ಧ ॥ ೧೩ ॥

ಜೀವನವು ಇತ್ತುದನೆ ಜೀವಿಗಳಿಗರ್ಪಿಸು:
ಭಾವವೊ, ವಿಭಾವವೊ, ಅನಿಸಿಕೆಯೊ, ಕನಸೊ।
ಆವುದನು ಮೆಚ್ಚುವರೊ, ಆವುದನು ಕೊಚ್ಚುವರೊ,
ಆ ವಿವರ ನಿನಗೇಕೆ–ಮರುಳಸಿದ್ಧ? ॥ ೧೪ ॥

ಚೊಕ್ಕ ಅನಿಸಿಕೆಗಳನು ತಕ್ಕ ಮಾತಿನೊಳಿಳಿಪ
ಪಕ್ವತೆಯ ಪಡೆಯುತ್ತ, ಬರೆಯತ್ತ ಸಾಗು।
ಲಾಕ್ಷಣಿಕರೊಪ್ಪಲಿ, ಬಿಡಲಿ– ನಿನ್ನಯ ಆತ್ಮ–
ಸಾಕ್ಷಿಯೊಪ್ಪಲು ಸಾಕು– ಮರುಳಸಿದ್ಧ ॥ ೧೫ ॥

ಕಾವ್ಯಧರ್ಮದೊಳಿಲ್ಲ ಸೇವ್ಯಸೇವಕಭಾವ,
ಭವ್ಯಾತ್ಮರೆಲ್ಲರೂ– ಬಡವ ಬಲ್ಲಿದರು।
ದಿವ್ಯ ಜೀವನ ಗಳಿಸೆ ಆಹ್ವಾನ ಸರ್ವರಿಗೆ!
ಆಹ್ವಾನ ಸ್ವೀಕರಿಸು– ಮರುಳಸಿದ್ಧ ॥ ೧೬ ॥

ಗೊಬ್ಬರಕೆ ಋಣಿಯೆಂದು ಕಬ್ಬನವಹೇಳಿಪುದೆ–
ಬೊಬ್ಬುಳಿಯ ಬಳಿ ಇರಲು ಬಾವನ್ನವ? ।
ಕಬ್ಬಿಗನ ಕುಲ ನೆನೆದು ಕಬ್ಬವನು ತೆಗಳುವುದೆ?
ಬರ್ಬರತೆ ತರವಲ್ಲ– ಮರಳಸಿದ್ಧ ॥ ೧೭ ॥

ತೇಲಬಿಟ್ಟಿಹೆ ನಿನ್ನ ಗೀಳು ರೂಪಿಸಿದಂಥ
ಜಾಳು ಜಾನಿಕೆಗಳೀ ಹಾಳಿ ಹಡಗಗಳು।
ಕಾಲ ಪ್ರವಾಹದಲಿ। ಮುಳುಗಿದರೆ ಮರುಗದಿರು,
ಕೇಳಿಗಾಗಿಯೆ ಕೇಳಿ– ಮರುಳಸಿದ್ಧ ॥ ೧೮ ॥

ಸಕ್ಕರೆಯ ಖಡ್ಗವನು ಮುಕ್ಕದಿರುವುವೆ ಇರುವೆ?
ನೆಕ್ಕುವುದೆ ಪ್ಲಾಸ್ಟಿಕ್ ಪುಷ್ಪಗಳ ದುಂಬಿ?
ಲೆಕ್ಕಿಪುದೆ ಕವಿ ಕೃತಿಯ ಆಕೃತಿಯ, ಗಾತ್ರವನು?
ಸಿಕ್ಕರಾಯಿತು ಸವಿಯು–ಮರುಳಸಿದ್ಧ ॥ ೧೯ ॥

ಹಾಡುವವನಿಗು ಹಿಗ್ಗು, ಕೇಳುವವಗೂ ಹಿಗ್ಗು,
ಹಾಡೆಂದರೇ ಹಿಗ್ಗು, ಮುದದ ಮೊಗ್ಗು।
ಹಾಡು ಬಾಳಾಗಿರಲಿ, ಬಾಳು ಹಾಡಾಗಿರಲಿ,
ಬೇಡಿದನೆ ಬದುಕಿನಲಿ– ಮರುಳಸಿದ್ಧ ॥ ೨೦ ॥

ಜೀವನದ ಪ್ರತಿಬಿಂಬ, ಜೀವನದ ಗತಿಬಿಂಬ,
ಯಾವುದೇ ಆಗಿರಲಿ ಸಾಹಿತ್ಯವು।
ಜೀವನಕೆ ಹೊರತಾಗಿ ಜೀವ ತಳೆವುದೆ ಹೇಳು?
ಜೀವನದ ಸಾರವದು– ಮರುಳಸಿದ್ಧ ॥ ೨೧ ॥

ಬಾಲಕರು ನಲಿವಂತೆ ಬರೆವುದನು ಕಲಿಸಯ್ಯ–
ಬಾಲಕರು ಬಲಿವಂತೆ ಮಾಡುವುದ ಕಲಿಸು।
ಬಾಲಕರ ಮನ ಬುದ್ಧಿ, ದೇಹಗಳು ಬೆಳವಂತೆ
ಪಾಲಿಸುವುದನು ಕಲಿಸು– ಮರುಳಸಿದ್ಧ ॥ ೨೨ ॥

ಜನಪದರು ಕುಣಿವಂತೆ ಬರೆವುದನು ಕಲಿಸಯ್ಯ–
ಜನಪದರು ಬೆಳೆವಂತೆ ಮಾಡವುದ ಕಲಿಸು।
ಜನಪದರ ಏಳ್ಗೆಯೇ ಜನಪದದ ಏಳ್ಗೆಯು–
ಕೊನರಿಸವರಾಸೆಗಳ– ಮರುಳಸಿದ್ಧ ॥ ೨೩ ॥

ಕವಿಯಾಗಿ ಉಳಿಯುವುದು ಕಷ್ಟವೇ, ಜನರೊಡನೆ
ಸವಿಯಾಗಿ ಬಾಳುವುದು ಅದಕು ಕಷ್ಟ।
ಶಿವದ ಶೋಧನೆ ಭವದ ಸಫಲತೆಯು ಕರಕಷ್ಟ
ಸುವಿವೇಕವಿರೆ ಸುಲಭ– ಮರುಳಸಿದ್ಧ ॥ ೨೪ ॥

ಮಾಂತ್ರಿಕತೆ ಬರುವುದು ಮಾತಿಗನುಭಾವದಿ;
ತಾಂತ್ರಿಕತೆಯಿಂದಲ್ಲ, ಬೆಡಗಿನಿಂದಲ್ಲ।
ಯಾಂತ್ರಿಕ ಕ್ರಿಯೆಯಲ್ಲ ಸೃಜನಕ್ರಿಯೆ; ಮೈದೋರು–
ವಂತೆ ಮರದಿಂ ಚಿಗುರು– ಮರುಳಸಿದ್ಧ ॥ ೨೫ ॥

* * *

ಭುವನ

ಕೋಟಿ ಜ್ಯೋತಿರ್ವರ್ಷ ದಾಟಿದರು ಮುಗಿಯದಿಹ
ನೋಟವಿದಕೇನೆಂಬೆ? ಸ್ಥಲ–ಕಾಲ ಯುಗಳ–
ದಾಟವೆಂಬೆಯ? ನಿತ್ಯಸತ್ಯವೆಂದೆಂಬೆಯಾ?
ಮಾಟವಲ್ಲದ ಮಾಟ– ಮರುಳಸಿದ್ಧ ॥ ೨೬ ॥

ವೈಚಿತ್ರ್ಯಗಳ ಗಣಿಯು, ಅದ್ಭುತಗಳಾಗರವು,
ರೋಚಕಗಳಾಲಯವು, ರಮ್ಯಗಳ ಸದನ।
ಮಾಚಿಹ ರಹಸ್ಯಗಳ ಭಂಡಾರವೀ ವಿಶ್ವ
ಆಶ್ಚರ್ಯಗಳ ಮನೆಯು– ಮರುಳಸಿದ್ಧ ॥ ೨೭ ॥

ಏನಿದೆಯೊ ಬಾನಾಚೆ, ಆಚೆಗೂ ಆಚೆಯಿದೆ!
ಜ್ಞಾನಕಾಮೆಯ ಗತಿಯು; ಸ್ಪರ್ಧಿಸುವುದೆಂತು–
ಆನಂತ್ಯದೊಡನೆಯೆ? ತಿಳಿದಷ್ಟು ತಿಳಿದುಕೋ!
ಮೌನವಿದೆ ಆಮೇಲೆ– ಮರುಳಸಿದ್ಧ ॥ ೨೮ ॥

ಅಸುವು ಮೂಡುವುದೆಂತು? ಪ್ರೀತಿಯಂಕುರ ಹೇಗೆ?
ರಸದ ಸೆಲೆಗಳು ಎಲ್ಲಿ? ಬಾಳಿನಲ್ಲಿ।
ಹುಸಿಯ ಬೇರುಗಳೆಲ್ಲಿ ? ಹಿತದ ಮೂಲಗಳೆಲ್ಲಿ?
ಮಸಕು ಮಸಕೆಲ್ಲವೂ– ಮರುಳಸಿದ್ಧ ॥ ೨೯ ॥

ಹೇಗೆ ಹುಟ್ಟಿತೊ ವಿಶ್ವ, ಹೇಗೆ ನಿಂತಿರುವುದೋ,
ಹೇಗೆ ಪರ್ಯವಸಾನ ಹೊಂದುವುದೊ– ಅರಿದು!
ಈಗಿರುವುದಂತು ನಿಜ, ನಿಜದನಿಜವದರೊಳಗೆ–
ಮೇಘದಲಿ ಮಿಂಚಿನೊಲು– ಮರುಳಸಿದ್ಧ ॥ ೩೦ ॥

ಧರೆಯೆ ದೇಗುಲ, ಗಗನ ಗೋಪುರವು, ಜೀವಿಗಳೆ
ಚರಲಿಂಗ, ಪ್ರೀತಿಪುದೆ ಪೂಜೆಯಿಲ್ಲಿ ।
ಅರಿವೆ ದೀಪವು, ಕ್ರಿಯೆಯೆ ಧೂಪ. ದಾಸೋಹವ್ರತ
ಪರಮ ನೈವೇದ್ಯವೈ– ಮರುಳಸಿದ್ಧ ॥ ೩೧ ॥

ಪೊಡವಿ ಗುಡಿ, ಜೀವ ಶಿವ, ಕಡಲುಗಳು ತೀರ್ಥಗಳು,
ಉಡುಗಣವು ಪುಷ್ಪಗಳು, ಇನಶಶಿಯೆ ದೀಪ।
ಗುಡುಗು ಸಿಡಿಲೇ ಮಂತ್ರ, ಸಕಲರುಸಿರೇ ಧೂಪ,
ಒಡಲನೊಪ್ಪಿಸೆ ಪೂಜೆ– ಮರುಳಸಿದ್ಧ ॥ ೩೨ ॥

ಪೊಡವಿಯೇ ಗುಡಿಯಾಗೆ ಬೇರೆ ಗುಡಿಗಳು ಬೇಕೆ?
ನಡೆವ ಗುಡಿ ಕೋಟ್ಯಾನುಕೋಟಿಯಿರಲು।
ಬಡಬಡಿಸುತಿಹೆಯೇಕೆ ಗುಡಿಗುಡಿಯು ಗುಡಿಯೆಂದು?
ಒಡಲು ಗುಡಿ, ಜೀವ ಶಿವ–ಮರುಳಸಿದ್ಧ ॥ ೩೩ ॥

ಕೊನೆಗೊಮ್ಮೆ ಕಂಡೆನು ನಿನ್ನ ನಿಜ ಮಂದಿರವ–
ಕೊನೆಯಿರದ ವಿಶ್ವದೀ ದಿವ್ಯದೇಗುಲವ।
ಎಣೆಯಿರದ ಈ ಗುಡಿಯು ಇದ್ದರೂ ಇದುವರೆಗೆ
ಮಿನಿಗುಡಿಯ ನಂಬಿದ್ದೆ– ಮುರಳಸಿದ್ಧ ॥ ೩೪ ॥

ಧ್ಯಾನಸ್ಥಶಿವ ಗಿರಿಯು, ಹರಿವ ಗಂಗೆಯೆ ಗಿರಿಜೆ,
ಮೌನವೇ ಶಿವ ಮಾತು, ಗೀತೆ ಗಿರಿಜೆ।
ಪ್ರಾಣ ಶಿವ, ತನು ಗಿರಿಜೆ, ಜ್ಞಾನ ಶಿವ, ಕ್ರಿಯೆ ಗಿರಿಜೆ,
ಗಾನ ಶಿವ, ತಾನ ಶಿವೆ– ಮರುಳಸಿದ್ಧ ॥ ೩೫ ॥

ಚಿತ್ರಶಾಲೆಯು ವಿಶ್ವ, ಪ್ರತಿಯೊಂದು ಚಿತ್ರವೂ
ನಿತ್ಯನೂತನ ನನಗೆ, ಚೈತನ್ಯಪ್ರದವು।
ಅತ್ಯಮೂಲ್ಯವು ಚಿತ್ರಸೃಷ್ಟಿಯಿದು, ನೋಡಿ ಪಡೆ
ಸತ್ಪಾತಿಶಯವನ್ನು– ಮರುಳಸಿದ್ಧ ॥ ೩೬ ॥

ವಿಶ್ವಸ್ವರಸಂಗಮವು ಎಷ್ಟು ಹೃದಯಂಗಮವು!
ಪಶ್ವಾದಿ ಮನುಜಾಂತ ಸ್ವರಗಳೆನಿತು!
ನಿಶ್ವಾಸವೆಲ್ಲವೂ ವಿಶ್ವಾತ್ಮನೊಬ್ಬನ–
ಐಶ್ವರ್ಯ ಬಾಳಿಗಿದು– ಮರುಳಸಿದ್ಧ ॥ ೩೭ ॥

ನಕ್ಷತ್ರಗಳ ರಂಗವಲ್ಲಿ ಆಗಸದಲ್ಲಿ,
ವಕ್ಷದಡಿಯಲಿ ನೆರಳ ರಂಗವಲ್ಲಿ!
ವಕ್ಷಾಂತದಲಿ ಭಾವಗಳ ರಂಗವಲ್ಲಿ– ಇವು
ನಿಕ್ಷೇಪ ಹರ್ಷಕ್ಕೆ – ಮರುಳಸಿದ್ಧ ॥ ೩೮ ॥

ಕಣಕಣದಿ ಕುಣಿಯುತಿಹ ನಟರಾಜ, ದಿವರಾತ್ರಿ
ಚಣಚಣದಿ ನಲಿಯುತಿಹ ಕಾಲೇಶ್ವರ।
ಅಣುವಿಗಣುವಾಗುವೆ, ಚಣಕೆ ಚಣವಾಗುವೆ,
ಚಿನುಮಯನೆ ಕೃಪೆದೋರು– ಮರುಳಸಿದ್ಧ ॥ ೩೯ ॥

ಅಡವಿಡದೆ ಸಾಲವನು ಕೊಡದ ಸೆಟ್ಟಿಯೆ ನಿನಗೆ
ಒಡಲನೇ ಅಡವಿಟ್ಟೆ, ಕೊಡು ಸಾಲವ!
ಪೊಡವಿಯನು ಕೇಳೆನಾ, ಕಡವರವ ಕೇಳೆ ನಾ–
ಕೊಡು ಕೃಪೆಯ ಸುಧೆಯನ್ನು – ಮರುಳಸಿದ್ಧ ॥ ೪೦ ॥

ಚಿತ್ರಕರು ಬಂದರು, ಚಿತ್ರಕರು ಹೋದರು
ಚಿತ್ರಕರ ಚಿತ್ರಕನು ಉಳಿದಿರುವನು!
ನಿತ್ಯನವಚಿತ್ರಗಳ ಬರೆಯುತ್ತ, ಒರೆಸುತ್ತ
ಚಿತ್ರಲೀಲೆಯೊಳಿಹನು– ಮರುಳಸಿದ್ಧ ॥ ೪೧ ॥

ಮೇಘರಥಗಳನೆಳೆಯೆ ವಾಯುಗಳೆ ಹಯಗಳು
ವಾಘೆ ಹಿಡಿದಿಹನಾರೊ, ರಥಿಕನಾರೋ।
ವೇಗವ ನಿಯಂತ್ರಿಸುವ ಕಡಿವಾಣ ಕಾಣಿಸದು!
ಮೂಗವಾಗಿದೆ ಮತಿಯು- ಮರುಳಸಿದ್ಧ ॥ ೪೨ ॥

ಅಲ್ಲಿ ಶಶಿಯುದಿಸಿದರೆ ಇಲ್ಲಿ ಕಡಲುಕ್ಕುವುದು,
ಇಲ್ಲಿ ಬೆಳೆ ಬತ್ತಿದರೆ ಅಲ್ಲಿ ಕಣ್ಣೀರು!
ಎಲ್ಲ ಒಂದಿಲ್ಲೊಂದು ನಲ್ಮೆಯಲಿ ಬಂಧಿತವೆ?
ಒಲ್ಲೆಯೇತಕೆ ನನ್ನ- ಮರುಳಸಿದ್ಧ? ॥ ೪೩ ॥

ಜೀವ ಜಲನಿಧಿ ವಿಶ್ವ, ಜೀವಿಗಳೆ ಕಾಲ್ಗಳು,
ಭಾವಿಸಲು ಬದುಕೆ ಹೊಲ, ಗದ್ದೆ, ತೋಟ।
ಓವಿ ಒಲವಿನ ಬೆಳೆಯ, ಬೆಳೆಗೆ ಒದಗಿಸಿ ನೀರ,
ಸಾವುದೇ ಜೀವನವು- ಮರುಳಸಿದ್ಧ ॥ ೪೪ ॥

ಭೂಗಗನದೊಟ್ಟಂದ ಆನಂದದರವಿಂದ-
ಆಗಲ್ಲಿ ಬಂಡುಣಿಯು, ಧನ್ಯತೆಯ ಪಡೆವೆ।
ಆಗಾಗ ರಸಭಂಗವಾದರದು ಕಬ್ಬಿನ
ಸೋಗೆಯೆಂದರಿ ನೀನು- ಮರುಳಸಿದ್ಧ ॥ ೪೫ ॥

ತಾರೆಗಳ ಎಣಿಸುವೆಯ? ದೂರಗಳ ಗುಣಿಸುವೆಯ?
ನೂರು ವರ್ಷದ ವಯದಿ ಇದು ಸಾಧ್ಯವೆ?।
ನೂರಾರು ನಕ್ಷತ್ರ ವಿಜ್ಞಾನಿಗಳು ಸೇರಿ
ತೋರಿದುದು ತಿಲಮಾತ್ರ- ಮರುಳಸಿದ್ಧ ॥ ೪೬ ॥

ಎತ್ತಲೂ ಚಿತ್ರಗಳು, ಎತ್ತಲೂ ನೃತ್ಯಗಳು,
ಎತ್ತಲೂ ಗೀತೆಗಳು, ಗಂಧಗಳು ಇಲ್ಲಿ।
ಆತ್ಮೀಯವಾಗುವುವು ಕೆಲವು ಮಾತ್ರವೆ, ಬಹಳ
ವಿಚಿತ್ರವಿದು ಜಗದಲ್ಲಿ- ಮರುಳಸಿದ್ಧ ॥ ೪೭ ॥

ಭಾವಕೋಶಕ್ಕಿರುವ ಆದಾಯ ಮೂಲಗಳು
ಯಾವು ಯಾವೆಂದೊಮ್ಮೆ ಆರಯ್ದು ನೋಡು।
ಜೀವ ಜಡವೆಂದೆನದೆ ವಿಶ್ವವೆಲ್ಲವನೊಲಿಯೆ
ಸಾವಿರದ ಮೂಲಗಳು- ಮರುಳಸಿದ್ಧ ॥ ೪೮ ॥

ಆವುದಚ್ಚರಿ ಜಗದಿ? ನಕ್ಷತ್ರ ಮಂಡಲವೊ?
ಜೀವಕೋಟಿಯೊ, ಕಡಲೊ, ಗಿರಿದರಿಗಳೊ?
ಭೂವ್ಯೋಮಗಳ ತನ್ನ ತೆಕ್ಕೆಯಲಿ ಒಳಗೊಳುವ
ಭಾವನೆಯೆ ಅಚ್ಚರಿಯೋ– ಮರುಳಸಿದ್ಧ ॥ ೪೯ ॥

ಹುಟ್ಟುಮನೆ, ತಂಗುಮನೆ, ಸಾವುಮನೆ–ಧರೆಯಿದನು
ಬಿಟ್ಟಾವ ಬೇರೆ ಮನೆಯಿದೆಯೊ ನಿನಗೆ?
ಕೊಟ್ಟಷ್ಟು ಅವಧಿಯಲಿ, ಸಿಕ್ಕ ಸೌಕರ್ಯದಲಿ
ಇಷ್ಟವನು ಬೆಳೆಯಿಲ್ಲಿ– ಮರುಳಸಿದ್ಧ ॥ ೫೦ ॥

ಈ ಲೋಕವತಿಥೇಯ, ನಾವಿಲ್ಲಿ ಅತಿಥಿಗಳು,
ಪಾಲಿಗಿರುವನಿತು ದಿನ ನಯವಾಗಿ ಇದ್ದು।
ಕಾಲುಷ್ಯ ಬೆಳೆಸದೆಯೆ, ಸಂತುಲನವಳಿಸದೆಯೆ
ಕಾಲು ತೆಗೆಯಲು ಬೇಕು– ಮರುಳಸಿದ್ಧ ॥ ೫೧ ॥

ತಾಯಿಯುದರದಿ ಮಲವು ಇದೆಯೆಂದು ತಾಯಿಯೇ
ಹೇಯವೆಂದೆನಬಹುದೆ? ಮೈಯಿತ್ತ ಜಗವ।
ಮಾಯೆಯೆಂದೆನಬಹುದೆ– ಜಡವು, ನಶ್ವರವೆಂದು?
ತಾಯಿಯೆಂದರಿ ಜಗವ– ಮರುಳಸಿದ್ಧ ॥ ೫೨ ॥

ಭೂಮಾತೆ ಪರಿಪೂತೆ ವರದಾತೆ ಸುಖಸರಿತೆ
ಕಾಮಿತಗಳೆಲ್ಲವನು ಪೂರೈಪ ಖ್ಯಾತೆ।
ಪ್ರೇಮಲತೆ ತೊಟ್ಟಿಡುವ ಜೇಂಗೊಡವು, ತರುಸಸ್ಯ–
ಶ್ಯಾಮಲೆಯ ಹಳಿಯುವುದೆ– ಮರುಳಸಿದ್ಧ? ॥ ೫೩ ॥

ಅನ್ನ ನೀರನು ಕೊಡುವ, ಹಣ್ಣು ಹಾಲನು ಕೊಡುವ,
ಚಿನ್ನರನ್ನವ ಕೊಡುವ, ಎಲ್ಲ ಕೊಡುವ।
ಪುಣ್ಯ ಜನನಿಯು ಭೂಮಿ, ಧನ್ಯನಾಗಿವಳನ್ನು
ಸನ್ನುತಿಸಿ, ಸೇವಿಸಿ– ಮರುಳಸಿದ್ಧ ॥ ೫೪ ॥

ಇತ್ತೊಂದು ನಕ್ಷತ್ರ ಸಿಡಿಯುತಿರೆ ಅತ್ತೆಲ್ಲೊ
ಮತ್ತೊಂದು ನಕ್ಷತ್ರ ಮೈದೋರದೆ?
ಅತ್ಯಗಾಧವು ವಿಶ್ವ; ಸತ್ತುದೆನಿತೋ ಅಷ್ಟೆ
ಹುಟ್ಟುವುದು ಇದರಲ್ಲಿ– ಮರುಳಸಿದ್ಧ ॥ ೫೫ ॥

ಹಾಗಂತೆ, ಹೀಗಂತೆ, ಹೇಗೆ ಹೇಗೋ ಅಂತೆ,
ಈ ಗೋಲಗಳ ಉಗಮ ಅಂತೆಗಳ ಕಂತೆ।
ಭೂಗೋಲವಿದು ಸತ್ಯ, ನೀಗಿಸಿಲ್ಲಿಯ ಕೃತ್ಯ;
ಮಾಗು ಮಾಡುತ್ತಲೇ– ಮರುಳಸಿದ್ಧ ॥ ೫೬ ॥

ಈ ಬೆಳಕಿನಾಚೆಗಿದೊ ಕತ್ತಲೆಯು, ಕಾಳಿಯೆಯು,
ಆ ಬಳಿಕ ಇರಬಹುದು ಬೇರೊಂದು ಬೆಳಕು।
ತೂಬು ಕತ್ತಲೆ–ಕೆರೆಗೆ ಬೆಳಕು, ಬೆಳಕಿನ ತೊರೆಗೆ
ಕಾವಳವೆ ಕಟ್ಟೆಯೆಲ– ಮರುಳಸಿದ್ಧ ॥ ೫೭ ॥

ಬೆಟ್ಟದಾಚೆಯ ಬನವು ದಿಟ್ಟಿಗೆಟುಕದಿರೇನು,
ಕಟ್ಟುಕತೆಯೆನಬಹುದೆ ಕಾಣದುದನೆಲ್ಲ?
ದಿಟ್ಟಿಗಿಹುದೈ ಪಾರ, ಸೃಷ್ಟಿಯಪರಂಪಾರ.
ನಿಟ್ಟಿಲ್ಲ ನಿಟ್ಟಿಗೆಲ– ಮರುಳಸಿದ್ಧ ॥ ೫೮ ॥

ಸೃಷ್ಟಿಯಾದುದಕೆಲ್ಲ ಸ್ಥಿತಿಲಯಗಳಿರುವಂತೆ
ನಷ್ಟವಾದುದಕುಂಟು ಸೃಷ್ಟಿ ಮತ್ತೆ।
ಇಷ್ಟದಿಂ ಹುಟ್ಟುವುದನಿಷ್ಟವದರಿಂ ಮತ್ತೆ
ಹುಟ್ಟದಿರದಿಷ್ಟವು– ಮರುಳಸಿದ್ಧ ॥ ೫೯ ॥

ಅರಮನೆಯ ನೋಡಿದಗೆ ತರವೆ ಬಚ್ಚಲುಮೋರಿ
ಬರಿ ಹೊಲಸು ಎಂದೆನುವ ಹೊಲಸುತನವು?
ಪರಿಪರಿಯ ಚೆಲುವಿಹುದು ಬುವಿಯಲ್ಲಿ, ಬಾನಿನಲಿ,
ಬರಿ ಹೊಲಸ ಹುಡುಕದಿರು– ಮರುಳಸಿದ್ಧ ॥ ೬೦ ॥

ಕೆಡುಕು ಹೆಚ್ಚಿದೆಯೆಂದು ಬಿಡಬಹುದೆ ಮರ್ತ್ಯವನು–
ಸಿಡುಕು ಹೆಚ್ಚಿದೆಯೆಂದು ಹಡೆದವಳನು?
ಹುಡುಕಿದರೆ ಸಿಕ್ಕವೇ ಎಲ್ಲದರೊಳೂ ಐಬು?
ಬಿಡು ಬಿಡುವ ಭ್ರಮೆಯನ್ನೆ– ಮರುಳಸಿದ್ಧ ॥ ೬೧ ॥

ಕಸವ ರಸವಾಗಿಸುವ ಕಸಬು ಬಲ್ಲವಗೆಲ್ಲಿ
ವಸುಧೆಯಲಿ ಬೇಡಾದ ವಸ್ತು ವಿಷಯಗಳು?
ಅಸುಗೆ ಮೇಲೇನಲ್ಲ ಕೊಸಗು ಕೀಳೇನಲ್ಲ–
ರಸಿಕನಿಗೆ ಸಮವೆಲ್ಲ– ಮರುಳಸಿದ್ಧ ॥ ೬೨ ॥

ಪಕ್ವವಾಗುವ ತನಕ ವಕ್ಷದೊಂದಿಗೆ ಸಹಜ
ಸಖ್ಯ ಕಾಯಿಗೆ; ಮಾಗೆ ಮುಕ್ತಿಯದಕೆ।
ಪಕ್ವವಾಗುವವರೆಗೆ ನೀನು ಸಹ ಜಗದೊಡನೆ
ಸಖ್ಯವುಳ್ಳವನಾಗೊ– ಮರುಳಸಿದ್ಧ ॥ ೬೩ ॥

ಮರ್ತ್ಯಲೋಕವ ಬಿಟ್ಟು ಇನ್ನಾವ ಲೋಕವಿದೆ–
ಮರ್ತ್ಯರ ವಿಕಾಸಕ್ಕೆ, ಉಲ್ಲಾಸಕೆ?
ವ್ಯರ್ಥ ಪರದಾಕಾಂಕ್ಷೆ, ಮರ್ತ್ಯದಲ್ಲಿಯೆ ನಿನ್ನ
ಸಾರ್ಥಕತೆಯನು ಕಾಣು– ಮರುಳಸಿದ್ಧ ॥ ೬೪ ॥

ಹೆಸರರಿಯದಿದ್ದರೂ ಖುಷಿ ಕೊಡವೆ ಕುಸುಮಗಳು?
ತೃಷೆಯಳಿಸವೇ ಹೆಸರು ಗೊತ್ತಿರದ ಸರಸಿ?
ವಸುಧೆಯೇ ಮನೆಯೆನ್ನೆ ಹೆಸರುಗಳ ಗಿಸರುಗಳ
ಗಸಣೆಯೆಲ್ಲಿಯೆಂದ– ಮರುಳಸಿದ್ಧ ॥ ೬೫ ॥

ನೆಲವೆ ತೊಟ್ಟಿಲು, ಹಸುರು ಹಾಸುಗೆಯು, ಮಿನುಗುತಿಹ
ಜಲಬಿಂದುವೇ ಕಂದ, ತೂಗುತಿಹ ತಾಯಿ।
ಎಲರು, ಜೋಗುಳ ಭೃಂಗ ವಿಹಗಂಗಳಿನಿದನಿಯು,
ನಲವು ನೋಡಿದ ಜನಕೆ– ಮರುಳಸಿದ್ಧ ॥ ೬೬ ॥

ದ್ರಾಕ್ಷಿ ಪ್ರಕೃತಿಯ ದಾನ, ಮದಿರೆ ನರ ನಿರ್ಮಾಣ,
ಇಕ್ಷು ಪ್ರಕೃತಿಯ ದಾನ, ಸುರೆ ನರನ ಕೊಡುಗೆ!
ಲಕ್ಷ್ಮಿಯೊಲು ಪ್ರಕೃತಿ, ವಿಧಿಲಕ್ಷ್ಮಿಯೊಲು ನರವಿಕೃತಿ!
ರಕ್ಷಿಸೈ ಪ್ರಕೃತಿಯನು– ಮರುಳಸಿದ್ಧ ॥ ೬೭॥

ಪ್ರಕೃತಿ ಸೃಜಿಸುವುದೆಲ್ಲ ಚೆಂದ, ಬಂಧುರ, ಸುಭಗ–
ವಿಕೃತಗೊಳಿಸುವೆವದನು ಅವಿವೇಕತನದಿ।
ಪ್ರಕೃತಿಯಿಂ ಪಡೆದನಿತ ಪ್ರಕೃತಿಗೀಯುತ್ತಿಹುದೆ
ಸುಕೃತವೆಂದರಿಯೆಂದ–ಮರುಳಸಿದ್ಧ ॥ ೬೮ ॥

ಕಾಲನೀ ತಿಗರಿಗೆ ಸ್ಥಲ ನೀಡುವರಲಿಂದ
ಸಲೆ ಪಾತ್ರೆಗಳ ಮಾಡಿ ಭವದ ಆವಿಗೆಯ।
ಜ್ವಾಲೆಗಳೊಳುರೆ ಸುಟ್ಟು ನಸುಕಾಲ ಇರಗೊಟ್ಟು
ಲೀಲೆಗೈವವನಾರು– ಮರುಳಸಿದ್ಧ ? ॥ ೬೯ ॥

ಅರಿತದ್ದು ಒರತೆ ಸರಿ, ಅರಿಯದುದು ಶರಧಿ ಸಮ,
ಧರೆಯೊಂದರೊಳೆ; ತಾರೆ ಗ್ರಹ ಗೋಲಸೇರಿ।
ಇರುವ ಅದ್ಭುತ ವಿಶ್ವ ನರನರಿವಿಗೆಟಕುವುದೆ?
ಪರಿಮಿತವು ನರಮತಿಯು– ಮರುಳಸಿದ್ಧ ॥ ೭೦ ॥

* * *

ಜನನ

ಬತ್ತಬಹುದಂಬುಧಿಯು, ಬತ್ತದಿದು ಜೀವಝರಿ
ಮೃತ್ಯುವಿನ ಮರುಭೂಮಿಯಲ್ಲಿ ಸಹಿತ।
ಪತ್ರ ಫಲ ಪುಷ್ಪಗಳು ಉದುರುವುವು, ಜೀವದ್ರುಮ
ಮತ್ತೆ ಚಿಗುರುವುದಿಲ್ಲ– ಮರುಳಸಿದ್ಧ ॥ ೭೧ ॥

ಬಿಸಿಲು ಒಣಗಿಸಿ ಹೋಗೆ ಮಳೆಯು ಕೊನರಿಸುವಂತೆ
ಅಸುವ ಸೆಳೆಯುವ ಕೈಯೆ ಕುಸುರಿಸುವುದಿಲ್ಲಿ।
ಹೊಸ ಜೀವಿಗಳ ಮೊದಲೆ; ರಸವು ಬತ್ತುವ ಮುನ್ನ
ಒಸರುವುದು ಹೊಸರಸವು– ಮರುಳಸಿದ್ಧ ॥ ೭೨ ॥

ತೆರೆಯೊಂದು ಸುಳಿಯುವುದು, ಮರಳಿ ಮರೆಯಾಗುವುದು.
ತೆರೆಯಿತ್ತು ಮೊದಲು, ಇದೆ ಮರೆಯಾದ ಮೇಲೂ।
ಅರಿಯೆ ನೀನದರುಗಮ ವಿಲಯನ ಸ್ಥಾನಗಳ–
ತರವೆ ಶಂಕಿಪುದದನು– ಮರುಳಸಿದ್ಧ? ॥ ೭೩ ॥

ಆಗಮನಗಳು ಎನಿತೊ ನಿರ್ಗಮನಗಳು ಅನಿತು,
ಯೋಗವೆನಿತೋ ಕ್ಷೇಮವನಿತು ಇಲ್ಲಿ।
ಬೇಗುದಿಯು ಬೇಡ ಹೋಗುವುದು ಬರುವುದು ಎಂದು–
ಸಾಗು ಸಮತೆಯ ನಂಬಿ– ಮರುಳಸಿದ್ಧ ॥ ೭೪ ॥

ಬೀಜಗಳನುಳಿಸಿಯೇ ಬೀಸುಕಲ್ಲಿಗೆ ಕಾಳಿ–
ನಾಜ್ಯವನ್ನೆರೆ; ಭೂಜ ಕಡಿವ ಮೊದಲು।
ಬೀಜಗಳ ಕಾಯ್ದುಕೋ ಹುಳು ಮುಟ್ಟದೊಲು! ಮೂಲ
ಯೋಜನೆಯೆ ಬೀಜದಲಿ– ಮರುಳಸಿದ್ಧ ॥ ೭೫ ॥

ಬಟ್ಟೆಯೆಂದೆನಬಹುದೆ ರಾಷ್ಟ್ರಧ್ವಜವನು? ಗೀತ–
ಮಾತ್ರವೆಂದೆನಬಹುದೆ ನಾಡಹಾಡ?।
ಶ್ರೇಷ್ಠತೆಯನಳೆಯದಿರು ಹುಟ್ಟಿನಾಧಾರದಲಿ:
ಮಟ್ಟದಿಂ ಮೇಲ್ಮೆಯೆಲ– ಮರುಳಸಿದ್ಧ ॥ ೭೬ ॥

ಬೀಜ ಬಿತ್ತಿದ ಕೈಯೆ ಕಾಯುವುದು ಬೆಳೆಯನ್ನು,
ಸಾಜದಲಿ ಕುಯ್ಯುವುದು ಬೆಳೆಯು ಫಲಿಸೆ।
ಸೋಜಿಗದ ಕ್ರಮವಿದನೆ ವಿಶ್ವದಂತಃಶಕ್ತಿ
ಯೋಜಿಸಿದೆಯೆಲ್ಲೆಲ್ಲು– ಮರುಳಸಿದ್ಧ ॥ ೭೭ ॥

ಇದ್ದ ಗ್ರಹ ಸಾಲವೆನೆ ಉಪಗ್ರಹಗಳೆದ್ದಿಹುವು,
ಇದ್ದ ಜನರಿಗೆ ಕೆಲಸವಿಲ್ಲದಿರುವಾಗ।
ಉದ್ಭವಿಸಿದರು ಗಣಕಮಾನವರು, ನಳಿಕೆಯಿಂ–
ದೆದ್ದ ಹೊಸ ಮಾನವರು– ಮರುಳಸಿದ್ಧ ॥ ೭೮ ॥

ಮುನ್ನೋಟವಿಲ್ಲದೀ ಪ್ರಜನ ಪೈಪೋಟಿಯು
ಇನ್ನೆಲ್ಲಿಗೊಯ್ಯುವುದೊ ಮಾನವರ ಕುಲವ!।
ಚಿನ್ನಾಟ ಕೆಲವರಿಗೆ, ಸಂಕಟವು ಸರ್ವರಿಗೆ:
ನಿನ್ನಾಟವಾವುದೋ– ಮರುಳಸಿದ್ಧ? ॥ ೭೯ ॥

ಅಕ್ರಮವು ಹಡೆದವರ ಸಂಬಂಧವೆಂ ದವರ
ಮಕ್ಕಳೂ ಅಕ್ರಮರೆ? ಸಕ್ರಮರೆ ಅವರು!।
ವಕ್ರ ತರ್ಕವ ನೆಮ್ಮಿ ಕೃತ್ರಿಮ ವಿಭೇದಗಳೆ?
ಶುಕ್ರಶೋಣಿತವೊಂದೆ– ಮರುಳಸಿದ್ಧ ॥ ೮೦ ॥

* * *

ಜೀವನ

ಮರುಹುಟ್ಟು ಇದೆಯೊ, ಇಲ್ಲವೊ– ಎಂದು ಪೇಚಾಡಿ
ಇರುವ ಹುಟ್ಟನು ವ್ಯರ್ಥಗೊಳಿಸಲೇಕೆ?
ಕರದೊಳಿರೆ ಕನ್ನಡಿಯು ನೀರನೋ ಕಂಚನೋ
ಅರಸುವುದೆ ಮುಖತೋರೆ– ಮರುಳಸಿದ್ಧ? ॥ ೮೧ ॥

ಹುರುಳಿಹುದೆ ಬಾಳಿನಲಿ? ತಿರುಳಿಹುದೆ ಬದುಕಿನಲಿ?
ಇರುವುದೆಂದರೆ ಇಹುದು, ಇಲ್ಲೆನಲು ಇಲ್ಲ।
ಒರತೆಯನು ತೋಡದೆಯೆ ಜರೆಯದಿರು ಹಳ್ಳವನು:
ಇರವಿನಾಳದಿ ಹುರುಳು– ಮರುಳಸಿದ್ಧ ॥ ೮೨ ॥

ಜಗವನಾಳಿದರೆಲ್ಲ ಮಗುವಾಗಿ ಜನಿಸಿದರೆ,
ಮಿಗೆ ಮಹಾನದಿಗಳೂ ಮೊದಲು ಹಳ್ಳಗಳೆ।
ಅಗಲವನು, ಆಳವನು, ಎತ್ತರನು ಆರ್ಜಿಸುವ
ಬಗೆಯಿರಲು ಹನಿ ವನಧಿ– ಮರುಳಸಿದ್ಧ ॥ ೮೩ ॥

ಹರಿವ ನೀರಿಗೆ ತಗ್ಗು ಎದುರಾಗೆ ತುಂಬುವುದು,
ಬರೆ ತೆವರು ಸುತ್ತಿಯದ ಕರಗಿಸುವುದು।
ಅರಗಲ್ಲು ಅಡ್ಡಾಗೆ ಕೊರೆ ಕೊರೆದು ನುಗ್ಗುವುದು,
ಇರವು ಸಾಗಲಿ ಹೀಗೆ– ಮರುಳಸಿದ್ಧ ॥ ೮೪ ॥

ಬಾಳ ಬಿರುಗಾಳಿಗಳು ಧೂಳಿಯೆಬ್ಬಿಸಬಹುದು,
ಕೀಳುವುವೆ ಬಾಳನೇ ಮೂಲ ಸಹಿತ?।
ತಾಳುವುದು ಕೆಲಕಾಲ: ತಾಳಿದರೆ ಆದೀತು
ಕಾಳಕೂಟವೆ ವಿಷವು– ಮರುಳಿಸಿದ್ಧ ॥ ೮೫ ॥

ಸುಲಭ ಹಾದಿಯ ಹಿಡಿದು ವಕ್ರವಪ್ಪುದು ಹಳ್ಳ,
ಸುಲಭ ಯಶದಾಸೆಯಲಿ ತಪ್ಪುವನು ನರನು।
ಅಲೆ ಅಂಕು ಡೊಂಕೆಂದು ವಂಕವಪ್ಪುದೆ ವನಧಿ?
ಒಲಿಯದಿರು ವಕ್ರತೆಗೆ– ಮರುಳಸಿದ್ಧ ॥ ೮೬ ॥

ನೆಲದಿ ಕರಗುವ ಹಿಮವು ಕರಗದದು ಹಿಮಗಿರಿಯ
ತಲೆಯ ಸೇರಿದ ಮೇಲೆ – ಔನ್ನತ್ಯಬಲದಿ।
ಕಲಿ ಮೇಲುಮಟ್ಟದಲಿ ನೆಲೆಯೂರಿ ನಿಲ್ಲುವುದ;
ಬಲವದುವೆ ಬಾಳ್ವುದಕೆ– ಮರುಳಸಿದ್ಧ ॥ ೮೭ ॥

ಶಿಲೆ ನೀನೆ, ಶಿಲ್ಪಿಯೂ ನೀನೆ, ಮೂರ್ತಿಯು ನೀನೆ,
ಕಲೆ ನೀನೆ, ಕೌಶಲ್ಯ ಕರ್ಮ ನೀನೆ!
ನೆಲೆ ನೀನು ಸಕಲಕ್ಕೆ, ನೆಲೆ ನೀತಿ ಮತಗಳಿಗೆ,
ಬಲೆ ನೀನು ಬ್ರಹ್ಮಕ್ಕೆ– ಮರುಳಸಿದ್ಧ ॥ ೮೮ ॥

ಹಾಲಿನಿಂದಲೆ ತುಪ್ಪ, ತುಪ್ಪವೇ ಹಾಲಲ್ಲ;
ಕೂಳಿನಿಂದಲೆ ರಕ್ತ. ರಕ್ತ ಕೂಳಲ್ಲ;।
ಬಾಳಿನಿಂದಲೆ ತತ್ತ್ವ, ತತ್ತ್ವವೇ ಬಾಳಲ್ಲ;
ಬಾಳು ತೊರೆ, ತತ್ತ್ವ ದಡ– ಮರುಳಸಿದ್ಧ ॥ ೮೯ ॥

ದಾರಿ ತೋರುವ ಕಲ್ಲು ದಾರಿಕಾರನ ಜೊತೆಗೆ
ಸೇರುವುದೆ ಪಯಣದಲಿ? ಜೀವನದ ಪಥವ
ತೋರುವಾದರ್ಶವೋ, ದರ್ಶನವೊ, ಧರ್ಮವೋ
ದಾರಿ ತೋರಲು ಮಾತ್ರ– ಮರುಳಸಿದ್ಧ ॥ ೯೦ ॥

ಹರಿವ ನೀರಿಗು ಬೇಕೆ ನಿಂತ ನೀರಿನ ಹಾಗೆ
ತೆರೆಯನೆಬ್ಬಿಸೆ ಗಾಳಿಯುಪಕಾರವು?
ಚರಿಸುವನ ಭಾಗ್ಯವೂ ಚರಿಸುವುದು ಅವರಿವರ
ನೆರವನ್ನು ಕೋರದೆಯೆ– ಮರುಳಸಿದ್ಧ ॥ ೯೧ ॥

ಇಂದಿನಿಂದುವು ಹಿಂದಿನರ್ಕ ನೀಡಿದ ಬೆಳಕ
ಹೊಂದಿ ಮೆರೆವುದು; ಅದುವೆ ರವಿ ಮುಂದಿನ।
ಇಂದುವಿಗೆ– ಎಂದರಿದು ಇಂದೀಗ ಅಣಿಯಾಗು
ಅಂದಂದಿನುಜ್ಜುಗಕೆ– ಮರುಳಸಿದ್ಧ ॥ ೯೨ ॥

ತಿರೆಯ ಸೆಳೆತವ ಮೀರಿ ಮೇಲೇರುವವಗಿರಲಿ
ಮರಳಿ ತಿರಗೈತರುವ ಪರಿಯ ಅರಿವು।
ಪರಮಾಣು ಶಕ್ತಿಯನು ಪಡೆದವನಿಗಿದು ನಮ್ಮ
ಇರವಿಗೆಂಬರಿವಿರಲಿ– ಮರುಳಸಿದ್ಧ ॥ ೯೩ ॥

ಬರುವಾಗ ಕೇಳಿಲ್ಲ, ಹೋಗುವಾಗಲು ನಿನ್ನ
ಬರುವೆಯೇನೆಂದೊಮ್ಮೆ ಕೇಳರಾರೂ।
ಇರುವನಕ ಕೇಳದೆಯೇ ಲೇಸನೆಸಗೆಲ್ಲರಿಗೆ–
ತರುವಾಯ ಏನಿದೆಯೋ– ಮರುಳಸಿದ್ಧ ॥ ೯೪ ॥

ಅನ್ಯರಾದರು ನನಗೆ ನನ್ನವರೆ ಎನ್ನುತ್ತ
ಬನ್ನಬಡುವುದು ಬೇಡ; ಅನ್ಯರೇ ನಾಳೆ।
ನಿನ್ನವರು ಆದಾರು, ನಿನ್ನಾಚಿಗಾದಾರು–
ನಿನ್ನ ನೀ ನಂಬಿದರೆ– ಮರುಳಸಿದ್ಧ ॥ ೯೫ ॥

ನೀನೊಬ್ಬಗಾದೆಯೋ ನಿನಗೊಬ್ಬನಾಗುವನು–
ನೀನು ನೆರವಾದವನೊ, ಬೇರೊಬ್ಬನೋ!
ಮಾನವರಿಗಾದವನೆ ಮಾನವನು– ಪ್ರತಿಫಲದ
ಕಾಣಿಕೆಯ ಕೇಳದೆಯೆ– ಮರುಳಸಿದ್ಧ ॥ ೯೬ ॥

ನನ್ನಲ್ಲಿ ನೀನಿರುವೆ ವ್ಯಷ್ಟಿಯಲ್ಲಿ, ಸಮಷ್ಟಿಯಲಿ
ನಿನ್ನಲ್ಲಿ ನಾನಿರುವೆ ನನಗರಿಯದಂತೆ!
ಬಣ್ಣವಿದೆ ಚಿನ್ನದಲಿ, ಚಿನ್ನವಿದೆ ಬಣ್ಣದಲಿ–
ಅನ್ಯತೆಯ ಭಾವ ಭ್ರಮೆ– ಮರುಳಸಿದ್ಧ ॥ ೯೭ ॥

ತೆರೆಯು ಕುಣಿತವೆ ತನ್ನ ಗುರಿಯೆಂದರೇನಾಯ್ತು?
ಹರಿಯುವುದು ತೊರೆಯೊಡನೆ ಶರಧಿಯನಕ।
ನರನರನ ಗುರಿ ಬೇರೆ, ಅದರ ಸಾಧನೆ ಮಾತ್ರ
ಸರುವರೇಳ್ಗೆಗೆ ಬಾಗಿ- ಮರುಳಸಿದ್ಧ ॥ ೯೮ ॥

ಗಂಧಕ್ಕೆ ಹೂವಿನಲಿ ಬಂಧ ಸ್ವಚ್ಛಂದಗಳು
ಸಂದಿಹವು ಒಮ್ಮೆಗೇ- ನಿನಗು ಕೂಡ
ಒಂದಡಿಯು ಸ್ವಚ್ಛಂದ, ಇನ್ನೊಂದು ಮಂದಿಯನು
ಹೊಂದಿ ನಡೆಯುವ ನಿಯಮ- ಮರುಳಸಿದ್ಧ ॥ ೯೯ ॥

ಬಾಳಿನಲಿ ನೊಂದವರ, ಗೋಳಿನಲಿ ಬೆಂದವರ,
ಖೂಳರಿಂ ಬಂಧನದಿ ಕಂದಿ ಕುಂದಿದರ।
ಆಲೋಕಿಸಿಯು ಕಣ್ಣುಮುಚ್ಚಿಕೊಂಡಿರುವುದೇ
ಕಾಳಿಮೆಯು ಬಾಳುವೆಗೆ- ಮರುಳಸಿದ್ಧ ॥ ೧೦೦ ॥

ತನಗಾಗಿ ಸುರಿಸಿದರೆ ಕಣ್ಣೀರು ಬರಿ ನೀರು,
ಜನಕಾಗಿ ಸುರಿಸಿದರೆ ಆಣಿಮುತ್ತು।
ತನಗಾಗಿಯೆಂದುದೆಲ್ಲವು ಅರಿಯೆ ಅಭಿಶಾಪ-
ಜನಕಾಗಿಯೆನೆ ವರವು- ಮರುಳಸಿದ್ಧ ॥ ೧೦೧ ॥

ದೇವನನು ಪ್ರೀತಿಪನು ಜೀವಿಗಳ ದ್ವೇಷಿಪನೆ?
ಜೀವ ಸಂತೃಪ್ತಿಯೇ ದೇವನಿಗೆ ಪೂಜೆ!
ಜೀವಿಯನು ನಿರ್ಜೀವಕಾಹುತಿಯನಾಗಿಸುವ
ಧಾವತಿಯು ಧರ್ಮವೆ- ಮರುಳಸಿದ್ಧ? ॥ ೧೦೨ ॥

ಶಿಲುಬೆ, ಸ್ವಸ್ತಿಕ, ಬಿದಿಗೆ ಚಂದ್ರ ರೋಧಿಸುತಿಹವು-
ಕೊಲೆಗೆ ತಮ್ಮನು ಬಳಸಿಕೊಂಡಿರುವರೆಂದು!
ಸಲಹಲೆಂದೈತಂದ ಮತಧರ್ಮಗಳೆ ಜನರ
ಬಲಿಕೊಳ್ಳೆ ಗತಿಯಾರು- ಮರುಳಸಿದ್ಧ? ॥ ೧೦೩ ॥

ಕೆಸರು ಬಂದರೆ ದಾಟಿ ಹೋಗುವುದು ಜಾಣತನ;
ಕೆಸರಾಟಕಿಳಿಯುವುದು ಹುಂಬತನವು!
ಕೆಸರಿನಲ್ಲಿಯೆ ಕಮಲ ಬೆಳೆಯುವುದು ಶರಣತನ,
ಕುಶಲತನವಿದ ಗಳಿಸು- ಮರುಳಸಿದ್ಧ ॥ ೧೦೪ ॥

ಕೆಳಗಿಳೆಯೆ ದಾನವನು, ಮೇಲೇರೆ ಬಾನವನು,
ನೆಲದಿ ನಲ್- ಬಾಳಿದರೆ ಮಾನವನು ನೀನು!
ಕೆಳಗಿಳಿವುದೂ ಬೇಡ, ಬಾನ ಭ್ರಮೆಯೂ ಬೇಡ,
ಕಲಿ ಮನುಜನಾಗುವುದ- ಮರುಳಸಿದ್ಧ ॥ ೧೦೫ ॥

ಮೋಹಗಳ ದಾಳಿಯಲಿ, ದಾಹಗಳ ತೂಳಿಯಲಿ
ಸಾಹಸ ಪರೀಕ್ಷೆಯಿದೆ ಆಹವಕ್ಕಿಂತ!
ಆಹ್ರಿಮನ್ನನೊ, ಮಾರ, ಸೈತಾನನೋ- ಅವನ
ವ್ಯೂಹವನು ಮುರಿದೊಟ್ಟೊ- ಮರುಳಸಿದ್ಧ ॥ ೧೦೬ ॥

ಬಿತ್ತಿದಂತೆಯೆ ಬೆಳೆಯು, ಚಿತ್ತದಂತೆಯೆ ಬಾಳು,
ಹೊತ್ತಿನಂತೆಯೆ ಉಡುಪು, ಊಟೋಪಚಾರ।
ಹುತ್ತದಂತೆಯೇ ಹಾವು, ಭತ್ತದಂತೆಯೆ ಅನ್ನ
ಇತ್ತಂತೆಯೇ ಪ್ರಾಪ್ತಿ- ಮರುಳಸಿದ್ಧ ॥ ೧೦೭ ॥

ಮನದ ವಿಶ್ಲೇಷಣೆಯ ಸಾಕಷ್ಟು ಮಾಡಿರುವೆ,
ಮನದ ಏಕೀಕರಣ ಸಾಧಿಸಿನ್ನು!
ಹೆಣೆ ಮನದ ನೂರಾರು ಎಳೆಗಳಿಂದಲೆ ಕೊನೆಗೆ
ಘನಮನವ ನಿನ್ನೊಳಗೆ-ಮರುಳಸಿದ್ಧ ॥ ೧೦೮ ॥

ನಗರ ಮಾರ್ಗದ ಹಾಗೆ ಬಗೆಯ ಗತಿಯಾಗಿಹುದು-
ಅಗಿವರೊಬ್ಬರ ಮೇಲೆ ಇನ್ನೊಬ್ಬರದನು!
ನಗೆಯೊ ಹೊಗೆಯೊ ಧಗೆಯೊ, ಬಗೆ ಬಗೆಯ ಭವಣೆಗಳೊ
ಬಗೆಯನೂ ಅಗಿಯುವುವು- ಮರುಳಸಿದ್ಧ ॥ ೧೦೯ ॥

ನನ್ನೊಳಿದೆ ಮುನ್ನೀರು, ಮುನ್ನೀರಿನೊಳು ಮುತ್ತು,
ಇನ್ನುವರಮೆನಗೆಯೇ ಸಿಕ್ಕಲಿಲ್ಲ!
ತನ್ನೊಳೇನಿದೆಯೆಂದು ತನಗೆ ತಿಳಿದಿರದಿಹುದೆ
ಬನ್ನಗಳ ತವರೆ ಸರಿ- ಮರುಳಸಿದ್ಧ ॥ ೧೧೦ ॥

ಚಿತ್ತದೊಳಗಣ ಕಡಲ ಮುಳುಗಿದರೆ ಸಿಕ್ಕಾವು
ಮುತ್ತುಗಳೋ, ರತ್ನಗಳೊ, ಹವಳ ಸಿಂಪುಗಳೊ।
ಚಿತ್ರದೊಳಗಣ ಕಡಲ ಮುಳುಗಲಹುದೆ? ಛಾಯೆ
ವಸ್ತುವಿಗೆ ಸಾಟಿಯೆ- ಮರುಳಸಿದ್ಧ? ॥ ೧೧೧ ॥

ಕಾನು ಮಲೆ ಸುತ್ತಿರುವ ಕಿರಿಯ ಕೆರೆಯೊಳಗಿಳಿದ
ಲೂನ್ ಪಕ್ಷಿಯ ಹಾಗೆ ಅಲ್ಪತನಕೊಲಿದು।
ಹಾನಿಗೀಡಾಗದೆಯೆ ಭೂಮಾತಿಭೂಮದಲಿ
ಸ್ಥಾನವನು ಗಳಿಸಿಕೋ– ಮರುಳಸಿದ್ಧ ॥ ೧೧೨ ॥

ಕುರುಪತಿಯ ಅರಮನೆಯು ಸರಿಯೆ ವಿದುರನ ಮನೆಗೆ?
ಸುರಪತಿಯ ವನ ಸರಿಯೆ ಶಬರಿವನಕೆ?
ಪರಮತೆಯು ಮನದಿಂದ; ಮನದ ಸಿರಿಯಿರೆ ಕುಟಿಯೆ
ಅರಮನೆಗು ಮಿಗಿಲೆಂದ– ಮರುಳಸಿದ್ಧ ॥ ೧೧೩ ॥

ಹಿಗ್ಗಿಸಲು ಜಗದಗಲ, ಕುಗ್ಗಿಸಲು ತನ್ನಗಲ,
ಬಗ್ಗಿಸಲು ಆಳು, ತಾ ಬಗ್ಗಿ ದರೆ ಆಳ್ದ।
ಎಗ್ಗನಿಗೆ ಮಾಯೆಯೊಲು, ಸದ್ಗುಣಿಗೆ ತಾಯಿಯೊಲು,
ಸಗ್ಗ ನರಕವು ಮನವು– ಮರುಳಸಿದ್ಧ ॥ ೧೧೪ ॥

ಒಡೆಯದಿರು ಕನ್ನಡಿಯ, ಮಾನಸದ ಕನ್ನಡಿಯ,
ಒಡೆದ ಮೇಲದರಲ್ಲಿ ಹುಡುಕುವುದೆ ಹದುಳ?
ಒಡೆದುದನು ಕೂಡಿಪುದು, ಬಿಡಿಯನಿಡಿಯಾಗಿಪುದು
ಕಡವರವು ಜೀವನಕೆ– ಮುರುಳಸಿದ್ಧ ॥ ೧೧೫ ॥

ಗೊತ್ತಾದ ಬಳಿಕೆಲ್ಲ ತಥ್ಯಗಳು ಅತಿ ಸುಲಭ–
ಹೆತ್ತ ಮೇಲಾ ಹೆರಿಗೆ ಹಗುರೆನಿಸುವಂತೆ।
ಬಿತ್ತರದ ಪ್ರಕೃತಿಯಲಿ, ಚಿತ್ರದಲಿ ಸ್ಥಿತ ಸತ್ಯ
ಗೊತ್ತಾಗುವುದೆ ಬರಿದೆ– ಮರುಳಸಿದ್ಧ? ॥ ೧೧೬ ॥

ಜೀವನದ ದೇವತೆಗೆ ಜೀವಿಸುವುದೇ ಪೂಜೆ,
ಭಾವ ಬುದ್ಧಿಯ ಖಾದ್ಯ ನೈವೇದ್ಯವು।
ದೈವನಿಷ್ಠೆಯ ಜೊತೆಗೆ ಸಾಹಸಪ್ರಯತ್ನಗಳು
ದೀವಿಗೆಯು ಧೂಪಗಳು– ಮರುಳಸಿದ್ಧ ॥ ೧೧೭ ॥

ಜೀವನವು ಜೋಕಾಲಿ, ನೋವೆ ಹಿಂಜೀಕೆಂಬೆ,
ಭಾವಿಸಲು ಮುಂಜೀಕು ನಲವು– ನಗೆಯು।
ಯಾವುದು ಬಿಡುವಿಯೀ ಎರಡು ಜೀಕುಗಳಲ್ಲಿ?
ಆ ವಿಚಾರವನೆ ಬಿಡು– ಮರುಳಸಿದ್ಧ ॥ ೧೧೮ ॥

ಬಾಳುವೆಯೆ ಹೋಳಿಗೆಯು, ಬುದ್ಧಿ ಕಣಕವು, ಭಾವ
ಬೇಳೆ ಬೆಲ್ಲದ ಬೆರಕೆ– ಹೂರಣವು ನೋಡು।
ಹಾಳತಾಗಿರಬೇಕು ಎರಡರೊಳು ಪರಿಮಾಣ,
ಹಾಳು ಹದತಪ್ಪಿದರೆ– ಮರುಳಸಿದ್ಧ ॥ ೧೧೯ ॥

ಸುತ್ತಿಗೆಯ ಪೆಟ್ಟುಗಳು ಬಿದ್ದನಿತು ಕಾರ್ಬೊನ್ನು
ಗಟ್ಟಿಗೊಳ್ವುದು; ಎಸೆಯೆ ತುಕ್ಕುಹಿಡಿದು ।
ಸತ್ವಗೆಡುವುದು; ಅಂತೆ ಮಾನವನ ಜೀವನವು;
ಕಷ್ಟದಲೆ ಕಳೆಯದಕೆ – ಮರುಳಸಿದ್ಧ ॥ ೧೨೦ ॥

ನಖಿಕ್ಷತಕೆ ಅಂಜಿದರೆ ರತಿಸುಖವು ಸಾಧ್ಯವೆ?
ಮುಖಿಕ್ಷಾರಕಲಸಿದರೆ ಮೊಗದಂದ ಬಹುದೆ?
ಸುಖ ಕಷ್ಟಪಟ್ಟವಗೆ, ದುಃಖ ಸೋಮಾರಿಗೆ
ನಿಖಿಲ ಜೀವಿಗಳಲ್ಲಿ – ಮರುಳಸಿದ್ಧ ॥ ೧೨೧ ॥

ಸುಖಕೆ ಹಂಬಲಿಸಿದರೆ ದುಃಖದನುಭವ, ಬಂದ
ದುಃಖವನೆ ಬಕ್ಕರಿಸೆ ಸುಖದ ಸೋಂಕು!
ಮಖವು ಜೀವನಸಖನೆ, ಯಜ್ಞಕುಂಡವು ದುಃಖ,
ಸುಖವು ಆಜ್ಯವು ಅದಕೆ – ಮರುಳಸಿದ್ಧ ॥ ೧೨೨ ॥

ನೇರ ಮರವಿದ್ದೊಡೇಂ ಬೇರು ಡೊಂಕಾಗಿರವೆ?
ಆ ರೆಂಬೆ ಕೊಂಬೆಗಳು ವಂಕಾಗದಿಹವೆ?
ಏರುಪೇರುಗಳಿಲ್ಲಿ ಸಹಜ ; ಭೀರುತೆ ಬೇಡ ;
ಧೀರತನವೇ ದಾರಿ – ಮರುಳಸಿದ್ಧ ॥ ೧೨೩ ॥

ಬೀಳುತ್ತ, ಏಳುತ್ತ, ಹೋರುತ್ತ, ಏರುತ್ತ,
ತಾಳುತ್ತ ಸೋಲುಗಳ ಶೂಲಗಳನು /
ಬಾಳುವುದೆ ಬಾಳು, ಗೋಳಾಡುವುದೆ ಹಾಳು, ನೀ
ಬಾಳು ಗೋಳಾಡದೆಯೆ – ಮರುಳಸಿದ್ಧ ॥ ೧೨೪ ॥

ಬಾಳವೆಯೆ ಬೇಳುವೆಯೆ? ಇರಲಿ ಬಿಡು, ಬೆಂದಾಗ
ಭಾಳ ರುಚಿ ಎಲ್ಲವೂ; ಬೇಯುತ್ತಲೇ।
ಕಾಳಿಕೆಯ ಕಳಕೊಂಡು ಢಾಳಿಸಲಿ ಫಳಫಳನೆ
ಬಾಳ ಬಂಗಾರವಿದು– ಮರುಳಸಿದ್ಧ ॥ ೧೨೫ ॥

ಕಡಲೆಕಾಯೆಣ್ಣೆಯಲೆ ಕಡಲೆ ಕಾಳನು ಕರಿಯೆ
ಕಡುರುಚಿಯು! ಅಂತೆಯೇ ಬದುಕು ನಮಗೆ।
ಕೊಡುವ ವಿಷದಲೆ ಬದುಕ ಕರಿದಾಗ ತೋರುವುದು
ಷಡುರುಚಿಯ ಮೀರ್ದ ರುಚಿ– ಮರುಳಸಿದ್ಧ ॥ ೧೨೬ ॥

ಹಳವಂಡ ಹುಳುಗೊಂಡ, ಚಿಂತೆ ಬೆಂಕಿಯ ಕುಂಡ,
ಕಳವಳವು ತಳಮಳವು ಸುಡುವೆಣ್ಣೆ ಕೊಂಡ।
ಒಳಗಿಹುದು ರೌರವವು, ಯಮಪುರಿಯೊಳಿಲ್ಲ ವದ
ತಿಳಿದುಕೋ, ಕೆಳೆದುಕೋ– ಮರುಳಸಿದ್ದ ॥ ೧೨೭ ॥

ಹಿಡಿಯುವುದು ಕುಸ್ತಿಯನು ಕೆಡುಕಿನೊಡನೆಯೆ, ಹಿಡಿದು
ಕೆಡಹುವುದು ಕೆಡುಕುಗಳ ಜಾಣೂರರನ್ನು।
ಕೆಡುಕನೇ ಕರಗಿಸುತ ಅರದ ಎರಕವ ಹೊಯ್ದು
ಪಡೆಯುವುದು ಒಳಿತನ್ನು– ಮರುಳಸಿದ್ಧ ॥ ೧೨೮ ॥

ಬಳ್ಳಿ ತೊಡಕಿಸಿಕೊಳದೆ ಕಮಲವನು ಕುಯ್ದುಕೋ,
ಮುಳ್ಳು ತಾಕಿಸಿಕೊಳದೆ ಕೊಳ್ಳು ರೋಜ।
ಒಳ್ಳಿತಾದುದ ಕೊಂಡು ಕೆಡುಕನ್ನು ಕೊಡಹುವುದೆ
ಬಲ್ಲವರ ಬಾಳರವು– ಮರುಳಸಿದ್ಧ ॥ ೧೨೯ ॥

ಮೊರದಂತೆ ಕಸಕಲ್ಲು ಕಾಳುಳಿಸದೆಯೆ
ಜರಡಿಯೊಲು ಹಿಟ್ಟುಳಿದು ತೌಡುಳಿಸಿಕೊಂಡೆ।
ತರವೆ ಬದುಕನು ಜರಡಿ ಮಾಡಿಕೊಳ್ಳುವ ಮಾಟ?
ಇರಲಿ ಸೋಸುವ ಸಾಸ– ಮರುಳಸಿದ್ಧ ॥ ೧೩೦ ॥

ಹಾಸನದಿ ಹುಟ್ಟಿದವರೇಸು ಜನ ಬೇಲೂರ
ಕೇಶವನ ದೇಗುಲವ ನೋಡಿ ನಲಿಯುವರು?
ಲೇಸು ಹರಡಿದೆ ಸುತ್ತು ಮುತ್ತು ಹತ್ತಿರದಲ್ಲಿ,
ಸೋಸಿ ಪಡೆವವರೆಷ್ಟು– ಮರುಳಸಿದ್ಧ ॥ ೧೩೧ ॥

ದ್ವೇಷ ಕಟ್ಟಿತು ಮನೆಯ, ರೋಷವದ ಹೊಕ್ಕಿತು.
ನಾತವಾಡಿತು ನಾಟ್ಯ ಮನೆ ಬೀಳುವಂತೆ!
ಲೇಸನರಸಿದರುಂಟೆ ದ್ವೇಷದಾವಾಗ್ನಿಯಲಿ?
ಹಾಸಿ ಹೊದೆ ಲೇಸನ್ನೆ– ಮರುಳಸಿದ್ಧ! ॥ ೧೩೨ ॥

ಯಾತನೆಯ ಭಟ್ಟಿಯಲಿ ಪೂತವಾಗಲೆ ಬೇಕು
ಚೇತನದ ಧಾತುವದು ಪುಟವೇರುತ।
ಆತುಮದ ಪರುಷಕ್ಕೆ ಇಂದ್ರಿಯಗಳವಲೋಹ
ಓತು ಬರೆ ಬಂಗಾರ– ಮರುಳಸಿದ್ಧ ॥ ೧೩೩ ॥

ಸ್ನೇಹಕ್ಕೆ ಒಮ್ಮೆಮ್ಮೆ, ನೇಹಕ್ಕೆ ಒಮ್ಮೊಮ್ಮೆ,
ಮೋಹಕ್ಕೆ. ದಾಹಕ್ಕೆ, ವಿಭ್ರಮಕ್ಕೊಮ್ಮೆ!
ದೇಹ ಧರಿಸಿದ ಜೀವ ಜೀಕುವುದು; ಅದಕಿರಲಿ
ಕಾಹು ಆತ್ಮಶ್ರೀಯ– ಮರುಳಸಿದ್ಧ ॥ ೧೩೪ ॥

ಅರ್ಥ ಉದಿಸುವ ತನಕ ವ್ಯರ್ಥ ಪದಜೋಡಣೆಯು,
ಸ್ವಾರ್ಥ ಸುಟ್ಟಳಿಯದಿರೆ ಶಾಸ್ತ್ರಾರ್ಥ ವ್ಯರ್ಥ।
ಅರ್ಥವೂ ಕಾಮವೂ ವ್ಯರ್ಥ ಧರ್ಮವನುಳಿದು;
ಸಾರ್ಥಕತೆಯರದಿಂದ– ಮರುಳಸಿದ್ಧ ॥ ೧೩೫ ॥

ಚಾಮುಂಡಿ ದರ್ಶನಕೆ ಮೊದಲು ಮಹಿಷನ ನೋಟ,
ಪೀಯೂಷಕಿಂ ಮೊದಲು ಹಾಲಾಹಲ!
ತಾಮಸವು, ರಾಜಸವು, ಗೊಬ್ಬರವು ಸಾತ್ವಿಕಕೆ;
ಈ ಮರ್ಮವನು ಅರಿಯೊ– ಮರುಳಸಿದ್ಧ ॥ ೧೩೬ ॥

ಯೋಗನಂದಿಯು ಮೇಲೆ, ಭೋಗನಂದಿಯು ಕೆಳಗೆ–
ಹೇಗಿಹುದು ನಂದಿಯಲಿ ಜೀವನಾದರ್ಶ?
ಭೋಗ ಮಾಗಲಿ ಯೋಗ ಸಾನ್ನಿಧ್ಯವನು ಪಡೆದು:
ಯಾಗವಿದು ಜೀವನದ– ಮರುಳಸಿದ್ಧ ॥ ೧೩೭ ॥

ಭೋಗವೇ ಗುರಿಯಾಗೆ ಜಡೆಯೆ ನಾಗರಹಾವು;
ಯೋಗವೇ ಗುರಿಯಾಗೆ ಚೆಂಡಿಕೆಯೆ ಚೇಳು!
ಯೋಗ ಭೋಗದ ಹದನನರಿಯೆ ಹಾರಗಳೆರಡು;
ಸಾಗಿಸೀ ಪರಿ ಬದುಕ– ಮರಳಸಿದ್ಧ ॥ ೧೩೮ ॥

ಸುಟ್ಟ ಗೂಡಿನೊಳಿರವು ಮೊಟ್ಟೆಗಳು, ಮರಿಗಳು;
ಸುಟ್ಟ ಬೀಜದೊಳಿರದು ಮೊಳೆವ ಶಕ್ತಿ।
ಹುಟ್ಟು ಸಹ ತ್ಯಾಗದಲಿ, ಯೋಗದಲಿ, ತಪದಲ್ಲಿ
ಸುಟ್ಟರಿಲ್ಲಿಯೆ ಮುಕ್ತಿ– ಮರುಳಸಿದ್ಧ ॥ ೧೩೯ ॥

ಪಾತೆಗಳ ತೋಡುವರೆ ಪಾರ್ಥೇನಿಯಂ ಬೆಳೆಯೆ?
ಜಾತವಾಗುವುದದುವೆ ತನ್ನಿಂದ ತಾನೆ।
ಸಾತ್ವಿಕಕೆ ಬೇಕುಳುಮೆ, ಬೇಡವೆಂದರು ಬಹುದು
ಪಾತಕವು ತಾಮಸವು– ಮರುಳಸಿದ್ಧ ॥ ೧೪೦ ॥

ಬದುಕುವುದೆ ಪುರುಷಾರ್ಥ, ಬದುಕುವುದೆ ಪರಮಾರ್ಥ,
ಬದುಕೆ ಸರ್ವಾರ್ಥಗಳ ಸಾಧನವು ಇಲ್ಲಿ।
ಬೆದಕು ಬದುಕನು – ಪಡೆವೆ ವಿಧವಿಧದ ನಿಧಿಗಳನು,
ಬೆದಕದವ ಬೆಪ್ಪ ಸರಿ–ಮರುಳಸಿದ್ಧ ॥ ೧೪೧ ॥

ಗುಪ್ತ ನದಿಗಳು ಉಂಟು, ಗುಪ್ತ ನಿಧಿಗಳು ಉಂಟು,
ಗುಪ್ತ ಸುಧೆಗಳು ಉಂಟು ಹುಡುಕುವವಗೆ।
ಸುಪ್ತ ಶಕ್ತಿಗಳನ್ನು ಬೆಳೆಸಿಕೊಳ್ಳದೆ ಮಲಗಿ
ತೃಪ್ತನಾಗುವಗುಂಟೆ– ಮರುಳಸಿದ್ಧ? ॥ ೧೪೨ ॥

ದುರ್ಗುಣದ ಹಬ್ಬುಗೆಗೆ ತಡವಿಲ್ಲ; ಸುಗುಣಕೇ
ದುರ್ಗಮವು ಮಾರ್ಗಗಳು ಸರ್ವತ್ರ ಜಗದಿ।
ಸ್ವರ್ಗಸಹ ಮೋಹಕವು ಲಂಪಟತೆಯಿಂದಲೇ।
ಸದ್ಗುಣವ ಗೆಲ್ಲಿಸು– ಮರುಳಸಿದ್ಧ ॥ ೧೪೩ ॥

ಸೇತುವೆಯ ಸ್ವರ್ಗಕ್ಕೆ ಕಟ್ಟೆನಲು 'ಪಾರ್ಕಲಾಂ'
ಸೀತೆಯನು ಕದಿಯೆನಲು 'ಹೂಂ' ಎಂದನಸುರ!
ನೀತಿಯಿಂ ದುರ್ನೀತಿ ಯಾತರಿಂ ಮೋಹಕವೊ,
ಪಾತಕಕೆ ಬಹುಮತವು– ಮರುಳಸಿದ್ಧ ॥ ೧೪೪ ॥

ಮೂರು ಮಂಗಗಳಿಂದು ಬೇರೆ ಕತೆ ಹೇಳುತಿವೆ:
ಯಾರೇನನೆಂದರೂ ಕಿವಿಗೊಡದಿರೆಂದು।
ಊರೆಲ್ಲ ಸುಟ್ಟರೂ ನೋಡದಿರು, ಸಿಕ್ಕುದನು
ತೂರು ಬಾಯೊಳಗೆಂದು– ಮರುಳಸಿದ್ಧ ॥ ೧೪೫ ॥

ಸೊಳ್ಳೆಪರದೆಯ ಮೇಲೆ ಕುಳಿತ ಸೊಳ್ಳೆಯ ಚಿತ್ತ–
ವೆಲ್ಲ ಮಲಗಿರುವವರ ನೆತ್ತರಿನ ಮೇಲೆ
ಪಲ್ಲಕ್ಕಿಯೇರಿದರು ಖಿಲ್ಲರೆಲ್ಲರ ಚಿತ್ತ
ಪೊಲ್ಲಮೆಯ ಮೇಲೆಯೇ– ಮರುಳಸಿದ್ಧ ॥ ೧೪೬ ॥

ಸ್ನೇಹವಿರೆ ವೈರವನು, ನೇಹವಿರೆ ದ್ವೇಷವನು,
ಈ ಹಾಲುಜೇನಿರಲು ಹುಳಿ ಹೆಂಡವನ್ನು!
ಮೋಹಿಸುವ ಮಾನವರು ಮಾನವರೆ? ನರತನದ
ಚೋಹವನು ತೊಟ್ಟವರು- ಮರುಳಸಿದ್ಧ ॥ ೧೪೭ ॥

ಬಸವಿಯಲ್ಲಿರಬಹುದು ಹಸನಾದ ಮನ, ಖೊಟ್ಟಿ
ಖುಷಿಯಲ್ಲಿ ಹುಸಿ ವಿಷಯ ಬೆರೆತ ಮನವು!
ಮಸಿಯರಿವೆಯಲ್ಲಿರದೆ ಮಾಣಿಕವು. ರೇಶಿಮೆಯ
ವಸನದಲಿ ಧತ್ತೂರ- ಮರುಳಸಿದ್ಧ ॥ ೧೪೮ ॥

ಹುಲಿ ಬಲೆಗೆ ಸಿಕ್ಕಾಗ ಇಲಿಗೆ ಶರಣೆನ್ನುವುದು;
ಖಿಲ ಸೆರೆಗೆ ಸಿಕ್ಕಾಗ ಬಲು ವಿನಯಪರನು!
ಬಲೆ ಸೆರೆಯು ತಪ್ಪುತಲೆ ಹುಲಿಯು ಹುಲಿ, ಖಿಲ ಖಿಲನು,
ಸಲುಗೆ ಬೇಡವರೊಡನೆ- ಮರುಳಸಿದ್ಧ ॥ ೧೪೯ ॥

ತೋಳ ಕಾವಿಯ ಧರಿಸೆ ವರವೆ ಅದು ಕುರಿಗಳಿಗೆ?
ಖೂಳ ಖಾದಿಯನುಡಲು ಹಿತನೆ ಜನಕೆ?
ಮೂಳ ಖಾಕಿಯ ತೊಡಲು ರಕ್ಷಣೆಯೆ? ವಿಧವಿಧದ
ವ್ಯಾಳಗಳು, ವಿಷವೊಂದೆ- ಮರುಳಸಿದ್ಧ ॥ ೧೫೦ ॥

ಒಂಟಿಯಾಗಿಹೆನೆಂಬೆ: ಉಂಟೆ ಕಲ್ಪನೆ ನಿನಗೆ-
ನೆಂಟರೆನಿಬರು ಎಂದು ಶಿವನ ಸೃಷ್ಟಿಯಲಿ?
ಅಂಟಿ ಬದುಕುವೆ ನೀನು ಲೆಕ್ಕವಿಲ್ಲದ ಜೀವ-
ಜಂತುಗಳಿಗರಿಯಿದನು- ಮರುಳಸಿದ್ಧ ॥ ೧೫೧ ॥

ಬದುಕುವಧಿಕಾರವನು ಬದುಕಿಸಿಯೆ ಪಡೆಯಿವರ;
ಇದಕಿಂತ ಘನ ಧ್ಯೇಯ ಬೇರಾವುದಿಲ್ಲ!
ಹದುಳು ಪಾರಸ್ಪರ್ಯದಲಿ, ಸಕಲ ಹಿತದಲ್ಲಿ,
ಹುದುವಾಳಿಕೆಯೆ ಧರ್ಮ- ಮರುಳಸಿದ್ಧ ॥ ೧೫೨ ॥

ಲೋಕ ವ್ಯಾಪಾರಗಳ ವೈಪರೀತ್ಯವ ಕಂಡು
ಸಾಕಾಯಿತೆನ್ನದಿರು ಸೋಲನೊಪ್ಪಿ!
ಏಕಾಂಗ ವೀರನೊಲು ಹೋರು ಕೈಲಾದನಿತು
ಲೋಕ ಕಲ್ಯಾಣಕ್ಕೆ - ಮರುಳಸಿದ್ಧ ॥ ೧೫೩ ॥

ಒಂಟಿಯಾಗಿರುವೆನೆನೆ ಅಂಟು ನಾಲ್ವರಿಗೆಂಬೆ,
ಅಂಟಿದರೆ ಆಸಕ್ತಿದೋಷವೆಂಬೆ।
ನಂಟು ಬೇಕೆನೆ ಉಂಟು ಗಂಟುಗಳು, ಸಿಕ್ಕುಗಳು–
ಟ್ಯಾಂಟಲೀಕರಣವಿದು– ಮರುಳಸಿದ್ಧ ॥ ೧೫೪ ॥

ಎಲ್ಲರಿಗೆ ಸಲ್ಲದುದು ಹೊಲ್ಲ ನಿನ್ನುಪಯೋಗ–
ಕಿಲ್ಲಿ, ಎಲ್ಲೆಲ್ಲಿಯೂ, ಅಲ್ಲಿ ಸಹಿತ।
ಇಲ್ಲವಾಗಿಸಿ ಎಲ್ಲ ಜನಕೆ ಕೊಂಡುದು ನಿಜದಿ
ಕಿಲ್ಮಿಷವು, ಕಟುವಿಷವು– ಮರುಳಸಿದ್ಧ ॥ ೧೫೫ ॥

ಏಕಾಂತದೊಳಗೊಮ್ಮೆ, ಲೋಕಾಂತದೊಳಗೊಮ್ಮೆ,
ಮೂಕತೆಯೊಳೊಮ್ಮೆ, ಮಾತಿನ ಭರದೊಳೊಮ್ಮೆ।
ಬೇಕಿನೊಳಗೊಮ್ಮೆ ಬೇಡದೊಳಗೊಮ್ಮೊಮ್ಮೆ
ನೂಕಲೇ ಬೇಕಿರವನ– ಮರುಳಸಿದ್ಧ ॥ ೧೫೬ ॥

ಸರಸ ಸಜ್ಜನಿಕೆಯಲಿ, ಸಮತೆಯಲಿ, ಮಮತೆಯಲಿ,
ಪುರುಷಾರ್ಥ ಸಾಧನದಿ, ಪರಮಾರ್ಥದಲ್ಲಿ।
ಪರಿಪರಿಯ ಕಲೆ, ವಿದ್ಯೆ, ವಿಜ್ಞಾನದರ್ಥಿಯಲಿ
ಇರವ ಸಾರ್ಥಕಗೊಳಿಸು– ಮರುಳಸಿದ್ಧ ॥ ೧೫೭ ॥

ಮೈಸುಖವ ತೊರೆಯದಿರು, ಮೈಸುಖದಿ ಮುಳುಗದಿರು,
ಲೇಸಾಗಿ ಮೈಮನವನರಳಿಸುತಿರು।
ಭಾಸುರದ ಜೀವನಕೆ ಒಳಹೊರಗಿನರಳಿಕೆಯ
ಸಾಸವೇ ಸಾಧನವು– ಮರುಳಸಿದ್ಧ ॥ ೧೫೮ ॥

ಒಳ ಹೊರಗು ಬೆಳಗುವುವು ತಿಳಿದಾಗ: ಎರಡರೊಳು
ಮೊಳೆದಾಗ ಸುಂದರ ಸಮನ್ವಯದ ಸಿರಿಯು।
ನೆಲದೊಳಗೆ ಬೇರುಗಳು, ಫಲ ಮರದ ತಲೆಯಲ್ಲಿ,
ಸಲುವುವಿವು ಸಹಕರಿಸೆ–ಮರುಳಸಿದ್ಧ ॥ ೧೫೯ ॥

ಒಳ ಹೊರಗೆ ಕೊಳೆಯೊಡನೆ ಒಪ್ಪಂದ ನಮ್ಮದು,
ಕೊಳೆಗೇರಿ ಮನಗಳಲಿ, ನಗರಗಳಲಿ!
ಬಳಿಸ ಬಹುದೀ ನಗರಗಳ ಕೊಳೆಯ ಕೇರಿಗಳ–
ತೊಳೆವರಾರೊಳಕೊಳೆಯ– ಮರುಳಸಿದ್ಧ? ॥ ೧೬೦ ॥

ಕೊಳೆಯ ತೊಳೆಯುವ ನೀರೆ ಕೊಳೆಯಾಗುವುದು ಅದರ
ತೊಳೆವ ಶಕ್ತಿಗು ಮೀರಿ ಕೊಳೆಯು ಸೇರೆ।
ಒಳಿತನೆಸಗುವ ಶಕ್ತಿಗಳಿಗೆಲ್ಲ ಗತಿಯಿದುವೆ;
ಕಳೆಹೆಚ್ಚೆ ಬೆಳೆ ಹಾಳು– ಮರುಳಸಿದ್ಧ ॥ ೧೬೧ ॥

ತಳದೊಳಿರುವುದು ಒಂಡು, ಮೇಲೆ ಹರಡಿದೆ ಜೊಂಡು,
ಸಲಿಲವಿದೆ ಮಧ್ಯದಲಿ ಸೋಸಿ ಕುಡಿಯೆ।
ಹೊಲಸಿಹುದು ಬದುಕಿನಲಿ, ಮಲಿನತೆಯು ಬಾಳಿನಲಿ,
ಕಲಿ ತೊಳೆವ ಕಲೆಯನ್ನು– ಮರುಳಸಿದ್ಧ ॥ ೧೬೨ ॥

ಕುಡಿವ ನೀರೂ ಉಂಟು, ಸುಡುವ ಬೆಂಕಿಯು ಉಂಟು,
ನಡೆವ ಭೂಮಿಯ ಒಡಲ ಪದರುಗಳಲಿ।
ತಡವದಿರು ಬೆಂಕಿಯನು, ಪಡೆದುಕೋ ಸಿಹಿನೀರ,
ಕೆಡಿಸದೆಯೆ ಸಮತೂಕ– ಮರುಳಸಿದ್ಧ ॥ ೧೬೩ ॥

ಜಲಪಾತದಂದವನು ಕೊಲೆಗೈಯದೆಯೆ ಪಡೆವ
ಜಲವಿದ್ಯುತೆನಿತೊಳಿತೊ ಅನಿತೆ ಬಾಳ।
ಬೆಲೆಗಳನು ಕೊಲ್ಲದೆಯೆ ಪಡೆವ ಪ್ರಗತಿಯು! ಇದರ
ಹೊಲಬನರಿತವನಾಗೊ– ಮರುಳಸಿದ್ಧ ॥ ೧೬೪ ॥

ಸಿಟ್ಟಿಗೆದ್ದಿಹ ಯುವಕ ಸುಟ್ಟು ಹಾಕುವೆನೆಂಬೆ
ಕೆಟ್ಟುದನೆಲ್ಲವನು– ಒಂದರಿಕೆ ನಿನಗೆ।
ಕೆಟ್ಟುದಾವುದು ಎಂದು ನೀನೆ ನಿರ್ಣಯಿಸದಿರು;
ಒಟ್ಟರಿವು ಮಾಡಲದ– ಮರುಳಸಿದ್ಧ ॥ ೧೬೫ ॥

ಮೂಲ ಮರವನ್ನುಳಿಸಿ ಕಸಿ ಮಾಡು, ಕೃಷಿ ಮಾಡು,
ಸಾಲು ಬೆಳೆಯನ್ನುಳಿಸಿ ಕಳೆಯ ಕೀಳು।
ಮೌಲ್ಯಗಳನುಳಿಸಿಯೇ ಪರಿವರ್ತನೆಯ ಮಾಡು,
ಕಾಲಕ್ಕೆ ತಕ್ಕಂತೆ– ಮರುಳಸಿದ್ಧ ॥ ೧೬೬ ॥

ಹರಿದುದನು ಹೊಲಿಯುವುದು, ಬಿರುಕುಗಳ ಮೆತ್ತುವುದು,
ಅರಕೆಗಳ ತುಂಬುವುದು, ಹೊಸದಾದುದ।
ನಿರುಮಿಸುವ ಯೋಗ್ಯತೆಯು ಇರದೆ ಹೋದರೆ ನಿನಗೆ
ಇರುವುದನೆ ಸರಿಪಡಿಸು– ಮರುಳಸಿದ್ಧ ॥ ೧೬೭ ॥

ಕಲಿ ಕೊರತೆಗಳ ತುಂಬಿಕೊಳುವ ಕಲೆಯನ್ನು, ಅದು
ಫಲಿಸದಿರೆ ಕಲಿ ಕೊರತೆಯೊಡನೆ ಕೂಡಿ।
ನಲಿವ ಕಲೆಯನು; ಅರಕೆಗಳ ಉರದಿ ನಿಜ ಸುಖದ
ಸೆಲೆಯ ಪಡೆಯುವ ಕಲೆಯ– ಮರುಳಸಿದ್ಧ ॥ ೧೬೮ ॥

ಬೆಳೆವ ಸಸಿಗಳ ನೋಡಿ, ಚೇತನಗಳನು ನೋಡಿ,
ನೆಲ ಜಲಗಳನು ನೋಡಿ, ಗಿರಿ ಗಗನ ನೋಡಿ।
ನಲಿಯದವಗಿಹವಿಲ್ಲ, ಪರವಿಲ್ಲ, ಏನಿಲ್ಲ!
ನಲಿ ನಲಿಸು, ಒಲಿ ಒಲಿಸು – ಮರುಳಸಿದ್ಧ ॥ ೧೬೯ ॥

ಕಸಿಯ ತೆಗೆಯಲೆ ಬೇಕು, ಕಳೆಯ ಕಳೆಯಲೆ ಬೇಕು,
ನುಸಿಯನೋಡಿಸಬೇಕು, ಸೊಟ್ಟಾದುದ।
ಸಸಿನಗೊಳಿಸಲೆಬೇಕು, ಬದುಕನ್ನು ದಿನದಿನವು
ಹಸನುಗೊಳಿಸಲೆಬೇಕು– ಮರುಳಸಿದ್ದ ॥ ೧೭೦ ॥

ಒಕ್ಕಬಲ್ಲವಗಿಲ್ಲಿ ತಕ್ಕಷ್ಟು ತೆನೆಗಳಿವೆ–
ಚೊಕ್ಕ ಕಲೆ, ವಿಜ್ಞಾನ, ಶಾಸ್ತ್ರಗಳ ತೆನೆಯು।
ದಕ್ಕವಿವು ಆಲಸಿಗೆ, ತಾಮಸಿಗೆ, ಕಲ್ಮಷಿಗೆ,
ಸಿಕ್ಕುವುವು ಶುಭಮತಿಗೆ– ಮರುಳಸಿದ್ಧ ॥ ೧೭೧ ॥

ಎಳೆವ ಎತ್ತಿಗೆ ಹಗುರಗೊಳಿಸಲೆಂದೇ ಬಂತು
ಹಳೆಯ ಬಂಡಿಗೆ ಹೊಸತು ರಬ್ಬರಿನ ಗಾಲಿ।
ಲಲಿತಗೊಳಿಸಲು ಬಾಳ ಬರುವುದೆಲ್ಲವು ಬರಲಿ–
ಕಲೆ, ಶಾಸ್ತ್ರ, ವಿಜ್ಞಾನ– ಮರುಳಸಿದ್ಧ ॥ ೧೭೨ ॥

ಸರಕುಗಳನೊಯ್ಯುತಿವೆ, ಸರಕುಗಳ ತರುತಲಿವೆ,
ಪುರಸೊತ್ತು ಇಲ್ಲದೆಯೆ ಲಾರಿಗಳು ಇಲ್ಲಿ।
ಬರಿಹೊಟ್ಟೆ ತುಂಬಿತೆ? ಬರಿ ಮೈಯು ಮುಚ್ಚಿತೆ?
ಸರಿಯಿಲ್ಲ ಯಾವುದೂ– ಮರುಳಸಿದ್ಧ ॥ ೧೭೩ ॥

ಕಣಜದೆದುರೇ ಕುಸಿದು ಹರಣ ಬಿಡುವವರುಂಟು,
ಉಣಲು ಹಸಿವಿಲ್ಲೆಂದು ಹಪಹಪಿಪರುಂಟು।
ಹಣವನೆಲ್ಲಿಡಲೆಂದು ಹಲುಬುವವರೂ ಉಂಟು;
ನೆಣವತ್ತ, ಹೆಣವಿತ್ತ– ಮರುಳಸಿದ್ಧ ॥ ೧೭೪ ॥

ವಸ್ತುಗಳ ವಶಪಡಿಸಿಕೊಳುತ ತಾನೇ ತನ್ನ
ವಸ್ತುಗಳ ವಶವಾಗಿ ಹೋಗುವುದು ಸರಿಯೆ?
ಸೊತ್ತಿರಲಿ ಆಳಾಗಿ; ಸೊತ್ತಿಗಾಳಾದವನು
ಸತ್ತಂತೆ ಇದ್ದರೂ– ಮರುಳಸಿದ್ಧ ॥ ೧೭೫ ॥

ವಾದಕ್ಕೆ ಪ್ರತಿವಾದ, ಕ್ರಿಯೆಗೆ ಪ್ರತಿಕ್ರಿಯೆಯು, ವಿ–
ರೋಧಕ್ಕೆ ಪ್ರತಿಯಾಗಿ ವಿರೋಧ ಬೆಳೆದು।
ಬಾಧೆಗೊಳಗಾಗಿಹರು ಮೇದಿನಿಯೊಳೆಲ್ಲರೂ,
ಹಾದಿ ಹುದುವಾಳಿಕೆಯು– ಮರುಳಸಿದ್ಧ ॥ ೧೭೬ ॥

ಉಪ್ಪಿಗಿದೆ ತಿರುಗುಪ್ಪು, ಬಾಣಕ್ಕೆ ಪ್ರತಿಬಾಣ,
ತಪ್ಪಿಗೆರಡನೆ ತಪ್ಪು, ಒಪ್ಪಿಗೊಪ್ಪು।
ತಪ್ಪದು ಪ್ರತಿಕ್ರಿಯೆಯು ಕ್ರಿಯೆಗೆ ಸಮಸಮನಾಗಿ,
ಒಪ್ಪನೇ ಅಪ್ಪಿ ನಡೆ– ಮರುಳಸಿದ್ಧ ॥ ೧೭೭ ॥

ತನ್ನ ಹಣ ಬಳಸುವೊಲು ಜನರ ಹಣ ಬಳಸುವುದು,
ತನ್ನ ಹಿತ ಗಳಿಸುವೊಲು ಜನರ ಹಿತವ।
ಅನ್ಯರಿಗೆ ಬನ್ನವನು ತನಗೆ ಹಿತ ಬಯಸುವನು
ಬನ್ನವನೆ ಪಡೆಯುವನು– ಮರುಳಸಿದ್ಧ ॥ ೧೭೮ ॥

ಮುಂದೆ ಹೋಗುವುದೊಂದು ಸುಗುಣವೇ ಸರಿ, ಆಗ
ಮಂದಿಯನು ಹಿಂದುಳಿಸೆ ಹೆಣಗಲೇಬೇಕು।
ಒಂದೆ ಎಚ್ಚರವಹಿಸು: ತುಳಿಯದಿರು ಉಳಿದವರ
ಹಿಂದೆ ಹಾಕುವ ಭರದಿ– ಮರುಳಸಿದ್ಧ ॥ ೧೭೯ ॥

ಒಂದೆ ಶಬ್ದದೊಳಿರವೆ ಹಲವು ಅರ್ಥಗಳಂದ–
ದಿಂದ ಹಗೆತನವಿನಿತು ಇಲ್ಲದಂತೆ।
ಒಂದೆ ಅರ್ಥವ ಕೊಡುವ ಹಲವು ಶಬ್ದಗಳಿರವೆ?
ಮಂದಿಯೊಳು ಇರು ಹಾಗೆ– ಮರುಳಸಿದ್ಧ ॥ ೧೮೦ ॥

ಎಲ್ಲ ಯಾತ್ರೆಗಳಲ್ಲಿ ಜೀವನದ ಯಾತ್ರೆ ಘನ,
ಎಲ್ಲ ಕ್ಷೇತ್ರಗಳಲ್ಲಿ ಹೃದಯ ಕ್ಷೇತ್ರ।
ಅಲ್ಲಿಗೊಯ್ಯುವ ದಾರಿ ಪ್ರೀತಿ ವಿಶ್ವಾಸಗಳು,
ಕಲ್ಲು ಮಣ್ಣುಗಳಲ್ಲ– ಮರುಳಸಿದ್ಧ ॥ ೧೮೧ ॥

ಕೇಳದೆಯೆ ದೊರೆಯುವುವು ಮತ್ಸರಾಸೂಯೆಗಳು,
ಕೇಳಿದರು ದೊರೆಯುವುವೆ ಸ್ನೇಹ ಕರುಣೆಗಳು?
ಏಳುವುದು ಬಿತ್ತದೆಯೆ ಕಳೆ; ಬಿತ್ತಿ, ಕಳೆತೆಗೆದು
ಪಾಲಿಸದೆ ಬೆಳೆಯೆಲ್ಲಿ– ಮರುಳಸಿದ್ಧ ? ॥ ೧೮೨ ॥

ಎನಿತೆನಿತು ಭ್ರಮೆಗಳು, ಎನಿತೆನಿತು ಮೌಢ್ಯಗಳು,
ಎನಿತೆನಿತು ಕುರುಡುಗಳು ನರನ ಬಾಳ।
ಧ್ವನಿಯಾಗೆ ಹೊಂಚುತಿವೆ, ಸಂಚುಗಳ ಹೂಡುತಿವೆ,
ಮಣಿಯದಿರು ಅವುಗಳಿಗೆ– ಮರುಳಸಿದ್ಧ ॥ ೧೮೩ ॥

ಮುಳುಗಿಸುವ ನೀರೆ ತೇಲಿಪುದಣ್ಣ ನಿನ್ನನ್ನು
ಕಲಿಯೆ ಈಸುವ ಕಲೆಯ; ಅದರಂತೆಯೇ
ಕೆಳಗೆಳೆವ ಶಕ್ತಿಗಳ ಕೊಡಹಿ ಕಲಿ ಮೇಲೇರೆ,
ಕಲಿವವನೆ ಗೆಲುವವನು– ಮರುಳಸಿದ್ಧ ॥ ೧೮೪ ॥

ಬದುಕು ಪಾರಾವಾರ, ಹರಹು ಅಪರಂಪಾರ;
ಇದರೊಳೀಸುವ ಮೀನು ನೀನು ಜೀವಿ।
ತುದಿಮೊದಲನರಿಯುವುದು ನಿನ್ನಳವೆ? ಬದುಕಿಲ್ಲಿ
ಹದವರಿತು ಮುದ ಬೆರೆತು– ಮರುಳಸಿದ್ಧ ॥ ೧೮೫ ॥

ಬುದ್ಧಿಬೆಳಕನು ನೀಡೆ ಭಾವ ಸವಿ ನೀಡುವುದು:
ಮುದ್ದಿಸಲು ಈ ಎರಡು ಋದ್ಧಿ ಬಾಳ್ಗೆ!
ಸಿದ್ಧನಾಗಿವುಗಳನು ಬೆರೆಸಿ ಬಾಳಲು ಇಲ್ಲಿ.
ಉದ್ಧಾರ ಇದರೊಳೇ– ಮರುಳಸಿದ್ಧ ॥ ೧೮೬ ॥

ಬಾಳ ಕುಸುಮದಿ ಪ್ರೀತಿ ಮಕರಂದ, ಮಧುಬಿಂದು;
ಶೀಲ ಸೌರಭ, ಸುಗುಣ ಬಣ್ಣ ಬೆಡಗು।
ಮೌಲ್ಯಗಳೆ ಎಸಳುಗಳು, ನೇರ್ಪು ನಯ ವಿನಯಗಳು
ಮೂಲಸತ್ವವು ತಿಳಿಯೊ– ಮರುಳಸಿದ್ಧ ॥ ೧೮೭ ॥

ಬದುಕಿನೀ ಗಾಣಕ್ಕೆ ಭಾವಗಳೆ ಕಾಳುಗಳು,
ಸದಸದ್ವಿವೇಕವೇ ಸುತ್ತುವೆತ್ತು।
ಸದುಹೃದಯವಂತಿಕೆಯೆ ಎಣ್ಣೆ, ಸೈರಣೆ ಹಿಂಡಿ,
ಹದುಳವೇ ಬೆಲೆಯದಕೆ– ಮರುಳಸಿದ್ಧ ॥ ೧೮೮ ॥

ಪರಿಪರಿಯ ಅನುಭವವು, ಪರಿಪರಿಯ ಪರಿಭವವು,
ತರತರದ ನಗೆ-ನವಿಲು, ಸೋಲು ಗೆಲವು।
ತೆರೆತೆರೆಯು ಬಾಳುವೆಯ ತೊರೆಯಲ್ಲಿ! ಯಾವುದೂ
ಸ್ಥಿರವಲ್ಲ, ಮರೆ ಎಲ್ಲ- ಮರುಳಸಿದ್ಧ ॥ ೧೮೯ ॥

ಸ್ನೇಹಶೂನ್ಯತೆಯೊಂದು, ಮೋಹದಂಧತೆಯೊಂದು,
ದಾಹಗಳ ದಳ್ಳುರಿಯ ಶಾಖವೊಂದು।
ದಾಹಿಸಿದ ಜೀವನದಶೋಕಕ್ಕೆ ಬೇಕೀಗ
ನೇಹದಾ ದೋಹದವು- ಮರುಳಸಿದ್ಧ ॥ ೧೯೦ ॥

ದೊರೆತಷ್ಟರಲಿ ತೃಪ್ತಿ, ದೊರೆಯದಿದ್ದುದಕಾಗಿ
ಪರಿಪರಿಯ ಸಾಹಸವು, ಚಿರಯತ್ನವು।
ಬರುವ ವಿಘ್ನಗಳಿಂದ ಉದ್ವೇಗಗೊಳದ ಮನ
ಚರಮಗಮ್ಯವು ನಿನಗೆ- ಮರುಳಸಿದ್ಧ ॥ ೧೯೧ ॥

ತುತ್ತು ಮಾಡಿಯೆ ಉಣ್ಣು, ಮೆಟ್ಟಲೇರಿಯೆ ಕೊನೆಗೆ
ತುತ್ತತುದಿಯನು ಕಾಣು, ಅವಸರವು ಬೇಡ।
ಉತ್ತಮೋತ್ತಮ ಗತಿಯು ಒಂದೆ ನೆಗೆತಕೆ ಸಿಗದು,
ಯತ್ನ ನಡೆಯಲಿ ಸತತ- ಮರುಳಸಿದ್ಧ ॥ ೧೯೨ ॥

ತುಂಡು ಮಾಡಿತ್ತೊಡೆ ಹೊರಬಹುದು ಹಿರಿಗಿರಿಯ,
ಖಂಡಿಸಿದ ಹೆಮ್ಮರವನೆಳೆಯಬಹುದು।
ಗಂಡಾಂತರಂ ಘನವು ಎಂದು ಎದೆಗುದಿಬೇಡ-
ಗಂಡುತನಕಿದಿರೆಲ್ಲಿ- ಮರುಳಸಿದ್ಧ? ॥ ೧೯೩ ॥

ನಡುಗಡಲನೀಸುವಗೆ ಬಂದರದಿ ತೊಂದರೆಯೆ?
ನಿಡುಬೆಟ್ಟವೇರುವಗೆ ತಿಟ್ಟು ತೊಡಕೆ?
ಎಡರು ತೊಡರುಗಳೆಲ್ಲ ಬಡಮನಕೆ, ತೊಡವವೇ
ದೃಢಮನದ ಸಾಹಸಿಗೆ- ಮರುಳಸಿದ್ಧ ॥ ೧೯೪ ॥

ಕನಸ ಕಾಣದ ಜೀವಿ ಎಲ್ಲಿಹನು? ಕನಸುಗಳ
ಉಣಿಸಿನಲೆ ಬದುಕಿಹರು ಎಲ್ಲಿರುವರು?
ಕನಸ ನನಸಾಗಿಸುವ ಕಜ್ಜವೇ ಕಜ್ಜಾಯ-
ವೆನಿಸಿದವನೇ ಧನ್ಯ- ಮರುಳಸಿದ್ಧ ॥ ೧೯೫ ॥

ಬಾಲಭಾಷೆಗೆ ಬೇಕೆ ಶಬ್ದಮಣಿದರ್ಪಣವು,
ಕೇಳೀವಿಲಾಸಕ್ಕೆ ನಾಟ್ಯಶಾಸ್ತ್ರ?
ವೇಳೆಯಿದೆ ನಿಯಮಕ್ಕೆ, ನಿಯಮರಾಹಿತ್ಯಕ್ಕೆ-
ಲೀಲೆಯಾಗಲಿ ಬಾಳು- ಮರುಳಸಿದ್ಧ ॥ ೧೯೬ ॥

ಉಪಯೋಗದೊರೆಗಲ್ಲ ಉಪಯೋಗಿಸಲುಬಹುದೆ
ವಿಪರೀತ ಬುದ್ಧಿಯಿಂದೆಲ್ಲೆಲ್ಲಿಯೂ?
ಅಪರವಯದವ್ವನನು, ಅಪ್ಪನನು ತೊರೆಯುವುದೆ
ಉಪಯೋಗವಿಲ್ಲೆಂದು- ಮರುಳಸಿದ್ಧ? ॥ ೧೯೭ ॥

ಕಳಿತ ಹಣ್ಣನು ಮತ್ತೆ ಅಡೆಗೆ ಹಾಕುವರುಂಟೆ?
ಬಲಿತ ಮರಕೂ ಸೆಡೆಯ ಕಟ್ಟುವವರುಂಟೆ?
ಒಳಿತೆಂದು ಎದೆಯ ದನಿ ಸಾರಿದರು ಹುಡುಕುವರೆ
ಗಳಿತ ಶಾಸ್ತ್ರಾಧಾರ- ಮರುಳಸಿದ್ಧ? ॥ ೧೯೮ ॥

ನೊಣಕೆ ಬೇಕಹುದೆಂದು ವ್ರಣವನುಳಿಸುವರುಂಟೆ,
ಹೆಣಕೆ ಬೇಕಹುದೆಂದು ಹೇಮಾಂಬರ?
ಗುಣಕೆ ತಕ್ಕಂತಿರಲಿ ಅಣಿಗೆಲಸ, ಮತಿ ಮತದ
ಅಣಕವೈ ಅತಿದಯೆಯು- ಮರುಳಸಿದ್ಧ ॥ ೧೯೯ ॥

ಹಿಮಗಿರಿಯೊಳಿಡಬಹುದೆ ಐಸ್‌ಕ್ರೀಮಿನಂಗಡಿಯ,
ತುಮರಿಯನು ಉರಿಸುವುದೆ ಸೂರ್ಯನೆದುರು?
ತಮತರವ ತಿಳಿಯದೆಯೆ, ಸ್ಥಲಕಾಲ ಗಮನಿಸದೆ
ಅಮರದಿರು ಹೂಣಿಕೆಗೆ- ಮರುಳಸಿದ್ಧ ॥ ೨೦೦ ॥

ಹಿಗ್ಗುವುದೆ ಜೀವನವು, ಕುಗ್ಗುವುದೆ ಮರಣವು,
ಹಿಗ್ಗದಿಹ ಜೀವಿಯೇ ಶವಕೆ ಸಮನಲ್ತೆ?
ಲಗ್ಗೆಯಿಡು ಹಿಗ್ಗಿಗೆ, ಜೀವನದ ಸುಗ್ಗಿಗೆ,
ಹಿಗ್ಗು, ಹಿಗ್ಗಿಸು, ಬಾಳು- ಮರುಳಸಿದ್ಧ ॥ ೨೦೧ ॥

ಮನವ ಹಿಗ್ಗಿಸುವಷ್ಟು ಇನ್ನೇನ ಹಿಗ್ಗಿಸುವಿ?
ತನುವಿನಲ್ಲಿದ್ದರೂ ಅದು ವಿಶ್ವವ್ಯಾಪಿ।
ಕೊನೆಯಿರದೆ ಹಬ್ಬುತಿಹ ವಿಶ್ವದೊಡನೆಯೆ ನಿನ್ನ
ಮನವು ಸಹ ಹಿಗ್ಗಲೈ- ಮರುಳಸಿದ್ಧ ॥ ೨೦೨ ॥

ಉರದಿ ಒಲವೆಷ್ಟಿಹುದೊ ತಿರೆಯೊಳಷ್ಟೇ ಚೆಲುವು,
ಹಿರಿದಾಗಲೆದೆಯೊಲವು ಹಿರಿದಾಗೆ ಚೆಲುವು।
ಪರರು ನನ್ನವರೆಂಬುದಳಿಯುವುದು ಒಲವಿನಲಿ,
ಒಲವೆಲ್ಲೊ ಗೆಲವಲ್ಲೆ– ಮರುಳಸಿದ್ಧ ॥ ೨೦೩ ॥

ಹರಿಯುತ್ತಲಿರೆ ಹೊನಲು, ಹಾರಿದರೆ ಜಲಪಾತ,
ಸೇರಿದರೆ ಶರಧಿಯನು ಭೂಮಾನುಭೂತಿ।
ಹರಿವ, ಹಾರುವ, ಸೇರ್ವ ಸರಿತೆಯಾಗಲಿ ಇರವು–
ಚರಿಸುತ್ತ ಗುರಿ ಸೇರು– ಮರುಳಸಿದ್ಧ ॥ ೨೦೪ ॥

ಇರುವ ಆಯುಷ್ಯದಲಿ ದೊರೆಯಲಾರದ ತೃಪ್ತಿ
ದೊರೆಯುವುದೆ ಆಯುಷ್ಯ ನೂರು ಮಡಿಯಾಗೆ?
ಸರಿಯಾಗಿ ಬದುಕಿದರೆ ಇರುವಷ್ಟೆ ವಯ ಸಾಕು
ಅರಳಿ ಕಂಪನು ಸೂಸೆ– ಮರುಳಸಿದ್ಧ ॥ ೨೦೫ ॥

ಸಾರ ಮೇಲೇರಿದರೆ ತನಿವಣ್ಣು, ನೆಲದೊಳಗೆ
ಸೇರಿದರೆ ಸವಿಯಾದ ಕಂದ ಮೂಲ।
ಏರು ಮನಸಿನ ಶಿಖರ, ಸಾರು ಮನಸಿನ ಬಸಿರ,
ಬೀರು ಸಾರೋತ್ಕರ್ಷ– ಮರುಳಸಿದ್ಧ ॥ ೨೦೬ ॥

ಅವರೊಡನೆ ಇವರೊಡನೆ ಇದ್ದಾಯ್ತು ಎನಿತೊ ಸಲ–
ಹವಣಿಸಿಯು ನಿನ್ನೊಡನೆ ಒಮ್ಮೆ ಇರದಾದೆ!
ವಿವರಗಳ ಹಳುವಿನಲಿ ಮೂಲ ವಿಷಯವ ಮರೆತೆ!
ಸವಿಯೆಲ್ಲಿ ಇಂತಿರಲು– ಮರುಳಸಿದ್ಧ? ॥ ೨೦೭ ॥

ಕಡಿದ ಕೊಡಲಿಗೆ ಕೊಡುವುದಣ್ಪ ಚಂದನ, ಮೈಯ
ತಡವಿದವಗೇ ಮುಳ್ಳನೀಯುವುದು ಕಂಟಿ!
ಕೊಡುವ ಗುಣ ಮಲ್ಲಿಗೆಯು, ಕೆಡಿಪ ಗುಣವೇ ಮುಳ್ಳು,
ಹಿಡಿ ಕೊಡವ ಗುಣವನ್ನೆ– ಮರುಳಸಿದ್ಧ ॥ ೨೦೮ ॥

ಕೊಟ್ಟು ಕೆಟ್ಟವರಿಲ್ಲ, ಇಟ್ಟು ಸುಖಿಸಿದರಿಲ್ಲ,
ಒಟ್ಟಾರೆ ಲೋಭಿತನ ಲಾಭಕರವಲ್ಲ।
ಸೃಷ್ಟಿಯ ಸಮಸ್ತವಿದು ಸರ್ವಜೀವಿಗಳ ಸಂ–
ತುಷ್ಟಿಗಾಗಿಯೆ! ತಿಳಿಯೊ– ಮರುಳಸಿದ್ಧ ॥ ೨೦೯ ॥

ದಡಗಳಿಗೆ ಋಣಿ ನಾವು ಕಡಲುಗಳ ತಡೆದಿಹವು:
ಗಿಡಗಳಿಗೆ ಋಣಿ ನಾವು ಪರಿಸರದ ಶುಚಿಗೆ:
ಬಡವರಿಗೆ ಋಣಿ ನಾವು ಪಡುವೆಲ್ಲ ಸುಖಗಳಿಗೆ:
ಕೊಡುವಂಗೆ ಋಣಿಯೆಲ್ಲ- ಮರುಳಸಿದ್ಧ ॥ ೨೧೦ ॥

ದೇಹ ಪುಷ್ಪದ ಹಾಗೆ, ಆತ್ಮ ಪರಿಮಳದಂತೆ,
ಸ್ನೇಹ ಆತ್ಮವು, ಬತ್ತಿ ಪ್ರಣತಿ ದೇಹ।
ಮೋಹ ಅಡ್ಡಾಗದಿರೆ ಕಾಹು ಒಂದಕ್ಕೊಂದು,
ಚೋಹವಿದು, ರೂಹು ಅದು- ಮರುಳಸಿದ್ಧ ॥ ೨೧೧ ॥

ಘನಿಸಿದರೆ ಮೃಣ್ಮಯವು, ಒಳಗೊಳಗೆ ಚಿನ್ಮಯವು,
ತನುವೆ ಮನೆ ಮನ ಬುದ್ಧಿ ಆತ್ಮಗಳಿಗೆ।
ಮನೆಯಿದನು ಏಗಳೂ ಇರಿಸು ನಿರ್ಮಲವಾಗಿ,
ತನುವಿನಂತೆಯೆ ಮನವು- ಮರುಳಸಿದ್ಧ ॥ ೨೧೨ ॥

ಎಲುವು ತೊಗಲಿನ ಮೈಯೆ ಚೆಲುವು ಒಲವಿನ ಶಯ್ಯೆ,
ಬಲಪಡಿಸಿಕೊಳ್ಳದನು ನಲವನೀಂಟೆ।
ಬಲೆಯು ಬ್ರಹ್ಮಕೆ ಅದುವೆ, ನೆಲೆಯು ಪರಮಾರ್ಥಕ್ಕೆ,
ಚಲಿಸುವ ಶಿವಾಲಯವು- ಮರುಳಸಿದ್ಧ ॥ ೨೧೩ ॥

ಮನವು ಮಡಿಯಾದಾಗ ತನುವೆ ಪಂಪಾಕ್ಷೇತ್ರ,
ಮನೆಯೆ ಸ್ವರ್ಗವು, ಸುರರು ಅಲ್ಲಿ ಇರುವವರು।
ಜನರೆಲ್ಲ ಹೀಗಾಗೆ ಲೋಕ ಹೇಗಾದೀತು?
ನೆನೆಯುವರೆ ಜನರಿದನು- ಮರುಳಸಿದ್ಧ? ॥ ೨೧೪ ॥

ಸ್ವಸ್ಥದೇಹದಿ ಸ್ವಸ್ಥಮನವು, ನಿಜ. ಅಂತೆಯೇ
ಸ್ವಸ್ಥ ಮನವಿರುವಲ್ಲಿ ಸ್ವಸ್ಥದೇಹ।
ಅಸ್ತವ್ಯಸ್ತವೊ ಮನವು? ಸ್ವಸ್ಥವಾಗುದು ತನುವು!
ಸ್ವಸ್ತಿ ಸುಮನಸದಿಂದ- ಮರುಳಸಿದ್ಧ ॥ ೨೧೫ ॥

ಅಂಗಸಾಧನೆ ಬೇಕು, ಅಂತೆಯೇ ಬೇಕೆಂತ-
ರಂಗಸಾಧನೆ ಬಾಳು ಬಂಗಾರವಾಗೆ।
ಸಂಗಡಿಸಬೇಕಂತರಂಗ ಬಹಿರಂಗಗಳ
ಮಂಗಳದ ಬೆಳೆ ಬೆಳೆಯೆ- ಮರುಳಸಿದ್ಧ ॥ ೨೧೬ ॥

ನಿನ್ನ ಮನಸಿಗೆ ನೀನೆ ಮಡಿವಳನು, ಗೋವಳನು,
ನಿನ್ನೆದೆಯ ಹುಲ್ನೆಲದ ಹಸುಳೆಗಳಿಗೆ ।
ನಿನ್ನೊಡಲ ಹಡಗಕ್ಕೆ ನೀನೆ ಲಂಗರು, ನಿನ್ನ
ಉನ್ನತಿಗೆ ನೀ ದಾರಿ– ಮರುಳಸಿದ್ಧ ॥ ೨೧೭ ॥

ನಿನ್ನ ಘಟ ಮಠ ನಿನಗೆ, ನನ್ನಿಯೊಲವೇ ಸ್ವಾಮಿ,
ಉನ್ನತಾದರ್ಶಗಳೆ ಕಾಷಾಯ ದಂಡ।
ತನ್ನಂತೆ ಅನ್ಯರನು ಬಗೆಯುವುದೆ ಪೂಜೆ ಜಪ,
ಉನ್ನಿಸುವ ಮನ ತಪವು– ಮರುಳಸಿದ್ಧ ॥ ೨೧೮ ॥

ಬಾಯಿ ತಿನ್ನದೆ ಹೊಟ್ಟೆಗೆಲ್ಲಿಂದ ಆಹಾರ?
ಕೈಯು ದುಡಿಯದೆ ಬಾಯಿಗೆಲ್ಲಿ ತುತ್ತು?
ಮೈಯು ಸಹಕರಿಸದಿರೆ ಕೈಯು ದುಡಿಯುವುದೆಂತು?
ಕಾಯ ಕಾಯಕಕಾಗಿ– ಮರುಳಸಿದ್ಧ ॥ ೨೧೯ ॥

ಗುಡಿಯೇಕೆ ಒಡಲನ್ನೆ ಗುಡಿ ಮಾಡಿಕೊಂಡವಗೆ?
ಮುಡುಪೇಕೆ ತನ್ನನೇ ಮುಡುಪು ಮಾಡಿದಗೆ?
ಒಡವೆಯೇತಕೆ ಬೆಡಗುಬಿನ್ನಣದ ಹುಡುಗಿಗೆ?
ಕೊಡೆಯೇಕೆ ಚಳಿಯಲ್ಲಿ– ಮರುಳಸಿದ್ಧ? ॥ ೨೨೦ ॥

ಇನನನ್ನೆ ಸೆರೆ ಹಿಡಿವ ಹನಿಯಂತೆ ನಿನ್ನ ಮನ,
ಅಣುವಿಗಣು, ಮಹಕೆ ಮಹ, ನಿಸ್ತೀರವು।
ಘನಕ್ಕೆ ಘನವನು ಪಡೆಯೆ ಬಳಸದನು; ಅಲ್ಪಕ್ಕೆ
ಮನಸೋಲದಿರು ಎಂದ– ಮರುಳಸಿದ್ಧ ॥ ೨೨೧ ॥

ಕಡಿದು ಪುಡಿಮಾಡಿದರೆ ಕಿಡಿಯ ಕೊಡುವುದೆ ಕಾಷ್ಠ?
ಹಿಡಿದು ಹೊಸೆದಾಗಲೇ ಬೆಂಕಿ! ಮನವ
ಒಡೆದು ಹುಡುಕದೆ ಹುರುಳ, ಕಡೆದು ಪಡೆ ಬೆಣ್ಣೆಯನು;
ಕಡೆ, ತಳಿಸು, ಹೊಸೆ, ನಾದು– ಮರುಳಸಿದ್ಧ ॥ ೨೨೨ ॥

ಉತ್ತಮಿಕೆ ಅಧಮಿಕೆಯು ಚಿತ್ತವೃತ್ತಿಯ ಒಳಗೆ
ಉತ್ಪನ್ನವಾಗುವುವು, ಚಿತ್ತವೃತ್ತಿಯನೆ।
ಹತ್ತು ಸಲ ತಿಕ್ಕುವುದು, ತೊಳೆಯುವುದು, ಒರೆಸುವುದು–
ಮತ್ತೊಮ್ಮೆ, ಮತ್ತೊಮ್ಮೆ– ಮರುಳಸಿದ್ಧ ॥ ೨೨೩ ॥

ಕಲ್ಮನದ ಕಲ್ನೆಲದಿ ಹದುಳತೆಯ ತರುಲತಾ-
ಗುಲ್ಮಗಳು ಬೆಳೆಯದಿರಬಹುದು; ಸಿಡಿಲ।
ಹೊಯ್ಲಿನಲಿ ಕಲ್ಲಿನೊಳೆ ಬಾವಿ ಬೀಳುವ ಹಾಗೆ
ಅಲ್ಲಿಯೂ ಬಿದ್ದೀತು- ಮರುಳಸಿದ್ಧ ॥ ೨೨೪ ॥

ಮನದ ಜ್ವಾಲಾಮುಖಿಯ ಸಿಡಿಯಗೊಡದವ ಸುಖಿಯು,
ತನುಮನದ ಸೆಳೆತಕ್ಕೆ ಸಿಕ್ಕವನೆ ದುಃಖಿ।
ತನಿವಗೆಯ ತೀರ್ಥದಲಿ ಮಿಂದವನೆ ಪಾವನನು,
ಘನಮನವೆ ಕೈವಲ್ಯ- ಮರುಳಸಿದ್ಧ ॥ ೨೨೫ ॥

ದಾಸನೇ ಮಾನವನು ತನ್ನಯ ಪರಿಸ್ಥಿತಿಗೆ?
ದಾಸನಲ್ಲವೆ ಅವನು ತನ್ನ ಮನಕೆ?
ಪಾಶವಾಗಿಹ ಮನದ ಈಶನಾದವಗುಂಟೆ
ದೇಶ ಕಾಲದ ಬಂಧ- ಮರುಳಸಿದ್ಧ? ॥ ೨೨೬ ॥

ಮನೆ ತೊರೆದು ಮಠ ಕಟ್ಟಿ, ಜನ ತೊರೆದು ಅಡಿಗೆರಗು-
ವನುಯಾಯಿಗಳ ಗುಂಪುಗಳನು ಕಟ್ಟಿ!
ಮನವ ವಿಷಯಗಳಲ್ಲಿ ಹರಿಬಿಡಲು ಫಲವೇನು?
ಮನ ಜಯಿಸೆ ಮನೆಯೆ ಮಠ-ಮರುಳಸಿದ್ಧ ॥ ೨೨೭ ॥

ಜನರೆಷ್ಟು ಬಗೆಯವರೊ ಮನವಷ್ಟು ಬಗೆಯದೆ!
ತನುವಿಗಿದೆ ಕುಲ ಜಾತಿ, ಮನಕೆ ಉಂಟೆ?
ಮನಕೆ ಆಳಾದವರ ಕುಲವೊಂದು, ಮನವಾಳ್ವ
ಜನರ ಕುಲವಿನ್ನೊಂದು- ಮರುಳಸಿದ್ಧ ॥ ೨೨೮ ॥

ನೆನೆದಾಗ ಹತ್ತಿರವು, ಮರೆದಾಗ ದೂರವು,
ನೆನೆವವರ ಮನವೆ ಮನೆ ನಿನಗೆ ತಂದೆ।
ಸನಿಹಕ್ಕೆ ಸನಿಹದಲಿ ನಿನ್ನನಿರಿಸುವ ಹಾಗೆ
ನೆನೆವ ಮನವನೆ ನೀಡು-ಮರುಳಸಿದ್ಧ ॥ ೨೨೯ ॥

ತನುವಿಗಿದೆ ಸಿಂಗಾರ, ಮನಕೊಂದು ಸಿಂಗಾರ,
ಜನರ ಮೆಚ್ಚಿಸಲಿಹವು ಬೇರೆ ಸಿಂಗಾರ।
ಮನದ ಸಿಂಗಾರವೇ ಸಿಂಗಾರಗಳ ರಾಣಿ।
ಮನುಜ ಗಳಸಿದ ಮೊದಲು- ಮರುಳಸಿದ್ಧ ॥ ೨೩೦ ॥

ವಿಷವನಿಳಿಸಲು ಉಂಟು ಮದ್ದುಗಳು, ಮಾನಸದ
ವಿಷವನಿಳಿಸಲು ಒಂದೆ ಮದ್ದು; ಸಮತೆ।
ರಸವಾಗುವುದು ವಿಷವು ಸಮತೆ ಕೈಗೂಡಿದರೆ;
ವಶಪಡಿಸಿಕೋ ಅದನು- ಮರುಳಸಿದ್ಧ ॥ ೨೩೧ ॥

ಜನರ ಮೆಚ್ಚಿಪುದೆಷ್ಟು ಕಷ್ಟಕರವೋ ನಿನ್ನ
ಮನವ ಮೆಚ್ಚಿಪುದದಕು ಕಷ್ಟತರವು।
ಮನ ಸವಾರಿಯ ಮಾಡೆ ಸಂಕಷ್ಟ, ಮನವನೇ
ನಿನಗೆ ವಾಹನ ಮಾಡೊ- ಮರುಳಸಿದ್ಧ ॥ ೨೩೨ ॥

ದನಿಯಂತೆ ಪಡಿದನಿಯು, ಕೆನೆಯಂತೆ ಬೆಣ್ಣೆಯು,
ತೆನೆಯಂತೆ ರಾಶಿಯು, ಹಿಟ್ಟು-ರೊಟ್ಟಿ; ।
ನನೆಯಂತೆ ಪರಿಮಳವು, ಜನರಂತೆ ಸರಕಾರ,
ಮನದಂತೆ ಮಾದೇವ- ಮರುಳಸಿದ್ಧ ॥ ೨೩೩ ॥

ಬೇವಿನರಳಿನೊಳಿರಲು ವಿಷವೆ ರಸವಾಗುವುದು,
ಕಾವನಂಬಿನ ಅಲರ ರಸವೆ ವಿಷವು।
ಭಾವಶುದ್ಧಿಯು ಇರಲು ರಸವಾಗಿ ಸಲ್ಲುವುದು
ಜೀವನದ ವಿಷವೆಲ್ಲ- ಮರುಳಸಿದ್ಧ ॥ ೨೩೪ ॥

ಮನವು ಮಾಗಲಿ ಕಾಯಿ ಮಾಗಿ ಹಣ್ಣಾಗುವೊಲು,
ತನಿಗಂಪು ಮಾಗುವೊಲು ನನಕೊನೆಗಳಲ್ಲಿ।
ಕೆನೆದೋರುವಂದದಲಿ ಇಳಿಸಿದುಷ್ಣದ ಹಾಲು,
ಘನವು ಮೂಡಲಿ ಮನದಿ- ಮರುಳಸಿದ್ಧ ॥ ೨೩೫ ॥

ಮನಕೆ ಆಳಾದವನು ಏನಿದ್ದರೂ ಆಳು,
ಮನವನಾಳುವ ಬಂಟ ಎಲ್ಲೆಲ್ಲು ಬಂಟ।
ಘನಗೊಳಿಸಿದವ ಚಿದ್ರೂಪಿ, ಚಿನುಮಯನು
ಮನವನಿಲ್ಲೆನಿಸಿದವ- ಮರುಳಸಿದ್ಧ ॥ ೭೩೬ ॥

ಆನೆಗಿದೆ ಅಂಕುಶವು, ಕುದುರೆಗಿದೆ ಕಡಿವಾಣ,
ಶ್ವಾನಕಿದೆ ಸರಪಳಿಯು, ಪಂಜರವು ಹುಲಿಗೆ।
ನೀನು ಸಹ ಬಂದಿಯೇ ನಿನ್ನ ಅಳಿ ಮಾನಸದಿ;
ನೀನೆ ನಿನ್ನನು ಬಿಡಿಸು- ಮರುಳಸಿದ್ಧ ॥ ೨೩೭॥

ಮನೆಗೆ ಹಬ್ಬಗಳುಂಟು, ಮನಕೆ ಹಬ್ಬಗಳುಂಟು,
ಜನರ ಪ್ರೀತಿಯೆ ನಿಜದಿ ಮನದ ಹಬ್ಬ।
ಜನುಮ ಸಾರ್ಥಕ ಪ್ರೀತಿ ತುಂಬಿ ತುಳುಕುತ್ತಿರಲು
ಮನದಲ್ಲಿ, ಜೀವನದಿ– ಮರುಳಸಿದ್ಧ ॥ ೨೩೮ ॥

ನಿನ್ನ ಮನವೇ ನಿನಗೆ ನ್ಯಾಯಮೂರ್ತಿಯು ನಿನ್ನ
ಅನ್ಯಾಯ ನ್ಯಾಯಗಳ ನಿಷ್ಕರ್ಷೆಸೆ।
ಅನ್ಯರರಿಯದ ಹಾಗೆ ಅನ್ಯಾಯ ಸಾಧ್ಯವು;
ತನ್ನ ಮನಕರಿದೆ ಅದು– ಮರುಳಸಿದ್ಧ? ॥ ೨೩೯ ॥

ನಿನ್ನರಿವೆ ಗುರು ನಿನಗೆ, ನಿನ್ನಾತ್ಮವೇ ಲಿಂಗ,
ನಿನ್ನ ಮನ ಸಂಚರಿಪ ಜಂಗಮವು ನೋಡ।
ಸನ್ಮತಿಯೆ ಭಸ್ಮವು, ಸರ್ವಹಿತರತಿ ಮಂತ್ರ,
ಚೆನ್ನೋಟ ರುದ್ರಾಕ್ಷಿ–ಮರುಳಸಿದ್ಧ ॥ ೨೪೦ ॥

ನಿನ್ನ ನ್ಯಾಯಾಧೀಶ ನೀನೆ, ಸಾಕ್ಷಿಯು ನೀನೆ,
ಉನ್ನತೋನ್ನತ ನ್ಯಾಯಪೀಠವೂ ನೀನೆ।
ನಿನ್ನ ತೀರ್ಪನು ನೀನೆ ಬರೆಯಬೇಕಿಲ್ಲಿಯೇ,
ಇನ್ನಾರು ಬರೆದಾರು– ಮರುಳಸಿದ್ಧ ॥ ೨೪೧ ॥

ಹೊನ್ನು ಹಲವಿವೆ ಜಗದಿ; ಗಣಿಯೀವ ಹೊನ್ನೊಂದು,
ಇನ್ನಿಹವು ಕರಿಹೊನ್ನು, ಹಸುರುಹೊನ್ನು।
ನನ್ನಿನುಡಿ, ಚೆನ್ನನಡೆ ಇನ್ನಿತರ ಹೊನ್ನುಗಳು,
ತನ್ನತನವೇ ಹೊನ್ನು– ಮರುಳಸಿದ್ಧ ॥ ೨೪೨ ॥

ಹೆರವರನೆ ನಂಬಿದವ ಎರವಾಗುವನು ತನ್ನ
ಉರದಲೇ ಅವಿತಿರುವ ಸ್ವಂತಿಕೆಯ ಸಿರಿಗೆ।
ಹೆರವರದು ಒರೆ ಮಾತ್ರ, ತನ್ನತನ ಖಡ್ಗವು,
ಇರಲಿ ಅದು ಹದನಾಗಿ– ಮರುಳಸಿದ್ಧ ॥ ೨೪೩ ॥

ಎರವಲವು ಆಗುವುದು ಉರುವಲವು ಕೊನೆಗೊಮ್ಮೆ,
ಹೆರವರಿರಗೊಟ್ಟ ಮನೆ ತನಗಾಗದಂತೆ।
ಪರದ್ಯುತಿಯ ರಾಶಿಗಿಂ ಸ್ವಪ್ರಕಾಶದ ಲೇಶ
ಹಿರಿದೆಂದು ನಂಬಿ ನಡೆ– ಮರುಳಸಿದ್ಧ ॥ ೨೪೪ ॥

ಅನ್ಯರಾಶ್ರಯ ನಿಜದಿ ತನ್ನತನಕೇ ವೈರಿ,
ಸೊನ್ನೆ ತಾನೇ ತನ್ನ ಮೇಲೆತ್ತುವಲ್ಲಿ।
ತನ್ನೊಳಗೆ ಮುಳುಗುತ್ತ ತನ್ನ ತಾನೆತ್ತುವುದೆ
ಉನ್ನತಿಯ ಸೂತ್ರವೈ– ಮರುಳಸಿದ್ಧ ॥ ೨೪೫ ॥

ಮಂದಿ ಕೊಂದುದ ತಿಂದು ಬದುಕಲೊಪ್ಪದು ಹುಲಿಯು,
ತಿಂದುಳಿದ ಎಂಜಲವ ತಿನ್ನುವುದು ಹಂದಿ।
ಒಂದೆ ದಿನ ಬದುಕಿದರು ಬದುಕು ಹೆಬ್ಬುಲಿಯಂತೆ,
ಹಂದಿಯಾಗಿರಬೇಡ– ಮರುಳಸಿದ್ಧ ॥ ೨೪೬ ॥

ರಸನಿಮಿಷವೆಂದುದೇ ವಿಷನಿಮಿಷವಾದಾಗ
ಕಸಿವಿಸಿಯು ಸಹಜವೇ। ಕೋಟಿ ವಿಷನಿಮಿಷ
ಅಸುವಳಿಯಲಾರವು। ವಿಷಕಂಠನಲ್ಲ ನಾ
ವಿಷದೇಹಿಯೆಂದುಸಿರೊ– ಮರುಳಸಿದ್ಧ ॥ ೨೪೭ ॥

ಸ್ವತ್ವದಿಂದಲೆ ಸತ್ವ, ಸತ್ವದಿಂ ವ್ಯಕಿತ್ವ,
ತತ್ತ್ವಕ್ಕೆ ತಲೆಬಾಗೆ ಅತಿಮಾನವತ್ವ।
ಯತ್ನಸಾಹಸದೊಡನೆ ಕರ್ತೃತ್ವ ಕೆಳೆಮಾಡೆ
ಅತ್ಯುನ್ನತಿಯು ನಿನಗೆ– ಮರುಳಸಿದ್ಧ ॥ ೨೪೮ ॥

ಕಣ್ಣ ಬೆಳಕದು ಇಂಗೆ ಬೆಳಕೆಲ್ಲ ಕತ್ತಲೆಯು;
ತನ್ನತನವಳಿದೊಡೆ ಜಗ ಮರಳುಗಾಡು।
ಉನ್ನತಿಯ ಭವನಕ್ಕೆ ನಿನ್ನತನ ತಳಹದಿಯು,
ನಿನ್ನ ನೀ ನಂಬಿ ನಡೆ– ಮರುಳಸಿದ್ಧ ॥ ೨೪೯ ॥

ಧನ್ಯತೆಗೆ ದಾರಿಯಿದೆ ನಿನ್ನೊಳಗಿನಿಂದಲೇ–
ನಿನ್ನತನ ಆ ದಾರಿ; ಅದು ಅಳಿಯೆ ಹಾಳು!
ಮುನ್ನೀರ ಮುಟ್ಟಲಿಕೆ ನದಿಯ ನೆರ ಪಡೆವಂತೆ
ನಿನ್ನ ನೆರ ನೀ ಪಡೆಯೊ– ಮರುಳಸಿದ್ಧ ॥ ೨೫೦ ॥

ತನ್ನನೆಣಿಸದೆ ಅನ್ಯರನ್ನೆ ಎಣಿಸಿದ ಬೆಪ್ಪ
ಇನ್ನೊಬ್ಬನೆಲ್ಲಿಹನು ಎಂದಳಲುವಂತೆ।
ತನ್ನತನ ಬೆಳೆಸದಲೆ ಅನ್ಯರೆಂಜಲ ತಿಂದು
ಕುನ್ನಿಯಾದವನ ಗತಿ– ಮರುಳಸಿದ್ಧ ॥ ೨೫೧ ॥

ಕತ್ತರಿಸಿದಂತೆಯೇ ಬೆಳೆಯುವುವು ಕೇಶಗಳು,
ಸತ್ವಹೀನತೆ ಬರಲು ತಾವೆ ಉದುರುವುವು!
ಸ್ವತ್ವವಿರುವನಕವೇ ವ್ಯಕ್ತಿಯ ವಿಜೃಂಭಣೆಯು,
ಬತ್ತಗೊಡದಿರು ಅದನು- ಮರುಳಸಿದ್ಧ ॥ ೨೫೨ ॥

ಸೋಲು ಸೆಲೆ ಗೆಲವಿಗೆ, ನೋವು ಸೆಲೆ ನಲವಿಗೆ,
ಕೂಲು ಸೆಲೆ ನೆಗೆತಕ್ಕೆ, ಉಡ್ಡಾಣಕೆ।
ಕಾಳ ಸೆಲೆ ಬೆಳಕಿಗೆ, ಕೋಳ ಸೆಲೆ ಬಿಡುಗಡೆಗೆ,
ಶೀಲ ಸೆಲೆ ಸರ್ವಕ್ಕೆ- ಮರುಳಸಿದ್ಧ ॥ ೨೫೩ ॥

ತನ್ನ ಕಣ್ಣುಗಳಲ್ಲಿ ತಾನೆ ಕೀಳೆನಿಸುವುದೆ
ಬನ್ನ ಬನ್ನಗಳಲ್ಲಿ, ಕುನ್ನಿತನವು!
ತನ್ನತನವನೆ ನಂಬಿ ನಿಡಿದು ಸಾಧನೆಗೈಯೆ
ಉನ್ನತೋನ್ನತ ಗತಿಯು- ಮರುಳಸಿದ್ಧ ॥ ೨೫೪ ॥

ರಣರಂಗದಲಿ ಕಾದುವರಿಗಿಂತ ಓಡುವರೆ
ಅಣಿಯರದಿ ಮಡಿಯುವರು! ಬಾಳು ಹೊರಿಪ
ಹೊಣೆ ಹೊರುವ ಜನಕಿಂತ ಹೊಣೆಗೇಡಿಯಾಗುವ
ಜನರೆ ಪಡೆವರು ಗೋಳ- ಮರುಳಸಿದ್ಧ ॥ ೨೫೫ ॥

ನಚ್ಚು ಕೆಚ್ಚಿಗೆ ನಿಜದಿ ಕೆಚ್ಚಲವು; ನಚ್ಚೊಮ್ಮೆ
ನುಚ್ಚು ನೂರಾಯಿತೋ ಕೆಚ್ಚಿಗದೆ ಕಿಚ್ಚು!
ನಚ್ಚು-ಮಚ್ಚನು ಹಿಡಿದು ಕೊಚ್ಚು ಕ್ಲೈಬ್ಯವನೆಲ್ಲ-
ಮೆಚ್ಚುವರು ಅಚ್ಚಜನ- ಮರುಳಸಿದ್ಧ ॥ ೨೫೬ ॥

ಬಯಕೆ ಬಸಿರಿಗೆ ಸಹಜ, ದಯವು ಬಸವಗೆ ಸಹಜ,
ನಯ ಸಹಜ ನಮ್ರನಿಗೆ- ಸಮದರ್ಶಿಗೆ।
ಜಯ ಸಹಜ ಸಾಹಸಿಗೆ, ಭಯ ಸಹಜ ಹೇಡಿಗೆ,
ರಯ ಸಹಜ ಪಯಚಯಕೆ- ಮರುಳಸಿದ್ಧ ॥ ೨೫೭ ॥

ತನ್ನ ಮೇರುಕೃತಿಯು ಸುಟ್ಟರೂ ಎದೆಗೆಡದೆ
ಇನ್ನೊಮ್ಮೆ ಬರೆದನದ ಕಾರ್ಲಾಯಿಲ।
ಇನ್ನೊಬ್ಬ ಡಫೀಲ್ಡ್ ಇದನೆ ಮಾಡಿದ; ಧೃತಿಗೆ
ಇನ್ನೇನಸಾಧ್ಯವು- ಮರುಳಸಿದ್ಧ ॥ ೨೫೮ ॥

ಸಾಳ್ವನಂಥವರಿರಲು ಕೋಲೆ ರಾಮನ ಕೋಲು,
ತೂಳ್ವ ಕಲೆ ಗೊತ್ತಿರಲು ಗ್ರಾಮ್ಯನೂ ಗೆಲ್ವ
ಸಲ್ವಗತಿ ಗೊತ್ತಿರಲು ಇಲ್ಲೇನು, ಅಲ್ಲೇನು–
ಗೆಲ್ವ ಸದ್ಗತಿಯನ್ನು– ಮರುಳಸಿದ್ಧ ॥ ೨೫೯ ॥

ಉತ್ತರನ ಕೈಸೇರೆ ದಿವ್ಯಾಸ್ತ್ರ ಕೈಹೊರೆಯು,
ಪಾರ್ಥನಿಗೆ ದಿಗ್ವಿಜಯ ಸಾಧನವು ಅದುವೆ!
ಸತ್ವಾತಿಶಯದಿಂದ ಶಸ್ತ್ರಗಳಿಗಿದೆ ಬೆಲೆಯು
ಸ್ವತ್ವದಿಂ ಬಾಳ್ಗೆ ಬೆಲೆ– ಮರುಳಸಿದ್ಧ ॥ ೨೬೦ ॥

ಮಲಗಿದರೆ ಮಲಗುವುದು, ಎದ್ದರೊಡನೇಳುವುದು,
ಚಲಿಸಿದರೆ ಚಲಿಸುವುದು ಭಾಗ್ಯವೆನ್ನುವರು!
ಕಲಿಯಾಗೆ ನಿನ್ನೆಡೆಗೆ ಒಲಿದು ಬರುವುದು ತಾನೆ.
ಕಲಿ ನೀನು ಕಲಿಯಾಗೆ– ಮರುಳಸಿದ್ಧ ॥ ೨೬೧ ॥

ತಲೆ ಎತ್ತಿ ನಡೆಯಿರಿ, ಎದೆ ಸೆಟೆಸಿ ನಡೆಯಿರಿ,
ತಲೆತಗ್ಗಿಸುವ ಕಾರ್ಯ ಮಾಡಬೇಡಿ!
ತಲೆಗೊಡಿರಿ ಮಾನಕ್ಕೆ, ಲೋಕ ಕಲ್ಯಾಣಕ್ಕೆ,
ತಲೆಗೆ ಬೆಲೆ ತನ್ನಿರೋ– ಮರುಳಸಿದ್ಧ ॥ ೨೬೨ ॥

ನರಿಯ ಯುಕ್ತಿಯು ಮೇಲೊ? ಕರಿಯ ಶಕ್ತಿಯು ಮೇಲೊ?
ಹರಿಯ ಶೌರ್ಯವು ಮೇಲೊ, ಕರಡಿ ಮೇಲೋ?!
ನರನ ಮತಿಯೇ ಮೇಲು, ನರನ ಸಾಹಸ ಮೇಲು,
ಮೆರೆಸದನೆ ಇರವಿನಲಿ– ಮರುಳಸಿದ್ಧ ॥ ೨೬೩ ॥

ನೂರು ಅಸೆಗಳಲ್ಲಿ ಮೂರು ಈಡೇರಿದರು
ತೀರಿತಿಲ್ಲಿಯ ಕೆಲಸ! ಅಷ್ಟರಲೆ ಹರುಷ
ತೋರಿ, ತೃಪ್ತಿಯ ಬೀರಿ, ಬಾಳ ಧನ್ಯತೆ ಸಾರಿ,
ದಾರಿ ಬಿಡು ಹೊಸಬರಿಗೆ– ಮರುಳಸಿದ್ಧ ॥ ೨೬೪ ॥

ತಿಲಮಾತ್ರವಾದರೂ ಛಲವಿಲ್ಲದನ ಹೇಡಿ,
ಛಲವೊಂದನೇ ನಂಬಿದವನು ಖೋಡಿ!
ಒಳಿತಿಗಾಗಿಳಿ ಬಲವು, ಕೆಡುಕಿಗಾಗಿರೆ ಹೊಲೆಯು,
ಬಳಸದನು ಶುಭಕಾಗಿ– ಮರುಳಸಿದ್ಧ ॥ ೨೬೫ ॥

ತೂಗದಿರು ಯಶವನ್ನು ಸೋಲುಗಳ, ಗೆಲವುಗಳ,
ಭೋಗಗಳ ತಕ್ಕಡಿಯೊಳಿಟ್ಟು ಗೆಳೆಯ।
ತ್ಯಾಗದಲಿ, ಭೋಗದಲಿ, ಸೇವಾನುರಾಗದಲಿ
ಮಾಗುವುದೆ ಜಸ ನಿಜದಿ–ಮರುಳಸಿದ್ಧ ॥ ೨೬೬ ॥

ಎಲ್ಲರಿಗು ಸರಿಹೋಗುವಂಥ ಸೂತ್ರವು ಇಲ್ಲ;
ಇಲ್ಲದುದ ಹುಡುಹುಡುಕಿ ಮಿಡುಕಬೇಡ!
ಎಲ್ಲರೊಡನೊಂದಾಗಿ ನಿನ್ನೊಲವಿನಂತೆ ಬೆಳೆ–
ದಲ್ಲಿ ನಿನಗದೆ ಸೂತ್ರ– ಮರುಳಸಿದ್ಧ ॥ ೨೬೭ ॥

ಬಾಳ ಕಡಲಲ್ಲಿಯೇ ಬೀಸಿಬಿಡು ಬಲೆಯನ್ನು–
ಬೀಳುವುವು ಮೀನುಗಳೋ ಏನಿಲ್ಲವೊ।
ಬಾಳಿತ್ತುದನು ನೀನು ತಾಳಿಕೊಳ್ಳಲೆಬೇಕು;
ತಾಳಿಕೆಯೆ ಬಾಳಿಕೆಯು– ಮರುಳಸಿದ್ಧ ॥ ೨೬೮ ॥

ಈ ಕಾಡ ಮಧ್ಯದಲಿ ಕೀಟವಾಗಿರಬಲ್ಲೆ,
ಆ ಕಡಲಿನೊಡಲಿನಲಿ ಮೀನವಾಗಿ।
ಆಕಾಶದಲಿ ತಾರೆಯಾಗಲೇ ಬೇಕಿಲ್ಲ–
ಸಾಕಿಲ್ಲಿ ಸಲ್ಲುವುದು– ಮರುಳಸಿದ್ಧ ॥ ೨೬೯॥

ಮುಂದೆ ಸೆಳೆಯುವುದೇನೊ, ಹಿಂದಕೆಳೆಯುವುದೇನೊ,
ಒಂದೊಂದು ಹೆಜ್ಜೆಗೂ ಸಂದಿಗ್ಧತೆ।
ಸಂದೇಹ ಸಂದೋಹ ಮುತ್ತಿದರು ನಿಜಧ್ಯೇಯ–
ವೊಂದನ್ನು ನಂಬಿ ನಡೆ– ಮರುಳಸಿದ್ಧ ॥ ೨೭೦ ॥

ಮುದ್ರೆಗಳ ಪೆಟ್ಟುಗಳ ತಾಳುತಲೆ ಲಕ್ಕೋಟೆ
ಭದ್ರವಾಗಿರಿಸುವುದು ಒಳಗಿನೋಲೆ।
ಛಿದ್ರಗೊಳಿಸುವುದೆ ನೀ ಭದ್ರವಿರುವುದ ಸಹಿತ?
ಕ್ಷುದ್ರತೆಯು ತರವಲ್ಲ– ಮರುಳಸಿದ್ಧ ॥ ೨೭೧ ॥

ರುಕ್ಷತೆಯು ಇರುವಲ್ಲಿ ರಸವನುತ್ಪಾದಿಪುದು,
ರಾಕ್ಷಸತೆಯಿರುವಲ್ಲಿ ಮಾನವತೆಯ।
ಸಾಕ್ಷರತೆಯಿರದಲ್ಲಿ ಶಿಕ್ಷಣವ ಹರಡುವುದು
ಲಕ್ಷ್ಯವಾಗಲಿ ನಿನಗೆ– ಮರುಳಸಿದ್ಧ ॥ ೨೭೨ ॥

ಮತಿಯಿರಲಿ ವಿಜಿಗೀಷು, ಜನಹಿತದಿ ರತಿಯಿರಲಿ,
ಮತಿಗೆ ಸಮ್ಮತವೆನಿಪ ಮತವು ಇರಲಿ।
ಋತವ ಗೆಲಿಸುವೆನೆಂಬ ವ್ರತವಿರಲಿ, ಧೃತಿಯಿರಲಿ,
ಕೃತಿಯಿರಲಿ ನುಡಿದಂತೆ– ಮರುಳಸಿದ್ಧ ॥ ೨೭೩ ॥

ಬೇಕೆನಲು ಓಡೋಡಿ, ಬೇಡವೆನೆ ಬೆಂಬತ್ತಿ,
ಸಾಕೆನಲು ಮೈಹತ್ತಿ ನರ್ತಿಪುದು ಫಲವು।
ನೂಕು ದಿನಗಳ ಶುದ್ಧ ಕಾಯಕವ ಮಾಡುತ್ತ,
ಬೇಕು ಬೇಡನ್ನದೆಯೆ– ಮರುಳಸಿದ್ಧ ॥ ೨೭೪ ॥

ಗೆಲವೆಷ್ಟು ಚಪಲವೋ ಸೋಲಷ್ಟೆ ಚಂಚಲವು,
ನಲವೆಷ್ಟು ಅಸ್ಥಿರವೊ ಅಳಲಷ್ಟೆ ಆಚಿರ।
ತಿಳಿದು ನಡೆದರೆ ನಲವು, ತಿಳಿಗೆಟ್ಟರದೆ ಅಳಲು.
ಬಳಲದಿರು ತಿಳಿಗೆಟ್ಟು– ಮರುಳಸಿದ್ಧ ॥ ೨೭೫ ॥

ಪ್ರಮದವನವಿದ್ದಲ್ಲಿ ಪ್ರೇತವನ ಬರಬಹುದು.
ರಮಣೀಯ ಸೌಧವೇ ಕುಟಿಯಾಗಬಹುದು।
ಕಮನೀಯವಾದದ್ದು ಕಟುವಾದರಚ್ಚರಿಯೆ?
ಸುಮ ಮುಳ್ಳು ಸಮವೆನ್ನೊ– ಮರುಳಸಿದ್ಧ ॥ ೨೭೬ ॥

ತಿರುತಿರುಗಿ ಸಾಯುತ್ತ ತಿರುತಿರುಗಿ ಬದುಕುವುದೆ
ಇರವೆಂದನೋರ್ವಕವಿ, ಸರಿಯೆ, ಕಿಂತು।
ಬರಿ ಸತ್ತು ಹುಟ್ಟುವುದೆ ಗುರಿಯಲ್ಲ! ಪ್ರತಿಸಲವು
ಹಿರಿದಾಗಲೊಳಸಿರಿಯು– ಮರುಳಸಿದ್ಧ ॥ ೨೭೭ ॥

ನಿನ್ನೊಳಗೆ ನಡೆದಿಹುದು ನೀನರಿಯದಂತೆಯೇ
ಬನ್ನಗಳ ಭಟ್ಟಿಯಲಿ ಭಾವಪಾರಿಪಾಕ।
ಚಿನ್ನವಾಗುವುದದಿರು ಕಾಲಾನುಕ್ರಮದಲ್ಲಿ–
ಖಿನ್ನನಾಗದೆ ಕಾಯ– ಮರುಳಸಿದ್ಧ ॥ ೨೭೮ ॥

ಹಸನಾಗಿ ಬದುಕಲಿಕೆ ವಸುಧೆಯೊಳಗೇನಿಲ್ಲ?
ವಸುಧೀಶನಿತ್ತಿಹನು ಇಲ್ಲಿ ಏನೆಲ್ಲ।
ಪಶುಗಳೂ ಋಷಿಯೊಡನೆ ಬದುಕಿರಲು ಮಾನವನೆ
ಗಸಣಿಗೊಳ್ವುದು ಚೋದ್ಯ– ಮರುಳಸಿದ್ಧ ॥ ೨೭೯ ॥

ಸೃಷ್ಟಿಯೆಲ್ಲವ ನಿನಗೆ ಕೊಟ್ಟಿಹೆನು ಪ್ರೀತಿಸಲು–
ತುಷ್ಟವಾಗದಿರಲ್ಪದಿಂದೆಂಬ ಶಿವನು।
ಅಷ್ಟಸಂಪದಗಳನೆ ಕೊಟ್ಟರೂ ಆಲ್ಪರಿವೆ
ಮುಷ್ಟಿಧಾನ್ಯಕೆ ನೀನು– ಮರುಳಸಿದ್ಧ ॥ ೨೮೦ ॥

ಹಣ್ಣಾಗದಿಹ ಹೂವು, ಹೊನ್ನಾಗದಹ ಶಿಲೆಯು,
ಮಣ್ಣಾಗದಿಹ ಮರಳು ವ್ಯರ್ಥವೆನಬೇಡ।
ಇನ್ನಾವುದೋ ಸಾರ್ಥಕತೆಯವಕೆ; ನಿನ್ನೊಳೂ
ಧನ್ಯತೆಯ ನಿಕ್ಷೇಪ– ಮರುಳಸಿದ್ಧ ॥ ೨೮೧ ॥

ಚಂದ್ರ ದುರ್ಬಲನೆಂದು ಹಗಲೆಲ್ಲ ಗ್ರಹಣ, ದಿವ
ದಿಂದ್ರ ಸಬಲನು– ಅವಗೆ ಎಂದೊ ಒಮ್ಮೆ!
ಕಂದುಕಕೆ ಕಾಲೇಟು ಬಂದೂಕ ಕೈಯಲ್ಲಿ–
ಎಂದಿಗೂ ಬಲಕೆ ಬೆಲೆ ಮರುಳಸಿದ್ಧ ॥ ೨೮೨ ॥

ನಾನಿಹೆನು ಅಡಿಗಲ್ಲು; ನೀನಿಹೆಯೊ ಸುತ್ತಿಗೆಯು?
ಏನಿಟ್ಟು ಹಣಿವೆಯೋ ಹಣಿ ಮತ್ತೆ ಮತ್ತೆ!
ಮೌನದಲಿ ಸಹಿಸುವೆನು ನೀನೆ ನಿಲ್ಲಿಸುವನಕ!
ನೀನೀವ ಬರೆಯೆ ವರ– ಮರುಳಸಿದ್ಧ ॥ ೨೮೩ ॥

ಗಾಜು ಕನ್ನಡಿಯಾಗೆ ಲೇಪ ಬೇರೊಂದು ಕಡೆ,
ತೇಜಾಬು ಬೇಕಳಿಯೆ ಕಸವರದ ಕಸರು।
ಸೂಜಿ ಸಹಿಸವೆ ಉಡುಪೆ? ಸಾಜ ಲೇಸಿಗೆ ನಿನ್ನ
ಓಜುಗಟ್ಟಿಗೆಯೆಂದ– ಮರುಳಸಿದ್ಧ ॥ ೨೮೪ ॥

ಅದಿರ ಪದರುಗಳನ್ನು ಶೋಧಿಸುವ ಕೊಳೆಯನ್ನು
ಚೆದುರಿಸಲು ಅದಕಾವ ಅನ್ಯಾಯ ಹೇಳು।
ಹದುಳಿಗರು ಕೈಕೊಳುವ ದೋಷನಾಶನ ಕಾರ್ಯ
ಸದಯತೆಯ ಸದರೆ ಸರಿ– ಮುರುಳಸಿದ್ಧ ॥ ೨೮೫ ॥

ಒಳಗು ಬೆಳಗದೆ ಹೊರಗು ಥಳಥಳಿಸಿ ಫಲವೇನು?
ಬೆಳಕೆ ಕತ್ತಲೆ ಒಳಗೆ ಅಮವಾಸ್ಯೆಯಿರಲು।
ಹೊಳೆವಾಗ ಆಂತರ್ಯ ಬಾಹಿರದ ತಿಮಿರವೂ
ತೊಳಗುತಿಹ ಹುಣ್ಣಿಮೆಯು– ಮರುಳಸಿದ್ಧ ॥ ೨೮೬ ॥

ಪಪ್ಪಾಯಿ ಸಿಪ್ಪೆಯಲಿ ವಿಷವು, ಒಳಗಡೆ ಸವಿಯು;
ಸೊಪ್ಪೆ ಸಪ್ಪೆಯು, ಸಿಹಿಯು ತೆನೆಯ ಕಾಳು।
ಸಿಪ್ಪೆಸೊಪ್ಪೆಯನುಳಿದು ತಿರುಳ ತಿನ್ನದೆ ಹೋಗೆ
ತಪ್ಪಾರದಿಳೆಯಲ್ಲಿ– ಮರುಳಸಿದ್ಧ? ॥ ೨೮೭ ॥

ನಸುಗಂಪು ಸೂಸುತಿಹ ಕುಸುಮವೇ ದುರ್ನಾತ
ಸುರಿಸುವುದು ಹೊಸಕಿದರೆ! ಬದುಕು ಸಹಿತ
ಹರಿಸುವುದು ಪರಿಮಳವ ನಯದೊಡನೆ ಮುಡಿದರೆ:
ದುರುಪಯೋಗದಿ ಹೊಲಸು– ಮರುಳಸಿದ್ಧ ॥ ೨೮೮ ॥

ಕಡಲ ತೆರೆಗಳ ಉಗಮವೆಲ್ಲಿ? ಎಂದಾಗಿತ್ತು?
ಕಡೆಯ ಕಾಣುವುದೆಲ್ಲಿ, ಎಂದು, ಎಂತು?
ಹಡುಕಬೇಕೆಂದಿದನು ಮಿಡುಕುವುವೆ ತೆರೆಗಳವು?
ನಡೆದು ಪಡೆವವು ಸೊಗವ– ಮರುಳಸಿದ್ಧ ॥ ೨೮೯ ॥

ಒಂದಾಯು ಸಾಲದು ಬರೆದಿಟ್ಟುದನು ಓದೆ,
ಒಂದೆ ಜೀವನದಲ್ಲಿ ಸಾಧಿಸುವುದೆಷ್ಟು?
ಹಿಂದಿನದನೋದುತ್ತ, ಇಂದಿನೊಡನಾಡುತ್ತ,
ಮುಂದಕ್ಕೆ ಸಾಗು ನೀ– ಮರುಳಸಿದ್ಧ ॥ ೨೯೦ ॥

ಎಲ್ಲ ಸರಿಯಿರುವ ಸ್ಥಳ ಎಲ್ಲಿ ಪಡೆಯುವಿ ನೀನು?
ಇಲ್ಲಿರುವುದೆಲ್ಲವೂ ಸಾಪೇಕ್ಷವು।
ಗೆಲ್ಲಬೇಕಿದ್ದುದನು, ನಿಲ್ಲಬೇಕಣಿಯಾಗಿ
ಇಲ್ಲದುದ ಪಡೆಯಲು– ಮರುಳಸಿದ್ಧ ॥ ೨೯೧ ॥

ಎಲ್ಲರೂ ತೊರೆದಾಗ ಯಾರೊ ನೆರವಾಗುವರು,
ಎಲ್ಲಿಂದಲೇ ನೆರವು ಬಂದು ತಲುಪುವುದು।
ಇಲ್ಲದಿರೆ ನಡೆದೀತೆ ಜೀವರಥವಿದು ಮುಂದೆ?
ಕೊಲ್ಲುವನೆ ಕಾಯುವನು– ಮರುಳಸಿದ್ಧ ॥ ೨೯೨ ॥

ಮಾಡಿದರು ಅನ್ನುವರು, ಮಾಡದಿರೆ ಅನ್ನುವರು
ರೂಢಿ ಕೆಲವರಿಗಿಲ್ಲಿ ಟೀಕೆ ಮಾಡುವುದು।
ಮಾಡದೆಯೆ ಏನನೂ ಮಾಡುವರ ಟೀಕಿಸುವ
ಖೋಡಿಗಳ ಮಾತೇಕೊ– ಮರುಳಸಿದ್ಧ? ॥ ೨೯೩ ॥

ಬರುವುದನು ತಡೆವೆಯಾ? ಹಿಡಿತಹೆಯ ಬಾರದುದ?
ಇರುವುದೊಂದೇ ದಾರಿ, ಬಂದದ್ದನೆಲ್ಲ।
ಹರನವರವೆಂದರಿದು ಸಂತಸದಿ ಸ್ವೀಕರಿಸಿ
ಗುರಿಯತ್ತ ಸಾಗುವುದು– ಮರುಳಸಿದ್ಧ ॥ ೨೯೪ ॥

ಬಡಿದಾಟಗಳ ತಡೆಯೆ ಅಣುಬಾಂಬು ಹಾಕುವರೆ?
ಹೊಡೆದಾಟ ತಡೆಯಲು ಮಿಸೈಲು ಬೇಕೆ?
ಕೊಡಲಿ ಕೊಳ್ಳುವುದೇಕೆ ಉಗುರು ತೆಗೆಯಲಿಕೆಂದು?
ಹಿಡಿ ನಯದ ದಾರಿಯನು– ಮರುಳಸಿದ್ಧ ॥ ೨೯೫ ॥

ವೈರಿಗಳ ಗೆಲ್ಲುವೊಡೆ ಘೋರಾಸ್ತ್ರಗಳೆ ಬೇಕೆ?
ವೈರಿಗಳೆ ನನಗಿಲ್ಲವೆಂದರಾಯ್ತು!
ಸಾರತರವಾದುದನು ಸಾಧಿಸದೆ ಇಹದಲ್ಲಿ
ವೈರವನು ಸಾಧಿಪುದೆ– ಮರುಳಸಿದ್ಧ? ॥ ೨೯೬ ॥

ವರ್ತುಳಕೆ ಮಧ್ಯಬಿಂದುವಿನಂತೆ ಜೀವಿತಕೆ
ಕರ್ತೃತ್ವ, ಸೃಜನತ್ವ, ಪ್ರೀತಿ, ಸತ್ಯ।
ಕರ್ತಾರನಿತ್ತಿರುವ ಇವು ಸರ್ವರಲಿ ಅರಳಿ
ನರ್ತಿಸಲಿ ಬದುಕಿನಲಿ– ಮರುಳಸಿದ್ಧ ॥ ೨೯೭ ॥

ನಡೆಯೆ ನುಡಿಯಾದವರು ಪೊಡವಿಯಲಿ ವಿರಳರು:
ನುಡಿಯು ನಡೆಯಾದವರು ಎಲ್ಲೊ ಕೆಲರು।
ನುಡಿ ಬೆಲ್ಲ, ನಡೆಹೊಲ್ಲವಾದವರೆ ಹೆಚ್ಚಿಲ್ಲ–
ಹಿಡಿಯದಿರು ಅವರಯನ– ಮರುಳಸಿದ್ಧ ॥ ೨೯೮ ॥

ನಿಂತಲ್ಲೆ ನಿಲ್ಲುವಿರಿ ಅಂತ್ಯಕಾಲದವರೆಗೆ
ಎಂತು ಸಹಿಸುವಿರಿದನು ತರುಮರಗಳೆ?
ಅಂತರಿಕ್ಷಕೆ ಹಾರಿಯೂ ನಮಗೆ ತಣಿವಿಲ್ಲ–
ಸಂತಸದ ಸುಳಿವಿಲ್ಲ– ಮರುಳಸಿದ್ಧ ॥ ೨೯೯ ॥

ಸಣ್ಣ ಜೀನಿನ, ಸಣ್ಣ ಬಾಳೆಗಳ ಸವಿ ಹೆಚ್ಚು,
ಸಣ್ಣ ಮೆಣಸಿನಕಾಯ ಖಾರ ಹೆಚ್ಚು।
ಸಣ್ಣ ಮಿಡಿನಾಗರದ ವಿಷ ಹೆಚ್ಚು, ಸಣ್ಣವನೆ
ನಿನ್ನ ಶಕ್ತಿಯನರಿಯೊ– ಮರುಳಸಿದ್ಧ ॥ ೩೦೦ ॥

ಮರುಭೂಮಿಯೊಳು ನೀರು, ಬಿರುಬಿಸಿಲಿನಲಿ ನೆರಳು,
ಬರಿಹೊಟ್ಟೆಯಾದಾಗ ಭಕ್ಷ್ಯಭೋಜ್ಯ।
ದೊರೆತಾಗ ಸುಖ, ನಿಜದಿ, ಆದರದು ಸ್ಥಿರ ಸುಖವೆ?
ಸ್ಥಿರ ಚಿತ್ತ ಸ್ಥಿರ ಸುಖವು–ಮರುಳಸಿದ್ಧ ॥ ೩೦೧ ॥

ಗುಣಕೆ ಸಲ್ಲುವ ಮಾನ ಹಣಕೆ ಸಂದಾಗಲೇ
ಹೆಣವಾಗುವುದು ದೇಶ! ನೀನು ಮಾತ್ರ
ಮಣಿ ಗುಣಕೆ, ಮಣಿಸು ಹಣ, ಗಣರಾಜ್ಯವನು ಬೇಗ
ಗುಣರಾಜ್ಯವಾಗಿಸೈ– ಮರುಳಸಿದ್ಧ ॥ ೩೦೨ ॥

ನಿಜವನರಿಯುವ ಛಲವೆ ನಿಜದಿ ಜೀವಿಯ ಬಲವು;
ಸ್ವಜನ ಪರಜನರೆನ್ನದಿರುವ ಒಲವು।
ವಿಜಯದಾಯಿನಿ ಜಗದಿ! ಭೂತಹಿತರತವಾದ
ಋಜುಮತಿಯೆ ಸದುಗತಿಯು– ಮರುಳಸಿದ್ಧ ॥ ೩೦೩ ॥

ಭೂತಗನ್ನಡಿಯೆದುರು ಕೂತವನೆ ತಿಳಿಗೇಡಿ,
ನೀತಿಗೆಟ್ಟವನನ್ನು ನಂಬಿದವ ಮೂಢ।
ಭೂತಕಾಲಕ್ಕೆ ಜೋತು ಬಿದ್ದವನೆ ಬಿದ್ದವನು,
ಪ್ರೀತಿಯಿದ್ದವ ಗೆದ್ದ– ಮರುಳಸಿದ್ಧ ॥ ೩೦೪ ॥

ಮೂಗಿನ ಕುರೂಪವನು ಮೂಗುತಿಯು ಕಳೆಯುವುದೆ?
ಹೋಗಲಾಡಿಸಬಹುದೆ ಹಣ ಹೃದಯಕ್ಷಾಮ?
ನೀಗಬಲ್ಲುದೆ ಭೋಗ ರಾಗಲಾಲಸೆಗಳನು?
ಸಾಗು ಸಂಯಮಿಯಾಗಿ ಮರುಳಸಿದ್ಧ ॥ ೩೦೫ ॥

ಹಿಮಗಿರಿಯ ಶಿಖರಕ್ಕೆ ಹಿಮಮುಕುಟವಿದ್ದಂತೆ
ತೆಮರಿಗಿಲ್ಲೆಂಬೆಯಾ? ತೆಮರಿಗಿರುವ।
ಕಮನೀಯ ಹಸುರುಡೆಯು ಅದಕಿಹುದೆ? ಹಿಮವಲ್ಲಿ,
ಸುಮವಿಲ್ಲಿ, ಹಸುರಿಲ್ಲಿ– ಮರುಳಸಿದ್ಧ ॥ ೩೦೬ ॥

ದೂರಿಲ್ಲವೋ ದೇನ ಶುದ್ಧವಾಗಲು ಭಾವ.
ತೋರುವನು ಅಲ್ಲಿಯೇ ನಿನಗೆ ಅವನು।
ನೂರು ಕ್ಷೇತ್ರಕ್ಕಿಂತ ಭಾವಕ್ಷೇತ್ರವು ಮಿಗಿಲು–
ಸಾರು ಕ್ಷೇತ್ರಜ್ಞನೆಡೆ– ಮರುಳಸಿದ್ಧ ॥ ೩೦೭ ॥

ರಸವಾರೆ ತರುಲತೆಗಳೆಲ್ಲ ಉರುವಲು ನೋಡು,
ರಸಿಕತೆಯು ಬತ್ತಿದರೆ ಪಶುತನವೆ ಗತಿಯು!
ಋಷಿತನದ ಸಿದ್ಧಿಗೂ ಹೃದಯರಸ ಅನಿವಾರ್ಯ
'ರಸೋವೈಸಃ' ಎನ್ನು– ಮರುಳಸಿದ್ಧ ॥ ೩೦೮ ॥

ಮುದುಕನಾಗುವವರೆಗೆ ವಧುಶೋಧವೆ? ಇಡಿಯ
ಬದುಕು ಮುಗಿಯುವವರೆಗೆ ಗುರಿ ಶೋಧವೆ?
ಹದವರಿತು ಅರಿವುಕ್ರಿಯೆ ಬೆರೆಸಿ ಬದುಕಲು ಕಲಿಯೆ
ಹದುಳ ಹೊಮ್ಮದೆ ಇರದು– ಮರುಳಸಿದ್ಧ ॥ ೩೦೯ ॥

ರಾಗವೆನಿತುತ್ಕಟವೊ ದ್ವೇಷವಷ್ಟೇ ಕಟುವು,
ರೋಗವೆನಿತುಗ್ರವೋ ಮದ್ದಷ್ಟೆ ಉಗ್ರ!
ಭೋಗಿಸಿದ ಹಾಗೆಲ್ಲ ಬೇಗೆ ಹಚ್ಚುವುದೊಳಗೆ–
ತ್ಯಾಗಯುತ ಭೋಗ ಹಿತ– ಮರುಳಸಿದ್ಧ ॥ ೩೧೦ ॥

ಅಶನ ಹಾಸಿಗೆ ಸಾಕೆ ಹಸನಾದ ಬಾಳುವೆಗೆ?
ರಸಿಕ ಬಾಳಿಗೆ ಬೇಕು ಚೆಲುವು ಒಲವುಗಳು!
ಬಸವ ಬುದ್ಧರು ಬೇಕು, ಬಾಪು ಬಾಬಾ ಬೇಕು,
ಜಸಬೇಕು, ಋಷಿಬೇಕು– ಮರುಳಸಿದ್ಧ ॥ ೩೧೧ ॥

ಬದುಕು ಪಾರ್ಥನ ರಥವು, ಹದುಳವೇ ಶ್ರೀಕೃಷ್ಣ,
ಎದೆಗೆಡದ ಸಾಹಸನೆ ಗಾಂಡೀವಿಯು!
ವಿಧಿಯ ಸೋಲಿಸಿದುಲಿಯೆ ಪಾಂಚಜನ್ಯವು, ಧೃತಿಯ
ನಿಧಿಯೆ ಹನುಮದ್ಧ್ವಜವು– ಮರುಳಸಿದ್ಧ ॥ ೩೧೨ ॥

ಬದುಕೆನ್ನನರಳಿಸಿದೆ, ನರಳಿಸಿದೆ, ಕೆರಳಿಸಿದೆ,
ಅದಿರಿಸಿದೆ, ಬೆದರಿಸಿದೆ, ಮುದುರಿಸಿದೆ, ಮತ್ತೆ
ಮೃದುಗೊಳಿಸಿ, ಹದಗೊಳಿಸಿ, ಹದುಳವನು ಹಡೆದಿಹುದು–
ಬದುಕಿಗಿಲ್ಲ ವಿಕಲ್ಪ– ಮರುಳಸಿದ್ಧ ॥ ೩೧೩ ॥

ತೋರ ಮುತ್ತಿನಹಾರ ಭಾರವೆನಿಪುದೆ ಗಳಕೆ?
ಕ್ಷೀರ ಭಾರವೆ ಸ್ತನಕೆ? ಕಂಪು ಸುಮಕೆ?
ಭಾರವಾಗದು ಬದುಕು ಬೆಳಕು ಸವಿ ಬೆರೆತಿರಲು,
ಹಾರವಾಗುವುದೆಂದ– ಮರುಳಸಿದ್ಧ ॥ ೩೧೪ ॥

ಬಾಳಬುತ್ತಿಯ ಕೊನೆಯ ತುತ್ತು ತಿನ್ನುವ ತನಕ
ಊಳಿಗವ ಮಾಡಿಹವೆ ಪರವೆಂದು ನಂಬಿ।
ನಾಳೆಯೇ ಕೊನೆ ನನಗೆ ಎಂದು ಕಲಿ, ದುಡಿ, ಸುಖಿಸು
ನೀಳ ವಯವೆಂದು ನಲಿ– ಮರುಳಸಿದ್ಧ ॥ ೩೧೫ ॥

ಗಿರಿಯ ಗಾಂಭೀರ್ಯವಿದೆ, ತೊರೆಯ ಸೌಂದರ್ಯವಿದೆ–
ಮೆರೆಯುತಿವೆ ಒಂದು ಕಡೆ ಪೂರಕಗಳಾಗಿ।
ಇರವಿಗೆರಡೂ ಬೇಕು– ವಕ್ಷ ವದನಗಳಂತೆ
ಶರೀರಕ್ಕೆ; ಅರಿಯಿದನು– ಮರುಳಸಿದ್ಧ ॥ ೩೧೬॥

ಅಂದಕ್ಕೆ ಬೆಲೆ, ಮಧುರ ಮಕರಂದಕೂ ಬೆಲೆಯು;
ಸೌಂದರ್ಯ ಮಾಧುರ್ಯ ಸಂಗಮದಲಿ।
ಮಿಂದವನೆ ಧನ್ಯನು. ಈಸಿದವ ಮಾನ್ಯನು,
ಚಂದಿರನೆ ಸಾಕ್ಷಿಯು– ಮರುಳಸಿದ್ಧ ॥ ೩೧೭ ॥

ಜನನ ಕೈಯೊಳಗಿಲ್ಲ, ಮರಣ ಕೈಯೊಳಗಿಲ್ಲ,
ನಿನಗಿರುವ ಜೀವನದೆ ನಿನ್ನ ಕೈಯಲ್ಲಿ।
ಘನತೆಯನು ನೀಡದಕೆ ಘನಕಾರ್ಯಗಳ ಮಾಡಿ,
ಮನುಜರಿಗೆ ಮುದನೀಡಿ– ಮರುಳಸಿದ್ಧ ॥ ೩೧೮ ॥

ಕುನಿಯದಿರು ಜೀವನದ ಸಂಗ್ರಾಮದಲಿ ನೀನು,
ಮುನಿಯದಿರು ನೆರವಾಗದವರ ಬಗ್ಗೆ।
ಜನಿಸುವುದು ನಿನ್ನೊಳಗೇ ಬವರ ಗೆಲ್ಲುವ ಶಕ್ತಿ–
ಕೊನೆಯಿರದೆ ಹೋರಿದರೆ– ಮುರಳಸಿದ್ಧ ॥ ೩೧೯ ॥

ಶಿಲೆಯನ್ನೆ ತಿನಲಾರೆ, ಶಿಲೆಯೊಡೆದು ಮಣ್ಣಾಗೆ
ಬೆಳೆವುದದರಲಿ ಎಲ್ಲ ಆಹಾರವು।
ಶಿಲೆಯಾಗದಿರಲಿ ಎದೆ, ಆದರೂ ಕರಗಿಸುವ
ಕಲೆಯ ಕಲಿ, ಕಲಿತು ನಲಿ– ಮರುಳಸಿದ್ಧ ॥ ೩೨೦ ॥

ಮಂದಹಾಸವೆ ಚೆಂದ, ಇನ್ನಷ್ಟು ಚೆಂದವದು
ಅಂದವಾಗಿಹ ಹಲ್ಲು, ತುಟಿ, ಮೂಗು ಇರಲು।
ಸುಂದರವು ಜೀವನವು ಅತಿ ಸುಂದರಾಗುವುದು,
ಚೆಂದಾಗೆ ನಡೆನುಡಿಯು– ಮರುಳಸಿದ್ಧ ॥ ೩೨೧ ॥

ಸಂತೆಯೊಳೆ ಸಮಾಧಿಯನು ಸಾಧಿಪುದೆ ಗುರಿ ನಿನಗೆ,
ಶಾಂತಿಯನು ಪಡೆ ಸದ್ದುಗದ್ದಲಗಳಲ್ಲೆ!
ಅಂತರಂಗದ ಬಲಕೆ ಬಹಿರಂಗ ಬೆಂಬಲವು–
ಇಂತಿರಲಿ ಇರುವ ಪರಿ– ಮರುಳಸಿದ್ಧ ॥ ೩೨೨ ॥

ಬಾಗಿ ನಡೆಯೆಂದೊಡನೆ ಡೂಗನಾಗಲೆ ಬೇಕೆ?
ಬಾಗಿ ಕೊಡ ತುಂಬಿಕೋ, ಬೀಗಿ ಮೇಗೆತ್ತು!
ಆಗಾಗ ಬಾಗಿಯೂ ಬಿಲ್ಲಿನೊಲು ಗುರಿ ಹೊಡೆದು
ಬೇಗ ನೀಟಾಗೆಂದ– ಮರುಳಸಿದ್ಧ ॥ ೩೨೩ ॥

ನೀರೆರೆದ ಕೈಗಳಿಗೆ ಎಳನೀರನೊದಗಿಸುವ
ನಾರಿಕೇಳದ ಹಾಗೆ ಬದುಕುವಾಸೆ!
ನಾರುಡೆಯನುಟ್ಟರೂ ಸಾರವನೆ ಹುಟ್ಟಿಸಿ
ತೋರುವುದೆ ಬಾಳರವು– ಮರುಳಸಿದ್ಧ ॥ ೩೨೪ ॥

ಯಂತ್ರ ಸೃಜಿಸದು, ನವ್ಯ ತಂತ್ರ ಬರಿಸದು ನಿನ್ನ
ಅಂತರಂಗದ ಸಿರಿಯ ಸ್ವಾತಂತ್ರ್ಯವ!
ಚಿಂತನೆಯ ಕಾರ್ಯವನು ಯಂತ್ರಕೊಪ್ಪಿಸಿಬಿಟ್ಟು
ಯಂತ್ರ ನೀನಾಗದಿರು– ಮರುಳಸಿದ್ಧ ॥ ೩೨೫ ॥

ಗೋಲಗುಮ್ಮಟದಂತೆ ಹೇಳಿದ್ದೆ ಹೇಳುತಿಹ
ಬಾಳೊಂದು ಬಾಳುವೆಯೆ? ಬಾಳಿಗಿರುವ!
ಏಳು ತಂತಿಗಳಿಂದ ನೂರು ರಾಗವ ಸೃಜಿಪ
ಗೀಳು ಹಿಡಿದವನಾಗೊ– ಮರುಳಸಿದ್ಧ ॥ ೩೨೬ ॥

ಬೇರುಗಳು ಚಿಗಿತಾಗ ಬೇರೆ ಮರವೆಂಬಂತೆ
ತೋರುವುದು ತರಿದೊಗೆದ ಮರವು ಮತ್ತೆ!
ಸಾರವಾದುದು ನಶಿಸಿದಂತೆ ತೋರಿದರೇನು–
ಹೀರಿ ಹೊಮ್ಮದೆ ಬಿಡದು– ಮರುಳಸಿದ್ಧ ॥ ೩೨೭ ॥

ಮಕ್ಕಳಿಹ ಮನೆ ಹೊಲಸು ಎಂದು ಬಂಜೆಯ ಮನೆಯೆ
ಸುಕ್ಷೇಮವೆನಬಹುದೆ? ಕರ್ಮಮಾಡೆ
ಸಿಕ್ಕುವೆವು ದೋಷಕ್ಕೆ– ಎಂದು ನಿಷ್ಕ್ರಿಯತೆಯೇ
ತಕ್ಕುದೆಂದೆನಬಹುದೆ–ಮರುಳಸಿದ್ಧ? ॥ ೩೨೮ ॥

ನೆರೆಹೊರೆಯ ಜನರೊಡನೆ ಚರ ಅಚರ ಜಗದೊಡನೆ
ಇರಲು ಅರಿತಿದ್ದರೈ ಆದಿ ಮಾನವರು।
ಸರುವ ಜನರಂತಿರಲಿ, ಪರಿವಾರದವರೊಡನು
ಇರಲಾರ ನವನರನು– ಮರುಳಸಿದ್ಧ ॥ ೩೨೯ ॥

ಬಾಳ್ವೆ ನೀಡುವುದೆಂದು ಕಾಲ ಕಳೆದರೆ ಬಂತೆ?
ಮೇಲೆ ಬಿದ್ದೀಸಿಕೋ ಬಾಳು ನೀಡುವುದ।
ಬಾಳೇನುದಾರಿಯೆ? ಕೃಪಣರಲಿ ಕೃಪಣವದು।
ಕೀಳದರ ಫಲಗಳನು– ಮರುಳಸಿದ್ಧ ॥ ೩೩೦ ॥

ಬದುಕನ್ನು ಪ್ರೀತಿಸಲು ಹೇಳಾವುದು ಸರಿ– ಬದುಕು
ಬದುಕಬಹುದೆನುವಷ್ಟು ಸಹ್ಯವಿರಲು।
ಒದಗಿಸದೆ ನ್ಯೂನತಮ ಸೌಕರ್ಯ, ನುಡಿಮುತ್ತು
ಉದುರಿಸಲು ಬಂತೇನು– ಮರುಳಸಿದ್ಧ? ॥ ೩೩೧ ॥

ಬಾಳ ಬಾಗಿಲ ಕದವ ತಾಗಿಯೇ ತೆರೆ, ಬರಿದೆ
ಕೂಗಿದರೆ 'ಓಪೆನ್ ಸೆಸಾಮ್' ಎಂದು ನಿಂದು।
ಬಾಗಿಲವು ತೆರೆಯದು, ದೇಗುಲವು ತೋರದು,
ನೂಗಲೇ ಬೇಕದನು– ಮರುಳಸಿದ್ಧ ॥ ೩೩೨ ॥

ತಿಪ್ಪೆ–ನೀರಿನೊಳಿರುವ ಕಪ್ಪೆ ಗೌರವಿಸುವುದೆ
ಕಪ್ಪುರದ ಕತ್ತುರಿಯ ಕಂಪ? ಅಂತೆ।
ಇಪ್ಪುದಕೆ ಬಾಗಿ ಬದುಕುವ ಜೀವಿ ಕಾಣುವನೆ
ಅಪ್ಪುದರ ಅದ್ಭುತವ– ಮರುಳಸಿದ್ಧ ॥ ೩೩೩ ॥

ಇನಿಸೆ ಸುಖ ಸಿಕ್ಕರೂ ಘನ ದುಃಖಗಳ ಮರೆತು
ದಿನದಿನದ ಜೀವನದಿ ನಿಷ್ಠೆ ಬಿಡದೆ।
ಅನವರತ ದುಡಿವ ಜನಸಾಮಾನ್ಯರನೆ ನೀನು
ಅನುಸರಿಸಿ ಗೆಲ್ಲಿಲ್ಲಿ– ಮರುಳಸಿದ್ಧ ॥ ೩೩೪ ॥

ಸುಧೆಯಿದೆಯೊ, ಇಲ್ಲವೋ– ಸುಧೆಯ ಸುತ್ತಲು ಹೆಣೆದ
ಮಧುರ ಕಥೆಗಳು ಉಂಟು ಮುದ ಮೂಡಿಸೆ।
ಮಧುವೆ ಸುಧೆ ನಮಗಿಲ್ಲಿ, ಮಧುವಿಗಿಂತಲು ಮಧುರ
ಸುಧೆ ಸ್ನೇಹ ಪ್ರೀತಿಗಳು– ಮರುಳಸಿದ್ಧ ॥ ೩೩೫ ॥

ಬಿತ್ತಿದವ ಕುಯ್ಯಲಿ, ದುಡಿದವನು ಪಡೆಯಲಿ,
ಹೆತ್ತು ಸಾಕುವ ಹೆಣ್ಣು ಸುಖ ಪಡೆಯಲಿ।
ನೆತ್ತರಿನ ನಂಟೊಂದೆ ನಂಟಲ್ಲ; ಪ್ರೀತಿಯೇ
ಹತ್ತುಗಡೆಯಾಗಲಿ– ಮರುಳಸಿದ್ಧ ॥ ೩೩೬ ॥

ನೆತ್ತರಿನ ಹತ್ತುಗಡೆ ಎತ್ತಿ ಹಿಡಿಯುವ ರೂಢಿ
ಎತ್ತಣಿಂ ಬಂದುದೋ ನರಲೋಕದಲ್ಲಿ।
ನೆತ್ತರೊಂದೇ ನರರ ನರಗಳಲಿ, ಎಲ್ಲರೂ
ಹತ್ತುಗಡೆಯವರಿಲ್ಲಿ– ಮರುಳಸಿದ್ಧ ॥ ೩೩೭ ॥

ಭೀತಿ ಯಾವುದು ನಿನಗೆ? ಭೀತಿಯೆಂಬುದೆ! ಸಹಜ
ಪ್ರೀತಿಯನು ನೆಮ್ಮಿದರೆ ಭಯವಾವುದಣ್ಣ?
ನೀತಿರೀತಿಯ ಬಿಡದ ಪ್ರೀತಿಯೇ ಬದುಕಿನಲಿ
ಜ್ಯೋತಿಯೆಂದರಿ ನೀನು– ಮರುಳಸಿದ್ಧ ॥ ೩೩೮ ॥

ಪ್ರೀತಿಯಿಲ್ಲದ ಮೇಲೆ ಯಾತರದು ಬಾಳುವೆಯು?
ಜ್ಯೋತಿಯಿಲ್ಲದ ಮನೆಯು, ಹಾಳುಗವಿಯು।
ನಾತವಿಲ್ಲದ ಹೂವು, ಸ್ವಾತಿಯಿಲ್ಲದ ಸಿಂಪು!
ಪ್ರೀತಿ ಬದುಕಿನ ಸಾರ– ಮರುಳಸಿದ್ಧ ॥ ೩೩೯ ॥

ಪ್ರೀತಿ ಪ್ರೀತಿಯ ಹುಟ್ಟಿಸುವುದೆಂಬ ಮಾತು ಸರಿ:
ಖಾತರಿಯು ಇಲ್ಲದಕೆ: ದ್ವೇಷದೆದುರು
ಸೋತುದೂ ಉಂಟೊಲವು! ಆದರೂ ಪ್ರೀತಿಯೇ
ಜ್ಯೋತಿ ಜೀವನದಲ್ಲಿ– ಮರುಳಸಿದ್ಧ ॥ ೩೪೦ ॥

ಕಾರಣವೆ ಬೇಕಿಲ್ಲ ಕರುಣಕ್ಕೆ, ಪ್ರೀತಿಸಲು
ಪ್ರೇರಣೆಯೇ ಬೇಕಿಲ್ಲ, ಶುಭಗೈಯಲು।
ಯಾರ ಅಪ್ಪಣೆಯೇಕೆ? ತಡೆಯದೆಯೆ ಮಾಡಿಬಿಡು
ಸಾರಿ ಬರೆ ಅವಕಾಶ– ಮರುಳಸಿದ್ಧ ॥ ೩೪೧ ॥

ಒಲಿದು ಕೂಡಲು ಚೆನ್ನ, ಕೂಡಿ ಒಲಿದರು ಸರಿಯೆ,
ಒಲವಿರಲಿ ಸತಿಪತಿಯ ಬಾಳುವೆಯಲಿ।
ಫಲಿಸುವುದು ಮದುವೆ– ಮರ ಒಲವು ಸಲಹಲು ಆದನು,
ನಲಿ ಒಲಿದು ಒಲಿಸುತ್ತ– ಮರುಳಸಿದ್ಧ ॥ ೩೪೨ ॥

ಮಕ್ಕಳೊಡನಾಡದವ ತಿಕ್ಕಲನು, ಬಗೆ ಬಗೆಯ
ಹಕ್ಕಿ ಹಾಡನು ಕೇಳಿ ಹಿಗ್ಗದವ ಎಗ್ಗ!
ಅಕ್ಕರೆಯ ಕರೆ ಕೇಳಿ ಉಲ್ಲಸಿತನಾಗದವ
ನಿಕ್ಕುವದಿ ನತದೃಷ್ಟ– ಮರುಳಸಿದ್ಧ ॥ ೩೪೩ ॥

ಪ್ರೀತಿಯಿಲ್ಲದ ಮನೆಯೆ ಪ್ರೇತವನ! ಮಾನವ್ಯ
ಜ್ಯೋತಿ ಬೆಳಗದ ಬಾಳ ದೇಗುಲವು ಹಾಳು!
ಆತುಮದ ಅಂಕೆಯಲ್ಲಿರದ ಸುಖಭೋಗಗಳು
ಘಾತಕವು ಎಂದರಿಯೊ– ಮರುಳಸಿದ್ಧ ॥ ೩೪೪ ॥

ಹುಲಿಮನೆಯ ಆಟದಲಿ ಇಹುದೆ ಹುಲಿ? ಚದುರಂಗ–
ದಲಿ ಸುಳಿವರೇ ನೈಜ ರಾಜ ಮಂತ್ರಿಗಳು?
ನಲವು ನಿಶ್ಚಿತವಿರಲಿ ಹರಳೆ ಹುಲಿ, ಕಾಯರಸು,
ಒಲಿದುದೇ ದೈವವೆಲ– ಮರುಳಸಿದ್ಧ ॥ ೩೪೫ ॥

ಕಾಮದೇಳಿಗೆಯಲ್ಲಿ ಕ್ಷಾಮ ಬದುಕಿನ ಹೊಲಕೆ,
ಪ್ರೇಮ ಬರೆ ಸಿರಿ ಬೆಳೆಯು, ಸಿವದ ಸುಗ್ಗಿ!
ರಾಮಣೀಯಕ ಕಾಮ ಪ್ರೇಮವಾಗುವ ನೋಟ;
ಕ್ರಮ ವಿಪರ್ಯಯ ಕೇಡು– ಮರುಳಸಿದ್ಧ ॥ ೩೪೬ ॥

ಬಳ್ಳಿಕುಡಿ ಬಳಸುವುದು ಬದಿಯೊಳೇನೇ ಇರಲಿ,
ಕಲ್ಲಿರಲಿ, ಕಳ್ಳಿ, ಮುಳ್– ತಂತಿಯೇ ಇರಲಿ!
ಎಲ್ಲೆ ಮೀರಿದ ಕಾಮ ಪೊಲ್ಲಮೆಯ ಗಣಿಸುವುದೆ?
ನಿಲ್ಲಿಸದ ಪ್ರೀತಿಯಲಿ– ಮರುಳಸಿದ್ಧ ॥ ೩೪೭ ॥

ಆರಕ್ಷಕನ ಮುಂದೆ ಸತಿಪತಿಗಳೆಂದುಸುರಿ
ಪಾರಾದ ಮಾತ್ರದಲಿ ಜಾರಜಾರೆಯರು।
ನೀರನೀರೆಯರಾಗಿ ನಲ್‌ಬಾಳುವರೆ? ಕಾಲು
ಜಾರಿದರ ಗತಿ ಬೀಳು– ಮರುಳಸಿದ್ಧ ॥ ೩೪೮ ॥

ಕರೆಹೆಣ್ಣುಗಳ ದಂಡು ಅಣಕಿಸುತಲಿದೆ ಸೂಳೆ–
ಯರ ದಂಡ! ಈ ಎರಡು ದಂಡುಗಳನು।
ಜರೆದು ಝಂಕಿಸುತಿಹುದು ಲೂಪಧಾರಿಗಳ ದಳ!
ವರಿಸುವರ ಬರ ಬಹುದೆ– ಮರುಳಸಿದ್ಧ? ॥ ೩೪೯ ॥

ಬೊಕ್ಕದಲೆಗಿಂತಲೂ ನೆರೆದಲೆಯೆ ಲೇಸಲ್ತೆ?
ಮುಕ್ಕು ಮಗೆಗಿಂತಲೂ ಚಿಪ್ಪು ಲೇಸು।
ರೊಕ್ಕವಿರದಿದ್ದರೂ ಅಕ್ಕರತೆಯಿರೆ ಲೇಸು,
ಕಕ್ಕುಲತೆಯೇ ಲೇಸು– ಮರುಳಸಿದ್ಧ ॥ ೩೫೦ ॥

ಮರುಕು ಮನೆಗಿಂತಲೂ ನೆರಕೆಮನೆ ಮೇಲಲ್ತೆ?
ತಿರಿಕೆಗಿಂತಲು ಕರುಕೆಹೊಲವು ಲೇಸಲ್ತೆ?
ದೊರಕದಮೃತಕಿಂತ ಮಜ್ಜಿಗೆಯು ಮೇಲಲ್ತೆ?
ಸಿರಿಗಿಂತ ಮೇಲೊಲವು– ಮರುಳಸಿದ್ಧ ॥ ೩೫೧ ॥

ಮೊಗ್ಗೆಯದು ಸೆರೆಮನೆಯೆ ಪರಿಮಳಕೆ? ಧೂಮ್ರಕೆ
ಗುಗ್ಗುಳವು ಸೆರೆಮನೆಯೆ? ಕೋಕಿಲದ ಕಂಠ।
ಬಗ್ಗಣಿಗೆ ಸೆರೆಮನೆಯೆ? ಪ್ರೇಮಬಂಧನ ಸೆರೆಯೆ?
ಹಿಗ್ಗಿಗೌತಣ ಪ್ರೀತಿ– ಮರುಳಸಿದ್ಧ ॥ ೩೫೨ ॥

ಪಾತಾಳಗರಡಿ ಬಿಡೆ ಪಾವಸೆಯು ಸಿಗಬೇಕೆ?
ಜ್ಯೋತಿ ಮುಡಿಸಲು ಮನೆಯ ಕಸ ಕಾಣಬೇಕೆ?
ಪ್ರೀತಿಯನು ಬೇಡಿದರೆ ದ್ವೇಷ ಸಿಕ್ಕರೆ ಹೇಗೆ?
ಪ್ರೀತಿಸಿಯೆ ಪಡೆ ಪ್ರೀತಿ– ಮರುಳಸಿದ್ಧ ॥ ೩೫೩ ॥

ಸಾನುಭೂತಿಗೆ ಸಾಕೆ ಮನೆ ಮಾರುಗಳ ಹರಹು?
ಸಾನು ಬಾನುಗಳಗಲ ಸಾಲದದಕೆ।
ಏನೆಲ್ಲವನು ತನ್ನ ತೆಕ್ಕೆಯೊಳಗಿರಿಸಿ, ಮುಂ–
ದೇನುಂಟು ಎನುವುದನದು– ಮರುಳಸಿದ್ಧ ॥ ೩೫೪ ॥

ಒಂಟಿತನವೆನಗಿಲ್ಲ, ಪ್ರತಿಯೊಂದು ಖಂಡದಲಿ
ನೆಂಟರಿರುವರು ನನಗೆ ಗ್ರಂಥಗಳಲಿ।
ಉಂಟು ಪ್ರತಿ ಗ್ರಂಥದಲಿ ಪಾತ್ರಗಳು ಹಲವಾರು;
ಗಂಟು ಅವರೊಡನೆಲ್ಲ– ಮರುಳಸಿದ್ಧ ॥ ೩೫೫ ॥

ಜೆನ್ನಿಯಿರದಿರೆ ಮಾರ್ಕ್ಸನೇನಾಗುತಿದ್ದನೋ!
ಪನ್ನೆಯಿರದಿರೆ ಉದಯಸಿಂಹನೆಂತೊ!
ಉನ್ನತಿಗೆ ಬರೆ ಗಂಡು ಹೆಣ್ಣಿನಾಸರೆ ಬೇಕು;
ಅನ್ಯೋನ್ಯವಿರಲವರು– ಮರುಳಸಿದ್ಧ ॥ ೩೫೬ ॥

ಜ್ಯೋತಿಯಿರೆ ಕತ್ತಲೆಯೆ? ನೀತಿಯಿರೆ ಪತನವೆ?
ಜಾತಿಯಿರೆ ಹಿತವುಂಟೆ ಸಮದಾಯದಿ?
'ಗೀತೆ'ಯಿರೆ ಕ್ಲೈಬ್ಯವೆ? ಬಸವನಿರೆ ಅಸಮತೆಯೆ?
ಪ್ರೀತಿಯಿರೆ ಹಗೆತನವೆ– ಮರುಳಸಿದ್ಧ? ॥ ೩೫೭ ॥

ಕರಣ ವಿಜಯಕ್ಕಿಂತ ಹಿರಿಯ ವಿಜಯಗಳುಂಟೆ?
ಕರುಣೆಯಿಂ ಮಿಗಿಲಾದ ಧರ್ಮವುಂಟೆ?
ಪರಹಿತಕೆ ದೊರೆಯಾದ ಗುರಿಯುಂಟೆ? ಸರಿಯುಂಟೆ
ಪರಿಶುದ್ಧ ಪ್ರೀತಿಗೆ– ಮರುಳಸಿದ್ಧ? ॥ ೩೫೮ ॥

ಮುತ್ತು ಕೊರಳೊಳಗಿರಲಿ, ಬಿಡಲಿ, ಒಲಿದವರೀವ
ಮುತ್ತು ದೊರೆಯುತ್ತಿರಲಿ ಎಲ್ಲರಿಗೆ ಇಲ್ಲಿ।
ವಿತ್ತದರಕೆಯ ತುಂಬಿ, ಚಿತ್ತವಲರಿಪ ಸುಧೆಯ
ತುತ್ತಲ್ಲವೇ ಮುತ್ತು– ಮರುಳಸಿದ್ಧ? ॥ ೩೫೯ ॥

ಸಾಕ್ರೆಟೀಸನ ಸತಿಯೊ, ಕ್ಯಾಥರಿನಳೊ, ಚಂಡಿಯೊ,
ವಕ್ರಗತಿಯಲಿ ನಡೆವ ವನಿತೆಯರಿಗೆಲ್ಲ।
ತಕ್ಕ ಔಷಧ ಸಮತೆ, ಶಾಂತಿ, ಸದುಪಾಯಗಳು–
ಶಕ್ತಿ ಬಲಗಳು ಅಲ್ಲ– ಮರುಳಸಿದ್ಧ ॥ ೩೬೦ ॥

ಜಗಳವಿಲ್ಲದೆ ಸ್ವಾದವೆಲ್ಲಿ ದಾಂಪತ್ಯದಲಿ?
ಒಗರು ದೋರದೆ ಪಣ್ತ ಕಾಯಿಯುಂಟೆ?
ಯುಗಳ ಜೀವನಕಿನಿಸು ಹುಸಿ ಕಿನಿಸು ಮುನಿಸುಗಳ
ಜಗಳಗಳು ರಸದೊರತೆ– ಮರುಳಸಿದ್ಧ ॥ ೩೬೧ ॥

ಮಧುರಕ್ಕೆ ಮಧುರವು ಪ್ರೇಯಸಿಯ ಅಧರವು.
ನಿಧಿಯಲ್ತೆ ಸಂತಾನಶ್ರೀಗವಳ ಗರ್ಭ?
ಮಧುವಾಗುವುದು ಬದುಕು ಸುದತಿಯರ ಒಲವಿಂದ;
ಮಧುಕರನು ಪ್ರಿಯಕರನು– ಮರುಳಸಿದ್ಧ ॥ ೩೬೨ ॥

ರೋಮ್ ಹುಟ್ಟುವ ಮೊದಲು ಡೀಡೊ ಸಾಯಲೆಬೇಕೆ?
ಕಾಮ ಸಾಯಲೆ ಬೇಕೆ ಸ್ಕಂದ ಜನಿಸೆ?
ರೋಮಿಯೋ ಜ್ಯೂಲಿಯಟ್ ಸಾವನಪ್ಪಲೆಬೇಕೆ
ಪ್ರೇಮವನು ಗೆಲ್ಲಿಸಲು– ಮರುಳಸಿದ್ಧ? ॥ ೩೬೩ ॥

ಚಾಮುಂಡಿ ಬೆಟ್ಟದಲಿ, ನಂಜುಂಡ ನೆಲದಲ್ಲಿ,
ಪಮ್ಮವತಿ ನೆಲದಿ, ವೆಂಕಟಗಿರಿಯ ಮೇಲೆ!
ಪ್ರೇಮಿಗಳ ಗತಿಯಿದುವೆ? ಗಂಡ ಬೇರೂರಿನಲಿ,
ಭಾಮೆ ತವರೂರಿನಲಿ– ಮರುಳಸಿದ್ಧ! ॥ ೩೬೪ ॥

ಬಿರುಗಾಳಿ ಹೊಯ್ದಾಗ ಶರಧಿಯುಕ್ಕದು, ಶೀತ–
ಕರನುದಿಸಿ ಸೆಳೆದಾಗ ಉಬ್ಬಿ ಕುಣಿಯುವುದು।
ಅರಳುವುದೆ ಮೊಗ್ಗು ಬಿರುಗಾಳಿಯಲಿ? ಮೆಲ್ಲೆಲರು
ಪರಿದಪ್ಪೆ ಬಿರಿಯುವುದು– ಮರುಳಸಿದ್ಧ ॥ ೩೬೫ ॥

'ಸಿಂಹ' ಶಬ್ದದ ಬಳಿಯೊಳಿರದೆ 'ಹುಲ್ಲೆ'ಯ ಶಬ್ದ?
ಸಂಹರಿಸುವುದೆ ಸಿಂಹ ಹುಲ್ಲೆಯನ್ನಲ್ಲಿ?
ಸಂಹೃತಿಯು ತಪ್ಪದೈ ಜೀವಕುಲವದು ಪ್ರೇಮ–
ಸಂಹಿತೆಯನೊಪ್ಪದಿರೆ– ಮರುಳಸಿದ್ಧ ॥ ೩೬೬ ॥

ಸನ್ನೆ ಸಾಕರಿವನಿಗೆ, ದೊಣ್ಣೆ ಬೇಕೆಟ್ಟಿಗೆ–
ಕಣ್ಣಿ ಬೇಕೆಗರುವಾ ತುಡುಗು ದನಕೆ।
ಅನ್ಯಾಯ–ಮದಹಸ್ತಿಗಂಕುಶವು ಬೇಕಿಲ್ಲಿ,
ಧನ್ಯತೆಗೆ ಬೇಕೊಲವು– ಮರುಳಸಿದ್ಧ ॥ ೩೬೭ ॥

ಕಾಶಿಯಾತ್ರೆಗೆ ಹೋಗುವವರು ಬಹುಜನ, ವಿರಳ
ಕಾಶಿಯನು ತಮ್ಮಲ್ಲೆ ಕಾಣುವವರು।
ವಾಸ ಮಾಡಲು ಪ್ರೇಮ ಮನದಿ, ಮನವೇ ಕಾಶಿ,
ಈಶನಾಲಯ ತಿಳಿಯೊ– ಮರುಳಸಿದ್ಧ ॥ ೩೬೮ ॥

ಕರಡಿಗೆಯ ತಂದಾಯ್ತು, ಲಿಂಗವೇ ಬರಲಿಲ್ಲ!
ಪರಡಿಯನು ತಂದಾಯ್ತು, ತೂಗಲೇ ಇಲ್ಲ!
ಗರಡಿಯಲಿ ಕಲಿತಾಯ್ತು ಕುಸ್ತಿಯಾಡಲೆ ಇಲ್ಲ!
ಅರಳಲಿಲ್ಲೊಲವು ಸಖ–ಮರುಳಸಿದ್ಧ ॥ ೩೬೯ ॥

ಕೌರವನ ತೊಡೆಯೊ, ಅಖಿಲಸನ ಅಡಿಯೊ,
ವೀರ ಸಾಂಮ್ಸನ್ನನ ಕೇಶರಾಶಿಗಳೊ।
ಯಾರ ಭಂಗಕೆ ನಿಯತಿ ಏನನ್ನು ನಿರವಿಪುದೊ!
ಮೀರು ಒಲವಿನ ಬಲದಿ– ಮರುಳಸಿದ್ಧ ॥ ೩೭೦ ॥

ಒಡೆದ ಬೀಜವ ಬಿತ್ತಿ ಬೆಳೆವರುಂಟೇ, ಒಡೆದು
ಸಿಡಿದ ಶಿಲೆಯಲಿ ಮೂರ್ತಿ ಕಟೆದರುಂಟೆ?
ಬಿಡಿಯಾದ ಬಾಳಿನಲಿ ಒಲವೆಲ್ಲಿ, ನಲವೆಲ್ಲಿ?
ಇಡಿಯಾಗಿ ಕಡೆಮುಟ್ಟು- ಮರುಳಸಿದ್ಧ ॥ ೩೭೦ ॥

ಜಳವ ತರೆ ಬಿಸಿಲಿಲ್ಲಿ ನೆಳಲು ತಂಪೀಯುವುದು,
ಚಳಿಯು ಹಿಡಿಸಲು ಸೇಡ, ಬೆಂಕಿಯಿಹುದು;
ಕಳವಳಿಸದಿರು ನೀನು ಒಲವೊಂದನೇ ನಂಬಿ
ಗೆಲವ ನೀಡಿರವಿಗೆ- ಮರುಳಸಿದ್ಧ ॥ ೩೭೨ ॥

ಹೆಣ್ಣು ಕಣ್ಣೀರಿಡುವ ಸ್ಥಳವೆ ನರಕವು, ಹಿಗ್ಗಿ
ಹೆಣ್ಣು ನಗುತಿಹ ತಾಣ ಸ್ವರ್ಗ ಸಮವು।
ಉನ್ನತೋನ್ನತ ಗತಿಯು ಹೆಣ್ಣು ಸಹಕರಿಸಿದರೆ,
ತಣ್ಣಗಿರಿಸವಳನ್ನು- ಮರುಳಸಿದ್ಧ ॥ ೩೭೩ ॥

ಎಲ್ಲವನು ಮರೆದೇನು, ಎಲ್ಲವನು ತೊರೆದೇನು-
ನಲ್ಲ ನಿನ್ನೊಲವನ್ನು ತೊರೆಯಲಾರೆ!
ಸೊಲ್ಲು ಸೊಲ್ಲಿಗೆ ನಲ್ಲ ನಲ್ಲನೆನುತಲೆ ಕೊನೆಗೆ
ಗೆಲ್ಲುವೆನು ನಿನ್ನನ್ನು- ಮರುಳಸಿದ್ಧ ॥ ೩೭೪ ॥

ಒದ್ದೆ ಬಟ್ಟೆಯೆ ಬೇಕು ಒರೆಸಲಿಕೆ ಪಾಟಿಯನು,
ಒದ್ದೆ ನೆಲವೇ ಬೇಕು ಗದ್ದೆ ತೋಟಕ್ಕೆ।
ಬುದ್ಧಿ ಹೃದಯದ ಬಿರುಸ ತಿದ್ದಲಿಕೆ ಬೇಕು ದ-
ಯಾರ್ದ್ರತೆಯು ಜೀವಿಯಲಿ- ಮರುಳಸಿದ್ಧ ॥ ೩೭೫ ॥

ಕಲಿಯೊ ಇಲ್ಲಿಯೆ ಸಲುವ ಪರಿಯ, ಸೃಷ್ಟಿಯ ಜೀವ-
ಕುಲದೊಡನೆ ಸಮರಸವ, ಸಾಕಲ್ಯವ।
ಒಲಿದು ಒಲಿಸುವ ಕಲೆಯ, ಹಂಚಿ ಉಣ್ಣುವ ನಲವ,
ಬಲಕೆ ಬಾಗದ ಛಲವ- ಮರುಳಸಿದ್ಧ ॥ ೩೭೬ ॥

ಓಂಕಾರ ಝೇಂಕಾರ ಕೇಳಿಸದು, ಕೇಳುತಿವೆ
ಹೂಂಕಾರ, ಠೇಂಕಾರ, ಧಿಕ್ಕಾರವು!
ಮಾಂಕರಿಸುವರು ಮಾಗಿ ಪ್ರೀತಿಸುವರಾದರೆ
ಬೆಂಕಿ ಬೆಳಕಾಗುವುದು- ಮರುಳಸಿದ್ಧ ॥ ೩೭೭ ॥

ಹೂವುಗಳ ಇಕೆಬಾನಾ ನೋಡಿರುವೆ, ಮಧುರತಮ
ಭಾವಗಳ ಇಕೆಬಾನ ನೋಡುವಾಸೆ।
ಜೀವನಕೆ ಸೌಂದರ್ಯ ಒಳ ಹೊರಗಿನಿಕೆಬಾನ.
ಆವಗಂ ಅರಸಿದನು– ಮರುಳಸಿದ್ಧ ॥ ೩೭೮ ॥

ಜೀವರತ್ನದ ಮುಂದೆ ಇನ್ನಾವ ರತ್ನವಿದೆ?
ಭಾವಮೌಕ್ತಿಕದೆದುರ ಇನ್ಯಾವ ಮುತ್ತು?
ಯಾವ ಜ್ಯೋತಿಯ ನೇತ್ರಜ್ಯೋತಿಯೆದುರಲಿ? ನಿನ್ನ
ಜೀವನವೆ ಜ್ಯೋತಿಯೋ– ಮರುಳಸಿದ್ಧ ॥ ೩೭೯ ॥

ಸುರುಚಿಯ ತಿರಸ್ಕಾರ ವರವಾಯ್ತು ಧ್ರುವನಿಗೆ,
ಹರನ ನಿರ್ಲಕ್ಷ್ಯವೇ ಗಿರಿಜಾತೆಗೆ।
ನೆರವಾಯ್ತು ಬಾಪುವಿಗೆ ಬಿಳಿಯರವಹೇಳನವು.
ಬಿರಿಯೆ ವರವೆಂದರಿಯೊ– ಮರುಳಸಿದ್ಧ ॥ ೩೮೦ ॥

ಗ್ರಾಮಗ್ರಾಮವು ನನಗೆ ರಾಮಮಂದಿರವಿಲ್ಲಿ,
ಧಾಮ ಧಾಮವು ದಿವ್ಯ ಶಿವದೇಗುಲ।
ಪ್ರೇಮ ತುಳುಕುವ ಕುಟಿಯೆ ಚರ್ಚು ಮಸಜಿದ್ದುಗಳು
ಕ್ಷೇಮರತಿಯೇ ಬಸದಿ– ಮರುಳಸಿದ್ಧ ॥ ೩೮೧ ॥

ರಾಖಿ ಬರಿ ದಾರವೆ? ಕುಸುರೆಳ್ಳು ಬರಿ ಕಾಳೆ?
ಮೇಖಲೆಯು ಬರಿ ಕಟ್ಟೆ? ಬನ್ನಿ ಎಲೆಯೆ?
ಮಾಕಂದ ಬರಿ ಮರವೆ? ಮಲ್ಲಿಗೆಯು ಬರಿ ಹೂವೆ?
ಸಾಕ್ಷಿಯಿವು ಸಂಸ್ಕೃತಿಗೆ–ಮರುಳಸಿದ್ಧ ॥ ೩೮೨ ॥

ಇಲಿಗೆ ಬಿಲವರಮನೆಯು, ತಿಪ್ಪೆಯೇ ಉಪ್ಪರಿಗೆ
ಮಲ ತಿನುವ ಹಂದಿಗೆ, ಹೆಡಸೆ ಜೇನು
ತಲೆ ತಿನುವ ಹೇನಿಗೆ! ಒಂದೊಂದು ಪ್ರಾಣಿಗೂ
ಒಲವಿನಂತೆಯೆ ನೆಲೆಯು– ಮರುಳಸಿದ್ಧ ॥ ೩೮೩ ॥

ನನ್ನಿಯುಸಿರಿಂದಲೇ ಸನ್ನತಿಕೆಗೆ ಬದುಕಿಗೆ,
ಚೆನ್ನು ಕೂಡಿದರದಕೆ ಚಿನ್ನಕ್ಕೆ ಕಂಪು
ರನ್ನಕ್ಕೆ ಕೆತ್ತನೆಯು ಕೂಡಿದೊಲು, ಪುಣ್ಯಕ್ಕೆ
ಕಣ್ಣು ಬಂದಂತೆಯೇ– ಮರುಳಸಿದ್ಧ ॥ ೩೮೪ ॥

ದಾಯಾದಿ ಮತ್ಸರವೋ, ಯಾದವೀ ಕಲಹವೋ,
ಆದಿಯಿಂ ಬಂದುವಿವು ಬದಲಾಗಲಿಲ್ಲ!
ಸೋದರತೆ ಬರಿಮಾತೆ? ಹೃದಯವಂತಿಕೆ ಹುಸಿಯೆ?
ಔದಾರ್ಯ ಬರಿ ಕನಸೆ– ಮರುಳಸಿದ್ಧ? ॥ ೩೮೫ ॥

ಏಸು ಜನ ನಡೆಯುವರು ಏಸು ಬೋಧಿಸಿದಂತೆ?
ಐಸಿರಿಗೆ ಮನಸೋತ ಜನರೆ ಹೆಚ್ಚು!
ವಾಸನೆಗೆ ಲಾಲಸೆಗೆ ಒಲಿದ ಜನರೇ ಅಧಿಕ:
ಲೇಸು ಪರದೇಶಿಯೇ– ಮರುಳಸಿದ್ಧ? ॥ ೩೮೬ ॥

ಹೂವೊ, ಪತ್ರಿಯೋ, ತುಳಸಿ ಚಂದನಗಳೋ ಬಳಸೆ
ಠಾವು ತೊಟ್ಟಿಯೊಳವಕೆ, ಗೊಬ್ಬರವು ಹೊಲಕೆ!
ಪಾವಿತ್ರ್ಯ ಸ್ಥಿರವಲ್ಲ ವಸ್ತುಗಳಿಗವುಗಳೊಳ–
ಭಾವನೆಯೆ ಮುಖ್ಯವು– ಮರುಳಸಿದ್ಧ ॥ ೩೮೭ ॥

ಬಾನವರ ದಾನವರ ಕಾಳಗದ ಕಥೆ ಕೇಳಿ
ಮಾನವರು ಹಾಳಾಗಿ ಹೋದರಲ್ಲೊ!
ಮಾನವರೊಳಿಲ್ಲವೇ ಬಾನವರು, ದಾನವರು?
ನೀನವರನರಿಯೆಂದ– ಮರುಳಸಿದ್ಧ ॥ ೩೮೮ ॥

ಬೇರ ಮುಟ್ಟದ ನೀರು ನಿಷ್ಫಲವು ತರುಲತೆಗೆ,
ತೀರ ಸೇರದ ನೌಕೆ ವಿಫಲ ಪಯಣಿಗಗೆ।
ಸಾರ ಹೀರದ ಓದು ಗಿಳಿಯೋದು, ಗುರಿಯನ್ನು
ತೋರದಿಹ ಗುರು ನರನು– ಮರುಳಸಿದ್ಧ ॥ ೩೮೯ ॥

ಗೂಳಿಗಳ ಕಾಳಗವ ನೋಡಿ ನಲಿವರು ಕೆಲರು,
ಕೋಳಿಗಳ ಕಾದಾಟ– ಇನ್ನು ಕೆಲರು।
ತಾಳಗಳ ತಟ್ಟುವರು ಹೆರರ ಗೋಳಾಟಕ್ಕೆ!
ಖೂಳತನಕೆಲ್ಲಿ ದಯೆ– ಮರುಳಸಿದ್ಧ? ॥ ೩೯೦ ॥

ಕೆರೆ ಬತ್ತೆ ಕೊರಗೆಲ್ಲ ಮೀಂಗಳಿಗೆ; ಕೆಪ್ಪೆಗಳಿ–
ಗಿರದಾವ ಚಿಂತೆಯೂ– ನೆಗೆಯುವುವು ನೆಲಕೆ।
ದೊರೆಯದಿರೆ ಎಂಜಲವು ಗರುವರನೆ ತೊರೆಯುವರು
ಕಿರಿಮನದ ಮಾನಿಸರು– ಮರುಳಸಿದ್ಧ ॥ ೩೯೧ ॥

ಅಣು ಬಾಂಬು ಸ್ಫೋಟಿಸಲು ಕಡಲ ಹೇರೊಡಲಿನ
ಪ್ರಾಣಿಗಳು ಸತ್ತುಳಿದುವಂತೆ ಕ್ರಿಮಿಕೀಟ!
ಬಣಗುಗಳ ಹೆಚ್ಚಿಸುತ, ಗುಣಿಗಳನು ಕರಗಿಸುತ
ಬಿನುಗಾಯ್ತು ಸಭ್ಯತೆಯು – ಮರುಳಸಿದ್ಧ ॥ ೩೯೨ ॥

ನೀರ ಸೋಸುವ ಬಟ್ಟೆ ನೀರಿಗಿಂತಲು ಹಿರಿದೆ?
ಹೀರಕವ ಕೆತ್ತುವುಳಿ ಹೀರಕಕು ಹಿರಿದೆ?
ದಾರಿ ತೋರುವ ಕಲ್ಲು ದಾರಿಗಿಂತಲು ಹಿರಿದೆ?
ವೈರ ಪ್ರೀತಿಗು ಹಿರಿದೆ – ಮರುಳಸಿದ್ಧ ॥ ೩೯೩ ॥

ಹಲವು ಆರಡಿ ಬಂದು ಎಂಜಲಿಸಿದರು ಅಲರು
ಮಲಿನವಪ್ಪುದೆ? ಮಂಜು ಮುಖವ ತೊಳೆಯೆ
ಸಲುವುದಾರಾಧನೆಗೆ! ಸಲುವೆ ನೀನೂ ಮನವ
ತಿಳಿಗೊಳಿಸಿಕೊಂಡರೆ – ಮರುಳಸಿದ್ಧ ॥ ೩೯೪ ॥

ಬತ್ತಿ ಹೊಸೆದಿಹ ಕೈಯೆ ದೀಪವಾರಿಸಬೇಕೆ?
ಎತ್ತಿ ಸಲಹಿದ ಕೈಯೆ ಕೊಲ್ಲಬೇಕೆ?
ತುತ್ತು ಉಣಿಸಿದ ಕೈಯೆ ಕತ್ತು ಹಿಸುಕಲು ಉಂಟೆ
ಅರ್ಥಜೀವನದಲ್ಲಿ – ಮರುಳಸಿದ್ಧ? ॥ ೩೯೫ ॥

ಹಾವಿರಲಿ, ಚೇಳಿರಲಿ, ತಡವಿದರೆ ಕಚ್ಚುವುವು,
ಗೋವಿರಲಿ, ಬೆಕ್ಕಿರಲಿ ಆತ್ಮರಕ್ಷಣೆಗೆ!
ಧಾವಿಪುವು ಅಗ್ನಿಯೊಲು! ಜೀವಿಗಳ ಕೆಣಕದಿರೆ
ಜೀವಿಗಳಿಗಾವ ಭಯ – ಮರುಳಸಿದ್ಧ? ॥ ೩೯೬ ॥

ವಾದಕನು ನುಡಿಸದಿರೆ ವಾದ್ಯಗಳು ನಿಶ್ಶಬ್ದ,
ಓದದಿರೆ ಸದುಹೃದಯಿ ಕಾವ್ಯ ಸ್ತಬ್ಧ:
ಶೋಧಕನು ಶೋಧಿಸದೆ ನಿರ್ಲಬ್ಧ ವಿಜ್ಞಾನ;
ಸಾಧಿಸದೆ ಏನಿಲ್ಲ – ಮರುಳಸಿದ್ಧ ॥ ೩೯೭ ॥

ವಾದಿಸಲು ಕಲಿತೆವು, ಬೋಧಿಸಲು ಕಲಿತೆವು,
ಸಾಧಿಸಲು ಕಲಿತೆವೇ ಹೊಸ ಹುಟ್ಟನು?
ಸಾಧಿಸದ ನರನಿಗೆ ಬೋಧಿಸುವ ಹಕ್ಕೆಲ್ಲಿ?
ಸಾಧನೆಯೆ ಬೋಧಿಸಲಿ – ಮರುಳಸಿದ್ಧ ॥ ೩೯೮ ॥

ಕೆರೆಯ ನೆನೆವುದೆ? ಕೆರೆಗೆ ನೀರನ್ನು ಆಗಾಗ
ತರುವ ಮಳೆ ನೆನೆಯುವುದೆ? ಮಳೆಯ ಕೊಡುವ।
ಪರಮನನು ನೆನೆಯುವುದೆ? ಉಪಕಾರಗೈವಂಥ
ಸರುವರನು ನೆನೆಯೆಂದ – ಮರುಳಸಿದ್ಧ ॥ ೩೯೯ ॥

ಕತ್ತಲನೆ ಬಿತ್ತಿದರೆ ಬೆಳಕು ದೊರೆವುದೆ, ಬರಿಯ
ಮಿಥ್ಯೆಯನೆ ಮೊರೆಹೊಗಲು ಸತ್ಯ ದೊರೆಯುವುದೆ?
ಕೆಟ್ಟುದನೆ ಉಟ್ಟು, ಕೆಟ್ಟುದನೆ ತೊಟ್ಟು, ಶುಭ
ಬಿಟ್ಟಿಯಲಿ ಬರುವುದೆ – ಮರುಳಸಿದ್ಧ? ॥ ೪೦೦ ॥

ಬಿತ್ತಿನೊಳಗಿಲ್ಲದುದು ಬೆಲೆಯಲ್ಲಿ ದೊರೆವುದೆ?
ತತ್ತಿಯೊಳಗಿಲ್ಲದುದು ಹಕ್ಕಿಯೊಳು ಬಹುದೆ?
ಬಿತ್ತಿದಂತೆಯೆ ಬೆಳೆಯು, ಇಚ್ಛೆಯಂತೆಯೆ ಬಾಳು,
ಸತ್ವದಂತೆಯೆ ಏಳ್ಗೆ – ಮರುಳಸಿದ್ಧ ॥ ೪೦೧ ॥

ಕೊಲ್ಲಿಸುವ ಖಿಲ್ಲರೂ ನಿಲ್ಲುವರು ನೆನಪಿನಲಿ–
ಮುಳ್ಳು ಜಾಜಿಯ ಜೊತೆಗೆ ನಿಲ್ಲುವಂತೆ।
ಒಳ್ಳೆಯದ ಕೆಣಕಿಯೇ ಕೆಡುಕು ಬದುಕುವುದೇನೊ–
ಸುಳ್ಳಿನೊಲು ನಿಜದೊಡನೆ – ಮರುಳಸಿದ್ಧ ॥ ೪೦೨ ॥

ಬದುಕಿಪುದು, ಬದುಕನ್ನು ಅರಳಿಪುದು ಏನಿದೆಯೊ
ಅದುವೆ ಒಳಿತೆಂದು ತಿಳಿ; ಬದುಕಗೊಡದೆ।
ಬದುಕನ್ನು ಬಂಧಿಪುದು, ಕುಂದಿಸುವುದಾವುದೋ
ಅದುವೆ ಕೆಡುಕೆಂದು ತಿಳಿ – ಮರುಳಸಿದ್ಧ ॥ ೪೦೩ ॥

ಒಂದು ಕಾಲದ ಒಳಿತು ಕೆಡುಕೆನಿಸಬಹುದು ಇ–
ನ್ನೊಂದು ಕಾಲದೊಳಂತೆ ಹಳೆಯ ಕೆಡುಕು
ಸಂದರ್ಭಮಹಿಮೆಯೆಲಿ ಒಳಿತಾಗಿ ತೋರಬಹು–
ದಂದಿಗದೆ ಸ್ವ ಗೃಹಣೀಯ – ಮರುಳಸಿದ್ಧ ॥ ೪೦೪ ॥

ಒಳ್ಳೆಯದ ಬಲಿಸುವುದೆ ಕೆಡುಕನು ನಿಯಂತ್ರಿಸುವ
ಒಳ್ಳೆಯ ಉಪಾಯವು; ದುರ್ಬಲಿಸೆ ಒಳಿತ।
ಗೆಲ್ಲುವುದು ಕೆಡುಕಿಲ್ಲಿ! ಶಕ್ತಗೊಳಿಸೊಳಿತನ್ನು;
ನಿಲ್ಲು ಒಳಿತಿನ ಜೊತೆಗೆ – ಮರುಳಸಿದ್ಧ ॥ ೪೦೫ ॥

* * *

ಕೆಡುಕಿಗೆ ಪ್ರತಿಯಾಗಿ ಒಳಿತ ನೀಡೆನ್ನುವೆಯ?
ಕೊಡುವೆಯೇನೊಳಿತಿಗೆಂದನು ಕನ್ಫೂಷ।
ಕೊಡಬೇಕು ನ್ಯಾಯವನು ಕರುಣೆಯಲಿ ಮೃದುಗೊಳಿಸಿ
ಕೆಡುಕಿರಲಿ, ಒಳಿತಿರಲಿ– ಮರುಳಸಿದ್ಧ ॥ ೪೦೬ ॥

ಕೇಡು ಮಾಡಿದನನ್ನು ಕ್ಷಮಿಸಿ ಬಿಡುವುದೆ ನಿಜದಿ
ಸೇಡು ತೀರಿಸಿಕೊಳುವ ಸಬಲ ರೀತಿ।
ಕೀಡೆ ತುಂಬಿಯ ನೆನೆದು ತುಂಬಿಯಾಗುವ ಹಾಗೆ
ಕೇಡಿಗನು ಶುಚಿಯಹನು– ಮರುಳಸಿದ್ಧ ॥ ೪೦೭ ॥

ಕೆಡುಕ ನಿನಗೆಸಗುವರು ಹೆರರಲ್ಲ, ನಿನ್ನೊಳೇ
ಸಿಡುಕು ದುಡುಕುಗಳಿಹವು, ಒಡಕು ಇಹುದು।
ಕೆಡಿಸಲಿವುಗಳೆ ಸಾಕು ನಿನ್ನನ್ನು, ಹೊರಗೇಕೆ
ಹುಡುಕುವಿಯೊ ಹಗೆಗಳನು– ಮರುಳಸಿದ್ಧ? ॥ ೪೦೮ ॥

ಕಾಡಿಗೆಯು ರಮ್ಯವು ರಮೆಯ ರೆಪ್ಪೆಗಳಲ್ಲಿ;
ಕೇಡದುವೆ ರೂಪಕ್ಕೆ ಮುಖಕೆಲ್ಲ ಹರಡೆ।
ಜಾಡು ತಪ್ಪಿದರೆಲ್ಲ ಒಳಿತುಗಳು ಕೆಡುಕುಗಳು!
ಮೂಡಲೀ ಸುವಿವೇಕ– ಮರುಳಸಿದ್ಧ ॥ ೪೦೯ ॥

ದೋಷವೇ ಲೇಸೊಮ್ಮೆ, ಲೇಸು ದೋಷವದೊಮ್ಮೆ,
ಆ ಸಮಯ ಸಂದರ್ಭಕನುಸಾರವಾಗಿ।
ಬಾಸುಂದಿ ಬೇಸಿಗೆಯ ಪಾನೀಯಗಳು ಲೇಸೆ
ಶೈಶವದಿ, ಶಿಶಿರದಲಿ– ಮರುಳಸಿದ್ದ? ॥ ೪೧೦ ॥

ಮರೆವೆನೆಂದರು ಮರೆಯದೆನಗಿಷ್ಟವಿಲ್ಲದುದು,
ಮರೆತುಹೋಗುವುದೊಳಿತನಾಗಿಸುವುದು।
ತರವಲ್ಲ ಮರೆಯುವುದು ಒಳಿತ ಬರಿಸುವುದನ್ನು;
ಮರೆ ಕೆಡುಕ ತರುವುದನು– ಮರುಳಸಿದ್ಧ ॥ ೪೧೧ ॥

ಬೇಡ ಬೇಕಾದುದನು ಕಡೆಗಣಿಸಿ ಬೇಡುವೆವು
ಬೇಡಬಾರದುದನ್ನೆ! ಆ ಬಯಕೆಯು।
ಈಡೇರಲಭಿಶಾಪ, ಈಡೇರದಿದ್ದರೆ
ಕಾಡುವುದು ಶನಿಯಾಗಿ– ಮರುಳಸಿದ್ಧ ॥ ೪೧೨ ॥

ಕರೆಯದಲೆ ಬರುವುವು ರೋಗಾಣುಗಳು ಒಳಗೆ,
ಕರೆದರೂ ಬರವೇಕೆ ಒಳಿತು ಲೇಸುಗಳು?!
ಸರಳ ಕೆಡುಕಿನ ದಾರಿ, ಕಠಿನ ಒಳಿತಿನ ದಾರಿ,
ಅರಿಯಿದರ ಒಳಗುಟ್ಟ – ಮರುಳಸಿದ್ಧ ॥ ೪೧೩ ॥

ಬದುಕನ್ನು ಅರಳಿಸುವುದೇನುಂಟೊ ಅದೆ ನೀತಿ,
ಕದಡಿಪುದು, ಕೆರಳಿಪುದು ದುರ್ನೀತಿಯು।
ಹದುಳವನು ಹರಡಿಸುವ, ಲೇಸನ್ನು ಹಬ್ಬಿಸುವ
ಹದನವೇ ಸಂಸ್ಕೃತಿಯು –ಮರುಳಸಿದ್ಧ ॥ ೪೧೪ ॥

ಕಳ್ಳರೂ ಪಾಲಿಪರು ತಮ್ಮದೇ ನೀತಿಯನು;
ಸುಳ್ಳರೂ ಬಯಸುವರು ಅನ್ಯರಿಂ ನಿಜವ।
ಎಲ್ಲರನು ದಾಸ್ಯದಲಿ ಇಡುವವನೆ ಬಯಸುವನು
ಇಲ್ಲಿ ಸ್ವಾತಂತ್ರ್ಯವನು– ಮರುಳಸಿದ್ಧ ॥ ೪೧೫ ॥

ಸುಳ್ಳಿಗಿದೆ ಸುಳ್ಳು ಸುಖ, ಸತ್ಯಕ್ಕೆ ಸತ್ಯ ಸುಖ;
ಕಳ್ಳನೇ ಒಲಿದವರು ಒಲಿಯುವರೆ ಹಾಲ?
ಎಳ್ಳನಿತು ಸುಖಕಾಗಿ ಸುಳ್ಳ ತಬ್ಬುತ ಅದರ
ಬಳ್ಳಿಯಲೆ ಅಳಿಯುವರು– ಮರುಳಸಿದ್ಧ ॥ ೪೧೬ ॥

ಆಟಿಕೆಯ ಬಂದೂಕದೊಡನಾಡಿ ಮಕ್ಕಳು
ತೋಟಾದ ಬಂದೂಕ ಕೇಳದಿಹರೆ?
ಊಟೆಗೇ ವಿಷ ಬೆರೆಸೆ ಉಳಿವರಾರದ ಕುಡಿದು?
ಆಟ ಬೇಡುರಿಯೊಡನೆ– ಮರುಳಸಿದ್ಧ ॥ ೪೧೭ ॥

ದ್ಯೂತದಲಿ ಸೋತವರು ಯುದ್ಧದಲಿ ಗೆಲ್ಲರೆ?
ನೀತಿಯಲಿ ಸೋತವರು ಗೆಲ್ವುದೆಂತು?
ನೀತಿಯನ್ನಾಶ್ರಯಿಸಿ ಸೋತರೂ ಗೆದ್ದಂತೆ;
ಮಾತೆಯಾಗಲಿ ನೀತಿ– ಮರುಳಸಿದ್ಧ ॥ ೪೧೮ ॥

ಸುಳ್ಳೆ ನಾಚುವ ತೆರದಿ ಸುಳ್ಳು ಹೇಳುವರುಂಟು,
ಕಳ್ಳರೇ ನಾಚುವೊಲು ಕದಿವರಿಹರು।
ಒಳ್ಳೆಯವರಿಗೂ ಕಾಲ ಬರಬಹುದೆ? ಈಗಂತು
ಕಳ್ಳ ಸುಳ್ಳರಕಾಲ– ಮರುಳಸಿದ್ಧ ॥ ೪೧೯ ॥

ಬೇಲಿ ಎಷ್ಟಿರ ಬೇಕೊ ಅಷ್ಟಿದ್ದರೇ ಲೇಸು;
ಬೇಲಿಯೇ ಹೊಲವಾಗೆ ಬೆಳೆವುದೆಲ್ಲಿ?
ಕಾಲಕ್ಕೆ ತಕ್ಕಷ್ಟು ಕಟ್ಟಿರಲಿ, ಬಂಡಿಗೆ
ಕೀಲುಗಳು ಇರುವಂತೆ– ಮರುಳಸಿದ್ಧ ॥ ೪೨೦ ॥

ಚಕ್ರವ್ಯೂಹವ ಹೊಕ್ಕ ಅಭಿಮನ್ಯು, ತರ್ಕಗಳ
ಚಕ್ರತೀರ್ಥವ ಹೂಕ್ಕ ತಾರ್ಕಿಕರು ಸಮರು!
ತರ್ಕವೇ ಬಾಳಲ್ಲ, ಅಕ್ಕರತೆ, ಒಳ್ಪು, ಹಿತ
ಒಕ್ಕೂಡೆ ನಲ್‌ಬಾಳು– ಮರುಳಸಿದ್ಧ ॥ ೪೨೧ ॥

ಗೋರಿಯನು ಸಿಂಗರಿಸೆ ಎಲುವು ಚೆಲುವಾಗುವುದೆ?
ಮಾರಿಯನು ಮೆರೆಸಿದರೆ ಸಾವು ತಪ್ಪುವುದೆ?
ನೀರಿನಿಂ ತೊಳೆದರೆ ಒಳಗು ಮಡಿಯಾಗುವುದೆ?
ಚಾರಿತ್ರ್ಯದಿಂ ಶುದ್ಧಿ– ಮರುಳಸಿದ್ಧ ॥ ೪೨೨ ॥

ತುಳಿದನಿತು ಬೇಗನೇ ಬೆಳೆಯುವುದು ಕ್ಯಾವೊ ಮೈಲ್,
ಹಿಳಿದನಿತು ಬಕುಲಸುಮ ಕಂಪಿಡುವುದು।
ತೊಳೆದನಿತು ಕಪ್ಪು ಇದ್ದಿಲ, ಸುಜನ ದುರ್ಜನರ
ನೆಲೆಯಿಂತು ಎಂದರಿಯೊ– ಮರುಳಸಿದ್ಧ ॥ ೪೨೩ ॥

ಮೆಲ್ನಡೆಯ ಬ್ರೆಟ್ಟಿನ ಹೊಟ್ಟೆಯಲಿ ಇಹುದಂತೆ
ಬಲ್ನಡೆಯ ಮ್ಯೂಜಿಲ್! ಚೋದ್ಯವಲ್ತೆ?
ಬಲ್ನಡೆಯು ಪ್ರಕೃತಿಗೆ, ಮೆಲ್ನಡೆಯು ಸಂಸ್ಕೃತಿಗೆ,
ಗೆಲ್ವುದಾವುದು ಹೇಳು– ಮರುಳಸಿದ್ಧ ॥ ೪೨೪ ॥

ಶಿವಕೆ ಬಾಗಿದ ಶಕ್ತಿ ಸಂಪತ್ತು ಲೋಕಕ್ಕೆ,
ಶಿವವಿರೋಧಕ ಶಕ್ತಿ ಆಪತ್ತು ಜನಕೆ!
ಭವದ ಗುರಿ ಶಿವ–ಶಕ್ತಿ ಸಮ್ಮಿಳನ, ಶಕ್ತಿಯು
ಅವಲೋಹ, ಶಿವ ಪರುಷ– ಮರುಳಸಿದ್ಧ ॥ ೪೨೫ ॥

ಗವಿ ಸೇರಿಯಾದರೂ ಬದುಕುವುದು ಕತ್ತಲೆಯು
ರವಿಶಶಿಯ ಕಿರಣಗಳು ಬೆಂಬತ್ತಿದಾಗ।
ಭವಕೆ ಶಿವಸಂಪರ್ಕ ಬಹು ನಿಕಟವಾದರೂ
ಹವಣಿಪುದು ಭವ ಬದುಕೆ– ಮರುಳಸಿದ್ಧ ॥ ೪೨೬ ॥

ಹಣದ ಸೊಕ್ಕೊಂದು ಕಡೆ, ನೆಣದ ಸೊಕ್ಕೊಂದು ಕಡೆ
ಧಣಿತನದ ಹಿರಿಸೊಕ್ಕು ಇನ್ನೊಂದು ಕಡೆಗೆ।
ಕುಣಿಯುತಿರೆ ರಣರಂಗವಾಗದೆ ಧರೆರಂಗ?
ಮಣಿಸು ದುಶ್ಯಕ್ತಿಗಳ– ಮರುಳಸಿದ್ಧ ॥ ೪೨೭ ॥

ಸತ್ಯವೇ ಗೆಲ್ಲುವುದು ಎಂಬ ವಿಶ್ವಾಸದಲಿ
ಸತ್ತು ಹೋದವರೆಷ್ಟೊ ಮರ್ತ್ಯದಲ್ಲಿ!
ಸತ್ಯಗೆಲ್ಲುವುದಿಲ್ಲ ಸತ್ಯಗೆಲಿಸಲು ಜನರು
ಉತ್ಸಾಹ ತೋರದಿರೆ– ಮರುಳಸಿದ್ಧ ॥ ೪೨೮ ॥

ದ್ವಾರವಿಲ್ಲದ ಮನೆಯೆ? ದಾರಿಯಿಲ್ಲದ ಊರೆ?
ಏರಿಯಿಲ್ಲದ ಕೆರೆಯೆ? ತೀರವಿರದ
ವಾರಿಧಿಯೆ? ಬದುಕಿಗೇ ಬೆಲೆ ತರುವ ತಥ್ಯಗಳ
ತೋರದಿರೆ ಸತ್ಯವೆ– ಮರುಳಸಿದ್ಧ? ॥ ೪೨೯ ॥

ತೋರುವುದೆ ಸತ್ಯವೆನೆ ಮೃಗಜಲವು ಸತ್ಯವೆ?
ತೋರದುದೆ ಸತ್ಯವೆನೆ ಸತ್ಯವೇ ಸ್ವಪ್ನ?
ತೋರುವುದು, ತೋರದು, ಬಣ್ಣನೆಗೆ ಬಾರದು,
ಸಾರತರಸತ್ಯವು– ಮರುಳಸಿದ್ಧ ॥ ೪೩೦ ॥

ಸಾರ್ವಕಾಲಿಕ ಸತ್ಯವೆಂಬುದನು ಪರುಕಿಸಲು
ಉರ್ವಿಯಲಿ ಉಳಿವೆವೇ ಸರ್ವಕಾಲಕ್ಕು?
ಪೂರ್ವಜರು ನಿಜವೆಂದುದಿಂದಿಗೂ ನಿಜವೆನಿಸೆ
ಪೆರ್ವಾತು ಇಂದಿಗದೆ– ಮರುಳಸಿದ್ಧ ॥ ೪೩೦ ॥

ನಾ ಕಂಡ ನಿಜವನ್ನು ನೀ ಕಂಡ ನಿಜದೊಡನೆ
ಏಕಗೊಳಿಸುವ ಬಾರೊ! ಲೋಕದವರು।
ಬೇಕಾದ ರೀತಿಯಲಿ ನಿಜವನರಸಲಿ; ಫಲವ
ಸ್ವೀಕರಿಸು ಸರಿಯಿರಲು– ಮರುಳಸಿದ್ಧ ॥ ೪೩೨ ॥

ನದಿಯ ನೋಡಿಹೆನೆಂಬೆ; ನೋಡಿಹೆಯ ನೀನದರ
ತುದಿ ಮೊದಲುಗಳ, ಸತತ ಹರಿವ ನೀರುಗಳ?।
ನದಿಯ ನೀ ನೋಡಿರುವೆ, ನೋಡಿಲ್ಲ। ಇದರಂತೆ
ಬದುಕು, ಸತ್ಯಗಳಣ್ಣ– ಮರುಳಸಿದ್ಧ ॥ ೪೩೩ ॥

ನಶ್ವರವು ಶಾಶ್ವತವು ಎಂದು ಅಸವಳಿಯದಿರು
ಈಶ್ವರನು ಶಾಶ್ವತನು, ವಿಶ್ವ ಶಾಶ್ವತವು।
ನಿಶ್ವಾಸವಿರುವನಿತು ದಿನ ಬದುಕು, ನಿಜವನರಿ,
ಪಶ್ವಂಶವನು ದಹಿಸು- ಮರುಳಸಿದ್ಧ ॥ ೪೩೪ ॥

ಮೊಳೆತ ಹಲ್ಲನುಭವವು, ಶಾಸ್ತ್ರ ಕಟ್ಟಿದ ಹಲ್ಲು,
ತಳಿತ ತಾವರೆ ತಿಳಿವು, ಬರೆದಲರು ಬೋಧೆ!
ಜಲರಹಿತ ಕೆರೆಯಲ್ಲಿ ತೆರೆಯು ತಾವರೆಯೆಲ್ಲಿ?
ಕಲಿಕೆಯೇ ಕಲೆಯಲ್ಲ- ಮರುಳಸಿದ್ಧ ॥ ೪೩೫ ॥

ಎದೆಯ ಕಲ್ಲಾಗಿಸುವ ಕಲೆಯೊಂದು ಕಲೆಯೆ? ತೆಗೆ;
ಹೃದಯವನು ಕರಗಿಸುವ ಕಲೆಯೆ ಕಲೆಯು।
ಬಿದುಗಲ್ಲು ಸ್ರವಿಸುವೊಲು ಶಶಿಕಿರಣ ಸೋಂಕಿನಲಿ,
ಮೃದುವಾಗಲೆದೆ ಕಲೆಗೆ-ಮರುಳಸಿದ್ಧ ॥ ೪೩೬ ॥

ಹಾಡವೇ ಜ್ವಾಲೆಗಳು, ಕುಣಿದಾಡವೇ ತೋಳಗಳು,
ಮೂಡಿಸವೆ ಚಿತ್ರಗಳ ವ್ಯಾಳಗಳು ನೆಲದಿ?
ಕೇಡಿ ಕೇಡಿಯೆ ಕಲೆಯ ಜಾಡು ಹಿಡಿದರು ಸಹಿತ,
ಕೋಡು ಮೂಡಿಪುದೆ ಕಲೆ- ಮರುಳಸಿದ್ಧ? ॥ ೪೩೭ ॥

ಹುಲಿ ಚಿರತೆಗಳಿಗೇಕೆ ಚೆಲುವ ಮೈಯಿತ್ತಿಹೆಯೊ
ಕೊಲುವ ಪ್ರಾಣಿಗಳು ಬೇಕೆ ಕಲೆಯ ಶೋಭೆ?
ಖಲತನಕೆ ನೆರವಾಗೆ ಬೆಲೆಯೆಲ್ಲಿ ಕಲೆಗಳಿಗೆ?
ಸೆಲೆಯಾಗಲವು ಶಿವಕೆ- ಮರುಳಸಿದ್ಧ ॥ ೪೩೮ ॥

ನಾಗ ರಾಗವ ಮೆಚ್ಚೆ ರಸಿಕನೆ? ಯಾತಕೋ
ಕಾಗೆ ಕೋಗಿಲೆ ಸಲಹೆ ಗಾನಪ್ರಿಯೆಯೆ?
ನಾಗರಿಕ ನಾಯಿಯನು ಸಾಕೆ ಸದ್ಧರ್ಮಿಯೆ?
ಈ ಗುಟ್ಟನರಿತುಕೊ ಮರುಳಸಿದ್ಧ ॥ ೪೩೯ ॥

ಮಾಡಿದ್ದ ಮಾಡುವುದೆ ಬಹುಭಾಗ ಬಾಳಿನಲಿ,
ಗಾಡಿಯಿದೆ ಮಾಡದುದು ಮಾಡುವಲ್ಲಿ ।
ರೂಢಿಯಾಗದೆ ಬಾಳು ಮೋಡಿಯಾಗುವ ಹಾಗೆ
ಮಾಡುತಿರು ಸೃಜನಕ್ರಿಯೆ- ಮರುಳಸಿದ್ಧ ॥ ೪೪೦ ॥

ಬದುಕು ಬೇಸರವಾಗೆ ಬದುಕನೇ ಚಿತ್ರಿಸುವ
ವಿಧವಿಧದ ಕಲೆಗಳಲಿ ಸೊಗ ಸವಿವೆವು।
ವಿಧು ರವಿಯ ಛವಿ ಪಡೆದು ಮಧುರಗೊಳಿಸುವ ಹಾಗೆ
ಇದರ ಒಳಗುಟ್ಟಿಂದ– ಮರುಳಸಿದ್ಧ ॥ ೪೪೧ ॥

ನೃತ್ಯವ್ಯಾಪಿಸದಂಗವಾವುದದು ಕುಣಿವಾಗ?
ಚಿತ್ರ ತುಂಬದ ಡಿಂಬವೆಲ್ಲಿ ಬರೆವಾಗ?
ನೆತ್ತರವೆ ತಂಬೂರಿ ಗಾನದುನ್ಮಾದದಲಿ,
ವಾಸ್ತವದ ಹೂ ಕವಿತೆ– ಮರುಳಸಿದ್ಧ ॥ ೪೪೨ ॥

ಗಗನ ಮಾರ್ಗದ ಘಂಟೆಗಳ ನಾದ ಕೇಳಿಹೆಯ?
ಭಗಣಕುಲಸಂಗೀತ ಸ್ವರವ ಕೇಳಿಹೆಯ?
ಖಗಗಾನಕೇ ಕಿವಿಯು ಕಿವುಡು ಬಿದ್ದಿರುವಾಗ
ಮುಗಿಲ ಮಾತೇತಕೆ– ಮರುಳಸಿದ್ಧ? ॥ ೪೪೩ ॥

ವೇದಗಳ ಹಿಂಡಿದರೆ ಆತ್ಮಾನುಭೂತಿಯು,
ನಾದವನು ಹಿಂಡಿದರೆ ಸಂಗೀತವು।
ವಾದಗಳ ಹಿಂಡಿದರೆ ಸಮ್ಯಕ್ಷ, ಬದುಕನ್ನು
ಶೋಧಿಸಲು ಸಾಹಿತ್ಯ– ಮರುಳಸಿದ್ಧ ॥ ೪೪೪ ॥

ವಚನದಧಿ ಮಥಿಸಿದರೆ ಮಾನವ್ಯ ನವನೀತ,
ಋಚೆಯ ಮೊಸರನು ಕಡೆಯೇ ದೈವಿಕತೆಯು।
ನಿಚಿತ ಲಾಭವು ನಮಗೆ ಮಾನವತೆ ದೈವಿಕತೆ–
ಪ್ರಚುರಪಡಿಸಲಿ ಕಲೆಯು– ಮರುಳಸಿದ್ಧ ॥ ೪೪೫ ॥

ಶುಚಿಯಾಗೆ ಅಭಿರುಚಿಯು ಶುಚಿಯಹವು ಕಲೆಗಳು,
ರುಚಿಯ ಶುಚಿಗೊಳಿಸುವುದೆ ಸಂಸ್ಕೃತಿಯ ಸಾರ।
ಪಚನಿಸುತ ಹುಲ್ಲನ್ನು ಹಾಲ ಕರೆಯುವ ಹಸುವು
ವಚನಿಪುದು ಸದ್ರುಚಿಯ– ಮರುಳಸಿದ್ಧ ॥ ೪೪೬ ॥

ಹೊಸನೋಟದಿಂದಲೇ ಹೊಸಬಾಳು, ರಸಬಾಳು,
ಹೊಸ ಗೊತ್ತು ಗುರಿಯಿಂದ ಹೊಸ ನೋಟವು।
ಹೊಸ ಚಿಂತನೆಯ ಬಲದಿ ಹೊಸ ಗೊತ್ತುಗುರಿ ನಿನಗೆ,
ಹೊಸತುಗೊಳಿಸುವುದೆ ಕಲೆ–ಮರುಳಸಿದ್ಧ ॥ ೪೪೭ ॥

ಆಗಾಗ ಅಂಗಾಂಗ ತರಂಗಿಸುವ ಅನುಭವವು,
ಆಗಾಗ ನರನರವು ನಿನದಿಸುವ ಭಾವ।
ಹೀಗೆಂದು ಉಸಿರಲು, ಹೆಸರಿಸು ಬರದಂಥ
ರಾಗಗಳು ಆಗಾಗ– ಮರುಳಸಿದ್ಧ ॥ ೪೪೮ ॥

ಮದ್ವಿಲ್ಲ ಮರಣಕ್ಕೆ, ಹದ್ದಿಲ್ಲ ಪ್ರೇಮಕ್ಕೆ,
ಸಿದ್ದಿಯಿಲ್ಲಳಿಮನದ ಸಾಧಕನಿಗೆ।
ಬುದ್ಧಿಭಾವಗಳೆರಡು ಮುದ್ದಾಗಿ ಬೆರೆಯದಿರೆ
ಪದ್ಯವಿಲ್ಲೆಂದಾತ– ಮರುಳಸಿದ್ಧ ॥ ೪೪೯ ॥

ಹೊಸ ಗಾನ ಬೇಕೆಂಬೆ, ಹೊಸ ಚಿತ್ರ ಬೇಕೆಂಬೆ,
ಹೊಸದೇನ ಹೆಣೆಯುವೆಯೊ ಸರಿಗಮವ ಬಿಟ್ಟು?
ಎಸೆವೇಳು ಬಣ್ಣದಲೆ ಹೊಸ ಚಿತ್ರ, ಕಲೆಗಳಿಗೆ
ರಸಭಾವಗಳೇ ಮುಖ್ಯ– ಮರುಳಸಿದ್ಧ ॥ ೪೫೦ ॥

ಬೆರಗುಗಣ್ಣುಗಳಿಂದ ಬುವಿಯ ನೋಡಿದೆ ಮೊದಲು।
ಬೆರಗು ಬೆರಗಾಗಿಯೇ ಉಳಿದಿಹುದು ಇನ್ನೂ।
ಹೊರಗು ಬೆರಗಿನ ಸರಿತೆ, ಒಳಗು ಬೆರಗಿನ ಒರತೆ,
ಬೆರಗಿನಲಿ ಕಲೆಯುಗಮ–ಮರುಳಸಿದ್ಧ ॥ ೪೫೧ ॥

'ಕನಸು ಕಾಣ್ಕೆಗಳೆನ್ನ ಚಿತ್ರಕಲೆಯಾಧಾರ'
ಎನುವ ರ್‍ಯಾಫೆಲನುಕ್ತಿ ಸೃಜನಕ್ರಿಯೆಗೆಲ್ಲ।
ಅನುವಯಿಸದೆ? ಕಣಸ ಕಾಣದಿಹ ಕಲೆಗಾರ
ತಣಿವನೇ ಕಲೆಯಲ್ಲಿ– ಮರುಳಸಿದ್ಧ ॥ ೪೫೨ ॥

ಹಲವು ಸ್ವನಗಳ ಮೇಳವಣೆ ಬದುಕು, ನಿನಗಿಲ್ಲಿ
ಛಲ ಬೇಡ ನನ್ನ ಧ್ವನಿ ಮೇಲಾಗಲೆಂಬ।
ಲಲಿತ ಸಮ್ಮಿಳನವೇ ವೃಂದವಾದ್ಯದ ಸೊಗಸು;
ಕಲಿ ಕಲೆತು ಹಾಡುವುದ– ಮರುಳಸಿದ್ಧ ॥ ೪೫೩ ॥

ಹೊಸಹಕ್ಕಿ ಕಂಡ ದಿನ, ಹೊಸ ಹೂವ ಕಂಡ ದಿನ
ಹಸುರಾಗಿ ನಳನಳಿಸಲೆದೆಯು ನಿನ್ನ।
ಖುಷಿಯ ಸೆಲೆ ಕಲೆಗಳಿಗೆ ಕೊರತೆಯೆಲ್ಲಿದೆ ಜಗದಿ?
ವ್ಯಸನವೇತನಕೆ ಗೆಳೆಯ– ಮರುಳಸಿದ್ಧ ॥ ೪೫೪ ॥

ಕಾನನದ ಮಲ್ಲಿಗೆಯು ಮ್ಲಾನವಾಗುವುದುಂಟೆ–
ಜಾಣರಿಲ್ಲೆಲ್ಲೆಂದು ಮೆಚ್ಚು ನುಡಿಯೆ?
ತಾನರಳಿ ಪರಿಸರವ ಪರಿಮಳಿತಗೊಳಿಸುವುದೆ
ಮಾನಪತ್ರವು ಅದಕೆ– ಮರುಳಸಿದ್ಧ ॥ ೪೫೫ ॥

'ಹೊಸ ಹರೆಯು' ಎನ್ನುವೊಲು 'ಹೊಸ ಮುಪ್ಪು'ಎನ್ನುವರೆ?
ಹೊಸತನವು ಹುಟ್ಟುವುದು ಕಸುವಿನಲ್ಲಿ।
ರಸದಲ್ಲಿ, ರೀತಿಯಲಿ, ಪ್ರತಿಭೆಯಲಿ, ದೀಧಿತಿಯ
ಪ್ರಸರದಲಿ, ಸಾಧನದಿ–ಮರುಳಸಿದ್ಧ ॥ ೪೫೬ ॥

ಯಾವ ಸಾಗರತೀರವಾದರೇನದು ನಮಗೆ
ಈವ ಉಪ್ಪಿನ ರುಚಿಯು ಒಂದೆ ವಿಧವು।
ಯಾವ ದೇಶದ ಯಾವ ಭಾಷೆಗಳ ಜನರಿರಲಿ–
ಭಾವ ರಸಗಳು ಒಂದೆ– ಮರುಳಸಿದ್ಧ ॥ ೪೫೭ ॥

ದೇಶವಾವುದೆ ಇರಲಿ, ಭಾಷೆ ಯಾವುದೆ ಇರಲಿ,
ವೇಷವಾವುದೆ ಇರಲಿ ಮನುಜಕುಲದ।
ದೋಷ ಗುಣಗಳು ಒಂದೆ, ಪ್ರಕೃತಿ ವಿಕೃತಿಗಳೊಂದೆ,
ಲೇಸನರಸೆಲ್ಲೆಲ್ಲು– ಮರುಳಸಿದ್ಧ ॥ ೪೫೮ ॥

ಹಳೆಯ ವಣಿಕರ ಜೊತೆಗೆ ಹೊಸ ವಣಿಕರಿಲ್ಲಿಹರು–
ಕಲೆ, ವಿದ್ಯೆ, ವಿಜ್ಞಾನಗಳ ವಣಿಕರು।
ಬೆಲೆಗೆ ಇಟ್ಟಿಹರಿವರು ದೇವರನೆ, ಧರ್ಮವನೆ,
ಬೆಲೆಗೆ ಬೆಲೆಯೆಲ್ಲಿನ್ನು– ಮರುಳಸಿದ್ಧ? ॥ ೪೫೯ ॥

ಭೂಮಾನುಭೂತಿಗೆ ಹಿಮಗಿರಿಯೆ ಬೇಕಿಲ್ಲ,
ವ್ಯೋಮ ದಿಙ್ಮಂಡಲದ ಅಂಚು ಬೇಕಿಲ್ಲ।
ನಿರ್ಮಾಣ ಪ್ರತಿಭೆಯನು ನೆನೆ! ಸಕಲ ಸೃಷ್ಟಿಯನು
ಪರ್ವಿ ನಿಲುವುದು ಅದುವೆ– ಮರುಳಸಿದ್ಧ ॥ ೪೬೦ ॥

ಹನಿ ಕಡಲ ಸೇರಿದರೆ ಹಡಗು ಪಡೆ ಹೊರುವನಿತು
ಘನ ಶಕ್ತಿ ಪಡೆಯುವುದು, ಬೇರೆ ಇರೆ ಬಿಂದು
ಮನುಜನಿಗು ಘನತೆಯಿದೆ ಮನುಜಕುಲ ಜಲಧಿಯಲಿ,
ತನಗೆತಾನೆನಲು ಹನಿ– ಮರುಳಸಿದ್ಧ ॥ ೪೬೧ ॥

ಮುಂದಿರಿಸೆ ಸೊನ್ನೆಯನು ಒಂದು ಹತ್ತಾಗುವುದು,
ಹಿಂದಿರಿಗೆ ಕಡೆಗಣಿಸಿ ಒಂದು ಒಂದೇ!
ಮುಂದಿಯನು ಮುಂದಿರಿಸಿಕೊಂಡು ಬಲ್ಲಿದನಾಗು;
ಹಿಂದುಳಿಸೆ ಹಾನಿ ದಿಟ– ಮರುಳಸಿದ್ಧ ॥ ೪೬೨ ॥

ಅನುಪಾನದಂತೆಯೇ ಔಷಧವ ಸೇವಿಪುದು,
ಅನುನಯಕೆ ತಲೆಬಾಗಿ ಜನವ ಸೇವಿಪುದು,
ಕೊನೆ ಮೊದಲನಾರೈದು ಕಜ್ಜವನು ಹಮ್ಮುವುದು,
ಮನ ಮೆಚ್ಚೆ ನಡೆಯುವುದು– ಮರುಳಸಿದ್ಧ ॥ ೪೬೩ ॥

ಎಲ್ಲಿ ನೋಡಿದರೆನ್ನ ಉಪಕಾರಿಗಳೆ– ಗಿರಣಿ
ಯಲ್ಲಿ, ಗಣಿ ಹೊಲ ತೋಟ ಗದ್ದೆಗಳಲಿ,
ಎಲ್ಲರನು ಕಂಡೆನ್ನ ಋಣ ಸ್ಮರಿಸಬಲ್ಲೆನೆ?
ಇಲ್ಲಿಂದಲೇ ಮಣಿವೆ– ಮರುಳಸಿದ್ಧ ॥ ೪೬೪ ॥

ಸಾಲೊಮನ್ನನ ರಥದ ಕುದುರೆ ಧೂಳೆಬ್ಬಿಸಿರೆ
ಹುಲು ನೊಣವು ತಾನೆಬ್ಬಿಸಿದೆನೆನ್ನುತ।
ಗಳಹಿಕೊಳ್ಳುವ ಹಾಗೆ ಸಮುದಾಯ ಶ್ರೇಯವನು
ಕಳಬೇಡ ನೀನೆಂದ– ಮರುಳಸಿದ್ಧ ॥ ೪೬೫ ॥

ಅನ್ಯರರ, ಸ್ವಾಧೀನತೆಯ ಮನ್ನಿಸಿರಿ– ಪರಮ
ಉನ್ನತಿಯ ಪಡೆಯುವುವು ನಿಮ್ಮಿರವು, ಬಿಡುತೆ।
ಅನ್ಯ ಮಾರ್ಗವದಿಲ್ಲವೆಂದು ಸಾರಿದ ಬುದ್ಧ;
ನನ್ನಿಗಳ ನನ್ನಿಯಿದು– ಮರುಳಸಿದ್ಧ ॥ ೪೬೬ ॥

ಬಿಡಿಸಾ ಬರಬ್ಬನನು, ಶಿಲುಬೆಗೇರಿಸು ಕರುಣೆ–
ಯೊಡೆಯ ಕ್ರಿಸ್ತನನೆಂದು ಬೊಬ್ಬಿರಿದು ಕುಣಿದ।
ಬಡಯತಿಗಳನೆ ಕ್ಷಮಿಸು– ಎಂದು ಬೇಡಿದನೇಸು;
ಪಡಿಯುಂಟೆ ಕ್ಷಮೆಯಿದಕೆ– ಮರುಳಸಿದ್ಧ ॥ ೪೬೭ ॥

ಒಬ್ಬನ ಸ್ವತಂತ್ರತೆಗೆ ಎಷ್ಟು ಜನರತಂತ್ರರು.
ಒಬ್ಬನುರು ಸಿರಿತನಕೆ ಬಡವರೆನಿಬರ್?
ಸಬ್ಬರನು ಸುಲಿಯುತ್ತ ಕೊಬ್ಬಿರುವ ಕೆಲಜನರ
ಹಬ್ಬಕಾಗಿದೆಯೆ ಜಗ– ಮರುಳಸಿದ್ಧ? ॥ ೪೬೮ ॥

ಆಗಸವ ನೋಡುತ್ತ ಬಿಸುಸುಯ್ವನೊಕ್ಕಲಿಗ,
ಆಗರ್ಭ ಶ್ರೀಮಂತ ಭೋಗಿಸುತಲೆಲ್ಲ!
ಹೇಗೆ ಕಳೆಯಲಿ ಹೊತ್ತ, ಹೇಗೆ ನುಂಗಿದ ತುತ್ತ
ಬೇಗ ಅರಗಿಸಲೆಂಬ- ಮರುಳಸಿದ್ಧ ॥ ೪೬೯ ॥

ಎಂಥ ಕ್ರಾಂತಿಯೆ ಬರಲಿ, ಅಂತ್ಯದಲಿ ಸ್ವಾರ್ಥಿಗಳ
ತಂತ್ರಕ್ಕೆ ಬಲಿಯಾಗಿ ಸೋಲಲೇ ಬೇಕೆ?
ಎಂಥದೋ ಕ್ರಾಂತಿ ಸುಖ ತರಲಿಹುದು ಎಂದೆಂಬ
ಭ್ರಾಂತಿ ಗತಿಯೇ ಜನಕೆ- ಮರುಳಸಿದ್ಧ? ॥ ೪೭೦ ॥

ಅಖಿಲೆಸನ ರಥ ತನ್ನ ಪತಿಯ ಹೆಣವೆಳೆಯುತಿರೆ
ಸುಖ ಸ್ವಪ್ನ ಕಾಣುತಿರ್ದಾಂಡ್ರೊಮಖೆಯಂತೆ!
ನಿಖಿಲ ದುರ್ಬಲವರ್ಗ ಸುಖ ಸ್ವಪ್ನ ನೋಡುತ್ತ
ವಿಕಳತೆಯ ಪಡೆಯುತಿದೆ- ಮರುಳಸಿದ್ಧ ॥ ೪೭೧ ॥

ಶಾಂತಿಯಾ ಹೆಸರಿನಲೆ ಯುದ್ಧ ಸಿದ್ಧತೆ, ಜನದ
ಕ್ರಾಂತಿಯಾ ಹೆಸರಿನಲೆ ಜನದ ದಾಸ್ಯ!
ಯಂತ್ರಕೂ ಬಡವಗೂ ಅಂತರವೆ ಉಳಿದಿಲ್ಲ.
ಭ್ರಾಂತಿ ಬಡವರ ಯುಗವು- ಮರುಳಸಿದ್ಧ ॥ ೪೭೨ ॥

ದೈತ್ಯಶಸ್ತ್ರಾಸ್ತ್ರಗಳ ಭೀಕರವ್ಯೂಹದಲೆ
ಚಿತ್ತ ಚಡಪಡಿಸುತಿದೆ, ನಾಳೆಯನು ನೆನೆದು!
ಆತ್ಮಘಾತಕತನಕೆ ಮುತ್ಸದ್ದಿತನವೆನಲೆ?
ಮೃತ್ಯುವಿನ ನೃತ್ಯವಿದು- ಮರುಳಸಿದ್ಧ ॥ ೪೭೩ ॥

ಯುದ್ಧದಲಿ ಗೆದ್ದವರೆ ಸೋತವರು, ಸೋತವರೆ
ದಗ್ಧವಾದವರಲ್ತೆ ಯುದ್ಧಾಗ್ನಿಯಲ್ಲಿ?
ಪೆದ್ದರಿಗು ತಿಳಿಯುವೀ ತಥ್ಯ ತಿಳಿಯದು ಏಕೆ-
ಬುದ್ಧಿವಂತರಿಗೆಂದ- ಮರಳಸಿದ್ಧ ॥ ೪೭೪ ॥

ಆಗೊಮ್ಮೆ ಈಗೊಮ್ಮೊ ರಕ್ತದಲಿ ಅಭಿಷೇಕ-
ವಾಗಲೇ ಬೇಕೇನು ಈ ಭೂಮಿಗೆ?
ತ್ಯಾಗಮಯಿ ಭೂಮಾತೆ ಬೇಡಳಿದ; ಮಾನುಷೀ
ವ್ಯಾಘ್ರತನ ಬೇಡುವುದು- ಮರುಳಸಿದ್ಧ? ॥ ೪೭೫ ॥

ಯುದ್ಧಸಾಮಗ್ರಿಗಳ ಸಿದ್ಧಗೊಳಿಸುತ ನಡೆಯೆ
ಯದ್ಧವೇ ಫಲ! ಶಾಂತಿ ಶಸ್ತ್ರಕನ್ನಿಕೆಯೆ?
ಮದ್ದು ಗುಂಡುಗಳಿಂದ ಶಾಂತಿ ಕೊಳ್ಳಲು ಹೋಗೆ
ವಿಧ್ವಂಸವೇ ಪ್ರಾಪ್ತಿ– ಮರುಳಸಿದ್ಧ ॥ ೪೭೬ ॥

ಅನ್ನಕ್ಕೆ ಹಣವಿಲ್ಲ, ಗನ್ನುಗಳಿಗಿದೆಯೆಂಬ
ಕುನ್ನಿಗಳ ಕೈಯಲ್ಲಿ ದೇಶ ಸೇರಿದರೆ।
ಬನ್ನಗಳೆ ಅನ್ನವೈ ಸಹಿಸಿಕೊಳ್ಳುವ ಜನಕೆ–
ಅನ್ಯಾಯವೀ ಸಹನೆ– ಮರುಳಸಿದ್ಧ ॥ ೪೭೭ ॥

ನರಮೇಧಕಿದೆ ದೊಡ್ಡ ಹೆಸರು 'ಯುದ್ಧ'ವು ಎಂದು!
ಗುರಿಯದಕೆ ಶಾಂತಿಯೆನೆ ಸೂರಿಗಳು ನಗರೆ?
ದುರುಳತನ ಮರುಳತನ ಏರೆ ಸಿಂಹಾಸನವ
ದೊರೆಯುವುದು ಯುದ್ಧವೇ! – ಮರುಳಸಿದ್ಧ ॥ ೪೭೮ ॥

ಯುದ್ಧಕ್ಕೆ ಕೊಡಬಹುದು ಬಲವಾದ ಕಾರಣವ,
ಮದ್ಯಕ್ಕೆ ಕೊಡಬಹುದು ವೈದ್ಯಮತವ।
ವಿದ್ಯೆಬುದ್ಧಿಗಳಿಹವೆ ಕ್ಷುದ್ರಕ್ಕೆ ಶುಭ ಶಿವದ
ಮುದ್ರೆಯೊತ್ತಲಿಕೆಂದು– ಮರುಳಸಿದ್ಧ ॥ ೪೭೯ ॥

ಧ್ವಸ್ತ ಮುತ್ಸದ್ದಿತನ, ಧ್ವಸ್ತ ಹೃದಯಾಯತನ,
ಧ್ವಸ್ತವಾಗುತಲಿಹುದು ಮಧ್ಯಪ್ರಾಚ್ಯ।
ಸ್ವಸ್ತಿ ಯಾರಿಗೆ ಬೇಕು ಮಸ್ತಿ ಏರಿರುವಾಗ?
ಅಸ್ತವ್ಯಸ್ತವು ಎಲ್ಲ – ಮರುಳಸಿದ್ಧ ॥ ೪೮೦ ॥

ಭದ್ರವಾಗಲಿ ಬದುಕು ಶುಭವಾಗಲೆಲ್ಲರಿಗೆ,
ಮುದ್ರೆಗಳು ಮೆರೆಯಲಿ ಮಂಗಳದ, ಶಿವದ;।
ಯುದ್ಧವಿರಹಿತ ಜಗದ ಕನಸು ನನಸಾಗಲಿ:
ಋದ್ಧಿ ಸರ್ವರಿಗಿರಲಿ– ಮರುಳಸಿದ್ಧ ॥ ೪೮೧ ॥

ವಿಶ್ವಾಸ ಚಿಗುರಲಿ ವಿಶ್ವದೊಳಗೆಲ್ಲೆಡೆಗೆ
ನಿಶ್ವಾಸವಾಗಲದೆ ಎಲ್ಲರುರದಿ।
ವಿಶ್ವಾಸ ಮನುಕುಲದ ಭವಿತವ್ಯದಲಿ ಕೊನರೆ
ಐಶ್ವರ್ಯವದೆ ಜನಕೆ– ಮರುಳಸಿದ್ಧ ॥ ೪೮೨ ॥

ಬೆಳಕು ಹೊರಗೆಷ್ಟಿಲ್ಲ, ಕೊಳಕು ಒಳಗೆಷ್ಟಿಲ್ಲ?
ಕೊಳಕ ಮುಚ್ಚಲು ಎಂಥ ನಾಗರಿಕ ವೇಷ!
ಬಳಿದಿದೆ ಗಿಲೀಟನ್ನು ಹಿತ್ತಳೆಯ ನಗನಾಣ್ಯ-
ಗಳಿಗೆ! ಬಲ್ಲವ ಬಲ್ಲ -ಮರುಳಸಿದ್ಧ ॥ ೪೮೩ ॥

ಹೊರಗೆ ಹರವಾಗಿಯೂ ಒಳಗೆ ಹುಳುತಿಂದಿರುವ
ಮರವು ನಾಗರಿಕತೆಯು। ಬಿರುಗಾಳಿಗಳಿಗೆ।
ಮುರಿಯದಿಹುದೇ ಚೋದ್ಯ! ಆಗದಿರಲಿದು ಖಾದ್ಯ
ಪರಮಾಣು ಬಾಂಬಿಗೆ- ಮರುಳಸಿದ್ಧ ॥ ೪೮೪ ॥

'ಡೈನಾಸರಸ್ ತನ್ನ ಭಾರತಿರೇಕದಲೆ
ಪ್ರಾಣ ನೀಗುವ ತೆರದಿ ನಾಗರಿಕತೆ!
ತಾನೆ ಸೃಷ್ಟಿಸಿಕೊಂಡ ಶಸ್ತ್ರಾಸ್ತ್ರಭಾರದಲಿ
ಕ್ಷೀಣಗೊಂಡಳಿಯುವುದೆ ಮರುಳಸಿದ್ಧ ॥ ೪೮೫ ॥

ಹಿಂದೆ ನೋಡದೆ ನಡೆದೆ ಬಂಧನಕೆ ಗುರಿಯಾದೆ,
ಹಿಂದೆ ನೋಡುತ ನಡೆದ- ಎಡವಿ ಬಿದ್ದೆ।
ಹಿಂದೊಮ್ಮೆ ಹೊರಳುತ್ತ ಮುಂದೆ ನಡೆ, ಮುಂದೆ ನಡೆ
ನಿಂದಿಹುದೆ ನೆಲೆಯಲ್ಲ ಮರುಳಸಿದ್ಧ ॥ ೪೮೬ ॥

ನಿಲುಕಿದುದೆ ಸೋಪಾನ ನಿಲಕದುದ ನಿಲುಕಿಸಲು,
ಕಲಿತುದೇ ಕೈದೀಪ ಕಲಿಯದಕ್ಕೆ!
ನೆಲೆಯೊಂದ ನೆಮ್ಮಿಯೇ ಜಲಧಿ ಜಿಗಿದನು ಹನುಮ,
ಚಲಿಸು ನೆಲೆಯಿಂ ನೆಲೆಗೆ- ಮರುಳಸಿದ್ಧ ॥ ೪೮೭ ॥

ಅಲೆಯುವುದು ಎಲರೊಡನೆ, ಬೆಳೆಯುವುದು ಬುಡದೊಡನೆ,
ಚಲಿಸಿಯೂ ಚಲಿಸದೊಲು ಚೆಲುವ ಬಳ್ಳಿ।
ನೆಲೆಯಲ್ಲಿ ಸ್ಥಿರವಾಗಿ ಅಲೆದಲೆದು ಅರಳಿದರೆ
ಬೆಲೆಯು ಬದುಕಿಗೆ ಬಹಳ- ಮರುಳಸಿದ್ಧ ॥ ೪೮೮ ॥

ಚಿತ್ರದಲ್ಲಿಹ ತಗ್ಗು ತೆಮರುಗಳು ಸತ್ಯವೆ?
ಸತ್ಯದೆಡೆ ಸಾಗಿಸುವ ದಿಕ್ಸೂಚಿ ಮಾತ್ರ।
ಮರ್ತ್ಯದಿನಮರ್ತ್ಯಕ್ಕೆ, ಮೂರ್ತದಿನಮೂರ್ತಕ್ಕೆ,
ಯಾತ್ರೆ ಪ್ರತಿಮೆಯ ಬಲದಿ- ಮರುಳಸಿದ್ಧ ॥ ೪೮೯ ॥

ಸಿಹಿಯಾಗಲೂ ಬಹುದು, ಕಹಿಯಾಗಲೂ ಬಹುದು,
ಇಹದ ಸಂಬಂಧಗಳು ನಾವು ನಡೆದಂತೆ।
ಸಿಹಿಯಾಗ ಬಯಸಿದರು ಕಹಿಯನೇ ಉಗುಳುವ
ಅಹಿಮನುಜರೂ ಉಂಟು– ಮರುಳಸಿದ್ಧ ॥ ೪೯೦ ॥

ಇಂದು ದ್ವೈಧೀಕರಣ ಅಂದಗೆಡಿಸದುದಿಲ್ಲ,
ಒಂದು ಹೊರಗೊಳಗೊಂದು ಸಾಮಾನ್ಯವೀಗ।
ತಂದೆಯಾಗಿದೆ ಕಾಲ ಮುಖವಾಡಗಳಿಗಿಂದು,
ಸಂದೇಹವೆಲ್ಲರಲಿ– ಮರುಳಸಿದ್ಧ ॥ ೪೯೧ ॥

ಅರಕೆಗಳೆ ಇಲ್ಲದಿಹ ಬಾಳುಂಟೆ ಲೋಕದಲಿ–
ಕೊರತೆಗಳೆ ಇಲ್ಲದಿಹ ಸಂಸಾರವುಂಟೆ ?
ದೊರೆಯದಿದ್ದುದಕಾಗಿ ದೊರೆತುದನು ಮರೆತು ನೀ
ಮರುಗಬೇಕೇ ಭವದಿ– ಮರುಳಸಿದ್ಧ? ॥ ೪೯೨ ॥

ಯಾರಿಗೋ ಹಚ್ಚಿದರೆ ಯಾರಿಗೋ ಹತ್ತುವುದು
ದೂರವಾಣಿಯು। ಇಂತೆ ಬಾಳು ಕೂಡ।
ಕೋರುವೆವು ಒಂದನ್ನು, ದೊರೆಯುವುದು ಇನ್ನೊಂದು
ನೈರಾಶ್ಯವೇಕಿದಕೆ– ಮರುಳಸಿದ್ಧ? ॥ ೪೯೩ ॥

ಕಣಕೆ ಮೇಟಿಯೆ ಮುಖ್ಯ – ಮೇಟಿಯೇ ತುಳಿಯುವುದೆ
ತೆನೆಗಳನ್ನು? ತುಳಿಯಲಿಕೆ ಎತ್ತು ಬೇಕು।
ನಿನಗೆ ನೀನೇ ಮುಖ್ಯ; ನೀನ ಗೈವೆಯೆ ಎಲ್ಲ?
ಜನರ ನೆರವನಿವಾರ್ಯ– ಮರುಳಸಿದ್ಧ ॥ ೪೯೪ ॥

ಜನರೆಲ್ಲ ಮೂಕರಾಗಿರುವಲ್ಲಿ ಗಳಹುವನೆ
ಘನ ವಾಗ್ಮಿ! ಕಿರುಚುವನೆ ಹಿರಿನಾಯಕ!
ಹಣವು ಸಹ ಇದ್ದರೆ ಮಂತ್ರಿಯಪ್ಪುದು ಗಟ್ಟಿ!
ಜನಕ ಬರುವುದೆ ಬಾಯಿ– ಮರುಳಸಿದ್ಧ? ॥ ೪೯೫ ॥

ನಮ್ಮ ಯಾತ್ರೆಗೆ ಕ್ಷೇತ್ರ ತೀರ್ಥವಿದೆ ತಿರಯಲ್ಲಿ.
ನಿಮ್ಮ ಯಾತ್ರೆಗು ಇಹವೆ ನಕ್ಷತ್ರಕುಲವೆ?
ಸುಮ್ಮನೆ ತಿರುಗುವಿರ ಗೊತ್ತು ಗುರಿಯಿಲ್ಲದೆಯೆ
ನೆಮ್ಮಿ ತಿರುಗುವುದನ್ನೆ? ಮರುಳಿಸಿದ್ಧ ॥ ೪೯೬ ॥

ತಿರುಗುವುದೆ ಗುರಿಯಲ್ಲ; ತಿರುಗದಿರುವುದು ಕೂಡ
ಗುರಿಯಲ್ಲ; ಗುರಿ ತನ್ನ ಕರ್ತವ್ಯನಿಷ್ಠೆ।
ದೊರೆಯಲಾರಿಗೊ ನಿನ್ನ ಕರ್ತವ್ಯರತಿ ಫಲವು,
ನೆರವೇರಿಸದ ನೀನು– ಮರುಳಸಿದ್ಧ ॥ ೪೯೭ ॥

ಗೌರಿಗಂಗೆಯರುದಯ ಹಿಮಗಿರಿಯೊಳೇ, ಗೌರಿ
ಘೋರ ತಪವನು ಮಾಡಿ ಕೂಡಿದಳು ಹರನ।
ಹಾರಿ ನಭದಿಂ ಗಂಗೆ ಪಡೆದವಳವನನೆ, ದಾರಿ
ಬೇರೆ, ಗುರಿಯೊಂದೆಯೇ– ಮರುಳಸಿದ್ಧ ॥ ೪೯೮ ॥

ಕ್ರೂರ ದೃಶ್ಯಗಳನ್ನು ತೋರಿಸಿದ ತಪ್ಪಿಗೆ
ದೂರವುದೆ ದೂರದರ್ಶನವ ನೀನು?
ಚೋರ ಕನ್ನವ ಹಾಕೆ ಗೋಡೆಯನು ಶಿಕ್ಷಿಪುದೆ ?
ಯಾರ ತಪ್ಪೆಂದರಿಯೊ– ಮರುಳಸಿದ್ಧ ॥ ೪೯೯ ॥

ಎಷ್ಟು ಉಂಡರು ಉಣ್ಣುವಾಸೆ ಮುಗಿಯದು, ತೀರ
ದೆಷ್ಟು ಉಟ್ಟರು ಉಡುವ ಆಸೆ ನರಗೆ।
ತುಷ್ಟಿಯಿಲ್ಲದೆ ಹೋಗೆ ಸುಖಿಸಿದನಿತೂ ದುಃಖ!
ಇಷ್ಟವಾಗಲಿ ತುಷ್ಟಿ –ಮರುಳಸಿದ್ಧ ॥ ೫೦೦ ॥

ಒಂದು ಕಾಲದ ಜ್ಞಾನವಿನ್ನೊಂದರಜ್ಞಾನ–
ವೆಂದು ನಿಲ್ಲಿಸಬಹುದೆ ಜ್ಞಾನಾರ್ಜನೆ?
ಅಂದಂದಿಗವರವರ ಸಂದೆಗವ ತವಿಸಲಿಹು–
ದೊಂದೆ ದಾರಿಯು ಇದುವೆ– ಮರುಳಸಿದ್ಧ ॥ ೫೦೧ ॥

ಚಿಂತನಕೆ ಚಾಲನೆಯ ಕೊಡಲು ಚಿಟಕಿಯೆ ಸಾಕು;
ಅಂತವಿಲ್ಲದ ವಿಶ್ವ ಸುತ್ತು ಹಬ್ಬಿರಲು।
ಎಂತು ಯೋಚಿಪೆನೆಂಬೆ; ದುರಂತವಿದು ಬಾಳಿನಲಿ;
ಚಿಂತನದಿ ಸಂತಸವು– ಮರುಳಸಿದ್ಧ ॥ ೫೦೨ ॥

ವಾದಿಸುತ ವಾದಿಸುತ ತತ್ತ್ವಬೋಧೆಯು; ತಕ್ಕ
ಹಾದಿ ಹಿಡಿಯದ ವಾದ ವ್ಯರ್ಥ ಶ್ರಮವು।
ಸಾಧಿಸಿಹುದೇನನು ವಿತಂಡವಾದವು ಜಗದಿ?
ಆದರಿಸು ಸದ್ವಾದ– ಮರುಳಸಿದ್ಧ ॥ ೫೦೩ ॥

ಹಳೆಯ ನಂಬಿಕೆಗಳಿಗೆ ಹೊಸ ಅರ್ಥವನು ಹಚ್ಚಿ
ಕಳೆಯುವುದೆ ಕಾಲವನು? ಹೊಸ ಶ್ರದ್ಧೆಗಳನು।
ಮೊಳೆಸಿಕೊಳ್ವುದೆಯೆಂದು ತಳಮಳಿಸದಿರು, ನಿನ್ನ
ತಿಳಿವು ತಂದದನೊಪ್ಪು- ಮರುಳಸಿದ್ಧ ॥ ೫೦೪ ॥

ತಿಳಿಯಬಲ್ಲವರಾರು ತಿಳಿವ ಮೀರಿದ ಎನಿತೊ
ಇಳೆಯ ಒಳಗುಟ್ಟುಗಳ, ಜೀವ ಜಟಿಲಗಳ?
ತಿಳಿಯದಿದ್ದರು ತಿಳಿಯೆ ನೀನು ಮಾಡಿದ ತಪದ
ಬಳಲಿಕೆಯೆ ಭಾಗ್ಯವೆಲ- ಮರುಳಸಿದ್ಧ ॥ ೫೦೫ ॥

ತಿಳಿಯದವರಿಗೆ ಉಂಟು ತಿಳಿಯದೆಂಬಾಸರೆಯು,
ತಿಳಿದವರ ಪಾಡು ಯಾತಕೂ ಬೇಡ!
ತಿಳಿದೆನೆನ್ನಲು ಬರದು, ತಿಳಿದಿಲ್ಲವೆನಬರದು;
ಹಳವಂಡ ಹಗಲಿರುಳು- ಮರುಳಸಿದ್ಧ ॥ ೫೦೬ ॥

ಗಮ್ಯತೆಯೆ ಗುರಿಯಲ್ಲಗಮ್ಯವದು ಹೊರೆಯಲ್ಲ,
ಗಮ್ಯಾಗಮ್ಯ ಜಗ, ಜೀವ, ಜೀವನವು!
ರಮ್ಯ ಎರಡರ ಸಂಗ, ಕ್ಷಮ್ಯ ಎರಡರ ಭಂಗ,
ಸುಮ್ಮನೇ ಗೊಣಗದಿರು- ಮರುಳಸಿದ್ಧ ॥ ೫೦೭ ॥

ಯಾವ ಮತವೂ ಕೊನೆಯ ಮತವಲ್ಲ, ಅಂತೆಯೇ
ಯಾವ ಗ್ರಂಥವು ಕೊನೆಯ ಗ್ರಂಥವಲ್ಲ।
ಜೀವನಿಗೆ ಹೊಸ ಮತಿಯ ದೇವ ಕೊಡುತಿರುವನಕ
ಸಾವಿಲ್ಲ ಹೊಸ ಕೃತಿಗೆ- ಮರುಳಸಿದ್ಧ ॥ ೫೦೮ ॥

ಲತೆಯ ಲಾವಣ್ಯಕ್ಕೆ ಕ್ಷತಿಯೆ ಕುಸುಮಗಳಿಂದ?
ಮತಿಯ ಸಹಯೋಗದಿಂ ಮತಕೆ ಕುಂದೆ?
ಹಿತದ ಅನ್ವೇಷಣೆಯೆ ಗುರಿಯಾಗೆ ಮತಿಮತದ
ಜೊತೆ ಸ್ವಾಗತಾರ್ಹವೈ- ಮರುಳಸಿದ್ಧ ॥ ೫೦೯ ॥

ಒಂದು ಮತದವರೆಲ್ಲ ಹಿತವಾಗಿ ಬಾಳುವರೆ?
ತಂದಿಕ್ಕದೇ ಸ್ವಾರ್ಥ ಸಂಘರ್ಷಗಳನು?
ತಂದೆಯೊಬ್ಬನೆ, ನೂರು ಮತಗಳೇತಕೆ? ಸಾಕು
ಒಂದೆ ಮತ, ಮನುಜಮತ-ಮರುಳಸಿದ್ಧ ॥ ೫೧೦ ॥

ಮತಿಗಳೆಷ್ಟಿರುವುವೋ ಮತಗಳಷ್ಟಿರಬಹುದು.
ಹಿತವೆನಿಸದಿಹ ಮತವು ಸಮ್ಮತವೆ ನಿನಗೆ?
ಗತಿಯನರಸಿದರುಂಟೆ ಬಲವಂತದಿಂ ಬಂದ
ಮತದಲ್ಲಿ, ಪಂಥದಲಿ- ಮರುಳಸಿದ್ಧ? ॥ ೫೧೧ ॥

ವಿಭಜಿಸುವ ಮತವುಂಟು, ಸಂಯೋಜಿಸುವ ಧರ್ಮ
ಉಭಯವೂ ಉಂಟಿಲ್ಲಿ; ಮತ ಮೀರಿ ಧರ್ಮ-।
ದಭಯವನು ಪಡೆದುಕೋ, ಶುಭವನ್ನು ಹಡೆದುಕೋ,
ಪ್ರಭು ಮೆಚ್ಚೆ ಬಾಳೆಂದ- ಮರುಳಸಿದ್ಧ ॥ ೫೧೨ ॥

ಜನ್ಮಕ್ಕೆ ಬೆಲೆಕೊಟ್ಟು ಗುಣಕರ್ಮ ಕೊಲೆಗೈವ
ಅನ್ಯಾಯ ಧರ್ಮವೆ ? ಧರ್ಮದ ಶವ!
ತನ್ನೊಳಗೆ ಸರ್ವರನು, ಸರ್ವ ಪ್ರಾಣಿಗಳಲ್ಲಿ
ತನ್ನ ಕಾಣ್ವುದೆ ಧರ್ಮ- ಮರುಳಸಿದ್ಧ ॥ ೫೧೩ ॥

ಮುನ್ನ ಮಾಡಿದ ಕರ್ಮ ಬೆನ್ನ ಹತ್ತುವುದಂತೆ!
ಇನ್ನುಂಟೆ ಇದರಂಥ ಮೋಸ ಜಗದಿ?।
ಅನ್ಯಾಯವನೆ ನ್ಯಾಯವೆಂಬಂತೆ ಸಾಧಿಸುವ
ಹುನ್ನಾರವಿದು ನಿಜದಿ- ಮರುಳಸಿದ್ಧ ॥ ೫೧೪ ॥

ಮೋಸಕ್ಕೆ ಧರ್ಮದ ವೇಷವನು ತೊಡಿಸುವರು,
ದೇಶಭಕ್ತಿಯ ವೇಷ ಶೋಷಣೆಗೆ ಇಲ್ಲಿ।
ಪಾಶವಲಿ ಬಂದಿಪರು ಬಿಡುಗಡೆಯ ಹೆಸರಿನಲಿ
ಲೇಸನೆಸಗುವೆವೆಂದು- ಮರುಳಸಿದ್ಧ ॥ ೫೧೫ ॥

ಬುದ್ಧಿ ಒಪ್ಪುವ ಗುರಿಯ ಹೃದಯ ಒಪ್ಪುವ ಕಾರ್ಯ
ಪದ್ಧತಿಯಿನೀಡೇರಿಸುವುದೆ ಧರ್ಮ।
ಬುದ್ಧಿ ಮತಿಯನು ಬೆಳಗಿ, ಹೃದಯ ಮತವನು ಬೆಳಗೆ
ಉದ್ಧಾರ ತಡವಿಲ್ಲ- ಮರುಳಸಿದ್ಧ ॥ ೫೧೬ ॥

ಮಾನವನೆ ಮಾನವನ ಭವಿತವ್ಯ, ಗಂತವ್ಯ;
ಮಾನವೀಯತೆಯೊಂದೆ ನಿಜ ಧರ್ಮವು।
ಮಾನವರು ಕೆಟ್ಟರೂ ಮಾನವತೆ ಉಳಿಯುವುದು
ಮಾನವರ ಮೇಲೆತ್ತೆ -ಮರುಳಸಿದ್ಧ ॥ ೫೧೭ ॥

ದ್ವೇಷದೆದೆಯಲ್ಲಿಯೇ ಲೇಸು ಪ್ರೀತಿಗಳೆರಡು
ಹಾಸಿ ಮಲಗಿವೆ; ಅವನು ಎಬ್ಬಿಸುವುದೆ।
ಲೇಸಾದ ಧರ್ಮವು! ಹಿಡಿಯದನು, ನಡೆಮುಂದೆ;
ದ್ವೇಷವನೆ ದ್ವೇಷಿಸುತ- ಮರುಳಸಿದ್ಧ ॥ ೫೧೮ ॥

ನನ್ನ ಧರ್ಮವೆ ಬೇರೆ: ಕೈಗಿತ್ತ ಕಾಯಕವ
ಚೆನ್ನಾಗಿ ಮಾಡುವುದು, ಮಾಡಿ ಮರೆಯುವುದು।
ನನ್ನಿಗಜ್ಜದಿ ಬಂದುದನು ಹಂಚಿ ಉಣ್ಣುತ್ತ
ತಣ್ಣನೇ ತಣಿಯುವುದು- ಮರುಳಸಿದ್ಧ ॥ ೫೧೯ ॥

ದೇಶ ಸೇವೆಯೆ ಧರ್ಮ, ಸಂವಿಧಾನವೆ ಶಾಸ್ತ್ರ,
ಶೋಷಣೆಯ ನಾಶವೇ ಈಶ ಪೂಜೆ।
ವೈಷಮ್ಯವಿಲ್ಲದಿಹ ಸರ್ವಸಮತೆಯೆ ನೀತಿ,
ಲೇಸಗೈವುದೆ ಕಾಶಿ- ಮರುಳಸಿದ್ಧ ॥ ೫೨೦ ॥

ಸಂತ ಪಾಲನ ಹಾಗೆ ಹಂಚಿ ಉಣುವುದೆ ಧರ್ಮ,
ಶಾಂತ ಕ್ರಿಸ್ತನ ಹಾಗೆ ಕ್ಷಮಿಸುವುದೆ ಧರ್ಮ।
ಸಾಂತ್ವನವ ನೀಡುವುದು ಬುದ್ಧ ಬಸವರು ಗಾಂಧಿ
ಯಂತೆ ನಿಜಧರ್ಮವು- ಮರುಳಸಿದ್ಧ ॥ ೫೨೧ ॥

ಮಗುವಿನಮೃತಸ್ಮಿತವು, ಮಲ್ಲಿಗೆಯ ಮೃದುಹಾಸ,
ಜಗದ ಸಂತರ ಮೊಗದ ಬಗೆಗೊಳುವ ನಗೆಯು।
ಚಿಗಿಯಬೇಕಿವುಗಳಲಿ ಮಾನವ್ಯವನೆ ಮೆರೆವ
ಯುಗಧರ್ಮಮಂದಾರ- ಮರುಳಸಿದ್ಧ ॥ ೫೨೨ ॥

ನಿನಗಾಗಿ ಬದುಕುವೊಡೆ ಬದುಕು ಸರ್ವರಿಗಾಗಿ,
ನಿನಗಾಗಿ ಬಯುಸುವುದ ಬಯಸು ಸರ್ವರಿಗೆ।
ನಿನಗೆ ಬೇಡಾದುದನು ಬಯಸದಿರು ಅನ್ಯರಿಗೆ,
ನಿನಗಿದುವೆ ಬಾಳರವು- ಮರುಳಸಿದ್ಧ ॥ ೫೨೩ ॥

ನಿನ್ನ ಈ ಕಣ್ಣುಗಳು ನಿನ್ನನೇ ಕಾಣವು,
ಕನ್ನಡಿಯು ಬೇಕಲ್ತೆ ನಿನ್ನ ನೀ ಕಾಣೆ?
ನಿನ್ನ ನಿಜರೂಪವನು, ನಿಜದರಿತ ತೋರಿಸುವ
ಕನ್ನಡಿಯೆ ಧರ್ಮವು- ಮರುಳಸಿದ್ಧ ॥ ೫೨೪ ॥

ಇರುಳ ಕತ್ತಲೆ ಇನನೆ ಇಲ್ಲೆಂದು ವಾದಿಸಲು
ತರಣಿ ಹರಣನ ತೊರೆದು ಬರದಿಹನೆ ಮತ್ತೆ?
ದುರುಳರಿಗೆ ಅಧಿಕಾರ ಬಂದಾಗ ನಿಂದಿಸಲು
ಮರಣವೇ ಧರ್ಮಕ್ಕೆ– ಮರುಳಸಿದ್ಧ? ॥ ೫೨೫ ॥

ಮೊಸರನ್ನ ಕೂಡುವೊಲು ಮೊಸರುನೆಲ್ಲೂಡುವುವೆ?
ಹಸನಾಗಿಸದ ಮೊದಲು ತೌಡು ಕಳೆದು॥
ಕಸವರವು ಕಸವು ಕೂಡುವುವೆ? ಕಸವರ ಮಾಡು
ಕಸವನೇ ಧರ್ಮದಿಂ– ಮರುಳಸಿದ್ಧ ॥ ೫೨೬ ॥

ಹುಳು ತಿಂದ ಬೀಜದಿಂ ಬೆಳೆಯಬಹುದೆ ಪಯಿರ?
ಕೊಳೆತ ಕಟ್ಟಿಗೆಯಲ್ಲಿ ಕೆತ್ತುವರೆ ಮೂರ್ತಿ?
ಹಲವು ದುರ್ಗುಣಗಳನು ಧರ್ಮದಿಂ ತಿದ್ದದಿರೆ
ಸಲುವೆಯಾ ಸದ್ಗತಿಗೆ– ಮರುಳಸಿದ್ಧ ॥ ೫೨೭ ॥

ಒಂದೊಂದು ಧರ್ಮಕ್ಕು ಒಂದೊಂದು ವೈಶಿಷ್ಟ್ಯ,
ಒಂದೊಂದು ಕರ್ಮಕ್ಕು ಶುಭಾಶುಭ ಫಲ।
ಒಂದೊಂದು ವಸ್ತುವಿಗು ಅದರದರ ಗುಣಧರ್ಮ,
ಒಂದನೂ ಜರೆಯದಿರು– ಮರುಳಸಿದ್ಧ ॥ ೫೨೮ ॥

ಮೈಯ ಮುಚ್ಚುವುವೆಲ್ಲ ಬಟ್ಟೆಗಳೆ ನಿಜ, ವಿವಿಧ
ಕಾಯಗಳು ಬಯಸುವುವು ತರತರದ ಬಟ್ಟೆ।
ಶ್ರೇಯವನ್ನೀಯಲು ಹಲವು ಹಿರಿ ಧರ್ಮಗಳು,
ಆಯ್ದುಕೋ ಒಂದನ್ನು– ಮರುಳಸಿದ್ಧ ॥ ೫೨೯ ॥

ಎಲ್ಲ ನಾಮಗಳಲ್ಲಿ ನಿನ್ನ ನಾಮವ ಕಾಣೆ,
ಎಲ್ಲ ರೂಪಗಳಲ್ಲಿ ನಿನ್ನ ರೂಪ।
ಎಲ್ಲ ಸ್ವರಗಳಲಿಯೂ ನಿನ್ನ ಸ್ವರ ಕೇಳೆ, ಬೇ–
ರೆಲ್ಲಿ ಧರ್ಮವು ನಿನಗೆ– ಮರುಳಸಿದ್ಧ? ॥ ೫೩೦ ॥

ಆ ಕುಲವು ಈ ಕುಲವು ಎಂಬ ವ್ಯಾಕುಲ ಬೇಡ
ಲೋಕದೊಳಗೆರಡೆ ಕುಲ ಬಲ್ಲವರಿಗೆ।
ಕಾಕು ಜನರೊಂದು ಕುಲ, ಸಜ್ಜನರದೊಂದು ಕುಲ:
ನೀ ಕೂಡು ಸುಜನಕುಲ– ಮರುಳಸಿದ್ಧ ॥ ೫೩೧ ॥

ಸ್ವಜನ ಪರಜನರೆಂಬ ವಿಭಜನೆಯು ತರವಲ್ಲ;
ಕುಜನರಿರರೇ ಅರಸೆ ಸ್ವಜನರಲ್ಲಿ?
ಸುಜನರಿಲ್ಲವೆ ಹುಡುಕೆ ಪರಜನದಿ? ಕೂಡಿಕೋ
ಸುಜನರೆಲ್ಲಿಯೆ ಇರಲಿ– ಮರುಳಸಿದ್ಧ ॥ ೫೩೨ ॥

ಮಂದಿ ಮಾಡಿದ ತಪ್ಪು ತಮ್ಮದೆಂದೇ ನೊಂದು
ಕಂದುವರು, ಕುಂದುವರು ಜಗದಿ ಸಜ್ಜನರು।
ಮಂದಿಗಾರೋಪಿಸುತ ತಮ್ಮ ತಪ್ಪನು ಸಹಿತ
ನಂದಿಪರು ದುರ್ಜನರು– ಮರುಳಸಿದ್ಧ ॥ ೫೩೩ ॥

ಜೇನುಹುಳು ಕಡಿದರೂ ತಾಳಿಕೊಳ್ವೆವು ನಾವು
ಜೇನಿತ್ತ ಕತದಿಂದ; ಕಡುದುರುವು ಕಡಿಯೆ।
ಹೇನು ತಲೆಯನು ತಿನ್ನೆ ಏನೆಂದು ತಡೆಯುವುದು?
ಹೀನ ಜನಕೆಲ್ಲಿ ಬೆಲೆ– ಮರುಳಸಿದ್ಧ? ॥ ೫೩೪ ॥

ಕಸದ ತೊಟ್ಟಿಗೆ ತೀರ ಸನಿಹದಲೆ ಕಸವನ್ನು
ಎಸೆದು ಹೋಗುವರುಂಟು; ಬಿದ್ದ ಕಸವ।
ಪಸರಿಸುತ ಇನ್ನಷ್ಟು ಹೊಲಸು ಹರಡುವರುಂಟು,
ಹಸನಗೈವರೆ ವಿರಳ– ಮರುಳಸಿದ್ಧ ॥ ೫೩೫ ॥

ಹೊಳೆ ತುಂಬಿ ಹರಿವಾಗ ಒಳಗೆ ಮರೆಯಾಗುವುವು
ತಳದ ಕಗ್ಗಲ್ಲುಗಳು; ಅಂತೆ ನರನ।
ಹುಳುಕುಗಳು ಮುಚ್ಚುವುವು ಸಿರಿ ಪದವಿ ಇರುವಾಗ;
ಅಳಿಯೆ ಸಿರಿ ಹುಳುಕೆ ಬರಿ! –ಮರುಳಸಿದ್ಧ ॥ ೫೩೬ ॥

ಸೊಕ್ಕು ನುಡಿವುದು ಬೀಗಿ, ತಕ್ಕು ನಡೆವುದು ಬಾಗಿ,
ನಕ್ಕು ಬಿಡುವುದು ಸಿದ್ಧಿ ಮೌನವಾಗಿ।
ಠಕ್ಕು ತಕ್ಕಿನ ವೇಷ ಹಾಕಿ ಹಾರಾಡುವುದು
ಸಿಕ್ಕವರ ವಂಚಿಸುತ– ಮರುಳಸಿದ್ಧ ॥ ೫೩೭ ॥

ಗುಡಿಸಲನೆ ಕಟ್ಟದವ ಮಧುರೆ ಹಳೆಬೀಡುಗಳ
ಗುಡಿಯ ಕಟ್ಟುವೆನೆನಲು ನಂಬುವವರಾರು?
ನುಡಿಗೆ ಬೆಲೆ ನುಡಿವವನ ನಡತೆ ಯೋಗ್ಯತೆಯಿಂದ,
ಬಡಬಡಿಕೆಯಿಂದಲ್ಲ– ಮರುಳಸಿದ್ಧ ॥ ೫೩೮ ॥

ತನಗೆ ನಿಲುಕದ ದ್ರಾಕ್ಷಿ ಹುಳಿ ನರಿಗೆ, ಅದರಂತೆ
ತನಕೆ ಎಟುಕದ ಮೇಲ್ಮೆ ಕೀಳ್ಮೆ ನರಗೆ।
ಕೊನೆಯಿರದೆ ಯತ್ನಿಸದೆ ಘನತೆಯನು ಗಳಿಸಲಿಕೆ
ಕುನಿಯುವುವೆ ಹಿರಿಮೆಯನು– ಮರುಳಸಿದ್ಧ? ॥ ೫೩೯ ॥

ಕರಿಯ ಕಲೆಗಳಿಗಾವ ಕೊರತೆಯಿದೆ ತಿರೆಯಲ್ಲಿ?
ಪೆರೆಯ ಕರಿ ಕಲೆಯನ್ನೆ ಗಮನಿಸುವರೆಲ್ಲ।
ದುರುಳರವಗುಣಗಣವ ಗಣಿಸದೆಯೆ ಗಮನಿಪರು
ಗರುವರವಗುಣವಿನಿಸ– ಮರುಳಸಿದ್ಧ ॥ ೫೪೦ ॥

ಹ್ಯಾಮ್ಲೆಟ್ಟಗೆಂದಿಟ್ಟ ವಿಷಮದ್ಯ ಕ್ಲಾಡಿಯಸ್
ವಲ್ಲಭೆಯ ಹರಣವನೆ ಹರಣ ಮಾಡಿ।
ತಲ್ಲಣದ ತೂಬನ್ನೆ ತೆರೆದು ಕೊಚ್ಚಿತು ಅವನ।
ಖಿಲ್ಲರಿಗೆ ಗತಿಯಿದುವೆ– ಮರುಳಸಿದ್ಧ ॥ ೫೪೧ ॥

ಚಿತ್ರದಲ್ಲಿ ಸಾವಿತ್ರಿಯಾಗಿ ನಟಿಸುವ ಹೆಣ್ಣೆ
ನಿತ್ಯಜೀವನದಲ್ಲಿ ವಾರಾಂಗನೆ!
ಸತ್ಯತೆಯ ಸೋಗಿನಲಿ ಸತ್ತೆಯನು ಪಡೆವವರು
ದೈತ್ಯರಾಗುವುದರಿದೆ– ಮರುಳಸಿದ್ಧ? ॥ ೫೪೨ ॥

ಸುಳ್ಳು ಸಖ್ಯವ ನಟಿಸಿ ಕೊಳ್ಳೆ ಹೊಡೆಯುವರುಂಟು,
ಜೊಳ್ಳು ನಂಟನು ನಟಿಸಿ ಸುಲಿವರುಂಟು।
ಇಲ್ಲದಿಹ ಯೋಗ್ಯತೆಯ ನಟಿಸಿ ಮೆರೆಯುವರುಂಟು,
ಖಿಲ್ಲರೇಗೈವರೋ– ಮರುಳಸಿದ್ಧ? ॥ ೫೪೩ ॥

ದರಹಾಸದಲ್ಲಿಯೇ ಮರೆಮೋಸವಿರಬಹುದು,
ಸಿರಿನುಡಿಯ ಒಡಲಲ್ಲೆ ಕಿತವವಿರಬಹುದು;।
ಪರಿರಂಭದಲ್ಲಿಯೇ ಹುಲಿಯುಗುರು ಇರಬಹುದು;
ಮಿರುಗುವುದೆ ಮಿಸುನಿಯೆ– ಮರುಳಸಿದ್ಧ? ॥ ೫೪೪ ॥

ಕೃತಕ ರೇಷ್ಮೆಯು ಬಂತು, ಕೃತಕ ಮೌಕ್ತಿಕ ಬಂತು,
ಕೃತಕರೇತನ ಬಂತು, ಕೃತಕತೆಯ ಸುಗ್ಗಿ!
ಹಿತವು ಕೃತಕತೆಯಲ್ಲಿ ಎಂಬ ಮತಿ ಬೆಳೆದರೆ
ಗತಿಯೆಲ್ಲಿ ಸಹಜಕ್ಕೆ– ಮರುಳಸಿದ್ಧ? ॥ ೫೪೫ ॥

ತಾನೆ ತಿಳಿಯದುದನ್ನು ಹೇಳಹೋಗುವ ಹೆಡ್ಡ
ಏನೇನ ಸೊರಹುವನೊ– ಅವನು ಸಹ ಅರಿಯ!
ಜ್ಞಾನಿಯಂದದಿ ನಟಿಸಿ ಅಜ್ಞಾನ ಬಿತ್ತುವ
ಶ್ವಾನಗಳ ನಂಬದಿರು– ಮರುಳಸಿದ್ಧ ॥ ೫೪೬ ॥

ಹತ್ತುಜನರೊಂದೆ ಕಲ್ಲೆಡಹಿಯೂ ಒಬ್ಬನೂ
ಕಿತ್ತದನು ಬದಿಗೆಸೆಯದಿದ್ದುದನು ನೋಡಿ।
ತಾತ್ಪ್ಪಿಕ ಡಯೋಜನಿಸ್ ನಕ್ಕನಂತಿಂದಿಗೂ
ಚಿತ್ತ ಬದಲಾಗಿಲ್ಲ– ಮರುಳಸಿದ್ಧ ॥ ೫೪೭ ॥

ನೇರ ನಡೆಯೇ ಲೇಸು, ನೇರ ನುಡಿಗಳೆ ಲೇಸು,
ನೇರ ದಾರಿಯೆ ಲೇಸು ಧಾರುಣಿಯೊಳು।
ತಾರುಮಾರೇ ಫಲವು ನೇರನ್ನು ಮೀರಿದರೆ;
ಸೇರದಿರು ಸೊಟ್ಟನ್ನು– ಮರುಳಸಿದ್ಧ ॥ ೫೪೮ ॥

ಬೆಳಕಿಗಿಂ ಕತ್ತಲೆಯೆ ಮೇಲೆನ್ನುವವರುಂಟೆ
ಕಳುವವರು, ಕಾಮುಕರು, ಗೂಬೆಗಳನುಳಿದು?
'ಬೆಳಕು, ಇನ್ನೂ ಬೆಳಕು' ಎಂದ ಗಯಟೆಯ ಮಾತು
ಬೆಳಗಲೆಮ್ಮಯ ಬದುಕ– ಮರುಳಸಿದ್ಧ ॥ ೫೪೯ ॥

ತವರಿನಾಸೆಯು ಸತಿಗೆ, ಕುವರನಾಸೆಯು ಪತಿಗೆ,
ಬವರದಾಸೆಯು ಶಸ್ತ್ರ ವ್ಯಾಪಾರಿಗೆ!
ಸವಿಯಾಸೆ ಸರ್ವರಿಗೆ, ಕಹಿಯಾಸೆ ಹಲವರಿಗೆ!
ಕವರುವರು ಎಲ್ಲರನು– ಮರುಳಸಿದ್ಧ ॥ ೫೫೦ ॥

ಸಂಗರದಿ ಕೊಲುವರೆಂದಂಗಳದಿ ಕೊಲಬಹುದೆ?
ರಂಗದಲಿ ಇರಿವರೆಂದಿರಿವರೇ ನಿಜದಿ?
ಅಂಗಜನ ಸುಡುವರೆಂದಂಗಿಗಳ ಸುಡಬಹುದೆ?
ಭಂಗಿಸದಿರನುನಯವ– ಮರುಳಸಿದ್ಧ ॥ ೫೫೧ ॥

ಮಂತಣವೆ ಹಗೆಯೊಡನೆ? ಮಂಥನವೆ ಬಯಲಿನ?
ಸಂತೆಯಲಿ ಸಾಹಿತ್ಯಸಲ್ಲಾಪವೇ?
ಸಾಂತ್ವನವೆ ಕಂಥೆಯನು ಒಗೆದು ಹೂಳಿದ ಮೇಲೆ?
ಶಾಂತಿಯೇ ಖೂಳರಿರೆ– ಮರುಳಸಿದ್ಧ? ॥ ೫೫೨ ॥

ರಾಕಾಸುಧಾರಕನ ಹೊಟ್ಟೆಯಲಿ ಅಮವಾಸ್ಯೆ,
ಕೋಕನದದುದರದಲಿ ಕಾಳಭೃಂಗ।
ತೋಕೆಯೊಡಲೊಳು ಉರಗ, ಕೂರ್ಮದೊಳಗಡೆ ಸುರಗಿ,
ನಾಕವೆಂದುದು ನರಕ– ಮರುಳಸಿದ್ಧ ॥ ೫೫೩ ॥

ತಗ್ಗಿರುವ ಕಡೆ ನೀರು, ತೆವರಿರುವ ಕಡೆ ಮೋಡ,
ಸುಗ್ಗಿಯಿರುವೆಡೆ ಕೋಕ, ಕೀರ, ಭ್ರಮರ।
ಅಗ್ಗಳತೆಯೆಡೆ ಭಾಗ್ಯ, ಉದ್ಯುಕ್ತನೆಡೆ ಸೌಖ್ಯ,
ಕಿಗ್ಗುಳದ ಕಡೆ ಕೇಡು– ಮರುಳಸಿದ್ಧ ॥ ೫೫೪ ॥

ದೊಡ್ಡವರೊಳೂ ಉಂಟು ಸಣ್ಣತನ, ಬಹಳಷ್ಟು
ದುಡ್ಡಿರುವರೊಳು ಉಂಟು ಜೀನತನವು।
ಗಿಡ್ಡರೊಳು ನರಿತನವು, ದಡ್ಡರೊಳು ಹುಂಬತನ,
ಬಡ್ಡಿಯವರಲಿ ಕ್ರೌರ್ಯ– ಮರುಳಸಿದ್ಧ ॥ ೫೫೫ ॥

ಜನಕನಂಥವರಿರಲು ಕನಕಸಿಂಹಾಸನವ
ಜನರೆ ಮಾಡಿಸಿಕೊಡುವರದರಂತೆಯೇ।
ಜನನಾಯಕರೆ ಇರಲಿ ಅನುನಯನ ಕೈಬಿಡಲು
ಒನಕೆಯಲಿ ಕುಟ್ಟುವರು– ಮರುಳಸಿದ್ಧ ॥ ೫೫೬ ॥

ನಂದನನೇ ಕೊಂದ ಬೆಂದೆದೆಯ ರುಸ್ತುಮನು
ನಂದಿಸಿದನೇ ತನ್ನ ವಿಜಯದಿಂದ?
ಕೊಂದವಗೆ ಕೊಲೆ ಬರಲಿ, ಬರದಿರಲಿ, ಕೊಲೆ ಮಾತ್ರ
ಎಂದೆಂದಿಗೂ ಹೊಲ್ಲ– ಮರುಳಸಿದ್ಧ ॥ ೫೫೭ ॥

ಹೊಳೆಯ ನೀರನು ಸೆಳೆದು ಹರಿಗೋಲು ಉಳಿಯುವುದೆ?
ಶಿಲೆಯ ಬೆಂಕಿಯ ದೋಚಿ ದೂದಿ ಉಳಿಯುವುದೆ?
ಸುಲಿಗೆಯನೆ ನಂಬಿದಗೆ ತಲೆದಂಡ ತಪ್ಪುವುದೆ?
ಕಲಿಯದಿರು ಶೋಷಣೆಯ– ಮರುಳಸಿದ್ಧ? ॥ ೫೫೮ ॥

ಪಂಚಭೂತದ ಸಂಚೊ? ಮಾನವನ ಬಗೆಬಗೆಯ
ಹಂಚಿಕೆಗಳರಕೆಯೋ– ಸಿರಿಹೆಚ್ಚಿದನಿತು।
ಮುಂಚುತಿದೆ ಬಡತನವು! ಸಂಚಕಾರವು ಸುಖಕೆ
ಹಂಚಿ ಉಣ್ಣುವವರೆಗೆ– ಮರುಳಸಿದ್ಧ ॥ ೫೫೯ ॥

ತುತ್ತು ಎಲ್ಲರ ಬಾಯ್ಗೆ ಮುಟ್ಟುತಿರುವನಿತು ದಿನ
ಕುತ್ತವಿಲ್ಲವು ಜಗಕೆ, ತುತ್ತು ತಪ್ಪಿದರೆ
ತುತ್ತಾಗುವುದು ಮನುಜಕುಲವೆ ವಿಪ್ಲವಜನಿತ
ಮೃತ್ಯುವಿನ ನಾಲಗೆಗೆ– ಮರುಳಸಿದ್ಧ ॥ ೫೬೦ ॥

ಜಟಿಲವೇನೇ ಇರಲಿ, ಕುಟಿಲತನ ಬರದಿರಲಿ,
ಸಟೆಯೇರದಿರಲಿಲ್ಲಿ ಸಂಹಾಸನ।
ಅಟಮಟದ ಚಟುವಟಿಕೆ ಹಟಗಳೇನೇ ಇರಲಿ,
ದಿಟಕೆ ಜಯ ಕೊನೆಗಿರಲಿ– ಮರುಳಸಿದ್ಧ ॥ ೫೬೧ ॥

ಸಂಧಿಸದೆ ಒಂದನೊಂದನು ತೊರೆಯ ತೀರಗಳು
ಬಂಧಿಪುವು ವಾಹಿನಿಯ ಪರಿಮಿತಿಯೊಳಿಲ್ಲಿ।
ಬಂದಾಗ ನೆರೆ ಮುಳುಗಿ ಮತ್ತೆ ಮೇಲೇಳುವುವು
ಚಂದ ಇಂತಹ ಇರವು– ಮರುಳಸಿದ್ಧ ॥ ೫೬೨ ॥

ಬಳ್ಳಿ ಸುತ್ತಿದ ಮರವು ನಮಗೆ ನೋಡಲು ಚಂದ,
ಒಳ್ಳಿತೆನಿಪುದೆ ಅದುವೆ ಮರಕು ಸಹಿತ?
ಉಳ್ಳವರ ಆಳ್ವವರ ಆಡಂಬರವು ಚೆಂದ,
ಸುಳ್ಳೇನೊ ಅವರ ಸುಖ– ಮರುಳಸಿದ್ಧ ॥ ೫೬೩ ॥

'ಅವ ಪಾಪಿ, ಇವ ಪಾಪಿ'ಎನ್ನುವವನೇ ಪಾಪಿ:
ಅವನಿಯೊಳಗಿರುವರೇ ಪಾಪಗೈಯದರು?
'ಇವಳಿಗೊಗೆಯಿರಿ ಕಲ್ಲ ಪಾಪವನಿಸನು ಗೈಯ–
ದವ'ರೆಂದನೇಸು ಪಿತ– ಮರುಳಸಿದ್ಧ ॥ ೫೬೪ ॥

ಅಳುವವರ ಕಂಬನಿಯನೊರೆಸೆನಲು ಕಂಬನಿಯ
ಬಲವಂತದಿಂ ತಂದು ಒರೆಸಬಹುದೆ?
ಅಳದವರ ಅಳಿಸಿಯೇ ಅನುಕಂಪ ತೋರುವಿಯ?
ತಿಳಿಗೆಟ್ಟ ದಯೆಯೆ ಭಯ– ಮರುಳಸಿದ್ಧ ॥ ೫೬೫ ॥

ಹಸುಗೆಯೂ ಬೇಕಿಲ್ಲಿ ಬೆಸುಗೆಯೂ ಬೇಕಿಲ್ಲಿ.
ರಸ ವಿರಸ ಸೇರಿರುವ ಸಂಸಾರದಲ್ಲಿ।
ಹಸುಗೆಯಿಲ್ಲದ ಸಿರಿಯೆ ಸೆರೆಯು, ದಸರಿಯತೊಡಕು
ಬೆಸುಗೆಯಿಲ್ಲದ ಬಾಳು– ಮರುಳಸಿದ್ಧ ॥ ೫೬೬ ॥

ಚಿತ್ರಾನ್ನದೊಳಗಿರುವ ಪ್ರತಿಯೊಂದು ವಸ್ತುವಿಗು
ಪ್ರತ್ಯೇಕ ರುಚಿಯೊಂದು, ಒಟ್ಟು ರುಚಿಯೊಂದು।
ಭುಕ್ತಾರಗೆರಡರೊಳು ಆಸಕ್ತಿ- ಅಂತೆಯೇ
ಅಸ್ತಿತ್ವವೆಂದರಿಯೊ- ಮರುಳಸಿದ್ಧ ॥ ೫೬೭ ॥

ಭದ್ರತೆಯು ಹೊರಗೆಲ್ಲ, ಅದ್ರತೆಯ ಒಳಗೆಲ್ಲ,
ಛಿದ್ರವಿಚ್ಛಿದ್ರವೊದೊ ಮನದ ಶಾಂತಿ।
ನಿದ್ರಿಸಿರೆ ಶುಭಮತಿಯು ಭದ್ರವೂ ಅದ್ರವೇ!
ರುದ್ರ ಶಿವನಾಗಲಿ- ಮರುಳಸಿದ್ಧ ॥ ೫೬೮ ॥

ಬಲಗಡೆಯ ಮಿದುಳನ್ನೆ ಬೆಳೆಸುತ್ತ ಬಂದವರೆ,
ಬೆಳೆಸುತ್ತಲಿರುವವರೆ ಎಡದ ಮಿದುಳ।
ಕಲಿಯಿರೆರಡನು ಬೆಳೆಸಿ ಸಂಪೂರ್ಣರಾಗುವ
ಕಲೆಯನೆನ್ನುವ ನಿಮ್ಮ- ಮರುಳಸಿದ್ಧ ॥ ೫೬೯ ॥

ದೇಹಕ್ಕೆ ರೋಗಗಳು, ಗೇಹಕ್ಕೆ ತಿಗಣೆಗಳು,
ಚೋಹಕ್ಕೆ ನುಸಿ ಕೂರೆ ಬಾಳುವವಗಿಲ್ಲಿ।
ನೇಹವಿರೆ ಬಾಳಿನಲಿ ನೂರು ಕಿರಿಕಿರಿ ತಾಳಿ
ಸಹ್ಯವಪ್ಪುದು ಬಾಳು- ಮರುಳಸಿದ್ಧ ॥ ೫೭೦ ॥

ನೋಡುವೆವು ಹೊರಗನ್ನು; ಕಾಣುವೆವೆ ಒಳಗನ್ನು?
ಮಾಡುವೆವು ಕಾರ್ಯವನು, ಫಲ ಖಾತ್ರಿಯೆ?
ಅಡುವೆವು ಏನನೋ ಗೂಢಾರ್ಥವರಿಯದೆಯೆ:
ಪಾಡು ಇಂಥದು ನರನ- ಮರುಳಸಿದ್ಧ ॥ ೫೭೧ ॥

ತಿನ್ನು ಸಿಟ್ಟನೆ ನೀನು, ಇಲ್ಲದಿರೆ ತಿನ್ನುವುದು
ನಿನ್ನನೇ! ಸಿಟ್ಟು ಬಹು ಕೆಟ್ಟ ವೈರಿ!
ತನ್ನ ಜನ್ಮಸ್ಥಳವ ಸುಟ್ಟಮೇಲೆಯೆ ಸಿಟ್ಟು
ಅನ್ಯವನು ಸುಡುವುದೆಲ- ಮರುಳಸಿದ್ಧ ॥ ೫೭೨ ॥

ಯಾವ ಮರಕಿಟ್ಟರೂ ಜೇನು ಜೇನೇ, ಚೆಲುವ
ಹೂವಾವ ಮುಡಿಯನ್ನು ಸೇರಿದರು ಹೂವೆ;
ಬೇವಿಗಿಡದೇ ಮಾವಿಗಿಡೆ, ದೇವಗಿಡೆ ಲೇಸು,
ಪಾವನತೆ ಹೆಚ್ಚುವುದು- ಮರುಳಸಿದ್ಧ ॥ ೫೭೩ ॥

ಮಧುಮಾಸವೇ ಸಾಕೆ ? ಗ್ರೀಷ್ಮ ಬೇಡವೆ? ಪೂರ್ಣ
ವಿಧು ಮಾತ್ರ ಸಾಕೆ, ಬೇಡವೆ ಕೃಷ್ಣಪಕ್ಷ?
ಮಧುರಿಮೆಯೆ ಸಾಕೆ, ಉಳಿದ ರಸ ಬೇಡವೆ?
ಇದು ಸಾಧ್ಯವೇ ಗೆಳೆಯ– ಮರುಳಸಿದ್ಧ? ॥ ೫೭೪ ॥

ಪರಮಾನುಭವವುಂಟು, ಕ್ರೂರಾನುಭವವುಂಟು,
ಪರಮಾನ್ನವೂ ಉಂಟು, ಕರಿಕನ್ನವುಂಟು।
ಕರಿದುಂಟು, ಬಿಳಿದುಂಟು– ಇರುವುದೆಲ್ಲವು ಬಾಳ
ಸಿರಿಯೆಂದೆ ಸ್ವೀಕರಿಸು– ಮರುಳಸಿದ್ಧ ॥ ೫೭೫ ॥

ಕಾರಿರುಳ ಕತ್ತಲಲಿ ನಕ್ಷತ್ರಗಳು ಚೆಂದ,
ಚಾರು ಚಂದ್ರಿಕೆಯಲ್ಲಿ ಕಾಳಿಂದಿ ಚೆಂದ;।
ಈ ರೀತಿ ಎಲ್ಲಕ್ಕು ಅದರದರ ಅಂದವಿದೆ,
ವೈರುಧ್ಯ ದೊರೆತಾಗ– ಮರುಳಸಿದ್ಧ ॥ ೫೭೬ ॥

ಅನುಭವ ತರಂಗಿಣಿಯ ತೆರೆಗಳನು ಎಣಿಸುವೆಯ?
ಕ್ಷಣ ನಿಮಿಷಗಳ ಲೆಕ್ಕ ಬರೆದಿಡುವೆಯಾ?।
ಹನಿ ವನಧಿಯನು ಅಳೆಯ ಹೊರಟಂತೆ ಈ ಸಾಸ,
ತಣಿ ಎಟುಕಿದಷ್ಟರೊಳೆ– ಮರುಳಸಿದ್ಧ ॥ ೫೭೭ ॥

ಕ್ಷಣವು ಯುಗವಾಗುವುದು ಪ್ರತಿಭೆಯನು ಕೂಡಿದರೆ,
ಅಣು ಶಕ್ತಿಯಾಗುವುದು ವಿಜ್ಞಾನಿ ದೊರೆಯೆ।
ಗುಣವು ಹಣವಾಗುವುದು ಗುಣಗ್ರಾಹಿ ಸಿಕ್ಕಾಗ;
ಘನತೆ ಗುರುತಿಸಿದಂತೆ– ಮರುಳಸಿದ್ಧ ॥ ೫೭೮ ॥

ಬಹುಮತವು ಅಹಿತವನು ಹಿತವಾಗಿ ಮಾಡುವುದೆ?
ಬಹುವಾಗೆ ಭಲ್ಲೆಗಳು ಹೂಗಳಹವೆ?
ಸಹಿತವಾದುದು ಅಲ್ಪ ಮತಪಡೆದರೂ ಹಿತವೆ,
ಮಹತಿ ಹಿತ ಮಾತ್ರಕೇ– ಮರುಳಸಿದ್ಧ ॥ ೪೭೯ ॥

ಬಡ್ಡಿ ಬಾಡಿಗೆಯಲ್ಲಿ ಬದುಕುವವ ನಾಗರಿಕ,
ಬಡ್ಡಿ ತೀರಿಸೆ ದುಡಿವ ನತದೃಷ್ಟ ರೈತ।
ಕಡ್ಡಿಯಷ್ಟೂ ಕೆಲಸ ಮಾಡದೆಯೆ ದುಡ್ಡಿನ
ಗುಡ್ಡ ಪಡೆವನೆ ಒಡೆಯ– ಮರುಳಸಿದ್ಧ ॥ ೫೮೦ ॥

ದಣಿಯದೆಯೆ ಉಣ್ಣುವನೆ ಧಣಿ; ಎಷ್ಟು ಬಂದರೂ
ತಣಿಯದೇ ಗೊಣಗುವನೆ ಬಂಡವಳಿಗ।
ಕೊನೆಯಿರದೆ ದೋಚುವನೆ ವ್ಯಾಪಾರಿ; ಜನರನ್ನೆ
ತಿನುವವನು ಮುಂದಾಳು– ಮರುಳಸಿದ್ಧ ॥ ೫೮೧ ॥

ನಾಳೆಗೆನುತಡಕಿಸದ ಪಶುಪಕ್ಷಿ ಸಂಕುಲವು।
ಬೇಳಿಲ್ಲ ಹಸಿವೆಯುರಿಯಲ್ಲಿ! ನರರು।
ನಾಳೆಗೆನ್ನುತ ಕೂಡಿಹಾಕುತ್ತಲೇ ಬರದ
ದಾಳಿಗೊಳಗಾಗುವರು– ಮರುಳಸಿದ್ಧ ॥ ೫೮೨ ॥

'ಒಡೆಯಗಾಗಿದು' ಎಂದು ದೋಚಿದರು ಇದುವರೆಗೆ,
'ಬಡವಗಾಗಿದು' ಎಂದು ಸುಲಿಯುತಿಹರೀಗ!
ಬಿಡರು ಸುಲಿಗೆಯನಿವರು ಗುಡಿ ಮಹಡಿಗಳ ಬಿಡಿಸಿ
ಸುಡುಗಾಡೊಳಿಟ್ಟರೂ– ಮರುಳಸಿದ್ಧ ॥ ೫೮೩ ॥

ಗೆದ್ದ ಎತ್ತಿನ ಬಾಲ ಹಿಡಿದವರ ಬರವಿಲ್ಲ,
ಬಿದ್ದ ಎತ್ತನು ಎತ್ತಿ ಸೇವಿಪರು ಬೇಕು।
ಇದ್ದವರ, ಗೆದ್ದವರ ಬಾಲಬಡಿಕರೆ, ಬಡವ–
ರುದ್ಧಾರವೆಂದಿಗೋ– ಮರುಳಸಿದ್ಧ ॥ ೫೮೪ ॥

ಮುತ್ತುಗಾರನಿಗುಂಟೆ ಮುತ್ತ ಧರಿಸುವ ಭಾಗ್ಯ?
ತುತ್ತು ಅನ್ನಕ್ಕಾಗಿ ಮಾರುವನು ಮುತ್ತ।
ವಿತ್ತವುಳ್ಳವನೇಕೆ ಹೊತ್ತು ತಿರುಗುವನವನ
ಕತ್ತಿಗಾಗಿಯೆ ಮುತ್ತು– ಮರುಳಸಿದ್ಧ ॥ ೫೮೫ ॥

ಸಂಶಯಾತ್ಮನ ನಾಶ ನಿಶ್ಚಯವು; ಸುಗುಣಗಳು
ಧ್ವಂಸವಾಗುವುವೊಂದೆ ಸಂಶಯಾಗ್ನಿಯಲಿ।
ಕಂಸನುಳಿದನೆ ಕೊಂದು ದೇವಕಿಯ ಕೂಸುಗಳ?
ಸಂಶಯವೆ ಶನಿ ಕಾಣೊ– ಮರುಳಸಿದ್ಧ ॥ ೫೮೬ ॥

ನಿಶ್ಚಿತತೆಗಳ ನಂಬಿ ನಡೆದೆ, ಸಂಶಯ ಪಡೆದೆ:
ಕಶ್ಚಿದಾಶಂಕೆಯಲಿ ಪ್ರಾರಂಭಮಾಡಿ।
ನಿಶ್ಚಿತತೆಯನು ಮುಟ್ಟು, ಸಂಶಯಗಳನು ಮೆಟ್ಟು,
ನಿಶ್ಚಿಂತೆ ನಿನಗಾಗ– ಮರುಳಸಿದ್ಧ? ॥ ೫೮೭ ॥

ವಸ್ತುವೊಂದನು ತಾಗುವನಕ ಕಾಣದು ಬೆಳಕು;
ವಸ್ತುವಿದ್ದರೆ ಮಾತ್ರ ವಸ್ತುವಿನ ಛಾಯೆ।
ವಸ್ತುವನು ನಂಬು, ಪರವಸ್ತುವನು ನಂಬು,
ಅಸ್ತಿತ್ವವನು ನಂಬು– ಮರುಳಸಿದ್ಧ? ॥ ೫೮೮ ॥

ನಂಬಿ ಕೆಟ್ಟವರುಂಟು, ಅವರಿಗಿಂತಲು ಹೆಚ್ಚು
ನಂಬದೆಯೆ ಕೆಟ್ಟವರು ಉಂಟು ಲೋಕದಲಿ।
ಸಾಂಬನನೆ ನಂಬುವಿಯೊ, ನಿನ್ನನೇ ನಂಬುವಿಯೊ,
ನಂಬು ಗುರಿಯೊಂದನ್ನು– ಮರುಳಸಿದ್ಧ ॥ ೫೮೯ ॥

'ನಂಬೆ ನಾನೇನನೂ' ಎಂಬುದೂ ನಂಬಿಕೆಯೆ!
ನಂಬದೆಯೆ ಏನುವನು ಇರಲಾರೆ ನೀನು।
ತುಂಬು ಬಾಳಿಗೆ ಬೇಕು ನಂಬಿಕೆಯ ನೆಮ್ಮದಿಯು,
ಇಂಬಿರಲಿ ನಂಬಿಕೆಗೆ– ಮರುಳಸಿದ್ಧ ॥ ೫೯೦ ॥

ದೇವನನೆ ನಂಬು, ಜೀವಿತವನೇ ನಂಬು, ಸ
ದ್ಭಾವನೆಯ ನಂಬು, ಸದ್ಗುಣವ ನಂಬು।
ಆವುದಾದರು ಒಂದು ಆದರ್ಶವನು ನಂಬು
ಜೀವನದ ಸಫಲತೆಗೆ– ಮರುಳಸಿದ್ಧ ॥ ೫೯೧ ॥

ಆದರ್ಶವಾದ ಬೇಡೆಂಬುದೂ ಆದರ್ಶ–
ವಾದವೇ ಅದನೊಪ್ಪಿ ನಂಬಿದರಿಗೆ।
ವಾದಿಸುವುದೆಲ್ಲವೂ ವಾದಕೇ ಹಾದಿಯು;
ಸಾಧಿಸಿದ್ದೇ ಸಫಲ– ಮರುಳಸಿದ್ಧ ॥ ೫೯೨ ॥

ನಿನಗಿಷ್ಟವಾದುದನು ಕಷ್ಟವಿಲ್ಲದೆ ನಂಬಿ
ಎನುವೆ 'ನಾ ನಂಬಿದುದೆ ನಿಜ'ವು ಎಂದು
ಅನುಕೂಲ ಸಿಂಧುವೇ ಒರೆಗಲ್ಲೆ? ಅಟ್ಟುಂಡು
ಅನುಭವಿಸಿದುದ ನಂಬು– ಮರುಳಸಿದ್ಧ ॥ ೫೯೩ ॥

ಹೇಳುವವರೆಷ್ಟಿಲ್ಲ? ಕೇಳು ಹೇಳುವುದನ್ನು;
ತಾಳೆಯಾಗಲು ನಿನ್ನ ಒಳದನಿಗೆ ನಂಬು।
ಬೋಳೆತನದಲಿ ನಂಬಿ ಬೀಳದಿರು ಕಮ್ಮರಿಗೆ!
ಕೇಳಂತರಾತ್ಮನನು – ಮರುಳಸಿದ್ಧ ॥ ೫೯೪ ॥

ಒಬ್ಬರೊಬ್ಬರ ನಂಬದಂಥ ಸ್ಥಿತಿ ಹುಟ್ಟಿದರೆ
ಒಬ್ಬರೊಬ್ಬರು ನಂಬುವಂತೆ ಮಾಡಿ।
ಸಬ್ಬರುದಯವ ಸಾಧಿಸುವುದೆ ಮುತ್ಸದ್ದಿತನ;
ದಬ್ಬಾಳಿಕೆಯು ಅಲ್ಲ- ಮರುಳಸಿದ್ಧ ॥ ೫೯೫ ॥

ಹೆದೆಯನೇರಿಸಿ ಶರಕೆ ಗುರಿಯರಸುತಿಹೆ ನಿತ್ಯ
ಇದುವರೆಗೆ ತಿಳಿದಿಲ್ಲ ಗುರಿ ಯಾವುದೆಂದು।
ಮದನ ಮಾಡಿದ ತಪ್ಪ ಮಾಡದಿರು; ನಂಬಿಬಿಡು
ಹದುಳವೇ ಗುರಿಯೆಂದು -ಮರುಳಸಿದ್ಧ ॥ ೫೯೬ ॥

ಸಾಧ್ಯವೇ ಇಲ್ಲಣ್ಣ ನಿನ್ನೊಳೇ ಅವಿತಿರುವ
ಸಾಧ್ಯತೆಗಳೆಲ್ಲವನು ಬಣ್ಣಿಸುವುದು।
ಚೋದ್ಯ ನಿನಗಿದರಲ್ಲಿ ನಂಬಿಕೆಯು ಇರದಿಹುದು;
ವೇದ್ಯವಾಗಲಿ ಈಗ- ಮರುಳಸಿದ್ಧ ॥ ೫೯೭ ॥

ನಂಬಿಯೂ ನಂಬದವ ನಂಬದಿರುವುದೆ ಮೇಲು;
ಹುಂಬತನ ಹಯವೆರಡನೊಮ್ಮೆಗೇರುವುದು।
ಅಂಬಿಗನು ನಡೆಸುವನೆ ಎರಡು ದೋಣಿಗಳನ್ನು-
ನಂಬಿ ಒಂದೇ ಹುಟ್ಟ- ಮರುಳಸಿದ್ಧ? ॥ ೫೯೮ ॥

ಹಾಸ್ಯವೇ ತೋಷದ ರಹಸ್ಯವೈ, ಜೀವನೈ-
ರಾಶ್ಯನಿಶೆಗಿದೆ ಶಶಿಯು, ನೆಮ್ಮದಿಯ ನವಿಲ।
ಲಾಸ್ಯವಿದು, ಹದುಳದಾವಾಸ್ಯವಿದು, ನಿಜವಾಗಿ
ಭಾಷ್ಯವಿದು ಬದುಕಿಗೆ- ಮರುಳಸಿದ್ಧ ॥ ೫೯೯ ॥

ನಗೆಗಿಲ್ಲ ನಿರ್ಬಂಧ, ನಗುತಿರುವುದೇ ಚೆಂದ-
ಸೊಗವಿರಲಿ, ಧಗೆಯಿರಲಿ, ದುಗುಡವಿರಲಿ।
ನಗೆಗು ಬರಬಹುದೇನೊ ಕರಭಾರ! ನಕ್ಕುಬಿಡು
ನಗೆ ಸೋವಿಯಿರುವಾಗ- ಮರುಳಸಿದ್ಧ ॥ ೬೦೦ ॥

ಅನ್ಯರನುಚಿತ ನೋಡಿ ನಗುವುದೇನರಿದಲ್ಲ,
ತನ್ನ ತಪ್ಪನು ತಿಳಿದು ನಗುವವನೆ ಧನ್ಯ।
ಚೆನ್ನವಿರೆ ಎಲ್ಲವೂ ನಗುವವನಿಗಿಂ ಮಿಗಿಲು
ಬನ್ನದಲಿ ನಗುವವನು- ಮರುಳಸಿದ್ಧ ॥ ೬೦೧ ॥

ಕುಲಗೆಡಿಸದಿರು ನಗೆಯ ಖಲತನಕೆ, ಹೊಲೆತನಕೆ
ಸುಲಿಗೆ, ಸ್ವಾರ್ಥಕೆ, ಕೊಳಗೆ ಬಳಸಿ ಅದನು।
ಹುಳಿ ಹಿಂಡದಿರು ಹಾಲ ಹರವಿಯಲಿ, ಬಾಳುವೆಯ
ಸೆಲೆಯನ್ನೆ ಕಲಕದಿರು– ಮರುಳಸಿದ್ಧ ॥ ೬೦೨ ॥

ನಗುವ ಹೂಗಳ ನೋಡಿ, ನಗುವ ಮಕ್ಕಳ ನೋಡಿ,
ನಗುವ ನೊರೆ ತೆರೆ ನೋಡಿ, ನಕ್ಷತ್ರ ನೋಡಿ।
ನಗಲು ಕಲಿ, ನಗಿಸೆ ಕಲಿ; ನಗೆಗೇಡು ಆಗದಿರು
ದುಗುಡವನ್ನೇ ನಂಬಿ– ಮರುಳಸಿದ್ಧ ॥ ೬೦೩ ॥

ಬುದ್ಧನಮೃತ ಸ್ಮಿತಕೆ ಸರಿಗಾಣೆ, ಗೊಮ್ಮಟನ
ಮುಗ್ಧದರಹಾಸಕ್ಕೆ ದೊರೆಗಾಣೆನು।
ಉದ್ಧಾರಕವು ಏಸು, ಬಸವ, ಬಾಪುಗಳಮಲ
ಪದ್ಮಸದೃಶ ಸ್ಮಿತವು– ಮರುಳಸಿದ್ಧ ॥ ೬೦೪ ॥

ತೊರೆ ಬತ್ತಿದಾಗಲೂ ಒರತೆ ನೆರವಾಗುವುದು,
ಉರಿ ಆರಿದಾಗಲೂ ವಿಸ್ಫುಲಿಂಗ।
ಹಿರಿದು ಕೈಕೊಟ್ಟಾಗ ಕಿರಿದು ಕೈ ಹಿಡಿಯುವುದು,
ಜರೆಯದಿರು ಕಿರಿದನ್ನು– ಮರುಳಸಿದ್ಧ ॥ ೬೦೫ ॥

ಪರಮಾಣು ಗರ್ಭದಲಿ ಪರಮಾದ್ಭುತವ ಕಂಡೆ.
ಅರಿ ಕಿರಿದಿನೆದೆಯಲ್ಲಿ ಇರುವ ಹಿರಿದ।
ಕರಿಯ ಅಸುವನು ಹೀರೆ ಇರುವೆ ಸಾಕಾಗದೆ?
ಕಿರಿದೆ ಸುಂದರವೆಂದ– ಮರುಳಸಿದ್ಧ ॥ ೬೦೬ ॥

ಅರಿಯುವುದು ಕ್ಷಣವೊಂದು, ಬರೆಯುವುದು ಯುಗ ಯುಗವು
ಕಿರಿಯ ಸೂತ್ರದ ಅರ್ಥವಿಸ್ತಾರವನ್ನು।
ಹಿರಿದು ವಿಶ್ವವು, ಅದರ ಕುರುಹು ಅಂಗುಲದಷ್ಟು.
ತರವೆ ಜರೆವುದು ಅದನು– ಮರುಳಸಿದ್ಧ? ॥ ೬೦೭ ॥

ಶರಧಿಗಿಲ್ಲದ ಸವಿಯು ಒರತೆಗಿದೆ, ಒರತೆಯಲಿ
ದೊರೆಯದಿಹ ಮುತ್ತುಗಳು ಶರಧಿಯಲ್ಲಿ।
ಹಿರಿದಿಗೊಂದಗ್ಗಳಿಕೆ, ಕಿರಿದಿಗೊಂದಗ್ಗಳಿಕೆ,
ಗರುವ ಬೇಡಾರಿಗೂ– ಮರುಳಸಿದ್ಧ ॥ ೬೦೮ ॥

ಹುಸಿಗು ಇದೆ ಸ್ಥಾನ ಹುಸಿ ಮುನಿಸು ಕಲಹದಲಿ,
ವಿಷಕು ಇದೆ ಉಪಯೋಗ ಔಷಧೋದ್ಯಮದಿ।
ಕಸವೆಂದು, ನುಸಿಯೆಂದು ಜರೆಯದಿರು ಏನನೂ
ರಸದುಗಮ ಕಸದಲ್ಲಿ- ಮರುಳಸಿದ್ಧ ॥ ೬೦೯ ॥

ಸಿಂಪಿನಲಿ ಹುಟ್ಟುವೊಲು ಶಂಖದಲಿ ಹುಟ್ಟುವುವೆ
ಪೆಂಪುವೆತ್ತಿಹ ಮುತ್ತು? ಸಿಂಪಿನಲಿ ತೀರ್ಥ,
ಕಂಪು ಕಲ್ಲಲರಿನಲಿ, ಇಂಪು ಬಿದಿರಿನೊಳಿಹವೆ?
ಸೊಂಪವಕೆ ತಂತಮ್ಮ- ಮರುಳಸಿದ್ಧ ॥ ೬೧೦ ॥

ಪಾದರಸ ಸುಳಿವುದೆಂದಾ ಗರಸು ಸುಳಿಯುವುದೆ?
ಓದುವುದು ಗಿಳಿಯೆಂದು ಗೂಬೆಯೋದುವುದೆ? ।
ಮೇದಿನಿಯೊಳೆಲ್ಲವೂ ಪಡೆದುದನೆ ನೀಡುವುವು;
ಆದರಿಸು ಇದ್ದುದನು- ಮರುಳಸಿದ್ಧ ॥ ೬೧೧ ॥

ತಿನ್ನುವಗೆ ಬೇಡಾಗೆ ತೋಟಿಗಗು ಬೇಡವೆ
ಹಣ್ಣಿನಲೆ ಹೊರಟು ಬಹ ಗೊರಟಗಳು? ಅಂತೆ
ತನ್ನ ಹಿತಕನುಸರಿಸಿ ಎಲ್ಲದರ ಬೆಲೆಯೆಲ್ಲಿ-
ಹೊನ್ನಿರಲಿ, ಮಣ್ಣಿರಲಿ- ಮರುಳಸಿದ್ಧ ॥ ೬೧೨ ॥

ಅರಮನೆಯ ಕೆಳಗಿರದ ನಿಧಿಯು ಗುಡಿಸಲ ಕೆಳಗೆ
ಇರಬಹುದು; ಇದ್ದರೂ ಇರುವುದನ್ನು।
ಅರಿಯದಿರೆ ಅದಕಾವ ಹಾನಿ? ನಿಧಿ ನಿಧಿಯೆ ನಿಜ,
ಅರಿಯದವ ನಿರ್ಭಾಗ್ಯ- ಮರುಳಸಿದ್ಧ ॥ ೬೧೩ ॥

ತಿರುಳು ರಸಗಳೆ ಬೇಕು, ಸಿಪ್ಪೆ ಬೀಜವು ಬೇಡ।
ತರವೆ ಇಂತಹ ಬಯಕೆ? ಸಿಪ್ಪೆ ಹಿಪ್ಪೆ
ಇರುವುದೇ ತಿರುಳು ರಸ ರಕ್ಷಿಸಲು; ಬೀಜವೇ
ಮರವಾಗಿ ಬೀಜಾಯ್ತು- ಮರುಳಸಿದ್ಧ ॥ ೬೧೪ ॥

ಆಯುಷ್ಯವೆಷ್ಟಿದೆಯೊ, ಆರೋಗ್ಯವೆಷ್ಟಿದೆಯೊ
ಧ್ಯೇಯ, ಸಾಧನ, ಅರಿವು, ನೆರವು ಎಷ್ಟಿದೆಯೊ।
ಆಯಾಮಗಳು ಅನಿತೆ ನಿನ್ನ ಬದುಕಿಗೆ! ಇನಿತೆ
ಹಾಯಾಗಿ ಇರೆ ಸಾಕು- ಮರುಳಸಿದ್ಧ ॥ ೬೧೫ ॥

ಅತ್ತೊಂದು ಇತ್ತೊಂದು ಚಿತ್ತವಾಗಲು ಸತ್ವ
ಸತ್ತಂತೆ! ಏಕಾಗ್ರ ಚಿತ್ತವೇ ನಿನ್ನ
ಅತ್ಯುನ್ನತಿಗೆ ಏಣಿ, ಉಛ್ರಾಯ ನಿಶ್ರೇಣಿ,
ಉತ್ತಾರಕ ದ್ರೋಣಿ– ಮರುಳಸಿದ್ಧ ॥ ೬೧೬ ॥

ಹೇಗೆ ತೋರಲು ಇಚ್ಛಿಸುವಿಯೋ ನೀ, ಇರು ಹಾಗೆ,
ಮೇಗು ಒಳಗಿನ ಇರವು ಬೇರಾಗದಿರಲಿ!
ಸೋಗು ಕಾಕಿದರುಂಟೆ ನಾಟಕದ ನಾಯಕನ
ಆ ಗರಿಮೆ ಹಿರಿಮೆಗಳು– ಮರುಳಸಿದ್ಧ ॥ ೬೧೭ ॥

ಹೊರಗೆ ಬೆಳಕೆನಿತಿಲ್ಲ, ಒಳಗೆ ಹುಳುಕೆನಿತಿಲ್ಲ,
ಕೊಳಕ ಮುಚ್ಚಲು ಎಂಥ ನಾಗರಿಕ ವೇಷ!
ಬಳಿದಿದೆ ಗಿಲೀಟನ್ನು ಹಿತ್ತಳೆಯ ನಗನಾಣ್ಯ–
ಗಳಿಗೆ! ಬಲ್ಲವ ಬಲ್ಲ– ಮರುಳಸಿದ್ಧ ॥ ೬೧೮ ॥

ನಮ್ಮ ಬದುಕೇ ಬೋಧೆಯಾಗದಿರೆ ಅನ್ಯರಿಗೆ
ಚಿಮ್ಮಿ ಫಲವೇನಮ್ಮ ಭಾಷಣಗಳನ್ನು?
ನಮ್ಮ ನಡೆಯೇ ನುಡಿಯಲೆಮ್ಮ ಉಪದೇಶವನು,
ಸುಮ್ಮನೇ ಗಳಹದಿರು– ಮರುಳಸಿದ್ಧ ॥ ೬೧೯ ॥

ಏನೊಂದ ಕಲಿಯದ, ಏನೊಂದ ಮಾಡದ,
ಏನೊಂದ ಕೊಡದ ದಿನ ವ್ಯರ್ಥ ದಿನವು।
ನೀನಾಗಿ ನಿನ್ನ ದಿನ ಕೊಲ್ಲದಿರು, ಬಳಸದನು
ಜ್ಞಾನಕೋ, ಬೋನಕೋ– ಮರುಳಸಿದ್ಧ ॥ ೬೨೦ ॥

ಕಾಲದಲ್ಲಿಯೆ ಶುಭವ ಅಶುಭವನು ಹುಡುಕಿದೆವು,
ಕಾಲನಾದನು ಕಾಲ ಮೌಹೂರ್ತಿಕರಿಗೆ!
ಮೇಲು ಕೀಳುಗಳಿಲ್ಲ ಕಾಲದಲಿ, ಭ್ರಾಂತಿಯಳಿ,
ಕಾಲವೂ ಶಿವನಂಶ– ಮರುಳಸಿದ್ಧ ॥ ೬೨೧ ॥

ತಾರುಣ್ಯದುತ್ಸಾಹ ವಾರ್ಧಕ್ಯದನುಭವವು
ಸೇರೆ ಊಹಾತೀತ ಕಾರ್ಯಗಳು ಜಗದಿ।
ಕ್ಷೀರಕ್ಕೆ ಸವಿಜೇನು ಸೇರಿದಂದದಿ ದ್ವಯವು
ಸೇರಿದರೆ ಸೌಭಾಗ್ಯ– ಮರುಳಸಿದ್ಧ ॥ ೬೨೨ ॥

ಯುದ್ಧಕ್ಕೆ ಯೋಧರಿಗೆ ಸಾಕೆ ಆಯುಧ ನೌಕೆ?
ಸಿದ್ಧರಿರದಿರೆ ಹಂಗುದೊರೆದು ಹೋರೆ।
ಗೆದ್ದು ಮರುಳುವುದಿಲ್ಲ, ಬಿದ್ದು ಹೋಗುವರವರು!
ನಿರ್ಧಾರ ದಿವ್ಯಾಸ್ತ್ರ- ಮರುಳಸಿದ್ಧ ॥ ೬೨೩ ॥

ಹೆದ್ದಾರಿಗಳಿಗಂದ ಸಾಲುಮರಗಳ ಸೊಂಪು,
ಅದ್ರಿಧಾಮಕೆ ಚೆಂದ ನೀಲಗಿರಿ ವನವು।
ಬದ್ಧನಾಗದೆ ಇಹುದೆ ಬುದ್ಧಿಜೀವಿಗೆ ಚೆಂದ।
ಶುದ್ಧಿ ಸರ್ವರಿಗಂದ- ಮರುಳಸಿದ್ಧ ॥ ೬೨೪ ॥

ತನುವಿನಲ್ಲಿಯೇ ಇಹವು ಮನ ಸೆಳೆವ ಭಾಗಗಳು,
ಮನವ ಮುದುರಿಸುವಂಥ ಭಾಗ ಸಹಿತ।
ತನಿರಸದ ಬದಿ ಸಿಪ್ಪೆ, ಯೌವನದ ಬದಿ ಮುಪ್ಪು,
ಅನುಭೋಗಿಸೆರಡನೂ- ಮರುಳಸಿದ್ಧ ॥ ೬೨೫ ॥

ಶಿಶಿರದೊಳು ಸುಖಕರವೆ ಶಶಿಕಿರಣ? ಹಸಿದಾಗ
ಸುಸಿಲಾಟ ಸೊಗಸುವುದೆ? ತದನುಸಾರ।
ಬಿಸಿಲೊಮ್ಮೆ, ತಂಪೊಮ್ಮೆ, ಸುಸಿಲೊಮ್ಮೆ ಸುಖವು ಸರಿ-
ಬೆಸದಾಟ ಬಾಳುವೆಯು- ಮರುಳಸಿದ್ಧ ॥ ೬೨೬ ॥

ಹಸುಗಳಿಗೆ ಹುಲ್ಲಾಗು, ಶಿಶುಗಳಿಗೆ ಹಾಲಾಗು,
ಬಸವಗಳ ಕೊರಳಲ್ಲಿ ಹುರಿಗೆಜ್ಜೆಯಾಗು।
ಹಸಿದವರಿಗಶನ ಬಸವಳಿದರಿಗೆ ವಿಶ್ರಾಮ,
ರಸಿಕ ಬಾಳಿನೊಳಾಗು- ಮರುಳಸಿದ್ಧ ॥ ೬೨೭ ॥

ಕಷ್ಟಗಳ ಕಳೆ ತೆಗೆದು, ಇಷ್ಟಗಳ ಬೆಳೆ ಬೆಳೆದು,
ದುಷ್ಟತನವನೆ ಒಕ್ಕಿ ಶಿಷ್ಟತೆಯ ಅಕ್ಕಿ!
ಸುಷ್ಮತೆಯ ರಾಗಿ ಜೋಳಗಳನ್ನು ಪಡೆದು; ಸಂ-
ತುಷ್ಟನಾಗಿರಲು ಕಲಿ- ಮರುಳಸಿದ್ಧ ॥ ೬೨೮ ॥

ಕೊನೆಯ ಗುರಿಗನುಸರಿಸಿ ಮಾಡು ನೀ ಕಾರ್ಯಗಳ-
ಕೊನೆಯಿರದ, ಮೊನೆಯಿರದ ಕಾರ್ಯಗಳನು।
ದ್ಯುನದಿ ಗುರಿಯಾಗಿಟ್ಟು ಧುಮುಕುವರೆ ಕಮ್ಮರಿಗೆ?
ಪನವು ಮರೆಯದೆ ಇರಲಿ- ಮರುಳಸಿದ್ಧ ॥ ೬೨೯ ॥

ನಿನ್ನನರಿಯದ ಜನರು ನಿನಗೆ ಹಗೆಯಾಗುವರೆ?
ನಿನ್ನನ್ನು ಅರಿತವರೆ ಅರಿಯಾಗುವವರು।
ಬೆನ್ನಿನಲಿ ಬಂದವರೊ, ಸ್ನೇಹಿ-ಸಂಬಂಧಿಕರೊ
ನಿನ್ನಹಿತರಾದಾರು- ಮರುಳಸಿದ್ಧ ॥ ೬೩೦ ॥

ಮಾತೃವಾತ್ಸಲ್ಯವೇ ಮಂದಿರವು, ಮಾತೆಯೇ
ಮೂರ್ತಿಯದರೊಳು, ಪೂಜೆ ಮಕ್ಕಳಿಂದ।
ಕರ್ತವ್ಯಭ್ರಷ್ಟರಾದರೆ ಮಕ್ಕಳೆಂಬುವರು
ಮೂರ್ತಿಗೆಲ್ಲಿಯ ಕುಂದು- ಮರುಳಸಿದ್ಧ ॥ ೬೩೧ ॥

ನಿನ್ನ ಕೈ ಹಿಡಿದುದೇ ನನ್ನ ಭಾಗ್ಯವು ಸಖಿಯೆ,
ಹೆಣ್ಣೊಲವ ಪಡೆಯದವಗಿಲ್ಲ ಸುಖವೆ!
ಮಣ್ಣು ಸಹ ಮಲರುವುದು ಹೆಣ್ಣು ಹೆಜ್ಜೆಯನಿಡಲು!
ಧನ್ಯತೆಯೆ ಹೆಣ್ಣಿನಿಂ- ಮರುಳಸಿದ್ಧ ॥ ೬೩೨ ॥

ಮುಗಿಲ ನಕ್ಷತ್ರಗಳು ಚೆಂದ, ಅವಕಿಂತಲೂ
ಮಗುವಿನಕ್ಷಿಗಳೆನಗೆ ಬಹಳ ಚೆಂದ।
ಸೊಗವ ಬಯಸುವರೆಲ್ಲ ಮಗುವಿನೊಳ್ಮೊಗ ನೋಡಿ
ಬಗೆಯನರಳಿಸಿಕೊಳಲಿ- ಮರುಳಸಿದ್ಧ ॥ ೬೩೩ ॥

ಕಾಲನೆಂಬುವ ಕಳ್ಳ ಕದಿವ ಕಣ್ಮುಂದೆಯೇ
ಬಾಲ್ಯವನು, ಯೌವನವ, ವೃದ್ಧಾಪ್ಯವನ್ನು।
ಖೇಲನಗಳಾಯುಗಳು ಕಾಲನ ವಿನೋದಕೆ;
ಕಾಲಕಾಲನ ನಂಬು- ಮರುಳಸಿದ್ಧ? ॥ ೬೩೪ ॥

ಅವರಂತೆ ನಡೆಯಿರಿ, ಇದರಂತೆ ನಡೆಯಿರಿ,
ಎನ್ನುವರೆ ಎಲ್ಲೆಲ್ಲು ಲೋಕದಲ್ಲಿ!
ನನ್ನಂತೆ ನಡೆಯಿರೆನ್ನುವ ಎದೆಯು ಯಾರಿಗಿದೆ?
ಇನ್ನುದಿಸಲಿಂಥವರು- ಮರುಳಸಿದ್ಧ? ॥ ೬೩೫ ॥

ಖೊಟ್ಟಿ ದಸ್ತಾವೀಜು, ಖೊಟ್ಟಿ ನೋಟುಗಳಿಲ್ಲಿ,
ಖೊಟ್ಟಿ ಸಾಕ್ಷಿಯು, ಶಪಥ, ಆಶ್ವಾಸನ!
ಒಟ್ಟು ಬದುಕೇ ಖೊಟ್ಟಿ, ಮತಿಯು ನಡೆಗಳು ಖೊಟ್ಟಿ-
ನೆಟ್ಟಗಾಗುವುವೆಂದೊ- ಮರುಳಸಿದ್ಧ? ॥ ೬೩೬ ॥

ಹಸಿವೆಯಿಂ ಸಾಯುತಿರೆ ಜನರು ಹಸಿವೆಯ ಕಳೆವ
ಹೊಸ ಹಾದಿ ಹುಡುಕಲು ಹೊರಟರುತ್ತಮರು।
ಅಶನವನು ತಂದಿತ್ತು ಅಸುಗಳನು ಉಳಿಸಿದರು
ಹೆಸರಿಸದ ಬಡವರು– ಮರುಳಸಿದ್ಧ ॥ ೬೩೭ ॥

ಅಂತ್ಯೋದಯಕ್ಕಿಂತ ಆದ್ಯತೆಯ ಗುರಿಯೆ? ಜನ–
ತಂತ್ರ ಸಫಲತೆಗಿಂತ ಸಾಧನೆಯೆ? ಜನರ
ಆಂತರಿಕ ಕ್ರಾಂತಿಗಿಂ ಕ್ರಾಂತಿಯೇ, ಜಾತಿಮತ
ಭ್ರಾಂತಿಗಿಂ ಭ್ರಾಂತಿಯೇ– ಮರುಳಸಿದ್ಧ ॥ ೬೩೮ ॥

ಶಾಂತಿಗಾಗಿಯೆ ಜಪವು, ದಾಂತಿಗಾಗಿಯೆ ತಪವು,
ಭ್ರಾಂತಿ ನಿರಸನಕಾಗಿ ವಿಜ್ಞಾನವು।
ಆಂತರ್ಯದುಜ್ವಲತೆಗಾಗಿ ತತ್ತ್ವಜ್ಞಾನ,
ಸಂತೋಷಕಾಗಿ ಕಲೆ– ಮರುಳಸಿದ್ಧ ॥ ೬೩೯ ॥

ಅಜ್ಜ ನೆಟ್ಟಿಹನೆಂದು ಬೇವು ಸರಿಯಾಗುವುದೆ?
ಕಜ್ಜವೆಂತಿದ್ದರೂ ಫಲವು ಸವಿಯಹುದೆ?
ಬಿಜ್ಜೆ ಯಾವುದೆ ಇರಲಿ ಕಲ್ಯಾಣಕಾರಕವೆ?
ಕಜ್ಜಾಯ ಹಿಟ್ಟಿನೊಲು– ಮರುಳಸಿದ್ಧ ॥ ೬೪೦ ॥

ಹೆಸರು ಗಳಿಸಲು ಬೇಕು ವರುಷಗಳೆ, ಗಳಿಸಿರುವ
ಹೆಸರು ಕೆಡಿಸಲು ಸಾಕು ನಾಲ್ಕು ನಿಮಿಷ।
ಹುಸಿಯಿರಲಿ, ದಿಟವಿರಲಿ, ನಿಂದೆಯನೆ ನಂಬುವರು
ವಸುಧೆಯಲಿ ಲೋಗರು– ಮರುಳಸಿದ್ಧ ॥ ೬೪೧ ॥

ತಮಗೆ ಪೆಟ್ಟನು ಪಡೆದು ನನಗೆ ಮುದ ನೀಡುವುವು–
ತಮಟೆ, ಮದ್ದಳೆ, ಹಲಗೆ, ಚೆಂಡು, ಗೋಲಿ!
ನಮಗಿನಿತೆ ತಟ್ಟಿದರೆ ಕಿಡಿ ಕಾರುವೆವು ನಾವು
ಸಮತೆ ದೂರದ ಮಾತು– ಮರುಳಸಿದ್ಧ ॥ ೬೪೨ ॥

ಸರ್ವೋಚ್ಚ ಪೀಠದಲಿ ಕುಳಿತವರೆ ಹಸಗೆಟ್ಟು
ದುರ್ಮಾರ್ಗಿಯಾದರೆ ಗತಿಯೇನು ಜನಕೆ?
ದುರ್ಮತಿಗೆ ಅಧಿಕಾರ, ಸನ್ಮತಿಗೆ ಧಿಕ್ಕಾರ,
ಮರ್ಮವಾವುದು ಇದರ– ಮರುಳಸಿದ್ಧ? ॥ ೬೪೩ ॥

ಮದ್ಯವೇ ಮಾದಕವೆ? ವಿದ್ಯೆಯೂ ಮಾದಕವೆ.
ಪದ್ಯವೂ ಮಾದಕವೆ ಮದವೇರಿಸಿದರೆ!
ಮದ್ಯದಮಲಿಳಿದೀತು, ವಿದ್ಯೆಯಮಲಿಳಿಯುವುದೆ
ವೇದ್ಯವಾಗದೆ ವಿನಯ– ಮರುಳಸಿದ್ಧ? ॥ ೬೪೪ ॥

ಮಧ್ಯರಾತ್ರಿಯು ಈಗ ಮದ್ಯರಾತ್ರಿಯೆ ನಿಜದಿ।
ಮದ್ಯವೇ ಸಭ್ಯತೆಯ ಮಾನದಂಡ।
ವಿದ್ಯೆ ಕಲಿತವರಿರಲಿ, ಕಲಿಯದವರೇ ಇರಲಿ,
ಮದ್ಯದಾರಾಧಕರೆ– ಮರುಳಸಿದ್ಧ ॥ ೬೪೫ ॥

ಶುದ್ಧ ಗಾಳಿಯು ವಿರಳ, ಶುದ್ಧ ನೀರೂ ವಿರಳ,
ಶುದ್ಧ ಆಹಾರವೋ, ಇನ್ನಷ್ಟು ವಿರಳ!
ಸಿದ್ಧಿಯನು ಗಳಿಸಿದೆವು ಉದ್ಯೋಗಕ್ರಾಂತಿಯಲಿ,
ನಿದ್ರೆಗೂ ಬರಬಂತು– ಮರುಳಸಿದ್ಧ ॥ ೬೪೬ ॥

* * *

ಮರಣ

ಸಾವು ಹಗೆಯೆಂದವನ ಜೀವನವು ವ್ಯಥೆಯ ಕಥೆ,
ಸಾವು ಸಖನೆಂದವನ ಬದುಕು ಸೊಗಸು।
ಜೀವ ಸಾವಿನ ಕೊಡುಗೆ, ಸಾವು ಜೀವನದಡುಗೆ,
ಸಾವಿಗೂ ಶರಣೆನ್ನೊ– ಮರುಳಸಿದ್ಧ ॥ ೬೪೭ ॥

ಹೊರಟ ದಾರಿಯು ನಮ್ಮ ನಾಕಕ್ಕೊ, ನರಕಕ್ಕೊ
ಕರೆದೊಯ್ಯುವುದೊ ಇಲ್ಲೊ, ಅರಿತವರು ಯಾರು?
ಇರುವುದೊಂದೇ ಗಟ್ಟಿ: ಸರುವರೂ ಕೊನೆಯಲ್ಲಿ
ತೆರಳುವರು ಮಸಣಕ್ಕೆ– ಮರುಳಸಿದ್ಧ ॥ ೬೪೮ ॥

ಮೊದಲ ಸಲ ಬಸಿರಾದ ಮೇದಿನಿಯ ಮೊದಲ ಸ್ತ್ರೀ
ಎದೆಯೊಡೆದು 'ಮುಂದೇನು?' ಎಂದಿರಳೆ? ಮುಂದೆ
ಉದರದೊಳಗಣ ಪದುಮ ಎದೆಯ ಪದುಮವ ಸೀಪೆ
ಮುದದಿ ಮೈಮರೆದಿರಳೆ– ಮರುಳಸಿದ್ಧ ॥ ೬೪೯ ॥

ಯಾವ ಕತದೊಳೆ ಬರಲಿ, ಸಾವು ಸಾವೇ ಅಲ್ತೆ–
ಹೂವು ತಾಕಿಯೆ ಬರಲಿ, ಹಾವಾಗಿ ಬರಲಿ।
ಆವುದೇ ಇರಲಣ್ಣ ತೋರ್ಕೆಗೆ ನಿಮಿತ್ತವು,
ಸಾವನ್ನು ಸ್ವಾಗತಿಸು– ಮರುಳಸಿದ್ಧ ॥ ೬೫೦ ॥

ನಡೆವ ದಾರಿಯು ಒಂದೆ, ನಡೆಯುವವರೆಷ್ಟು ವಿಧ?
ಎಡಹುತ್ತ ನಡೆವವರು, ವಿವಿಧ ವಾಹನವ।
ನಡೆಸುತ್ತ ನಡೆವವರು, ಬಿದ್ದಳಿದು ಯಮನೂರ್ಗೆ
ನಡೆವವರು ಎಷ್ಟು ಜನ– ಮರುಳಸಿದ್ಧ ॥ ೬೫೧ ॥

ನಷ್ಟವಾಗುವುದಿಲ್ಲ, ಸೃಷ್ಟವಾಗುವುದಲ್ಲಿ,
ಸೃಷ್ಟಿಲಯಗಳದೃಷ್ಟ ರಾಟಣವು ಸತತ।
ದೃಷ್ಟವಾದುದ ನೂತು, ಮತ್ತೆ ಹಂಜಿಯ ಮಾಡಿ
ಮತ್ತೆ ನೂಲುವುದಿಲ್ಲಿ– ಮರುಳಸಿದ್ಧ ॥ ೬೫೨ ॥

ಭಾರವೇ ಇಲ್ಲದಿಹ ಪಾರಿಜಾತದ ಹೂವು
ಜಾರುವುದು ಮೆಲ್ಲನೆ ಮೆಲ್ಲೆಲರು ಸೋಂಕೆ।
ಪೂರ ಮಾಗಿದ ಹಣ್ಣು ಕಳಚುವುದು ತುಂಬನು,
ಪಾರಮಾರ್ಥಿಕರಂತೆ– ಮರುಳಸಿದ್ಧ ॥ ೬೫೩ ॥

ಜಲಪಾತದೊಡನೆಯೇ ಜಿಗಿವ ಮೀನುಗಳಲ್ಲಿ
ಉಳಿವುವೆನಿತೋ, ಸತ್ತು ಕೊಳೆವುವೆನಿತೋ!
ಛಲದಿಂದ ಬದುಕುವುದೆ ಗುರಿ, ಅಳಿವು ಉಳಿವುಗಳು
ತಲೆ ಕೆಡಿಸದಿರಲಿಲ್ಲಿ– ಮರುಳಸಿದ್ಧ ॥ ೬೫೪ ॥

ಯೌವನವು ಬೇಕೆನಗೆ, ವೃದ್ಧಾಪ್ಯ ಬೇಡನೆನೆ
ಜೀವನವು ಕೇಳುವುದೆ? ಅನಿವಾರ್ಯವೆರಡೂ!
ಸಾವಿಗೂ ಸನ್ನದ್ಧನಾಗಿಯೇ ಬದುಕಿಲ್ಲಿ–
ನೋವಿರಲಿ, ನಲವಿರಲಿ– ಮರುಳಸಿದ್ಧ ॥ ೬೫೫ ॥

ನೆರಳು ಬೆಳಕಿನ ಆಟಕರ್ಥವಿಹುದೇ? ಅಂತೆ
ಮರಣ ಜೀವನದಾಟಕರ್ಥ ಮುದವು।
ಇರುವನಿತು ದಿನ ಬಾಳೆ ಆಟವೊಂದೆಂದಾಡಿ
ತೆರಳುವುದು ನಸುನಗುತ– ಮರುಳಸಿದ್ಧ ॥ ೬೫೬ ॥

ಹಿಂದಿರುಗುತಿವೆ ಪ್ರಾಣಿಗಳು ತಮ್ಮ ಹಳ್ಳಿಗೆ,
ಹಿಂದಿರುಗುತಿವೆ ಹಕ್ಕಿಗಳು ಗೂಡಿಗೆ।
ಸಂಧ್ಯೆಯಲಿ; ನೀನು ಸಹ ಬಾಳಸಂಜೆಯೊಳಿರುವೆ
ಹಿಂದಿರುಗು ಮೂಲಕ್ಕೆ– ಮರುಳಸಿದ್ಧ ॥ ೬೫೭ ॥

ಕುಸುಮಮಂಜರಿ ಮೇಲೆ, ಅಸ್ಥಿಪಂಜರ ಕೆಳಗೆ
ಮಸಣ ಸಂಕೇತಿಸದೆ ಬಾಳ ತಿರುಳ?
ಅಸುವಿನಾರೈಕೆಯಲೆ ನಶಿಸಿ ಹೋಗುವ ಕಾಯಾ
ಹಸುಗೂಸನೀಯದೆ– ಮರುಳಸಿದ್ಧ ॥ ೬೫೮ ॥

ಮಸಣವೆಂದೆನೆ ಹೆದರಿ ಮರಣದೊಳೆ ಹೂತಿರುವ
ಕುಸುಮ ಕುಲವನು ನೋಡಿ ಹಿಗ್ಗದೆ ಜೀವ ?
ಅಸು ರಸವು ಸಾವು ವಿಷವೆನ್ನದಿರು ಭಾವಿಸಲು
ವಿಷ ಅಸಲು, ರಸ ಬಡ್ಡಿ– ಮರುಳಸಿದ್ಧ ॥ ೬೫೯ ॥

ಮತ್ತೆ ಈ ಲೋಕಕ್ಕೆ ಬರುವಿಯೋ, ಇಲ್ಲವೋ,
ಕರ್ತವ್ಯವಾವುದನು ಉಳಿಸಬೇಡ।
ಸುಪ್ತ ಶಕ್ತಿಯ ಬೆಳೆಸು, ಲೋಕಸೇವೆಗೆ ಬಳಸು,
ತೃಪ್ತಪಯಣವ ಬೆಳೆಸು– ಮರುಳಸಿದ್ಧ ॥ ೬೬೦ ॥

* * *

ಸ್ವದೇಶ ಚಿಂತನ

ಸಗ್ಗಿಗರಿಗೇ ಸಗ್ಗವಾದೀತು ಭಾರತವು
ಅಗ್ಗಳರು ಹೆಚ್ಚಿದರೆ ಹಿಂದಿನಂತೆ।
ಅಗ್ಗವಾಗಿದೆಯೀಗ ಅಲ್ಪರಾಧಿಕ್ಯದಲಿ
ಅಗ್ರಣಿಯೆ ಆಗಲಿದು– ಮರುಳಸಿದ್ಧ ॥ ೬೬೧ ॥

ಭಾರತದಿ ಭವ್ಯತೆಗೆ ದಿವ್ಯತೆಯು ಕೂಡಿಹುದು,
ಸಾರತರವಾದುದೆಲ್ಲವು ಹುಟ್ಟಿತಿಲ್ಲಿ।
ಬೇರಾವ ದೇಶದಲಿ ಇನಿತೆಲ್ಲ ಒಂದು ಕಡೆ
ಸೇರಿ ಶುಭ ಬೀರುತಿವೆ– ಮರುಳಸಿದ್ಧ? ॥ ೬೬೨ ॥

ಚೌಕಟ್ಟು ಚಿನ್ನದ್ದು, ಹಳದೆಂದು ಬಿಸುಡುವುದೆ ?
ಹಾಕು ಅದರೊಳು ನಿನಗೆ ಬೇಕಾದ ಚಿತ್ರ।
ಲೋಕೋತ್ತರಂ ಭವ್ಯಭಾರತ ಪರಂಪರೆಯು–
ಜೋಕೆಯಿಂದುಳಿಸಿಕೋ– ಮರುಳಸಿದ್ಧ ॥ ೬೬೩ ॥

ದೇಶಕ್ಕು ದೇಹವಿದೆ, ಪ್ರಾಣವಿದೆ, ಆತ್ಮವಿದೆ–
ಸೋಸಿ ನೋಡಿದನೊಮ್ಮೆ ದೇಶಬಂಧು
ನೈಸರ್ಗಿಕವೆ ದೇಹ, ಆದರ್ಶಗಳೆ ಪ್ರಾಣ,
ಸಾಂಸ್ಕೃತಿಕವೇ ಆತ್ಮ– ಮರುಳಸಿದ್ಧ ॥ ೬೬೪ ॥

ಈ ಮೂರಕೂ ಬೇಕು, ಅನ್ನ– ಚಿಂತನ– ಮೌಲ್ಯ;
ಈ ಮೂರನೂ ಗಳಿಸಿ ಬೆಳೆಸು ದೇಶವನು।
ಕ್ಷೇಮವಿದರೊಳೆ ನಿನಗೆ, ಜನಕೆ, ದೇಶಕೆ, ಜಗಕೆ,
ಏ ಮಾತೊ ಎನ್ನದಿರು– ಮರುಳಸಿದ್ಧ ॥ ೬೬೫ ॥

ದೇಶವೇ ಗುರಿ ನಿನಗೆ, ದೇಶವೇಕೈಕ ಗುರಿ,
ಭಾಷೆಯೂ ಗುರಿ ಜ್ಞಾನವಿಕಾಸಕ್ಕೆ, ಜಗಕೆ।
ಲೇಸನೆಸಗುವ ಮಣಿಹಗಳೆ ಗುರಿಯು ಗುರಿಗಳಲಿ,
ದೋಷ ನಾಶನ ಗುರಿಯು– ಮರುಳಸಿದ್ಧ ॥ ೬೬೬ ॥

ನನ್ನ ದೇಶವೆ ನನ್ನ ಅಭ್ಯುದಯಕಾಧಾರ,
ನನ್ನ ದೇಶದ ಜನರ ಸೇವೆ ಸದ್ಧರ್ಮ।
ಅನ್ಯರಿಂ ದೇಶಕ್ಕೆ ಧಕ್ಕೆ ಬರೆ ಎದುರಿಸುವ
ಧನ್ಯತೆಯು ನನಗಿರಲಿ– ಮರುಳಸಿದ್ಧ ॥ ೬೬೭ ॥

ದೇಶಕ್ಕೆ ಲೇಸಾಗೆ ಎಲ್ಲರಿಗು ಲೇಸುಂಟು,
ದೇಶವೇ ಹಾಳಾಗೆ ಯಾರಿಗೇನುಂಟು?
ಮೀಸಲಾಗಲಿ ನಿನ್ನ ಜೀವನದ ಕ್ಷಣಕ್ಷಣವು,
ದೇಶದೇಳಿಗೆಗಾಗಿ– ಮರುಳಸಿದ್ಧ ॥ ೬೬೮ ॥

ನಟ್ಟಿರುಳಿನೊಳು ಪಡೆದ ಬಿಡುಗಡೆಯು ಕಾರಿರುಳ
ಕತ್ತಲೆಗೆ ಮರುಳಾಯ್ತೆ? ಬೆಳಕು ಬೇಡಾಯ್ತೆ?
ಸತ್ತುಹೋಗಿದೆ ನೀತಿ! ಎತ್ತ ಹೋಯಿತೊ ಪ್ರೀತಿ!
ಸುತ್ತಲೂ ದುರ್ಗತಿಯು– ಮರುಳಸಿದ್ಧ ॥ ೬೬೯ ॥

ಉನ್ಮತ್ತ ಅಧಿಕಾರ, ಉನ್ನತ್ತ ಸರಕಾರ,
ಉನ್ಮತ್ತ ಸತ್ತೆಗಳ ನಾನಾವತಾರ!
ಜನ್ಮವಿತ್ತವರನ್ನೆ ತುಳಿವಂತೆ, ಜನತೆಯನೆ
ಕೊಲ್ಲುವಾಟವ ನೋಡೊ– ಮರುಳಸಿದ್ಧ ॥ ೬೭೦ ॥

ರೂಪಗೊಳ್ಳಲೆಯಿಲ್ಲ ರಾಷ್ಟ್ರೀಯ ಚಾರಿತ್ರ್ಯ,
ರೂಪುಗೊಳ್ಳುವುದೆಂತು ರಾಷ್ಟ್ರೀಯ ಪ್ರಜ್ಞೆ?
ಧೂಪಹಾಕಿದ ಹಾಗೆ ಮರುಳುಗಳ ಮುಂದೆ, ದು–
ರ್ವ್ಯಾಪಾರಗಳೆ ಸುತ್ತು– ಮರುಳಸಿದ್ಧ ॥ ೬೭೧ ॥

ಸರಕಾರ ಸರಗುಣಿಕಿ, ಬಲ್ಲಿದರು ಬಲ್ಲವರು
ಸರಳಾಗಿ ಬಿಚ್ಚುವರು ಮೊದಲ ಗಂಟು।
ಬರಿಗೈಯ ಬಡವನೋ ಬಿಡಿಲಾಗದೆ ಪಡೆವ
ಪರಿಪರಿಯ ತೊಡಕುಗಳ– ಮರುಳಸಿದ್ಧ ॥ ೬೭೨ ॥

ಒಂದು ಆವುಗೆ ಬೀಳೆ ಇನ್ನೊಂದನೂ ಕೆಳಗೆ
ಗಾಂಧೀಜಿ ನೂಕಿದರು ರೈಲಿನಿಂದ
ಒಂದು ಜೋಡಾರಿಗೋ ಬಡವರಿಗೆ ಸಿಕ್ಕುವುದು
ಎಂದು ಸಂತಸದಿಂದ– ಮರುಳಸಿದ್ಧ ॥ ೬೭೩ ॥

ಇಂಥ ಪರಮೋನ್ನತನ, ನಮ್ಮ ರಾಷ್ಟ್ರದಪಿತನ,
ಮುಂತೆ ಕಾಣದ ಧೀರ ಸತ್ಯವ್ರತನ।
ಗಂತುವನೆ ಮರೆತೆವು! ಅಂತೆ ಸುತ್ತಿದೆ ಶನಿಯ
ಸಂತಾನ ನಮ್ಮನು– ಮರುಳಸಿದ್ಧ ॥ ೬೭೪ ॥

ಅಧಿಕಾರವಿರದಾಗ ಸರ್ಕಸಿನ ಸಿಂಹಗಳು,
ಅಧಿಕಾರ ದೊರೆತೊಡನೆ ನಿಜ ಸಿಂಹ ನಮ್ಮ।
ಅಧಿಕ ಮುಂದಾಳುಗಳು, ವಿಧಿಯಿತ್ತ ಗೂಳಿಗಳು!
ಸದೆಯಿವರ ಸೊಕ್ಕನ್ನು– ಮರುಳಸಿದ್ಧ ॥ ೬೭೫ ॥

ಸಣ್ಣ ತಪ್ಪಾದರೂ ತಾವಾಗಿ ಅಧಿಕಾರ–
ವನ್ನು ಬಿಡುವರು ಬೇರೆ ದೇಶಗಳಲಿ।
ತಿಣ್ಣ ತಪ್ಪಾದರೂ ಕುರ್ಚಿಗಂಟುವ ಕುಟಿಲ
ಹುನ್ನಾರ ಭಾರತದಿ– ಮರುಳಸಿದ್ಧ ॥ ೬೭೬ ॥

ಅಧಿಕಾರವನು ತಾವೆ ಬಿಡುವವರ ತೋರಿಸು,
ನಿಧಿಯನೆಡಹಿಯು ಮುಂದೆ ಸಾಗುವರ ತೋರು।
ವಿಧಿಯ ಹೆಗಲನೆ ಏರಿ ಪಯಣಿಸುವರನು ತೋರು,
ಅಧಿಕಗೊಳಿಸಿಂಥವರ- ಮರುಳಸಿದ್ಧ ॥ ೬೭೭ ॥

ವಾದಗಳ ಬೆಳೆಸಿದೆವು, ಭೇದಗಳ ಗುಣಿಸಿದೆವು.
ಹಾದಿ ಸಿಕ್ಕಿತೆ ಜನರ ಕಷ್ಟಗಳ ಕಳೆಯೆ ।
ಏದುಸಿರು ಬಿಡುತಿರುವ ಜನಕೆ ಕುಡಿಸುವಿರೇನು
ಬೋಧೆಯಮೃತವ ನೀವು- ಮರುಳಸಿದ್ಧ? ॥ ೬೭೮ ॥

ಇಲ್ಲದಿರೆ ಅಡ್ಡಿಗಳು ಸಲ್ಲುತಿರೆ ಅವಕಾಶ,
ಇಲ್ಲದವರಾದಾರು ಉಳ್ಳವರು ಒಮ್ಮೆ।
ಉಳ್ಳವರ ಕಪಿಮುಷ್ಟಿ ಸಡಿಲಿಸದ ಸರಕಾರ
ಇಲ್ಲದಂತಿದ್ದರೂ- ಮರುಳಸಿದ್ಧ ॥ ೬೭೯ ॥

ಬಡವ ಬಂದನು ಬಾಯ್ಗೆ, ಬಂತೆ ಬಡವರ ಕೈಗೆ
ನಡೆಸುವವಕಾಶವು- ಸರಕಾರವನ್ನು?
ನುಡಿಯಲ್ಲಿ ಬಡವನು, ಪಡೆವಲ್ಲಿ ಹಣವಂತ:
ಬುಡಮೇಲು ಮಾಡಿದನು- ಮರುಳಸಿದ್ಧ ॥ ೬೮೦ ॥

ಆಡಳಿತಯಂತ್ರವೆಂದಾರು ಕರೆದರೊ, ಸೂಕ್ತ-
ವಾದ ಹೆಸರಿದು! ಲಂಚದೆಣ್ಣೆಯನ್ನು।
ತೀಡಬೇಕಿದರೆಲ್ಲ ಭಾಗ, ಬಿಡಿ ಭಾಗಕ್ಕೆ;
ನೀಡದಿರೆ ನಿಶ್ಚಲವು- ಮರುಳಸಿದ್ಧ ॥ ೬೮೧ ॥

ಕೊಕ್ಕೆ ಹಾಕುವ ಕಲೆಯ, ರೊಕ್ಕ ತಿನ್ನುವ ಕಲೆಯ,
ಠಕ್ಕ ಪ್ರೀತಿಯ ಕಲೆಯ, ಕೊಲೆಯ ಕಲೆಯ।
ಸಿಕ್ಕಂತೆ ಬೆಳೆಸಿಹೆವು, ಸಿಕ್ಕಂತೆ ಬಳಸುವೆವು,
ದಿಕ್ಕಾರು ಬಡಜನಕೆ- ಮರುಳಸಿದ್ಧ? । । ೬೮೨ ॥

ಶಶಿತಾರೆಗಳಿಗಿಲ್ಲ, ಗ್ರಹಗೋಲಗಳಿಗಿಲ್ಲ,
ಸಸಿ ವೃಕ್ಷಗಳಿಗಿಲ್ಲ ರಜೆಯೆಂಬುದು।
ತುಸು ನೆಪವು ಸಿಕ್ಕರೂ ರಜೆಯ ಬೇಡುವರಿಂದ
ಸಸಿನವಪ್ಪುದೆ ದೇಶ- ಮರುಳಸಿದ್ಧ? ॥ ೬೮೩ ॥

ಸಿಬ್ಬಂದಿಗೇ ಸಿಂಹಪಾಲು ಹೋಗುತ್ತಿರಲು
ಮಬ್ಬಲ್ಲವೇ ಜನರನುದ್ಧರಿಪ ಮಾತು?
ಹಬ್ಬ ಹಲವರಿಗಿಲ್ಲಿ, ಉಬ್ಬೆಗವು ಬಹುಜನಕೆ!
ಬೊಬ್ಬೆ ಸರ್ವೋದಯದ– ಮರುಳಸಿದ್ಧ ॥ ೬೮೪ ॥

ಕೇಳುವರು ಹೇಳುವುದ ತಾವು ಸಹ ಇತರರಿಗೆ
ಹೇಳಲೆಂದಲ್ಲದೆ ಪಾಲಿಸಲು ಅಲ್ಲ!
ಹೇಳುವರೆ ಎತ್ತಲೂ; ಪಾಲಿಸುವರಿಲ್ಲದಲೆ
ಹಾಳಾದುದಾಡಳಿತ– ಮರುಳಸಿದ್ಧ ॥ ೬೮೫ ॥

ಕರ ಕೊಡಲಿಕಾಗದೆಯೆ ಸುರಿಯುತಿರೆ ಕಣ್ಣೀರ
ಕರಗದೆದೆಯಧಿಕಾರಿ ಜರಬಿನೊಡನೆ!
'ಸುರಿಯದಿರಿ ಕಂಬನಿಯ ಹೆಚ್ಚಾಗಿ! ಕಂಬನಿಗು
ಕರ ಹಾಕಬಹುದೆಂದ– ಮರುಳಸಿದ್ಧ ॥ ೬೮೬ ॥

ಶೋಷಣೆಯನಳಿಸದಿಹ ಸ್ವಾತಂತ್ರ್ಯದಿಂದೇನು?
ಭಾಷಣದ ಮಳೆ ಸಾಕೆ ಬಡತನದ ಹೊಲಕೆ?
ದೇಶದ, ವಿದೇಶಗಳ ಸಾಲ ಸಾಕೇ ದೇಶ–
ವಾಸಿಗಳ ತಲೆ ಮೇಲೆ– ಮರುಳಸಿದ್ಧ? ॥ ೬೮೭ ॥

ಸ್ವಾತಂತ್ರ್ಯವನ್ನೀಯೆ ತಲೆಯ ಮೇಲಡರುವರು,
ಸ್ವಾತಂತ್ರ್ಯ ಕಸಿದುಕೊಳೆ ಕಾಲಿಗೆರಗುವರು!
ಪ್ರೇತವಾಗುವುವಿಲ್ಲಿ ಸ್ವಾತಂತ್ರ್ಯ ಸಮತೆಗಳು
ಜಾತಿಯೊಂದನೆ ಉಳಿಸಿ– ಮರುಳಸಿದ್ಧ ॥ ೬೮೮ ॥

ಜನತಂತ್ರವನು ನೀಡೆ ಹುಲಿಯಹರು! ತುರ್ತುಸ್ಥಿತಿ
ಜನಿಸಿದರೆ ಇಲಿಯಾಗಿ ಬಿಲವ ಸೇರುವರು!
ಧನವೆಂಥದೇ ಇರಲಿ, ಪೂಜಿಪರು! ಜನರನ್ನು
ದನವೆಂದು ತಿಳಿಯುವರೊ– ಮರುಳಸಿದ್ಧ! ॥ ೬೮೯ ॥

ಆಯ್ಕೆಗೊಂಡಿಳಿಯುವರು ಬಸ್ಸು ನಿಲ್ದಾಣದಲಿ
ನಾಲ್ಕೆ ತಿಂಗಳುಗಳಲಿ ಆಕಾಶಯಾನ!
ಬಯ್ಕೆಗಳು ತೀರುವುವು ಒಂದೆ ವರ್ಷದಿ, ಉಳಿದ
ನಾಲ್ಕು ವರ್ಷವು ಲೂಟಿ– ಮರುಳಸಿದ್ಧ! ॥ ೬೯೦ ॥

ಅರಸರಿಲ್ಲೆನ ಬೇಡ, ಅವರು ಕನಸುಗಳಲ್ಲಿ
ಅರಸಿಯೂ ಕಾಣದ ವಿಲಾಸಗಳನು।
ಮರೆಸುವರು ಹಲಕೆಲವು ಜನತಂತ್ರ ಮಂತ್ರಿಗಳು!
ಕೊರಚುವರು ಅರಸರನು– ಮರುಳಸಿದ್ಧ ॥ ೬೯೧ ॥

ಸತ್ಯನೀತಿಯ ಮಾತು ಸತ್ತೆ ದೊರೆಯುವ ತನಕ;
ಸತ್ತೆ ದೊರೆಯುತ್ತಲೇ ಸೈತಾನರಿವರು!
ಸತ್ಕಾರ ಹಾರಗಳ ಪಿತ್ಥ ತಲೆಗೇರೆ, ಮತ–
ವಿತ್ತವರಮರೆಯುವರು– ಮರುಳಸಿದ್ಧ ॥ ೬೯೨ ॥

ಯಾರ ಹೆಸರನೊ ಹೇಳಿ ಯಾರೋ ದೋಚುವರಿಲ್ಲಿ,
ಸೂರೆ ಹೊಡೆವವರಿಗೇ ಕಾಲವಿಲ್ಲಿ!
ನೇರ ಬಾಳಿನ ನರಗೆ ಸೋರುತಿಹ ಕುಟಿ, ರಾಜ–
ಕಾರಣಿಗೆ ಮಹಲಿಲ್ಲಿ– ಮರುಳಸಿದ್ಧ ॥ ೬೯೩ ॥

ನಾರದನು ಇದ್ದನೋ, ಇಲ್ಲವೋ, ಈಗಂತು
ನಾರದರೆ ಎಲ್ಲೆಲ್ಲು ಶಕುನಿಯರೆ ಸುತ್ತು!
ಊರಿಗೊಬ್ಬುತ್ತರನು, ಪುರಕೊಬ್ಬ ಕೌರವನು,
ಕೇರಿಗೊಬ್ಬ ಶಿಖಂಡಿ– ಮರುಳುಸಿದ್ಧ ॥ ೬೯೪ ॥

ತಮ್ಮ ಬೀಡಿಗೆ ತಾವೆ ಬೆಂಕಿ ಹಚ್ಚುವರನ್ನು
ನಮ್ಮ ದೇಶದಿ ಮಾತ್ರ ನೋಡಬಹುದು!
ಹೆಮ್ಮರದ ರೆಂಬೆಯಲಿ ನಿಂತು ಅದನೇ ಕಡಿವ
ದುರ್ಮತಿಗಳಿಲ್ಲಿಹರು– ಮರುಳಸಿದ್ಧ ॥ ೬೯೫ ॥

ಹತ್ತುರೂಪಾಯಿಗಳ ಜನಹಿತದ ಕಾರ್ಯದಾ
ತುತ್ತೂರಿ ಊದಲಿಕೆ ನೂರಾರು ಖರ್ಚು
ಪೂರ್ತಿ ಹಣ ಹೋಗದು ಹೆಸರಿಸಿದ ಕೆಲಸಕ್ಕೆ,
ಕೆತ್ತುವರು ಬೇರಿಹರು– ಮರುಳಸಿದ್ಧ ॥ ೬೯೬ ॥

ಶಾಸಕರ ಆರಿಸುವ ಮತದಾರರಲೆ ಬರಲಿ
ಶೋಷಕರ ಕಿವಿಹಿಂಡಿ ನೂಕುವಧಟು।
ದೇಶವಿವರಿಂದಲೇ ಉಳಿದೀತು, ಶಾಸಕರ
ದಾಸರಿಂದಲ್ಲೆಂದ– ಮರುಳಸಿದ್ಧ ॥ ೬೯೭ ॥

ಎಲ್ಲಿಂದ ಬರುವುದೋ ಇಲ್ಲದವರಲು ಹಣವು
ಗೆಲ್ಲಲು ಚುನಾವಣೆಯ, ಮೆರೆಯೆ ಅಡ್ಡ!
ಪಲ್ಲಕ್ಕಿಯಲಿ ಕುಳಿತು, ರ್‍ಯಾಲಿಗಳು ಸೇರಿಸುತ
ಗುಲ್ಲು ಗದ್ದಲಗೈಯೆ– ಮರುಳಸಿದ್ಧ ॥ ೬೯೮ ॥

ಕೇಡನೇ ಬೆಳೆಯುತಿಹ ಆರ್ಥಿಕ ವ್ಯವಸ್ಥೆಯಿದೆ,
ರಾಡಿಯನೆ ಎರಚುತಿಹ ರಾಜಕಾರಣವು!
ಮೂಢತನವನೆ ಬೆಳೆದ ಧರ್ಮಗುರುಗಳು– ನಾಡು
ಕಾಡಾಯ್ತು ಒಟ್ಟಿನಲಿ ಮರುಳಸಿದ್ಧ! ॥ ೬೯೯ ॥

ಕಾಲುವೆಯ ತೋಡದೆಯೆ ಅಣೆಕಟ್ಟು ಕಟ್ಟಿದರು,
ಕಾಲುವೆಗಳಿವೆ ಸಿದ್ಧ– ಅಣೆಕಟ್ಟೆ ಇಲ್ಲ!
ಮೇಳವಿಸಿದಲಿ ಇವು ಅಚ್ಚುಕಟ್ಟಿನೊಳುಂಟು
ಕಾಳಹತ್ತಿಯ ಮಣ್ಣು– ಮರುಳಸಿದ್ಧ! ॥ ೭೦೦ ॥

ಯೋಜನೆಯ ಹಾಕಿದರು ಸಂಯೋಜನೆಯನುಳಿದು
ಯೋಜಕರೆ ನಿಷ್ಪ್ರಯೋಜಕರೆನ್ನುವಂತೆ!
ಯಾಜಿಗೇ ಗೊತ್ತಿಲ್ಲ ಯಜ್ಞವಾವುದು ಎಂದು!
ಪೂಜೆ ಫಲಿತಾಂಶವು– ಮರುಳಸಿದ್ಧ ॥ ೭೦೧ ॥

ಜಾತಿಗಳ ಜೋಡಿಸಲು, ಕೂಡಿಸಲು ಹೋರಾಡಿ
ಸೋತವರೆ ಹೆಚ್ಚಿಲ್ಲಿ ಭರತಭೂಮಿಯಲಿ!
ಜಾತ್ಯತೀತತೆಯೆಂಬ ಹೂವಿನಿಂ ಹೊರಡುತಿಹ
ನಾತ ಜಾತೀಯತೆಯೆ– ಮರುಳಸಿದ್ಧ ॥ ೭೦೨ ॥

ಮಸಣಗಳನಗೆದಗೆದು ಹೊಸ ಜಾತಿ ಕುಲಗಳಿಗೆ
ಅಸುವನೀಯುತ್ತಿಹಿರಿ; ಎಚ್ಚರಿಕೆ ನಿಮಗೆ!
ತುಸುಲಾಭದಾಸೆಯಲಿ ವಿಷವಾಯು ಹರಡದಿರಿ–
ಉಸಿರ್ಗಟ್ಟಿ ಸತ್ತೀರಿ– ಮರುಳಸಿದ್ಧ ॥ ೭೦೩ ॥

ನನಗೊಂದು ನಿನಗೊಂದು ಮನೆಗೊಂದು ಜಾತಿಯೆ?
ಮನು ನಿನಗೆ ನೀನಾಗೆ ನಿನಗೆಲ್ಲಿ ಜಾತಿ?
ಜನವ ವಿಘಟಿತಗೊಳಿಪ ಜಾತಿಗಳ ಕೊಂಡೊಯ್ದು
ವನಧಿಯೊಳಗೊಗೆಯೆಂದ– ಮರುಳಸಿದ್ಧ ॥ ೭೦೪ ॥

ಎಲ್ಲ ಮಾರಾಟಕಿದೆಯಿಲ್ಲಿ ಭಾರತದಲ್ಲಿ;
ದಳ್ಳಾಳಿಗಳು ಉಂಟು ಎಲ್ಲ ಕಡೆಗೆ।
ಉಳ್ಳವರು ಸಹ ಉಂಟು ಕೇಳಿದಷ್ಟೂ ಕೊಟ್ಟು
ಕೊಳ್ಳಲೆಲ್ಲವನಿಲ್ಲಿ– ಮರುಳಸಿದ್ಧ ॥ ೭೦೫ ॥

ಅರಮನೆಗಳೆಲ್ಲಿಹವೊ, ಅರಮನೆಯನೇಳಿಸುವ
ಸಿರಿಮನೆಗಳೇಳುತಿವೆ ನಗರಗಳಲಿ!
ಮುರುಕು ಗುಡಿಸಲೊಳಿರುವ ಬಡವರಿಗೆ ಕಿರುಮನೆಯು
ದೊರೆವನಕ ತಡೆಯಿವನು– ಮರುಳಸಿದ್ಧ ॥ ೭೦೬ ॥

ಮನೆಗೊಬ್ಬರಿಗೆ ಕೆಲಸ ದೊರೆವನಕ ಒಂದೆ ಮನೆ
ಅನಧಿಕಾರಿಯು ಹಲವು ಕೆಲಸ ಕಬಳಿಸಲು।
ಕನಸು ಸರ್ವೋದಯವು ಮನೆಗೊಬ್ಬ ಪಡೆಯದಿರೆ
ಅನುರೂಪ ಕೆಲಸವನು– ಮರುಳಸಿದ್ಧ ॥ ೭೦೭ ॥

ರಸವನ್ನು ರಕ್ಷಿಸುವ ಸಿಪ್ಪೆ ಪಡೆಯುವುದೇನ?
ಕಸದ ಬುಟ್ಟಿಯ ತಾನೆ? ಸಿರಿವಂತರಿರವ।
ರಸಮಯವನಾಗಿಸುವ ದುಡಿವವರು ಬಡವರು
ಹಸಿವೆಯನೆ ಪಡೆಯುವರು– ಮರುಳಸಿದ್ಧ ॥ ೭೦೮ ॥

ಬಸಿರಿನೊಳೆ ಕಸ್ತೂರಿ ಒಸರಲೇನಾಮೃಗಕೆ
ಹಸಿವೆ ಹೋಹುದೆ? ಆದರ ಹೊಟ್ಟೆ ತುಂಬೆ।
ಹಸುರು ಹುಲ್ಲೇ ಬೇಕು! ಅಸುವಾವುದಿದ್ದರೂ
ಅಶನಕ್ಕೆ ಮೊದಲ ಮಣೆ– ಮರುಳಸಿದ್ಧ ॥ ೭೦೯॥

ಹೊಟ್ಟೆಯೊಳಗಣ ಸಿಟ್ಟು ರಟ್ಟೆಗಿಳಿಯುತ್ತಿಹುದು
ಸುಟ್ಟುಸುಣ್ಣಾಗಿರುವ ಬಡವರಲ್ಲಿ।
ಕೆಟ್ಟು ಹೋಗುವ ಮೊದಲೆ ಕೊಟ್ಟುಬಿಡು ಅವರಿಗೂ
ಸೆಟ್ಟಿ– ಸತ್ತಾಧಾರಿ – ಮರುಳಸಿದ್ಧ ॥ ೭೧೦ ॥

ಪರಮಾಧಿಕಾರವನು ಜನರಿಗಿತ್ತುದು ಸರಿಯೆ,
ಸರಿಯೆ ಸಾಕ್ಷರತೆಯನು ನೀಡದಿಹುದು?
ತರವಲ್ಲ ಜನತೆಯನು ಅಜ್ಞಾನದೊಳಗಿರಿಸಿ
ತಿರಿಯುವುದು ಮತಗಳನು– ಮರುಳಸಿದ್ಧ ॥ ೭೧೧ ॥

ಸಾಕ್ಷರತೆಯಿಲ್ಲದಿಹ ಸ್ವಾತಂತ್ರ್ಯದಿಂದೇನು?
ಅಕ್ಷಿ ವಿರಹಿತ ಮುಖವು; ಬೆಳೆಯೆ ಬರದ
ರುಕ್ಷಭೂಮಿಯು, ಉಭಯ ಪಕ್ಷವಿಲ್ಲದ ಪಕ್ಷಿ,
ಅಕ್ಷವಿಲ್ಲದ ರಥವು– ಮರುಳಸಿದ್ಧ ॥ ೭೧೨ ॥

ಕೈಯು ಮಾಡುವುದನ್ನು ಯಂತ್ರಕೊಪ್ಪಿಸೆ ನಿತ್ಯ
ಸಾಯುತಿದೆ ಬಡಜನತೆ ದುಡಿತ ತಪ್ಪಿ!
ದಾಯವೆಲ್ಲರಿಗಿರದ ಆದಾಯದಿಂ ಜನತೆ
ಬೇಯುವುದು ತಪ್ಪುವುದೆ– ಮರುಳಸಿದ್ಧ? ॥ ೭೧೩ ॥

ಕೋಟಿ ರಾಟಿಗಳನ್ನು ನುಂಗಿ ಬಂದಿದೆ ಗಿರಣಿ
ಮೇಟಿಗಳ ಮುರಿದಿಕ್ಕಿ ಮುಂದೇನು ಬಹುದೊ?
ಊಟವನು ನೀಡುವರ ಬೇಟಿ ಬೆಂಕಿಯ ಕೂಡ
ಆಟವಾಡಿದ ಹಾಗೆ– ಮರುಳಸಿದ್ಧ ॥ ೭೧೪ ॥

ಉತ್ಪತ್ತಿ ಬೆಳೆದನಿತು ವಿತರಣೆಯು ಬೆಳೆಯದಿರೆ
ಕುತ್ತವಪ್ಪುದು ವಿತ್ತ ಗುತ್ತಿಗೆಗೆ ಸಿಕ್ಕು!
ರಕ್ತ ನರನಾಡಿಯಲಿ ಹರಿಯದಿರೆ ಹೊಡೆವಂತೆ
ಲಕ್ವ ಸಮುದಾಯಕೆ– ಮರುಳಸಿದ್ಧ ॥ ೭೧೫ ॥

ಆದಾಯದೊಡನೆಯೇ ವ್ಯಯವು ಹೆಚ್ಚಿದರುಂಟೆ
ಹ್ಲಾದಮಯ ಜೀವನವು? ಉಳಿತಾಯಕೆ!
ಹಾದಿಯನು ತೆರೆಯುವವ ವಿತ್ತಮಂತ್ರಿಯು ನಿಜದಿ,
ಬಾಧೆ ಉಳಿದವರೆಲ್ಲ– ಮರುಳಸಿದ್ಧ ॥ ೭೧೬ ॥

ಕಲಬೆರಕೆಯಿಂ ರೋಸಿ ವಿಷಕುಡಿವೆನೆಂದರೂ
ಫಲವಿಲ್ಲ– ಕಲಬೆರಕೆ ವಿಷದಲ್ಲಿಯೂ!
ಕಲಬೆರಕೆಯೆನ್ನುವುದು ಕಲೆಯೊ, ತಂತ್ರವೊ– ಹೇಳಿ
ಗಳಿಸಿರೈ ಬಹುಮಾನ– ಮರುಳಸಿದ್ಧ ॥ ೭೧೭ ॥

ನೆಗಡಿಯೆಂದೊಡೆ ಶಸ್ತ್ರಕ್ರಿಯೆಯೆಂಬ ಸರ್ಜನರು,
'ನಗಲು ಅಪ್ಪಣೆ ಬೇಕು' ಎಂಬ ಮೇಷ್ಟ್ರು!
ಉಗುರು ತೆಗೆಯಲು ಕೊಡಲಿ ಕೈಗೊಳ್ವನಾಯಕರು
ಹಗೆಗಳಿಗು ಸಿಗದಿರಲಿ– ಮರುಳಸಿದ್ಧ ॥ ೭೧೮ ॥

ಬೆಕ್ಕಡ್ಡ ಬರುತಲೇ ಗಕ್ಕನೇ ನಿಲ್ಲುವರು,
ಬಿಕ್ಕೆಯವ ಬರೆ ಕಾಲ್ಗೆ ಬುದ್ದಿ ಹೇಳುವರು।
ರೊಕ್ಕಕ್ಕೆ ಪೂಜೆಯನು, ದುಕ್ಕಿಗಗೆ ಪೂಜೆಯನು,
ಇಕ್ಕುವರು ಠಕ್ಕರು– ಮರುಳಸಿದ್ಧ ॥ ೭೧೯ ॥

ಇಲ್ಲದುದ ಇರುವಂತೆ, ಇರುವುದನು ಇಲ್ಲದೊಲು
ಸೊಲ್ಲಿಸುತ, ಬಲಿ ಬಿದ್ದ ಬಕರಗಳ ಮೇಲೆ।
ಪಲ್ಲಕ್ಕಿ ಹೊರಿಸುವರು, ಮೆಲ್ಲುವರು ಮೃಷ್ಟಾನ್ನ
ಸುಳ್ಳು ಸ್ವಾಮಿಗಳಿಲ್ಲಿ– ಮರುಳಸಿದ್ಧ ॥ ೭೨೦ ॥

ಕಲ್ಲುದೇವರಿಗೇಕೆ ಸ್ವರ್ಣರಥ, ಮಣಿಮುಕುಟ,
ಪಲ್ಲಕ್ಕಿ, ಮದ್ದಾನೆ, ಅದ್ದೂರಿ ಜಾತ್ರೆ?
ಉಳ್ಳವರ ದೇವರಿವು, ಇಲ್ಲದವರನು ಮಬ್ಬಿ–
ನಲ್ಲಿರಿಸಿ ಸುಲಿಯಲು– ಮರುಳಸಿದ್ಧ ॥ ೭೨೧ ॥

ತಿನುವುದೊಂದೆಡೆ ಮೆಲುಕು ಹಾಕುವುದು ಬೇರೆಡೆಗೆ!
ನೀನೇಕೆ ಮೇಕು ಈ ಮೇಕೆಯೊಡನೆ?
ಜನುಮವಿತ್ತಿಹ ದೇಶ ತೊರೆದು ಹೊರದೇಶದಲಿ
ಮನೆ ಕಟ್ಟುವುದು ಸರಿಯೆ– ಮರುಳಸಿದ್ಧ? ॥ ೭೨೨ ॥

ಇಬ್ಬರು ವಕೀಲರು ಅಬ್ಬರಿಸಿ ಕೋರ್ಟಿನಲಿ
ತಬ್ಬಿ ಕೊಳುವರು ಮತ್ತೆ ಕ್ಯಾಂಟೀನಿನಲ್ಲಿ!
ಬೊಬ್ಬಿರಿದು ಸದನದಿ ವಿರೋಧಿಗಳು ಮಂತ್ರಿಮನೆ
ಮಬ್ಬಿನಲಿ ಸೇರುವರು– ಮರುಳಸಿದ್ಧ ॥ ೭೨೩ ॥

ವೃಕ್ಷದಡಿಯಲಿ ಪಡೆದ ಸಿದ್ಧಾರ್ಥ ಬುದ್ಧತ್ವ,
ವೃಕ್ಷದಡಿಯಲೆ ಪಡೆದ ನಿರ್ವಾಣವ।
ಲಕ್ಷಿಸದೆ ನಾವಿದನು ವೃಕ್ಷಸಂಹರಿಸುವೆವು–
ಭಕ್ಷಿಸುವುದೇ ಕ್ಷಮ– ಮರುಳಸಿದ್ಧ? ॥ ೭೨೪ ॥

ವನದ ಲಾಭವು ಬೇಕು, ವನ ಬೆಳೆಸುವುದು ಬೇಡ
ಜನರಿಗೀ ನತದೃಷ್ಟ ದೇಶದಲ್ಲಿ।
ಜನನಿ ಜನಕರ ಸಹಿತ ಸಲಹಲಾರದ ಜನರು
ವನವ ಬೆಳೆಸುವುದುಂಟೆ–ಮರುಳಸಿದ್ಧ? ॥ ೭೨೫ ॥

ಮರಳುನಾಡಿನೊಳಿಂದು ಹರಿಯುತಿದೆ ಕಾಲುವೆಯು;
ಮರಳಲಿದೆ ಮರುಭೂಮಿಗಿನ್ನು ಹಸುರು।
ತರವೆ ಹಸುರಿದ್ದಲ್ಲಿ ಮಸಣ ತಲೆದೋರುವುದು?
ಹರಿತಮಯವಿರಲಿ ಧರೆ– ಮರುಳಸಿದ್ಧ ॥ ೭೨೬ ॥

ಜನ್ನಗುದುರೆಗೆ ಗೊತ್ತೆ ಕಟ್ಟುವವರಾರೆಂದು?
ಕನ್ನಗತ್ತಿಗೆ ಗೊತ್ತೆ ಮನೆ ಯಾರದೆಂದು?
ಅನ್ಯರಿಗೆ ಆಳಾದುದೇನಿರಲಿ ಬಲ್ಲುದೆ
ತನ್ನದೆನ್ನುವುದನ್ನು– ಮರುಳಸಿದ್ಧ? ॥ ೭೨೭ ॥

ಸ್ವಾತಂತ್ರ್ಯವಿಲ್ಲದಿರೆ ಸ್ವಂತಿಕೆಯೆ ಸೊನ್ನೆಯು,
ಸತ್ವಸಾಹಸವಿಲ್ಲ, ಪ್ರಗತಿಯಿಲ್ಲ।
ಬತ್ತಿ ಎಣ್ಣೆಗಳಿಲ್ಲದಿಹ ಹಣತೆ ಸ್ವಾತಂತ್ರ್ಯ
ಬತ್ತಿಹೋಗಿಹ ದೇಶ– ಮರುಳಸಿದ್ಧ ॥ ೭೨೮ ॥

ಬಿತ್ತೆನಲು ಸ್ವಾತಂತ್ರ್ಯಶಬ್ದ ಕವಿಗಳ ಮೇಲೆ
ಒತ್ತಿಬರುವುದು ಮುಖಕೆ ರಕ್ತವರ್ಣ।
ನೆತ್ತರೋಡಾಡುವುದು ಒತ್ತರದಿ ನರಗಳಲಿ;
ಸತ್ತ್ವ ಸ್ವಾತಂತ್ರ್ಯದಲಿ– ಮರುಳಸಿದ್ಧ ॥ ೭೨೯ ॥

ಸ್ವಾತಂತ್ರ್ಯವೇ ಸ್ವರ್ಗ, ಪರತಂತ್ರ್ಯವೆ ನರಕ।
ಮಾತು ತರಗೆಲೆ, ಕೃತಿಯು ಹೂವು ಹಣ್ಣು।
ಆತ್ಮನಿರ್ಭರತೆ ಸಿರಿ, ಸೋತ ಮನ ಬಡತನವು,
ಚೈತನ್ಯವೇ ಚೆಲುವು– ಮರುಳಸಿದ್ಧ ॥ ೭೩೦ ॥

ಪ್ರಾಣಿಶಾಲೆಯ ಸಿಂಹ, ಸರ್ಕಸಿನ ಸಿಂಹಗಳು
ಕಾಣುವುವೆ ವನರಾಜ ಪದವಿಯನ್ನು?
ಬಾಣಗಳೆ ಇಲ್ಲದಿಹ ತೂಣೀರ ಸ್ವಾತಂತ್ರ್ಯ–
ಹೀನನಳಿಬಾಳುವೆಯು– ಮರುಳಸಿದ್ಧ ॥ ೭೩೧ ॥

ಸಂತರೊ, ಮಹಾಂತರೊ, ಮಹಾತ್ಮರೊ, ಹುತಾತ್ಮರೊ,
ಎಂಥವರೆ ಹುಟ್ಟಿದರು ಇಂತೆ ಈ ದೇಶ!
ಕ್ರಾಂತಿಗಳ ಕಬಳಿಸುತ, ಭ್ರಾಂತಿಗಳ ಬೆಳೆಸುತಿ–
ದ್ದಂತೆಯೇ ಉಳಿವುದಿದು–ಮರುಳಸಿದ್ಧ ॥ ೭೩೨ ॥

ತನುವು ಬಂಧನರಹಿತ, ಮನವು ಬಂಧನಸಹಿತ!
ಕೊನೆಯೆಂದು ಮನದ ಈ ಪಾಶಗಳಿಗೆ?
ದಿನನಿಂದೆ ಪಾಶಗಳ ಕತ್ತರಿಸಬಯಸುವಗೆ,
ಘನತೆ ದೇಶಕ್ಕಂದೆ- ಮರುಳಸಿದ್ಧ ॥ ೭೩೩ ॥

* * *

ತಾಯ್ನಾಡ ಸ್ತವನ

ಮೋಡವೇ ಕರಗಿರಲು ಮೂಡುವುದೆ ಕೋಲ್ಮಿಂಚು?
ಕಾಡೆ ಸುಟ್ಟಿರುವಾಗ ಕಾಡು ಮೃಗವೆಲ್ಲಿ?।
ನಾಡು ನುಡಿಗಳನುಳಿದು ಮಾನವರು ಮೇಲ್ಮೆಯನು
ಬೇಡಿದರೆ ಸಿಕ್ಕುವುದೆ- ಮರುಳಸಿದ್ಧ? ॥ ೭೩೪ ॥

ವೀರವನು ಬೇಡು, ವಿದ್ಯೆಯ ಬೇಡು, ಕ್ಷಮೆ- ವಿನಯ-
ಸಾರವನು ಬೇಡು, ಉದಾರತೆಯ ಬೇಡು।
ಚಾರು ಕರ್ನಾಟಕದಿ ಜನ್ಮವನು ಬೇಡಾಗ
ಸಾರುವುವು ಇವು ತಾವೆ- ಮರುಳಸಿದ್ಧ ॥ ೭೩೫ ॥

ಕಡಲನ್ನು ಕುಡಿದವನು, ಕಡಲನ್ನು ದಾಟಿದವ,
ಕೊಡದಲ್ಲಿ ಕಡಲನ್ನು ತುಂಬಿದವನು।
ಕಡಲ ಕಾಳಗ ಗೆದ್ದು ಕಡಲಾಚೆ ಕನ್ನಡದ
ಗುಡಿಯ ನಿಲಿಸಿದರಾರು- ಮರುಳಸಿದ್ಧ? ॥ ೭೩೬ ॥

ಕನ್ನಡಿಗ ಮರೆತೆಯಾ ನಿನ್ನ ಭಾಗ್ಯವ ನೀನು?
ಹೊನ್ನು ರೇಷ್ಮೆಯು ದಂತ ಚಂದನದ ನಾಡು।
ಇನ್ನಾರಿಗಿದೆಯಣ್ಣ? ಇದ ನೆನೆದು ಕನ್ನಡದಿ
ಉನ್ನತಿಯ ಗಳಿಸಿಕೋ- ಮರುಳಸಿದ್ಧ ॥ ೭೩೭ ॥

ಕನ್ನಡದೊಳೇನಿರುವುದೆನ್ನುವರ ತಲೆಯಲ್ಲಿ
ಸೊನ್ನೆಯಿದೆಯೆನ್ನರೇ ಬಲ್ಲವರು ನೊಂದು?
ತನ್ನೊಳಿಲ್ಲದೆ ಮುಳುಗಿ ಮುತ್ತುಗಳನಾಯ್ವ ಬಲ
ಮುನ್ನೀರ ಜರೆಯುವುದೆ- ಮರುಳಸಿದ್ಧ? ॥ ೭೩೮ ॥

ನೀರನಂಟಿಂ ಘನವು ನೆತ್ತರಿನ ನಂಟೆಂಬ-
ರಾರುಧಿರಕಿಂ ಘನವು ಕೆಳೆಯ ನಂಟು।
ಆರೈಯೆ ನುಡಿಯನಂಟೇ ಘನವು ಎಲ್ಲರಲಿ,
ಬೀರಿದನು ಬಾಳಿನಲಿ- ಮರುಳಸಿದ್ಧ ॥ ೭೩೯ ॥

ವನರಾಜಿಯಿತ್ತಲಿದೆ, ಗಿರಿರಾಜಿಯತ್ತಲು,
ಗೊನೆಹೊತ್ತ ಬಾಳೆಗಳು, ಕೌಂಗು, ತೆಂಗು।
ಮನಸೆಳೆವ ಕಾಫಿ ತೋಟಗಳಿಲ್ಲಿ, ಮಲೆನಾಡೊ
ಮನೆಯೊ ಸಿರಿಸೊಬಗಿಗೆ- ಮರುಳಸಿದ್ಧ ॥ ೭೪೦ ॥

ಹೂತ ಮಾಮರವಲ್ಲಿ, ಕಾತ ಹುಣಸಿಯು ಇಲ್ಲಿ,
ಪೂತ ನದ ನದಿಗಳು ದೇಗುಲಗಳೆಲ್ಲೂ।
ಪ್ರೀತಿಸುವ ಜನರೆಲ್ಲ ಕಡೆಯಲ್ಲಿ, ಬೆಳುವಲವು
ಚೈತನ್ಯಪ್ರದವಲ್ತೆ- ಮರುಳಸಿದ್ಧ? ॥ ೭೪೧ ॥

ಕಡಲ ತೆರೆ, ಕಡಲ ಕರೆ, ಬೆಡಗಿನ ನಿಸರ್ಗಶ್ರೀ,
ದುಡಿವ ಜನ, ಕೊಡುವ ಜನ, ಕಡು ಚೆಲ್ವ ಜನರು।
ಮಡುಗಟ್ಟಿ ನಿಂತ ಸಿರಿ, ಕಲೆ ಕರಾವಳಿಯಲ್ಲಿ,
ಮಿಡಿಯದೇ ಮನವನಿದು- ಮರುಳಸಿದ್ಧ? ॥ ೭೪೨ ॥

ಎತ್ತ ಸುಳಿದರು ಸೊಬಗು ನನ್ನ ಕರುನಾಡಿನಲಿ,
ಚಿತ್ತ ಸೆಳೆಯುವ ನೋಟ ಊರೂರಿಗೆ।
ಮುತ್ತಿನಂತಿಹ ಜೋಳ, ಹವಳದಂತಹ ಗೋಧಿ,
ಕತ್ತುರಿಯ ರಾಗಿಯಿವೆ- ಮರುಳಸಿದ್ಧ ॥ ೭೪೩ ॥

ರಸಬಾಳೆ ಗೊನೆಯಿಲ್ಲಿ, ಏಲಕ್ಕಿ ತೆನೆಯಿಲ್ಲಿ,
ಹೊಸ ಮಾವು ಮಲ್ಲಿಗೆಯ ಕೊನೆ ನನೆಗಳಿಲ್ಲಿ।
ಹಸನಾದ ಬದುಕಿಲ್ಲಿ, ಜಸವೆತ್ತ ಜನವಿಲ್ಲಿ
ಅಸಮ ಕರುನಾಡಿನಲಿ- ಮರುಳಸಿದ್ಧ ॥ ೭೪೪ ॥

ನೀಡುವರೆ ಎಲ್ಲರೂ, ಬೇಡುವರೆ ಇಲ್ಲವು!
ಬೇಡುವರು ಕಾಯಕವ, ಭಿಕ್ಷೆಯನ್ನಲ್ಲ।
ನಾಡು ಹೀಗಾದರೆ ದೂಡಾಚೆ ಸ್ವರ್ಗವನು!
ಮಾಡು ನಾಡನ್ನಿಂತು -ಮರುಳಸಿದ್ಧ ॥ ೭೪೫ ॥

ನಾಡ ನಾಡಿಯ ಮೇಲೆ ಬೆರಳಿರಿಸಿ ಅದರ ಸ್ಥಿತಿ
ನೋಡುವರೆ ಉಳಿದಿಲ್ಲ! ಗಣಕಯಂತ್ರ।
ಮೂಡಿಸಿದುದೇ ಮಾನ್ಯವೆಂದು ಅಂಗೀಕರಿಸಿ
ರೂಢಿಸುತಲಿಹರದನೆ– ಮರುಳಸಿದ್ಧ ॥ ೭೪೬ ॥

ಸಿರಿಗನ್ನಡಂ ಗೆಲ್ಗೆ, ಕರುನಾಡು ನಿಡು ಬಾಳ್ಗೆ,
ಸಿರಿನಾಡನಿದ ಸದಾ ಕನ್ನಡಿಗರಾಳ್ಗೆ।
ಗುರಿದೋರಿ ಲೋಕಕ್ಕೆ ಬೆಳಕೀವ ಗರಿಮೆಯು
ಕರುನಾಡಿಗೊದಗಲಿ– ಮರುಳಸಿದ್ಧ ॥ ೭೪೭ ॥

* * *

ಆತ್ಮನಿವೇದನ

ಮರೆಯಬೇಕೆಂದರೂ ಮರೆಯಲಾರೆನು ನಿನ್ನ,
ಮರೆಯುವ ಪ್ರಯತ್ನದಲೆ ನೆನಪಿನುಗಮ।
ಹೊರಗಿನವರನು ಮರೆತುಬಿಡಬಹುದು, ಒಳಗೆಯೇ
ಇರುವವನ ಮರೆಯುವುದೆ– ಮರುಳಸಿದ್ಧ? ॥ ೭೪೮ ॥

ಇಲ್ಲಿ ನಿನ್ನನು ಕಾಣದವ ಕಾಣನೆಲ್ಲಿಯೂ,
ಸುಳ್ಳು ಕೈಲಾಸದಲಿ, ವೈಕುಂಠದಲ್ಲಿ।
ಎಲ್ಲರಲಿ ನಿನ್ನನೇ ಕಾಣಬಲ್ಲವಗೇಕೆ
ಅಲ್ಲಿಯ ಉಸಾಬರಿಯು– ಮರುಳಸಿದ್ಧ? ॥ ೭೪೯ ॥

ಅಕ್ಷಾಂಶ ರೇಖಾಂಶ ನಕ್ಷೆಯಲಿ ಮಾತ್ರವೆ,
ಅಕ್ಷಿ ಗೋಚರವಲ್ಲ ಕ್ಷಿತಿಯ ಮೇಲೆ।
ಅಕ್ಷರನ ಆಸ್ತಿತ್ವವಿಂತೆ– ವಕ್ಷಾಂತರದ
ಸಾಕ್ಷಿಯೇ ಆಧಾರ– ಮರುಳಸಿದ್ಧ ॥ ೭೫೦ ॥

ವಿಶ್ವಚೈತನ್ಯಕ್ಕೆ ಯಾವ ಹೆಸರನು ಇಡುವಿ?
ದೃಶ್ಯ ಸೃಷ್ಟಿಗೆ ಮಾತ್ರ ನಾಮ ರೂಪ।
ಭಾಸ್ವದ್ವಿಲಾಸವಿದು ವ್ಯಕ್ತವವ್ಯಕ್ತದಾ–
ಶಾಶ್ವತಾತ್ಮನ ಸಿರಿಯು– ಮರುಳಸಿದ್ಧ ॥ ೭೫೧ ॥

ಮಾನವರೆ ರಚಿಸಿರುವ ಗ್ರಂಥಗಳು ಈಶ್ವರನ
ವಾಣಿಯೆಂದೊರೆವವರೆ, ಭಗವಂತನ।
ಜ್ಞಾನಕೇ ಸೀಮೆಗಳ ಕಟ್ಟದಿರಿ, ಹೊಸ ಜ್ಞಾನ
ದಾನಗೈಯನೆ ಅವನು– ಮರುಳಸಿದ್ಧ ॥ ೭೫೨ ॥

ಮನನದ ಮಯೂರಕ್ಕೆ ವನ ಸಾಲದಾಗಿಹುದು
ಕುಣಿತಕ್ಕೆ ಪಕ್ಕಗಳ ಪಸರಿಸಲಿಕೆ।
ಹಣುಗುತಿದೆ ಬಯಲತ್ತ, ಬಾನಿನೆಡೆ, ಬಾನಾಚೆ
ತನಗೆ ತಾಣವನರಸಿ– ಮರುಳಸಿದ್ಧ ॥ ೭೫೩ ॥

ಕಡಲಾಚೆ ಚಾಚಿರುವ ಜಿಜ್ಞಾಸೆ ತಣಿಯುವುದೆ
ಕುಡಿಯದೆಯ ಜ್ಞಾನಸುಧೆ ಎಲ್ಲ ಕಡೆಯ?
ಒಡಲಲ್ಲಿ ಇದ್ದರೂ ಪೊಡವಿ ತೊಟ್ಟಿಲವದಕೆ,
ಜಡಧಿಯೇ ಬಚ್ಚಲವು– ಮರುಳಸಿದ್ಧ ॥ ೭೫೪ ॥

ಪ್ರತಿರೋಧವನು ಕಳೆಯೆ ಅತಿ ವೇಗ ಸಿದ್ಧಿಪುದು,
ಮತರೋಧವನು ಅಳಿಯೆ ಭಾವೈಕ್ಯಸಿದ್ಧಿ ।
ಮತಿರೋಧವನು ಉಳಿಯೆ ವಿಶ್ವದರ್ಶನ, ಸ್ವಾತ್ಮ–
ರತಿ ಹೋಗೆ ವಿಶ್ವಾತ್ಮ– ಮರುಳಸಿದ್ಧ ॥ ೭೫೫ ॥

ಪೂರ್ವ ಪಶ್ಚಿಮವೆರಡು ಕೂಡಲರಿಯವು ಎಂಬೆ
ಪೂರ್ವ ಕಾಂಬುದು ನಿನಗೆ, ಪಶ್ಚಿಮವು ನನಗೆ।
ಓರ್ವನಿಗೆ ಎಡಬಲಗಳಿರುವಂತೆ ಲೋಕಕಿವು,
ಪರ್ವಲೆರಡನು ಮನವು– ಮರುಳಸಿದ್ಧ ॥ ೭೫೬ ॥

ಸಣ್ಣವೆಂದೆನಬಹುದೆ ಸೊನ್ನೆಯನು, ಅಂಕುಶವ,
ಪೆನ್ನು, ಉಳಿ, ಕುಂಚಗಳು, ಓಬವ್ವನೊನಕೆ?
ದೈನ್ಯವೆಂದೆನಬಹುದೆ ಬಾಪುವಿನ ಬಡತನವ ?
ಸಣ್ಣದೇ ನಿನ್ನ ಮನ– ಮರುಳಸಿದ್ಧ? ॥ ೭೫೭ ॥

ನೀನಿತ್ತ ಬೆಳಕಿನಲಿ, ನೀನಿತ್ತ ಕಣ್ಣಿನಿಂ
ಏನೆಲ್ಲವನು ನೋಡಿ ಬೀಗುತಿಹೆ ನಾನು–
'ನಾನೆ ನೋಡಿದೆ, ನೋಡಿದವನು ನಾನೇ' ಎಂದು:
ನೀನು ನಗುತಿಹೆಯೇನು– ಮರುಳಸಿದ್ಧ? ॥ ೭೫೮ ॥

ನಿನ್ನವರ ಮುಂದೆ ನಾ ಕುನ್ನಿಯೇ ಸರಿ, ತಂದೆ
ನಿನ್ನ ದಯೆಯಿಂದವರ ಬಾಗಿಲವ ಕಾಯ್ವ!
ಧನ್ಯತೆಯು ಬರಲೆನಗೆ! ಅವರ ಊಳಿಗದಲ್ಲೆ
ಮಾನ್ಯತೆಯು ನನಗಿಹುದು– ಮರುಳಸಿದ್ಧ ॥ ೭೫೯ ॥

ನನ್ನ ತಪ್ಪುಗಳಿಂದ ಕಲಿಯುವುದ ಕಲಿಸೆನಗೆ,
ನಿನ್ನೆಯನುಭವದಿಂದ ಕಲಿಯುವುದ ಕಲಿಸು।
ಮಾನ್ಯ ಶ್ರೀಸಾಮಾನ್ಯರೆಲ್ಲರಿಂದಲು ಪಾಠ–
ವನ್ನು ಕಲಿವುದ ಕಲಿಸು– ಮರುಳಸಿದ್ಧ ॥ ೭೬೦ ॥

ಪರರ ದುಃಖದಿ ಪಾಲುಗೊಳುವುದ ಕಲಿಸೆನಗೆ,
ಪರರ ಸುಖವನು ಕಂಡು ಹಿಗ್ಗುವುದ ಕಲಿಸು।
ಪರರ ಏಳಿಗೆಗಿನಿಸು ನೆರವಾಗುವುದ ಕಲಿಸು,
ಹೆರವರೆನಗಿಲ್ಲೆನಿಸು– ಮರುಳಸಿದ್ಧ ॥ ೭೬೧ ॥

ಮೌನದಲಿ ಕಾಯಕವ ಮಾಡು, ಮೌನದಿ ಮಾಗು,
ಮೌನದಲಿ ಧ್ಯಾನಿಸವನನು, ಪ್ರೀತಿಸವನ।
ಸೂನುಗಳ, ಸ್ವೀಕರಿಸು ಮೌನದಲಿ ಅವನೀವ
ಹಾನಿ ವೃದ್ಧಿಗಳನು– ಮರುಳಸಿದ್ಧ ॥ ೭೬೨ ॥

ಯೋಗಸ್ಥನಾಗೆಂಬೆ, ಯುಧ್ಯಸ್ವವೆಂದೆಂಬೆ,
ಭೋಗಕ್ಕು ನೀನೆ ಮಾದರಿಯಾಗಿ ನಿಂದೆ!
ಹೇಗಪ್ಪ ನಿನ್ನನ್ನು ಅನುಸರಿಸುವುದು ಕೃಷ್ಣ?
'ಯೋಗಿ ಕರ್ಮದೊಳಾಗು!'– ಮರುಳಸಿದ್ಧ ॥ ೭೬೩ ॥

ಊಟ ಸುಖ, ಬೇಟ ಸುಖ, ಕೈಕೊಂಡ ಕಾಯಕದ
ಮಾಟಕಿಂ ಮಿಗಿಲಾದ ಸುಖವೆಲ್ಲಿದೆ?
ಆಟವಾಡಿದ ಹಾಗೆ ಕಾಯಕವ ಮಾಡಿದರೆ
ನೀಟಾದ ಯೋಗವದು– ಮರುಳಸಿದ್ಧ ॥ ೭೬೪ ॥

ಸ್ವಾಮ್ಯವಾದವು ಅತ್ತ, ಸಾಮ್ಯವಾದವು ಇತ್ತ
ಕಾಮ್ಯವಾವುದು ನಿನಗೆ ಈ ಎರಡರಲ್ಲಿ?
ರಮ್ಯ ಎರಡರ ಉತ್ತಮಾಂಶಗಳ ಹದವರಿತ
ಸಮ್ಮಿಳನವೆಂದೆಂಬೆ– ಮರುಳಸಿದ್ಧ ॥ ೭೬೫ ॥

ಕುಳಿತಲ್ಲೆ ಕಲಿತದ್ದು ತಿಟ್ಟು, ಲೋಕವನೆಲ್ಲ
ಅಲೆದಲೆದು ಕಲಿಯುವುದು ಬೆಟ್ಟದಷ್ಟು।
ನಿಲುಕದಿರೆ ಈ ಭಾಗ್ಯ ಜಗದೆಲ್ಲ ಚಿಂತನೆಯ
ಬಳಿಗೆ ನೀ ತಂದುಕೋ– ಮರುಳಸಿದ್ಧ ॥ ೭೬೬ ॥

ಹೊಟ್ಟೆ ತುಂಬಿದರೊಮ್ಮೆ ಮತ್ತೆ ಹಸಿವಾಗದೆ?
ಕಟ್ಟೆ ತುಂಬಿದರೊಮ್ಮೆ ಬತ್ತದಿಹುದೆ?
ಬುತ್ತಿ ಬರಿದಾಗದೆ ? ತಿದ್ದಿಕೋ ನೀ ನಿನ್ನ
ಸೊಟ್ಟುಗಳ ದಿನದಿನವು –ಮರುಳಸಿದ್ಧ ॥ ೭೬೭ ॥

ಮಳೆಯ ಬರವನು ನಂಬಿ ಬಿತ್ತುವನು ರೈತನು,
ಉಳಿವ ಭರವಸೆಯಿಂದ ದುಡಿವ ಮನುಜ।
ಮಳೆ ಬಾರದಿರಬಹುದು, ಅಳಿವಂದೆ ಬರಬಹುದು,
ಉಳುಮೆ ದುಡಿತಗಳಿರಲಿ– ಮರುಳಸಿದ್ಧ ॥ ೭೬೮ ॥

ಚಾರಿತ್ರ್ಯವನು ಬೇಡು, ಪಾವಿತ್ರ್ಯವನು ಬೇಡು,
ಸಾರತರ ಸುಜ್ಞಾನಸಾಹಿತ್ಯ ಬೇಡು।
ಯಾರನೂ ವೈರಿಯೆನ್ನದೆ ವಿಶ್ವಬಂಧುತ್ವ,
ಸಾರಜ್ಞತನ ಬೇಡು– ಮರುಳಸಿದ್ಧ ॥ ೭೬೯ ॥

ಧನಿಕರಿಗೆ ಕನಿಕರವ, ಬಡವನಿಗೆ ಸಾಹಸವ,
ವಣಿಕರಿಗೆ ಮಿತಿ ಆಶೆ, ವನಿತೆಯರಿಗರವ।
ಮನನಿಕರಿಗನುಭವವ, ಜನಕೆ ಸೊಗನೀಡೆಂದು
ಚಿನುಮಯನ ಬೇಡಿಕೋ– ಮರುಳಸಿದ್ಧ ॥ ೭೭೦ ॥

ನಾನು ಬೇಡಿದರೇನು, ಈಡೇರುವುದೆ ನನ್ನ
ದೀನ ಬೇಡಿಕೆಗಳೀ ಕಾಡು ಲೋಕದಲಿ?
ಕ್ಷೀಣಸ್ವರವಿದು ಹಲವು ಹೃದಯಗಳ ತಾಕಿದರೆ
ನಾನು ಕೃತಕೃತ್ಯನೆಲ– ಮರುಳಸಿದ್ಧ ॥ ೭೭೧ ॥

ಬಹುಮತವು ಇದೆ, ಸದಭಿಮತವು ಸಹ ಇದೆಯಿಲ್ಲಿ,
ಸಹವರ್ತಿಯಾಗಲಿವು ಬಹುಜನಕೆ ಹಿತವು।
ಅಹಮಹಮಿಕೆಯು ಹೊಲ್ಲ ಎರಡರಲಿ ಒಂದಕೂ,
ಸಹಬಾಳ್ವೆಯಲಿ ಸುಖವು– ಮರುಳಸಿದ್ಧ ॥ ೭೭೨ ॥

ದೋರೆಗಾಯಿಯ ಹಾಗೆ ದಾರಿ ಕಾಯುತಲಿಹೆನು
ಸಾರವಿದು ಸವಿಯಾಗಿ ಹಣ್ಣಾಗಲೆಂದು।
ಭೋರೆಂಬ ಗಾಳಿ ಬಂದೀಧರೆಗೆ ಉರುಳಿಸದೆ
ಪೂರೈಸಲೆನ್ನಾಸೆ– ಮರುಳಸಿದ್ಧ ॥ ೭೭೩ ॥

ಬೇಕು ಬೇಡುಗಳೆರಡು ಹಾಕುತಿವೆ ಗುದುಮುರಿಗೆ,
ನೂಕುನುಗ್ಗಲಿನಲ್ಲಿ ಸಾಕಾಯ್ತು ತಂದೆ!
ಬೇಕೆನದೆ, ಬೇಡೆನದೆ ಕಾಯಕದಿ ಕಾಲವನು
ನೂಕುವರಿವನು ನೀಡು– ಮರುಳಸಿದ್ಧ ॥ ೭೭೪ ॥

ಅನ್ಯರೆನ್ನನು ಕಾಣುವಂತೆಯೇ ನಾನು ಸಹ
ನನ್ನ ನಾ ಕಾಣುವುದ ಸಾಧಿಸದೆ ಹೋದೆ!
ನಿನ್ನ ಕಾಣುವ ತವಕ ಸಾಕೆನಗೆ! ನಿನ್ನೊಳೇ
ನನ್ನತನ ಬೆರೆಯಲಿ– ಮರುಳಸಿದ್ಧ ॥ ೭೭೫ ॥

ಉದ್ದಾಮ ಸಾಹಿತಿಯೊ, ಮುದ್ದಾಮ ಸಾಹಿತಿಯೊ,
ಉದ್ಧಾರ ನಿನಗಾಯ್ತೆ ನಿನ್ನ ಕೃತಿಯಿಂದ ?
ತಿದ್ದಲಾರದ ಕೃತಿಯು ಬರೆದವನನೇ, ಎಂತು
ತಿದ್ದೀತು ಓದುಗರ– ಮರುಳಸಿದ್ಧ? ॥ ೭೭೬ ॥

ನನ್ನ ರುಚಿ ನನಗೆ, ಅನ್ಯರ ರುಚಿಯು ಅನ್ಯರಿಗೆ,
ಭಿನ್ನ ರುಚಿಯಿಂದಲೇ ಬಣ್ಣ ಬಾಳುವೆಗೆ।
ನನ್ನ ರುಚಿ ಮೇಲೆಂಬ, ಅನ್ಯರದು ಕೀಳೆಂಬ
ಸಣ್ಣತನ ಬರದಿರಲಿ– ಮರುಳಸಿದ್ಧ ॥ ೭೭೭ ॥

ರೋಷ ಬಂದರು ಬರಲಿ, ದ್ವೇಷ ಬರದಿರಲಿಲ್ಲಿ,
ದೇಶವಾಸಿಗಳೆಲ್ಲ ಸೋದರರು ಸಖನೆ!
ದೋಷಗಳ ನಾಶಕ್ಕೆ ದ್ವೇಷ ಔಷಧವಲ್ಲ,
ದ್ವೇಷವನೆ ದ್ವೇಷಿಸು– ಮರುಳಸಿದ್ಧ ॥ ೭೭೮ ॥

ನರಗಳಲಿ ಹರಿದಾಡಿ ಶರಿರಕ್ಕೆ ಸೊಬಗೀವ
ಅರುಣಜಲ ಹರಿಸುವುದೆ ಬೀದಿಗಳಲಿ?
ಹರಿಯಲದು ಹೃದಯದಲಿ, ನರಗಳಲಿ, ಮೈಯಲ್ಲಿ–
ಸುರಿಸದಿರು ಬೀದಿಯಲಿ– ಮರುಳಸಿದ್ಧ ॥ ೭೭೯ ॥

ಮಲಗಿರುವ ಹುಲಿಯನ್ನು ಎಬ್ಬಿಸದನೇರುವುದ
ಕಲಿತಿರುವೆಯಾದರೆ; ಮನದ ಬೆಂಕಿ!
ಹುಲಿಗಿಂತ ಘೋರವು, ಹಲವು ಕಡೆ ಕೊಲ್ಲುವುದು,
ತೊಲಗಿಸದನಲ್ಲಿಯೇ– ಮರುಳಸಿದ್ಧ ॥ ೭೮೦ ॥

ತನುವಿನ ವ್ಯಾಧಿಗಳ ತನುವಿನಲೆ ಕಳೆಯುವುದು,
ಮನದ ರೋಗವ ನೀಗುವುದು ಮನದೊಳೆ!
ತನುಮನಗಳಾರೋಗ್ಯ ಪೂರಕವು, ಮಾರಕವು
ಮನದಾಧಿ ತನುವಿಗೆ– ಮರುಳಸಿದ್ಧ ॥ ೭೮೧ ॥

ಎಸಳೆಸಳಿಗೂ ಉಂಟು ಅದರದರ ಅಂದವು,
ಕುಸುಮಕ್ಕೆ ಒಟ್ಟಂದ, ಮನವು ಕೂಡ।
ಬಿಸಜದೊಲು; ಸವಿಯದರ ದಳದಳದ ಸೊಬಗನ್ನು,
ಅಸದಳದ ಒಟ್ಟಂದ– ಮರುಳಸಿದ್ಧ ॥ ೭೮೨ ॥

ಮಾಗಿ ಬಸಿರಾಗಿಹಳು, ಹಡೆಯುವಳು ಸುಗ್ಗಿಯನು,
ಆಗುವುದು ಸುಗ್ಗಿಗೆ ಗ್ರೀಷ್ಮಶಿಶುಜನನ।
ಹೀಗೆ ಸಾಗುವುದಿಲ್ಲಿ ಋತುಜೀವ ಚಕ್ರವು.
ಭೋಗಿಸೆಲ್ಲವನಿಲ್ಲಿ– ಮರುಳಸಿದ್ಧ ॥ ೭೮೩ ॥

ಚಿಗುರು ಮಾತಾಡುತಿವೆ, ನಗುತಲಿವೆ ಹೂವುಗಳು,
ನೆಗೆಯುತಿವೆ ಬಯಲಿನಲಿ ಸೌರಭಗಳು।
ಬಗೆಯ ಹಿಗ್ಗಿಸಿ ಬಂತು ಮಧುಮಾಸವೀ ದಿವಸ,
ಜಗವಿಂದು ಸಿವಸುಗ್ಗಿ– ಮರುಳಸಿದ್ಧ ॥ ೭೮೪ ॥

ಮುದುರಿಹವು ಹಕ್ಕಿಗಳ ರೆಕ್ಕೆಗಳು ಮಂಜಿನಲಿ,
ಉದುರಿಹವು ಎಲೆ ಮಲರು ಗಿಡದ ಬುಡದಿ।
ಚೆದುರಿಹವು ಚೆಲ್ಲುಗಳು, ಅದುರಿಹವು ಸೊಲ್ಲುಗಳು,
ವಿಧುರ ಶಿಶಿರದ ವನವು– ಮರುಳಸಿದ್ಧ ॥ ೭೮೫ ॥

ವನವನಧಿಗಳ ನಡುವೆ ಕಡಲ ಕರೆ ಕರೆಯುತಿದೆ,
ದಿನವೊಂದ ಕಳೆಯಿಲ್ಲಿ ಭುವಿಯ ಸ್ವರ್ಗದಲಿ।
ಮನದಿ ಬನಸಿರಿ ತುಂಬಿ, ಮನ ವನಧಿವಿಸ್ತಾರ–
ವನು ಹೊಂದಿ ನಂದಿಪುದು– ಮರುಳಸಿದ್ಧ ॥ ೭೮೬ ॥

ನಭದಲ್ಲಿ ಹಾರಿದರು ಮನೆಯ ನೆನಪೆಳೆಯುವುದು,
ಉಭಯವೂ ಅಭಯಕರವಾಗಲಿಲ್ಲಿ!
ಶುಭಮತಿಗೆ ಮನೆಯೇನು, ಕಾನೇನು, ಬಾನೇನು–
ಸುಭಗ ಸರ್ವತ್ರವು– ಮರುಳಸಿದ್ಧ ॥ ೭೮೭ ॥

ನಿಂತಂತೆ ತೋರುವುದು ಅಂತರದಿ ಹರಿದರೂ
ಕಾಂತ ರಂಗನತಿಟ್ಟಿನೆಡೆಯ ಕಾವೇರಿ।
ಶಾಂತಿ ಮುಖಮುದ್ರೆಯೇ ದಾಂತಿ ದ್ಯೋತಕವಲ್ಲ
ಅಂತರ್ಯವೇ ಮುಖ್ಯ– ಮರುಳಸಿದ್ಧ ॥ ೭೮೮ ॥

ಮಣ್ಣಿನಲಿ ಮಣ್ಣಾಗಿ ಅನ್ನವಾಗುವ ಕ್ರಿಮಿಯೆ
ನಿನ್ನ ಧನ್ಯತೆಯೆಲ್ಲಿ ನನ್ನ ಬಾಳುವೆಗೆ?
ಮಣ್ಣನ್ನು ಅನ್ನಮಾಡುವೆ ನೀನು, ಅನ್ನವನೆ
ಮಣ್ಣಮಾಡುವೆ ನಾನು– ಮರುಳಸಿದ್ಧ ॥ ೭೮೯ ॥

ನನ್ನ ತಂಬುಲದಲ್ಲಿ ಸೋದರತೆಯೇ ಅಡಕೆ,
ಸುಣ್ಣ ಸ್ವಾತಂತ್ರ್ಯವು, ಮಾನವತೆ ಎಲೆಯು।
ನನ್ನಿ ಯಾಲಕ್ಕಿಯು, ಪರಹಿತ ಲವಂಗವು,
ತಿನ್ನಿಂಥ ತಂಬುಲವ– ಮರುಳಸಿದ್ಧ ॥ ೭೯೦ ॥

ಎತ್ತರಕೆ ಹಾರುವರೊ, ದೂರಕ್ಕೆ ಜಿಗಿಯುವರೊ,
ಒತ್ತರದಿ ಓಡುವರೊ, ಕಡಲನೀಸುವರೊ।
ಚಿತ್ರತರ ಮೇಲಾಟದಿಂ ಚಿತ್ತರಂಜಿಸುವ
ಮಿತ್ರರಿಗೆ ನಮನಗಳು– ಮರುಳಸಿದ್ಧ ॥ ೭೯೧ ॥

ನೆನೆಯುವೆನು ಕಾಗದವ, ಲೆಕ್ಕಣಿಕೆ, ಮಸಿ, ಅಚ್ಚು–
ಮನೆ, ಲಿಪಿಯ, ನುಡಿಗಳನು ನೇರ್ಪಡಿಸಿದವರ।
ನೆನೆಯುವೆನು ಮನನಿಕರ, ಕಲೆವಿದ್ಯೆಶಾಸ್ತ್ರಗಳ
ಜನನಿಯರ, ಜನಕರನು– ಮರುಳಸಿದ್ಧ ॥ ೭೯೨ ॥

ಚಾಡಿ ಹೇಳುವರಾರೊ, ಕಾಡಿ ಬೇಡುವರಾರೊ,
ನೋಡಿ ಕರುಬುವರಾರೊ, ನಿಷ್ಕಾರಣ।
ಕೇಡಗೈಯುವರಾರೊ, ಸೇಡ ಬಯಸುವರಾರೊ–
ಹಾಡಿ ಹರಸೆಲ್ಲರನು– ಮರುಳಸಿದ್ಧ ॥ ೭೯೩ ॥

ಮುಂದೆ ಹೊಗಳುವರಾರೊ, ಹಿಂದೆ ನಿಂದಿಪರಾರೊ,
ಬಂಧು ಭಾವವ ನಟಿಸಿ ಸುಳಿವರಾರೋ।
ಮಂದಿಯಲಿ ಮಾನವನು ಕಳೆಯಲೆಳಸುವರಾರೊ
ವಂದಿಸೆಲ್ಲರನೊಮ್ಮೆ– ಮರುಳಸಿದ್ಧ ॥ ೭೯ ॥

ಕಂದಾಯ ಖಾತೆಗೇತಕೆ ಬಂದೆ ಕುಡಿಯದಿರೆ,
ತಿಂದು ತಿನಿಸುವ ಕಲೆಯ ಕಲಿಯದಿರಲು?
ಗುಂಡು ತೂತಿನೊಳೇಕೆ ಚಚ್ಚೌಕ ಗೂಟವು–
ಎಂದು ಕೇಳಿದರೆನ್ನ– ಮರುಳಸಿದ್ಧ ॥ ೭೫ ॥

ಹಿಂದು ಪತ್ರಿಕೆ ಪ್ರಕಟಿಸಿದೆಯಿಂದು ಹಲವರನು
ಗಾಂಧಿವಾದಿಗಳೆಂದು: ಒಬ್ಬರದರಲ್ಲಿ।
ಗಾಂಧಿ ಹೆಸರನೆ ಹೇಳಬಾರದಂತಹ ಹೇಸಿ!
ಸಿಂದಿ ಸುಧೆಯಾದೀತೆ – ಮರುಳಸಿದ್ದ? ॥ ೭೬ ॥

ಬಂದಿಯಾಗಿದ್ದರೂ ಮುಕ್ತಾತ್ಮನನಿಬದ್ಧ,
ವಂದಿಯಾದವ ಬಂಧರಹಿತ ಬಂದಿ!
ಅಂದಣವನೇರಿದವ ಬೋಯಿಗಳ ಬಂದಿಯು,
ಬಂದಿ ದೇಗುಲ ಮೂರ್ತಿ– ಮರುಳಸಿದ್ಧ ॥ ೭೭ ॥

ಗಣ್ಯನಾಗುವುದಲ್ಲ ಗುರಿ ನಿನಗೆ, ಲೇಸೆಸಗಿ
ಧನ್ಯನಾಗುವುದೊಂದೆ ನಿನ್ನ ಗುರಿಯು।
ನನ್ನಿ ಚೆಲುವುಗಳನ್ನು ಆರಾಧಿಸುತ್ತಲೇ
ಶೂನ್ಯಸಾಧನೆ ಗುರಿಯು– ಮರುಳಸಿದ್ಧ ॥ ೭೮ ॥

'ಮಂಕುತಿಮ್ಮ' ನಿಗೊಬ್ಬ ತಮ್ಮನನು ತಂದಿರುವೆ;
ಶಂಕೆ ಬೇಡಿವ ಸ್ಪರ್ಧಿಯಲ್ಲವನಿಗೆ।
ಸಂಕಲ್ಪವಿವಗಿಲ್ಲ ವಿಸ್ತರದ ದರ್ಶನದ,
ಡೊಂಕುಗಳೊ? ಸಾಕಷ್ಟು! ಮರುಳಸಿದ್ಧ ॥ ೭೯ ॥

ಹೊಗಳಿಕೆಯ ಹೂಹಾರ ಉರುಲಾಗದಿರಲೆನಗೆ;
ತೆಗಳಿಕೆಯ ಮುಳ್ಳುಗಳೆ ಕವಚವಾಗಿರಲಿ!
ಸೊಗ ದುಗುಡ ನಗೆ ಧಗೆಯ ಲಾಭ ಹಾನಿಗಳನ್ನು
ಬಗೆಯದಿಹ ಬಗೆಯಿರಲಿ– ಮರುಳಸಿದ್ಧ ॥ ೮೦೦ ॥

ಹೊಳೆವುದೆಲ್ಲವು ಹೊನ್ನೆ? ಬಿಳಿದೆಲ್ಲವೂ ಹಾಲೆ?
ನಲಿವುದೆಲ್ಲವು ನವಿಲೆ? ಕವಿಲೆಯೇ ಕರೆಯೆ?
ಅಲರೆಲ್ಲ ಮಲ್ಲಿಗೆಯೆ, ತರುವೆಲ್ಲ ಚಂದನವೆ?
ಬೆಲೆ ಕಟ್ಟು ಪರುಕಿಸಿಯೆ– ಮರುಳಸಿದ್ಧ ॥ ೮೦೧ ॥

'ಮರುಳಸಿದ್ಧ'ನು ಯಾರು? 'ಅರಿತಿಹೆನು' ಎನ್ನುವನೆ!
ಹುರುಳೆಷ್ಟೊ ಅವನೊರೆದ ಈ ಕಂತೆಯಲ್ಲಿ!
ದೊರೆಯೆ ಕಿಂಚಿತ್ತಿಲ್ಲಿ ಸವಿ ಬೆಳಕು ಸೊಗಸುಗಳು,
ಹರಸಿರವನನು ನೀವು– ಮರುಳಸಿದ್ಧ ॥ ೮೦೨ ॥

* * *

ಸ್ವಸ್ತಿವಾಚನ

ಬರಲಿ ಬಡವರ ಯುಗವು, ಬರಲಿ ದುಡಿವಗೆ ಸೊಗವು,
ಮುರಿದುಬೀಳಲಿ ಅವರ ಹೆಗಲ ನೊಗವು!
ಕರಿಕಾಗಿ ಹೋಗಲಿ ಮೇಲು ಕೀಳುಗಳೆಲ್ಲ!
ಹರಡಲಿ ಸಮಾನತೆಯು– ಮರುಳಸಿದ್ಧ ॥ ೮೦೩ ॥

ಹೃದಯದಲಿ ಒಲವಿರಲಿ, ವದನದಲಿ ಚೆಲುವಿರಲಿ,
ಸದನದಲಿ ಸುಖ ಶಾಂತಿ ಸೌಹಾರ್ದವಿರಲಿ!
ಸದಯತೆಯ ಸ್ವರ್ಗದಲಿ ಸುರರಾಗಿ ಬಾಳಲಿ
ಸದುಗುಣದ ಸಜ್ಜನರು– ಮರುಳಸಿದ್ಧ ॥ ೮೦೪ ॥

ವೃಕ್ಷರಾಜಿಯ ಕೊರಳಿನಿಂದ ಸೂಸುತ್ತಿರಲಿ
ಪಕ್ಷಿಕೂಜನಗಾನ! ಹೊಲಗದ್ದೆ ತೋಟ।
ಸಾಕ್ಷಿಯಾಗಲಿ ಲಕ್ಷ್ಮಿ ಬೆಳೆಸಿರಿಯು ಎಂಬುದಕೆ;
ಸುಕ್ಷೇಮವಾಗಲಿಳೆ– ಮರುಳಸಿದ್ಧ ॥ ೮೦೫ ॥

ಮತಿ ಮತವನಾಳಲಿ, ಹಿತ ಕೃತಿಯನಾಳಲಿ,
ಋತವಾಳಲೆಲ್ಲವನು; ಪ್ರೀತಿ ನೀತಿ।
ಜೊತೆಯಾಗಿ ಆಳಲೀ ಬದುಕನ್ನು; ಶಿವರತಿಯೆ
ವ್ರತವಾಗಲೆಲ್ಲರಿಗೆ– ಮರುಳಸಿದ್ಧ ॥ ೮೦೬ ॥

ಲೀನವಾಗಲಿ ಎಲ್ಲ ಮತ ಪಥದ ನದಿಗಳೂ
ಮಾನವ್ಯಶರಧಿಯಲಿ ಪ್ರೇಮಚಂದ್ರ।
ಬಾನತ್ತ ಸೆಳೆಯುತಿರಲದನು; ಸಿಂಪಿಗೆ ಸ್ವಾತಿ
ದಾನಗೈಯುತ್ತಿರಲಿ– ಮರುಳಸಿದ್ಧ ॥ ೮೦೭ ॥

ಜಯವೆನ್ನು ಜೀವನಕೆ, ಜಯವೆನ್ನು ಸೃಜನಕ್ಕೆ,
ಜಯವೆನ್ನು ಚಿಂತನಕೆ, ಮಂಥನಕ್ಕೆ!
ಜಯವೆನ್ನು ಕಾಯಕಕೆ, ಜಯ ಪ್ರೀತಿಚುಂಬಕಕೆ,
ಜಯವೆನ್ನು ಲೋಕಕ್ಕೆ– ಮರುಳುಸಿದ್ಧ ॥ ೮೦೮ ॥

* * *

ಟಿಪ್ಪಣಿಗಳು

ಮರುಳಸಿದ್ಧನ ಕಂತೆ

ಪದ್ಯವಾರು ಶಬ್ದಾರ್ಥ ಮತ್ತು ಟಿಪ್ಪಣಿಗಳು

ಪದ್ಯ

೪. ಸ್ಥಾಣು – ಶಿವ

೫. ರೂವಾರಿ – ಶಿಲ್ಪಿ

೮. ಮೇಲ್–ಮಂದಿ – ಮೇಲಿನವರು

೯. ಭಿಷಜ – ಔಷಧ

ಮೇಷ – ಕುರಿ, ಟಗರು

೧೧. ಲೇಸಿಗ – ಲೇಸನ್ನು ಮಾಡುವವ

೧೩. ಬಾನವರು – ದೇವತೆಗಳು

೧೭. ಬೊಬ್ಬುಳಿ – ಜಾಲಿಯ ಮರ

ಬಾವನ್ನ – ಶ್ರೀಗಂಧ

ಬರ್ಬರತೆ – ಕಾಡುತನ

೨೩. ಕೊನರಿಸು – ಚಿಗುರಿಸು

೨೬. ಜ್ಯೋತಿರ್ವರ್ಷ – ಬೆಳಕು ಒಂದು ವರ್ಷದಲ್ಲಿ ಕ್ರಮಿಸುವ ದೂರ

೨೮. ಅನಂತ್ಯ – ಅನಂತತೆ

೩೨. ಉಡುಗಣ – ನಕ್ಷತ್ರ ಸಮೂಹ

೩೪. ಮಿನಿಗುಡಿ–ಚಿಕ್ಕಗುಡಿ

೩೭. ಪಶ್ವಾದಿ ಮನುಜಾಂತ – ಪಶುಗಳಿಂದ ಮನುಜನವರೆಗೆ

೩೮. ವಕ್ಷಾಂತ – ಎದೆಯೊಳಗಿನ

೪೨. ವಾಘೆ – ಲಗಾಮು, ಕಡಿವಾಣ

೪೪. ಕಾಲ್ಗಳು – ಕಾಲುವೆಗಳು

೪೫. ಬಂಡುಣಿ – ಭ್ರಮರ

೫೦. ತಂಗುಮನೆ – ಉಳಿದುಕೊಳ್ಳುವ ಮನೆ

೫೧. ಕಾಲುಷ್ಯ – ಹೊಲಸು

೫೭. ಕಾವಳ – ಕತ್ತಲೆ

೬೧. ಐಬು – ದೋಷ

೬೨. ಕಸವರ – ಚಿನ್ನ

೬೪. ಪರದಾಕಾಂಕ್ಷೆ – ಪರಲೋಕದ ಆಸೆ

೬೫. ತೃಷೆ – ನೀರಡಿಕೆ

೬೯. ಅರಲು – ತೋಯ್ಸಿ ಹದಮಾಡಿದ ಮಣ್ಣು

೭೧. ಜೀವದ್ರುಮ – ಜೀವವೆಂಬ ವೃಕ್ಷ

೭೫. ಆಜ್ಯ – ತುಪ್ಪ

೭೮. ಗಣಕ ಮಾನವ – ಗಣಕ ಯಂತ್ರದಿಂದ ಮಾಡಿದ ಮಾನದ ನಳಿಕೆ ಮಾನವ – ಪ್ರಣಾಳ ಶಿಶು

೭೯. ಪ್ರಜನ ಪೈಪೋಟಿ – ಹುಟ್ಟಿಸುವುದರಲ್ಲಿ ಮೇಲಾಟ

೮೦. ಶುಕ್ಲಶೋಣಿತ – ಧಾತು, ರಕ್ತ

೮೧. ಮರುಹುಟ್ಟು – ಪುನರ್ಜನ್ಮ

೮೯. ತೊರೆ – ಹೊಳೆ

೯೨. ಇಂದು – ಚಂದ್ರ

ಅರ್ಕ – ಸೂರ್ಯ

ಉಜ್ಜುಗ – ಉದ್ಯೋಗ

೯೩. ತಿರೆ – ಪೃಥ್ವಿ

೯೮. ಆಚು – ಅಗತ್ಯ

೧೦೩. ಶಿಲುಬೆ, ಸ್ವಸ್ತಿಕ, ಬಿದಿಗೆ ಚಂದ್ರ ಕ್ರೈಸ್ತರ, ಹಿಂದುಗಳ, ಮುಸಲ್ಮಾನರ ಪವಿತ್ರ ಕುರುಹುಗಳು

೧೦೬. ಆಹ್ರಿಮನ್ – ಮಾರ – ಸೈತಾನ – ಪಾರಸಿ, ಬೌದ್ಧ, ವೈದಿಕ, ಕ್ರೈಸ್ತ, ಮುಸ್ಲಿಂ ಮತಗಳಲ್ಲಿ ಜನರನ್ನು ತಪ್ಪುದಾರಿಗೆ ಎಳೆವವನೆಂದು ನಂಬಿರುವ ವ್ಯಕ್ತಿ

೧೦೮. ಘನಮನ– Super mind

೧೧೨. ಲೂನ್ ಪಕ್ಷಿ – ಗಿರಿಗಳಿಂದ ಆವೃತವಾದ ಕಿರಿಯ ಸರಸಿಯಲ್ಲಿ ಹೊಕ್ಕು ಹೊರಗೆ ಬರಲಾಗದೆ ಸಾಯುವ ಪಕ್ಷಿ ವಿಶೇಷ

೧೨೦. ಕಾರ್ಬೊನ್ನು – ಕಬ್ಬಿಣ

೧೨೧. ನಖಕ್ಷತ – ಉಗುರು ಗಾಯ

೧೨೩. ಭೀರುತೆ – ಭಯ

೨೨೫. ಬೇಳುವೆ – ಹೋಮ, ಕಳವಳ

೧೨೭. ದ್ವೇಷದಾವಾಗ್ನಿ – ದ್ವೇಷದ ದಾವಾನಲ

೧೩೦. ಅರ – ಧರ್ಮ

೧೩೧. ಪೀಮೂಷ – ಅಮೃತ

೧೪೪. 'ಪಾರ್ಕಲಾಂ'– ನೋಡೋಣ – ಕಾಮರಾಜರು ಹೇಳುತ್ತಿದ್ದರೆನ್ನಲಾದ ತಮಿಳು ಶಬ್ದ

೧೪೭. ಜೋಹ – ಸೋಗು, ಮೋಸದ ವೇಷ

೧೪೮. ಧತ್ತೂರ – ಮುದ್ದುಗುಣಿಕ

೧೫೦. ವ್ಯಾಳ – ಹಾವು

೧೫೮. ಟ್ಯಾಂಟಲೀಕರಣ – ಟ್ಯಾಂಟಲಸ್ ಒಬ್ಬ ಶಾಪಗ್ರಸ್ತ ವ್ಯಕ್ತಿ. ತಲೆ ಮೇಲೆತ್ತಿದರೆ ಹುಳುಗಳು ಕಚ್ಚುತ್ತಿದ್ದುವು; ತಲೆ ನೀರೊಳಗೆ ಮುಳುಗಿಸಿದರೆ ಉಸಿರುಗಟ್ಟುತ್ತಿತ್ತು. ಅಂಥ ಅವಸ್ಥೆಗೆ ತರುವುದು ಡ್ಯಾಂಟಲೀಕರಣ.

೧೭೫. ಸೊತ್ತು – ಆಸ್ತಿ

೧೮೫. ಪಾರಾವಾರ – ಸಮುದ್ರ

೧೮೬. ಋದ್ಧಿ – ಅಭಿವೃದ್ಧಿ

೧೮೭. ನೇರ್ಪು – ಸರಿಯಾದ ಕ್ರಮ

೧೮೯. ಪರಿಭವ – ಸೋಲು

೧೯೦. ದೋಹದ – ಗಿಡಲತೆಗಳ ಬಯಕೆಯನ್ನು ಪೂರೈಸಿ

ಅವು ಕುಸುಮಿಸುವಂತೆ ಮಾಡುತ್ತಿದ್ದ ಒಂದು ಕ್ರಿಯೆ

೧೯೪. ಅಡೆ – ಕಾಯಿಗಳು ಹಣ್ಣಾಗಲು ಹಾಕುತ್ತಿದ್ದ ಹುಲ್ಲಿನ ಹೊದಿಕೆ

ಸೆಡೆ ಕಟ್ಟು – ಬೆಳೆಯುವ ಗಿಡ ಡೊಂಕಾಗದಂತೆ ಕಟ್ಟುವ ಆಸರೆಗೋಲು

೨೦೮. ಅಸ್ಪು – ಸುಗಂಧಲೇಪನ

೨೧೮. ಉನ್ನಿಸುವ – ಭಾವಿಸುವ

೨೨೧. ಇನ – ಸೂರ್ಯ

೨೨೨. ಚಿತ್ತವೃತ್ತಿ – ಮನಸ್ಸಿನ ವ್ಯಾಪಾರ

೨೩೪. ಕಾವನಂಬಿನ ಅಲರು – ಕಾಮನ ಬಾಣವಾಗಿರುವ ಪುಷ್ಪ

೨೪೨. ಕರಿಹೊನ್ನು – ಮೆಣಸು

ಹಸುರು ಹೊನ್ನು – ಕಾಡು, ಅರಣ್ಯ

೨೪೪. ಪರದ್ಯುತಿ – ಹೆರವರ ಪ್ರಕಾಶ

೨೪೬. ಹೆಂದೆ – ಹೇಡಿ

೨೪೭. ವಿಷದೇಹಿ – ವೇಹವೆಲ್ಲ ವಿಷವಾಗಿರುವವನು

೨೫೦. ಮುನ್ನೀರು – ಸಮುದ್ರ

೨೫೩. ಕೂಲು – ಕುಸಿ, ಬೀಳು, ಮೆಟ್ಟಿಲು

೨೫೬. ನಚ್ಚು – ಮಚ್ಚು – ನಚ್ಚಿನ ಕಡಿಗತ್ತಿ

೨೫೯. ತೂಳ್ವ – ಮೇಲೆ ಬೀಳುವ, ಆಕ್ರಮಿಸುವ

೨೬೩. ಹರಿ – ಸಿಂಹ

೨೭೩. ವಿಜಿಗೀಷು – ಜಯವನ್ನು ಬಯಸುವ

೨೮೦. ಆಲ್ಪರಿ – ಅಂಗಲಾಚಿ ಬೇಡು

೨೮೨. ಕಂದುಕ – ಆಟದ ಚೆಂಡು

೨೮೪. ಓಜುಗಟ್ಟಿಗೆ – ಉಪಾಧ್ಯಾಯನ ಕೈಯಲ್ಲಿರುವ ಬೆತ್ತ

೨೮೫. ಸದರು – ವಿಶೇಷ ನ್ಯಾಯಾಲಯ

೨೯೫. ಮಿಸೈಲು – Missile

೨೯೮. ಅಯನ – ಮಾರ್ಗ

೩೦೩. ಋಜುಮತಿ – ಪ್ರಾಮಾಣಿಕ ಬುದ್ಧಿ

೩೦೭. ಕ್ಷೇತ್ರಜ್ಞ – ಪರಮಾತ್ಮ

೩೧೨. ವಿಕಲ್ಪ – ಬದಲಿ

೩೧೯. ಕುನಿ – ಕುಗ್ಗು

೩೨೪. ಬಾಳರ – ಜೀವನಧರ್ಮ

೩೩೦. ಕೃಪಣ – ಜೀನ

೩೪೨. ಮದುವೆ – ಮರ – ಮದುವೆಯೆಂಬ ಮರ

೩೫೨. ಬಗ್ಗಣೆ – ಕೂಜನ

೩೫೪. ಸಾನುಬಾನು – ಗಿರಿ ಗಗನ

೩೬೦. ಸಾಕ್ಷೆಟೀಸನ ಸತಿ, ಕ್ಯಾಥರಿನ್, ಚಂಡಿ

ಮೂವರೂ ಪತಿಯನ್ನು
ಅನಾದರಿಸಿದವರು.

೩೬೧. ಯುಗಳ ಜೀವನ –
ಜೋಡಿ ಬಾಳು

೩೬೩. ಡೀಡೊ – ವರ್ಜಿಲ್
ಮಹಾಕವಿಯ 'ಏನಿಯೆಡ್'
ಮಹಾಕಾವ್ಯದ ಪರಿತ್ಯಕ್ತ
ನಾಯಕಿ ರೋಮಿಯೋ
ಜ್ಯುಲಿಯೆಟ್ – ಇದೇ
ಹೆಸರಿನ ಷೇಕ್ಸ್‌ಪಿಯರನ
ನಾಟಕದ ಪ್ರೇಮಿಗಳು

೩೬೬. ಸಂಹೃತಿ – ಕೊಲೆ
ಸಂಹಿತೆ – ವೇದಗಳಿಂದ
ಸಂಗ್ರಹಿಸಿದ ಭಾಗ

೩೭೦. ಅಖಿಲಸನ ಅಡಿ
– ಗ್ರೀಕವೀರ,
ಇವನ ಅಡಿ
ದುರ್ಬಲವಾಗಿದ್ದಿತು
ಸಾಂಮ್ಸನ್ನನ ಕೇಶರಾಶಿ–
ಇವನ ಕೇಶಗಳಲ್ಲಿತ್ತು
ಇವನ ಅದ್ಭುತ ಶಕ್ತಿ

೩೫೫. ಮಾಂಕರಿಸು – ತಿರಸ್ಕರಿಸು,
ಅವಹೇಳನ ಮಾಡು

೩೭೮. ಇಕೆಬಾನಾ – ಜಪಾನಿನ
ಹೂ ಜೋಡಿಸುವ ಕಲೆ

೩೮೦. ಸುರುಚಿ – ಧ್ರುವನ
ಮಲತಾಯಿ

೩೮೨. ಮೇಖಲೆ – ಒಡ್ಯಾಣ,
ಡಾಬು

೩೯೨. ಹೇರೊಡಲು – ದೊಡ್ಡ
ಹೊಟ್ಟೆ

೩೯೩. ಹೀರಕ – ವಜ್ರ

೩೯೪. ಆರಡಿ – ಷಟ್ಪದ, ಭ್ರಮರ

೪೦೪. ಸ್ಪೃಹಣೀಯ –
ಅಪೇಕ್ಷಣೀಯ

೪೦೬. ಕನ್ಫೂಷ – Confuciμ
– ಚೀಣದ ಜ್ಞಾನಿ.

೪೧೬. ಕಳ್ಳು – ಹೆಂಡ

೪೧೧. ಊಟೆ – ನೀರಿನ ಚಿಲುಮೆ,
ಬುಗ್ಗೆ

೨೧೫. ಪರುಷ – ಲೋಹವನ್ನು
ಸುವರ್ಣವನ್ನಾಗಿ

೪೩೦. ನಂಬಲಾದ
ಶಿಲೆ–ಸ್ವರ್ಶವಾಣಿ.
ಬಿಸಿಲುಗುದುರೆ
ಮೃಗಜಲ –
ಪರಿವರ್ತಿಸುವುದೆಂದು

೪೩೬. ಬಿದುಗಲ್ಲು –
ಚಂದ್ರಕಾಂತಶಿಲೆ

೪೪೧. ವಿಧು – ಚಂದ್ರ
ಛವಿ – ಪ್ರಕಾಶ

೪೪೩. ಭಗಣ – ನಕ್ಷತ್ರ ಸಮೂಹ

೪೪೪. ಸಮ್ಯಕ್ಷ – ಸಮ್ಯಕ್‌ಜ್ಞಾನ

೪೪೫. ಚುಚೆ – ಖಯಕ್ಕು

೪೪೮. ಹದ್ದು – ಮೇರೆ

೪೫೩. ಸ್ವನ – ಧ್ವನಿ

೪೫೯. ಬೆಲೆಗೆ ಬೆಲೆ – ಮೌಲ್ಯಗಳಿಗೆ ಬೆಲೆ

೪೬೦. ವ್ಯೋಮ – ಆಕಾಶ

೪೬೬. ಅನ್ಯರರ – ಅನ್ಯರಧರ್ಮ ಸ್ವಾಧೀನತೆ – ಸ್ವಾತಂತ್ರ್ಯ

೪೭೫. ಮಾನುಷೀ ವ್ಯಾಘ್ರತನ – ಮಾನವನ ಹುಲಿತನ

೪೭೮. ನರಮೇಧ – ನರಯಜ್ಞ

೪೮೦. ಹೃದಯಾಯತನ – ಹೃದಯಸದನ

೪೯೦. ಅಹಿಮನುಜ – ಸರ್ಪಮಾನವ

೪೯೧. ದ್ವೈಧೀಕರಣ – ಇಬ್ಬಂದಿತನ

೫೦೧. ತವಿಸು – ಪರಿಹರಿಸು

೫೪೦. ಪೆರೆ – ಚಂದ್ರ

೫೪೪. ಕಿತವ – ಸುಳ್ಳು

೫೪೮. ತಾರುಮಾರು – ಅವ್ಯವಸ್ಥೆ – ಚೆಲ್ಲಾಪಿಲ್ಲಿ

೫೫೧. ಅಂಗಜ – ಕಾಮ

ಅಂಗಿ – ದೇಹಿ

೫೫೨. ಕಂಥೆ ಒಗೆ – ಸಾಯು

೫೫೩. ಕೋಕನದ – ಕೆಂದಾವರೆ

೫೬೦. ವಿಪ್ಲವಜನಿತ ಮೃತ್ಯು – ಕ್ರಾಂತಿ ತರುವ ಸಾವು

೫೬೫. ಹಸುಗೆ – ಹಂಚಿಕೆ

೫೬೬. ದಸರಿಡೊಡಕು – ರೇಷ್ಮೆಯ ತೊಡಕು

೫೮೨. ಅಡಕಿಸು – ಶೇಖರಿಸು

೫೯೯. ನೈರಾಶ್ಯನಿಶೆ – ನಿರಾಶೆಯೆಂಬ ನಿಶೆ

೬೦೫. ವಿಸ್ಫುಲಿಂಗ – ಕಿಡಿ

೬೦೬. ಕಿರಿದೆ ಸುಂದರ – Small is beautiful

೬೧೬. ಉಚ್ಛ್ರಾಯ – ನಿಶ್ರೇಣಿ ಏಳಿಗೆಯ ಏಣಿ

೬೨೪. ಅದ್ರಿಧಾಮ – ಗಿರಿಧಾಮ

೬೨೯. ದ್ಯುನದಿ – ದೇವಗಂಗೆ

೬೩೪. ಖೇಲನಗಳಾಯುಗಳು – ಆಯುಷ್ಯಗಳೇ ಆಟಿಕೆಗಳು

೬೫೨. ರಾಟಣ – ಗಿರಕಾಲೆ

೬೬೧. ಅಗ್ಗಳರು – ಶ್ರೇಷ್ಠರು

೬೭೪. ಗಂತು – ಹಾದಿ, ಮಾರ್ಗ

೬೯೧. ಕೊರಚು – ಮೂದಲಿಸು, ತೆಗಳು

೭೦೦. ಕಾಳ ಹತ್ತಿಯ ಮಣ್ಣು – Block cotton soil

೭೦೧. ಯಾಜಿ – ಯಜ್ಞಮಾಡುವವ

೭೧೨. ಅಕ್ಷ – ಅಚ್ಚು

೭೧೫. ವಿತರಣೆ – ಹಂಚಿಕೆ

೭೧೬. ಹ್ಲಾದಮಯ – ಹರ್ಷಮಯ

೭೨೨. ಮೇಕು – ಮೇಲಾಟ

೭೨೬. ಜನ್ನ – ಯಜ್ಞ

೭೩೧. ತೂಣೀರ – ಬತ್ತಳಿಕೆ
೭೫೩. ಮಯೂರ – ನವಿಲು
೧೫೫. ರೋಧ – ತಡೆ
೭೬೨. ಸೂನುಗಳ – ಮಕ್ಕಳ
೭೭೯. ಅರುಣಜಲ – ರಕ್ತ
೭೮೪. ಚೆಲ್ಲಗಳು – ವಿಲಾಸಗಳು
೭೮೮. ಕ್ಷಾಂತಿ – ಸಂಯಮ
೭೯೩. ಕರುಬು – ಅಸೂಯೆ ಪಡು
೭೯೫. ೧೯೬ – ೭೯೬
೭೯೭. ಅನಿಬದ್ಧ – ಬದ್ಧನಲ್ಲದವನು
೮೦೧. ಕವಿಲೆ – ಹಸು
೮೦೫. ಲಕ್ಷ್ಮಿ ಬೆಳೆಸಿರಿಯು – ಲಕ್ಷ್ಮಿಯು ಬೆಳೆಸಿರಿಯ ರೂಪದಲ್ಲಿರುವಳು
೮೦೭. ಮಾನಷ್ಯ ಶರಧಿ – ಮಾಕನಕೆಯೆಂಬ ಸಮುದ್ರ

ಕರುಣಾಶ್ರಾವಣ
ಟಿಪ್ಪಣಿಗಳು

ಪುಟ	ಪಂಜ್ತೆ		
೩೯.	೫	ಶಲಿಮಾರ್	–ಶ್ರೀನಗರದ ಶಾಲಿಮಾರ್ ಬಾಗ್
೩೯	೬	ಹರವನ	–ಶ್ರೀನಗರಕ್ಕೆ ನೀರು ಪೂರೈಸುವ ಸ್ಥಾನ
೪೦	೯	ಖಿಲನ ಮಾರ್ಗ	–ಗುಲ್ ಮಾರ್ಗಕ್ಕೆ ಮೇಲಿರುವ ಹಿಮಾಚ್ಛಾದಿತ ಶಿಖರ
೪೩	೧೫	ಕಾಲ್ವಿನ್	–ಧರ್ಮೂಂಧತೆಗೆ ಹೆಸರಾದ ಹಿಂಸಕ, ಸರ್ವಿಟಸ್ ಎಂಬವನನ್ನು ಸುಡಿಸಿದವ
೪೩	೧೬	ಜೀನಡ ಆರ್ಕ್	–ಫ್ರಾನ್ಸ್ ದೇಶವನ್ನುಳಿಸಿ ಮತೀಯ ಮೌಢ್ಯಕ್ಕೆ ಬಲಿಯಾದ ವೀರಾಂಗನೆ
೪೪	೧	ಬ್ರೂನೋ	–ವಿಚಾರ ಸ್ವಾತಂತ್ರ್ಯಕ್ಕಾಗಿ ದಹಿಸಲ್ಪಟ್ಟ ಇಟಲಿಯ ವಿಚಾರವಾದಿ
೪೪	೩	ಪೆಯಿನ್	–'ಬಿಲ್ ಆಫ್ ರಾಯಿಟ್ಸ್' ಎಂಬ ಜಗತ್ಪ್ರಸಿದ್ಧ ಗ್ರಂಥದ ಲೇಖಕ
೪೪	೪	ಫಿರದೋಸಿ	–ಪರ್ಸಿಯಾದ ಮಹಾಕವಿ
೪೪	೪	ರೂಸೋ	–ಫ್ರಾನ್ಸಿನ ಕ್ರಾಂತಿಪುರುಷ
೪೪	೯	ಡ್ಯಾಂಟೇ	–ಲ್ಯಾಟನ್ ಭಾಷೆಯ ಮಹಾಕವಿ
೪೪	೯	ಮಾರ್ಲೋ	–ನಾಸ್ತಿಕನೆಂದು ಆರೋಪಿತ ನಾಗಿದ್ದ ಆಂಗ್ಲೇಯ ಕವಿ
೪೪	೧೦	ಮಾಯ್ಕಲ್	ಎಂಜಿಲ್ –ಇಟಲಿಯ ಅದ್ಭುತ ಪ್ರತಿಭಾಶಾಲಿಯಾದ ಕಲಾವಿದ
೪೪ ಕವಿ	೧೦	ಫಾನಿ	–ಬಾಳೊಂದು ಗೋಳಾಗಿದ್ದ ಉರ್ದೂ
೪೪	೧೪	ಒಫೀಲಿಯಾ	ಹ್ಯಾಮ್‌ಲೆಟನ ಪ್ರೇಯಸಿ
೪೪	೧೫	ಷೀರೀಂ	–ಫರಹಾದನ ಪ್ರೇಯಸಿ

ಅನುಬಂಧಗಳು

ಅನುಬಂಧ ೧

ಪ್ರಕಾಶಕರ ಮಾತು

ನನ್ನ ತಂದೆಯವರು ಆಧುನಿಕ ವಚನಗಳ ಮೂಲಕ ಪ್ರಸಿದ್ಧರಾಗಿದ್ದರೂ ಕಾವ್ಯ, ನಾಟಕ, ಕಥೆ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ, ಸಂಪಾದನೆ – ಹೀಗೆ ಬೇರೆ ಸಾಹಿತ್ಯ ಪ್ರಕಾರಗಳಲ್ಲೂ ಸಾಕಷ್ಟು ಕೆಲಸಮಾಡಿರುವರು. ಅವರು ನವೋದಯಕಾಲದ ಗಮನಾರ್ಹ ಕವಿಗಳು. ಅವರನ್ನು ವಿ.ಕೃ.ಗೋಕಾಕ್ ನಾಡಿನ ಪ್ರಮುಖ ಕವಿಗಳಲ್ಲಿ ಒಬ್ಬರು ಎಂದು ಗುರುತಿಸಿದ್ದರು. ಅವರ ಕಾವ್ಯವೊಂದಕ್ಕೆ ಬೇಂದ್ರೆಯವರು ಮುನ್ನುಡಿ ಬರೆದು ಅವರ ಕಾವ್ಯರಚನಾಪ್ರತಿಭೆಯನ್ನು ಹೊಗಳಿದ್ದರು. ಅವರ ಎಂಟು ಕವಿತಾ ಸಂಕಲನಗಳು ಪ್ರಕಟವಾಗಿದ್ದು, ಮೊದಲ ಕವಿತಾಸಂಕಲನ ೧೯೫೩ರಲ್ಲಿ ಹೊರಬಂದಿದ್ದರೆ ಮರುಳಸಿದ್ಧನ ಕಂತೆ ೧೯೯೧ರಲ್ಲಿ ಪ್ರಕಟವಾಗಿದೆ. ಅವರ ಕಾವ್ಯರಚನೆ ಸುಮಾರು ೩೮ ವರ್ಷಗಳ ದೀರ್ಘಕಾಲದ ಸಂಬಂಧಹೊಂದಿದೆ. ಅವರ ಮೊದಲ ಆಸಕ್ತಿ ಕಾವ್ಯವೇ. ಅವರ ಕವಿತಾ ಸಂಕಲನಗಳು ಹಲವು ಬಾರಿ ಮುರುಮುದ್ರಣಗಳನ್ನು ಕಂಡಿರುವುದು ಅವುಗಳ ಜನಪ್ರಿಯತೆಗೆ ಸಾಕ್ಷಿ.

ಅವರು ಪ್ರಕೃತಿಯ ಆರಾಧಕರೆಂಬುದು ಎಷ್ಟು ಸತ್ಯವೊ ಅಷ್ಟೇ ಸತ್ಯ ಸಾಮಾಜಿಕವಾಗಿ ಸ್ಪಂದಿಸುವ ಮನೋಭಾವದವರೆಂಬುದು. ಅವರ ಕಾವ್ಯದ ಮೌಲ್ಯಗಟ್ಟುವ ಕೆಲಸವಾಗಿಲ್ಲ, ಆಗಬೇಕಾಗಿದೆ. ಅದಕ್ಕಿರುವ ಮುಖ್ಯ ತೊಂದರೆ ಅವರ ಕವಿತಾಸಂಕಲನಗಳು ಓದಲು ದೊರೆಯುತ್ತಿಲ್ಲವೆಂಬುದು. ನಾವು ಈಗ ಅವರ ಎಂಟು ಕವಿತಾ ಸಂಕಲನಗಳನ್ನು ಒಂದೆಡೆ ದೊರಕಿಸಿಕೊಡುವ ಪ್ರಯತ್ನವಾಗಿ 'ಸಿದ್ಧಯ್ಯ ಪುರಾಣಿಕರ ಸಮಗ್ರ ಕಾವ್ಯ' ಹೊರತರುವ ಮಹತ್ವದ ಯೋಜನೆ ಕೈಗೆತ್ತಿಕೊಂಡಿದ್ದೇವೆ. ಈ ಬೃಹತ್ ಸಂಪುಟ ಡಾ.ಸಿದ್ಧಯ್ಯ ಪುರಾಣಿಕರ ಕುಟುಂಬದ ಎಲ್ಲ ಸದಸ್ಯರ ಕನಸು. ಇದು ಅವರ ೯೦ನೇ ವರ್ಷಾಚರಣೆಯ ಸಂದರ್ಭದಲ್ಲಿ ಹೊರಬರುತ್ತಿರುವುದು ತುಂಬ ಸಂತೋಷದ ಸಂಗತಿ.

ಈ ಸಮಗ್ರ ಕಾವ್ಯ ಸಿದ್ಧಪಡಿಸುವಲ್ಲಿ ಡಾ. ಎಸ್. ವಿದ್ಯಾಶಂಕರ ಅವರು ವಿಶೇಷ ಶ್ರಮವಹಿಸಿರುವರು. ಇದಕ್ಕೆ ಬೆಲೆಬಾಳುವ ಮುನ್ನುಡಿಯನ್ನು ನಾಡಿನ ಖ್ಯಾತ ವಿದ್ವಾಂಸರೂ ನನ್ನ ತಂದೆಯವರ ಆತ್ಮೀಯ ಮಿತ್ರರೂ ಆದ 'ನಾಡೋಜ' ಡಾ.ದೇ.ಜವರೇಗೌಡರು ಬರೆದುಕೊಟ್ಟು ನಮ್ಮ ಯೋಜನೆಯನ್ನು ಪರೋಕ್ಷವಾಗಿ

ಮೆಚ್ಚಿ ಪ್ರೋತ್ಸಾಹಿಸಿರುವರು. ಕಲಾವಿದ ಮೋನಪ್ಪನವರು ಸೊಗಸಾದ ರಕ್ಷಾಪತ್ರ ವಿನ್ಯಾಸವನ್ನು ಮಾಡಿರುವರು. ಇದರ ಛಾಯಾಕ್ಷರ ಜೋಡಣೆ ಮಾಡಿದ ವರ್ಷಿಣಿ ಗ್ರಾಫಿಕ್ಸ್‌ನ ಶ್ರೀಮತಿ ಪ್ರಿಯದರ್ಶಿನಿಯವರು ಶ್ರದ್ಧೆ ಮತ್ತು ಸಹನೆಯಿಂದ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿರುವರು. ನಮ್ಮೆಲ್ಲ ತೊಂದರೆಗಳನ್ನು ಸಮಾಧಾನದಿಂದ ಸ್ವೀಕರಿಸಿ ಕೆಲಸ ಮಾಡಿಕೊಟ್ಟಿರುವರು. ಇದರ ಮುದ್ರಣದ ಜವಾಬ್ದಾರಿಯನ್ನು ಸ್ನೇಹಾ ಪ್ರಿಂಟರ್ಸ್‌ನ ಮಾಲೀಕರಲ್ಲಿ ಒಬ್ಬರಾದ ಚಿರಂಜೀವಿ ವಿ. ಮಹೇಶ್ ಹೊತ್ತಿರುವರು. ಸಮಗ್ರ ಕಾವ್ಯದ ಅಂತಿಮ ಸ್ವರೂಪ ಚೆನ್ನಾಗಿ, ತಪ್ಪಿಲ್ಲದೆ ಬರಲೆಂದು ನನ್ನೊಂದಿಗೆ ನನ್ನ ಪತ್ನಿ ಶ್ರೀಮತಿ ಲತಾ ಪುರಾಣಿಕ ಸಮನಾಗಿ ದುಡಿದಿರುವರು. ನಮ್ಮೆಲ್ಲರ ಶ್ರಮ ಈಗ ಅಕ್ಷರಗಳಲ್ಲಿ ರೂಪ ಪಡೆದಿದೆ. ಕೃತಜ್ಞತೆ ಎನ್ನುವುದು ಬರಿಯ ಔಪಚಾರಿಕ ಮಾತಲ್ಲ, ನಮ್ಮ ಅಂತಃಕರಣದ್ದು. ಈ ಮಹತ್ವದ ಯೋಜನೆ ಸಾಕಾರಗೊಳಿಸುವಲ್ಲಿ ನೆರವಾದ ಎಲ್ಲರನ್ನೂ ನೆನೆಯುವೆವು.

ಸಹೃದಯರು ಈಗ ಸಿದ್ಧಯ್ಯ ಪುರಾಣಿಕರ ಒಟ್ಟು ಕಾವ್ಯದ ಹಿನ್ನೆಲೆಯಲ್ಲಿ ಅವರ ಕೊಡುಗೆಯನ್ನು ಗುರುತಿಸುವರೆನ್ನುವ ಸದಾಶಯ, ಪ್ರಾಮಾಣಿಕ ಹಂಬಲ ನಮ್ಮದು.

– ಪ್ರಸನ್ನ ಕುಮಾರ್ ಪುರಾಣಿಕ

ಅನುಬಂಧ ೨

ಮುನ್ನುಡಿಗಳು

ಜಲಪಾತ

ನನ್ನ ಮಿತ್ರರಾದ 'ಕಾವ್ಯಾನಂದ' (ಶ್ರೀ ಸಿದ್ಧಯ್ಯ ಪುರಾಣಿಕ) ಇವರ 'ಜಲಪಾತ'ವೆಂಬ ಕವನ ಸಂಗ್ರಹಕ್ಕೆ ಮುನ್ನುಡಿ ಬರೆಯಬೇಕಾದ ಗೌರವ ಅವರ ಸೌಜನ್ಯದಿಂದ ನನಗೆ ಸಲ್ಲಿಸಲಾಗಿದೆ. ಜೀವನದಲ್ಲಿ ಸೌಂದರ್ಯದರ್ಶನವೊಂದು ಮಹದ್ಭಾಗ್ಯ, ಸಂಸ್ಮರಣೀಯ ರಸಾನುಭವವು ಅಪೂರ್ವ ಘಟನೆ. ಅದರಿಂದಾಗಿ ಸಾಹಿತ್ಯ ಸಂಪಾದನೆಯಾದರಂತೂ ಅದು ಈಶ ಕೃಪೆಯೇ ಸರಿ. ಇಂಥ ಸಾಹಿತ್ಯ ಸಂಪತ್ತಿಯ ಗರ್ಭದಲ್ಲಿ ಮಂತ್ರರತ್ನೋದಯವಾದರೆ ಆ ಮುಹೂರ್ತವನ್ನು ಏನೆಂದು ಕರೆಯಬೇಕು. ದಿಗಂತದ ಮಂತ್ರಘೋಷದಂತೆ ಶ್ರುತಿಗೆ ಆಕರ್ಷಕವಾಗಿ, ಆದರೆ 'ಅರ್ಥಕ್ಕೆ ಕುದಿವ ಪಾತಕಿ' ಮನಕ್ಕೆ ಪ್ರಳಯೋದಧಿ ಗರ್ಜನೆಯಂತೆ 'ರಮ್ಯಭಯಂಕರ'ವಾಗಿ ತೋರಬಹುದಾದ 'ಜಲಪಾತ'ದ ಕವನಗಳಿಗೆ ನಾನು ಸಹಜ ಸೌಮ್ಯವಾದ ಮುನ್ನುಡಿ ಬರೆಯುವದು ಸ್ವರಸಾಮಂಜಸ್ಯ ಧೋರಣೆಯಿಂದ ಸರಿಯಾಗಿದೆ ಎಂದು ರಸಿಕರಿಗೆ ತೋರದಿರಲಾರದು.

ಸಿದ್ಧಯ್ಯನವರ ಕೌಟುಂಬಿಕ ವಾತಾವರಣದಲ್ಲಿ ಮಹಾಕಾವ್ಯದ ಧ್ವನಿಗಳು ಅವರ ಬಾಲ್ಯದಿಂದಲೇ ದುಂದುಭಿಸುತ್ತಿದ್ದವು. ಪ್ರಾಯದ ಪ್ರಥಮ ಗ್ರಾಸದಲ್ಲಿಯೇ ಅವರು ಶರಣರ ಸಾಹಿತ್ಯವನ್ನು ಮುಕ್ಕಿದರು; ದೇಶಸೇವಾ ತತ್ಪರರಾದವರ ಸಂಗ ಸಹವಾಸಗಳಲ್ಲಿ ಕಾಲ ಕಳೆದರು. ಅವರು ಮಾಡಿದ ವಿದ್ಯಾಭ್ಯಾಸವೂ ಅವರ ಹೃದಯದವರೆಗೆ ಪ್ರವೇಶ ಮಾಡಿತು. ಇದೆಲ್ಲದರ ಪರಿಣಾಮವೆಂದರೆ ಅವರಲ್ಲಿ ಭಾವನೆಯ ವಾಯುವೇಗವೂ ಬುದ್ಧಿಯ ಅಗ್ನಿಗುಣವೂ ಸೇರಿಕೊಂಡಿದೆ. ಅಗ್ನಿಪುತ್ರಿಗೆ ವಾಯುಪುತ್ರನ ಯುತಿಯಾದಾಗ ಕುರುಕ್ಷೇತ್ರವೂ ಚಿಕ್ಕದಾಯಿತೆಂಬುದನ್ನು ಕನ್ನಡದ ಕವಿ ರನ್ನನು ತನ್ನ ರೌದ್ರರಸಭರಿತವಾದ 'ಗದಾಯುದ್ಧ'ದಲ್ಲಿ ಬಣ್ಣಿಸಿದ್ದಾನೆ. ಕನ್ನಡ ಕಂದ ಕಾವ್ಯಾನಂದರು ಇಪ್ಪತ್ತನೆಯ ಶತಮಾನದ ವಿಶ್ವಗ್ರಾಸಿಯಾದ ಜ್ವಾಲಾ ಮಾಲೆಯಲ್ಲಿ ಕಂಡ ಕಾಲದ ಘೋರ ರೂಪವನ್ನು ಅನೇಕ ಮುಖವಾಗಿ ವರ್ಣಿಸಿದ್ದಾರೆ. ಅವರ ಕಾವ್ಯವಾಣಿಯಲ್ಲಿ ಆಕರ್ಷಣೆ–ವಿಕರ್ಷಣೆಗಳು ಸರಿತೂಕವಾಗಿ ಸೇರಿಕೊಂಡಿವೆ. ಇಲ್ಲಿಯ ಓಜಸ್ಸಿನ ಕಾಂತಿಮತ್ತಾದ ಗುಣ ಇದರಲ್ಲಿದೆ.

ಈ ಸಂಗ್ರಹದ ಹೆಸರಿಗೆ ಕಾರಣವಾದ 'ಜಲಪಾತ' ವೆಂಬ ಮೊದಲ

ಕವನಕ್ಕಿಂತ ಎರಡನೆಯದಾದ 'ಅಬ್ಬರದ ತಡಸಲು' ಇಲ್ಲಿಯ ಪ್ರಾರಂಭದ ಕವನಗಳ ಸ್ಥಾಯಿ ಭಾವವನ್ನು ಖಡೇ ! ಖಡೇ ! ಎಂದು ಧ್ವನಿಸುತ್ತದೆ ತೀರ ವಾಚ್ಯವಾಗಿಯೂ ಹೇಳುತ್ತದೆ.

ನಾನಿಹೆನೊ ಉಪಕಾರಿ ಇಲ್ಲವೇ ಅಪಕಾರಿ
ನನಗೆ ಸಹ ಗೊತ್ತಿಲ್ಲ, ನಾನು ಮಾರಿ !
ನನ್ನ ಬರಿ ಜರಿಯದಲೆ ನನ್ನ ವಶಪಡಿಸಿಕೊಳಿ
ಮಾಡಿ ನೋಡಿರಿ ನನ್ನ ಶಕ್ತಿ ಫಲಕಾರಿ ! (ಪುಟ ೨)

'ಮಾನವ ಸಮಾಜ' ಎಂಬ ಕವನದಲ್ಲಿ 'ಕುರಿ ತೋಳಗಳ ಕೊಲ್ವ ಕಾಲ ಬಂತು' ಎಂದು ಎಚ್ಚರಿಸುತ್ತಿದ್ದಾರೆ. ರಘುಕಾರರ ಹಾವಳಿ ಪ್ರತಿ ಹಾವಳಿಗಳಲ್ಲಿ ಇಂಥ ವೈಪರೀತ್ಯವೂ ಕಂಡುಬಂತು. ಆದರೆ–ಮೊಲ–ನಾಯಿಯನ್ನು ಬೆನ್ನಟ್ಟುವಲ್ಲಿ ಗಂಡುಭೂಮಿ ಇರುತ್ತದೆ –ಎಂದು ಹೇಳುವ ಹಾಗೆ ಈ 'ಕುರಿ–ತೋಳ'ಗಳ ಸಂದರ್ಭದಲ್ಲಿ ಅಂಥ ಪೌರುಷದ ಅನುಭವ ಅಷ್ಟು ಪ್ರತೀತವಾಗಲಿಲ್ಲ. ಮಹಾಯುದ್ಧಗಳಿಂದ ಪ್ರಾರಂಭವಾಗಿರುವ ವಿಶ್ವಘಟನೆಗಳಲ್ಲಿಯೂ ಯಾವ ಧ್ವನಿತಾರ್ಥ ಹುದುಗಿದೆ ಎಂಬುದನ್ನು ಇನ್ನೂ ಆಕರ್ಣಿಸಿ ತಿಳಿದುಕೊಳ್ಳಬೇಕಾಗಿದೆ. 'ಬಡವರ ಯುಗ ಬರುತಿದೆ' ಎಂದು ಅವರ ಮತ್ತೊಂದು ಕವನ ಸಾರಿದೆ. ಅದರ ಗರ್ಭಾವತರಣ, ಜನ್ಮಾವತರಣಗಳ ಬೇನೆ ಇನ್ನೂ ತೀರಿಲ್ಲ ಎಂದು 'ಕೋರಿಯಾ' ಸಾರುತ್ತಿದೆ. ಭಾರತವೂ ಗುಮ್ಮನೆ ಘೂತ್ಕರಿಸುತ್ತಿದೆ. ಧನಿಕ–ಬಡವರ ಸಂಧಿ ವಿಗ್ರಹಗಳಲ್ಲಿ ಅಮೇರಿಕಾ–ರಸಿಯಾಗಳು ತಮ್ಮ ಸ್ಥಾನ ಮಾನಗಳಂತೆಯೇ ಪೂರ್ವ–ಪಶ್ಚಿಮ ಮಾರ್ಗ ಹಿಡಿದಿದೆ. ಈ ಅಪೂರ್ವ ಪೂರ್ವ ಪಕ್ಷಗಳಿಗೆ ಉತ್ತರಪಕ್ಷದ ಸಿದ್ಧಾಂತ ಬರಬೇಕಾಗಿದೆ. ನಮ್ಮ ಆರ್ಯದರ್ಶನವು ರೌದ್ರವು ಪೂರ್ವಪಕ್ಷವಾದಾಗ ಶಿವನೇ ಉತ್ತರಪಕ್ಷವಾದರೆ ಕಲ್ಯಾಣಕಾರಿ ಎಂದು ಎಂದಿನಿಂದಲೂ ಸೋಬಾನೆ ಹೇಳುತ್ತ ಬಂದಿದೆ. 'ಬೆಟ್ಟದುರಿ' ರೂಪಕ ಕವನದ ಆಹ್ವಾನವು ಆ ಶಿವದ ಅರಿವನ್ನು ಒಳಗೊಂಡಿದೆ. ಅಂತೆಯೇ:

ಬಲು ಜೋಕೆ ಗಾಳಿಯೇ–ಬಾಯಿಂದ ಆಡಿದುದು
ಕೃತಿಯಲ್ಲಿ ಮಾಡಿದುದು ಬೇರಾಗದಿರಲಿ ! (ಪುಟ ೧೭)

ಕಾವ್ಯಾನಂದರ ಕಾವ್ಯರಚನೆಯ ಆಸ್ತಿಭಾರಕ್ಕೆ ತತ್ತ್ವಗಳ ತೂಕವಿರುವದರಿಂದಲೆ ಅವರ ರಾಗದ ತ್ವೇಷದ (ದ್ವೇಷದ ಅಲ್ಲ !) ನುಡಿಗಳಲ್ಲಿ ಬೆಂಕಿಯ ಜತೆ ಜತೆಗೆ ಬೆಳಕೂ ನುಗ್ಗುತ್ತದೆ. ಅವರು ಮಹನೀಯರ ಮಾರ್ಮಿಕ ವಚನಗಳನ್ನು ಚೆನ್ನಾಗಿ ಮನನ ಮಾಡಿದ್ದಾರೆ. ''Light is the greatest germicide, insecticide'' ಎನ್ನುವ 'ಏ. ಈ' (ಐರ್ಲಂಡದ ಕವಿಪುಂಗವ)ಯವರ ಸೂಕ್ತಿಯನ್ನು ಒಂದೆಡೆಗೆ ಅವರೇ ಹೇಳಿ ''ಪ್ರಕಾಶ ಪ್ರಸರಣಗೈವ ಸತ್ಯೋಪಾಸನೆಯೇ ಸಾಹಿತ್ಯದ ನಾಂದಿ' ಎಂದು ತಮ್ಮ ಮಾತು ಮುಂದೆ ಪೋಣಿಸಿದ್ದಾರೆ. ಸಾಹಿತ್ಯದಿಂದ ಜನ ಕಲ್ಯಾಣ

ಕಾರ್ಯ ಸಾಧ್ಯ ಎಂಬ ನಂಬಿಗೆ ಅವರಲ್ಲಿ ಬಿಂಬಿಸಿದೆ. 'If, therefore, a new society is to be built up it can be built up only by the contributions of first rate creative artists,' ಹೀಗೆಂದು ಸಾರುವ ಶ್ರೀ ರಾಧಾಕೃಷ್ಣನ್ ಅವರ ವಚನವನ್ನೂ ಅವರು ಉದ್ಧರಿಸಿದ್ದಾರೆ. ನಾನಿಷ್ಟೇ ಹೇಳಬಹುದು– ಕಾವ್ಯಾನಂದರ ವಾಣಿ ಕಲಾಕಾರನ ವಾಣಿ, ಅದರಲ್ಲಿ ಸೃಜನಶಕ್ತಿ ಇದೆ; ಆದರೆ ಯಾವ ಸೃಷ್ಟಿಶಕ್ತಿಗೆ ಸ್ಥಿತಿ–ಸಂಹಾರ ಶಕ್ತಿಗಳ ಮುಂಬಲ ಹಿಂಬಲಗಳಿಲ್ಲವೋ ಅದು ತನ್ನ ನಿರ್ಮಿತಿಯಿಂದ ಅಷ್ಟು ಸಾರ್ಥಕತೆ ಪಡೆಯುವುದಿಲ್ಲ. ಈ ಮೂರು ಶಕ್ತಿಗಳ ಮುಪ್ಪುರಿ ಇದ್ದರೆ ಅದು first rate, second rate ಎಂದು ಬೆರಳೆಣಿಸುವದು 'ಎಣ್ಣೆಗೆ ಬೆಣ್ಣೆ ಸಣ್ಣ' ಎಂಬಂತೆ ಅಧಿಕ ಚಿಕಿತ್ಸೆಯಾದೀತು.

ಈ ಸಂಗ್ರಹದಲ್ಲಿ 'ಅಬ್ಬರ ತಡಸಲ' ವಷ್ಟೇ ಇಲ್ಲ. ಅದು ತನ್ನ 'ತಾಸೇಬಜಂತ್ರಿ'ಯನ್ನು 'ಬಾಣದ ತಡಸಲಿ' ನ ಹತ್ತಿರ ಮುಗಿಸಿದೆ. ಮುಂದೆ ಜೋಗದ ಜಲಪಾತವು ಶರಾವತಿಯಾಗಿ ಹರಿದು ಹೋಗುವಂತೆ ಅವರ ಕಾವ್ಯದ ಪ್ರವಾಹವು ಧರ್ಮಜಿಜ್ಞಾಸೆ–ಪ್ರೇಮದ ಅನುಶಾಸನಗಳ ಮಾರ್ಗವಾಗಿ 'ಸಮರಸ'ದಲ್ಲಿ ಕೊನೆಗಾಣುತ್ತದೆ. ಜೀವನವು ಅರ್ಥಮೂಲವಾದರೂ ಜೀವನದ ಒಳ ಜೀವನವು 'ಧರ್ಮ–ಪ್ರೇಮ'ಗಳ ಕೇಂದ್ರದ್ವಂದ್ವಗಳಲ್ಲಿ ತನ್ನ ಮುಕ್ತಿಮಾರ್ಗವನ್ನು ಹುಡುಕುತ್ತದೆ. ಇಂಥ ಧರ್ಮದಲ್ಲಿ ಸದ್ಯಕ್ಕೆ ದೇಶಧರ್ಮ–ರಾಷ್ಟ್ರಧರ್ಮ ಭಾಷಾಧರ್ಮಗಳ ಪರಿಪಾಲನೆಯೂ ಹೃದಯವಂತರ ಹೃದಯಾಕರ್ಷಣ ಮಾಡಿದೆ. ಕಾವ್ಯಾನಂದರು ಆ ದೈವತಗಳಿಗೂ ತಮ್ಮ ಮುಡಿಪು ಸಲ್ಲಿಸಿದ್ದಾರೆ.

ಕನ್ನಡದ ಬತ್ತಿಯೆಳೆಗಿಡಿದ ಮಂಕನು ತೆಗೆಯೆ
ನನ್ನ ಕಾಯವು ಚಾಚು ಕಡ್ಡಿಯಾಗಿರಲಿ !
ಭಾರತದ ದೀವಳಿಗೆಯಲ್ಲಿ ಸಿವಗನ್ನಡದ
ಜ್ಯೋತಿಯಿದು ತೇಜಸ್ಸಿನೊಡ್ಡಿಯಾಗಿರಲಿ (ಪು. ೬೦)

'ಬತ್ತಿ' ಎಷ್ಟೆಂದರೂ ಹತ್ತಿಯ ಬದುಕು, ಎಣ್ಣೆ–ಕಾಳಿನ ಸತ್ತ್ವ, ಅಗ್ನಿ ಸಂಯೋಗದಲ್ಲಿಯೂ ಅವಕ್ಕೆ 'ಮಂಕು–ಮಂಕು' ಹಿಡಿಯುವದು ಸಹಜ. ಅದನ್ನು ತೆಗೆಯುವ 'ಸಿವಗನ್ನಡದ ಜ್ಯೋತಿ'ಗೆ ಯಾವಾಗಲೂ ಸ್ವಾಗತವಿದೆ. ಅದಕ್ಕಾಗಿ ಕಾಯವನ್ನು ತೆಯ್ದು ಕಡ್ಡಿ ಮಾಡಿಕೊಳ್ಳುವ ಸಿದ್ಧತೆ 'ದಧೀಚಿ'ಯ ವಜ್ರಸಾಧನೆಯ ಜಾತಿಯದು. ಆ ಕೆಚ್ಚಿನ ಉಪಾಸಕರು ಕಾವ್ಯಾನಂದರು. ಅಂತೆಯೆ ಅವರು,

ಭಾರತಿಗೆ ಬಲವಾಗಿ ವಸುಮತಿಗೆ ಚೆಲುವಾಗಿ
ಸಕಲರಿಗೆ ಗೆಲುವಾಗಿ ನಮ್ಮ ಹೊಸ ಹುಟ್ಟು (ಪುಟ ೬೫)
ಎಂದು 'ಕನ್ನಡದ ಬೆಳೆ'ಯಲ್ಲಿ ಸಾರಿ,
ಇದಕಾಗಿ ಒಂದಾಗಿ ದುಡಿಯುವೆವೆ ನಾವು?

ಈ ಗುರಿಯ ಕಡೆ ಕೂಡಿ ನಡೆಯುವೆವೆ ನಾವು?
ಇದಕಡ್ಡ ಬಂದುದನು ತೊಡೆಯುವೆವೆ ನಾವು?
ಇದರ ಸಾಧನೆಯಲ್ಲೆ ಮಡಿಯುವೆವೆ ನಾವು?
ಕಿರಿಯರಿದನೇ ಕೇಳಲಿ
ಹಿರಿಯರುತ್ತರ ಹೇಳಲಿ ! (ಪುಟ ೬೩)

ಎಂದು ಅಬ್ಬರದಿಂದ ಗದರಿಸಿದ್ದಾರೆ. ಆದರೆ ಇಂದಿನ ಕಿರಿಯರು ನಾಳಿನ (ನಾಡಿನ ಎಂದರೂ ಸೈ) ಹಿರಿಯರು. ಅವರೇ ಇದಕ್ಕೆ ಉತ್ತರ ಕೊಡಲು ಉತ್ತರಾಧಿಕಾರಿಗಳು. ೩೦–೪೦ ವರ್ಷಗಳ ಹಿಂದಿನ ಯಾವ ಹಿರಿಯರು ಕಾವ್ಯಾನಂದರಂತೆ 'ತಾಯ ಬರವಿ'ನ ಅಪೂರ್ವ ಸಂಭ್ರಮ ಕಂಡಿದ್ದರು? 'ಜನ ಜೀವನ ಜಾನ್ಹವಿ'ಯ ಘೋಷವಂತೂ ಮೂರನೆಯ ಮಹಾಯುದ್ಧದ ಮುಂಚೂಣಿಯಲ್ಲಿ ಹುಟ್ಟಬಹುದಾದ ಮಂತ್ರ.

'ಮನೆ ಮಾಡಲಿ ವಿಜ್ಞಾನವು ಗುಡಿಸಲ ಬದಿಯಲ್ಲಿ' (ಪುಟ ೭೦) ವಿಜ್ಞಾನವು 'ಡಿಳ್ಳಿ' ಬಿಟ್ಟು ಹಳ್ಳಿ'ಗೆ ಬರಬೇಕಾದರೆ ಕಿರಿಯರ ಮೂರು ತಲೆಮಾರು ಉರುಳಬೇಕಾಗುವದು. ಆ ತಲೆಗಳಿಂದ ನವರಾಜಮಾರ್ಗದ ಘಟ್ಟಣೆಯಾಗಬೇಕಾಗಿದೆ. ಇದಾಗುವದಾದರೆ ಕಿರಿಯರ ಹೃದಯದುರ್ಗವನ್ನು ಬಹಳ ಭದ್ರವಾಗಿ ಕಟ್ಟಬೇಕಾದೀತು. ಅದರ ದರ್ಶನ–ಜಾಗೃತಿ ಈ ಕವಿಗಳಿಗಿಲ್ಲದೆ ಹೋಗಿಲ್ಲ. 'ಬಿಂದು ಸಿಂಧು' 'ಕಾಯಕ' 'ಪ್ರೇಮ–ಕರ್ಮ' 'ಜ್ಞಾನ–ಪ್ರೇಮ' 'ಸೌಂದರ್ಯ–ಪ್ರೇಮ' (ಪುಟ ೩೬ ರಿಂದ ೫೩) ಈ ಕಾವ್ಯ ಮಾಲೆಯಲ್ಲಿದೆ.

'ಯಾರಿಂದ ಬಂದುದೀ ನೀರೆಂದು ವಿಂಗಡಿಸಿ
ಬೇರೆ ಬೇರಾಗಿದನು ತೋರಿಸಲು ಬಹುದೇ?'
ಇದು ಅವ್ಯಾಪಾರ.
'ಯಾರ ನೀರಾದರೂ ತನಗಾಗಿ ಅರಿಸಿಹ
ದಾರಿಯೇ ಬೇರೆಯಿರೆ ಎರವಲೆನಬಹುದೆ? (ಪುಟ ೧)

'ಜಲಪಾತ'ದ ಈ ನುಡಿ ನೆನಪಿಡುವದು ಲೇಸು.

ಹೀಗೆ ಪ್ರೇಮದ ಮುಮ್ಮುಖದ ದರ್ಶನ ಮಾಡಿಕೊಂಡ ಕವಿಯ ಪ್ರೇಮ ಗೀತೆಗಳನ್ನು ಓದಲು ರಸಿಕರು ತವಕಪಟ್ಟರೆ ಅದು ಅಸಹಜವೆನಿಸಲಾರದು. ರಸಿಕರ ಆ ಆಸೆ ತಣಿವಂತೆ ಈ ಸಂಗ್ರಹದಲ್ಲಿ ಪುಟ ೭೩ ರಿಂದ ೧೧೦ರ ವರೆಗೂ ಆ ಗೀತೆಗಳಿವೆ. ಅರ್ಥ ಜಿಜ್ಞಾಸೆ, ಧರ್ಮಜಿಜ್ಞಾಸೆಗಳಿಗೇ ಕವಿ ಮಾರುವೋದನೋ ಎಂದು ಸಂಶಯಾಕುಲರಾದಾಗ 'ರಾಜಾ ರಾಣಿ' 'ನಿನ್ನ ನೋಡಿ ಬಂದ ಮೇಲೆ' 'ಇಜ್ಜೋಡು' 'ಬಾಳು ಕಹಿಯಾದರೂ ನೆನಹು ಕಹಿಯಲ್ಲ' 'ಹೊಸ ಹೆಂಡತಿಗೆ' 'ಹೊಸ ಗಂಡನಿಗೆ' 'ಕಿವಿ ಮಾತು' 'ಸಮರಸ'ವೆಂಬ ಕವನಗಳು ಭಾವತರಂಗದ

ಮಾಲೆ ಮಾಲೆಯಾಗಿರಬಹುದು. ರಸಿಕ ಹೃದಯವನ್ನು ಜೋಕಾಲಿಯಾಡಿಸುವವು.

'ಗಂಡು ಹೆಣ್ಣಿನ ಬಾಳು ಗಂಡಭೇರುಂಡದೊಲು
ಎರಡು ಮುಖ ಒಂದಾತ್ಮ ದುಃಖ ಹರುಷ (ಪುಟ ೧೧೦)
ಎಲ್ಲರ ಅನುಭವದ ಮಾತು,
ಎಲ್ಲೆಡೆಯೊಳೂ ಶುದ್ಧ ಪ್ರೇಮವನೆ ಕಾಣುವಂ
ತೆನ್ನ ನಯನಕೆ ಬರಲಿ ಪ್ರೇಮ ದೃಷ್ಟಿ !
ನಿನ್ನ ನಗೆಯಂತೆಯೇ ನಗುನಗುತ ಕಾಣಿಸಲಿ
ನನ್ನ ಕಣ್ಣಿಗೆ ಸಕಲ ಮನುಜ ಸೃಷ್ಟಿ ! (ಪುಟ ೧೦೯)

ಇದು ಮಾತ್ರ ಎಲ್ಲರ ಅನುಭವಕೆ ಬರಬೇಕಾದ ಮಾತು. ಹೃದಯದ ಹಸಿವು ಇದು. ಈ ಹಸಿವು ಹಿಂಗುವವರೆಗೆ 'ಸಮರಸ'ದ ಹಾಡು ರಸವಾಗಿ ಬರದು.

ಮೂಗಿಯಾಗಿರುವುದೇ ಮೇಲು ಗೆಳತಿ ! (ಪುಟ ೧೧೧)
ಮೌನ ಹಾಗೂ ಲೇಸು, ಹೇಗೂ ಲೇಸು.

ಪೂರ್ವದಲ್ಲಿ ಕವಿಗಳು ಧರ್ಮಾರ್ಥ ಕಾಮ ಮೋಕ್ಷ ವಿಚಕ್ಷಣತೆಯನ್ನು ಕಾವ್ಯೋದ್ಗಾರಗಳಲ್ಲಿ ಪ್ರಕಟಿಸುತ್ತಿದ್ದರು. ಮತ್ತೆ ಆ ಕಾಲ ಮರಳಲಿದೆ.

* ''Let the artist be always alive to his duty towards the masses'' ಮಹಾತ್ಮರ ಈ ಮಾತನ್ನು ಮರೆಯಬಾರದು. ಅದರೊಡನೆ–

* The passion for truth, goodness, beauty and freedom gives meaning to life'' ಎನ್ನುವ ಶ್ರೀ ಪಂಡಿತ ಜವಾಹಿರಲಾಲರ ಮಾತನ್ನೂ ನೆನಪಿನಲ್ಲಿಡಬೇಕು. ಈ ಮಾತಿನ ಮರೆವಾದರೆ ಕಾವ್ಯಾನಂದರ 'ಜಲಪಾತ'ವು ಅಬ್ಬರದಿಂದ ನಮ್ಮನ್ನೆಬ್ಬಿಸುತ್ತದೆ. ನಮಗೆ ಎಚ್ಚರವಿದ್ದರೆ ಈ ಚಿಂತನದಲ್ಲಿ ನಮ್ಮ ಮೈಮರೆಯಿಸುತ್ತದೆ. ಈ 'ಜಲಪಾತ' ಜೀವನದಲ್ಲಿ ನೈರ್ಮಲ್ಯವನ್ನು ತರಲಿ.

ಸೊಲ್ಲಾಪುರ **–ದ.ರಾ.ಬೇಂದ್ರೆ ಎಂ.ಎ.**
೨೨–೪–೧೯೫೩.

---

* 'ಸುರಪುರ' ಭಾಷಣದ ಮುಖ ಭೂಷಣಕ್ಕಾಗಿ ಶ್ರೀ ಕಾವ್ಯಾನಂದರೇ ಈ ವಚನಗಳನ್ನು ಎತ್ತಿ ಒತ್ತಿ ಮುದ್ರಿಸಿದ್ದಾರೆ.

– ಸಾ.ರಾ.

ಕರುಣಾ ಶ್ರಾವಣ

ಹಲವು ಒಳ್ಳೆಯ ಭಾವಗೀತೆಗಳನ್ನು ಈ ಸಂಕಲನದಲ್ಲಿ ಜೊತೆಗೂಡಿಸಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಕಾವ್ಯದಲ್ಲಿ, ಜೀವನದಲ್ಲಿ ರಸ ಎಲ್ಲಿದೆ ಎಂಬುದನ್ನು ನೀವು ಅರಿತಿದ್ದೀರಿ. ಜೀವನದ ಅಮೃತ, ವಿಷಗಳೆರಡರಲ್ಲೂ ಲೇಖನಿಯನ್ನು ಅದ್ದಿ ಕಾವ್ಯ ಬರೆಯಬಹುದೆಂದು ಸಾರಿದ್ದೀರಿ, ತೋರಿಸಿದ್ದೀರಿ.

ಕಲಾ ಪ್ರೇಮಿಗಳಾದ ಮೈಸೂರಿನ ಶ್ರೀಮನ್ಮಹಾರಾಜರವರ ಶುಭ ಹಸ್ತದಿಂದ ನಿಮ್ಮ 'ಕರುಣಾ ಶ್ರಾವಣ'ದ ಪ್ರಕಾಶನ ನೆರವೇರುವುದೆಂದು ತಿಳಿದು ನನಗೆ ತುಂಬ ಸಂತೋಷವಾಯಿತು. ಈ ಮಂಗಲಕಾರ್ಯ ರಮ್ಯವಾಗಿ ನಡೆಯಲೆಂದೂ, ನಿಮ್ಮ ಕಾವ್ಯದ ನೆರವಿನಿಂದ "ಧರೆಯ ಉತ್ಥಾನ ಹರನ ಅವತರಣ" ಈ ಎರಡನ್ನೂ ಎಲ್ಲೆಡೆಯಲ್ಲೂ ಕಾಣುವ ಶಕ್ತಿ ನಮ್ಮ ಜನತೆಗೆ ಒದಗಲೆಂದೂ ಹಾರೈಸುತ್ತೇನೆ.

–ತೀ. ನಂ. ಶ್ರೀಕಂಠಯ್ಯ

ಶ್ರೀಮಾನ್ ಸಿದ್ಧಯ್ಯ ಪುರಾಣಿಕರವರ ಕೆಲವು ಭಾವಗೀತೆಗಳನ್ನು ಬಿಡಿಬಿಡಿಯಾಗಿ ಪತ್ರಿಕೆಗಳಲ್ಲಿ ಓದಿ ತುಂಬಾ ಸಂತೋಷಪಟ್ಟಿದ್ದೇನೆ. ಈಗ ಪ್ರಕಟವಾಗಲಿರುವ 'ಕರುಣಾ ಶ್ರಾವಣ' ಎಂಬ ಕವಿತಾ ಸಂಗ್ರಹ ಇಮ್ಮಡಿ ಆನಂದದಾಯಕವಾಗಿದೆ. ಅವರ ನೈಜವಾದ ನೈಸರ್ಗಿಕ ಪ್ರೇಮ ಇಲ್ಲಿ ಬಣ್ಣ ಬಣ್ಣವಾಗಿ ಕಂಗೊಳಿಸುತ್ತಿದೆ. ಹೂವು, ಹಣ್ಣು, ಹಕ್ಕಿ, ಬಾನು, ಬೆಳದಿಂಗಳು, ತಿಂಗಳು ಮುಂತಾದ ಚಿರಂತನ ರಮಣೀಯವಾದ ವಸ್ತುಗಳು ಇಲ್ಲಿ ಸಪ್ರಾಣಿಸಿ ತಂತಮ್ಮ ಸೊಗಸುಗಳನ್ನು ಸೂಸಿವೆ. ಕವಿಹೃದಯವನ್ನು ಅವು ಯಾವ ಯಾವ ತೆರದಲ್ಲಿ ಎಚ್ಚರಗೊಳಿಸಿ ಎಂಥೆಂಥ ಭಾವಗಳನ್ನು ಅರಳಿಸಿವೆಯೆಂಬುದನ್ನು ರಸಿಕಹೃದಯ ಅನುಭವಿಸಿ ಆನಂದಿಸುತ್ತದೆ. ಕವಿತೆಗಳಲ್ಲಿ ತುಂಬಿರುವ ಅಚ್ಚ ಸರಳತೆ, ಭವ ಲಾಲಿತ್ಯ, ಶಬ್ದ ಮಾಧುರ್ಯಗಳು ಶ್ರೀ 'ಕಾವ್ಯಾನಂದ'ರ ಕಲೋಪಾಸನೆಯ ವೈಶಿಷ್ಟ್ಯ. ಅವರ ಸಾಧನೆ ಮುಂದುವರಿದು ಗಂಭೀರವಾಗಿ, ಶಕ್ತಿಯುತವಾಗಿ, ಆತ್ಮ–ಸಿದ್ಧಿ ಸೌಂದರ್ಯದ ಅನ್ವೇಷಣೆಯಲ್ಲಿ ಅವರಿಗೆ ದೊರೆಯಲೆಂದು ಹಾರೈಸುತ್ತೇನೆ.

–ಡಿ. ಎಲ್. ನರಸಿಂಹಾಚಾರ್

ನಿಮ್ಮ ಕವನಗಳನ್ನು ಓದಿ ಓದಿ ಆನಂದಿಸಿದ್ದೇನೆ. ಪರವಶನಾಗಿದ್ದೇನೆ. ಕನ್ನಡದ ತಾಯಿ ನಿಮ್ಮಿಂದ ಇದಕ್ಕೂ ಮಿಗಿಲಾಗಿ, ಅವ್ಯಾಹತವಾಗಿ ಸೇವೆ ತೆಗೆದುಕೊಳ್ಳಲಿ. ನೀವು ನಮ್ಮ ಹೆಮ್ಮೆಯ ಕವಿಗಳಾಗಿ ಚಿರಕಾಲ ಬಾಳಿರಿ ಎಂಬುದೇ ಪರಮಾತ್ಮನಲ್ಲಿ ನನ್ನ ಹೃತ್ಪೂರ್ವಕವಾದ ಪ್ರಾರ್ಥನೆ.

'ಸಹಜೀವನ ಸಾಹಿತ್ಯ ಮಾಲೆ'ಗೆ ನಿಮ್ಮ ಕೃತಿ ಪ್ರಥಮ ಪುಷ್ಪವಾಗಿ ಲಭಿಸಿದ್ದು ಆ ಮಾಲೆಯ ಸುಕೃತ. ಇಂಥ ಪುಷ್ಪಗಳಿಂದ 'ಸಹಜೀವನ ಸಾಹಿತ್ಯ ಮಾಲೆ' ದಿಗಂತದಲ್ಲಿ ತನ್ನ ಪರಿಮಳವನ್ನು ಹರಡಲಿ, ಕನ್ನಡಿಗರಿಗೆ ಸುಖ ಸಂತೋಷಗಳನ್ನು ಕೊಡಲಿ.

–ಡಿ. ಕೆ. ಭೀಮಸೇನರಾವ್

ಮಾನಸ ಸರೋವರ

"ಕಾವ್ಯಾನಂದ" ಎಂಬ ಅನ್ವರ್ಥವಾದ ಅಂಕಿತದಿಂದ ಶ್ರೀ ಸಿದ್ಧಯ್ಯ ಪುರಾಣಿಕರು ಕಾವ್ಯರಚನೆಯನ್ನು ಮಾಡುತ್ತಿರುವುದಲ್ಲದೆ ನನ್ನಿಂದ ಈ ಮುನ್ನುಡಿಯನ್ನು ಅಪೇಕ್ಷಿಸಿ ತಮ್ಮ ಸಹೃದಯತೆಯನ್ನೂ ಸೌಜನ್ಯವನ್ನೂ ಪ್ರಕಾಶಪಡಿಸುತ್ತಿದ್ದಾರೆ. 'ಕವಿಗೆ ಕವಿ ಮುಳಿವಂ' ಎಂಬೊಂದುಕ್ತಿಯುಂಟು. ಅದು ತನ್ನ ಕಾವ್ಯದಿಂದ ಕವಿ ಪಡೆವ ಖ್ಯಾತಿ ಲಾಭ ಪೂಜಾದಿ ಲೌಕಿಕ ಫಲಗಳನ್ನು ಕುರಿತ ಮಾತು. ಆದರೆ ಕವಿಗೆ ಕವಿಯೊಲಿವಂ ಎಂಬ ನವಸೂಕ್ತಿಯೊಂದೂ ಉಂಟು. ಅದು ಕವಿಯಿಂದ ಕವಿ ಪಡೆವ ಅಲೌಕಿಕಾನಂದವನ್ನು ಕುರಿತು ಹೊರಟ ನುಡಿ. ನನ್ನ ಈ ಮುನ್ನುಡಿ ಈ ಎರಡನೆಯ ಸೂತ್ರಕ್ಕಳವಟ್ಟು ಹೊರಟಿದೆ. ಇದು ಪರಸ್ಪರ ಪ್ರಶಂಸೆಯ ಮಾತಿನ ಪ್ರಶ್ನೆಯಲ್ಲ. ವಿಜ್ಞಾನಿ ತಾನು ಕಂಡುಕೊಂಡ ವೈಜ್ಞಾನಿಕ ತತ್ತ್ವಗಳ ಸತ್ಯಕ್ಕೆ ಸಾಕ್ಷಿಯಾಗಿ ಮತ್ತೊಬ್ಬ ಪರಿಶ್ರಮಿಯನ್ನು ಕೋರುವಂತೆ ಕವಿಯೂ ಸಹ ಈ ಲೋಕದಿಂದ ಪಡೆಯುವ ಭಾವನಾ ಸತ್ಯಕ್ಕೆ ಸಾಕ್ಷಿಯಾಗಿ ಅದೇ ಕಸಬಿನ ಮತ್ತೊಬ್ಬನನ್ನು ಕೋರುವುದು ಸಹಜ. ಯಾವ ಕೃತಿಕಾರನಿಗೂ ತನ್ನ ಕೃತಿಗಳು ಹೊರಗೆ ಹೇಗೆ ತೋರುತ್ತವೆ. ಎಂಬುದರ ಸಂಪೂರ್ಣ ಜ್ಞಾನವಿರುವುದಿಲ್ಲ. ರೇಡಿಯೋವಿನಲ್ಲಿ ತನ್ನ ಧ್ವನಿಯನ್ನು ಕೇಳಿದಾಗಲೆಲ್ಲ ತನ್ನ ಕೊರಲು ಹೀಗಿದೆಯೇ ಎಂದು ಯಾವಾತ ಶಂಕಿಸುವುದಿಲ್ಲ? ಕನ್ನಡಿಯಲ್ಲಿ ಎಷ್ಟು ಸಲ ನೋಡಿಕೊಂಡಿರಲಿ ಅಥವಾ ತನ್ನ ಚಲನಚಿತ್ರ ಬಿಂಬವನ್ನೇ ಕಂಡಿರಲಿ ತನ್ನ ರೂಪವಿಂಥದೇ ಎಂಬ ಸ್ಪಷ್ಟ ಸುಷ್ಟು ಜ್ಞಾನ ಯಾರಿಗುಂಟು? ತನ್ನ ಕವಿತೆ ಹೇಗಿದೆ ಎಂಬ ಪರಿಜ್ಞಾನ ಕವಿಗೆ ಸಹೃದಯನಿಂದಲೇ ಆಗಬೇಕು. ಸ್ವಸಂತೋಷ ಕ್ಷಣಿಕವಲ್ಲ ರಸನಿಷ್ಠವೆಂಬುದಕ್ಕೆ ಸಹೃದಯನ ಸಂತೋಷವೇ ಸಾಕ್ಷಿ. ಅಂಥ ಸಾಕ್ಷಿತ್ವವನ್ನು "ಕಾವ್ಯಾನಂದ"ರ ಈ ಕೃತಿಗಳೂ ಕೋರುತ್ತವೆ. ಇವನ್ನು ಓದಿ ನನ್ನ ಮನಸ್ಸು ಉಲ್ಲಾಸದಿಂದ ಅರಳಿದಂತೆ ಸಹೃದಯರ ಹೃದಯವೂ ಪ್ರಫುಲ್ಲವಾಗಿ ಅವರು ಈ ಕೃತಿಯನ್ನು ತಮ್ಮ ಆದರದಿಂದ ಬಹುಮಾನಿಸುತ್ತಾರೆಂಬುದರಲ್ಲಿ ನನಗೆ ಸಂದೇಹವಿಲ್ಲ.

ಏಕೆಂದರೆ ಸತ್ ಕವಿತೆಯಿಂದಲೂ ಸಂಗೀತದ ಕಲೆಗಳಿಂದಲೂ ನಾವು ಪಡೆಯಬಹುದಾದ ಸಂತೋಷೋಲ್ಲಾಸಗಳು ನಮಗೆ ಮತ್ತಾವ ಮಾರ್ಗಗಳಿಂದಲೂ ದೊರೆಯತಕ್ಕವುಗಳಲ್ಲ. ಕಾವ್ಯಭೋಗ ಅದೊಂದು ಅಪೂರ್ವಭೋಗ. ಆ ಭೋಗ ಸಾಮಗ್ರಿಯನ್ನು ಆತ್ಮಶಾಲಿ ಮಾತ್ರ ನಿರ್ಮಿಸಬಲ್ಲ. ಇದರ ನಿರ್ಮಾಣ ಇಂದ್ರಿಯಗಳ ಮತ್ತು ಮನಸ್ಸಿನ ಸ್ತರಗಳಲ್ಲಿ ಜರುಗದು. ಗಿರಿಶಿಖರಗಳಲ್ಲೆ ಮಹಾ ನದಿಗಳ ಉಗಮ. ಹಾಗೆಯೇ ಕವಿಯ ರಸಸ್ತರದಲ್ಲಿ ಕಾವ್ಯೋದಯ. ಆರ್ತರೂ ಅರ್ಥಪರರೂ ಶಂಕಿತರೂ ಅಲ್ಲದ ಮುಮುಕ್ಷುಗಳೆಂತು ಬ್ರಹ್ಮಜ್ಞಾನಕ್ಕೆ ಹಂಬಲಿಸುತ್ತಾರೋ, "ಬ್ರಹ್ಮಜ್ಞಾನ ಸಹೋದರ" ನಾದ ಕಾವ್ಯಾನಂದಾಸ್ವಾದ ವಿಷಯದಲ್ಲೂ ಉಪಶಮಿತೇಂದ್ರಿಯರೂ. ಪ್ರಸನ್ನಚಿತ್ತರೂ ಪ್ರಸ್ಫುರಚ್ಚೇತನರೂ

ಆದ ಕವಿ ಸಹೃದಯರು ಕಾತರರು. ಕಾವ್ಯದ ವಿಷಯ ಪ್ರತ್ಯಕ್ಷ ವಿಷಯಭೋಗ ಪ್ರತಿನಿಧಿಯಲ್ಲ. ಕವಿಯ ಕೃತಿಯಲ್ಲಿ ಅದನ್ನು ಕೃಪಣರು ಮಾತ್ರ ಅರಸುತ್ತಾರೆ; ಅದರ ನೆರಳನ್ನೋ ಮರೀಚಿಕೆಯನ್ನೋ ಕಂಡುಕೊಂಡು ತೃಪ್ತಿಪಟ್ಟುಕೊಳ್ಳುತ್ತಾರೆ. ಆದರೆ ಸಹೃದಯರೋ, ಸತ್ಕಾವ್ಯದಲ್ಲಿ ಅವರು ಅರಸಿ ಪಡೆಯುವುದು ಭವಾಲಭ್ಯ ಆನಂದೋಲ್ಲಾಸವನ್ನು, ಕವಿಯ ಅಮೂರ್ತಾತ್ಮ ಸಂಸರ್ಗವನ್ನು; ಕವಿಯ ಮಾತಿನಲ್ಲೆ ಹೇಳಬೇಕಾದರೆ.

"ಘಟದ ಹಿಂಗಡೆ ತಟವೆ ತೋರದ ಅಂತರಂಗದ ವ್ಯೋಮ"ವನ್ನು.

ಕಾವ್ಯಾನಂದದ ವಿಷಯದಲ್ಲಿ 'ಕಾವ್ಯಾನಂದರು' ತಮ್ಮ ಕವಿತೆಗಳ ಮುಖೇನೆ ಹೇಳುವ ಮಾತುಗಳು ಕುತೂಹಲಜನಕವಾಗಿವೆ. ಮನುಷ್ಯನ ಚಿತ್ತದಿಂದ ಕಾವ್ಯ ಹೊರಡುತ್ತದೆ ನಿಜ. ಆ ಚಿತ್ತದ ಸ್ವರೂಪವೇನು?

"ಚಿತ್ತವೊಂದು ಚಾವಡಿ, ಅಲ್ಲಿ ಗಲಭೆ ಗಡಿಬಿಡಿ": ಅದೊಂದು ಬೆಲೆಗಳ ಮಸಣ.

"ಹೀನತನ ಹುಗಿಯುತಿದೆ ಮಾನವತೆಯನ್ನು ಅಲ್ಲಿ,

ಮಾನ ರೋದಿಸುತಿಹುದು ವಿಧವೆಯಂತೆ."

ಎರಡನೆ ಮಾತು ಮೈನಡುಗಿಸುವ ಮಾತು. "ಮಾನ ರೋದಿಸುತಿಹುದು ವಿಧವೆಯಂತೆ." ಈ ಮಸಣದಲ್ಲೂ ಉದ್ಯಾನ ಬೆಳೆದೀತು. ಕವಿಚಿತ್ತ ಸೌಧಕ್ಕೆ ಅನೇಕ ಸ್ತರಗಳುಂಟು. ಇದು ಮೊದಲನೆಯ ಸ್ತರ. ಇದನ್ನು ಕಂಡು ಯಾರೂ ಅಧೀರರಾಗಬೇಕಾಗಿಲ್ಲ.

"ಮನದ ಮಸಣ" ಎಂಬ ಈ ಪದ್ಯದಲ್ಲೆ "ರಸ"ದ ನೆಲೆಯ ಆಶ್ವಾಸನವಿದೆ. ಆ ಸ್ತರದಲ್ಲಿ "ಅಂತರಂಗದ ಅಂತರಿಕ್ಷ"ದ ನೋಟ ಎಂಥ ನೋಟ!

"ಇಲ್ಲೆ ಹುಟ್ಟಲು ಬಹುದು ಗಂಗೆಯು

ಇಲ್ಲೆ ಬಿಜ್ಜೋದರಿಯರು

ಇಲ್ಲೆ ಕಿನ್ನರ ಸ್ವರ ತರಂಗಿಣಿ

ಈಪ್ಸಿತದ ಅಪ್ಸರೆಯರು."

"ಕಾವ್ಯಾನಂದ"ರ ಕಾವ್ಯದಲ್ಲಿ ಇವರುಗಳೆಲ್ಲರೂ ನಮಗೆ ತಮ್ಮ ತಮ್ಮ ಮಧುರಾಕೃತಿಗಳನ್ನೂ ಸ್ವರಲಹರಿಗಳನ್ನೂ ಸೆಳೆವುಹೊಳವುಗಳನ್ನೂ ತೋರಿ ನಮ್ಮ ಚಿತ್ತವನ್ನು ರಮಿಸುತ್ತಾರೆ. ಈ ಬೆಂಗಳೂರ ಹುಡುಗಿ ಯಾವ ಅಪ್ಸರೆಗೆ ಕಡಮೆ?

"ಹೆಜ್ಜೆಗೊಮ್ಮೆ ಲಜ್ಜೆತುಳುಕೆ

ಮಧ್ಯಬಳಲಿ ಬಾಗಿ ಬಳುಕೆ

ನವಿರು ಮೂಡೆ ನಡೆವ ನೆಲಕೆ

ಉರದಿ ನೂರು ನೋಟ ಸಿಲುಕೆ

ಹೊರಟೆ ನೋಟ ಬೀರಿ ಕೆಲಕೆ
ಯಾವ ಸ್ಥಲಕೆ?"

ಇದು ವಾಸ್ತವ ಪ್ರತೀಕವಲ್ಲ, ರಸಪ್ರತೀಕ. ವಾಸ್ತವಕ್ಕಾದರೋ ನಮ್ಮ ಲೋಭ ಮೋಹ ಕಾಮಗಳು ಕೆರಳುತ್ತವೆ. ಈ ಹುಡುಗಿಯಿಂದ ನಮಗೆ ಉಲ್ಲಾಸವೆಷ್ಟೇ ಅಷ್ಟು–ಇದನ್ನೇ ನಾವು ಅಲೌಕಿಕಾನಂದವೆನ್ನುವುದು. ಕವಿತೆಗೆ ಶಬ್ದವೇ ಶರೀರ ಅರ್ಥವೇ ಅದರಲ್ಲಿ ಹರಿದಾಡುವ ಪೋಷಣದ್ರವ್ಯ, ಅದರಿಂದ ಪ್ರಾಣಿತವಾಗುವುದು ಆನಂದೋಲ್ಲಾಸ. ಅದು ಅಮೂರ್ತವಾದುದು, ಸೂಕ್ಷ್ಮವಾದುದು. ಈ ಅಮೂರ್ತಾನಂದ ಶಬ್ದಾರ್ಥಗಳಲ್ಲಿ ಮೂರ್ತ ಸ್ವರೂಪವನ್ನು ಪಡೆದು ತಿರುಗಿ ಸಹೃದಯ ಹೃದಯದಲ್ಲಿ ತನ್ನನ್ನು ತಾನೆ ಬಿಡಿಸಿಕೊಂಡು ಸ್ವಸ್ವರೂಪವನ್ನು ತಳೆದು ಪ್ರಕಾಶಿಸುವ ಈ ರಹಸ್ಯಕ್ಕೆ ಏನು ಹೇಳೋಣ? ಈ ಕವಿತೆಯನ್ನೋದಿದ ಮೇಲೆ ಚೆಲುವೆಯೊಬ್ಬಳು ತುಳಿದ ನೆಲವನ್ನು ಅವಳ ಪದಘಾತದಿಂದ ಅದಕ್ಕೆ ಎಂಥ ಪುಳಕವೆದ್ದಿದೆ ನೋಡಬೇಕು ಎನ್ನಿಸುತ್ತದೆ. ಈ ಹಿಂದೆ ಹಾಗೆ ಮಾಡುತ್ತಿದ್ದೆವೋ ಇಲ್ಲವೋ ಹಾಗೆಯೇ ಈ ಮಲೆಯ ಮತ್ತು ಕಾಡಿನ ರಸಪ್ರತೀಕವನ್ನು ನೋಡಿ:

"ಶ್ರೀ ಗುರುವಿನ ಹಸ್ತದಂತೆ
ವಿಂಧ್ಯಾದ್ರಿಯ ಮಸ್ತಕದಲಿ
ಚಂದ್ರೋದಯವಾಯಿತು–

* * *

ಚೆಲುವಾಯಿತು ಬೆಳುದಿಂಗಳು
ವಿಂದ್ಯಾದ್ರಿಯ ಕರಣಂಗಳು
ಕಳಿಯೇರುವ ಹಾಗೆ

* * *

ಹೊಗೆ ಬಂಡಿಯೆ ಕರುಣೆದೋರು
ಇಲ್ಲಿ ಮೆಲ್ಲಮೆಲ್ಲನೇರು
ಕಣ್ಣ ತುಂಬಲೀ ಸಿರಿ
ಸದ್ದು ಮಾಡಬೇಡ ನೀನು
ನಿದ್ದೆ ಮಾಡುತಿಹುದು ಕಾನು
ಧ್ಯಾನದೊಳಿಹುದೀಗಿರಿ."

ಬೆಟ್ಟ, ನಿಂತ ಜಾಗದಲ್ಲಿ ದಿನ ದಿನ ಕದಲದ ಹಾಗೆ ನಿಂತಿರುತ್ತದೆ; ತಿಂಗಳಿಗೊಮ್ಮೆ ಚಂದ್ರ ಅದರ ತಲೆಯ ಮೇಲೇರಿ ಹೋಗುತ್ತಿರುತ್ತಾನೆ. ಜನ ನೋಡಿ ಮುಂದೆ ಹೋಗುತ್ತಿರುತ್ತದೆ. ಆದರೆ ತನ್ನ ಆತ್ಮಾನಂದದಿಂದ ಅವರೆಡನ್ನೂ ಕವಿ ಅಲಂಕರಿಸಿದ ಮೇಲೆ ಅವು ನಾವೆಲ್ಲ ನಿಂತು ನೋಡುವಂತಿವೆ. "ಹೊಗೆ ಬಂಡಿಯೆ ಕರುಣೆದೋರು

ಇಲ್ಲಿ ಮೆಲ್ಲಮೆಲ್ಲನೇರು–ಧ್ಯಾನದೊಳಿಹುದೀಗಿರಿ." ನಿಜ, ಶಿವ ಸೌಂದರ್ಯದ ಬೆಲೆಗಳು ಪ್ರಕೃತಿಗೂ ಭವವಿಕೃತಿಗಳಿಗೂ ಕವಿಯಿಂದಲೇ ಲಭ್ಯ.

"ಇದು ಬೆಟ್ಟವಿದು ಕ್ಷೇತ್ರವಿದು ದಿವ್ಯಧಾಮವೈ
ಆನಂದ ನಿಕ್ಷೇಪವೀಶೈಲಸಾನು;

* * * *

ನಿಂತು ನನ್ನನೆ ಮರೆತೆ ಭವ್ಯಭಾವದಿ ಬೆರೆತೆ
ಬಾನವರ ಬೆಲೆ ಬಂತು ನನ್ನತನಕೆ."

ಈ ಸಾಲುಗಳನ್ನೋದಿ ನನಗೆ ಷೆಲ್ಲಿ ಕವಿಯ ಮಾತೊಂದು ನೆನಪಿಗೆ ಬರುತ್ತದೆ. ''Poetry redeems from decay this visitation of divinity in man'' ಕವಿತೆ ಮನುಷ್ಯನಲ್ಲಿ ದೇವಸ್ಥಲಗಳು ಕುಸಿದು ಬೀಳದಂತೆ ಎತ್ತಿ ಹಿಡಿಯುತ್ತವೆ ಎಂಬುದು ಇದರ ಭಾವ. ರಸಗ್ರಹಣ ಮತ್ತು ರಸ ಪ್ರಸರಣ ಇವೆರಡು ಕುಶಲಮತಿಗೆ ಮಾತ್ರ ಸಾಧ್ಯ. ಬಹು ಪ್ರೇಮಲ ಹೃದಯರು, ಅದರಿಂದಲೇ ಲೋಭಮೋಹದೂರರು, ತ್ಯಾಗಶೀಲರು–ಅವರು ಹೊರತು ಮಿಕ್ಕವರಾರು "ಆನಂದನಿಕ್ಷೇಪವೀಶೈಲ ಸಾನು" ಎನ್ನಬಲ್ಲವರು? ಈ ಮಾತುಗಳಿಗೂ ಅದರ ಹಿಂದಿನ ಮನಸ್ಸಿಗೂ ನಾನು ಬಹುವಾಗಿ ಮರುಳಾಗಿದ್ದೇನೆ. ಮೋಡವನ್ನು ಕುರಿತ ಈ ನುಡಿಗಳನ್ನು ನೋಡಿರಿ:

"ಮೇಘಮಾಲೆಯು ಶೈಲಮಾಲೆಯ ಮೇಲೆ ಲೀಲೆಯೊಳಿಳಿಯಿತು
ನೋಡ ನೋಡುತ ಬುವಿಯ ಬಾನಿನ ಭೇದವೆಂಬುದೆ ಅಳಿಯಿತು"

ಸುಂದರವಾದ ನೋಟ. ಆದರೆ ಹೊಸಗನ್ನಡ ಕಾವ್ಯದಲ್ಲಿ ಇಂಥ ಮೆಲ್ನುಡಿಗಳಿಗೆ ಕೊರತೆಯಿಲ್ಲ. 'ಕಾವ್ಯಾನಂದ'ರ ಶೈಲಿ ಬಹಳ ಹಸನಾದ ಶೈಲಿ. ಅವರಿಗೆ ತಿರುಳ್ಗನ್ನಡದ ಸರಣಿ ಗೊತ್ತು. ಶಬ್ದಗಳ ಮೇಲೆ ಪ್ರಭುತ್ವವುಳ್ಳವರಿಗೆ ಒಂದು ಆತಂಕವೂ ಉಂಟು. ಅಯೋಗ್ಯನಿಗೆ ಅವನ ಶಕ್ತಿಗೆ ಮೀರಿದ ಅಧಿಕಾರವನ್ನೂ ಅಂತಸ್ತನ್ನೂ ಪ್ರಭುಗಳು ಒಮ್ಮೊಮ್ಮೆ ಕೊಡುವುದುಂಟು, ತಮ್ಮ ಪ್ರಭುಶಕ್ತಿಯನ್ನೂ ಮೆರೆಸುವುದಕ್ಕಾಗಿ– ಆದರೆ ಇದು ಅತಿಯಾದರೆ ಅಕ್ಷಮ್ಯ. ಭಾವನಾವಿಪುಲರು ಶಬ್ದಕ್ಕಾಗಿ ಹೋರಾಡುವ ನೋಟ ಅಂದೊಂದು ತೆರ–ಶಬ್ದಸಂಪತ್ತುಳ್ಳವರು ತಮ್ಮ ಐಶ್ವರ್ಯವನ್ನು ದುಂದುಗೈಯುವುದು ಅದೊಂದು ತೆರ. ಮೊದಲಿನವರಿಗೆ ಕೃಷಿ ಆವಶ್ಯಕ, ಎರಡನೆಯವರಿಗೆ ಸಂಯಮ ಆವಶ್ಯಕ. "ಯಃಕಾಕಿನೀ ಮಪ್ಯಪಥ ಪ್ರಪನ್ನಾಂ ಸಮುದ್ದರೇನ್ನಿಷ್ಕ ಸಹಸ್ರತುಲ್ಯಾಂ ಕಾಲೇಷು ಕೋಟೀಷ್ವಪಿಮುಕ್ತಹಸ್ತಃ ತಂರಾಜಸಿಂಹಂ ನಜಹಾತಿಲಕ್ಷ್ಮೀ" ಎಂಬುದು ಕವೀಶ್ವರರಿಗೂ ಅನ್ವಯಿಸುತ್ತದೆ. "ಕಾವ್ಯಾನಂದ"ರು ಮಧ್ಯಮಾರ್ಗವನ್ನು ಹಿಡಿದರೆ ಅವರಿಂದ ಅತ್ಯುತ್ತಮ ಕಾವ್ಯವಾಗುವುದರಲ್ಲಿ ಸಂಶಯವಿಲ್ಲ. ಈ "ಒಂದು ಚಿತ್ರ"ದಲ್ಲಿ ಬೆಟ್ಟದ ಮೇಲೆ ಮುಗಿಲು ಕವಿದ ಸೊಬಗನ್ನೂ ನೋಡಿ ಕವಿ ನಗುವ ಈ ನವ್ಯಚಿತ್ರ ಆ ಪದ್ಯವನ್ನು ಸಾಮಾನ್ಯತೆಯಿಂದ ಉದ್ಧರಿಸುತ್ತದೆ.

"ಗಂಡು ಹೆಣ್ಣಿನ ವೇಷಧರಿಸಲು

ಕೇಶ ಕಟ್ಟುವ ತೆರದಲಿ
ಬೆಟ್ಟದೀ ಬೋಳ್ದಲೆಗೆ ದೊರೆಯಿತು
ವ್ಯೋಮ ಕೇಶವು ಭರದಲಿ."

ಹಾಗೆಯೇ "ಬಯಲಾಟ" ಎಂಬ ಪದ್ಯದಲ್ಲಿ ಬರುವ ಮೇಘರಾಜನ ವರ್ಣನೆಯು ನವೀನವಾಗಿದೆ.

" ಆ ಬೆಟ್ಟ ಅಟ್ಟ –
ಕುಣೀಯುವನು ಅಟ್ಟಹಾಸದಲಿ ಮೇಘರಾಜ
ಮೋಡಗಳ ಉಟ್ಟ
ಮಿಂಚುಗಳ ತೊಟ್ಟ
ಮೈಚಳಿಯ ಬಿಟ್ಟ
ನಾಟ್ಯರ್ಷಿ ಮೇಘರಾಜ."

ಇಂಥ ಒಳ್ಳೆ ಸಾಲುಗಳೆಷ್ಟೋ ಈ ಸಂಗ್ರಹದಲ್ಲಿ ಮಿಂಚಿನೆಳೆಯನ್ನು ಹರಿಸಿ ಹೋಗುತ್ತವೆ.

ಪ್ರೇಮ–ಕಾಮಗಳಿಲ್ಲದವನು ಕವಿಯಾಗಲಾರ ಕಲೆಗಾರನಾಗಲಾರ ಕೊನೆಗೆ ಸಂತನೂ ಆಗಲಾರ. "ಪ್ರೇಮ" ಕವನಗಳಿಗೂ ಕಾವ್ಯಾನಂದರ ಕಾವ್ಯದಲ್ಲಿ ಕೊರತೆಯಿಲ್ಲ.

"ಮುನಿಸ ಬಿಡು ಬಾ ತೊಡಿಸು ಕೊರಳಿಗೆ
ಕರಶಿರೀಷದ ಮಾಲೆಯ"

ಎಂಬಂಥ ನಿಂತು ನೋಡಿ ನಲಿಯುವ ಸಾಲುಗಳ ಜತೆಗೆ ಮಾಧುರ್ಯವನ್ನು ಕೊಡುವಂಥ ವಿರಹಗೀತೆಗಳೂ ಇಲ್ಲುಂಟು.

"ಬರಲಿಲ್ಲ ಈ ತಟಕೆ ನೀನಾದರೂ
ಬರಲಿಲ್ಲ ಆ ತಟಕೆ ನಾನಾದರೂ
ಅಗಲಿಕೆಯೆ ಅಗಲಲಿಲ್ಲೇನಾದರೂ
ಹೆಗಲೊಂದು ಹಲವಾರು ಯುಗವಾದರೂ."

ಬಹುಕಾಲ ತನ್ನದೇ ಆದ ಒಂದು ಸೊಗಡನ್ನು ಈ ಪಲ್ಲವಿ ಅನುಪಲ್ಲವಿಗಳು ಬೀರುತ್ತಾ ಮನಸ್ಸನ್ನು ಎತ್ತೆತ್ತಲೋ ತುಯ್ದೊಯ್ಯುತ್ತವೆ. ಹಾಗೆಯೇ "ನಾನಾರು" ಎಂಬುದು ಮೇಲುನೋಟಕ್ಕೆ ಹಗುರವಾಗಿ ಕಂಡರೂ ಧ್ವನಿಪೂರ್ಣವಾದ ಕವನ.

" 'ನಾನಾರು' ಎನ್ನುವರು 'ನೀನಾರು' ಎಂದಿಲ್ಲ
ಈ ಹಿಗ್ಗು ಕಡೆತನಕ ಬೇಕಾಯಿತು"

ಕವಿಯನ್ನು ಎಲ್ಲರೂ "ನಾನಾರು" ಎಂಬುದನ್ನು ಕೇಳುವುದಕ್ಕೆ

ಹೊರಡುತ್ತಾರೆಯೇ ಹೊರತು "ನೀನಾರು" ಎನ್ನುವವರು ಕಡಮೆ. ಕವಿಗೆ ಅವರವರ ಅರಿವನ್ನು ಮಾಡಿಕೊಡುವುದೇ ಕರ್ತವ್ಯ–ಅದರಲ್ಲೇ ಆತನಿಗೆ ಹಿಗ್ಗು. ಅವರವರ ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವವನ್ನು ಅವರವರು ಪಡೆಯುವಂತೆ ತನ್ನ ಕೃತಿಗಳ ಮೂಲಕ ಕವಿ ಯತ್ನಿಸುತ್ತಾನೆ; ಆ ಕೆಲಸಕ್ಕೆ ತನ್ನನ್ನೇ ಮುಡಿಪಾಗಿಡುತ್ತಾನೆ.

"ಇದೊ ಮಧುರ ಭಾವಗಳ ಸಾಲುದೀಪವ ಹಚ್ಚಿ
ಕಾಮನೆಯ ಕುಸುಮಗಳ ತಂದಿರಿಸಿಹೆ
ಮೀಸಲಾಸೆಯ ಮುಡಿಪ ಕಟ್ಟಿಟ್ಟು ನನ್ನನೇ
ನೈವೇದ್ಯವನ್ಹಾಗಿ ಮುಂದಿರಿಸಿಹೆ."

ಭಕ್ತನಿಗೆ ಹೇಗೋ ಹಾಗೆಯೇ ಕವಿಗೂ ಈ ಆತ್ಮನಿವೇದನಭಾವ ಸಹಜವಾದದ್ದು. ತನ್ನನ್ನು ತಾನು ಶುದ್ಧೀಕರಿಸಿಕೊಂಡು ಅದನ್ನು ಭಗವಂತನಲ್ಲಿ, ಎಂದರೆ ಆನಂದರೂಪದ ಅಮೃತತತ್ತ್ವದಲ್ಲಿ ವಿಸರ್ಜಿಸುವುದು. ಪುನಃ ಪುನಃ ಪಡೆದು ಪಡೆದು ಪುನಃ ಪುನಃ ವಿಲೀನಗೊಳಿಸುವುದು, ಇದೇನೂ ಅಷ್ಟು ಸುಲಭವಾದ ಕೆಲಸವಲ್ಲ. ಮನುಷ್ಯ ಈ ಪ್ರಯತ್ನದಲ್ಲಿ ನಿರಾಶನಾಗುವುದೂ ಈಶ್ವರನ ಕರುಣೆಗೆ ಮೊರೆಯಿಡುವುದೂ ಕೇಳಿ ಬಂದಿರುವ ಮಾತೇ ಆಗಿದೆ.

"ನಿನ್ನ ಕರುಣೆಯ ಸರಿಯೆ ಸುರಿದು ತುಂಬಿದೆ ತಂದೆ
ಎಂದೊ ಬತ್ತಿದ ಮನದ ಸರಸಿಯಿಂದು !
ಇಲ್ಲದಿರೆ ತುಂಬಿಸಲು ಬಲ್ಲೆನೇ ನಾ ನನ್ನ
ಬೊಗಸೆಯಲಿ ನೀರನ್ನು ತಂದು."

"ಕಾವ್ಯಾನಂದ"ರ ಹೃದಯದಲ್ಲಿ ಈ ಶಿವಕಾರುಣ್ಯದ ಸೆಲೆಯಿರುವುದರಿಂದ ಅವರಿಂದ ಅನೇಕ ಕೃತಿಗಳು ಹೊರಬರುತ್ತಲೇ ಇರುತ್ತವೆ. ಸದ್ಯದ ಪ್ರಪಂಚದಲ್ಲಿ ಕವಿಯಾಗಿ ಕೊನೆಯವರೆಗೂ ನಿಲ್ಲುವುದು ಅಷ್ಟೇನೂ ಸುಲಭವಾದ ಕೆಲಸವಲ್ಲ. ಮನುಷ್ಯನಿಗೆ ಮಾತ್ರ ವಿಶಿಷ್ಟವಾದ ಬೆಲೆಗಳ ವಿಷಯದಲ್ಲಿ ಕವಿ ಉದಾಸೀನನಾದರೆ ಆತನ ರಸದ ಸೆಲೆ ಬತ್ತಿಹೋಗುತ್ತದೆ. ಲೋಭ ಮೋಹ ಭಯದೂರರಾದ ಯತೇಂದ್ರಿಯರಿಗೂ ವಿರಕ್ತರಿಗೂ ಮಾತ್ರ ಲಭ್ಯವಾಗುವ ಸಂತೋಷವಿಶೇಷವನ್ನು ತನ್ನ ಕಾವ್ಯದಿಂದ ನಮಗೆತ್ತಿ ಕೊಡುವ ಕವಿ ಜೀವನ ಕಷ್ಟವಾದದ್ದೇ. ಜಲಾಲುದ್ದೀನ್ ರೂಮಿ ಎಂಬ ಋಷಿ ಪ್ರಜ್ಞರು ಪದೇ ಪದೇ ನೆನೆದುಕೊಳ್ಳುವಂಥ ಒಂದು ಮಾತನ್ನು ಹೇಳಿ ಹೋಗಿದ್ದಾರೆ.

"ಇಲ್ಮರಾ ಬರ್ತ್ಸನೀ ಬಾರ್ ಬುವದ್
ಇಲ್ಮರಾ ಬರ್‌ದಿಲ್‌ಸನೀ ಯಾರ್ ಬುವದ್."

"ನಮ್ಮ ಐಹಿಕ ಭೋಗ ಸಾಮಗ್ರಿಗಳನ್ನು ಹೆಚ್ಚಿಸುವ ಅರಿವು ಅದೊಂದು ಹೊರೆ, ಆದರೆ ಯಾವರಿವು ನಿಮ್ಮಿಂದ ನಿಮ್ಮ ಆತ್ಮವನ್ನು ಮೇಲಕ್ಕೆತ್ತುವುದೋ ಅದೆ ನಿಮ್ಮ ಸ್ನೇಹಿತ" ಎಂದು ಇದರ ಅರ್ಥ. ಕವಿಯಿಂದ ನಮಗೆ ದೊರೆಯುವ ಅರಿವು

ಆತ್ಮೋದ್ಧರಣದ ಬಗೆಯದು. ಕವಿಗೂ ಬಹಳ ಕಷ್ಟದಿಂದ ದೊರೆಯುವ ಅರಿವಿದು. ಅದಮ್ಯವಾದ ಈ ಆತ್ಮಾಕ್ಷರ್ಷಕ ವಿದ್ಯೆಯನ್ನು ಕುರಿತು ಕವಿ ಹೀಗೆ ಹೇಳಿಕೊಂಡರೆ ಆಶ್ಚರ್ಯವಲ್ಲ.

"ನಿನ್ನ ದೀಪವೆ ನಿನ್ನ ಸುಟ್ಟರೆ
ಸುಡಲಿ ಜ್ಯೋತಿಯ ಹೊತ್ತಿಸು
ಬರಿದೆ ಉರಿಯಲಿ ಕಿಚ್ಚು ಸುರಿಯಲಿ
ಗೊಡವೆಯೇತಕೆ ಹೊತ್ತಿಸು."

"ಕಾವ್ಯಾನಂದ"ರ ಕವನಗಳು "ಹೂವುಗಳ ಹೃದಯವನ್ನು ಹೂಬಿಸಿಲು ಹೊಕ್ಕಂತೆ" ನಮ್ಮ ಮನಸ್ಸನ್ನು ಹೊಗುತ್ತವೆ. 'ಕವನ ಜನನ' ಎಂಬ ಸುಂದರ ಪದ್ಯದಲ್ಲಿ ಅವರು ಹೇಳುವ ಮಾತು ನಿಜ.

"ಬಗೆಯ ಬಾನಲಿ ಬಣ್ಣವೇಳರ
ಬಿಲ್ಲದಿಬ್ಬಣ ಸಾಗಿದೆ
ಎಲ್ಲೊ ಒಂದೆಡೆ ಭಾವ ಬುದ್ಧಿಯು
ಹಸೆಗೆ ನಿಲ್ಲುವ ಹಾಗಿದೆ
ನೀಲ ಮೇಘದ ಮೇನೆ ನೂರಿವೆ
ಹೂತ್ತು ಮಿಂಚಿನ ಹೆಂಗಳ
ಎನಿತೊ ದಿನಗಳು ಕಳೆದ ಮೇಲಿದೊ
ಮತ್ತು ಮಸಗಿದೆ ಮಂಗಳ."

ಕವನದ ಉಗಮ ಭಾವ ಮತ್ತು ಬುದ್ಧಿಯ ಸಂಗಮದಲ್ಲಿ. ಅದರಿಂದ ನಮಗೆ ಬರುವ ಬೆಲೆಗಳು ಶಿವ ಮತ್ತು ಸೌಂದರ್ಯವೆಂಬವು. ಇವುಗಳಿಲ್ಲದೆ ಬಾಳು ಬರಡು –ನೀರಸ.

ಇಂಥ ಕವನಗಳನ್ನು ತಮ್ಮ ಶುದ್ಧವೂ ಸಂಸ್ಕೃತವೂ ಸದ್‌ಭಾವಪೂರ್ಣವೂ ಆದ ಮನಸ್ಸಿನಿಂದ ಸ್ವಚ್ಛ ಕನ್ನಡದ ಮಾತಿನಲ್ಲಿ ನಿರರ್ಗಳವಾಗಿ ಹರಿಯಬಿಡುತ್ತಿರುವ 'ಕಾವ್ಯಾನಂದ'ರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರ ಸತ್ ಕೃತಿಗಳಿಂದ ನಮ್ಮ ಸರಸ್ವತೀ ಭಂಡಾರ ತುಂಬಲೆಂದೂ ಹಾರೈಸುತ್ತೇನೆ.

ಇತಿಶಂ

೭–೧೧–೧೯೫೯ — **ಪು.ತಿ.ನರಸಿಂಹಾಚಾರ್**

ಕಲ್ಲೋಲ ಮಾಲೆ

ಕನ್ನಡ ನಾಡಿನ ಖ್ಯಾತ ಕವಿಗಳೂ, ಮೇಧಾವಿಗಳೂ, ವಿದ್ಯಾವಿನಯ ಸಂಪನ್ನರೂ, ದಕ್ಷ ಆಡಳಿತಕ್ಕೆ ಹೆಸರಾದ ಉನ್ನತ ಅಧಿಕಾರಿಗಳೂ, ಸಹೃದಯರೂ, ಹಾಗೂ ಎಲ್ಲ ದೃಷ್ಟಿಯಿಂದಲೂ ನನ್ನ ಹಿರಿಯ ಅಣ್ಣನಂತಿರುವ ಪುರಾಣಿಕ ಸಿದ್ಧಣ್ಣನವರು ತಮ್ಮ ಇತ್ತೀಚಿನ ಕೃತಿ 'ಕಲ್ಲೋಲಮಾಲೆ'ಗೆ ನಾನು ಮುನ್ನುಡಿ ಬರೆಯಬೇಕೆಂದು ಅಭಿಲಾಷೆಪಟ್ಟಿದ್ದಾರೆ. ಅವರ ಕೃತಿಗೆ ಮುನ್ನುಡಿ ಬರೆಯುವ ಅರ್ಹತೆ ನನಗಿಲ್ಲ ಎಂಬುದರ ಅರಿವು ನನಗಿದ್ದರೂ, ಅವರ ಪ್ರೀತಿ ವಿಶ್ವಾಸಗಳಿಗೆ ಮಾರುಹೋಗಿ ಈ ಗೌರವವನ್ನು ಸ್ವೀಕರಿಸಿದ್ದೇನೆ. ನಾನು ಬಹುದಿನಗಳಿಂದಲೂ ಅವರ ಬಗೆಗೆ ತಳೆದಿರುವ ಗೌರವಾದರಭಾವಗಳನ್ನು ವ್ಯಕ್ತಪಡಿಸಲು ಇದೊಂದು ಸದಾವಕಾಶವೆಂದೇ ನಾನು ಬಗೆದಿದ್ದೇನೆ. ಈ ಸಂದರ್ಭದಲ್ಲಿ ನನ್ನ ಮೊದಲನೇ ಕೃತಿ "ಜೀವನ ಕಲೆ"ಗೆ ಸಿದ್ಧಣ್ಣನವರೇ ಅಮೂಲ್ಯವಾದ ಮುನ್ನುಡಿ ಬರೆದು ಹರಸಿದ ಉಪಕಾರವನ್ನು ಸ್ಮರಿಸದಿರಲಾರೆ. ನಾನು ಸಿದ್ಧಣ್ಣನವರನ್ನು ಕಂಡದ್ದು ಸುಮಾರು ಇಪ್ಪತ್ನಾಲ್ಕು ವರ್ಷಗಳ ಹಿಂದೆ. ನಾನು ಇನ್ನೂ ಆಗ ಕಾಲೇಜ ವಿದ್ಯಾರ್ಥಿ. ಸಿದ್ಧಣ್ಣನವರು ಅದೇ ಕಾಲೇಜ ಅಭ್ಯಾಸ ಮುಗಿಸಿ, ಮುಂದಿನ ಜೀವನದ ಬಗೆಗೆ ಯೋಚಿಸುತ್ತಿರುವ ಕಾಲ ಅದು. ಬೇಸಿಗೆಯ ರಜೆಯಲ್ಲಿ ಅವರ ಊರ ಸಮೀಪದಲ್ಲಿರುವ ನಮ್ಮ ಬೀಗರ ಊರಿಗೆ, ಸೂಟಿಯ ದಿನಗಳನ್ನು ಕಳೆಯಲು ಹೋಗಿದ್ದೆ. ಅವರ ಸಹಾಭ್ಯಾಸಿಗಳಾದ ನನ್ನ ಮಾವಂದಿರೊಡನೆ ಒಂದೆರಡು ದಿನ ಕಳೆಯಲು ಸಿದ್ಧಣ್ಣನವರ ಊರಿಗೂ ಹೋದೆವು. ಅವರೊಡನೆ ಒಂದೆರಡು ದಿನ ಆನಂದದಲ್ಲಿ ಕಳೆಯುವ ಸುಯೋಗ ದೊರಕಿತು. ಒಂದು ಸಂಜೆ ವಿಹರಿಸುತ್ತ ಊರ ಹೊರಗಿನ ಮಾವಿನ ತೋಟಕ್ಕೆ ಹೋದೆವು; ಸಿದ್ಧಣ್ಣನವರು ತಮ್ಮ ಸಮವಯಸ್ಕರೊಂದಿಗೆ ಸಾಹಿತ್ಯದ ಬಗ್ಗೆ ಸರಸಸಲ್ಲಾಪ ನಡೆಸಿದ್ದರು. ಮಾವಿನ ಗಿಡದ ಟೊಂಗೆಯೊಂದರ ಮೇಲೆ ಕುಳಿತು ಸುತ್ತುವರಿದ ಮಿತ್ರಸಮೂಹಕ್ಕೆ ಅವರು ಕುವೆಂಪು ಅವರ 'ತೇನೆಹಕ್ಕಿ' ಕವಿತೆಯ ಸೌಂದರ್ಯವನ್ನು ವಿವರಿಸುತ್ತಿರುವಾಗ ಅವರ ಮುಖದ ಮೇಲೆ ಮಿನುಗುತ್ತಿದ್ದ ಕಾಂತಿ, ಕಣ್ಣುಗಳಲ್ಲಿ ಮಿಂಚುತ್ತಿದ್ದ ಹೊಳಪು ಇಂದಿಗೂ ನನ್ನ ಕಣ್ಣಮುಂದೆ ಕಟ್ಟಿದಂತಿದೆ. ಗಂಭೀರವಾಗಿ ಅವರು

'ಜ್ಯೋತ್ಸ್ನೆ ತುಂಬಿ, ತುಳುಕಿ ಹರಿಯೈ
ಸ್ನಿಗ್ಧ ಶರತ್ಕಾಲದಿ.....'

ಎಂದು ತಮ್ಮ ಅಸ್ಖಲಿತವಾಣಿಯಲ್ಲಿ ಆ ಸಾಲನ್ನು ಅರ್ಥಪೂರ್ಣವಾಗಿ ನಿರೂಪಿಸುತ್ತಿದ್ದ ರೀತಿ ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮವನ್ನುಂಟು ಮಾಡಿತು. ಅವರ ಆಕರ್ಷಕ ಮುಖಚರ್ಯೆ, ಹೊಳೆಯುವ ಕಣ್ಣುಗಳು, ಗಂಭೀರವಾದ ಅವರ ಪ್ರಗಲ್ಭ ಪಾಂಡಿತ್ಯ, ಇವೆಲ್ಲಕ್ಕೂ ಹೆಚ್ಚಾಗಿ ಅವರ ಸೌಜನ್ಯ, ಸರಳತೆ, ಮೃದುಮಧುರವಾದ ಮಾತುಗಳು ನನ್ನನ್ನು ಮುಗ್ಧಗೊಳಿಸಿದವು. ಆ

ಪ್ರಥಮ ಸಂದರ್ಶನದಿಂದ ಇಂದಿನವರೆಗೆ ಅವರ ಬಗೆಗೆ ಆದರ ಭಾವನೆಗಳು ಹೆಚ್ಚುತ್ತಲೇ ಇವೆ. ಸಿದ್ಧಣ್ಣನವರು ತುಂಬಿದ ಕೊಡ. ಅವರನ್ನು ನೋಡಿದಾಗಲೆಲ್ಲ 'ತುಂಬಿದುದು ತುಳುಕದು ನೋಡಾ' ಎಂಬ ಮಾತು ನೆನಪಾಗುತ್ತದೆ. ಕಾವ್ಯ, ನಾಟಕ, ಕಥಾಸಂಗ್ರಹ, ಜೀವನಚರಿತ್ರೆಗಳು,ಸಂಶೋಧನಾತ್ಮಕ ಬರೆಹಗಳು, ಕಾದಂಬರಿ, ಪ್ರಬಂಧ ಇವೆಲ್ಲ ಕ್ಷೇತ್ರಗಳಲ್ಲಿಯೂ ಮಹತ್ತರವಾದ ಕೊಡುಗೆಗಳನ್ನಿತ್ತು ಕನ್ನಡ ವಾಗ್ದೇವಿಯ ಸಿರಿಯನ್ನು ಹೆಚ್ಚಿಸಿದ ಸಿದ್ಧಣ್ಣನವರು ಕನ್ನಡ ಜನತೆಯ ನಚ್ಚಿನ ಸಾಹಿತಿ. ಅವರ 'ಶರಣ ಚರಿತಾಮೃತ' ಕನ್ನಡ ಸಾಹಿತ್ಯಕ್ಕೆ ಒಂದು ಅಮೂಲ್ಯವಾದ ಕೊಡುಗೆ. ವೀರಶೈವ ಧರ್ಮ, ತತ್ವಜ್ಞಾನ ಹಾಗೂ ಸಾಹಿತ್ಯಗಳ ಬಗೆಗೆ ಅವರು ಸುಮಾರು ಒಂದು ಕಾಲು ಶತಮಾನದವರೆಗೆ ನಡೆಸಿದ ತಪಸ್ಸಿನ ಫಲ ಈ ಕೃತಿ. ಅವರ ಕವನಸಂಗ್ರಹಗಳು ಅದರಲ್ಲಿಯೂ 'ಜಲಪಾತ', 'ಕರುಣಾಶ್ರಾವಣ', 'ಮಾನಸಸರೋವರ' ಇವು ಮೆಚ್ಚಿಗೆ ಪಡೆದ ಜನಪ್ರಿಯ ಸಂಗ್ರಹಗಳು. 'ಮಾನಸಸರೋವರ' ರಾಜ್ಯಸರಕಾರದ ಬಹುಮಾನವನ್ನೂ ಪಡೆಯಿತು. ತಮ್ಮ ಬಹುಮುಖ ಪ್ರತಿಭೆಯಿಂದ ಸಾಹಿತ್ಯದಲ್ಲಿ ಇಂಥ ಸಿದ್ಧಿಯನ್ನು ಪಡೆದ ಸಿದ್ಧಣ್ಣನವರ ಕೃತಿಗೆ ಮುನ್ನುಡಿ ಅನವಶ್ಯವಾದ ಉಪಾಂಗ.

'ಕಲ್ಲೋಲ ಮಾಲೆ' ಉಳಿದ ಕವನಸಂಗ್ರಹಗಳಿಗಿಂತ ಭಿನ್ನವಾದದ್ದು. ಭಾವ, ಅರ್ಥಪೂರ್ಣವಾದ ಸಣ್ಣ ಸಣ್ಣ ಕವನಗಳನ್ನು ಇಲ್ಲಿ ನಾವು ಕಾಣಬಹುದು. ಇವು ರವೀಂದ್ರನಾಥ ಟಾಗೋರರ `Stray Birds'ದಲ್ಲಿ ಹಾಗೂ ಖಲೀಲ್ ಗಿಬ್ರಾನ್‌ರ ಸಂಗ್ರಹಗಳಲ್ಲಿ ಬರುವ ಚಟುವಟಿಕೆಗಳ ಧಾಟಿಯಲ್ಲಿ ಬರೆಯಲ್ಪಟ್ಟಿವೆ. ಒಂದು ಸಂದರ್ಭದಲ್ಲಿ ಹೊಳೆದ ವಿಚಾರಗಳನ್ನು ಸುಂದರವಾದ ಉಪಮೆ, ಸಂಕೇತಗಳಿಂದ ಕವಿ ಈ ಚಿಕ್ಕ ಕವನಗಳಲ್ಲಿ ಹಿಡಿದಿಟ್ಟಿದ್ದಾನೆ. ಕವಿಯೇ ಹೇಳುವಂತೆ ಈ ಕವನಗಳು 'ಹೂವಿನ ಎಸಳಿನಂತೆ', 'ತೆನೆಗಳ ಕಾಳಿನಂತೆ' 'ಹಕ್ಕಿಯ ಗರಿಗಳಂತೆ' ಬಿಡಿಬಿಡಿಯಾದ ಕವನಗಳು. ಈ ಸಣ್ಣ ಕವನಗಳು 'ಬಾಳಗುಟ್ಟಿಗೆ ಗುಟುಕಾಗಲಿ' ಎಂದು ಹಾರೈಸಿದ್ದಾನೆ. ಈ ಸಣ್ಣ ಸಣ್ಣ ಬಿಂದುಗಳಲ್ಲಿ ಕವಿ ಘನವಾದ ವಿಚಾರಗಳನ್ನು ಅಡಗಿಸಿಟ್ಟಿದ್ದಾನೆ. ಒಂದೊಂದು ಸಾಲನ್ನು ಓದಿದಂತೆ ಒಂದೊಂದು ಘನವಾದ ವಿಚಾರ ಮಿಂಚಿನ ಸೆಳಕಿನಂತೆ ಹೊಳೆಯುತ್ತದೆ. ಉಳಿದ ಅನೇಕ ಕೃತಿಗಳಂತೆ 'ಕಲ್ಲೋಲ ಮಾಲೆ' ಒಮ್ಮೆ ಓದಿ ಕೆಳಗಿಡುವ ಕೃತಿಯಲ್ಲ. ಮತ್ತೆ ಮತ್ತೆ ಓದಿ ಮನನಮಾಡಬೇಕಾದ ಕವನಗಳಿಲ್ಲಿವೆ. ಹಲವಾರು ಕವನಗಳಲ್ಲಿ ಬರುವ ಗೂಢವಾದ ಭಾವ ಮುಳುಗಿದಷ್ಟೂ ಆಳ. ಮನುಷ್ಯ ಬಾಳಿಗೆ ಹಲವು ಉತ್ತಮ ನೀತಿಪಾಠಗಳನ್ನೂ, ಆದರ್ಶಗಳನ್ನೂ, ಮನಸ್ಸಿಗೆ ನೆಮ್ಮದಿಯನ್ನೂ ನೀಡಬಲ್ಲ ವಿಚಾರಗಳನ್ನು ಕವಿ ಸುಂದರವಾದ ಸಂಕೇತಗಳಿಂದ ಹೇಳುತ್ತಾನೆ. ಸಿದ್ಧಣ್ಣನವರು ಆಕಾಶ, ಸಮುದ್ರ, ಮಲ್ಲಿಗೆ, ಗುಲಾಬಿ, ಹಗಲು, ರಾತ್ರಿ, ಮೃಗ, ಹಕ್ಕಿ ಇವುಗಳ ಬಗೆಗೆ ಮಾತನಾಡುತ್ತಿರುವಾಗ ಇವೆಲ್ಲವುಗಳಿಂದ ಮನುಷ್ಯನು ಪಾಠ ಕಲಿಯಬಹುದು ಎಂಬುದರ ಬಗೆಗೆ ಅರ್ಥಪೂರ್ಣವಾಗಿ ವಿವೇಚಿಸುತ್ತಾರೆ.

'ಸಾಹಿತ್ಯವೆಂದರೆ ಮನುಷ್ಯನ ದುಃಖ ದುಮ್ಮಾನಗಳನ್ನು ಶಮನಗೊಳಿಸಿ, ಮನಸ್ಸಿಗೆ ನೆಮ್ಮದಿ ನೀಡುವ, ಅವನ ವಿಚಾರಗಳನ್ನು ಉನ್ನತ ಮಟ್ಟಕ್ಕೆ ಒಯ್ಯುವ ಶ್ರೇಷ್ಠ ಸಾಧನ' ಎಂಬ ಮಾತು ಈ ಕವನಗಳಿಗೆ ಅನ್ವಯಿಸಿ ಬರೆದಂತಿವೆ. ಇಲ್ಲಿ ಬರುವ ಪವಿತ್ರ ವಿಚಾರಗಳಲ್ಲಿ ಸಿದ್ಧಣ್ಣನವರ ಆದರ್ಶವಾದ, ಉದಾತ್ತ ಧ್ಯೇಯಮಾರ್ಗವಾದ ಸರಳ ವೈಯಕ್ತಿಕ ಜೀವನದ ಪಡಿನೆಳಲನ್ನು ಕಾಣಬಹುದು. ಅವರು ಸೃಷ್ಟಿಯನ್ನು, ಮಾನವಜೀವನವನ್ನು ನೋಡುವ ದೃಷ್ಟಿಯಲ್ಲಿ ಎಂಥ ಪಾವಿತ್ರ್ಯತೆಯಿದೆ! ಒಬ್ಬ ಆಂಗ್ಲ ಸಾಹಿತಿ ಒಂದೆಡೆ ''Better keep yourself clean and bright. You are the window through which you must see the world'' ಎಂದು ಹೇಳಿದ ಮಾತು ನೆನಪಿಗೆ ಬರುತ್ತದೆ.

'ಕಲ್ಲೋಲ ಮಾಲೆ'ಯಲ್ಲಿ ಬರುವ ಕವನಗಳಲ್ಲಿ ಒಳ್ಳೇ ಕಾವ್ಯಲಕ್ಷಣಗಳನ್ನು ಗುರುತಿಸಬಹುದು. ಈ ಕಾವ್ಯ ಹೃದಯದಿಂದ ಬಂದುದು. ನೇರವಾಗಿ ಹೃದಯಕ್ಕೆ ಮುಟ್ಟುವಂತಹುದು. ಒಂದು ವಿಚಾರವನ್ನು ಮನಸ್ಸಿನ ಮೇಲೆ ಅಚ್ಚೊತ್ತುವಂತೆ ಸಿದ್ಧಣ್ಣನವರು ಹೇಳಬಲ್ಲರು. ಅವರ ಕಾವ್ಯದ ಮುಖ್ಯ ಲಕ್ಷಣ. ಲಾಲಿತ್ಯ. ಅವರ ಕಾವ್ಯದಲ್ಲಿ ಹಲವೆಡೆ ಕಂಡುಬರುವ ಶಬ್ದ ಮಾಧುರ್ಯ ಮುಗ್ಧಗೊಳಿಸುತ್ತದೆ.....

ಈ ವನದಿ ಮಂದಾರ
ಆಗೊಮ್ಮೆ ಈಗೊಮ್ಮೆ
ಈ ಮನೆಯ ಸಿಂಗಾರ
ಆಗೊಮ್ಮೆ ಈಗೊಮ್ಮೆ.
ಒಳ್ಳೆಯದು ಎಲ್ಲವೂ
ಆಗೊಮ್ಮೆ , ಈಗೊಮ್ಮೆ.
ಜೀವನವು ಸಾಗುವುದು
ಹಾಗೊಮ್ಮೆ ಹೀಗೊಮ್ಮೆ.

ಈ ಕಾವ್ಯ, ಭಾವ ಹಾಗೂ ಅರ್ಥಪೂರ್ಣವಾದದ್ದು. ಘನವಾದ ವಿಚಾರಗಳನ್ನು ಒಂದೆರಡು ಸಾಲುಗಳಲ್ಲಿ ಸೆರೆಹಿಡಿದಿಟ್ಟ ಕವನಗಳು ಇಲ್ಲಿ ಅನೇಕ ಕಡೆಗೆ ಕಂಡು ಬರುವುದುಂಟು.....

''ಸವಿಯು ಬೆಳಕಾಗುವುದೆ ಗೀತಗುಣವು''

.....

''ಮಾನವರು ಕೆಟ್ಟಾರು, ಮಾನವತೆ ಉಳಿದೀತು
ಕವಿ ದೇಹವಿಟ್ಟಾನು, ಕವಿತೆಯುಳಿದೀತು.''

ಆಂಗ್ಲಕವಿ ವರ್ಡ್ಸ್‌ವರ್ಥ ಒಂದೆಡೆ 'ಯಾವುದೇ ವಿಷಯವನ್ನು

ಸೂಚ್ಯವಾಗಿ ಹೇಳುವದೇ ಕಾವ್ಯಲಕ್ಷಣ' ಎಂದು ಹೇಳಿದ್ದುಂಟು. (Poetry imphes most) ಸಿದ್ಧಣ್ಣನವರು ಹೇಳುವ ಮಾತನ್ನು ಉಪಮೆ ಸಂಕೇತಗಳಿಂದ ಬಹು ಮಾರ್ಮಿಕವಾಗಿ ಹೇಳುತ್ತಾರೆ. ಈ ಮಾತಿನ ನಿದರ್ಶನ ಕೆಳಗಿನ ಸಾಲುಗಳಲ್ಲಿ ಕಾಣಬಹುದು:

ಸತ್ಯ ಕೇಳಿತು–

"ಮಿಥ್ಯೆ ನೀನು ನನಗಿಂತಲೂ ಹೇಗೆ ಜನಪ್ರಿಯಳಾಗಿರುವೆ?"

ಮಿಥ್ಯೆ ಉತ್ತರಿಸಿತು–

"ಸತ್ಯದ ಸೋಗು ಹಾಕಿ".

ಕಾರಂಜಿ ತಡಸಲಿಗೆ ಹೇಳಿತು–

"ಕೆಳಗಿಳಿಯುವುದು ಸುಲಭ, ಮೇಲೇರುವುದು ಕಷ್ಟ."

ಮಣ್ಣಹಣತೆ 'ಕತ್ತಲೆಯು ಆವರಿಸಿದಾಗಲೂ ಯಾಕೆ ಮಿನುಗುತ್ತಿರುವೆ' ಎಂದು ಕೇಳಿದಾಗ ಹೇಳಿದ ಉತ್ತರ–

"ಕತ್ತಲೆಯ ಕಾಳಕರಾಳಗರ್ಭದಲ್ಲಿಯೂ
ಬೆಳಕು ಬದುಕಬಲ್ಲುದೆಂಬುದನ್ನು ತೋರಿಸಲು,"

"ಬಿರುಗಾಳಿಯೆದ್ದಾಗ, ಮರ ಮುರಿದುಬಿದ್ದಾವು
ಒರಗಿಬಿಡು ಹುಲ್ಲಾಗಿ ಇಳೆಯ ತೊಡೆಯಲ್ಲಿ."

ಮನುಷ್ಯಸ್ವಭಾವದ ಬಗೆಗೆ ಅರ್ಥಪೂರ್ಣವಾಗಿ ಸಂಕೇತಗಳ ಮೂಲಕ ಕವಿ ಹೇಳುವ ಮಾತುಗಳು ಹಲವೆಡೆ ಬಹಳ ಮಾರ್ಮಿಕವಾಗಿವೆ.....

ಆಕಾಶ ಸಮುದ್ರಕ್ಕೆ ಅಂದಿತಂತೆ– "ಎಷ್ಟು ನಿರಾಶೆಯೋ ನಿನಗೆ ! ಅನವರತ ಅಲೆಗಳಲ್ಲಿ ಚಡಪಡಿಸುತ್ತ, ಗೋಗರೆಯುತ್ತಲೇ ಇರುವಿ. ನನ್ನ ಐಶ್ವರ್ಯ ನೋಡಿ ಅಸೂಯೆಯೇ ನಿನಗೆ?"

ಸಮುದ್ರ ಆಕಾಶಕ್ಕೆ ಅಂದಿತಂತೆ– "ಎಷ್ಟು ದುರಾಶೆಯೋ ನಿನಗೆ ! ಲೆಕ್ಕವಿಲ್ಲದ ಚಿಕ್ಕೆ ಕಣ್ಣುಗಳನ್ನು ಪಿಳುಕಿಸದೇ ನೋಡುತ್ತಲೇ ಇರುವಿ. ನನ್ನ ಮುತ್ತು ರತ್ನಗಳ ಮೇಲೆ ಕಣ್ಣಿಟ್ಟಿರುವೆಯಾ?"

ಇನ್ನೊಂದೆಡೆ, ಬೇರು ಮರಕ್ಕೆ :

"ನಿನ್ನ ಭಾರವನ್ನು ಹೊತ್ತು, ನಿನಗೆ ಸಾರಜನಕವನ್ನಿತ್ತು, ಯಾರಿಗೂ ಗೊತ್ತಾಗದಂತೆ ಇದ್ದೇವೆ ನಾವು– ಬೇರುಗಳು".

ಮರ ಬೇರಿಗೆ–

"ಚಳಿ, ಮಳೆ, ಗಾಳಿ, ಬಿಸಿಲುಗಳನ್ನೆಲ್ಲ, ಕೊಡಲಿ ಕುಡುಗೋಲುಗಳನ್ನೆಲ್ಲ ನಾನೇ ಸಹಿಸಿಕೊಂಡು ನಿಮಗೆ ನೋವಾಗದಂತೆ ನೋಡಿಕೊಳ್ಳುತ್ತಲಿದ್ದೇನೆ. ನನ್ನನ್ನು

ಕಡಿದೊಯ್ದರೂ ನೀವಾದರೂ ಉಳಿದು, ವಂಶ ಉಳಿಸಲೆಂಬ ಆಸೆಯಿಂದ ಎಲ್ಲ ಕ್ಲೇಶಗಳನ್ನೂ ಸಹಿಸಿಕೊಂಡು ಬದುಕಿದ್ದೇನೆ." ಇಲ್ಲಿ ಬರುವ ಸಮುದ್ರ–ಆಕಾಶ, ಬೇರು–ಮರ ಇವುಗಳು ಆಡುವ ಮಾತುಗಳು ಮಾನವ ಸ್ವಭಾವಸಹಜವಾದ ಮಾತುಗಳೆ ಅಲ್ಲವೇ. ಈ ಸಾಲುಗಳು ರವೀಂದ್ರರ 'ಖಣಡಿಚಿಥಿ ಖಡಿಫ' ದಲ್ಲಿ ಬರುವ ಸಣ್ಣ ಸಣ್ಣ ಕವನಗಳನ್ನೇ ನೆನಪಿಗೆ ತರುತ್ತವೆ. ಒಂದೊಂದು ಮಾತನ್ನೂ ಮೆಲಕುಹಾಕಿದಂತೆ ಅವರ ಉದಾತ್ತ ವಿಚಾರಗಳು ಹೊರಹೊಮ್ಮುತ್ತವೆ. ಹಲವು ಸಲ ಈ ಸಾಲುಗಳನ್ನು ನೆನೆಯುವದೆಂದರೆ ಜೀವನದ ಕಷ್ಟಗಳನ್ನೇ ಮರೆತಂತೆ. ರವೀಂದ್ರರ ಕಾವ್ಯದ ಬಗೆಗೆ ಒಬ್ಬ ವಿಮರ್ಶಕ ಉದ್ಗಾರ ತೆಗೆದರಂತೆ: `to read a line of Tagore is to forget the troubles of the world` ಅವೇ ಮಾತನ್ನು ಈ ಕವನಗಳ ಬಗೆಗೂ ಹೇಳಬಹುದು. ಈ ಸುಂದರವಾದ ಕಾವ್ಯಬಿಂದುಗಳು, ಸದ್ಭಾವ ಸುಗಂಧವನ್ನು, ಪ್ರೇಮಮಧುವನ್ನು ತುಂಬಿ ತಂದಿವೆ. ಈ ಸುಂದರ ಕೃತಿಯನ್ನು ಕನ್ನಡ ಸಾಹಿತ್ಯಪ್ರೇಮಿಗಳು ತುಂಬುಹೃದಯದಿಂದ ಸ್ವಾಗತಿಸುವರೆಂಬುದರಲ್ಲಿ ಸಂದೇಹವಿಲ್ಲ. ಈ ಕಾವ್ಯಸುಧೆ ಮನೆಮನೆಗೂ ಮುಟ್ಟಲಿ, ಸಿದ್ಧಣ್ಣನವರಿಂದ ಇಂಥ ಇನ್ನೂ ಹಲವಾರು ಕೃತಿಗಳು ಹೊರಹೊಮ್ಮಲಿ, ಅವರಿಂದ ಕನ್ನಡ ಸಾಹಿತ್ಯಸಿರಿ ಹೆಚ್ಚಲಿ ಎಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ **–ಸದಾಶಿವ ಒಡೆಯರ**

ಧಾರವಾಡ

ದಿ.೨೨ ಜುಲೈ ೧೯೬೮

ಮೊದಲು ಮಾನವನಾಗು

ಈಗ ಇಪ್ಪತ್ತು ವರ್ಷಗಳ ಮೇಲಾಗಿ ಶ್ರೀ ಸಿದ್ಧಯ್ಯ ಪುರಾಣಿಕರನ್ನು ನಾನು ಬಲ್ಲೆ ಜೀವನದೃಷ್ಟಿಯಲ್ಲಿ, ಸಾಹಿತ್ಯದಲ್ಲಿ, ಆಡಳಿತದಲ್ಲಿ; ಎಲ್ಲ ದೃಷ್ಟಿಯಿಂದಲೂ ಅವರು ಬೆಳೆದಿದ್ದಾರೆ.

ನಿಸರ್ಗದ ಚೆಲುವು, ಮಾನವನ ಮರ್ತ್ಯ– ಆದರೆ ಉದಾತ್ತ–ವ್ಯಕ್ತಿತ್ವ, ದೇಶದ ಹಾಗು ಸಮಾಜದ ಕರುಣಾಜನಕ ಸ್ಥಿತಿ ಇವು ಅವರ ಅಂತಃಕರಣವನ್ನು ಸೂರೆಗೊಂಡ ಕಾವ್ಯವಸ್ತುಗಳಾಗಿವೆ. ಇವರ ನಿಸರ್ಗಪೂಜೆಯಲ್ಲಿ ನೈಜ ಪ್ರೀತಿ ಹಾಗು ಕಾವ್ಯದಲ್ಲಿ ಅದು ಪಡೆವ ಬೆರುಗಿದೆ. ಅಲ್ಲಲ್ಲಿ ಉತ್ತಮ ನಿಸರ್ಗ ಚಿತ್ರಗಳನ್ನು ಅವರು ಮೂಡಿಸಬಲ್ಲರು. ಈ ಸಂಗ್ರಹದಲ್ಲಿ ಕಾವ್ಯ ವಸ್ತುವಿದು ಅಷ್ಟೊಂದು ಪ್ರಧಾನವಾಗಿಲ್ಲ. ಇದಕ್ಕೂ ಮೊದಲಿನ ಅವರ ಕವನಸಂಗ್ರಹಗಳಲ್ಲಿ ಅದಕ್ಕೆ ಹೆಚ್ಚು ಅವಕಾಶ ದೊರೆತಿದೆ. ತಮ್ಮದೇ ಆದ ಪ್ರತಿಮಾಸೃಷ್ಟಿಯನ್ನು ಈ ದಾರಿಯಲ್ಲಿ ಅವರು ರಚಿಸಬಲ್ಲರು.

ಹೃದಯನಿಕ್ಷೇಪ, ನೋಟ, ಪೀತಾಂಬರ, ನೆನಪಿನ ಒನಪು ಎಂಬ ಕವಿತೆಗಳಲ್ಲಿ ಅಂತರ್ಮುಖತೆ ಹಾಗೂ ಪ್ರೀತಿಯನ್ನು ಅವರು ಭಾವಗೀತದ ಕಂಪಿನಿಂದ ಹಾಡಿಕೊಂಡಿದ್ದಾರೆ. ಪೀತಾಂಬರದ ತಂತ್ರದಲ್ಲಿ ನವ್ಯತೆಯ ವಿಧಾನದ ಝಳುಕಿದೆ.

ಭಾರತ ಹಾಗು ಕರ್ನಾಟಕವನ್ನು ಕುರಿತು ಇವರು ಬರೆದ ಕವಿತೆಗಳಲ್ಲಿ ದೇಶದ ಗೌರವಪರಂಪರೆಯ ಹಾಗು ಮಹೋನ್ನತಿಯ ಸ್ಮರಣೆಯಿದೆ. ಬಸವಣ್ಣ, ಕನಕದಾಸ, ಪುರಂದರದಾಸ, ಟಾಗೋರ್, ಗಾಂಧೀಜಿ ಇವರೆಲ್ಲರ ಪವಿತ್ರ ಸ್ಮರಣೆ ಇಲ್ಲಿ ಕವನಗಳಾಗಿ ಹೊರಹೊಮ್ಮಿದೆ. ನಾಡ ಪ್ರಗತಿಯನ್ನು ತುಂಗಭದ್ರಾ ಜಲಾಶಯ ಮೊದಲಾದ ಕವಿತೆಗಳಲ್ಲಿ ನೆನೆದರೆ ನಾಡ ಹೀನ ಸ್ಥಿತಿಯನ್ನು ಮರಗೂಳುಣಿಯಂತಹ ಕವಿತೆಗಳಲ್ಲಿ ನೊಂದ ಹೃದಯದಿಂದ ನೋಡಿದ್ದಾರೆ. ನಾಡಿಗೆ ಅಗ್ನಿದಿವ್ಯ ಬಂದಾಗ ಇವರ ರಾಷ್ಟ್ರೀಯತೆ ಉತ್ಸಾಹಪೂರ್ಣವಾಗಿ ಒಡಮೂಡಿದೆ.

ಇವರ ಕಾವ್ಯದ ಮೇಲ್ಮೆ ವಿಶೇಷವಾಗಿ ನಿಸರ್ಗೋಪಾಸನೆ ಹಾಗೂ ಮಾನವಾಂತಃಕರಣದ ಅಭಿವ್ಯಕ್ತಿಯಲ್ಲಿ ಒಡಮೂಡುತ್ತದೆ. ಮಾನವಾಂತಃಕರಣವೇ ಈ ಸಂಗ್ರಹದ ಪ್ರಧಾನವಸ್ತುವಾಗಿದೆ. ಮೊದಲು ಮಾನವನಾಗು ಎಂಬಲ್ಲಿಯ ಉತ್ಕಟ ಬಿನ್ನಹ, ಅವಿಭಕ್ತಂ ವಿಭಕ್ತೇಷು ಎಂಬಲ್ಲಿಯ ವಿಶಾಲ ಪ್ರಜ್ಞೆ, ಕಾಲದ ಕರೆಯಲ್ಲಿಯ ವಿಶ್ವಪ್ರಜ್ಞೆ, ಕೊಟ್ಟುಬಿಡು ಕಾಲ! ಎಂಬಲ್ಲಿಯ ಆಶಾವಾದ, ಕಂಡೆ ಅನ್ಯದಿ ನನ್ನನ್ನು ಎಂಬಲ್ಲಿಯ ಆತ್ಮೀಯತೆ ಎಣ್ಣೆಮಜ್ಜನದಲ್ಲಿಯ ತಿಳುವಳಿಕೆಯ ನೋವು, ಬದುಕಗೊಡಿದಲ್ಲಿಯ ನೋವು ಹಾಗು ಆರ್ತತೆ ಈ ದಿಶೆಯಲ್ಲಿ ಕವಿಯ ವ್ಯಕ್ತಿತ್ವ ಕೊನರತೊಡಗಿದೆ. ಆ ಕೊನರಿನಲ್ಲಿ ಕೆಚ್ಚಿದೆ. ಕುರುಡಿಯಲ್ಲಿ ಅನ್ಯಾಯದ ಅನುಭವದಿಂದ ಬಂದ ನೋವು, ಕೆಸರಾಟ ದಲ್ಲಿ ಇಂದಿನ ಅವ್ಯವಸ್ಥೆ ಹಾಗು ಸ್ವಾರ್ಥಪರತೆಯ ಮೇಲಿನ ವಿಡಂಬನೆ ಹಾಗು ಒತ್ತುಗುಂಡಿಯ ಮೇಲೆ ಬೆರಳು

ಎಂಬಲ್ಲಿಯ ಇಂದಿನ ವಿಪ್ಲವವನ್ನು ಕುರಿತು ಚಿಂತನ,– ಈ ರೀತಿಯಾಗಿ ವಿಶಾಲ ಹೃದಯದ ಮಿಡಿತವನ್ನು ಇಲ್ಲಿ ಚೆನ್ನಾಗಿ ಗುರುತಿಸಬಹುದು.

ನಿಂತು ಮುಂದೆ ಸಾಗು ಹಾಗು ಯಾರೋ ಹೇಳಿದರು ಎಂಬ ಕವನಗಳಲ್ಲಿ ಶೈಲಿ ಇಲ್ಲವೆ ಹಲಕೆಲವು ಪ್ರತಿಮೆಗಳ ನವ್ಯತೆಯಿದೆ.

ರಸವಂತಿಕೆಯಿಂದ ಕವನಗಳು ಹೃದಯಸ್ಪರ್ಶಿಯಾಗುತ್ತವೆ. ಈ ಕವನಗಳಲ್ಲಿ ರಸವಂತಿಕೆಯಿದೆ. ಅವುಗಳ ಉಡಿಗೆ–ತೊಡಿಗೆ ಆಧುನಿಕ, ನವ್ಯವಲ್ಲ. ಆದರೆ ಎಲ್ಲರ ವೇಷ–ಭೂಷಣ ನವ್ಯವೇ ಇರಬೇಕೆಂದಿಲ್ಲ. ಇದ್ದರೆ ಇಂದು ಅದೂ ಒಂದು ದೃಷ್ಟಿಯಿಂದ ಅನಾನುಕೂಲ. ಇದು ಸಂಧಿಕಾಲ, ಇದೀಗ ಆಧುನಿಕ ಕನ್ನಡಕಾವ್ಯ ಹೆಚ್ಚು ಜನ ರಸಿಕರಿಗೆ ಹೋಗಿ ಮುಟ್ಟುವ ಲಕ್ಷಣಗಳಿವೆ. ನವ್ಯ ಕಾವ್ಯ ಇನ್ನೂ ಬರಿ ಕೆಲವರ ಸೊತ್ತಾಗಿಯೇ ಉಳಿದಿದೆ. ಜನತೆಗೆ ಅದರ ಫಲ ಮುಟ್ಟುವ ಕಾಲ ಇನ್ನೂ ಬರಬೇಕಾಗಿದೆ. ಕನ್ನಡದ ಜನಕ್ಕೆ ಆಧುನಿಕ ಕನ್ನಡಕಾವ್ಯದ ಸಿದ್ಧಿಯನ್ನು ಒಯ್ದು ಮುಟ್ಟಿಸುವ ಕಾರ್ಯದಲ್ಲಿ ಶ್ರೀಪುರಾಣಿಕರು ಶ್ಲಾಘ್ಯ ಪಾತ್ರವನ್ನು ವಹಿಸಿದ್ದಾರೆ. ಅವರ ವ್ಯಕ್ತಿತ್ವ ಹೀಗೆಯೇ ವಿಕಸನಗೊಂಡು ಇನ್ನೂ ಹಿರಿದಾದ ಕಾವ್ಯಕೃತಿಗಳ ಯಶಸ್ಸನ್ನು ಪಡೆಯಲಿ.

ಬೆಂಗಳೂರು ವಿಶ್ವವಿದ್ಯಾಲಯ, **–ವಿ.ಕೃ.ಗೋಕಾಕ್**
ಬೆಂಗಳೂರು

ಅನುಬಂಧ ೩

ನಿವೇದನೆಗಳು

ಜಲಪಾತ

೧೯೫೩ ರ ಆರಂಭದಲ್ಲಿ ಅಚ್ಚಾದ ನನ್ನ ಪ್ರಥಮ ಕವನ ಸಂಗ್ರಹ 'ಜಲಪಾತ'ದ ಪ್ರತಿಗಳು ಸಿಕ್ಕುತ್ತಿಲ್ಲವೆಂಬ ದೂರು ಕಳೆದ ನಾಲ್ಕಾರು ವರ್ಷಗಳಿಂದಲೂ ಕೇಳಿಬರುತ್ತಿದ್ದಿತು. ನನ್ನಲ್ಲಿ ಬಹುವಾದ ವಿಶ್ವಾಸವನ್ನಿರಿಸಿಕೊಂಡಿರುವ ರಾಯ್ಚೂರಿನ 'ಸಂಗಡಿಗರ ಸಮಿತಿ'ಯ ಸ್ನೇಹಿತರು ಇದರ ದ್ವಿತೀಯ ಆವೃತ್ತಿಯನ್ನು ಪ್ರಕಟಿಸಲು ಸ್ವಸಂತೋಷದಿಂದ ಮುಂದೆ ಬಂದಿದ್ದಾರೆ. ಇದರ ಪ್ರಕಟನೆಯಿಂದ 'ಸಮಿತಿ'ಗೆ ಲಾಭವೇನೂ ಆಗದಿದ್ದರೂ ನಷ್ಟವಾದರೂ ತಟ್ಟದಿದ್ದರೆ ನನಗೆ ನಿಜವಾದ ಸಂತೋಷವಾಗುವುದು. ಹಾಗಾಗುವಂತೆ ಕನ್ನಡ ಕಾವ್ಯ ಪ್ರೇಮಿಗಳು 'ಸಮಿತಿ'ಗೆ ಸಕ್ರಿಯ ಸಹಾನುಭೂತಿ ತೋರಿಸುವರೆಂದು ನೆರೆನಂಬಿದ್ದೇನೆ.

–ಕಾವ್ಯಾನಂದ

ಇದರ ಮೊದಲ ಮುದ್ರಣದ ನಿವೇದನೆ ನಮಗೆ ದೊರೆಯದಿದ್ದರಿಂದ ಅದನ್ನು ಇಲ್ಲಿ ಕೊಡಲಾಗಿಲ್ಲ.

ಕರುಣಾ ಶ್ರಾವಣ

'ಜಲಪಾತ'ದ ಪ್ರಕಟನೆಯಲ್ಲಾದ ಕಟು ಅನುಭವವು 'ಕರುಣಾ ಶ್ರಾವಣ'ವು ಇಷ್ಟು ತಡವಾಗಿ ಪ್ರಕಟವಾಗಲೂ ಕಾರಣವಾಯಿತು. ಒಂದು ದೃಷ್ಟಿಯಿಂದ ಒಳ್ಳೆಯದೇ ಆಯಿತು! ಒಂದೆರಡು ಇತ್ತೀಚಿನ ಕವಿತೆಗಳೂ ಇದರಲ್ಲಿ ಸೇರ್ಪಡೆಯಾಗುವುದು ಸಾಧ್ಯವಾಯಿತು.

ನನ್ನ ವಿದ್ಯಾಗುರುಗಳಾದ ಆಚಾರ್ಯ ಡಿ. ಕೆ. ಭೀಮಸೇನರಾಯರು ಆದ್ಯಂ ತವಾಗಿ ಈ ಕವಿತೆಗಳನ್ನು ಓದಿ ನೋಡಿ ಬೇಸರಿಲ್ಲದಂತೆ ತಿದ್ದಿ ತೀಡದಿದ್ದರೆ ಇವುಗಳನ್ನು ಪ್ರಕಟಿಸುವ ಸಾಹಸವನ್ನೇ ನಾನು ಮಾಡುತ್ತಿರಲಿಲ್ಲ. ಅವರ ಅಸೀಮ ಶಿಷ್ಯವಾತ್ಸಲ್ಯಕ್ಕೆ ಅನಂತ ವಂದನೆಗಳನ್ನು ಅರ್ಪಿಸದಿರಲಾರೆ.

ಮಹಾಕವಿ 'ಕುವೆಂಪು' ಅವರು ತಮ್ಮ ಸಮಯಾಭಾವದಲ್ಲಿಯೂ ಸಮಯ ಕಲ್ಪಿಸಿಕೊಂಡು ಆಶೀರ್ವಚನವನ್ನು ಕಳಿಸಿ ಪ್ರೋತ್ಸಾಹಿಸಿದ್ದಾರೆ. ಅವರಿಗೆ ಕೃತಜ್ಞತೆಯ ಕಾಣಿಕೆಯನ್ನು ಅರ್ಪಿಸದಿರಲಾರೆ.

ಈ ಸಲ 'ಸಹಜೀವನ ಸಾಹಿತ್ಯಮಾಲೆ'ಯ ಪ್ರಥಮಪುಷ್ಪವಾಗಿ ಈ ಕೃತಿ ಹೊರಬಿದ್ದಿದೆ. ಇದಕ್ಕಾಗಿ ಮಾಲೆಯ ಚಾಲಕರ ಉಪಕಾರ ಸ್ಮರಿಸಿ ಮಾಲೆಯಲ್ಲಿ ಮುಂದೆ ಇದಕ್ಕೂ ಶ್ರೇಷ್ಠವಾದ ಕೃತಿಗಳನೇಕ ಹೊರಬೀಳಲೆಂದು ಹಾರೈಸುತ್ತೇನೆ.

–ಕಾವ್ಯಾನಂದ

ಮರು ಮುದ್ರಣದ ಮುಮ್ಮಾತು

ನನ್ನ ದ್ವಿತೀಯ ಕವನಸಂಗ್ರಹ 'ಕರುಣಾ ಶ್ರಾವಣ'ದ ದ್ವಿತೀಯ ಆವೃತ್ತಿ ಬಹಳ ದಿನಗಳ ಹಿಂದೆಯೇ ಪ್ರಕಟವಾಗಬೇಕಿತ್ತು. ಆದರೆ ಅದು ಕೂಡಿ ಬರುವ ಕಾಲವನ್ನು ಕಾಯಬೇಕಾಯಿತು. 'ಜನಪದ ಸಾಹಿತ್ಯ ಅಕಾದೆಮಿ' ಇದನ್ನು ಪ್ರಕಟಿಸುತ್ತಿರುವುದು ನನಗೆ ಹೆಚ್ಚಿನ ಹಿಗ್ಗನ್ನುಂಟು ಮಾಡಿದೆ. ಅದರ ಜೀವನಾಡಿ ಗೆಳೆಯ ಕರಾಕೃ ಕನ್ನಡ ಜನಪದ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆ ಚಿರಸ್ಮರಣೀಯವಾದುದು. ಅವರ ಆಗ್ರಹದಂತೆ ಈ ದ್ವಿತೀಯ ಮುದ್ರಣಕ್ಕೆ ಒಪ್ಪಿದ್ದೇನೆ.

'ಕರುಣಾ ಶ್ರಾವಣ'ಕ್ಕೆ ಕನ್ನಡ ಕುಲರಸಿಕರಿಂದ ದೊರೆತ ಮೆಚ್ಚಿಗೆ ಇದರ ಮರು ಅಚ್ಚಿಗೆ ಕಾರಣವಾಗಿದೆ. ಆಚಾರ್ಯ ಡಿ. ವಿ. ಗುಂಡಪ್ಪನವರು ಅಪ್ರಾರ್ಥಿತವಾಗಿ ಕಾಗದ ಬರೆದು–'ಕರುಣಾ ಶ್ರಾವಣದಲ್ಲಿ ಕಾವ್ಯಧಾರೆ ಜೋರಾಗಿ ಬಂದಿದೆ. ಹೊಸ ಹೊಸ ಕಲ್ಪನೆಗಳು; ಹೊಸ ಹೊಸ ಉಪಮಾನಗಳು; ಹೊಸ ಹೊಸ ಪ್ರಾಸಗಳು; ಹೊಸ ಹೊಸ ಓಟ ಕುಣಿತಗಳು– ಎಲ್ಲ ಸೊಗಸು, ಎಂದು ಬೆನ್ನು ಚಪ್ಪರಿಸಿದರು. ಅವರ ಈ ಅವ್ಯಾಜ ವಾತ್ಸಲ್ಯವನ್ನು ಎಂದಿಗೂ ಮರೆಯಲಾರೆ. ಮೊಲದ ಮುದ್ರಣಕ್ಕೆ ಆಶೀರ್ವಾದ ನೀಡಿದ್ದ ಆಚಾರ್ಯತ್ರಯರಲ್ಲಿ ಒಬ್ಬರಾದ ಮಾನ್ಯ ಶ್ರೀ ತೀ. ನಂ. ಶ್ರೀ. ಇಂದಿಲ್ಲ! ಅವರು ನನ್ನ ಬಗ್ಗೆ ತಳೆದಿದ್ದ ಅಪಾರವಾದ ವಾತ್ಸಲ್ಯವನ್ನು ಸ್ಮರಿಸಿಕೊಂಡಾಗಲೆಲ್ಲ– ಸ್ಮರಿಸಿಕೊಳ್ಳದ ದಿನವಾವುದು?–ನನಗೆ ದುಃಖ ಉಕ್ಕಿ ಬರುತ್ತದೆ ! ಅವರಿಗೆ ಈ ದ್ವಿತೀಯ ಮುದ್ರಣದ ಪ್ರತಿ ಅರ್ಪಿಸುವ ಭಾಗ್ಯ ನನಗಿಲ್ಲ! ಅವರ ಆತ್ಮಕ್ಕೆ ಅರ್ಪಿಸುವೆ!

ಈ ದ್ವಿತೀಯ ಆವೃತ್ತಿಯಲ್ಲಿ ನಾಲ್ಕೈದು ಹೊಸ ಕವಿತೆಗಳು ಸೇರಿವೆ. ಇವುಗಳ ಸೇರ್ಪಡೆಯಿಂದ ಸಂಗ್ರಹದ ಗಾತ್ರದೊಡನೆ ಪಾತ್ರತೆಯೂ ಹೆಚ್ಚಿದೆಯೆಂದುಕೊಂಡಿದ್ದೇನೆ. ಜೊತೆಗೆ ಸುಪ್ರಸಿದ್ಧ ಕಲಾವಿದರಾದ ಶ್ರೀ ಎಸ್. ನಂಜುಂಡಸ್ವಾಮಿಯವರ ತ್ರಿವರ್ಣರಕ್ಷಾಚಿತ್ರವೂ ಮೆರುಗನ್ನು ನೀಡಿದೆ ಅವರಿಗೆ ನನ್ನ ಹಾರ್ದಿಕ ಅಭಿವಂದನೆಗಳು. ಇದಕ್ಕೆ ಪ್ರಥಮ ಆವೃತ್ತಿಯನ್ನು ಸ್ವಾಗತಿಸಿದ ಕನ್ನಡ ಕಾವ್ಯಪ್ರೇಮಿಗಳು ಈ ದ್ವಿತೀಯ ಆವೃತ್ತಿಯನ್ನೂ ಪುರಸ್ಕರಿಸಿ ಪ್ರೋತ್ಸಾಹಿಸುವರೆಂದು ನಂಬಿದ್ದೇನೆ.

–ಕಾವ್ಯಾನಂದ

ಮಾನಸ ಸರೋವರ

ಸುಮಾರು ಇಪ್ಪತ್ತು ವರ್ಷಗಳಾಚೆ ಅಂಟಿದ್ದ ಈ ಗೀಳು. ಈ ಗುಂಗು ಬಿಡುವಿರದ ಕಾರ್ಯತತ್ಪರತೆಯಲ್ಲಿ ಇಂಗಿಹೋದ ಹಾಗಾಗಿದ್ದಿತು. ಬತ್ತಿಹೋದ ಹಾಗೆ ಭಾಸವಾಗತೊಡಗಿದ್ದಿತು. ಬೆಂಗಳೂರಿಗೆ ಬಂದ ಮೇಲೆ ಗೆಳೆಯರಾದ ಚಕ್ರವರ್ತಿ, ಎನ್ಕೆ, ಇರಾ, ಸಾಕ್ಷಿ, ಪಾಂಡುರಂಗರಾವ್, ಶಂಕರ ಪಾಟೀಲ ಮೊದಲಾದವರ ಸಹವಾಸದಲ್ಲಿ ಬತ್ತಿದ್ದ ಬುಗ್ಗೆ ಮತ್ತೆ ಸೆಲೆಯೊಡೆಯುವಂತೆ ತೋರಿತು. ಕಲ್ಯಾಣದ ಸಾಹಿತ್ಯ ಸಮ್ಮೇಳನದ ಕಾವ್ಯಗೋಷ್ಠಿಯ ಅಧ್ಯಕ್ಷಪದವದಕ್ಕೆ ಪುಟಕೊಟ್ಟಿತು. ಸಮ್ಮೇಳನದ ಹೊತ್ತಿಗೆ ಸಂಗ್ರಹವೊಂದು ಪ್ರಕಟವಾಗಲೇಬೇಕೆಂದು ಗೆಳೆಯರು ಹಟ ಹಿಡಿದರು. ಅವರ ಹಟ ಫಲಿಸಿ 'ಮಾನಸ ಸರೋವರ' ತುಂಬಿ ನಿಂತಿದೆ–ಸಮ್ಮೇಳನ ಮುಂದೆ ಮುಂದೆ ಹೋಗುತ್ತಿದ್ದರೂ ಸಹ. ಇದಕ್ಕಾಗಿ ಈ ಗೆಳೆಯರ ಬಳಗಕ್ಕೆ ನಮಿಸುವೆ.

ಹೊಸಗನ್ನಡ ಕಾವ್ಯ ಪ್ರಪಂಚದ ಹಿರಿಯ ಕವಿಗಳಲ್ಲೊಬ್ಬರಾದ ಶ್ರೀ ಪು.ತಿ. ನರಸಿಂಹಾಚಾರ್ಯರು ತಮ್ಮ ಮನೋಜ್ಞವಾದ ಮುನ್ನುಡಿಯಿಂದ ಈ ಸಂಗ್ರಹದ ಬೆಲೆಯನ್ನು ಹೆಚ್ಚಿಸಿದ್ದಾರೆ. ಅದು ಬರಿ ಮುನ್ನುಡಿಯಲ್ಲ–ಕವಿಗಳ ಕೈಗನ್ನಡಿ. ಈ ಮುನ್ನುಡಿಯ ಕತೆದಿಂದ ಒಂದು ವಾರ ಅವರ ವಿಶುದ್ಧ ವಿಚಾರ ವಾಹಿನಿಯಲ್ಲಿ ಮಿಂದು ಮಡಿಯಾದೆ. ಅವರಿಗೆ ಅನಂತ ವಂದನೆಗಳನ್ನು ಅರ್ಪಿಸದಿರಲಾರೆ.

'ಪ್ರಿಯದರ್ಶಿನಿ ಪ್ರಕಟನಾಲಯ' ಇದನ್ನು ಪ್ರಕಟಿಸಿರುವುದು ನನಗೆ ಹೆಚ್ಚಿನ ಹಿಗ್ಗನ್ನುಂಟುಮಾಡಿದೆ. ಅದರ ಒಡೆಯರಿಗೂ ವಂದನೆಗಳು.

ಈ ಸಂಗ್ರಹದಲ್ಲಿ ಸೇರ್ಪಡೆಯಾಗಿರುವ ಕೆಲವು ಕವನಗಳು ಈ ಮೊದಲು ಆಕಾಶವಾಣಿಯಲ್ಲಿ ಬಿತ್ತರಿಸಲ್ಪಟ್ಟಿವೆ. ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆಕಾಶವಾಣಿಯ ಅಧಿಕಾರಿಗಳ, ಪತ್ರಿಕೆಗಳ ಸಂಪಾದಕರ ಉಪಕಾರವನ್ನಿಲ್ಲಿ ಸ್ಮರಿಸದಿರಲಾರೆ.

ನನ್ನ ಮುನ್ನಿನ ಎರಡು ಕವನ ಸಂಗ್ರಹಗಳನ್ನು ಮೆಚ್ಚಿದ ಸಹೃದಯರು ಈ ಮೂರನೆಯ ಸಂಗ್ರಹವನ್ನೂ ಮೆಚ್ಚಬಹುದೆಂದು ನಂಬಿದ್ದೇನೆ.

–ಕಾವ್ಯನಂದ

ಕಲ್ಲೋಲ ಮಾಲೆ

ಪ್ರಜ್ಞಾ ಪ್ರವಾಹದಲ್ಲಿ ಮೂಡಿ ಮರೆಯಾಗುವ ತೆರೆಗಳೆಲ್ಲವನ್ನೂ ಸೆರೆಹಿಡಿದಿಡುವುದು ಸಾಧುವೂ ಅಲ್ಲ, ಸಾಧ್ಯವೂ ಅಲ್ಲ. 'ಕಲ್ಲೋಲ ಮಾಲೆ' ಯಲ್ಲಿ ಕೆಲವು ವಿಶೇಷ ರೀತಿಯ ತೆರೆಗಳು ಸರಗೊಂಡಿವೆಯೆಂದುಕೊಂಡಿದ್ದೇನೆ. 'ತುಷಾರಹಾರ'ವನ್ನು ಮೆಚ್ಚಿದವರು 'ಕಲ್ಲೋಲಮಾಲೆ'ಯನ್ನೂ ಮೆಚ್ಚಬಹುದೆಂದು ಭಾವಿಸಿದ್ದೇನೆ.

'ಕಲ್ಲೋಲ ಮಾಲೆ'ಯನ್ನು ಮೆಚ್ಚದವರು ಅದರ ಮುನ್ನುಡಿಯನ್ನಂತೂ ಖಂಡಿತ ಮೆಚ್ಚುವರೆಂದು ನಂಬಿದ್ದೇನೆ. ಅದನ್ನು ನೀಡಿದ ನನ್ನ ಸಹೃದಯ ಸಹೋದರ

ಶ್ರೀ ಸದಾಶಿವ ಒಡೆಯರ ಅವರ ಉಪಕಾರವನ್ನು ಮರೆಯಲಾರೆ.

ಇನ್ನೊಬ್ಬ ಸಹೃದಯ ಸೋದರ ಶ್ರೀ ಪಂಚಾಕ್ಷರಿ ಹಿರೇಮಠರು ಇದರ ಪ್ರಕಾಶಕರಾಗಿ ದೊರೆತುದು ನನಗೆ ಅಮಿತ ಆನಂದವನ್ನುಂಟುಮಾಡಿದೆ. ಸುಂದರವಾಗಿ ಈ ಪುಸ್ತಕವನ್ನು ಮುದ್ರಿಸಿದ ಮಣಿಪಾಲ ಪವರ್ ಪ್ರೆಸ್ಸಿನವರಿಗೂ ಅದರ ಮ್ಯಾನೇಜರ ಶ್ರೀ ಬಿ. ಕೃಷ್ಣಯ್ಯನವರಿಗೂ ನೆನಕೆಗಳು.

–ಕಾವ್ಯಾನಂದ

ಮೊದಲು ಮಾನವನಾಗು

ಇದು ನನ್ನ ನಾಲ್ಕನೆಯ ಕವನ ಸಂಗ್ರಹ. 'ಜಲಪಾತ', 'ಕರುಣಾ ಶ್ರಾವಣ', 'ಮಾನಸ ಸರೋವರ'– ಈಗ 'ಮೊದಲು ಮಾನವನಾಗು' ಒಂದೊಂದರಲ್ಲಿ ಒಂದೊಂದು ಬಗೆಯ ಕವಿತೆಗಳ ಆಧಿಕ್ಯ ಕಂಡು ಬರದಿರದು. ಉದ್ದೇಶ ಚರ್ವಿತಚರ್ವಣವಾಗಿದಿರಲೆಂಬುದು; ಒಕ್ಕಣ್ಣತೆಗೆ ಆಸ್ಪದ ದೊರೆಯದಿರಲೆಂಬುದು; ಅಭಿವ್ಯಕ್ತಿಗೆ ಅನಿರ್ಬಂಧತೆಯಿರಲೆಂಬುದು; ಏಕಾಗ್ರತೆ ಸಮಗ್ರತೆಗಳೆರಡಕ್ಕೂ ಸ್ಥಾನವಿರಲೆಂಬುದು. ಉದ್ದೇಶ ಈಡೇರಿದೆಯೋ ಇಲ್ಲವೋ ಎಂಬುದನ್ನು ಓದುಗರು, ವಿಮರ್ಶಕರು. ಕಾಲ ನಿರ್ಣಯಿಸಬೇಕು.

ಈ ಸಂಗ್ರಹದ ಶೀರ್ಷಿಕೆಗೆ ಕಾರಣವಾದ ಕವಿತೆಯು ಪ್ರತಿಪಾದಿಸಿರುವ ವಿಷಯದ ಬಗ್ಗೆ ಒಂದು ಮಾತು. ಯಾವ ಧರ್ಮದ ಅನುಯಾಯಿಯಾಗುವುದಕ್ಕೂ ಮೊದಲು ಮಾನವನಾಗು ಎಂಬುದಕ್ಕೆ ಒಂದು ಆಕ್ಷೇಪ ಬಂದಿದೆ. 'ಧರ್ಮವಿರುವುದೇ ನಮ್ಮನ್ನು ಮಾನವರನ್ನಾಗಿ ಮಾಡುವುದಕ್ಕೆ, ಧರ್ಮವಿಲ್ಲದೆ ಮಾನವರಾಗುವುದು ಹೇಗೆ?' ಎಂಬುದೇ ಆ ಆಕ್ಷೇಪ.

ಇದಕ್ಕೆ ನಾನು ಕೊಡುವ ಉತ್ತರ ಅಲ್ಲಮ ಪ್ರಭು ಮಾಯೆಗೆ ಕೊಟ್ಟ ಉತ್ತರವೇ ಆಗಿದೆ; 'ಕಬ್ಬುನವು ಪರುಷ ಸ್ಪರ್ಶದಿಂದ ಚಿನ್ನವಾದೀತು; ಹಳೆ ಹೆಂಚು ಹೊನ್ನಾಗ ಬಲ್ಲುದೆ?' ಮೂಲ ಅರ್ಹತೆ ಮಾನವತೆ. ಅದಿಲ್ಲದಿದ್ದರೆ ಯಾವ ಧರ್ಮದ ಪರುಷ ಸೋಂಕಿ ಯಾವ ಪ್ರಯೋಜನವಾದೀತು? 'ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣ.... ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನೇಕೆ ಸದ್ಭಕ್ತನಹನು?'

ಧರ್ಮ ನಮ್ಮನ್ನು ಉದ್ಧರಿಸಲಿಲ್ಲವೆಂದು ವ್ಯರ್ಥವಾಗಿ ಹಲುಬುತ್ತೇವೆ; ಅದು ನಮ್ಮನ್ನು ಉದ್ಧರಿಸಬೇಕಾದರೆ ನಮ್ಮಲ್ಲಿ ಮೂಲ ಅರ್ಹತೆ (Basic qualification) ಮಾನವತೆಯಿರಬೇಕೆಂಬುದನ್ನು ಮರೆಯುತ್ತೇವೆ. ಪರಿಪೂರ್ಣ ಮಾನವತೆಯಿಲ್ಲದಿದ್ದರೆ ಹೋಗಲಿ, ಸಾಮಾನ್ಯ ಮಾನವತೆಯಾದರೂ ಇದ್ದರೆ ಧರ್ಮದಿಂದ ಪರಿಪೂರ್ಣ ಮಾನವತೆ. ಅದಕ್ಕೂ ಮುಂದಿನ ಮೆಟ್ಟಲು ದೇವತ್ವ ದೊರೆತೀತು. ಮೂಲವೇ ಸೊನ್ನೆಯಾದರೆ ಅದಕ್ಕೆ ಬೆಲೆ ತರುವುದು ಹೇಗೆ?

ಎಲ್ಲರೂ ಮಾನವರಾದರೆ, ಮಾನವ ಸಹಜವಾದ ಸ್ನೇಹ, ಕರುಣೆ, ಸಹಕಾರ, ಸಹನೆ ಮೊದಲಾದ ಗುಣಗಳನ್ನು ಮೈಗೂಡಿಸಿಕೊಂಡರೆ, ನಿತ್ಯಜೀವನದಲ್ಲಿ ಅಳವಡಿಸಿಕೊಂಡರೆ ಈ ಲೋಕವೇ ನಾಕವಾದೀತೆಂಬ ನಂಬಿಕೆ ಕವಿಗೆ. ಆ ನಂಬಿಕೆಯ ಸಂಕೇತ ಈ ಶೀರ್ಷಿಕೆ, ಅಷ್ಟೆ.

ಈ ಸಂಗ್ರಹಕ್ಕೆ ಹೊಸಗನ್ನಡ ಸಾಹಿತ್ಯದ ಸೀಮಾಪುರುಷರಲ್ಲೊಬ್ಬರಾದ ನವ್ಯಕಾವ್ಯ ನಾಯಕ 'ವಿನಾಯಕ'ರ ಮುನ್ನುಡಿಯ ಭಾಗ್ಯ ಲಭಿಸಿದೆ. ಅವರು ನನ್ನ ಬಗ್ಗೆ ಇರಿಸಿಕೊಂಡಿರುವ ವಾತ್ಸಲ್ಯ ಅನಿರ್ವಚನೀಯವಾದುದು. ಅಂತೆಯೆ ತಮಗೆ

ಉಸಿರಾಡಿಸಲು ಸಹ ಬಿಡುವಿರದಿದ್ದರೂ ಬಿಡುವು ಮಾಡಿಕೊಂಡು ಬೆಲೆಯುಳ್ಳ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ಆಜನ್ಮ ಋಣಿ ನಾನು.

'ತಾರಾ ಗ್ರಂಥ ಪ್ರಕಾಶನ'ದ ಎಳೆಯ ಹೆಗಲುಗಳ ಮೇಲೆ ಈ ಕವನ ಸಂಗ್ರಹದ ಹೊರಲಾಗದ ಹೊರೆ ಹೊರಿಸುತ್ತಲಿದ್ದೇನೆ. ಪ್ರಕಾಶನದ ಪ್ರಾಣಶಕ್ತಿ ಪಂಚಾಕ್ಷರಿ ಹಿರೇಮಠರ ಹಟ ಗೆದ್ದಿದೆ. 'ಕಲ್ಲೋಲ ಮಾಲೆ'ಯನ್ನು ಪ್ರಕಟಿಸಿ ತೃಪ್ತರಾಗದೆ ಇದನ್ನೂ ಹೊರಗೆಡಹಲು ಮುಂದಾಗಿದ್ದಾರೆ. ಅವರಿಗೆ ಅದಾವ ಧೈರ್ಯವೋ ನಾನರಿಯೆ. ಅವರ ಧೈರ್ಯ ಕುಸಿಯದಂತೆ, ಹುಸಿಯಾಗದಂತೆ ಓದುಗರು ಸಹಕರಿಸಬೇಕು, ವಾಚನಾಲಯಗಳು ಸಹಕರಿಸಬೇಕು, ವಿದ್ಯಾಲಯಗಳು ಸಹಕರಿಸಬೇಕು. ಇನ್ನೇನ ಬಯಸಲಿ? ಇದನ್ನಾದರೂ ಏಕೆ ಬಯಸಲಿ? ಕನ್ನಡ ತಾಯಿಗೆ ಸಮರ್ಪಿಸಿದ ಸೇವೆಗೆ ಪ್ರತಿಫಲದ ಅಪೇಕ್ಷೆಯಾದರೂ ಏಕೆ?

–ಕಾವ್ಯಾನಂದ

ಚರಗ

ಇಪ್ಪತ್ತು ವರ್ಷಗಳ ತರುವಾಯ ನನ್ನದೊಂದು ಕವನ ಸಂಗ್ರಹವನ್ನು ಆರನೆಯ, ಬಹುಶಃ ಕೊನೆಯ ಸಂಗ್ರಹವನ್ನು ಪ್ರಕಟಿಸುತ್ತಲಿದ್ದೇನೆ. ಇಷ್ಟು ವರ್ಷ ತಡವಾಗಲು ನನ್ನ ಕವಿತಾ ಶಕ್ತಿಯಹ್ರಾಸ, ವಚನ ಮಾಧ್ಯಮದ ಆಕರ್ಷಣೆ, ಹೊಸ ಕಾವ್ಯಪಂಥಗಳಿಗೆ ಹೊಂದಿಕೊಳ್ಳಲಾಗದುದು. ಇನ್ನೂ ಏನೇನೋ ಕಾರಣಗಳು.

'ಹೀಗಿದ್ದೂ ಆಗಾಗ ಬರೆದ ಕವನಗಳಿವೆಯಲ್ಲ? ಅವುಗಳನ್ನೇನು ಮಾಡುವುದು?' ಎಂಬ ಪ್ರಶ್ನೆ ಕಾಡಿ ಕೆಲವನ್ನಾದರೂ ಪ್ರಕಟಿಸಿ ಕೈತೊಳೆದುಕೊಳ್ಳಬೇಕೆನಿಸಿತು. ಈ ಅನಿಸಿಕೆಯ ಫಲ ಈ ಸಂಗ್ರಹ.

ಕವಿತೆಗಳ ಆಯ್ಕೆ ಶ್ರೇಷ್ಠ ವಿಮರ್ಶಕರೊಬ್ಬರಿಂದ ಆದರೆ ಲೇಸೆಂದು ಹಾರೈಸಿದೆ. ಆ ಹಾರೈಕೆ ಈಡೇರಲಿಲ್ಲ. ನಾನೇ ನನಗೆ ತಿಳಿದಂತೆ, ಹೊಳೆದಂತೆ ಆಯ್ಕೆ ಮಾಡಿದ್ದೇನೆ. ನಿಜವಾಗಿ ಒಳ್ಳೆಯವಾದ ಕವಿತೆಗಳನ್ನು ಕೈಬಿಟ್ಟಿರಬಹುದು; ಒಳ್ಳೆಯವಲ್ಲದುವನ್ನು ಆರಿಸಿರಬಹುದು. ಉಪಾಯವಿಲ್ಲ. "ಶ್ರೀಗಿರಿ ಪ್ರಕಾಶನ" ಮೂರನೆಯ ಕುಡಿ ಬಿಟ್ಟಿತೆಂಬ ಸಂತಸ ಸಾಕು.

"ಲೋಟಸ್ ಪ್ರಿಂಟರ್ಸ್" ಒಡೆಯರು ಎಂದಿನಂತೆ ಅಂದವಾಗಿ ಮುದ್ರಿಸಿ ಕೊಟ್ಟಿದ್ದಾರೆ ಅವರಿಗೆ ವಂದನೆಗಳು. ನನ್ನನ್ನು ಇದುವರೆಗೆ ಪ್ರೋತ್ಸಾಹಿಸುತ್ತ ಬಂದ ಕನ್ನಡ ಸಹೃದಯರಿಗೆ ನಮನಗಳು.

–ಸಿದ್ಧಯ್ಯ ಪುರಾಣಿಕ

ಹಾಲ್ದೆನೆ

'ಚರಗ', ನನ್ನ ಕೊನೆಯ ಸಂಗ್ರಹವಾಗಬಹುದೆಂದುಕೊಂಡಿದ್ದೆ. ಈಗ ಆತ್ಮೀಯರಾದ ಪ್ರೊ. ಉತ್ಸಾಳರ ಆಗ್ರಹ ಕಾರಣವಾಗಿ ಏಳನೆಯ ಸಂಗ್ರಹ 'ಹಾಲ್ದೆನೆ' ಹೊರಬೀಳುತ್ತಿದೆ. ಮತ್ತೆ ಮೊದಲಿನ ಗುಂಗು ಗುನುಗುನಿಸತೊಡಗಿದೆ. ಕನ್ನಡ ತಾಯಿಯ ಕೃಪೆ; ಅಥಣಿಯ ಅಧ್ಯಾತ್ಮ ಸೂರ್ಯರ ಕರುಣೆ.

ಊರೆಲ್ಲ ಉರಿಯುತ್ತಿದ್ದರೂ ನನ್ನ ಮನೆ ತಣ್ಣಗಿದೆಯೆಂದು ಪರಂಪರಾಗತ ಕಾವ್ಯಶಾಸ್ತ್ರ ವಿನೋದದಲ್ಲಿ ಕಾಲ ಕಳೆಯುವ ಸ್ವಭಾವ ನನ್ನದಲ್ಲ. 'ದೇಶದ, ದೇಶವಾಸಿಗಳ ಸಮಸ್ಯೆಗಳು, ಪ್ರಶ್ನೆಗಳು, ಕಷ್ಟ–ಕ್ಲೇಶಗಳು, ನಗೆ ಹೊಗೆ ಧಗೆಗಳು ಸಂವೇದನಾಶೀಲ ಕವಿ ಹೃದಯವನ್ನೇ ಕಲಕದಿದ್ದರೆ ಇನ್ನಾರ ಹೃದಯವನ್ನು ಕಲಕಿಯಾವು'? ಎಂದು ಪ್ರಶ್ನಿಸುವವನು ನಾನು. ಆದುದರಿಂದ ಇವುಗಳನ್ನೇ ಕವಿತೆಗಳನ್ನಾಗಿ ರೂಪಿಸುವಲ್ಲಿ ನನಗೆ ಒಲವು ಹೆಚ್ಚು. ಇಂಥ ಕವಿತೆಗಳೇ ಈ ಸಂಗ್ರಹದಲ್ಲಿ ಹೆಚ್ಚಿಗಿವೆಯೆಂದೆನಿಸಿದರೆ ನನ್ನ ಮಟ್ಟಿಗೆ ಅದು ಅನಿವಾರ್ಯವೆಂದು ಸಹೃದಯರು ಮನ್ನಿಸಲಿ. ಕವಿತೆಗಳು ಇಷ್ಟವಾಗದಿದ್ದರೂ ಅವುಗಳ ಬೆನ್ನೇರಿರುವ ಕಿರುಗವಿತೆಗಳು. ಕಿರುರೂಪಕಗಳು ಇಷ್ಟವಾದಾವೆಂದು ನಂಬಿದ್ದೇನೆ.

ನಮ್ಮ ಗಡಿನಾಡಿನಲ್ಲೊಂದು ಅದಿಯುಕ್ತ ಕ್ಷೇತ್ರವಿದೆ. ಅದೇ ಅಥಣಿ. ಅಲ್ಲಿ ಸಮಾಧಿಸ್ಥರಾಗಿರುವ ಮಹಾಮಹಿಮ ಮುರುಘೇಂದ್ರ ಮಹಾಶಿವಯೋಗಿಗಳವರು ತಮ್ಮ ವಚನ ವ್ಯಾಖ್ಯಾನದಿಂದಲೇ ಅನೇಕ ಮಹಿಮರನ್ನು ರೂಪಿಸಿದ, ಕೃಪಾ ಕಟಾಕ್ಷದಿಂದಲೇ ಅಸಂಖ್ಯ ಭಕ್ತರನ್ನು ಉದ್ಧರಿಸಿದ, ತ್ರಿವಿಧ ತಪಸಿದ್ಧಿಯಿಂದ ಮಹಾ ಮೇಧಾವಿಗಳನ್ನು ಬೆರಗುಗೊಳಿಸಿದ ಪ್ರಾತಃಸ್ಮರಣೀಯ ಪರಂಜ್ಯೋತಿ ಸ್ವರೂಪರು. ಅವರ ಆತ್ಮಶ್ರೀ ನಿಕೇತನದಲ್ಲೀಗ ಕನ್ನಡದ ಪುನರುತ್ಥಾನ ಪ್ರಯತ್ನಗಳು ಅಲ್ಲಿಯ ಪ್ರಾಧ್ಯಾಪಕರ, ಬರಹಗಾರರ, ಕನ್ನಡ ಪ್ರೇಮಿಗಳ ಒಕ್ಕೂಟದಿಂದ ನಡೆದಿರುವುದೂ, ಸಾಹಿತ್ಯ ಪ್ರಕಾಶನ ಸಂಸ್ಥೆಗಾರರ, ಕನ್ನಡ ಪ್ರೇಮಿಗಳ ಒಕ್ಕೂಟದಿಂದ ನಡೆದಿರುವುದೂ, ಸಾಹಿತ್ಯ ಪ್ರಕಾಶನ ಸಂಸ್ಥೆಯೊಂದು ಉದಯಿಸಿರುವುದೂ, ಆ ಸಂಸ್ಥೆಯಿಂದಲೇ ನನ್ನ ಈ ಕವನ ಸಂಗ್ರಹ ಪ್ರಕಟವಾಗುತ್ತಿರುವುದೂ ಪರಮಾನಂದದ ಸಂಗತಿಗಳು ನನಗೆ. ಈ ಎಲ್ಲ ಪ್ರಯತ್ನಗಳು, ಕಾರ್ಯ ಕಲಾಪಗಳು ಫಲಿಸಲಿ. ಅಥಣಿ ಅಧ್ಯಾತ್ಮ ಕ್ಷೇತ್ರವಾಗಿರುವಂತೆ ಸಾಹಿತ್ಯ ಕ್ಷೇತ್ರವೂ ಆಗಲಿ ಎಂದು ಹಾರೈಸುತ್ತೇನೆ.

–ಸಿದ್ಧಯ್ಯ ಪುರಾಣಿಕ

ಮರುಳಸಿದ್ಧನ ಕಂತೆ

ಇದು ನನ್ನ ಅನುಭವತರಂಗಿಣಿಯ ತೆರೆಗಳ, ಅಧ್ಯಯನ ಪಕ್ಷಿಯ ಗರಿಗಳ, ಚಿಂತನಾಂಬರದ ನಿರಿಗಳ ಸಂಗ್ರಹ. ಪ್ರೇರಣೆ: 'ಮಂಕುತಿಮ್ಮನ ಕಗ್ಗ'ದಿಂದ; ಸಮರ್ಥನೆ; ಇದು ಅದರ ಪ್ರತಿಕೃತಿಯಲ್ಲವೆಂಬುದು.

"ಮಂಕು ತಿಮ್ಮನಿಗೊಬ್ಬ ತಮ್ಮನನ್ನು ತಂದಿರುವೆ,
ಶಂಕೆ ಬೇಡಿವ ಸ್ಪರ್ಧಿಯಲ್ಲವನಿಗೆ
ಸಂಕಲ್ಪವಿವಗಿಲ್ಲ ವಿಸ್ತರದ ದರ್ಶನದ,
ಡೊಂಕುಗಳೊ? ಸಾಕಷ್ಟು – ಮರುಳಸಿದ್ಧ ॥"

ಓದುಗರಿಗೆ ಇದನ್ನೋದಿ ಸಮಯ ವ್ಯರ್ಥವಾಯಿತೆಂಬ ಭಾವನೆ ಬರದಿದ್ದರೆ ನನ್ನ ಹತ್ತು ವರ್ಷಗಳ ಕೃಷಿ ಸಾರ್ಥಕವಾದಂತೆ.

ಇವುಗಳ ವಿಷಯಾನುಗುಣ ವರ್ಗೀಕರಣ ಮಾಡಿಲ್ಲ. ಮಾಡುವುದು ಸುಲಭವೆನಿಸಲಿಲ್ಲ. ಆದರೂ ಸುಮಾರಾಗಿ ಸಮಾನ ವಿಚಾರ ಭಾವನೆಗಳನ್ನೊಳಗೊಂಡ ಪದ್ಯಗಳನ್ನು ಆಯಾ ಶೀರ್ಷಿಕೆಯಡಿಯಲ್ಲಿ ತರುವ ಪ್ರಯತ್ನ ಮಾಡಿದ್ದೇನೆ. ಅಲ್ಲಲ್ಲಿ ಅಸಾಂಗತ್ಯ ತೋರಿದರೆ ವಾಚಕರು ಕ್ಷಮಿಸಬೇಕು.

ಇದರಲ್ಲಿ ಪುನರುಕ್ತಿಗಳು ಇಲ್ಲವೆನ್ನಲಾರೆ. ವಿರೋಧಾಭಾಸಗಳೂ ಸಾಧ್ಯ. ನನ್ನ ಧೈರ್ಯದ್ರುಮಕ್ಕೆ ನೀರೆರೆದುದು ವಾಲ್ಟ್ ವ್ಹಿಟ್‌ಮನ್ನನ ಈ ವಿವೇಕೋಕ್ತಿ :

ಇದನ್ನು 'ರಶ್ಮಿ ಮುದ್ರಣ'ದವರು ಅಂದವಾಗಿ ಅಚ್ಚಿಸಿದ್ದಾರೆ. ಅವರಿಗೆ ವಂದನೆಗಳು. ನನ್ನ ಕಣ್ಣು ತಪ್ಪಿಸಿಕೊಂಡು ಅಲ್ಲೊಂದು ಇಲ್ಲೊಂದು ಅಚ್ಚಿನ ತಪ್ಪುಗಳು ಉಳಿದಿವೆ. ಓದುಗರು ಕ್ಷಮಿಸಬೇಕು. ಒಪ್ಪೋಲೆ ಇದೆ.

ಈ ಪದ್ಯಗಳ ಮೊದಲ ಸಾಲುಗಳ ಆಕಾರಾದಿಯನ್ನು ನನಗಾಗಿ ಶ್ರಮವಹಿಸಿ ಸಿದ್ಧಪಡಿಸಿಕೊಟ್ಟ ಗೆಳೆಯ ಶ್ರೀ ಟಿ. ಆರ್. ಮಹಾದೇವಯ್ಯನವರಿಗೆ ನನ್ನ ನೆನಕೆಗಳು.

'ಶ್ರೀಗಿರಿ'ಯಲ್ಲಿ, ಎಡೆಯೂರಿನ ಶ್ರೀ ಸಿದ್ಧಲಿಂಗೇಶ್ವರ ಕ್ಷೇತ್ರದಲ್ಲಿ, ಅಳಿಯಂದಿರಾದ ಶ್ರೀ ನಂದೀಶ್ವರ, ಶ್ರೀ ಮೃತ್ಯುಂಜಯಪ್ಪರ ಮನೆಗಳಲ್ಲಿ, ಕಾರಿನಲ್ಲಿ, ರೈಲಿನಲ್ಲಿ, ಸಭೆ ಸಮ್ಮೇಳನಗಳಲ್ಲಿ ನನ್ನನ್ನು ಕಾಡಿ ಬರೆಸಿಕೊಂಡ ಈ ಪದ್ಯಗಳು ಈಗ ನನ್ನ ಪದ್ಯಗಳಲ್ಲ, ನಿಮ್ಮ ಪದ್ಯಗಳು. ಸ್ವೀಕರಿಸಿರಿ, ಸಹೃದಯರೆ.

–ಸಿದ್ಧಯ್ಯ ಪುರಾಣಿಕ

ಅನುಬಂಧ ೪

ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ

ಇಸವಿ	ಘಟನೆಗಳು
೧೯೧೮	ಜನನ, ೧೮.೬.೧೮೧೮, ಕೊಪ್ಪಳ ಜಿಲ್ಲೆಯ ಯಲಬುರಗಿ ತಾಲ್ಲೂಕ್, ದ್ಯಾಂಪುರದಲ್ಲಿ ತಂದೆ ಕಲ್ಲನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು.
೧೯೩೨	'ಬೆಳಗು' ಕವನ ರಚನೆ
೧೯೩೭	ಹಡ್ಲೇಕರ ಮಂಜಪ್ಪನವರೊಂದಿಗೆ ಅಲಮಟ್ಟಿಯಲ್ಲಿ ವಾಸ
೧೯೪೩	ತಹಸೀಲ್ದಾರ ತರಬೇತಿ, ನಾಂದೇಡ, ಹೈದರಾಬಾದ್
೧೯೪೪	ವಿವಾಹ (೧೧.೫.೧೯೪೪)ರಲ್ಲಿ ವಿವಾಹ, ಗಿರಿಜಾದೇವಿಯವರೋಡನ್
೧೯೪೪	ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ
೧೯೪೫	ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ ವಿಭಾಗ, ಗುಲಬರ್ಗಾ
೧೯೪೮	ಅಸಿಸ್ಟೆಂಟ್ ಕಮಿಷನರ್ (ಜಾಗೀರಾತ್)
೧೯೫೧	ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ
೧೯೫೨	ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ
೧೯೫೩	ಕೃಷಿ ಯೋಜನೆ ಹಾಗು ಪೂರೈಕೆ ಇಲಾಖೆಯ ಸಚಿವರ, ಕಾರ್ಯದರ್ಶಿ
೧೯೫೫	ಡೆಪ್ಯೂಟಿ ಕಲೆಕ್ಟರ್, ತಾಂಡೂರ
೧೯೫೭	ಡೆಪ್ಯೂಟಿ ಕಲೆಕ್ಟರ್, ಯಾದಗಿರಿ
೧೯೫೮	ಭಾರತೀಯ ನಾಗರಿಕ ಸೇವೆ (ಐ.ಎ.ಎಸ್.)
೧೯೬೦	ವಿದ್ಯಾಇಲಾಕೆಯ ಡೆಪ್ಯೂಟಿ ಸೆಕ್ರೆಟರಿ
೧೯೬೨	ನಿರ್ದೇಶಕರು, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
೧೯೬೪	ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ

೧೯೬೫	ಡೆಪ್ಯೂಟಿ ಕಮಿಷನರ್, ಮಡಿಕೇರಿ
೧೯೬೭	ಸಾರಿಗೆ ಕಮಿಷನರ್, ಬೆಂಗಳೂರು
೧೯೭೦	ಡೆಪ್ಯೂಟಿ ಕಮಿಷನರ್, ಬೆಳಗಾವಿ
೧೯೭೨	ಲೇಬರ್ ಕಮಿಷನರ್, ಬೆಂಗಳೂರು
೧೯೭೪	ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೧೯೭೫	ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ
೧೯೭೬	ನಿವೃತ್ತಿ ಹಾಗೂ ವಿಶ್ರಾಂತಿ ಜೀವನ
೧೯೭೮	'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಪುಸ್ತಕ ಪುರಸ್ಕಾರ
೧೯೭೯	ಬಸವ ಸಮೀತಿಯ ಸಂಶೋಧನ ಮತ್ತು ಪ್ರಕಟಣ ವಿಭಾಗದ ನಿರ್ದೇಶಕ; ಬಸವ ಪಥ (ಕನ್ನಡ ಮಾಸಿಕ), ಬಸವ ಜರ್ನಲ್ (ಇಂಗ್ಲೀಷ್ ತ್ರೈಮಾಸಿಕ) ಪತ್ರಿಕೆಗಳ ಪ್ರಧಾನ ಸಂಪಾದಕ.
೧೯೮೦	ಬಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು ಕಲ್ಕತ್ತಾ) 'ವಚನೋದ್ಯಾನ' ಕೃತಿಗೆ
೧೯೮೧	ಮಾಳವಾಡ ಪ್ರಶಸ್ತಿ (ಕರ್ನಾಟಕ ವಿಶ್ವವಿದ್ಯಾಲಯ)
೧೯೮೧	ರಾಜ್ಯಮಟ್ಟದ ಅಭಿನಂದನ ಸಮಿತಿಯ ಸತ್ಕಾರ, ಅಭಿನಂದನ ಗ್ರಂಥ, ನಿಧಿ ಸಮರ್ಪಣೆ
೧೯೮೩	'ವಚನ ನಂದನ' ಪ್ರಕಟಣೆ
೧೯೮೫	ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ(ಧಾರವಾಡ)ದ ಅಧ್ಯಕ್ಷರು
೧೯೮೭	ಗುಲ್ಬರ್ಗಾದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.
೧೯೯೪	'ವಚನ ಬ್ರಹ್ಮ' ಬಿರುದು – ಕಲಾಜ್ಯೋಗಿ ಸ್ನೇಹಿತರ ಸಂಘ ಹಾಗೂ ಸರ್ವಜ್ಞ ಕಲಾನಿಕೇತನ, ಬೆಂಗಳೂರು
೧೯೯೪	ಮರಣ (೫.೯.೧೯೯೪)

ಅನುಬಂಧ ೫

ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯಸೂಚಿ

ಕವನ ಸಂಕಲನಗಳು

೧.	ಜಲಪಾತ	ಸಂಗಡಿಗರ ಸಮಿತಿ, ರಾಯಚೂರು	೧೯೫೩, ೬೪
೨.	ಕರುಣಾಶ್ರಾಣವ	ಸಹಜೀವನ ಪ್ರಕಾಶನ, ಕಾಚೀಗೂಡಾ ಹೈದರಾಬಾದ್ ದಕ್ಷಿಣ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಕೃಷ್ಣಮೂರ್ತಿ ಪುರಂ, ಮೈಸೂರು–೪	೧೯೫೫, ೬೭
೩.	ಮಾನಸ ಸರೋವರ	ಶಾರದಾ ಪ್ರಕಟನಾಲಯ, ಬೆಂಗಳೂರು	೧೯೫೯
೪.	ಕಲ್ಲೋಲ ಮಾಲೆ	ತಾರಾಗ್ರಂಥ ಪ್ರಕಾಶನ, ಧಾರವಾಡ	೧೯೬೮
೫.	ಮೊದಲು ಮಾನವನಾಗು	ತಾರಾಗ್ರಂಥ ಪ್ರಕಾಶನ, ಧಾರವಾಡ	೧೯೬೯
೬.	ಚರಗ	ಶ್ರೀಗಿರಿ ಪ್ರಕಾಶನ, ಕುಡಿ–೩	೧೯೮೭
೭.	ಹಾಲ್ದೆನೆ	ಅನುಪಮ ಪ್ರಕಾಶನ, ಅಥಣಿ	೧೯೯೦
೮.	ಮರುಳಸಿದ್ಧನ ಕಂತೆ	ಶ್ರೀಗಿರಿ ಪ್ರಕಾಶನ ಬೆಂಗಳೂರು, ಕುಡಿ–೭	೧೯೯೧ ೧೯೭೭
೯.	ಸಮಗ್ರ ಕಾವ್ಯ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೨೦೦೮

ವಚನ ಸಂಗ್ರಹಗಳು:

೧.	ವಚನೋದ್ಯಾನ	ಶ್ರೀಗಿರ ಪ್ರಕಾಶನ, ಬೆಂಗಳೂರು	೧೯೭೭, ೨೦೦೦ ೨೦೧೦, ೨೦೧೪
೨.	ವಚನ ನಂದನ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೧೯೮೩, ೨೦೦೦
೩.	ವಚನಾರಾಮ	ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ	೧೯೯೨
೪.	ಸಮಗ್ರ ವಚನ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೨೦೦೯

ನಾಟಕಗಳು:

೧.	ಆತ್ಮಾರ್ಪಣ	ಹೈದರಾಬಾದು ವೀರಶೈವ ತರುಣ ಸಂಘ	೧೯೪೨
೨.	ಭಾರತ ವೀರ	ನರೇಶ್ ಅಂಡ್ ಕಂಪನಿ, ಮೌಂಟ್ ಜಾಯ್ ರಸ್ತೆ, ಬೆಂಗಳೂರು–೧೯	೬೪, ೬೭
೩.	ರಜತ ರೇಖೆ	ಶ್ರೀ ಎಂ. ಬಿ. ತರುಮರಿ ಕಾರ್ಯದರ್ಶಿ, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್, ಧಾರವಾಡ	೧೯೬೨ ೬೫
೪.	ಭಗ್ನ ನೂಪುರ	ಕರ್ನಾಟಕ ಟ್ರೇಡಿಂಗ್ ಏಜನ್ಸೀಸ್, ಬನಶಂಕರಿ ಎರಡನೇ ಹಂತ, ಬೆಂಗಳೂರು–೭೦	೧೯೪೪
೫.	ಸಮಗ್ರ ನಾಟಕಗಳು	ಶ್ರೀಗಿರಿ ಪ್ರಕಾಶನ, ಬೆಂಗಳೂರು	೨೦೧೦

ಕಥಾ ಸಂಕಲನಗಳು:

೧.	ಕಥಾಮಂಜರಿ	ಸತ್ಯಾಶ್ರಯ ಪ್ರಕಾಶನ ಮಂದಿರ ಹೈದ್ರಾಬಾದ್	೧೯೫೧
೨.	ತುಷಾರ ಹಾರ	ಶ್ರೀ ಗಿರಿ ಪ್ರಕಾಶನ, ಬೆಂ.	೧೯೮೭

ಕಾದಂಬರಿ:

೧.	ತ್ರಿಭುವನ ಮಲ್ಲ	ಗುರು ಕುಮಾರಿ ಪ್ರಕಾಶನ, ೨೨೨೪ ಬಸವೇಶ್ವರ, ನಾಲ್ಕನೇ ಅಡ್ಡರಸ್ತೆ ಮೈಸೂರು–೫೭೦ ೦೦೪	೧೯೬೪ ೧೯೮೧ ೧೯೮೫

ಮಕ್ಕಳ ಸಾಹಿತ್ಯ:

೧.	ತುಪ್ಪಾ ರೋಟ್ಟಿ ಗೇ ಗೇಗೇ	ಕರ್ನಾಟಕ ಸಹಕಾರಿ ಪ್ರಕಾಶನ ಮಂಡಿರ	೧೯೬೪, ೭೩
೨.	ಗಿಲ್ ಗಿಲ್ ಗಿಲಗಚ್ಚಿ	ಭಾರತೀ ಸಾಹಿಯ ಭಂಡಾರ, ವಿಜಾಪೂರ	೧೯೭೮
೩.	ತಿರುಗೆಲೆತಿರುಗೆಲೆ ತಿರುಗು ಯ್ಯಾಲೆ	ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ	೧೯೮೧, ೧೯೮೯
೪.	ಬಣ್ಣ ಬಣ್ಣದ ಓಕುಳಿ	ನಿರ್ಮಲ ಪ್ರಕಾಶನ, ರಾಮಲಕ್ಷ್ಮಣ ನಿಲಯ, ಕೆ.ಆರ್. ಬಡಾವಣೆ, ತಿಪಟೂರು	೧೯೮೭
೫.	ಭಾರತವೆಲಕೆ ಬಾವುಟವೊಂದೇ	ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ಕುಡಿ–೭	೧೯೯೧
೬.	ಸಮಗ್ರ ಮಕ್ಕಳ ಸಾಹಿತ್ಯ	ಶ್ರೀ ಗಿರಿ ಪ್ರಕಾಶನ ಬೆಂಗಳೂರು	೨೦೧೬
೭.	ಮಕ್ಕಳ ಹಾಡುಗಳು	ಹೇಮಂತ ಸಾಹಿತ್ಯ ಬೆಂಗಳೂರು	೨೦೧೮

ಮಕ್ಕಳ ನಾಟಕ:

೧.	ನ್ಯಾಯ ನಿರ್ಣಯ	ಭಾರತಿಚ ವ ಸಾಹಿತ್ಯ ಭಂಡಾರ, ವಿಜಾಪೂರ	೧೯೮೬

ಮಕ್ಕಳ ಪ್ರವಾಸ ಸಾಹಿತ್ಯ

೧.	ಮಕ್ಕಳ ಲೋಕ	ಭಾರತೀ ಸಾಹಿತ್ಯ ಭಂಡಾರೆ ಸಂಚಾರ ವಿಜಾಪುರ	೧೯೮೯

ಜೀವನ ಚರಿತೆಗಳು:

೧.	ಶರಣ ಚರಿತಾಮೃತ	ವಯಸ್ಕರ ಶಿಕ್ಷಣ ಸಮಿತಿ, ಮೈಸುರು	೧೯೬೪ ೭೭, ೯೨
		ಕನ್ನಡ ಮತ್ತು ಸಂಸ್ಕೃತಿ ಇಲಾಖೆ	೨೦೧೦ ೨೦೧೩
೨.	ಸಿದ್ಧರಾಮ	ಭಾರತ–ಭಾರತಿ ಪುಸ್ತಕ ಸಂಪದ, ಬೆಂಗಳೂರು–೧೯	೧೯೭೪
೩.	ಬಸವಣ್ಣನವರ ಜೀವನ ಹಾಗೂ ಸಂದೇಶ	ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	೧೯೭೭
೪.	ನಜೀರ್ ಅಕಬರಾಬಾದಿ	ಸಾಹಿತ್ಯ ಆಕಾಡೆಮಿ, ನವದೆಹಲಿ	೧೯೭೮
೫.	ಹರ್ಡೇಕರ ಮಂಜಪ್ಪ ಶ್ರೀ	ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಸಂಸ್ಥಾನ ಮಠ, ಗದಗ	೧೯೭೮
೬.	ಮಿರ್ಜಾ ಗಾಲಿಬ್	ಭಾರತ–ಭಾರತಿ ಪುಸ್ತಕ ಸಂಪದ, ಬೆಂಗಳೂರು–೧೯	೧೯೭೯
೭.	ಮಹಾದೇವಿ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	೧೯೮೨ ೨೦೦೩
೮.	ಅಲ್ಲಮ ಪ್ರಭು	ಬಸವ ಸಮಿತಿ, ಬೆಂಗಳೂರು–೧	೧೯೮೯

ಸಂಪಾದಿತ ಕೃತಿಗಳು:

೧.	ಸುಬೋಧ ಸಾರ		೧೯೩೬,೫೧
೨.	ಶ್ರೀಕಾರ	ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ್	೧೯೫೪
೩.	ಪ್ರಬಂಧ ಮಾಲೆ	ಕರ್ನಾಟಕ ಸಾಹಿತ್ಯ ಮಂದಿರ ಹೈದರಾಬಾದ್	೧೯೫೪
೪.	ಪದ್ಯ ರತ್ನಾಕರ		
೫.	ಮಹಾತ್ಮ ಕನಕದಾಸರ ಪ್ರಶಸ್ತಿ	ರಾಜ್ಯಸಮಿತಿ, ಶ್ರೀ ಕನಕದಾಸರ ನಾಲ್ಕನೇ ಶತಮಾನೋತ್ಸವ, ಬೆಂಗಳೂರು	೧೯೬೫
೬.	ಶರಣ ಪ್ರಸಾವ	ನೃಪತುಂಗ ಪ್ರಕಾಶನ, ಕಲಬುರ್ಗಿ	೧೯೬೯
೭.	ಸಿದ್ಧಗಂಗಾಶ್ರೀ	ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥ ಸಮಿತಿ	೧೯೮೧
೮.	ಮಣಿಹ	ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ (ರಿ) ೫೪ 'ಅರವಿಂದ' ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು	೧೯೮೨
೯.	ಬಸವದರ್ಶನ (ಹಿಂದಿ)	ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು	೧೯೮೩
೧೦	ಬಸವ ಮತ್ತು ದಲಿತೋದಯ	ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು.	೧೯೮೩
೧೧	ಬಸವ ಮತ್ತು ವಿಚಾರವಾದ	ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು	೧೯೮೪
೧೨	ಮಳೆಯರಾಜ ಚಾರಿತ್ರ್ಯ	ಶ್ರೀಗಿರಿ ಪ್ರಕಾಶನ, ಬೆಂಗಳೂರು	೧೯೮೯

ಇತರ ಕೃತಿಗಳು:

೧.	ವಿಕಾಸವಾಣಿ	ಸಹಜೀವನ ಪ್ರಕಾಶನ, ಕಾಚಿಗೂಡಾ, ಹೈದರಾಬಾದ್	೧೯೫೫
೨.	ಗ್ರಾಮ ಸ್ವರಾಜ್ಯ	ಸಹ್ಯಾದ್ರಿ ಪ್ರಕಾಶನ ೧೯೮೨	
೩.	ಚಿಂತನ ಲಹರಿ	ಶ್ರೀಗಿರಿ ಪ್ರಕಾಶನ, ಬೆಂಗಳೂರು, ಕುಡಿ–೫	೧೯೮೯
೪.	ಶರಣಸರಣಿ	ತರಳಬಾಳು ಪ್ರಕಾಶನ, ಸಿರಿಗೆರೆ	೧೯೯೨

ಆಯ್ದ ಕವನಗಳು

೧.	ಕಾವ್ಯಾನಂದರ ಆಯ್ದ ಕವನಗಳು	ನರೇಶ್ ಅಂಡ್ ಕಂಪನಿ, ಹನುಮಂತನಗರ, ಬೆಂಗಳೂರು	೧೯೮೨
೨.	ಆಯ್ದ ಕವನಗಳು	ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು)	೧೯೮೨
೩.	ಕಾವ್ಯಾನಂದರ ಕವಿತೆಗಳು	ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು	೨೦೦೧

* * *

ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ ಪ್ರಕಟಿತ ಕೃತಿಗಳು

೧. ಕಾವ್ಯಶ್ರೀ ಕಾವ್ಯಾನಂದ	ಸತ್ಯಾನಂದ, ಮೇಘಮಿತ್ರ ಸಂಭಾವನಾ ಗ್ರಂಥ ಕಾವ್ಯಾನಂದ ಸಮಿತಿ, ಬಿಜಾಪೂರ	೧೯೬೯
೨. ಜೀವನ ವಿಕಾಸ ವಿಶೇಷ ಸಂಚಿಕೆ	ಸಂ. ಸಹ ನಿರ್ದೇಶಕರು, ಶಿಕ್ಷಣ ಇಲಾಖೆ, ಕಲಬುರ್ಗಿ, ಸಂಪುಟ ೯ ಸಂಚಿಕೆ ೮–೯	೧೯೭೩
೩. ಕಾವ್ಯಾನಂದ	ಮಿರ್ಜಿ ಅಣ್ಣಾರಾಯ, ಕೃಷ್ಣಕೊಲ್ಲಾರ ಕುಲಕರ್ಣಿ, ಚಂದ್ರಗಂಗಾ ಜ್ಞಾನಪೀಠ, ಶೇಡಬಾಳ	೧೯೭೩
೪. ಕಾವ್ಯಾನಂದ	ಸಾ.ಶಿ.ಮರುಳಯ್ಯ, ಸಿದ್ಧಯ್ಯ ಪುರಾಣಿಕರ ಅಭಿನಂದನ ಸಮಿತಿ, ಚಾಮರಾಜಪೇಟೆ, ಬೆಂಗಳೂರು–೧೮	೧೯೮೧
೫. ಸಹೃದಯ	ಟಿ.ಆರ್.ಮಹದೇವಯ್ಯ, ಪುರಾಣಿಕರ ಅಭಿನಂದನಾ ಸಮಿತಿ ಬೆಂಗಳೂರು–೧೮	೧೯೮೧
೬. ಸಾಹಿತಿಗಳ ಸಂಗದಲ್ಲಿ	ಲೇ: ದೇಜಗೌ	೧೯೮೧
೭. ಕಾವ್ಯಾನಂದರ ಕಾವ್ಯ	ವೃಷಬೇಂದ್ರ ಅರ್ಕಸಾಲಿ, ಸಂಕ್ರಮಣ ಪ್ರಕಾಶನ, ಧಾರವಾಡ	೧೯೮೭
೮. ಸಿದ್ಧಯ್ಯ ಪುರಾಣಿಕ	ಜಿ.ಎಸ್.ಸಿದ್ಧಲಿಂಗಯ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ	೧೯೯೫ ೨೦೧೮

೯.	ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು	ಎನ್.ಬಿ. ಬುಳ್ಳಾ, ಜ್ಯೋತಿಶ್ರೀ ಪ್ರಕಾಶನ, ಮಾಣಿಕೇಶ್ವರಿ ನಗರ, ಗುಲಬರ್ಗಾ	೧೯೯೯
೧೦.	ಕಾವ್ಯಾನಂದ	ಡಾ. ಚೆನ್ನಬಸವ ಹಿರೇಮಠ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ–೫೮೫೧೦೬	೨೦೦೫
೧೧.	ಕಾವ್ಯಾನಂದರ ಬದುಕು ಮತ್ತು ಕಾವ್ಯ	ಡಾ. ಪ್ರಕಾಶಗಿರಿ ಮಲ್ಲನವರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು	೨೦೧೮

* * * * * *